
ಶಾರದಾ ಪ್ರಕಟನಾಲಯ

ಬೆಂಗಳೂರು. 1955


ಪಸರ್ಪಿಣಿ
ಭಾರತೀಪ್ರಿಯ

ಶಾರದಾ ಸಾಹಿತ್ಯ ಮಾಲೆ - ೪೫

ರೂಪಸರ್ಪಿಣಿ

ಕಾದಂಬರಿ

★

ಲೇಖಕರು:

ಭಾರತೀಪ್ರಿಯೆ

★

ಮುದ್ರಣ ಮತ್ತು ಪ್ರಕಾಶನ

ಶಾರದಾ ಪ್ರಕಟನಾಲಯ

ಅರಳೇಪೇಟೆ, :: ಬೆಂಗಳೂರು - ೨.

ಮುಖಚಿತ್ರ :
ಜಿ. ಕೆ. ಮೂರ್ತಿ

ಮುಖಚಿತ್ರ ಮುದ್ರಣ :
ಶ್ರೀ ರಾಮಕೃಷ್ಣ ಪ್ರೆಸ್
ಬೆಂಗಳೂರು – ೨.

ಪ್ರಥಮ ಮುದ್ರಣ : ಆಗಸ್ಟ್ ೧೫, ೧೯೫೫

ಬೆಲೆ :
ಒಂದೂವರೆ ರೂಪಾಯಿ

ಚಂದಾ ವಿವರ :

ಆರು ತಿಂಗಳಿಗೆ : ಐದೂವರೆ ರೂಪಾಯಿ

ಒಂದು ವರ್ಷಕ್ಕೆ : ಹನ್ನೊಂದು ರೂಪಾಯಿ

ಮುನ್ನುಡಿ

'ರೂಪಸರ್ಪಿಣಿ', 'ರಾಗಿಣಿ' ಕಾದಂಬರಿಯ ಉತ್ತರ ಭಾಗ.

'ರಾಗಿಣಿ'ಯನ್ನು ಬರೆದಾಗಲೇ ಅದರ ಮುಂದಿನ ಭಾಗವನ್ನು ಬರೆಯ ಬೇಕೆಂದು ಉದ್ದೇಶವಿತ್ತು. ಅಲ್ಲಿ ನಿರ್ಮಿಸಿದ್ದ ಪಾತ್ರಪ್ರಪಂಚದಲ್ಲಿ ನಡೆಯ ಬೇಕಾಗಿದ್ದ ಕೆಲಸ ಇನ್ನೂ ಉಳಿದಿತ್ತು. ಆ ಕ್ರಿಯೆ ಈಗ ಇಲ್ಲಿ ಮುಂದುವರಿದು ಮುಗಿದಿದೆ. ಮಧುಸೂದನ ಲಲಿತೆಯರ ಜೀವನ ಒಂದು ನೆಲೆ ಮುಟ್ಟಿದೆ. ಅಲ್ಲಿ ಬರಿಯ ಛಾಯೆಗಳಾಗಿ ಸುಳಿದುಹೋಗಿದ್ದ ಕನಕಾಂಗಿ, ಕುಮುದಾ, ಸುಮಾ ಮುಂತಾದವರ ವ್ಯಕ್ತಿತ್ವಗಳು ಇಲ್ಲಿ ಅರಳಿವೆ. ಅಂತೆಯೆ ರೋಷನ್‌ಬಾಯಿಯ ಸಂಗತಿಯೂ. ರುಕ್ಮಾಯಿ ಈ ಕಾದಂಬರಿಯಲ್ಲಿಯೆ ಹೊಸದಾಗಿ ಕಾಣಿಸಿ ಕೊಳ್ಳುವ ಹೆಣ್ಣು.

'ರಾಗಿಣಿ'ಯಲ್ಲಿ ನಾನು ಒಬ್ಬ ಕಲಾವಿದನ ರಾಗಜೀವನವನ್ನು ಪ್ರಸ್ತಾಪಿಸಿದ್ದರೆ ಇಲ್ಲಿ ಅವನ ಅನುರಾಗ ಜೀವನವನ್ನು ಚಿತ್ರಿಸಿದ್ದೇನೆ. ಅಲ್ಲಿ ಕಲೆ ಒಲಿದು ಕೀರ್ತಿಯ ಎತ್ತರವನ್ನು ಏರುತ್ತಿದ್ದ ಮಧುಸೂದನ ಇಲ್ಲಿ ಅವನತಿಯ ಆಳಕ್ಕೆ ಇಳಿಯುತ್ತಾನೆ. ಕಲಾವಿದರಲ್ಲಿ ನೀತಿಪತನವನ್ನು ಕಂಡು ಹೇಸುತ್ತಿದ್ದವನೇ ತನ್ನ ದುಃಖ ಮರೆಯಿಸಲು ಮದ್ಯಮಾನಿನಿಯರಿಗೆ ಶರಣು ಹೊಗುತ್ತಾನೆ.

ಆದರೆ ಅವನು ಅರಸುತ್ತಿದ್ದ ಶಾಂತಿ ಅದರಿಂದ ಅವನಿಗೆ ದೊರೆತಿತೆ? ಅಂಥ ಜೀವನದಿಂದ ಅವನ ದುಃಖ ಹಿಂಗಿತೆ? ತನ್ನಲ್ಲೇ ತಾನು ಕಂಡುಕೊಳ್ಳಲಾರದ್ದನ್ನು ಹೊರಗಡೆಯಿಂದ ಪಡೆಯಲು ಅವನು ಸಮರ್ಥನಾದನೆ? – ಇವು ಕಾದಂಬರಿಯಲ್ಲಿ ನಾನು ಎತ್ತಿಕೊಂಡು ಉತ್ತರ ಕೊಡಲು ಪ್ರಯತ್ನಿಸಿರುವ ಕೆಲವು ಪ್ರಶ್ನೆಗಳು.

ಮಧುಸೂದನನ ನಡತೆ ಎಷ್ಟುಮಟ್ಟಿಗೆ ಕ್ಷಮ್ಯ, ಎಷ್ಟುಮಟ್ಟಿಗೆ ದೂಷ್ಯ ಎನ್ನುವ ನೀತಿವಿಮರ್ಶೆಗೆ ನಾನು ಕೈಹಾಕಿಲ್ಲ. ಪಾಪ ಪುಣ್ಯ, ಶೀಲ ದುಃಶೀಲಗಳ ಪ್ರಶ್ನೆ ಇಲ್ಲಿ ಗೌಣ. ಭಾವಜೀವಿಯಾದ ಒಬ್ಬ ವ್ಯಕ್ತಿ ತನ್ನನ್ನು ಎದುರಿಸಿದ ಒಂದು ಸನ್ನಿವೇಶದಲ್ಲಿ ಹೇಗೆ ನಡೆದುಕೊಂಡ ಎನ್ನುವುದನ್ನು ನಿರೂಪಿಸುವುದಷ್ಟೇ

ನನ್ನ ಗುರಿ; ಕ್ಷೋಭೆಗೆ ಸಿಕ್ಕಿದ ಅಂಥ ಒಂದು ಜೀವದ ತೊಳಲಾಟವನ್ನು ಚಿತ್ರಿಸುವುದಷ್ಟೇ ನನ್ನ ಆಶಯ.

ಮಧುಸೂದನನಿಗೆ ಸುಬ್ಬಕೃಷ್ಣ ಹೇಗೋ ಲಲಿತನಿಗೆ ಕನಕಾಂಗಿ ಹಾಗೆ. ಅಂಥ ಗೆಳೆಯ ಗೆಳತಿಯರು ಜೀವನದಲ್ಲಿ ಯಾರಿಗೆ ಬೇಡ? ಮನಸ್ಸು ನಿರ್ವಿಣ್ಣ ವಾದ ಹೊತ್ತಿನಲ್ಲಿ ಅವರ ಆದರ, ಆಸರೆ ಯಾರಿಗೆ ತಾನೇ ಸಮಾಧಾನವನ್ನು ತರಲಾರವು?

ಇನ್ನು ರೋಷನ್‌ಬಾಯಿ: ಕಾದಂಬರಿಯಲ್ಲಿ ಅವಳದೇ ಒಂದು ನಿಲುವು.

—ಈ ಕೆಲವು ಪಾತ್ರಗಳನ್ನು ನಾನು ಅಕ್ಕರೆಯಿಂದ, ಶ್ರದ್ಧೆಯಿಂದ ಬಿಡಿಸಿದ್ದೇನೆ. ಈ ಕೆಲಸ ಎಷ್ಟುಮಟ್ಟಿಗೆ ಸಫಲವಾಗಿದೆಯೋ ಸಹೃದಯರು ಹೇಳಬೇಕು.

ಬೆಂಗಳೂರು,
೧೫-೮-೧೯೫೫.

—ಭಾರತೀಪ್ರಿಯ

ರೂಪಸಪಿರ್ಣಿ

No. 18

೧

ನಿಂತಲ್ಲಿ ನಿಲ್ಲದೆ, ದಿಕ್ಕು ದೆಸೆಯಿಲ್ಲದೆ ಅಂಡಲೆಯುವ ಅನಾಥ ಜೀವದಂತೆ ರೈಲು ಧಾವಿಸುತ್ತಿತ್ತು.

ನಿರ್ಜೀವವಾಗಿ, ನಿಸ್ಸಹಾಯಕವಾಗಿ, ನೆಲವನ್ನಪ್ಪಿ ಸತ್ತು ಮಲಗಿರುವ ಕಾಳೋರಗದಂತೆ ಕಂಬಿ ಅಚಲವಾಗಿ ಬಿದ್ದಿತ್ತು.

ಒಂದಕ್ಕೆ ಎಲ್ಲಿಯೂ ನಿಲ್ಲಲಾರದೆ, ಎಲ್ಲಿಗೋ ಹೋಗುವ ಅವಸರ; ಇನ್ನೊಂದಕ್ಕೆ ಎಲ್ಲಿಯೂ ಹೋಗಲಾಗದೆ ಬಿದ್ದಲ್ಲಿಯೇ ಬಿದ್ದಿರಬೇಕಾದ ಅಸಹಾಯಕತೆ.

ಒಂದು ಚರ, ಒಂದು ಸ್ಥಿರ.

ಚರ ಸ್ಥಿರದ ಮೇಲೆ ಉರುಳಿ ಹೋಗುತ್ತಿತ್ತು.

ಉರುಳುತ್ತಿದ್ದ ಚಕ್ರ, ಮರವಟ್ಟಿದ್ದ ಕಂಬಿ – ಇವೆರಡರ ಶೀತಲ ಸಂಘರ್ಷಣದಿಂದ ಹುಟ್ಟುತ್ತಿದ್ದ ಸದ್ದು ಬಾಳಿನ ಕೊನೆಗಾಣದ ಹಾಡಿನ ಪಲ್ಲವಿಯಂತಿತ್ತು.

ಖಟಖಟ್, ಖಟಖಟ್, ಖಟಖಟ್.—

ಆ ಏಕನಾದ, ಮನಸ್ಸನ್ನು ಯಾವೆಡೆಗೋ ತುಯ್ಯುವ ಆ ಏಕನಾದ; ಯಂತ್ರದ ನಿಯತಿಯ ಆ ನಿರಂತರತೆ.

ರೈಲು ಧಾವಿಸುತ್ತಿತ್ತು; ಅದರೊಡನೆ ಮಧುಸೂದನನ ಮನಸ್ಸೂ ಧಾವಿಸುತ್ತಿತ್ತು.

ಅಜ್ಞಾತದ ಗರ್ಭವನ್ನು ಹೊಕ್ಕಂತೆ ದಟ್ಟವಾದ ಆ ಇರುಳಿನ ನಡುವೆ ಹಾದು ಹೋಗುತ್ತಿದ್ದ ರೈಲು ಪ್ರಪಂಚದ ಕೋಟಲೆಗಳಿಂದ ಪಾರಾಗಲೆಳಸುವ

ಜೀವದಂತೆ ಆ ಕಣ್ಣು ಕಾಣದ ಕತ್ತಲಲ್ಲಿ ಎಲ್ಲಿಗೋ ಧಾವಿಸುತ್ತಿತ್ತು. ಕ್ಷಣ
ಕ್ಕೊಮ್ಮೆ ಭುಗ್ಗನೆ ಕಾರುತ್ತಿದ್ದ ಎಂಜಿನ್ನಿನ ಉರಿಬೆಳಕು ಹೆಪ್ಪುಗಟ್ಟಿದ್ದ
ನಿಶಿಯ ಮುಖದ ಮೇಲಿನ ತೆರೆಯನ್ನು ಕ್ಷಣಮಾತ್ರ ಓಸರಿಸಿ ಮರೆಯಾಗು
ತ್ತಿತ್ತು. ಕಾಡುಹಾದಿಯ ಮೇಲೆ ಬೀಳುತ್ತಿದ್ದ ಆ ಬೆಳಕಿನಲ್ಲಿ ಮಸುಕು
ಮಸಕಾಗಿ ಕಾಣುತ್ತಿದ್ದ ಒಂಟಿ ಮರಗಳು ನಿಶಿಯ ಮನಸ್ಸಿನ ಕಗ್ಗತ್ತಲಿನ
ಮೂಲೆಗಳಲ್ಲಿ ಹೊಂಚುತ್ತಿದ್ದ ಅಶುಭ ಚಿಂತೆಗಳಂತೆ ಅಮಂಗಳಕಾರಿಯಾಗಿದ್ದವು

ಖಟಖಟ್, ಖಟಖಟ್, ಖಟಖಟ್.

ಆ ಸದ್ದು—

ಬೇಡವೆಂದರೂ ಎಡಬಿಡದೆ ಕೇಳಿಬರುತ್ತಿದ್ದ ಆ ಸದ್ದು.

ಆ ಕತ್ತಲು—

ಗವ್ವೆಂದು ಬಾಳನ್ನೇ ಆವರಿಸಿ ಬರುವಂತಿದ್ದ ಆ ಕತ್ತಲು.

ಆ ಉರಿಬೆಳಕು—

ಎದೆಯ ಉಮ್ಮಳದ ಬೆಂಕಿಯನ್ನು ಊದಿ ಕೆರಳಿಸುವಂತಿದ್ದ ಆ ಉರಿ
ಬೆಳಕು.

ಯಾವುದೋ ನೆನಪು ಕೆರಳಿ ಮಧುಸೂದನನ ಮೈ ನಡುಗಿತು. ಅವನ
ದೃಷ್ಟಿ ಸುತ್ತಲೂ ಹರಿಯಿತು.

ಗಾಡಿಯಲ್ಲಿದ್ದ ಆರು ಮಂದಿಯಲ್ಲಿ ಒಬ್ಬೊಬ್ಬರೂ ಒಂದೊಂದು ಬಗೆಯಲ್ಲಿ
ನಿದ್ರಾವಸ್ಥೆಗೆ ಸಿಕ್ಕಿದ್ದರು. ಎದುರುಗಡೆ ಕುಳಿತಿದ್ದವರು ಯಾರೋ ನವ ದಂಪತಿ
ಗಳಿರಬೇಕು. ನಿದ್ದೆಯಿಂದ ಹೆಣ್ಣಿನ ಲಜ್ಜೆಯ ಬಿಗಿ ತಪ್ಪಿತ್ತು. ಸೆರಗು ಅರ್ಧ
ಜಾರಿತ್ತು. ಗಂಡನ ಭುಜಕ್ಕೆ ತಲೆಯೊರಗಿಸಿ, ಒಂದು ತೋಳಿನಿಂದ ಅವನ
ಮೈಯನ್ನು ಬಳಸಿ ಕುಳಿತಿದ್ದಳು. ಮೆಲ್ಲನೆ, ಸಮಗತಿಯಲ್ಲಿ ಆಡುತ್ತಿದ್ದ
ಉಸಿರಿಗೆ ಅವಳ ತುಂಬಿದ ಎದೆ ನಿಧಾನವಾಗಿ ಏರಿ ಇಳಿಯುತ್ತಿತ್ತು. ಗಂಡನ
ಕೆನ್ನೆ ಮಡದಿಯ ತಲೆಯನ್ನಾಶ್ರಯಿಸಿತ್ತು. ಆಸರೆಗಾಗಿ ಇಬ್ಬರೂ ಒಬ್ಬರ
ಕೈಯನ್ನೊಬ್ಬರು ಅವರಿಗರಿವಿಲ್ಲದೆಯೆ ಹಿಡಿದುಕೊಂಡಿದ್ದರು. ರೈಲಿನ ಚಲನೆ
ದಿಂದ ಅವರ ಮೈ ಹಿಂದಕ್ಕೂ ಮುಂದಕ್ಕೂ ಮೆಲ್ಲನೆ ತೂಗುತ್ತ ಅವರನ್ನು
ನಿದ್ದೆಯ ಆಳಕ್ಕೆ ಇಳಿಸುತ್ತಿತ್ತು.

ಮಧುಸೂದನನ ದೃಷ್ಟಿ ಒಂದು ಕ್ಷಣಮಾತ್ರ ಅವರ ಮೇಲೆ ನೆಲಸಿತು.

ಅವರು ನಿದ್ರಾಲಿಂಗಿತರಾಗಿದ್ದ ಭಾವವನ್ನು ನೋಡಿ ಅವನ ತುಟಿಯ ಮೇಲೆ ಒಂದು ಸಣ್ಣ ನಗು ಸುಳಿಯಿತು. ಅದರೊಡನೆಯೇ ಎದೆಯಲ್ಲಿ ಅಸ್ಪಷ್ಟವಾದ ಒಂದು ನೋವು ಕಾಣಿಸಿಕೊಂಡಿತು. ನಿದ್ದೆಯಲ್ಲಿ ಮುಳುಗಿ ಸುಖಸ್ವಪ್ನ ಕಾಣುತ್ತಿದ್ದ ಆ ದಂಪತಿಗಳ ಚಿತ್ರ ಅವನ ಮನಸ್ಸಿನಲ್ಲಿ ಹಳೆಯ ನೆನಪುಗಳ ಸರಪಳಿಯನ್ನು ಬಿಚ್ಚತೊಡಗಿತು. ಮಧುಸೂದನ ವೇದನೆಗೊಳಗಾದವನಂತೆ ದೃಷ್ಟಿಯನ್ನು ಥಟ್ಟನೆ ಬೇರೆ ಕಡೆಗೆ ತಿರುಗಿಸಿದ.

ಪಕ್ಕದಲ್ಲಿ ಪವಡಿಸಿದ್ದವನು ನಿಶ್ಚಿಂತನಾಗಿ ನಿದ್ದೆ ಮಾಡುತ್ತಿದ್ದ. ಯಾವನೋ ಸೇಟು ಇರಬೇಕು. ತಲೆಯ ಮೇಲಿನ ಪೇಟ ಹಿಂದಕ್ಕೆ ಉರುಳಿತ್ತು. ಒಂದು ತೋಳು ಪಕ್ಕಕ್ಕೆ ನೀಳವಾಗಿ ಹರಿದು ಬಿದ್ದಿತ್ತು. ಸಣ್ಣ ಗೊರಕೆ ಅವನು ನಿದ್ದೆಯ ಆಳಕ್ಕೆ ಮುಳುಗಿದ್ದನೆನ್ನುವುದನ್ನು ಸೂಚಿಸುತ್ತಿತ್ತು.

ಸೇಟಿನ ಮಗ್ಗುಲಲ್ಲಿ, ಕುಳಿತ ಹಾಗೆಯೇ ದಿಂಬನ್ನೊರಗಿ ನಿದ್ರಾವಶಳಾಗಿದ್ದಾಕೆ ಅವನ ಹೆಂಡತಿಯೇ ಇರಬೇಕು. ಬಳೆಗಳಿಂದ ತುಂಬಿದ, ಬೆಣ್ಣೆಯಂತೆ ನುಣುಪಾದ ತನ್ನ ತೋಳನ್ನು ಮುಖಕ್ಕೆ ಮರೆಮಾಡಿಕೊಂಡಿದ್ದಳು. ಅಸ್ತವ್ಯಸ್ತವಾದ ತೆಳು ಸೀರೆಯಲ್ಲಿ ಅವಳ ಮೈಯ ಮಾಟ ಎದ್ದು ಕಾಣುತ್ತಿತ್ತು. ಸೇಟು ಎಂಥ ಪುಣ್ಯವಂತನೋ.

ಮಧುಸೂದನ ನೀಳವಾಗಿ ಉಸಿರ್ಗರೆದು ದೃಷ್ಟಿಯನ್ನತ್ತ ಹರಿಸಿದ. ಹುಬ್ಬಳ್ಳಿಯೇ ಗಮ್ಯವೆಂದು ಸಾರುವಂತಿದ್ದ ಶಾಗಂಬಿ ಧೋತ್ರಗಳನ್ನುಟ್ಟಿದ್ದ ತೆಲುಗರಿಬ್ಬರು ಒಬ್ಬರ ಸಂದಿಯಲ್ಲೊಬ್ಬರು ಸುರುಟಿಕೊಂಡು ಮಲಗಿ ನಿದ್ದೆಗೆ ಸಂದಿದ್ದರು. ಪಟ್ಟೆ ಹಿಡಿದಿದ್ದ ಅವರ ಉತ್ತರೀಯ, ತೈಲವರ್ಣದ ಮುಖಗಳಲ್ಲಿ ಎದ್ದು ಕಾಣುತ್ತಿದ್ದ ಆ ಇಳಿಮೀಸೆ ಹಿಡಿದ ಪಟ್ಟನ್ನು ಬಿಡದ ಒರಟುತನಕ್ಕೆ ಸಾಕ್ಷಿಯಾಗಿದ್ದವು.

ರೈಲು ಹತ್ತಿದಾಗ ಅವರೊಬ್ಬರನ್ನೂ ಅಷ್ಟಾಗಿ ಗಮನಿಸದಿದ್ದ ಮಧುಸೂದನನ ದೃಷ್ಟಿ ಎಲ್ಲರ ಮೇಲೂ ಒಂದೊಂದು ಕ್ಷಣ ನೆಲಸಿ ಅವರ ಭಾವಭಂಗಿಗಳನ್ನು ಗಮನಿಸಿತು. ಅವರವರ ಮಟ್ಟಿಗೆ ಎಲ್ಲರೂ ನಿಶ್ಚಿಂತೆಯಿಂದಲೇ ನಿದ್ರಿಸುತ್ತಿದ್ದರು. ಅವರು ನಿದ್ರಾವಶರಾಗಿದ್ದ ರೀತಿಯೇ ಅದನ್ನು ಸಾರುತ್ತಿತ್ತು. ಅವರಲ್ಲಿ ಯಾರೊಬ್ಬರಿಗೂ ಯಾವ ಯೋಚನೆಯೂ ಇದ್ದಂತಿರಲಿಲ್ಲ. ಯೋಚನೆಯಿದ್ದವರ ಸ್ಥಿತಿಯೇ ಬೇರೆ. ಅದು ಅವನಿಗೆ ಚೆನ್ನಾಗಿ ಪರಿಚಯವಾಗಿತ್ತು.

ಅವರೆಲ್ಲರಿಗೂ ನಿದ್ದೆ; ಅವನಿಗೊಬ್ಬನಿಗೇ ಎಚ್ಚರ. ನಿದ್ದೆ ಬೇಕೆಂದರೂ ಅದು ಹತ್ತಿರ ಸುಳಿಯಲೊಲ್ಲದು. ಕಣ್ಣು ಮುಚ್ಚಿದರೆ ಸಾಕೆಂದು ಹದ್ದಿನಂತೆ ಮೇಲೆರಗಿ ಕಿತ್ತು ತಿನ್ನಲು ಕಾಯುತ್ತಿದ್ದ ಚಿಂತೆಗಳ ಕಾಟದಲ್ಲಿ ಅವನಿಗೆಲ್ಲಿಯ ನಿದ್ದೆ? ಯಾವುದನ್ನು ಬೇಡವೆಂದು ಅವನು ಎರಡು ಕೈಗಳಿಂದಲೂ ನೂಕುತ್ತಿದ್ದನೋ ಅದೇ ಬಂದು ಬಂದು ಮುತ್ತಿಕೊಳ್ಳುತ್ತಿತ್ತು. ಪ್ರಪಂಚದ ಯೋಚನೆಗೆ ಇನ್ನೆಲ್ಲೂ ಸ್ಥಳವಿರದೆ ಅವನೆಡೆಗೇ ದಾಳಿಯಿಡುವಂತಿತ್ತು. ನಿದ್ರಿಸುತ್ತಿದ್ದವರು ನಿದ್ರಿಸುತ್ತಲೇ ಇದ್ದರು; ಕುಳಿತಿದ್ದವನು ಕುಳಿತೇ ಇದ್ದ. ಅವರಾರಿಗೂ ಚಿಂತೆಯೇ ಇರಲಿಲ್ಲವೆ? ಇವನೊಬ್ಬನಿಗೇ ಅದು ಬಳುವಳಿಯಾಗಿ ಬಂದಿತ್ತೆ?

ಮಧುಸೂದನನ ಮನಸ್ಸು ಆ ಪ್ರಶ್ನೆಯ ಸುತ್ತ ಗಿರಗಿರನೆ ಸುತ್ತಲಾರಂಭಿಸಿತು. ಆಲೋಚನೆಯ ಆವೇಗವನ್ನು ಸಹಿಸಲಾರದೆ ಎರಡು ಕೈಗಳಿಂದಲೂ ಗಟ್ಟಿಯಾಗಿ ತಲೆ ಹಿಡಿದುಕೊಂಡು ಕುಳಿತ. ವೇಗವಾಗಿ ತಿರುಗುವ ರಾಟಳದಲ್ಲಿ ಸಿಕ್ಕಿದಾಗ ತಲೆ ಸುತ್ತಿ ಬರುವಂತೆ ಅವನ ಬುದ್ಧಿಗೆ ಬವಳಿ ಬಂದಂತಾಯಿತು. ಬಿಸಿಯುಸಿರೊಂದು ಅವನಿಗರಿವಿಲ್ಲದೆಯೇ ಹೊರಬಿತ್ತು.

ರೈಲು ಹೋಗುತ್ತಲೇ ಇತ್ತು; ಅವನು ಕಣ್ಣು ಮುಚ್ಚದೆ ಕುಳಿತೇ ಇದ್ದ.

ಖಟಖಟ್, ಖಟಖಟ್, ಖಟಖಟ್—

ನಟ್ಟಿರುಳಿನ ಮೌನವನ್ನು ಸೀಳುವ, ಕ್ರಮ ತಪ್ಪದ ಆ ಸದ್ದು; ದಟ್ಟವಾದ ಕಾಡಿನ ಹೊದರು ಗಿಡಗಳಲ್ಲಿ ಅಡಗಿದ್ದ ಜೀರುಂಡೆಗಳ ಕಿವಿ ಮುಚ್ಚುವ ಆ ಸದ್ದು. ಆ ಸದ್ದಿಗೆ ಕೊನೆಯೇ ಇಲ್ಲವೆ? ಆ ಇರುಳಿಗೆ ಮುಗಿವೇ ಇಲ್ಲವೆ? ನಿಯತಿಯ ಆ ವಜ್ರಮುಷ್ಟಿಯಿಂದ ಬಿಡುಗಡೆಯೇ ಇಲ್ಲವೆ?

ಬಿಡುಗಡೆ? ಯಾರಿಗೆ ಬಿಡುಗಡೆ? ಏತಕ್ಕೆ ಬಿಡುಗಡೆ?

ಯಾರೋ ತನ್ನನ್ನೇ ದಿಟ್ಟಿಸಿ ನೋಡುತ್ತ ಗಹಗಹಿಸಿ ನಕ್ಕು ಕೇಳಿದ ಹಾಗಾಯಿತು. ಇದ್ದಕ್ಕಿದ್ದ ಹಾಗೆ ಮೈಮೇಲೆ ಹಾವು ಬಂದು ಬಿದ್ದರೆ ಬೆದರಿ ತಟಕ್ಕನೆ ಸೆಟೆದುಕೊಳ್ಳುವ ಹಾಗೆ ಆ ಅನುಭವದಿಂದ ಮಧುಸೂದನನ ಮೈ ಜುಮ್ಮೆಂದು ನವಿರೆದ್ದಿತು. ಆ ಮಾತು ಅವನ ಮನಸ್ಸಿನ ಗುಹೆಯಲ್ಲಿ ಸೆಲೆಕೊಟ್ಟಿತು. ಯಾರೋ ತನಗೇ ನೇರವಾಗಿ ಹಾಕಿದಂತೆ ಕೇಳಿಸಿದ ಆ ಪ್ರಶ್ನೆಗೆ

ಅವನ ಮನಸ್ಸು ವಿಚಿತ್ರವಾಗಿ ಜಾಗೃತಿಗೊಂಡಿತು. ನೆನಪಿನ ಸರಪಳಿ ಒಂದೊಂದೇ ಕೊಂಡಿಯಾಗಿ ಬಿಚ್ಚಿಕೊಳ್ಳತೊಡಗಿತು.—

ಆ ಅನುಭವ, ಮನುಷ್ಯನ ಇಡಿಯ ಜೀವಮಾನವನ್ನೇ ಹಣ್ಣು ಮಾಡುವ ಅನುಭವ. ನಿಜವಾಗಿ ಮಧುಸೂದನನ ಮನಸ್ಸು ಅದರಲ್ಲಿ ದಹಿಸಿಹೋಗಿತ್ತು. ಒಂದೇ ಒಂದು ತಿಂಗಳಲ್ಲಿ ಅವನಿಗೆ ನೂರು ವರ್ಷ ಆಯುಸ್ಸು ಮುಗಿದು ಹೋದಂತಿತ್ತು. ತನ್ನ ಬದುಕು ಇಷ್ಟು ವಿಚಿತ್ರವಾದ ರೀತಿಯಲ್ಲಿ, ಇಷ್ಟು ಬೇಗ, ಹೀಗೆ ಬರಿದಾಗುವುದೆಂದು ಅವನು ಕನಸು ಮನಸುಗಳಲ್ಲಿಯೂ ಕಂಡಿರಲಿಲ್ಲ. ಎಷ್ಟು ಅಲ್ಪ ಕಾಲದಲ್ಲಿ ಎಂಥ ಘಟನೆ ನಡೆದುಹೋಗಿತ್ತು. ಹಾಗಾಗುವುದೆಂದು ಊಹಿಸಲೂ ಸಾಧ್ಯವಿರಲಿಲ್ಲ. ಅದರ ಕಹಿನೆನಪು ಅವನ ಮನಸ್ಸಿನಲ್ಲಿ ವಿಷಣ್ಣ ಭಾವನೆಗಳ ತರಂಗವನ್ನೆಬ್ಬಿಸಿತು. ಮರುಕೊಳಿಸಿದ ನೋವಿಗೆ ಸಿಕ್ಕಿ ಅವನ ಮನಸ್ಸು ಮತ್ತೆ ಆಹತವಾಯಿತು.

ಎಂಥ ಕರುಳು ಕತ್ತರಿಸುವ ನೆನಪುಗಳು. ಪ್ರಪಂಚದಲ್ಲಿ ಯಾರಿಗೂ ಇಂಥ ಅನುಭವವಾಗಿಲ್ಲವೆ? ತಮಗೆ ಪ್ರಿಯವಾದ ವಸ್ತುವನ್ನು ಯಾರೂ ಕಳೆದುಕೊಂಡಿಲ್ಲವೆ? ಮೃತ್ಯುವಿನ ದರ್ಶನದಿಂದ ಯಾರೂ ತಲ್ಲಣಿಸಿಲ್ಲವೆ? ಸಾವು ಬರಿದುಮಾಡಿ ಹೋದ ಬಾಳಿಗೆ ಯಾರೂ ರೋಸಿಲ್ಲವೆ? ಆ ದುಃಖ ಯಾರ ಎದೆಯನ್ನೂ ಕಡೆದಿಲ್ಲವೆ?

ಮಧುಸೂದನನ ಮನಸ್ಸಿನಲ್ಲಿ ಪ್ರಶ್ನೆಯ ಮೇಲೆ ಪ್ರಶ್ನೆ ತೂಗಿತು.

ಆದರೆ ಅವನ ಬಳಿ ಅದೊಂದಕ್ಕೂ ಉತ್ತರವಿರಲಿಲ್ಲ. ಬುದ್ಧಿ ಅವುಗಳನ್ನೆಲ್ಲಾ ತರ್ಕಿಸಿ ಉತ್ತರ ಕೊಡುವ ಸ್ಥಿತಿಯಲ್ಲಿರಲಿಲ್ಲ. ಅವನಿಗೆ ಏನೋ ಮಂಕು ಕವಿದ ಹಾಗಾಗಿತ್ತು. ಪ್ರಪಂಚದ ವಿಷಯದಲ್ಲೇ ಅವನಿಗೊಂದು ಬಗೆಯ ಜುಗುಪ್ಸೆ ಹುಟ್ಟಿತ್ತು. ಯಾರಿಂದ ತನ್ನದೂ ಒಂದು ಬಾಳೆಂದು ಅವನೆಣಿಸಿದ್ದನೋ, ಯಾವ ವಸ್ತು ಹಗ ಲಿರುಳೂ ಅವನಿಗಾಗಿ ತೊರೆದುಕೊಳ್ಳುತ್ತಿತ್ತೋ ಅದು ಇದ್ದಕ್ಕಿದ್ದ ಹಾಗೆ ಕೈಬಿಟ್ಟು ಹೋಗಿತ್ತು. ತಾಯಿ ಎನ್ನುವ ಪದಾರ್ಥದ ಬೆಲೆ ಎಷ್ಟೆನ್ನುವುದು ಅದನ್ನು ಕಳೆದುಕೊಂಡ ಮೇಲೆ ಅವನಿಗೆ ಚೆನ್ನಾಗಿ ಅರ್ಥವಾಗಿತ್ತು. ತನ್ನ ಎಲ್ಲ ಚೈತನ್ಯಕ್ಕೂ ತಾಯಿಯಾಗಿದ್ದ ಆ ತಾಯಿ ಬದುಕಿದ್ದಾಗ ತನಗೆ ಎಂಥ ಶಕ್ತಿದಾತೆಯಾಗಿದ್ದಳೆನ್ನುವುದು ಈಗ ತಿಳಿದಿತ್ತು. ಊರೆಗೋಲಿನ ಮೇಲೆಯೇ ಭಾರ ಬಿಟ್ಟು ನಿಂತವನು ಕ್ರಮೇಣ ಆ ಕೋಲನ್ನೇ ಮರೆತು ತನ್ನ

ನಿಲುವು ಸ್ವಭಾವಜನ್ಯವೆಂದು ಭಾವಿಸಿಕೊಳ್ಳುತ್ತಿರುವಾಗ ಇದ್ದಕ್ಕಿದ್ದಂತೆ ಕೋಲು ಕಳಚಿದರೆ ಆಗುವ ಅನುಭವ ಅವನಿಗಾಗಿತ್ತು. ತನ್ನ ಜೀವನ ಮಾನಸಿಕವಾಗಿ ತಾಯಿಯನ್ನು ನೆಮ್ಮಿ ಹೇಗೆ ಬೆಳೆದು ಬಂದಿತ್ತೆನ್ನುವುದು ಅವನಿಗೆ ಅರಿವಾಗಿತ್ತು.

ತಾಯಿ ಹೋದ ಮೇಲೆ ಅವನ ಸ್ಥಿತಿಯೇ ಬದಲಾಯಿಸಿತ್ತು. ಲೋಕದಲ್ಲಿ ತನ್ನದು ಎನ್ನುವ ವಸ್ತು ಇನ್ನೊಂದಿಲ್ಲವಾಯಿತೆನ್ನುವ ಸಂಗತಿ ಅವನ ಕರುಳನ್ನು ಕಠಾರಿಯಂತೆ ಚಿವಿದಿತ್ತು. ತಂದೆ ಹೋದಾಗ ಇನ್ನೂ ಎಳೆಯನಾಗಿದ್ದ ಅವನಿಗೆ ಆ ದುಃಖ ಎಂಥದೆನ್ನುವುದರ ಪರಿಜ್ಞಾನವಿರಲಿಲ್ಲ. ಆ ಶೋಕವೂ ತಾಯಿಯ ಮಡಿಲಿಗೇ ಬಿದ್ದಿತ್ತು. ಅಪಾರವಾದ ಆ ದುಃಖವನ್ನು ಆಕೆ ನುಂಗಿಕೊಂಡು ತನ್ನನ್ನು ಸಂತೈಸಿ ಹೊಟ್ಟೆಯಲ್ಲಿಟ್ಟುಕೊಂಡಂತೆ ಸಲಹಿದ್ದಳು. ಬಡತನದ ದುರ್ದಿನಗಳಲ್ಲಿ ಆ ಜೀವ ಪಟ್ಟ ಶ್ರಮ, ತನಗಾಗಿ ಸಹಿಸಿದ ಕ್ಲೇಶ, ಆತ್ಮ ಗೌರವ ವನ್ನೂ ತೃಣೀಕರಿಸಿ ತನ್ನೊಬ್ಬನ ಶ್ರೇಯಸ್ಸಿಗಾಗಿ ಹೆರವರ ಮನೆಯ ತೊತ್ತಾಗಿ ದುಡಿದ ಬಗೆ, ತನ್ನಲ್ಲಿಯೇ ಬಾಳಿನ ಎಲ್ಲ ಬೆಳಕನ್ನೂ ಕಂಡು ಹಿಗ್ಗುತ್ತಿದ್ದ ಪರಿ – ಮಧುಸೂದನನ ಮನಸ್ಸಿಗೆ ಮುಂದೆ ಗತಜೀವನದ ದುಃಖಕರ ದೃಶ್ಯಗಳು ಸುಳಿದು ಅವನ ಕಣ್ಣು ಹನಿಗೂಡಿತು. ಬಿಸಿಯಾದ ನಾಲ್ಕು ತೊಟ್ಟು ಕಂಬನಿ ಮೆಲ್ಲನೆ ಕೆಳಗಿಳಿಯಿತು.

ಪ್ರಪಂಚದಲ್ಲಿ ಯಾರನ್ನೂ ಆವರಿಸದ ದುಃಖ ಅವನನ್ನು ಆವರಿಸಿತ್ತು. ಮನೆ ಬರಿದಾಗಿತ್ತು, ಮನ ಬರಿದಾಗಿತ್ತು. ಜೀವನದಲ್ಲಿ ಬಣ್ಣಿಸಲಾಗದ ಒಂದು ಜಿಹಾಸೆ ಹುಟ್ಟಿತ್ತು. ತಾಯಿಯ ಸಾವೊಂದೇ ಇಷ್ಟೆಲ್ಲ ಶೋಕಕ್ಕೆ ಕಾರಣ ವಾಗಿತ್ತೆ? ಅವನಿಗೆ ಬೇರೆ ಚಿಂತೆಯೇ ಇರಲಿಲ್ಲವೆ? ಅವನ ಆಲೋಚನಾ ಸರಣಿಗೆ ಹೊಸದೊಂದು ಅಲೆ ಬಂದು ಅಪ್ಪಳಿಸಿತು. ನೀಳವಾಗಿ ಉಸಿರ್ಗರೆದು ಒಂದು ಕ್ಷಣ ಕಣ್ಣು ಮುಚ್ಚಿ ಕುಳಿತ. ಎದೆ ನೋವಿನ ಹುತ್ತವಾಯಿತು. ಸ್ಮೃತಿಯ ದಿಗಂತದಿಂದ ನೆನಪಿನ ಬಿರುಗಾಳಿ ಎದ್ದಿತು. ಲಲಿತನ ಚಿತ್ರ, ಅವ ಳೊಡನೆ ನಾಲ್ಕುದಿನ ಪಟ್ಟ ಸಂಭ್ರಮ, ಇಬ್ಬರೂ ಸೇರಿ ಕಟ್ಟುತ್ತಿದ್ದ ಬಯಕೆಯ ಗೋಪುರ – ಎಲ್ಲವೂ ಹಂಗಿಸುವಂತೆ ಮನಸ್ಸಿನ ಮುಂದೆ ಸುಳಿದವು. ವಿಷಣ್ಣ ವಾದ ಆ ಭಾವನೆಗಳ ಒತ್ತಡವನ್ನು ಅವನು ತಡೆಯದಾದ.

ತಾಯಿಯ ಸಾವಿನಷ್ಟೇ ದುರ್ಭರವಾದ ಆ ಪ್ರಸಂಗ ಗಾಯದ ಮೇಲೆ ಬರೆ ಹಾಕಿದಂತಾಗಿತ್ತು. ಲಲಿತನ ಯೋಚನೆ ಇನ್ನೇಕೆ? ಯಾರನ್ನು ತನ್ನ

ಜೀವನದ ಸರ್ವಸ್ವವೆಂದು ಬಗೆದಿದ್ದನೋ ಅವಳು ಅವನ ಭಾಗಕ್ಕೆ ನಿಷಿದ್ಧ ಫಲವಾಗಿದ್ದಳು, ಗಗನ ಕುಸುಮವಾಗಿದ್ದಳು. ವಿಧಿ ಅವಳ ಒಲುಮೆಯನ್ನು ದೊರಕಿಸಿಕೊಟ್ಟೂ ಅವಳು ಕೈಗೆ ಸಿಕ್ಕದ ಹಾಗೆ ಮಾಡಿತ್ತು. ತನ್ನ ಅವಳ ಪ್ರಣಯ ನಾಲ್ಕು ದಿನದ ಮರೀಚಿಕೆಯಾಗಿತ್ತು. ಇನ್ನವಳು ತನ್ನ ಬಾಳನ್ನು ಬೆಳಗುವಂತಿರಲಿಲ್ಲ. ಆ ಆಭರಣ ಬೇರೆ ಯಾರ ಕೊರಳಿಗೋ ಕಾದಿತ್ತು. ಅದನ್ನು ಕಟ್ಟಿಕೊಂಡು ತನಗಿನ್ನೇನು?

ಈ ಅಣಕ ಅವನನ್ನು ಅಸಹ್ಯವಾದ ಸಂಕಟಕ್ಕೆ ಈಡುಮಾಡಿತ್ತು. ತನ್ನ ಮನಸ್ಸಿನಲ್ಲೇ ಎದ್ದ ತುಮುಲದೊಡನೆ ಹೋರಾಡಿ ಅವನು ಸೋತಿದ್ದ. ಎಲ್ಲವನ್ನೂ ಮರೆವಿನಲ್ಲಿ ಮುಳುಗಿಸಿ, ಎಲ್ಲವನ್ನೂ ಹಿಂದೆ ಬಿಟ್ಟೆನೆಂದುಕೊಂಡು, ಎಲ್ಲಿಗೋ ಹೋಗುತ್ತಿರುವಾಗಲೂ ಈ ಕಹಿನೆನಪುಗಳು ಬಿಡದೆ ಬೆಂಬತ್ತಿ ಬಂದು ಕಾಡಿಸಬೇಕೆ?

ತಾಯಿಯ ಸಾವು, ಬಯಸಿದ ಹೆಣ್ಣಿನ ಅಲಭ್ಯತೆ ಅವನ ಮನಸ್ಸನ್ನು ಕಲ್ಲುಮಾಡಿ ಅವನನ್ನು ಎತ್ತಲೋ ಸೆಳೆದೊಯ್ಯುತ್ತಿದ್ದವು. ಎಲ್ಲಿಗೆ?

ಎಲ್ಲಿಗೆ ಎನ್ನುವ ಪ್ರಶ್ನೆ ಒಂದಲ್ಲ ಹತ್ತು ಸಲ ಮನಸ್ಸಿನಲ್ಲಿ ಪುನರಾವರ್ತವಾಯಿತು.

ಎಲ್ಲಿಗೋ ಯಾರಿಗೆ ಗೊತ್ತು? ವಿಧಿ ಸೆಳೆದತ್ತ ಅವನು ಹೋಗುತ್ತಿದ್ದ; ದುಃಖವೆಲ್ಲವನ್ನೂ ಕಗ್ಗತ್ತಲಿನಲ್ಲಿ ಮುಳುಗಿಸಿಬಿಡುವೆಡೆಗೆ ಹೋಗುತ್ತಿದ್ದ; ಲೋಕದ ಜಂಜಡದಿಂದ ಪಾರಾಗಲು ಹೋಗುತ್ತಿದ್ದ; ತನ್ನ ಅಸ್ತಿತ್ವವನ್ನೇ ಇಲ್ಲವೆನಿಸಿಬಿಡಲು ಹೋಗುತ್ತಿದ್ದ.

ಅಸ್ತಿತ್ವ, ಕೀರ್ತಿ—

ಕೀರ್ತಿ ಯಾರಿಗೆ ಬೇಕು? ತನ್ನ ಸುಖವನ್ನೇ ನುಂಗಿ ನೀರು ಕುಡಿದಿದ್ದ ಕೀರ್ತಿಯಿಂದ ಅವನಿಗಿನ್ನೇನು ೬ ಬೇಕಾಗಿತ್ತು? ಹಣ ಅವನಿಗೆ ಬೇಕಾದ ಸುಖವನ್ನು ನೀಡಿತ್ತೆ? ಹೆಸರು ಅವನಿಗೆ ಶಾಂತಿ ಸಮಾಧಾನಗಳನ್ನು ತಂದಿತ್ತೆ? ಬಾಳು ಅವನ ಭಾಗಕ್ಕೆ ಸಾರ್ಥಕವೆನಿಸಿತ್ತೆ? ಹೆಸರಿಗೆ ಎಲ್ಲ ಇದ್ದೂ ನಿಜದಲ್ಲಿ ಅವನಿಗೆ ಏನೂ ಇಲ್ಲವಾಗಿತ್ತು.

"ಹಾಗಾದರೆ ಕೀರ್ತಿಗೆ ತಿಲೋದಕ ಕೊಡುವೆಯಾ? ಆತ್ಮವನ್ನು ಅಂಧಕಾರದ ಕೂಪಕ್ಕೆ ನೂಕುವೆಯಾ?"

ತನ್ನ ಬೆನ್ನ ಹಿಂದೆಯೇ ನಿಂತು ಯಾರೋ ಕೇಳಿದ ಹಾಗಾಯಿತು.

ಪ್ರಪಂಚಕ್ಕೆ ಬೆಂಕಿಯಿಡಲು ಪಂಜು ಹಿಡಿದವನು ಆ ಬೆಳಕಿನಲ್ಲೇ ಏನನ್ನೋ ಕಂಡು ಕ್ಷಣ ನಿಲ್ಲುವಂತೆ ದುಃಖಮತ್ತವಾಗಿದ್ದ ಅವನ ಮನಸ್ಸು ಒಂದು ಗಳಿಗೆ ಮುಗ್ಧವಾಗಿ ನಿಂತು ಆಲಿಸಿತು. ಆದರೆ ಆ ಮಾತು ತನಗಲ್ಲ ವೆನ್ನುವ ಅನಾಸಕ್ತಿಯಿಂದ ಅದಕ್ಕೆ ನಗೆ ಬಂದಿತು. ಅಯ್ಯೋ ಹುಚ್ಚಿ, ಅಸ್ತಿತ್ವ ವನ್ನೇ ನೀಗಿಕೊಳ್ಳಲೆಳಸಿದವನಿಗೆ ಕೀರ್ತಿಯ ಆಮಿಷವೆ? ಮಧುಸೂದನ ವೇದನೆಯನ್ನು ತಡೆಯಲಾರದೆ ನಕ್ಕ. ಗಹಗಹಿಸಿ ನಕ್ಕ.

ಸದ್ದು ಕೇಳಿ ಯಾರಿಗೋ ಎಚ್ಚರವಾಗಿರಬೇಕು.

ತಮ್ಮದೇ ಆದ ಪ್ರಪಂಚದಲ್ಲಿ ಮುಳುಗಿ ನಿಶ್ಚಿಂತೆಯಿಂದ ನಿದ್ರಿಸುತ್ತಿದ್ದ ವರನ್ನು ಆ ನಗೆ ಜಾಗೃತ ಪ್ರಪಂಚಕ್ಕೆ ಸೆಳೆಯಿತು. ಗಂಡನ ಭುಜಕ್ಕೆ ತಲೆ ಕೊಟ್ಟು ನಿದ್ರಿಸುತ್ತಿದ್ದ ಹೆಣ್ಣು ಎಚ್ಚರಗೊಂಡು ತನ್ನ ಸ್ಥಿತಿಯನ್ನರಿತು ನಾಚಿ ಸೆರಗನ್ನು ಸರಿಮಾಡಿಕೊಂಡು ಕುಳಿತಳು. ಸೇಟನ ಹೆಂಡತಿ ತಟಕ್ಕನೆ ಎದ್ದು ಕುಳಿತು ಅಸ್ತವ್ಯಸ್ತವಾಗಿದ್ದ ತನ್ನ ಸೀರೆಯನ್ನು ಸರಿಪಡಿಸಿಕೊಂಡಳು. ಸೇಟು ದೊಡ್ಡದಾಗಿ ಆಕಳಿಸಿ ಒಂದು ಪಕ್ಕದಿಂದ ಇನ್ನೊಂದು ಪಕ್ಕಕ್ಕೆ ಹೊರಳಿದ. ಆಂಧ್ರ ಸೋದರರು ಯಾವಾಗ ಎಲ್ಲಿ ಇಳಿದುಹೋಗಿದ್ದರೋ ಗೊತ್ತಿರಲಿಲ್ಲ. ಅವರ ಜಾಗ ತೆರವಾಗಿತ್ತು.

ರೈಲು ಸೀಳುದನಿಯಲ್ಲಿ ಕೂಗುತ್ತ ಇರುಳನ್ನು ಹಿಂದೆ ಬಿಟ್ಟು ಹಗಲಿನೆಡೆಗೆ ಸಾರುತ್ತಿತ್ತು. ದಿಗಂತದಲ್ಲಿ ನಸುಕು ಹರಿದು ಹೊಂಬಣ್ಣದ ಹೊಸ ಹಗಲು ಮೂಡುತ್ತಿತ್ತು. ನಿದ್ರೆ ತಿಳಿದು ಲೋಕ ಎಚ್ಚರಗೊಳ್ಳುತ್ತಿತ್ತು.

ಸೇಟು ಮೈ ಕೈ ಮುರಿಯುತ್ತ ಎದ್ದು ಕುಳಿತು ದೊಡ್ಡದಾಗಿ ಆಕಳಿಸಿ ಒಂದು ಬೀಡಿ ಹೊತ್ತಿಸಿದ. ಅವನ ಹೆಂಡತಿ ಹಾಸಿಗೆ ಬಟ್ಟೆ ಸವರಿಸತೊಡಗಿ ದಳು. ಗಾಡಿಯಲ್ಲಿದ್ದವರಾರನ್ನೂ ಗಮನಿಸದೆ ಅವರು ತಮ್ಮ ಪಾಡಿಗೆ ತಾವು ಗುಜರಾತಿಯಲ್ಲಿ ಹರಟುತ್ತ ಕುಳಿತರು.

ರೈಲು ಪುಣೆ ತಲಪಿದಾಗ ಅವರಿಬ್ಬರೂ ಇಳಿದುಹೋದರು.

ಎದುರುಗಡೆ ಹೆಂಡತಿಯೊಡನೆ ಕುಳಿತಿದ್ದ ಯುವಕ ನಗೆಮೊಗದಿಂದ ಮಧುಸೂದನನ ಮುಖ ನೋಡಿ,

" ನೀವೂ ಮುಂಬಯಿಗೆ ಹೋಗುತ್ತಿರುವಿರಾ?"

ಎಂದ. ಮಧುಸೂದನ ಉತ್ತರವಾಗಿ ಸುಮ್ಮನೆ ಹೂಗುಟ್ಟಿದ. ಯುವಕ ಅಷ್ಟಕ್ಕೇ ಸುಮ್ಮನಾಗಲಿಲ್ಲ. ಮಾತಾಡದೆ ಕುಳಿತಿರುವುದಕ್ಕೆ ಅವನಿಗೂ ಬೇಸರವಾಗಿತ್ತೇನೋ.

"ನೀವು ರಾತ್ರಿಯೆಲ್ಲ ನಿದ್ದೆ ಮಾಡಿದ ಹಾಗೆ ಕಾಣಲಿಲ್ಲ."

"ಇಲ್ಲ, ನಿದ್ದೆ ಬರಲಿಲ್ಲ."

"ಹೌದು, ರೈಲಿನಲ್ಲಿ ಯಾರಿಗೆ ನಿದ್ದೆ ಬರತ್ತೆ ಹೇಳಿ?"

ಅವನ ಮಾತು ಕೇಳಿ ಅವನ ಹೆಂಡತಿಯ ಮುಖದ ಮೇಲೆ ಒಂದು ನಗೆಯ ಅಲೆ ಕಾಣಿಸಿಕೊಂಡಿತು. ಇಡೀ ರಾತ್ರಿಯೆಲ್ಲಾ ಒಬ್ಬರನ್ನೊಬ್ಬರು ಅಪ್ಪಿ ಕುಳಿತು ನಿದ್ದೆ ಮಾಡಿಯೂ ಹೀಗೆನ್ನಬಹುದೇ ಎಂದು ಅವಳಿಗನ್ನಿಸಿರಬೇಕು. ಅವಳ ಕೆನ್ನೆಗೆ ಕೆಂಪೇರಿ ತಲೆ ತಗ್ಗಿಸಿದಳು. ಮಾತು ಮುಂದೆ ಸಾಗದೆ ಅಷ್ಟಕ್ಕೇ ನಿಂತಿತು. ಮಧುಸೂದನ ಕಿಟಕಿಯಿಂದ ಹೊರಗೆ ನೋಡುತ್ತ ತನ್ನ ಯೋಚನೆಯಲ್ಲಿಯೇ ಮುಳುಗಿ ಕುಳಿತ. ಕಾಲದ ಪರಿವೆಯಿಲ್ಲದೆ ಎಷ್ಟು ಹೊತ್ತು ಕುಳಿತಿದ್ದನೋ ಅವನಿಗೇ ಗೊತ್ತಾಗಲಿಲ್ಲ. ರೈಲು ಸ್ಟೇಷನ್ನು ಸೇರಿದಾಗಲೇ ಎಚ್ಚರ.

ವಿಕ್ಟೋರಿಯಾ ಟರ್ಮಿನಸ್ – ಮುಂಬಯಿ.

"ಟ್ಯಾಕ್ಸಿ ಸಾಬ್, ರಿಕ್ಷಾ, ಕೂಲಿ?"

ಸಾಲು ಹಿಡಿದು ಕುಳಿತಿದ್ದ ಜನ ರೈಲು ನಿಲ್ಲುತ್ತಲೇ ಎದ್ದುನಿಂತು ಕೂಗು ಹಾಕುವುದಕ್ಕಾರಂಭಿಸಿದ್ದರು. ಹಲವು ಹದಿನೆಂಟು ಬಗೆಯ ಸದ್ದು ಸ್ಟೇಷನ್ನನ್ನು ತುಂಬಿತ್ತು. ಎಲ್ಲರಿಗೂ ಏನೋ ಅವಸರ. ರೈಲು ಇಳಿಯುವ ಜನರ ಗಡಿಬಿಡಿ, ಊರಿಗೆ ಬಂದಿದ್ದವರನ್ನು ಎದುರುಗೊಳ್ಳಲು ಬಂದಿದ್ದವರ ಸಡಗರ, ಕೂಲಿಯಾಳುಗಳ ಗದ್ದಲ, ಗಿರಾಕಿಗಳನ್ನು ಹಿಡಿಯುವ ಟ್ಯಾಕ್ಸಿ ರಿಕ್ಷಾವಾಲಾಗಳ ಅವಾಂತರ, ಪತ್ರಿಕೆ ಪುಸ್ತಕಗಳನ್ನು ಮಾರುವ ಹುಡುಗರ ಹೊಯ್ಲು ; ತಲೆ ಚಿಟ್ಟೆನ್ನಿಸುವ ಸದ್ದು, ಅರ್ಥವಿಲ್ಲದ ಸದ್ದು, ಜನಸಾಗರದ ಕೊನೆಮೊದಲಿಲ್ಲದ ಘೋಷ.

ತನ್ನ ಸೂಟ್‌ಕೇಸು ಹೋಲ್ಡಾಲುಗಳೊಡನೆ ಕೆಳಗಿಳಿದು ನಿಂತಿದ್ದ ಮಧುಸೂದನ ಅತ್ತಿತ್ತ ಚಲಿಸದೆ ಗುಂಪಿನ ಗದ್ದಲವನ್ನು ಮೌನವಾಗಿ

ನೋಡುತ್ತಿದ್ದ. ನವದಂಪತಿಗಳಿಬ್ಬರೂ ಅದಕ್ಕೆ ಮುನ್ನವೇ ಬೀಳ್ಕೊಂಡು ಹೊರಟುಹೋಗಿದ್ದರು.

"ಟ್ಯಾಕ್ಸಿ, ಸಾಬ್ ?"

ಯಾವನೋ ಆಸಾಮಿ ಹತ್ತಿರ ಬಂದು ಕೇಳಿದ.

"ಹಾಂ ? – ಟ್ಯಾಕ್ಸಿ ?"

ಮಧುಸೂದನ ಎಚ್ಚರಗೊಂಡಂತೆ ಅವನನ್ನೇ ದಿಟ್ಟಿಸಿ ನೋಡಿ ನಿಧಾನವಾಗಿ ತಲೆದೂಗಿದ. ಟ್ಯಾಕ್ಸಿವಾಲಾ ನಸುನಕ್ಕು ಹೋಲ್ಡಾಲ್ ಸೂಟ್‌ಕೇಸುಗಳಿಗೆ ಕೈ ಹಾಕಿ ಎತ್ತಿಕೊಂಡ. ಮಧುಸೂದನ ಮಾತಿಲ್ಲದೆ ಅವನನ್ನೇ ಹಿಂಬಾಲಿಸಿದ. ನಿದ್ದೆಯಿಲ್ಲದೆ ಆಯಾಸದಿಂದ ಬಳಲಿದ್ದ ದೇಹ ಎತ್ತಲೆತ್ತಲೋ ತುಯ್ಯುತ್ತಿತ್ತು. ಕಲೆಕ್ಟರನಿಗೆ ಟಿಕೆಟ್ ಒಪ್ಪಿಸಿ ಹೊರಗೆ ಹೋಗಿ ಟ್ಯಾಕ್ಸಿಯಲ್ಲಿ ಕುಳಿತದ್ದಾಯಿತು. ಡ್ರೈವರ್ ಬಾಗಿಲನ್ನು ಮುಚ್ಚಿ ಸ್ವಸ್ಥಾನದಲ್ಲಿ ಕುಳಿತು,

"ಎಲ್ಲಿಗೆ ಬಿಡಲಿ, ಸಾಬ್ ?"

ಎಂದ. ಎಂಥ ಪ್ರಶ್ನೆ. ಎಲ್ಲಿಗೆ ಬಿಡಲಿ ? ಎಲ್ಲಿಗೆ ಬಿಡುವುದು ? ಬಿಟ್ಟಲ್ಲಿಗೆ ಬಿಡಲಿ. ಎಲ್ಲಿಗೆ ಬಿಟ್ಟರೇನು ? ಇಂಥ ಮಹಾ ನಗರದಲ್ಲಿ ಹೋಗಲು ಎಡೆಯಿಲ್ಲವೆ ? ಎಲ್ಲಾದರೂ ಹೋಗುವವನಿಗೆ ಅಲ್ಲಿ ಇಲ್ಲಿ ಎನ್ನುವ ತಾರತಮ್ಯವುಂಟೆ ?

ಪ್ರಶ್ನೆಗೆ ಉತ್ತರ ಬಾರದಿದ್ದುದನ್ನು ಗಮನಿಸಿ ಡ್ರೈವರ್ ತಿರುಗಿ ನೋಡಿ ಧ್ವನಿ ಎತ್ತರಿಸಿ ಮತ್ತೆ ಅದೇ ಪ್ರಶ್ನೆ ಹಾಕಿದ.

"ಪರೇಲಿಗೆ ಬಿಡು"

ಮಧುಸೂದನ ಯಾವುದೋ ಸ್ಫೂರ್ತಿಯಿಂದೆನ್ನುವಂತೆ ತಟಕ್ಕನೆ ಉತ್ತರ ಕೊಟ್ಟ. ಹೌದು, ಪರೇಲ್; ಅಲ್ಲಿಗೇ ಹೋಗಲಿ – ಎಂದು ಮನಸ್ಸಿನಲ್ಲಿ ಯಾರೋ ಮರುನುಡಿದ ಹಾಗಾಯಿತು. ಟ್ಯಾಕ್ಸಿ ವೇಗವಾಗಿ ಹೊರಟು ಪರೇಲ್ ಹಾದಿ ಹಿಡಿಯಿತು. ಅದರ ವೇಗಕ್ಕೆ ಬೀದಿ ಮನೆ ಅಂಗಡಿ ಮುಂಗಟ್ಟುಗಳು ದೃಶ್ಯಾದೃಶ್ಯವಾಗಿ ಸುಳಿದು ಮರೆಯಾಗುತ್ತಿದ್ದವು. ಅವನ ಮನಸ್ಸಿಗೆ ಅವೆಲ್ಲವೂ ಗತಜೀವನದ ನೆನಪುಗಳಂತೆ ತೋರಿತು. ಹಿಂದೊಮ್ಮೆ ಅವನು ಇದೇ ಗುರಿ ಹಿಡಿದು ಹೋಗಿದ್ದ. ಆದರೆ ಅಂದಿನ ಸನ್ನಿವೇಶವೇ

ಬೇರೆ, ಇಂದಿನ ಸನ್ನಿವೇಶವೇ ಬೇರೆ. ತನ್ನ ಲಕ್ಷ್ಯದ ಸುತ್ತ ಬಲೆ ನೆಯ್ಯುವ ಜೇಡದಂತೆ ಅವನ ಮನಸ್ಸು ಚಿಂತಿತ ವಸ್ತುವನ್ನು ಸುತ್ತುವರಿಯುತ್ತಿತ್ತು.

ಆ ಯೋಚನೆಯಲ್ಲಿ ಹಾದಿ ಸಾಗಿದ್ದೇ ಗೊತ್ತಾಗಲಿಲ್ಲ. ಸ್ವಲ್ಪ ಹೊತ್ತು ಸುಮ್ಮನಿದ್ದಿದ್ದರೆ ಟ್ಯಾಕ್ಸಿ ಇನ್ನೂ ಮುಂದೆ ಹೊರಟುಹೋಗುತ್ತಿತ್ತೇನೋ. ರಸ್ತೆಯ ತಿರುಗಣೆಯಲ್ಲಿ ಮಧುಸೂದನ ಸೂಚನೆ ಕೊಡಲು ಡ್ರೈವರ್ ಟ್ಯಾಕ್ಸಿಯನ್ನು ಬಲಗಡೆಗೆ ತಿರುಗಿಸಿ 'ಷಿರಾಜ್ ಮಂಜಿಲ್' ಬಳಿ ವೇಗ ತಗ್ಗಿಸಿದ. ಕಾರು ತೆರೆದಿದ್ದ ಗೇಟನ್ನು ಹೊಕ್ಕು ಪೋರ್ಟಿಕೋದಲ್ಲಿ ಬಂದು ನಿಂತಿತು. ಯಾರು ಬಂದರೆಂದು ನೋಡಲು ಧಾವಿಸಿ ಬಂದ ಆಳು ಮಧುಸೂದನನ್ನು ಗುರುತಿಸಿಯೋ ಏನೋ ಬಗ್ಗಿ ಸಲಾಂ ಮಾಡಿದ.

" ಬಾಯಿ ಸಾಹಿಬಾ ಇದ್ದಾರೇನು ?"

" ಇದ್ದಾರೆ. ಅಪ್ಪಣೆಯಾದರೆ ತಿಳಿಸುತ್ತೇನೆ."

" ಹೋಗು. ಮೈಸೂರಿನಿಂದ ಮಧುಸೂದನರು ಬಂದಿದ್ದಾರೆಂದು ಚಿಕ್ಕ ಬಾಯಿ ಸಾಹಿಬಾರಿಗೆ ಹೇಳಿ ಬಾ. ಹಾಗೇ ಈ ಹೋಲ್ಡಾಲನ್ನೂ ಸೂಟ್‌ಕೇಸನ್ನೂ ಎತ್ತಿಕೊಂಡು ಹೋಗು."

ಆಳು ಮರು ಮಾತಾಡದೆ ಹೋಲ್ಡಾಲ್ ಸೂಟ್‌ಕೇಸುಗಳನ್ನು ಕೈಗೆತ್ತಿಕೊಂಡು ಒಳಗೆ ನಡೆದ. ಮಧುಸೂದನ ಟ್ಯಾಕ್ಸಿಯವನಿಗೆ ಹಣ ಸಲ್ಲಿಸಿ ಕೆಳಗಿಳಿದು ನಿಧಾನವಾಗಿ ಮೆಟ್ಟಲೇರಿ ಮುಂದುಗಡೆಯ ಹಜಾರಕ್ಕೆ ಬಂದು ನಿಂತ. ನಡೆದರೆ ಸದ್ದಾಗದಂತೆ ನೆಲಕ್ಕೆ ಹಾಸಿದ್ದ ಮೆತ್ತನೆಯ ರತ್ನಗಂಬಳಿ, ಗೋಡೆಗೆ ತೂಗುಹಾಕಿದ್ದ ಸುಂದರ ಚಿತ್ರ ಕೃತಿಗಳು, ಅಲ್ಲಲ್ಲೇ ಓರಣವಾಗಿಟ್ಟಿದ್ದ ಹೂವಿನ ಕುಂಡಗಳು ಅವನ ದೃಷ್ಟಿಯನ್ನು ಸೆಳೆದವು. ಯಾವುದು ಎಲ್ಲೆಲ್ಲಿ ಹೇಗಿತ್ತೋ ಹಾಗೆಯೇ ಇತ್ತು. ಯಾವ ವ್ಯತ್ಯಾಸವೂ ಆಗಿರಲಿಲ್ಲ.

ಅಷ್ಟು ಹೊತ್ತಿಗೆ ಹಜಾರದ ಂದು ಪಕ್ಕದಲ್ಲಿದ್ದ ಬಾಗಿಲನ್ನು ತೆಗೆದುಕೊಂಡು ಆಳು ಬಂದ. ಒಳಗೆ ಸಮಾಚಾರ ಮುಟ್ಟಿಸಿ ಬಂದಿದ್ದನೆಂದು ಕಾಣುತ್ತದೆ. ಬಾಗಿಲ ಬಳಿಯೇ ನಿಂತು ವಿನಯದಿಂದ,

" ಒಳಗೆ ದಯಮಾಡಿಸಬೇಕು."

ಎಂದು ನುಡಿದು ಮಧುಸೂದನ ಒಳಗೆ ಪ್ರವೇಶಿಸಿದ ಕೂಡಲೆ ಬಾಗಿಲನ್ನು ಹೊರಗಡೆಯಿಂದ ಮೆಲ್ಲನೆ ಎಳೆದು ಮುಚ್ಚಿಕೊಂಡ. ಅವನು ಆ ಬಾಗಿಲನ್ನೆಳೆದು

ಕೊಳ್ಳುವುದಕ್ಕೂ ಒಳಗಿನ ರೂಮಿನ ಬಾಗಿಲು ತೆರೆಯುವುದಕ್ಕೂ ಸರಿ ಹೋಯಿತು. ಮುಂದೆ ಇಳಿಬಿಟ್ಟಿದ್ದ ತೆಳುವಾದ ತೆರೆಯನ್ನು ಕೆಲಸರಿಸಿ ಹೊರಗೆ ಕಾಲಿಟ್ಟ ರೋಷನ್ ಮಧುಸೂದನನನ್ನು ಕಂಡು ಒಂದು ಕ್ಷಣ ಸ್ತಂಭಿತಳಾದಂತೆ ನಿಂತಳು. ಬಳಿಕ ತನ್ನ ಮನಸ್ಸಿನ ಸಂಭ್ರಮವನ್ನು ಹಿಡಿತದಲ್ಲಿಟ್ಟುಕೊಳ್ಳ ಲೆತ್ನಿಸುತ್ತ ಮುಗುಳ್ನಗೆ ಬೀರಿ,

"ಬನ್ನಿ ದೊರೆ, ನಿಮಗಾಗಿ ಕಾದಿದ್ದೆ"

ಎಂದು ಅವನ ಆಗಮನವನ್ನು ನಿರೀಕ್ಷಿಸುತ್ತಿದ್ದವಳಂತೆ ನುಡಿದು, ಮೆಲ್ಲನೆ ಅವನ ಬಳಿ ಸಾರಿ ಕೈಹಿಡಿದುಕೊಂಡಳು. ಅಪ್ಪಳಿಸಿ ಬಂದ ತೆರೆಗೆ ಸಿಕ್ಕಿದಂತೆ ಮಧುಸೂದನ ಆವೇಗದಲ್ಲಿ ಅವಳನ್ನು ಬಿಗಿದಪ್ಪಿದ. ರೋಷನ್ ಆ ಆಲಿಂಗನದಲ್ಲಿದ್ದಂತೆಯೇ ಅವನನ್ನು ರೂಮಿನೊಳಗೆ ಕರೆದೊಯ್ದು ಬಾಗಿಲು ಮುಚ್ಚಿಕೊಂಡಳು.

೨

" ಓಹೋ, ಏನಪ್ಪಾ ಇಷ್ಟು ದೂರ?"

ಎಂದು ತಮ್ಮನ್ನು ಕಂಡು ಸೈಕಲಿನಿಂದಿಳಿದ ಸುಬ್ಬಕೃಷ್ಣನನ್ನು ದಾಸರು ಪ್ರಶ್ನಿಸಿದರು.

" ಏನೂ ಇಲ್ಲ ನಿಮ್ಮನ್ನೇ ನೋಡೋಣ ಅಂತ ಬಂದೆ."

" ಏನು ಸಮಾಚಾರ ?"

" ಮಧುಸೂದನ ಏನಾದರೂ ಈ ಕಡೆ ಬಂದಿದ್ದನೇನು ?"

" ಇಲ್ಲಪ್ಪ, ನಾನು ಕಾಣಲಿಲ್ಲ. ಅವನನ್ನು ನೋಡಿ ಹತ್ತು ಹದಿನೈದು ದಿವಸದ ಮೇಲಾಯಿತು. ಈಚೆಗೆ ಅವನು ನನಗೆ ಸಿಕ್ಕಿಯೇ ಇಲ್ಲ. ನಾನೂ ಆ ಕಡೆ ಹೋಗಿಲ್ಲ ಅನ್ನು. ಹೇಗಿದ್ದರೂ ನಿನಗೆ ಸಿಕ್ಕುತಾನೇ ಇರುತಾನಲ್ಲ. ಏಕೆ, ನಿನ್ನ ಕಣ್ಣಿಗೂ ಬೀಳಲಿಲ್ಲವೇನು ?"

" ಒಂದು ವಾರದಿಂದ ನಾನೂ ಅವನನ್ನು ನೋಡಿಲ್ಲ, ದಾಸರೇ. ಮನೆಗೆ ಮೂರು ಸಲ ಹೋಗಿದ್ದೆ ; ಮೂರು ಸಲವೂ ಬೀಗಹಾಕಿತ್ತು."

" ಯಾವುದಾದರೂ ಊರುಗೀರಿಗೆ ಹೋಗಿದಾನೋ ?"

" ನನಗೆ ಹೇಳದೆ ಅವನು ಸಾಮಾನ್ಯವಾಗಿ ಎಲ್ಲಿಗೂ ಹೋಗುವುದಿಲ್ಲ."

" ಹೌದು, ಅವನ ಏರ್ಪಾಡೆಲ್ಲಾ ಸ್ವಲ್ಪ ಹೆಚ್ಚು ಕಡಮೆ ನಿನಗೆ ಗೊತ್ತೇ ಇರುತ್ತೆ ಅನ್ನು. ಆದರೂ ಏನಾದರೂ ಜರೂರು ಕೆಲಸ ಗಿಲಸ ಬಿದ್ದು, ಕಂಡು ಹೇಳುವುದಕ್ಕೆ ಅವಕಾಶವಿಲ್ಲದೆ ಹೋಗಿದ್ದರೂ ಹೋಗಿರಬಹುದು."

" ನನಗೆ ಹಾಗೆ ತೋರುವುದಿಲ್ಲ, ದಾಸರೇ "

ಎಂದು ಸುಬ್ಬುಕೃಷ್ಣ ನುಡಿದ. ಆ ಮಾತು ಕೇಳಿ ದಾಸರು ಅವನ

ಅವನ ಮುಖವನ್ನು ದಿಟ್ಟಿಸಿ ನೋಡಿದರು. ಅವರ ಮನಸ್ಸಿನಲ್ಲಿಯೂ ಏನೊ
ಶಂಕೆ ಮೂಡಿತು. ಸುಬ್ಬಕೃಷ್ಣ ಒಂದು ಕ್ಷಣ ಸುಮ್ಮನಿದ್ದು,

"ಇವತ್ತು ಬೆಳಗ್ಗೆ ಚಿನ್ನಪ್ಪ ಸಿಕ್ಕಿದ್ದ."

"ಯಾರು, ಮನೆ ಮಾಲೀಕ ಚಿನ್ನಪ್ಪನೇ?"

"ಹೌದು."

"ಏನು ಹೇಳಿದ?"

"ಮಧುಸೂದನ ಅವನಿಗೆ ನಾಲ್ಕು ದಿನಗಳ ಹಿಂದೆ ಸಿಕ್ಕಿದ್ದನಂತೆ. ಮನೆ ಬಿಡಬೇಕಾಗಬಹುದು. ಒಬ್ಬನಿಗೋಸ್ಕರ ಮನೆ ಏಕೆ? ನಾನೂ ಇರುತ್ತೀನೋ ಇಲ್ಲವೋ. ಯಾರ ಕೈಯಲ್ಲಾದರೂ ಬೀಗದಕೈ ಕಳುಹಿಸಿದರೂ ಕಳುಹಿಸುತ್ತೀನೆ – ಎಂದನಂತೆ."

"ಒಬ್ಬನಿಗೋಸ್ಕರ ಮನೆ ಏಕೆ ಎಂದರೇನರ್ಥ?"

"ನನ್ನ ಮನಸ್ಸಿಗೂ ಹಾಗೇ ತೋರಿತು, ಮಧುಸೂದನ ಏಕೆ ಹೀಗೆ ಹೇಳಿದ ಅಂತ."

"ಸಂಜೀವಯ್ಯನನ್ನು ವಿಚಾರಿಸಿದೆಯಾ?"

"ಪಾಪ, ಆ ಪ್ರಾಣಿ ಅವನನ್ನು ನೋಡಿ ಎಷ್ಟು ದಿವಸವಾಯಿತೋ, ನಮಗೆ ಗೊತ್ತಿರುವಷ್ಟು ಸಂಗತಿಯೂ ಆತನಿಗೆ ಗೊತ್ತಿಲ್ಲ."

"ಶಂಕರಪ್ಪ?"

"ಅವರಾರಿಗೂ ಗೊತ್ತಿರುವ ಹಾಗೆ ಕಾಣೆ. ಜೊತೆಯ ವಿದ್ವಾಂಸರೊಡನೆ ಮಧುಸೂದನ ಈಚೆಗೆ ಹೆಚ್ಚಾಗಿ ಬೆರೆಯುತ್ತಲೇ ಇರಲಿಲ್ಲ."

"ಹೌದು, ವೆಂಕಮ್ಮನವರು ಹೋದ ಮೇಲೆ ಅವನ ರೀತಿಯೇ ಒಂದು ತರಹ ಆಗಿತ್ತು. ಆ ಹುಡುಗ ಅವರ ಸಾವನ್ನು ತುಂಬ ಮನಸ್ಸಿಗೆ ಹಚ್ಚಿಕೊಂಡು ಬಿಟ್ಟ, ಸುಬ್ಬು."

"ಬರೀ ಹಚ್ಚಿಕೊಂಡಿದ್ದರೆ ಹೇಗೋ ಆಗುತ್ತಿತ್ತು. ಅವನ ಮನಸ್ಸು ಏನೇನೋ ಕೆಟ್ಟ ಯೋಚನೆಯಲ್ಲಿಯೇ ಮುಳುಗಿರುತ್ತಿತ್ತು."

"ನಾನೂ ಅವನಿಗೆ ಎಷ್ಟೋ ಸಮಾಧಾನ ಹೇಳಿದೆ. ಪ್ರಪಂಚದಲ್ಲಿ ಸಾವು ಯಾರಿಗೆ ತಪ್ಪಿದ್ದು, ಸುಬ್ಬು? ಎಲ್ಲರೂ ಒಂದಲ್ಲ ಒಂದು ದಿವಸ ಅದಕ್ಕೆ ವಶವಾಗುವವರೇ. ಇಂಥವರನ್ನು ಕಿತ್ತುಕೊಳ್ಳಬೇಕು, ಇಂಥವರನ್ನು ಬಿಡಬೇಕು

ಎನ್ನುವುದನ್ನು ಅದು ಬಲ್ಲುದೆ? ಮನುಷ್ಯನಿಗೆ ದುಃಖ ಬರುತ್ತದೆ, ನಿಜ. ಆದರೆ ಅದಕ್ಕೇ ಸಿಕ್ಕಿಬಿಟ್ಟರೆ ಕೊನೆಯೆಲ್ಲಿ? ಏನೋ ನಾಲ್ಕು ದಿವಸ ಕಷ್ಟವಾಗುತ್ತದೆ. ಮರೆಯಬೇಕು, ಸಮಾಧಾನ ತಂದುಕೊಳ್ಳಬೇಕು."

"ಈ ಮಾತನ್ನು ನಾನು ಅವನಿಗೆ ಹೇಳಲಿಲ್ಲವೆಂದುಕೊಂಡಿರಾ?"

"ಅಯ್ಯೋ, ನಾನು ಕಾಣೆನೇ, ನೀನು ಎಡಬಿಡದೆ ಅವನ ಜೊತೆಯಲ್ಲೇ ಇರುತ್ತಿದ್ದೆಯಲ್ಲ."

"ಇರುವುದೊಂದೇ ಅಲ್ಲ, ನಾನು ಎದುರಿಗೆ ಇಲ್ಲದೆ ಇದ್ದಾಗ ಅವನ ಮೇಲೆ ಒಂದು ಕಣ್ಣಿಟ್ಟಿರಲಿ ಅಂತ ಪಾಠದ ನೆಪದಲ್ಲಿ ರಾಜಣ್ಣನನ್ನು ಕಾವಲು ಹಾಕಿದ್ದೆ."

"ರಾಜಣ್ಣ ಯಾರು?"

"ಆ ನರಸೀಪುರದ ಹುಡುಗ, ಸಂಗೀತ ಕಲಿಯುತ್ತಿಲ್ಲವೆ?"

"ಅದೇ ಆ ಮೀನಾಕ್ಷಿಯ ತಮ್ಮ ಅಂತಾರಲ್ಲ?"

"ಹೌದು ಅವನೇ. ಹುಡುಗ ಬಲು ಚೂಟಿ. ಮಧುಸೂದನನ ಯೋಗ ಕ್ಷೇಮ ನೋಡಿಕೊಳ್ಳಲೆಂದೇ ಅವನನ್ನು ಗೊತ್ತುಮಾಡಿದ್ದೆ."

"ಅವನನ್ನು ಒಂದು ಮಾತು ಕೇಳಿದ್ದರೆ?"

"ಅವನು ಊರಿನಲ್ಲಿಲ್ಲ. ನರಸೀಪುರಕ್ಕೆ ಹೋಗಿದಾನಂತೆ."

"ಹಾಗಾದರೆ ಯಾರಿಂದ ನಮಗೆ ನೇಟಾಗಿ ವರ್ತಮಾನ ತಿಳಿಯ ಬೇಕು?"

"ನಾನೂ ಅದನ್ನೇ ಯೋಚನೆ ಮಾಡುತ್ತಿದೇನೆ. ಎಲ್ಲಿಗೆ ಹೋದ ನೆನ್ನುವುದೇ ಗೊತ್ತಾಗುತ್ತಿಲ್ಲ. ಎಷ್ಟು ಬೇಡವೆಂದರೂ ಮನಸ್ಸು ಕೆಟ್ಟ ಯೋಚನೆಯ ಕಡೆಗೇ ತಿರಗುತ್ತೆ. ನನಗೆ ನಿನ್ನೆಯಿಂದ ಮನಸ್ಸಿಗೆ ಸಮಾಧಾನವೇ ಇಲ್ಲ"

"ಹೌದು, ನಿನ್ನ ಚಿಂತೆಯನ್ನು ನಾನು ಬಲ್ಲೆ"

ಎಂದು ನುಡಿದು ದಾಸರು ತಾವೇ ಚಿಂತಾಕ್ರಾಂತರಾಗಿ ನಿಂತರು. ಸುಬ್ಬ ಕೃಷ್ಣನ ಮನಸ್ಸನ್ನು ಹೊಕ್ಕಂತೆಯೇ ಅವರ ಮನಸ್ಸನ್ನೂ ಯಾವುದೋ ಕೆಟ್ಟ ಯೋಚನೆಯ ಹುಳ ಹೊಕ್ಕು ಕೊರೆಯುತ್ತಿತ್ತು. ಅದಕ್ಕೆ ಆಸ್ಪದ ಕೊಡ ದಿರಲು ಅವರು ಮಾಡುತ್ತಿದ್ದ ಪ್ರಯತ್ನ ಸಾಗದೆ ಮನಸ್ಸು ಸುತ್ತಿಕೊಂಡು ಸುತ್ತಿ

ಕೊಂಡು ಅಲ್ಲಿಗೇ ಹೋಗುತ್ತಿತ್ತು. ವೆಂಕಮ್ಮನವರು ಹೋದ ಮೇಲೆ ಮಧುಸೂದನನ ಯೋಗಕ್ಷೇಮದ ಯೋಚನೆ ದಾಸರ ತಲೆ ಹೊಕ್ಕುಬಿಟ್ಟಿತ್ತು. ಹುಡುಗ ಅನಾಥನಾದ, ಒಬ್ಬೊಂಟಿಗನಾದ. ತಾಯಿ ಇದ್ದಾಗಲೇ ಅವನಿಗೆ ಒಂದು ಮದುವೆಯ ಶಾಸ್ತ್ರ ಎನ್ನುವುದು ಆಗಿಹೋಗಿದ್ದಿದ್ದರೆ ಅವನ ಜೀವನ ಇಷ್ಟು ಬರಿದಾಗಿ ಕಾಣುತ್ತಿರಲಿಲ್ಲ. ಮನೆಯಲ್ಲಿ ದೀಪ ಹೊತ್ತಿಸಿಕೊಂಡು ಬಾಳನ್ನು ಬೆಳಗಿಸುವ ಹೆಣ್ಣು ಎನ್ನುವ ಒಂದು ಪದಾರ್ಥವಾದರೂ ಇರುತ್ತಿತ್ತು; ನೊಂದ ಜೀವಕ್ಕೆ ಎಷ್ಟೋ ಆಸರೆಯಾಗುತ್ತಿತ್ತು. ಆದರೆ ಯಾವ ದುರ್ದೈವದಿಂದಲೋ ವೆಂಕಮ್ಮನವರು ತಮ್ಮ ಜೀವಿತ ಕಾಲದಲ್ಲಿ ಸೊಸೆಯನ್ನು ಕಾಣುವ ಭಾಗ್ಯ ಕೇಳಿಕೊಂಡು ಬಂದಿರಲಿಲ್ಲ. ಆ ಪ್ರಾಣಿಗೆ ಆ ಕೊರಗೂ ಒಂದು ಹತ್ತಿತ್ತು. 'ದಾಸರೇ ನೀವಾದರೂ ಒಂದು ಮಾತು ಹೇಳಿ ನೋಡಿ. ಸುಬ್ಬಕೃಷ್ಣ ನೀನಾದರೂ ಹೇಳಪ್ಪ' ಎಂದು ಅವರು ಎಷ್ಟು ಸಲ ಗೋಗರೆದಿರಲಿಲ್ಲ? ಆದರೆ ಆ ಪುಣ್ಯಾತ್ಮನಿಗೆ ಯಾವ ಹೆಣ್ಣೂ ಬೇಡವಾಗಿತ್ತು. ಅವನ ಮನಸ್ಸಿನಲ್ಲಿ ಏನಿತ್ತೋ, ಏಕೆ ಹಾಗೆ ಬಂದ ಹೆಣ್ಣುಗಳನ್ನೆಲ್ಲ ಬೇಡ ಎನ್ನುತ್ತಿದ್ದನೋ ಯಾರಿಗೂ ಅರ್ಥವಾಗುತ್ತಿರಲಿಲ್ಲ. ಈ ತಂಚಾವಂಚದಲ್ಲಿಯೇ ಕಾಲ ಕಳೆದು ಹೋಗಿತ್ತು. ವೆಂಕಮ್ಮನವರೂ ಕಣ್ಣು ಮುಚ್ಚಿಕೊಂಡುಬಿಟ್ಟರು. ಯಾವ ಪರಿಸ್ಥಿತಿಗೆ ಅವನು ಸಿಕ್ಕಬಾರದೆಂದು ತಾವು ಎಣಿಸಿ ಮೊದಲಿನಿಂದ ಹೇಳುತ್ತ ಬಂದಿದ್ದರೋ ಅದೇ ಪರಿಸ್ಥಿತಿ ಅನಿವಾರ್ಯವಾಗಿ ಬಂದೊದಗಿತ್ತು.

ಯೋಚನೆಯಲ್ಲಿ ದಾಸರು ದೀರ್ಘವಾಗಿ ಉಸಿರ್ಗರೆದರು. ತಮ್ಮ ಕೈಯಲ್ಲಾಗುವುದನ್ನೆಲ್ಲ ಅವರು ನಿರ್ವಂಚನೆಯಿಂದ ಮಾಡಿದ್ದರು. ನಿತ್ಯ ಯಾತ್ರೆಯ ಬಡಬ್ರಾಹ್ಮಣ ಇನ್ನೇನು ತಾನೇ ಮಾಡುವುದು ಸಾಧ್ಯವಿತ್ತು? ದುಡ್ಡು ಕಾಸಿನಲ್ಲಾಗದೆ ಇದ್ದದ್ದನ್ನು ದೇಹಶ್ರಮದಿಂದ ಮಾಡಿದ್ದರು. ರಮಣಾಚಾರ್ಯರು ಮಾಡಿದ್ದ ಉಪಕಾರವನ್ನು ಅವರು ಮರೆತಿರಲಿಲ್ಲ. ಅದು ಮರೆಯುವಂಥ ಉಪಕಾರವೆ? ಅಂಥ ಸೌಜನ್ಯವನ್ನು ಸುಲಭವಾಗಿ ಕಾಣಬಹುದೆ? ಅವರ ವಿಶ್ವಾಸದ ಋಣ ಒಂದು ಜನ್ಮಕ್ಕೆ ತೀರೀತೆ?

ಆಚಾರ್ಯರ ನೆನಪಾಗಿ ದಾಸರ ಕುತ್ತಿಗೆಯ ಸೆಲೆ ಬಿಗಿದು ಬಂದಿತು. ಬಡತನದ್ದಾದರೂ ಅವರ ಸಂಸಾರ ಎಷ್ಟು ಒಪ್ಪವಾಗಿತ್ತು. ಆ ಸಂಸಾರದಲ್ಲಿ ಆತನಿಗೆ ಎಷ್ಟು ಅಕ್ಕರೆಯಿತ್ತು. ವಯಸ್ಸಾದ ಮೇಲೆ ಮದುವೆಯಾದರೂ, ಕಾಲ

ಮೀರಿದ ಮೇಲೆ ಕಣ್ಣಬೆಳಕು ಎನ್ನುವಂತೆ ಒಂದು ಮಗುವನ್ನು ಕಂಡಿದ್ದರೂ ಅವರು ಎಷ್ಟು ಸಂಭ್ರಮಪಡುತ್ತಿದ್ದರು. ಹೇಗಾದರೂ ಮಗನನ್ನು ಮುಂದಕ್ಕೆ ತರಬೇಕು, ತಮ್ಮ ಶಕ್ತಿ ಕುಂಠಿತವಾಗುವ ವೇಳೆಗೆ ಮಗನನ್ನು ಒಂದು ಊರೆ ಗೋಲನ್ನಾಗಿ ಮಾಡಿಕೊಳ್ಳಬೇಕು ಎಂದು ಬಯಸಿ ಕಲ್ಪನೆಯ ಗೋಪುರ ಗಳನ್ನೇ ಕಟ್ಟುತ್ತಿದ್ದರಲ್ಲವೆ? ಆದರೆ ಆ ಗೋಪುರ ಇದ್ದಕ್ಕಿದ್ದ ಹಾಗೆ ಕಳಚಿ ಬಿದ್ದುಹೋಗಿತ್ತು. ನಗುನಗುತ್ತಲೇ ಇದ್ದ ಮನುಷ್ಯ ನಗುನಗುತ್ತಲೇ ನಡೆದು ಬಿಟ್ಟಿದ್ದರು. ವಿಧಿ ಆ ಸಂಸಾರವನ್ನು ಅಂಥ ಕಗ್ಗತ್ತಲ ಕಮರಿಗೆ ತಳ್ಳುವುದೆನ್ನುವ ಕಲ್ಪನೆಯಾದರೂ ಯಾರಿಗಿತ್ತು?

ಆ ಬಳಿಕ ಪ್ರಾಪ್ತವಾದ ಕಷ್ಟಗಳೋ. ವೆಂಕಮ್ಮನವರು ಎಳೆಯ ಹುಡುಗನನ್ನು ಕಟ್ಟಿಕೊಂಡು ಪಟ್ಟ ಪಾಡುಗಳೋ. ಕಂಡ ಕಂಡವರ ಕೂಳಿಗೆ ಕೈಯೊಡ್ಡಿ ಆಳುದ್ದದ ದೇಹವನ್ನು ಗೇಣುದ್ದ ಮಾಡಿಕೊಂಡು ಅವರು ಪಟ್ಟ ಪರಿ ತಾಪಗಳೋ. ಆ ಮಹಾತಾಯಿ ಅನುಭವಿಸಿದ ಕಷ್ಟ ಆಕೆಗಲ್ಲದೆ ಇನ್ನಾರಿಗೆ ಗೊತ್ತಿತ್ತು? ಕಷ್ಟವೆಲ್ಲವನ್ನೂ ಅನುಭವಿಸಿಯೇ ತೀರಿದ ಜೀವ ಸುಖದಲ್ಲಿ ಯಾದರೂ ಉಬ್ಬಿತೆ? ಮಗ ಮುಂದಕ್ಕೆ ಬಂದಾಗಲೂ, ದೊಡ್ಡ ಸಂಗೀತಗಾರ ನೆನ್ನಿಸಿಕೊಂಡಾಗಲೂ ವೆಂಕಮ್ಮನವರು ಮೊದಲಿನ ವೆಂಕಮ್ಮನವರೇ. ಯಾವ ಕಷ್ಟ ಸುಖವನ್ನಾದರೂ ತಮ್ಮಲ್ಲಿ ಹೇಳಿಕೊಳ್ಳಬೇಕು, ಯಾವುದಕ್ಕಾದರೂ ತಮ್ಮ ಸಲಹೆ ಕೇಳಬೇಕು, ಮನೆಯಲ್ಲಿ ಏನುಮಾಡಲಿ ತಮ್ಮನ್ನು ಕರೆಯ ಬೇಕು. ಜೀವನದಲ್ಲಿ ಒಡಹುಟ್ಟನ್ನು ಕಂಡರಿಯದ ತಮಗೆ ವೆಂಕಮ್ಮನವರನ್ನು ಕಂಡರೆ ಬೆನ್ನಲ್ಲಿ ಬಿದ್ದ ತಂಗಿಯಂತೆಯೇ ಭಾಸವಾಗುತ್ತಿತ್ತು. ಅವರ ಸಾವಿನಿಂದ ತಮ್ಮ ಜೀವನದಲ್ಲಿ ಏನೋ ಬರಿದಾದ ಹಾಗೆ ಆಗಿದ್ದುದರಲ್ಲಿ ಅಚ್ಚರಿಯೇನು?

ತಮಗೇ ಹೀಗಾದ ಮೇಲೆ ಇ ಅಂಥ ಜೀವದ ಒಡಲಿನಲ್ಲಿ ಹುಟ್ಟಿದ ಆ ಹುಡುಗನಿಗೆ ಹೇಗಾಗಿರಬೇಕು? ಅವರ ಸಾವನ್ನು ಅವನು ಅಷ್ಟು ಮನಸ್ಸಿಗೆ ಹಚ್ಚಿಕೊಳ್ಳಬಾರದಾಗಿತ್ತು, ನಿಜ. ಆದರೆ ಅಂಥ ತಾಯಿಯನ್ನು ಈ ಜನ್ಮದಲ್ಲಿ ಕಾಣುವುದು ಸಾಧ್ಯವೆ? ಆ ಮಮತೆ, ಆ ಸೌಜನ್ಯ, ಆ ಅನುನಯ ಬೇರೆಡೆ ದೊರೆಯುವುದು ಸಾಧ್ಯವೆ? ಮಧುಸೂದನ ತಾಯಿ ಸತ್ತ ದುಃಖದಲ್ಲಿ ಕಂಗಾ ಲಾದನೆನ್ನುವುದು ಹೆಚ್ಚಲ್ಲ. ಆದರೆ ಆ ಚಿಂತೆಯಲ್ಲಿಯೇ ಅವನು ತನ್ನ ಜೀವಕ್ಕೆ

ಏನಾದರೂ ಅತಂತ್ರ ಮಾಡಿಕೊಂಡುಬಿಟ್ಟಿದ್ದರೆ ಗತಿಯೇನು? ವಂಶದ ಕುಡಿಯಾಗಿ ಒಬ್ಬನಾದರೂ ತಲೆ ಎತ್ತಿಕೊಳ್ಳಲೆನ್ನುತ್ತಿರುವಾಗ ಇದೇನು ಬಿದ್ದಿತು ಪೆಟ್ಟು?

ಮನಸ್ಸಿನಲ್ಲಿ ಮೊರೆಯುತ್ತಿದ್ದ ಚಿಂತೆಗೆ ನುಡಿಕೊಡಲಾರದೆ ದಾಸರು ಏನೋ ಮೂಕ ಸಂಕಟಪಡುವವರಂತೆ ಸುಮ್ಮನೆ ನಿಂತುಕೊಂಡರು.

ಸುಬ್ಬಕೃಷ್ಣನ ಮನಸ್ಸೂ ಹಾಗೆಯೇ ಚಿಂತಾಮಗ್ನವಾಗಿತ್ತು. ದಾಸರ ಮನಸ್ಸು ಒಂದು ಬಗೆಯಲ್ಲಿ ಯೋಚಿಸುತ್ತಿದ್ದರೆ ಸುಬ್ಬಕೃಷ್ಣನ ಮನಸ್ಸು ಬೇರೊಂದು ಜಾಡು ಹಿಡಿದಿತ್ತು. ಅದೂ ಸ್ವಾಭಾವಿಕವೇ. ಚಿಕ್ಕಂದಿನಿಂದಲೂ ಮಧುಸೂದನನ ಒಡನಾಡಿಯಾಗಿ ಬೆಳೆದ ಅವನಿಗೆ ಅವನು ಎಂದರೆ ಮನಸ್ಸು ಏನೋ ಒಂದು ರೀತಿ ಒದ್ದುಕೊಳ್ಳುತ್ತಿತ್ತು. ಅವರಿಬ್ಬರ ಸ್ನೇಹದಲ್ಲಿ ಬಣ್ಣಿಸಲಾಗದ ಏನೋ ಒಂದು ವಿಶೇಷ ಅಡಗಿತ್ತು. ಅವರ ಮನಸ್ಸು ಹಾಲು ಸಕ್ಕರೆಯಂತೆ ಕಲೆತಿತ್ತು. ಆ ಅಭಿಲಾಷೆಗಳು ಒಂದೇ ಆಗಿದ್ದವು. ಆಟಪಾಟಗಳಲ್ಲಿ ಇಬ್ಬರದೇ ಒಂದು ಜೋಡಿ. ಆ ಸಖ್ಯ ಅನ್ಯೇಚ್ಛಿಕವಾಗಿ ಬೆಳೆದಿತ್ತು. ಒಬ್ಬರ ಸುಖದುಃಖಗಳಲ್ಲಿ ಇನ್ನೊಬ್ಬರು ತಮಗರಿಯದೆಯೆ ಭಾಗಿಯಾಗುತ್ತಿದ್ದರು. ಆ ಸಖ್ಯ ಎಷ್ಟು ಜನ ಜೊತೆಹುಡುಗರ ಕರುಬಿಗೆ ಕಾರಣವಾಗಿತ್ತೋ.

ಮಧುಸೂದನನ ತಂದೆ ಸತ್ತು ಅವನು ನಾನಾ ವಿಧವಾದ ಕಷ್ಟಗಳಿಗೆ ಗುರಿಯಾಗಿ ಓದು ನಿಲ್ಲಿಸಿದಾಗ ಸುಬ್ಬಕೃಷ್ಣನಿಗೆ ಹಿಡಿಸಲಾರದ ದುಃಖವಾಗಿತ್ತು. ಗೆಳೆಯನನ್ನು ಬಿಟ್ಟು ಕಾಲೇಜಿನಲ್ಲಿ ತಾನೊಬ್ಬನೇ ಓದುವುದು ಅವನ ಮನಸ್ಸಿಗೆ ಹಿತವಾಗಿರಲಿಲ್ಲ. ಆದರೆ ಮಧುಸೂದನ ಜೀವನದಲ್ಲಿ ಯಾವುದೋ ಒಂದು ಹೊಸಹಾದಿ ಕಂಡುಕೊಂಡನೆಂದು ಅರಿವಾದ ಮೇಲೆ ಒಂದು ಬಗೆಯಲ್ಲಿ ಸಂತೋಷವೇ ಆಗಿತ್ತು. ಸಂಗೀತದ ಹುಚ್ಚಿಗೆ ಸಿಕ್ಕಿ ಮಧುಸೂದನ ಒದ್ದಾಡುತ್ತಿದ್ದ ಕಾಲದಲ್ಲಿ, ವೆಂಕಮ್ಮನವರು ಮಗನನ್ನು ಕಟ್ಟಿಕೊಂಡು ಬದುಕಿನ ಕಷ್ಟಕೋಟಲೆಗಳನ್ನು ಎದುರಿಸಿ ಹೋರಾಡುತ್ತಿದ್ದ ವೇಳೆಗಳಲ್ಲಿ ಸುಬ್ಬಕೃಷ್ಣ ಮಾನಸಿಕವಾಗಿ ಅವರಿಗೆ ಬೆಂಬಲಿಗನಾಗಿದ್ದ. ವಿದ್ಯಾರ್ಥಿದಶೆಯಲ್ಲಿದ್ದ ತಾನು ಯಾವ ಸಹಾಯವನ್ನೂ ಮಾಡುವ ಸ್ಥಿತಿಯಲ್ಲಿಲ್ಲದಿದ್ದರೂ ಮಧುಸೂದನ ಹತಾಶನಾದಾಗ ಧೈರ್ಯಕೊಡುತ್ತಾ ಅವನಿಗೆ ಬೆಂಗಾವಲಾಗಿದ್ದ. ತ್ರಿಕರಣಪೂರ್ವಕ

ವಾದ ಮೈತ್ರಿ ಏನಾದರೂ ಆಸರೆ ನೀಡಬಲ್ಲುದಾಗಿದ್ದರೆ ಅಂಥ ಆಸರೆಯನ್ನು ಅವನು ನೀಡಿದ್ದ.

ಆ ಕ್ಲೇಶದ ಕಾಲವೂ ಕಳೆದಿತ್ತು. ಹಿಡಿದ ಪಟ್ಟನ್ನು ಬಿಡದೆ ಮಧು ಸೂದನ ಸಂಗೀತವನ್ನು ಕಲಿತು ಮುಂದಕ್ಕೆ ಬರುತ್ತಿರುವುದನ್ನು ಕಂಡು ಸುಬ್ಬ ಕೃಷ್ಣನಿಗೆ ಹೆಮ್ಮೆ ಮೂಡಿತ್ತು. ಗೆಳೆಯನಲ್ಲಿ ಉತ್ತಮ ಕಲಾವಿದನ ಲಕ್ಷಣ ಗಳನ್ನು ಕಂಡು ಅವನಿಗೆ ಹಲವು ವಿಧದಲ್ಲಿ ಉತ್ತೇಜನವಿತ್ತಿದ್ದ. ಹತ್ತಾರು ಕಡೆ ಸಂಗೀತ ಕಚೇರಿಗಳಾಗಿ ಮಧುಸೂದನ ಕೀರ್ತಿಯ ಮೆಟ್ಟಿಲನ್ನು ಒಂದೊಂದಾಗಿ ಹತ್ತುತ್ತಿದ್ದುದನ್ನು ನೋಡಿ ಸುಬ್ಬಕೃಷ್ಣನಿಗೆ ಆ ಕೀರ್ತಿ ತನಗೇ ಬಂದಷ್ಟು ಉಲ್ಲಾಸವಾಗಿತ್ತು.

ಈ ಮಧ್ಯೆ ಏನೋ ಒಂದು ಪ್ರಸಂಗ ನಡೆದಿತ್ತು. ಮಧುಸೂದನನ ಮದರಾಸ್ ಪ್ರವಾಸದಿಂದ ಒಂದು ಪ್ರಣಯ ಪ್ರಸಂಗ ಬೆಳೆಯುತ್ತಿತ್ತು. ಮಧು ಸೂದನ ಅದನ್ನು ಮೊದಲು ಮೊದಲು ತೋರಗೊಡದೆ ಸಂಕೋಚದಿಂದಲೇ ಮುಚ್ಚಿಟ್ಟುಕೊಂಡಿದ್ದ. ಆದರೆ ಕೈಯಲ್ಲಿ ಮುಚ್ಚಿ ಹಿಡಿದ ಪರಿಮಳ ಅಲ್ಲಿ ನಿಲ್ಲದೆ ನೈಸರ್ಗಿಕವಾಗಿ ಹೊರಬರುವಂತೆ ಅದು ತಾನಾಗಿ ಮೈದೋರಿತ್ತು. ಅವನ ಪ್ರಣಯಕ್ಕೆ ಪಾತ್ರಳಾದ ಹುಡುಗಿಯನ್ನು ಕಣ್ಣಾರೆ ಕಂಡು ಅವರ ಮನೆತನದ ಹಿರಿಮೆಯನ್ನರಿತ ಮೇಲೆ ಅದು ಮಧುಸೂದನನ ಸದಭಿರುಚಿಗೆ ಸಾಕ್ಷಿಯೆಂದು ಸಂತೋಷವೇ ಆಗಿತ್ತು. ಬೇರೆ ಹೆಣ್ಣುಗಳನ್ನು ಅವನು ಬೇಡವೆನ್ನುತ್ತಿದ್ದ ರೀತಿಯಲ್ಲಿ ಅವನ ಮನಸ್ಸಿನ ಜಾಡನ್ನು ತಿಳಿದು ಕೊಳ್ಳಬಹುದಾಗಿತ್ತು.

ಆದರೆ ಮಧುಸೂದನನದು ತುಂಬ ಸಂಕೋಚದ ಸ್ವಭಾವ. ತನ್ನಂಥ ಆಪ್ತಮಿತ್ರನಲ್ಲೂ ಕೂಡ ಎಷ್ಟೋ ಃ 'ಯಗಳನ್ನು ಚರ್ಚಿಸಲು ಅವನು ಹಿಂತೆಗೆ ಯುತ್ತಿದ್ದ. ಅವನು ಮಾತಿನಲ್ಲಿ ಹೇಳದೆ ಇದ್ದದ್ದನ್ನು ಅವನ ಮೌನ ತಿಳಿಸುತ್ತಿತ್ತು. ಅವನ ಪ್ರಣಯ ಪ್ರಸಂಗದಲ್ಲಿ ಏನೋ ಸಂದಿಗ್ಧ ಒದಗಿದ್ದಿರಬಹುದು. ಅವನ ಮನಸ್ಸಿನ ಸ್ಥಿತಿ ಹೇಗಿತ್ತೋ ಅವನಿಗೇ ಗೊತ್ತು. ಅವನು ಯಾವುದನ್ನೂ ಬಾಯಿಬಿಟ್ಟು ಹೇಳುತ್ತಿರಲಿಲ್ಲ.

ತಾಯಿ ಸತ್ತಾಗ ಮೊದಲು ಅವರ ದೇಹದ ಮೇಲೆ ಬಿದ್ದು ಅತ್ತು ಗೋಳಾಡಿದವನು ಆಮೇಲೆ ರಾವುಬಡಿದವನಂತೆ ಸುಮ್ಮನೆ ಕುಳಿತುಬಿಟ್ಟಿದ್ದ.

ರೋದನದ ಸ್ಥಿತಿ ಮೀರಿದ ಆ ಮೂಕಶೋಕವನ್ನು ಕಂಡು ಎಲ್ಲರಿಗೂ ದುಃಖ ವಾಗಿತ್ತು. ಅಪರ ಕರ್ಮಗಳೆಲ್ಲ ಮುಗಿದು ಹೋದ ಮೇಲೆ ಅವನ ಸ್ಥಿತಿ ಇನ್ನೂ ವಿಚಿತ್ರವಾಗಿತ್ತು. ಹೊತ್ತು ಹೊತ್ತಿಗೆ ಅನ್ನ ನೀರು ತೆಗೆದುಕೊಳ್ಳುವುದೇ ಕಷ್ಟ ವಾಗಿತ್ತು. ಬರಿದಾದ ಮನೆಯನ್ನು ನೋಡಿದಷ್ಟೂ ಅವನ ದುಃಖ ಹೆಚ್ಚುತ್ತಿತ್ತು. ಬೇರೆಲ್ಲಿ ಕರೆದರೂ ಬರಲೊಲ್ಲ. ಅವನನ್ನು ಸಂತೈಸುವ ಪರಿಯೇ ತಿಳಿಯದೆ ಪೇಚಾಟವಾಗಿತ್ತು.

ಮನಸ್ಸಿನ ಇಂಥ ಸ್ಥಿತಿಯಲ್ಲಿ ಅವನು ಇದ್ದಕ್ಕಿದ್ದ ಹಾಗೆ ಕಣ್ಮರೆಯಾಗಿ ರುವನೆನ್ನುವ ಕಲ್ಪನೆ ಭಯಜನಕವಾಗಿತ್ತು. ಚಿಂತೆಯ ಉದ್ವೇಗದಲ್ಲಿ ಮಧು ಸೂದನ ತನ್ನ ಜೀವಕ್ಕೇನಾದರೂ ಮಾಡಿಕೊಂಡುಬಿಟ್ಟಿರಬಹುದೇ ಎನ್ನುವ ಕೆಟ್ಟ ಯೋಚನೆಯೂ ತಲೆಯಲ್ಲಿ ಸುಳಿಯದಿರಲಿಲ್ಲ. ಅಘಂಗಳವನ್ನು ಚಿಂತಿಸಬಾರ ದೆಂದು ಬುದ್ಧಿ ವಿವೇಕ ಹೇಳುತ್ತಿದ್ದರೂ ಮನಸ್ಸು ಅದನ್ನೇ ಯೋಚಿಸುತ್ತಿತ್ತು.

ಜೀವನದ ಸಂದಿಗ್ಧ ಸಮಯದಲ್ಲಿ ಬದುಕಿನ ಸಮಗ್ರ ಚಿತ್ರವೇ ಕಣ್ಣು ಮುಂದೆ ಸುಳಿಯುವಂತೆ ಹಿಂದಿನ ನೆನಪುಗಳೆಲ್ಲ ಸುಬ್ಬಕೃಷ್ಣನ ಮನಸ್ಸಿನ ಮುಂದೆ ಹಾದುಹೋದವು. ಯೋಚನಾ ಪ್ರವಾಹದಲ್ಲಿ ಸಿಕ್ಕಿ ಅವನು ಮಾತು ಮರೆತು ನಿಂತ.

"ಏನಪ್ಪಾ, ಸುಮ್ಮನೆ ನಿಂತುಬಿಟ್ಟೆ?"

ಎಂದು ದಾಸರು ಕೇಳಿದಾಗಲೇ ಎಚ್ಚರ. ಸುಬ್ಬಕೃಷ್ಣ ತಟಕ್ಕನೆ ತಲೆ ಯೆತ್ತಿ ಅವರ ಮುಖ ನೋಡಿದ. ಅವರ ಕಣ್ಣೂ ಮಂಕಾಗಿತ್ತು. ಮಧು ಸೂದನನ ಬಗೆಗೆ ದಾಸರಿಗಿದ್ದ ವಾತ್ಸಲ್ಯ ಸುಬ್ಬಕೃಷ್ಣನಿಗೆ ತಿಳಿಯದ ವಿಷಯ ವಾಗಿರಲಿಲ್ಲ.

"ಏನು ದಾಸರೇ, ಏನು ಮಾಡೋಣ ಹೇಳಿ?"

ಎಂದಷ್ಟೇ ನುಡಿದ. ಆ ಪ್ರಶ್ನೆಗೆ ಉತ್ತರ ಕೊಡುವುದು ದಾಸರಿಗೆ ಅಷ್ಟು ಸುಲಭವಾಗಿರಲಿಲ್ಲ. ಅದು ಅವನಿಗೂ ಗೊತ್ತಿತ್ತು. ತನ್ನ, ಅವರ ಮನಸ್ಸಿನಲ್ಲಿ ಮೊರೆಯುತ್ತಿದ್ದ ಭಾವನೆಗೆ ಅವನು ನುಡಿಕೊಟ್ಟಿದ್ದ, ಅಷ್ಟೆ.

ದಾಸರಿಗೆ ಹಾಕಿದ ಪ್ರಶ್ನೆಯೇ ನಾಲ್ಕಾರು ಸಲ ಅವನ ಮನಸ್ಸಿನಲ್ಲಿ ಪುನರಾವರ್ತವಾಯಿತು. ಹೌದು, ಈಗೇನು ಮಾಡುವುದು? ಅದೇ ಪ್ರಶ್ನೆ.

೩

" ನಿನ್ನನ್ನು ಕಂಡರೆ ನನಗೆಷ್ಟು ಆಸೆ, ರೋಷನ್ "

ಎಂದು ಪಕ್ಕದಲ್ಲಿ ಪವಡಿಸಿದ್ದ ಹೆಣ್ಣಿನ ಮುಖವನ್ನು ಅಕ್ಕರೆಯಿಂದ ನೋಡುತ್ತ ಮಧುಸೂದನ ನುಡಿದ.

" ನನ್ನಲ್ಲಿ ಅಷ್ಟು ರುಚಿಯಿದೆಯೆ ?"

ಎಂದು ಅವಳು ಕುತೂಹಲದಿಂದ ಕೇಳಿದಳು. ನಗು ಅವಳ ಮೈಯನ್ನೆಲ್ಲ ವ್ಯಾಪಿಸಿತ್ತು.

" ಇಂಥ ಜೇನು ಕಂಡರೆ ಯಾರಿಗೆ ಆಸೆಯಾಗುವುದಿಲ್ಲ, ಹೇಳು ?"

" ಅದೇ ಅತಿಯಾಗಿ ತಿಂದರೆ ಅರುಚಿ ಹತ್ತಬಹುದು."

" ಇದು ಅಂಥ ಜೇನಲ್ಲ, ತಿಂದಷ್ಟೂ ರುಚಿ ಹೆಚ್ಚಿಸುವ ಜೇನು."

" ನೀವು ಮಾತಿನಲ್ಲೂ ಇಷ್ಟು ಜಾಣರೆಂದು ತಿಳಿದಿರಲಿಲ್ಲ."

" ಇನ್ನೇತರಲ್ಲಿ ಜಾಣನೆಂದು ತಿಳಿದಿದ್ದೆ ?"

ರೋಷನ್ ನಾಚಿಕೆಯಿಂದೆನ್ನುವಂತೆ ಮುಖ ಮುಚ್ಚಿಕೊಂಡಳು.

" ಏಕೆ, ನಿನಗೆ ನಾಚಿಕೆಯಾಯಿತೆ ?"

ಎಂದು ಮೆಲ್ಲನೆ ಅವಳ ಗಲ್ಲವನ್ನು ಹಿಡಿದು ತನ್ನೆಡೆಗೆ ತಿರುಗಿಸಿಕೊಂಡು ಕೇಳಿದ.

" ನೀವು ಏನೇನೋ ಕೇಳುವಿರಿ."

" ಈ ನಾಚಿಕೆ ಅಂದೆಲ್ಲಿ ಹೋಗಿತ್ತು ?"

" ಎಂದು ?"

" ಅಂದು, ನಾನು ಮೊದಲು ನಿಮ್ಮ ಮನೆಗೆ ಬಂದ ದಿವಸ. ನೀನು ನನಗೆ ಮದ್ಯ ಕುಡಿಸಲು ಮೇಲೆ ಬಿದ್ದು ಬಂದ ದಿವಸ."

ರೋಷನ್ ಅಂದಿನ ಸ್ಮರಣೆ ಬಂದು ಸಣ್ಣಗೆ ನಕ್ಕಳು.

" ಅಂದು ನನ್ನ ಬುದ್ಧಿಯೇ ನನ್ನ ವಶದಲ್ಲಿರಲಿಲ್ಲ."

" ಆಮೇಲೆ, ಕಾಗದ ಬರೆದಾಗ ಇತ್ತೆ ?"

" ಇತ್ತು."

" ಇದ್ದೂ ನನಗೆ ಹಾಗೆ ಬರೆದೆಯಾ ?"

" ಹೌದು."

" ಏತಕ್ಕೆ ಹಾಗೆ ಬರೆದೆ ?"

" ನಿಮ್ಮನ್ನು ಬಿಟ್ಟಿರಲಾರದೆ ಬರೆದೆ"

" ನನ್ನನ್ನು ಬಿಟ್ಟಿರಲು ನಿನಗೆ ಅಷ್ಟು ಕಷ್ಟವಾಯಿತೆ ?"

" ಹೌದು, ನಿಮ್ಮಲ್ಲಿ ಮನಸ್ಸಾಯಿತು."

" ಹೀಗೆ ಇನ್ನಾರಲ್ಲೂ ಮನಸ್ಸಾಗಿರಲಿಲ್ಲವೆ ?"

" ಇಲ್ಲ."

" ನಿನ್ನನ್ನು ಯಾರಾದರೂ ಎಂದಾದರೂ ಬಯಸಿದ್ದರೆ ?"

" ಅಮ್ಮನ ಪರಿವಾರದಲ್ಲಿ ಬಯಸುವ ಜನಕ್ಕೇನು ಕಡಮೆ ಹೇಳಿ ?"

" ಹಾಗೆ ಬಯಸಿದವರಲ್ಲಿ ಯಾರೊಡನಾದರೂ ನಿನಗೆ ಸ್ನೇಹ ಬೆಳೆದಿತ್ತೆ ?"

" ಒಬ್ಬರಿಬ್ಬರಲ್ಲಿ. ಅಮ್ಮನ ಬಲವಂತಕ್ಕಾಗಿ."

" ಯಾರವರು ?"

" ಅವರ ವಿಚಾರ ಈಗೇಕೆ, ಬಿಡಿ."

" ಇರಲಿ, ಹೇಳು."

" ಒಬ್ಬನು ಇಂದೂರಿನವನು. ಇನ್ನೊಬ್ಬ ಇಲ್ಲಿಯವನೇ."

" ನಿನ್ನ ಕೈಹಿಡಿಯಲು ಕಾದಿರುವ ಹಲವರ ಸ್ನೇಹ ಹಸ್ತವನ್ನು ನಿರಾಕರಿಸುತ್ತ ಬಂದಿರುವೆಯೆಂದು ನನಗೇಕೆ ಸುಳ್ಳು ಬರೆದೆ ?"

" ಅದು ಸುಳ್ಳಲ್ಲ."

" ಮತ್ತೇನು, ನಿಜವೆ ?"

" ನಾನಾಗಿ ಯಾರನ್ನೂ ಬಯಸಲಿಲ್ಲ."

" ನೀನಾಗಿ ಯಾರನ್ನೂ ಬಯಸಲಿಲ್ಲ. ಆದರೆ ತಾವಾಗಿ ನಿನ್ನನ್ನು ಬಯಸಿ ಬಂದವರಿಗೆ ನಿನ್ನ ಮೈ ಒಪ್ಪಿಸಿದೆ, ಅಲ್ಲವೆ ?"

“ನನ್ನನ್ನು ಹಂಗಿಸಬೇಡಿ, ದೊರೆ.”

“ನೀನವರನ್ನು ಕೂಡದಿದ್ದರೆ ಏನಾಗುತ್ತಿತ್ತು?”

“ನಮ್ಮ ಪರಿಸ್ಥಿತಿ ನಿಮಗೆ ಗೊತ್ತಿಲ್ಲ. ಸುಮ್ಮನೆ ಕೋಪಿಸಿಕೊಳ್ಳುತ್ತಿರುವಿರಿ?”

ರೋಷನ್ ನಿಜವನ್ನೇ ನುಡಿದಿದ್ದಳು.

ಅನ್ವರ್‌ಬಾಯಿಯ ಕೈ ನಡೆಯುತ್ತಿದ್ದ ಕಾಲವೂ ಒಂದಿತ್ತು. ಆ ಕಾಲದಲ್ಲಿ ಅವಳನ್ನು ಹಿಡಿಯುವವರು ಇಡೀ ಮಹಾರಾಷ್ಟ್ರದಲ್ಲಿಯೇ ಯಾರೂ ಇರಲಿಲ್ಲ. ಅವಳು ಗಳಿಸಿದಷ್ಟು ಹಣವನ್ನು ಯಾವ ಸಂಗೀತ ವಿದುಷಿಯೂ ಗಳಿಸಿರಲಿಲ್ಲ. ಹೆಸರಾಂತ ಆ ವೈದುಷ್ಯದೊಡನೆ ಎಣೆಯಿಲ್ಲದ ರೂಪವೂ ಸೇರಿ ಅನ್ವರ್‌ಬಾಯಿ ರಸಿಕಜನದ ಕಣ್ಣುಗೊಂಬೆಯಾಗಿದ್ದಳು. ಅವಳ ಬೈಠಕ್ ಎಂದರೆ ಸಹಜವಾಗಿಯೇ ಜನ ಮುತ್ತಿಕೊಳ್ಳುತ್ತಿದ್ದರು. ಹಾಡಿಕೆಯನ್ನು ಮೆಚ್ಚಿದವರು ರೂಪವನ್ನೂ ಮೆಚ್ಚಿ ಹಿಂತಿರುಗುತ್ತಿದ್ದರು. ರೂಪ ಮೆಚ್ಚಿ ಹೋದ ಧನಾಢ್ಯ ಜನ ಅವಳ ಸ್ನೇಹಕ್ಕೆ ಹಾತೊರೆಯುತ್ತಿದ್ದರು.

ಆ ಸ್ನೇಹ ಎಲ್ಲರಿಗೂ ಸುಲಭಸಾಧ್ಯವಾಗಿರಲಿಲ್ಲ. ಕೇವಲ ಹಣವೇ ಅನ್ವರ್‌ಬಾಯಿಯ ಮನೆಗೆ ಪ್ರವೇಶ ದೊರಕಿಸಿಕೊಡುವ ರಹದಾರಿಯಾಗಿರಲಿಲ್ಲ. ಸಾಮಾಜಿಕ ಸ್ಥಾನಮಾನಗಳ ಮೇಲೂ ಅನ್ವರ್‌ಬಾಯಿ ಲಕ್ಷ್ಯವಿಟ್ಟಿದ್ದಳು. ಚಿಲ್ಲರೆ ಜನ ಅವಳ ಮನೆಯ ಹತ್ತಿರ ಸುಳಿದಾಡುವ ಹಾಗಿರಲಿಲ್ಲ. ಹಣವಂತರಾದರೂ ಗಣ್ಯರಾದವರಿಗೆ ಮಾತ್ರವೇ ಅವಳ ಬಳಿ ಮಾನ್ಯತೆಯಿತ್ತು.

ಹಾಗೆಂದು ಅವಳು ಗೊಡ್ಡು ಮಡಿ ಹಿಡಿದೂ ಕುಳಿತಿರಲಿಲ್ಲ. ಅವಳಿಗೂ ಭೋಗ ಬೇಕಾಗಿತ್ತು. ಬರೀ ಹಣ ಹೆಸರುಗಳಷ್ಟರಿಂದಲೇ ತೃಪ್ತಿಪಟ್ಟುಕೊಳ್ಳುವುದು ಅವಳ ಸ್ವಭಾವವಾಗಿರಲಿಲ್ಲ. ಆದರೆ ಆಪ್ತ ಜನವನ್ನು ಆರಿಸಿಕೊಳ್ಳುವಾಗ ಒಂದು ವಿತರಣೆ ತೋರಿಸುತ್ತಿದ್ದಳು. ಅವಳ ಈ ಸ್ವಭಾವದ ಪರಿಚಯ ಮುಂಬಯಿಯ ಧನಾಢ್ಯರಲ್ಲಿ ಹಲವರಿಗಿತ್ತು. ಅವಳ ಕಲಾಪ್ರೌಢಿಮೆ, ವಿಶ್ವಾಸ, ಸೌಜನ್ಯಗಳ ಸವಿ ಕಂಡಿದ್ದವರಿಗೆ ಹಲವು ವೇಳೆ ಅವಳು ನೀಡುತ್ತಿದ್ದ ದೇಹ ಸುಖಕ್ಕಿಂತ ಈ ಗುಣವೇ ಹೆಚ್ಚು ಹಿತವಾಗುತ್ತಿತ್ತು. ವೇಶ್ಯೆಯಲ್ಲದಿದ್ದರೂ ವಿಲಾಸಪ್ರಿಯೆಯಾದ ಅನ್ವರ್‌ಬಾಯಿ ತನ್ನ ವಿಶಿಷ್ಟ ಗುಣಗಳಿಂದ ರಸಿಕಜನರ ಮೆಚ್ಚಿಕೆಗೆ ಪಾತ್ರವಾಗಿದ್ದಳು.

ಆದರೆ ಆ ಕಾಲ ಕಳೆದುಹೋಗಿತ್ತು. ಅಹರ್ನಿಶಿ ಇಪ್ಪತ್ತೈದು ವರ್ಷ ಕಾಲ ಸುಖದ ಸೊಕ್ಕಿನಲ್ಲಿ ಮೆರೆದ ದೇಹ ಬಳಲಿತ್ತು. ಎಷ್ಟೇ ವಿವೇಕ ವಿತರಣೆಗಳಿದ್ದರೂ ರೋಗ ಕಾಲುಹಾಕಿಕೊಂಡಿತ್ತು. ಕಾಲ ಅವಳಿಗರಿಯದೆಯೆ ಅವಳ ಯೌವನವನ್ನು ಸೂರೆಗೊಂಡಿತ್ತು. ಅಂಕೆಯಿಲ್ಲದ ಭೋಗದಿಂದ ಹಾಡಿಕೆಯ ಸತ್ತ್ವ ಹಿಂಗಿತ್ತು. ರೂಪವೂ ಕಲೆಯೂ ನಿಧಾನವಾಗಿ ಅವಳ ಕೈಬಿಟ್ಟದ್ದವು.

ಆ ವೇಳೆಗೆ ಪಕ್ವಫಲದಂತೆ ಕೈಗೆ ಬಂದಿದ್ದವಳು ರೋಷನ್. ಮೊದಲಿನಿಂದಲೂ ಅವಳಲ್ಲಿ ನೆಲಸಿದ್ದ ಸಂಗೀತ ಪ್ರವೃತ್ತಿ ತಾಯಿಯ ಸಾಹಚರ್ಯದಿಂದ ಬೆಳೆದು ಪುಷ್ಟಿಗೊಂಡಿತ್ತು. ಅನ್ವರ್‌ಬಾಯಿ ತಾನೇ ಸ್ವತಃ ಪಾಠ ಹೇಳಿ ಮಗಳನ್ನು ಮುಂದಕ್ಕೆ ತಂದಿದ್ದಳು. ನಾಲ್ಕಾರು ಕಡೆ ಬೈಠಕ್‌ಗಳಾದ ಮೇಲಂತೂ ಅವಳ ಬಣ್ಣವೇ ಬದಲಾಯಿಸಿತು. ಹಾಡಿಕೆಯಲ್ಲಿ ತನ್ನದೇ ಆದ ಒಂದು ಗತ್ತಿನಿಂದ ರೋಷನ್ ವಿದ್ವದ್ರಸಿಕರ ಗಮನವನ್ನು ಸೆಳೆದಿದ್ದಳು. ಕೋಮಲವಾದ ಆ ಕಂಠಕ್ಕೂ, ತಾಯಿಗಿಂತಲೂ ಒಂದು ತೂಕ ಹೆಚ್ಚೇ ಎನ್ನಬಹುದಾದ ಆ ರೂಪಕ್ಕೂ ಜನ ಮರುಳಾಗತೊಡಗಿದರು. ಜೀವನದ ಸಂಜೆಯಲ್ಲಿದ್ದ ಅನ್ವರ್‌ಬಾಯಿ ಮಗಳ ಪ್ರಾದುರ್ಭಾವವನ್ನು ಕಂಡು ಹಿಗ್ಗಿಹೋದಳು; ಅವಳಲ್ಲಿ ಭವಿಷ್ಯದ ಬೆಳಕನ್ನು ಕಂಡಳು.

ತಾಯಿಯ ಭೋಗಜೀವನದ ಪರಿಚಯ ರೋಷನ್ನಳಿಗಿರಲಿಲ್ಲವೆಂದಲ್ಲ. ಆದರೆ ಅದರ ಕಾವು ಅವಳನ್ನಿನ್ನೂ ಸೋಕಿರಲಿಲ್ಲ. ಕಲೆಯ ಚಿಂತನೆಯಲ್ಲಿಯೇ ಮುಳುಗಿರುತ್ತಿದ್ದ ಅವಳಿಗೆ ಬೈಠಕ್‌ಖಾನೆಯಲ್ಲಿ ಕುಳಿತು ಅಭ್ಯಾಸಪ್ರಯೋಗಗಳನ್ನು ನಡಸುವುದರಲ್ಲೇ ಹೊತ್ತು ಕಳೆದುಹೋಗುತ್ತಿತ್ತು. ಹದಿನೆಂಟರ ಹೊಸಿಲನ್ನು ದಾಟಿದ್ದರೂ ವಿಲಾಸಜೀವನವೇನೆಂಬುದನ್ನೇ ಅವಳು ಅರಿಯದವಳಾಗಿದ್ದಳು. ಆದರೆ ರೂಪ ವೈದುಷ್ಯಗಳಿಂದ ವಿಕಸಿಸುತ್ತಿದ್ದ ರೋಷನ್ ಎಂದೆಂದಿಗೂ ಅನಾಘ್ರಾತ ಕುಸುಮವಾಗಿಯೇ ಉಳಿದಿರಲು ಸಾಧ್ಯವಿರಲಿಲ್ಲ. ಅವಳ ಸುತ್ತ ನಾಲ್ಕಾರು ದುಂಬಿಗಳು ಸಮಯ ಕಾಯುತ್ತ ಸುತ್ತುತ್ತಲೇ ಇದ್ದವು.

ಸೇಟ್ ಗೋವಿಂದದಾಸನಂತೂ ಬೆಕ್ಕಿನಂತೆ ಹೊಂಚುಹಾಕುತ್ತಲೇ ಇದ್ದ. ಅವನಿಗೂ ಅನ್ವರ್‌ಬಾಯಿಯ ರೋಗ ತುಂಬಿದ ಬೊಜ್ಜು ಮೈಯನ್ನು ನೋಡಿ ನೋಡಿ ಬೇಸರವಾಗಿತ್ತು; ಹೊಸ ಅನುಭವ ಬೇಕೆನ್ನಿಸುತ್ತಿತ್ತು. ದಿನದಿನಕ್ಕೆ

ನ್ನೈ ತುಂಬಿಕೊಳ್ಳುತ್ತಿದ್ದ ಏರುಜವ್ವನೆ ರೋಷನ್ನಳನ್ನು ಕಂಡಾಗಲೆಲ್ಲಾ ಅವನ ಬಾಯಲ್ಲಿ ನೀರೂರುತ್ತಿತ್ತು. ಅನ್ವರ್‌ಬಾಯಿಯ ಉದ್ದಕ್ಕೂ ಹಣಸುರಿದಿದ್ದ ಅವನಿಗೆ ರೋಷನ್ನಳ ಅಂಗಸುಖ ಅನುಭವಿಸುವ ವಾಂಛೆ ಬಲಿಯಿತು. ಅವಳು ಕಣ್ಣಿಗೆ ಬೀಳದೆ ತಪ್ಪಿಸಿಕೊಳ್ಳುತ್ತಿದ್ದುದನ್ನು ನೋಡಿ ಅವನಿಗೆ ಸಿಟ್ಟು ಬರುತ್ತಿತ್ತು.

ಒಂದು ದಿನ ಆ ಹುಚ್ಚು ನೆತ್ತಿಗೇರಿತು.

ಆ ಸಂಜೆ ಅವನು ಅನ್ವರ್‌ಬಾಯಿಯ ಮನೆಗೆ ಬಂದಾಗ ರೋಷನ್ನಳೊಡನೆ ಸುಖಪಡದೆ ಹಿಂತಿರುಗಬಾರದೆಂದು ಹಟ ತೊಟ್ಟೇ ಬಂದಿದ್ದ.

ಕಣ್ಣನ್ನು ಕೆಂಪಗೆ ಮಾಡಿಕೊಂಡು, ಕೊಟ್ಟ ಪಾನೀಯವನ್ನೂ ತಿರಸ್ಕರಿಸಿ, ದುರದುರನೆ ತನ್ನನ್ನೇ ನೋಡುತ್ತ ಕುಳಿತ ಸೇಟನ್ನು ಕಂಡು ಅನ್ವರ್‌ಬಾಯಿಗೆ ಅಚ್ಚರಿಯಾಯಿತು. ವ್ಯಾಪಾರದಲ್ಲಿ ಏನೋ ಏರುಪೇರಾಗಿರಬಹುದೆಂದು ಅವಳೆಣಿಸಿದಳು. ಅವನನ್ನು ರಮಿಸಲೆತ್ನಿಸುತ್ತ,

"ಇವತ್ತು ಸೇಟರಿಗೇನಾಗಿದೆ?"

ಎಂದಳು. ಸೇಟು ಉತ್ತರ ಕೊಡಲಿಲ್ಲ. ಕಣ್ಣು ಕೆಕ್ಕರಿಸಿಕೊಂಡು ಅವಳನ್ನೇ ನೋಡಿದ.

"ರೋಷನ್ ಎಲ್ಲಿ?"

"ಒಳಗೆ ಬೈಠಕ್‌ಖಾನೆಯಲ್ಲಿರಬಹುದು."

"ನಾನು ಬಂದಾಗಲೆಲ್ಲ ಅವಳು ಅಭ್ಯಾಸಕ್ಕೆ ಕೂಡಬೇಕೇನು?"

"ಇಷ್ಟುಹೊತ್ತೂ ಇಲ್ಲೇ ಇದ್ದಳು. ಈಗ ಹೋಗಿರಬಹುದು."

"ಅಭ್ಯಾಸಕ್ಕೆ ಬೇರೆ ಸಮಯವೇ ಇಲ್ಲವೋ? ನಾನು ಇಲ್ಲಿಗೆ ಬರುವುದಾದರೂ ಏತಕ್ಕೆ? ನಿನ್ನ ಮುದ್ದು ಮುಖ ನೋಡಿ ಹೋಗುವುದಕ್ಕೇನು?"

ಆ ಮಾತು ಕೇಳಿ ಅನ್ವರ್‌ಬಾಯಿಯ ಮುಖಕ್ಕೆ ಕೆಂಪಡರಿತು. ಆದರೆ ಅವಳು ಉತ್ತರ ಕೊಡಲಿಲ್ಲ. ಸೇಟು ಕೋಪದಿಂದ ಕೆರಳಿದ್ದ. ಆ ಬೆಂಕಿಗೆ ಆಜ್ಯ ಹೊಯ್ಯುವ ಧೈರ್ಯ ಅವಳಿಗಿರಲಿಲ್ಲ.

"ಏತಕ್ಕೆ ಸುಮ್ಮನೆ ಕುಳಿತೆ? ಅವಳೇ ಬರುತ್ತಾಳೋ ನಾನೇ ಹೋಗಬೇಕೋ?"

"ನೀನು ಹೋಗುವುದಕ್ಕೆ ನನ್ನ ಅಡ್ಡಿ ಇಲ್ಲ. ಸುಮ್ಮನೆ ನನ್ನನ್ನು ನಿಷ್ಠುರ ಮಾಡಬೇಡ. ಅವಳ ಸ್ವಭಾವಕ್ಕೆ ನಾನೇನು ಮಾಡಲಿ ?"

"ಅವಳಿಗೆ ಬುದ್ಧಿ ಕಲಿಸುವುದು ನನಗೆ ಗೊತ್ತಿದೆ"

ಎನ್ನುತ್ತ ಗೋವಿಂದದಾಸ್ ಧಿಗ್ಗನೆದ್ದು ಬೈಠಕ್ ಖಾನೆಯ ಕಡೆ ಧಾವಿಸಿದ.

ತಂಬೂರಿಯ ನಾದದಲ್ಲಿ ಲೀನಳಾಗಿ ಹಾಡುತ್ತ ಕುಳಿತಿದ್ದ ರೋಷನ್ ಬಾಗಿಲು ತೆರೆದ ಸದ್ದು ಕೇಳಿ ಹಿಂತಿರುಗಿ ನೋಡಿದಳು. ಸೇಟ್ ಒಳಹೊಕ್ಕು ಬಾಗಿಲು ಮುಚ್ಚಿ ಅದನ್ನೇ ಒರಗಿಕೊಂಡು ನಿಂತ. ಅವನ ಮುಖವನ್ನು ನೋಡಿ ಅವಳಿಗೇನೋ ಗಾಬರಿಯಾಯಿತು. ಅವನ ಕಣ್ಣಲ್ಲಿ ತುಡುಕುತ್ತಿದ್ದ ಕಾಮಾತುರವನ್ನು ಕಂಡು ಅವಳು ಹೌಹಾರಿದಳು. ಅನಿರೀಕ್ಷಿತ ವಿಪತ್ತಿನಿಂದ ಅವಳ ಮೈ ಕಂಪಿಸಿತು. ಇಕ್ಕಟ್ಟಾದ ಕಣಿವೆಯ ಹಾದಿಯಲ್ಲಿ ಇದ್ದಕ್ಕಿದ್ದ ಹಾಗೆ ಹುಲಿ ಎದುರಾದಾಗ ತಪ್ಪಿಸಿಕೊಳ್ಳಲು ಮಾರ್ಗ ಹುಡುಕುವಂತೆ ಅವಳ ಕಣ್ಣು ಅನೈಚ್ಛಿಕವಾಗಿಯೇ ಬೈಠಕ್‌ಖಾನೆಯ ಸುತ್ತ ಹರಿದಾಡಿತು. ಅವಳನ್ನೇ ದಿಟ್ಟಿಸಿ ನೋಡುತ್ತಿದ್ದ ಸೇಟು ಅದನ್ನು ಗಮನಿಸದಿರಲಿಲ್ಲ.

"ಕಿಟಕಿಯಿಂದ ಹಾರಿಹೋಗಲು ನೋಡುತ್ತಿರುವಿಯೇನು ?"

ಎಂದು ಗಹಗಹಿಸಿ ನಕ್ಕ. ಆ ನಗೆ ಕೇಳಿ ಅವಳ ಮೈಮೇಲೆ ಹಾವು ಹರಿದ ಹಾಗಾಯಿತು. ತನ್ನಷ್ಟಕ್ಕೆ ತಾನೇ ಮೈ ಸೆಟೆದುಕೊಂಡಿತು.

"ಸುಮ್ಮನೆ ನಿಂತು ಹೊತ್ತು ಕಳೆಯಬೇಕೇ ?"

ಎನ್ನುತ್ತ ಎರಡು ಹೆಜ್ಜೆ ಮುಂದಿಟ್ಟ. ಕೆದರಿದ ಅವನ ಮುಖ, ಧಾವಿಸುತ್ತಿದ್ದ ಉಸಿರು, ಅಂಕೆ ತಪ್ಪುತ್ತಿದ್ದ ಅವನ ಕಾಮೋದ್ವೇಗಕ್ಕೆ ಸಾಕ್ಷಿಯಾಗಿದ್ದವು. ರೋಷನ್ ಬೈಠಕ್‌ಖಾನೆಯ ಒಂದು ಮೂಲೆಗೆ ಹಿಮ್ಮೆಟ್ಟುತ್ತ,

"ನನ್ನ ಮೇಲೆ ಕೈಮಾಡಿದರೆ ಕೂಗಿಕೊಳ್ಳುತ್ತೇನೆ. ಹೊರಗೆ ಅಮ್ಮ ಇದ್ದಾಳೆ"

ಎಂದಳು. ಅದು ಅವನ ಕಿವಿಗೆ ಬಿತ್ತೋ ಇಲ್ಲವೋ, ನಾಲ್ಕು ಹೆಜ್ಜೆಯಲ್ಲಿ ಅವಳನ್ನು ಸಮೀಪಿಸಿ ಕೈ ಹಿಡಿದುಕೊಂಡ.

"ಕೂಗಿಕೊಳ್ಳುತ್ತೀಯಲ್ಲವೆ ? ನಿಮ್ಮಮ್ಮ ಬಂದು ಬಿಡಿಸಿಕೊಳ್ಳುತ್ತಾಳೇನು ?"

ಎಂದು ತನ್ನ ತೋಳತಬ್ಬಿನಲ್ಲಿ ಅವಳನ್ನು ಹಿಡಿದು ಹತ್ತಿರ ಸೆಳೆದುಕೊಂಡ. ರೋಷನ್ ಮುನಿದೆದ್ದು ಎರಡು ಕೈಗಳಿಂದಲೂ ಅವನ ಮುಖವನ್ನೂ ಎದೆಯನ್ನೂ ಅಪ್ಪಳಿಸುತ್ತ ಗಟ್ಟಿಯಾಗಿ ಕಿರಿಚಿಕೊಂಡಳು.

"ಬಿಡು, ಬಿಡು. ಅಯ್ಯೋ, ಅಮ್ಮಾ...."

ಆದರೆ ಆ ಕಾಮೋದ್ರಿಕ್ತ ಪುರುಷಶಕ್ತಿಗೆ ಅವಳ ಹೆಣ್ಣು ಬಲ ಸಾಟಿಯಾಗಲಿಲ್ಲ. ಅವನ ಉನ್ಮತ್ತ ಚುಂಬನಗಳಲ್ಲಿ ಅವಳ ಉಸಿರು ಕಟ್ಟಿದಂತಾಯಿತು; ಧೈರ್ಯ ಕುಸಿಯಿತು; ಕಣ್ಣು ಕತ್ತಲಿಟ್ಟಿತು. ಗೋವಿಂದದಾಸ್ ಪಾಶವೀ ಬಲದಿಂದ ಅವಳನ್ನಪ್ಪಿ ನೆಲಕ್ಕೆ ಹಾಸಿದ್ದ ಮೆತ್ತನೆಯ ರತ್ನಕಂಬಳಿಯ ಮೇಲೆ ಕೆಡವಿಕೊಂಡು ತನ್ನ ಬಹು ದಿನದ ದಾಹವನ್ನು ತೀರಿಸಿಕೊಂಡ.

ಅವಳ ಸತೀತ್ವ ಅಂದೇ ಕೊನೆಯಾಗಿತ್ತು. ತನ್ನ ಹರಿದ ಕುಪ್ಪುಸದಲ್ಲಿ ಸೇಟು ಸುತ್ತಿಟ್ಟುಹೋಗಿದ್ದ ನೂರು ರೂಪಾಯಿಯ ಎರಡು ನೋಟುಗಳನ್ನು ತಂದು ತಾಯಿಯ ಮುಖದ ಮೇಲೆ ತಿರಸ್ಕಾರದಿಂದ ಬಿಸುಟು ಹೊರಟು ಹೋಗಿದ್ದಳು. ಅನ್ವರ್‌ಬಾಯಿ ಮೂರು ದಿವಸ ಮಗಳನ್ನು ಮಾತಾಡಿಸುವ ಗೋಜಿಗೆ ಹೋಗಲಿಲ್ಲ. ಕಾಲ ಎಂಥ ನೋವನ್ನಾದರೂ ಸಮಾಧಾನ ಪಡಿಸುವುದೆನ್ನುವುದನ್ನು ಚಾಣಾಕ್ಷೆಯಾದ ಅವಳು ಅರಿತಿದ್ದಳು. ಆದರೆ ಅವಳೆಣಿಕೆ ತಪ್ಪಾಗಿತ್ತು. ರೋಷನ್ ಅಂದಾದ ಆ ಅನುಭವವನ್ನು ಮರೆಯಲಿಲ್ಲ.

ಆ ಸಮಯದಲ್ಲಿ ನೆರವಿಗೆ ಬಂದಿದ್ದವನು ಶ್ಯಾಮಸುಂದರ್.

ಶ್ಯಾಮಸುಂದರ್ ಇಂದೂರಿನಲ್ಲಿ ದೊಡ್ಡ ಬ್ಯಾಂಕರಾಗಿದ್ದ. ಜೊತೆಗೆ ಸಂಗೀತ ನೃತ್ಯಗಳ ಹವ್ಯಾಸವೂ ಇತ್ತು. ಸ್ಥಳೀಯ ಕಲಾ ಸಂಘದ ಅಧ್ಯಕ್ಷನಾಗಿದ್ದ ಅವನಿಗೆ ಮೊದಲಿನಿಂದಲೂ ಅನ್ವರ್‌ಬಾಯಿಯ ಪರಿಚಯವಿತ್ತು. ಅನ್ವರ್‌ಬಾಯಿ ಇಂದೂರಿಗೆ ಹೋದಾಗಲೆಲ್ಲಾ ಶ್ಯಾಮಸುಂದರನ ಮನೆಯಲ್ಲೇ ಇಳಿದುಕೊಳ್ಳುತ್ತಿದ್ದಳು. ಅವಳು ಬಂದಾಗ ಬೈಠಕ್‌ಗಳನ್ನೇರ್ಪಡಿಸಿ ಕೈತುಂಬ ಹಣ ಕೊಡಿಸಿ ಕಳಿಸುತ್ತಿದ್ದ. ಆ ಔದಾರ್ಯಕ್ಕೆ ಪ್ರತಿಫಲವೂ ಸಿಕ್ಕದಿರುತ್ತಿರಲಿಲ್ಲ. ಅನ್ವರ್‌ಬಾಯಿಗೆ ಶ್ಯಾಮಸುಂದರನ ಬಗೆಗೆ ಕೃತಜ್ಞತೆ ಮೂಡಿತ್ತು. ಅವನು ಮುಂಬಯಿಗೆ ಬಂದಾಗಲಂತೂ ತಪ್ಪದೆ ಬಾಯಿಯ ಭೇಟಿಗೆ ಬರುತ್ತಿದ್ದ. ಒಮ್ಮೊಮ್ಮೆ ಅವಳ ಮನೆಯಲ್ಲೇ ಬಿಡಾರ ಮಾಡುತ್ತಿದ್ದುದೂ ಉಂಟು.

ಆದರೆ ಈ ಸಲ ಶ್ಯಾಮಸುಂದರ್ ಬಂದಾಗ ಬಾಯಿಯ ಮನೆಯ ವಾತ ವರಣವೇ ಬದಲಾಯಿಸಿತ್ತು. ತಾಯಿಗೂ ಮಗಳಿಗೂ ಏನೋ ವಿರಸ ಹುಟ್ಟಿ ಯೆನ್ನುವುದನ್ನು ಅವನು ಕಂಡುಕೊಳ್ಳಲು ಕಷ್ಟವಾಗಲಿಲ್ಲ. ಅನ್ವರ್‌ಬಾಯಿಯ ಅರ್ಥಸೂಚಕವಾದ ಮಾತುಗಳಿಂದ ಮಗಳನ್ನು ತನ್ನ ದಾರಿಗೆಳೆದುಕೊಳ್ಳು ವುದರಲ್ಲಿ ಅವಳು ವಿಫಲಳಾಗಿದ್ದಾಳೆಂದು ಅವನು ಸುಲಭವಾಗಿಯೇ ಗ್ರಹಿಸಿದ

ಮಗಳ ಮನಸ್ಸನ್ನು ಅನುನಯದಿಂದ ತಿರುಗಿಸಿಕೊಳ್ಳಲು ಅನ್ವರ್ ಬಾಯಿಗೆ ಮೂರನೆಯವರೊಬ್ಬರ ಸಹಾಯ ಬೇಕಾಗಿತ್ತು. ತಾಯಿಯ ಕುರುಡ ಕಾಮಜೀವನಕ್ಕೆ ಹೇಸಿದ್ದ ರೋಷನ್ನಳ ಮನಸ್ಸೂ ಅದರಿಂದ ಪಾರಾಗಲೊಂದ ಹಾದಿ ಹುಡುಕುತ್ತಿತ್ತು.

ಈ ಸುವರ್ಣ ಸಂಧಿ ಶ್ಯಾಮಸುಂದರನ ಮಡಿಲಿಗೆ ತಾನಾಗಿ ಬಂದ ಬಿತ್ತು.

ಅಂದು ರಾತ್ರಿ 'ಷಿರಾಜ್ ಮಂಜಿಲ್' ಹೊರಗೆ ಸದ್ದಿಲ್ಲದೆ ಬಂದು ನಿಂತ ಕಾರು ರೋಷನ್ನಳ ಭವಿಷ್ಯ ಜೀವನವನ್ನು ನಿರ್ಧರಿಸುವ ಸಂಕೇತವಾಗಿತ್ತು ಪಾಪಜೀವನವನ್ನು ಹಿಂದೆಯೇ ಬಿಟ್ಟು ಕಲೆಗಾಗಿ ಬಾಳನ್ನು ಮುಡುಪಿಡುವ ಹೊಸ ಅಧ್ಯಾಯಕ್ಕೆ ಅದು ಪೀಠಿಕೆಯೆನ್ನುವ ಅರಿವು ಅವಳ ಮನಸ್ಸನ್ನು ಉಲ್ಲಾಸಗೊಳಿಸಿತ್ತು. ಮನೆಯಾಳುಗಳ ಕಣ್ಣು ತಪ್ಪಿಸಿ ಹೋಗಿ ಕಾರಿನಲ್ಲಿ ಕುಳಿತಳು. ಆದರೆ ಅವಳೆಣಿಕೆ ತಪ್ಪಾಗಿತ್ತು. ಕಾರು ಇಂದೂರಿನ ಹಾದಿ ಹಿಡಿಯುವ ಬದಲು 'ಅಟ್ಲಾಂಟಿಕ್ ಹೋಟೆಲ್' ಬಳಿಗೆ ಬಂದು ನಿಂತಿತು ಪಾನೀಯ ಕುಡಿದು ಹೋಗೋಣವೆಂದು ಶ್ಯಾಮಸುಂದರ್ ಅವಳನ್ನು ಒಳಗೆ ಕರೆದೊಯ್ದ. ಮೂರನೆಯ ಅಂತಸ್ತಿನ ಕೊನೆಯಲ್ಲಿದ್ದ ಒಂದು ರೂಮು ಅವರಿ ಗಾಗಿಯೇ ತೆರವು ಮಾಡಿಸಿದಂತಿತ್ತು. ಸ್ವಲ್ಪ ಅಳುಕಿನಿಂದಲೇ ರೂಮಿಗೆ ಪ್ರವೇಶಿಸಿದ ರೋಷನ್ ಶ್ಯಾಮಸುಂದರ್ ಬಾಗಿಲು ಮುಚ್ಚಿದ್ದನ್ನು ನೋಡಿ ಭಯಗೊಂಡಳು. ಅವನ ವರ್ತನೆ ಇದ್ದಕ್ಕಿದ್ದ ಹಾಗೆ ಬದಲಾಯಿತು ಹತ್ತಿರ ಬಂದು ನಸುನಗುತ್ತ ಅವಳ ಭುಜದ ಮೇಲೆ ಕೈಹಾಕಿದ. ಒಂದೇ ಒಂದು ಮುಗುಳುನಗೆ ಏನು ತಿಳಿಸಬೇಕೋ ಅದನ್ನು ಮೌನವಾಗಿ ತಿಳಿಸಿತು ಅವನ ಉದ್ದೇಶದ ಬಗೆಗೆ ಅವಳಿಗೆ ಸಂಶಯ ಉಳಿಯಲಿಲ್ಲ. ವಿಪತ್ತಿನಿಂದ ಪಾರಾಗುವ ಬಯಕೆ ಅವಳಲ್ಲಿ ಒಮ್ಮೆಯೇ ಮೂಡಿತು. ಭುಜದ ಮೇಲಿದ್ದ

ಅವನ ಕೈಯನ್ನು ಕಿತ್ತೊಗೆದು ಬಾಗಿಲ ಬಳಿ ಹಾರಿ ಚಿಲುಕ ತೆಗೆದುಕೊಂಡು ಹೊರಗೆ ಹೋಗಲೆತ್ನಿಸಿದಳು. ಆದರೆ ಒಂದೇ ನೆಗೆತದಲ್ಲಿ ಶ್ಯಾಮಸುಂದರನೂ ಬಾಗಿಲ ಹತ್ತಿರಕ್ಕೆ ಚಿಮ್ಮಿ ಬಂದು ಅವಳಿಗಡ್ಡವಾಗಿ ನಿಂತಿದ್ದ.

"ಸುಮ್ಮನೆ ಗಲಾಟೆ ಮಾಡಬೇಡ. ನಾನು ಹೇಳಿದ ಹಾಗೆ ಕೇಳು."

ತಗ್ಗಿದ ಧ್ವನಿಯಲ್ಲಿ ಆಡಿದ್ದರೂ ಆ ಮಾತಿನಲ್ಲಿ ಎದೆ ನಡುಗಿಸುವ ಕರ್ಕಶತೆಯಿತ್ತು. ಗಲಾಟೆ ಮಾಡಿದ್ದರೂ ಪ್ರಯೋಜನವಿರುತ್ತಿರಲಿಲ್ಲ. ಆಳುಗಳೆಲ್ಲ ಲಂಚ ತಿಂದಿದ್ದರು.

ಆ ರಾತ್ರಿ ರೋಷನ್ ತನ್ನ ಜೀವನದಲ್ಲಿ ಎರಡನೆಯ ಸಲ ಕಾಮಾಗ್ನಿ ಕುಂಡಕ್ಕೆ ಆಹುತಿಯಾಗಿದ್ದಳು. ಶ್ಯಾಮಸುಂದರ್ ನಂಬಿಸಿ ಕೊರಳು ಕೊಯ್ದಿದ್ದ.

ಬೆಳಗ್ಗೆ ಶ್ಯಾಮಸುಂದರ್ ಅದೇ ಕಾರಿನಲ್ಲಿ ರೋಷನ್ನಳನ್ನು ಕರೆತಂದು ಮನೆಗೆ ತಲಪಿಸಿ ಇಂದೂರಿಗೆ ಹಿಂತಿರುಗಿದ್ದ. ರೂಮು ಸೇರಿ ಇಡಿಯ ದಿನವೆಲ್ಲಾ ಅಳುತ್ತ ಬಿದ್ದಿದ್ದ ಮಗಳನ್ನು ನೋಡಿ ಅನ್ವರ್‌ಬಾಯಿ ಅರ್ಥಗರ್ಭಿತವಾಗಿ ನಕ್ಕಿದ್ದಳು. ಮಗಳು ದಾರಿಗೆ ಬಂದಿದ್ದಾಳೆನ್ನುವ ಭರವಸೆ ಅವಳಲ್ಲಿ ಮೂಡಿತು.

ಆದರೆ ರೋಷನ್ ದುಃಖತಪ್ತಳಾಗಿದ್ದಳು. ಪ್ರಪಂಚದಲ್ಲಿ ತಪ್ಪಿಸಿಕೊಂಡು ಹೋಗಲು ಅವಳಿಗೆ ಎಡೆಯೇ ಇದ್ದಂತಿರಲಿಲ್ಲ. ಅವಳ ರೂಪವೇ ಅವಳಿಗೆ ಹೆಮ್ಮಾರಿಯಾಗಿತ್ತು. ಅದನ್ನು ನೆನಸಿಕೊಂಡು ಅವಳಿಗೆ ಹಿಡಿಸಲಾರದ ಕೋಪ ಬಂದಿತು. ಕನ್ನಡಿಯ ಮುಂದೆ ನಿಂತು ಒಮ್ಮೆ ಮೇಲಿನಿಂದ ಕೆಳಗಿನವರೆಗೂ ನೋಡಿಕೊಂಡಳು. ಮೈ ಕುದಿದುಹೋಯಿತು. ಉಕ್ಕೇರಿದ ಕೋಪವನ್ನು ತಡೆಯಲಾರದೆ ತಲೆಯಲ್ಲಿದ್ದ ಬಾಡಿದ ಹೂವಿನ ದಂಡೆಯನ್ನು ಕಿತ್ತೆಸೆದು, ಮೈಮೇಲಿದ್ದ ಒಡವೆಗಳನ್ನೆಲ್ಲ ಕಿತ್ತು ಹರಿದು ಮೂಲೆಮೂಲೆಗೆ ಈಡಾಡಿದಳು. ಏನು ಮಾಡಿದರೂ ಎದೆಯಲ್ಲಿ ಕಡೆಯುತ್ತಿದ್ದ ವೇದನೆ ಕಡಮೆಯಾಗಲಿಲ್ಲ. ಕೊನೆಗೆ, ತನ್ನ ಮೈಯ ನೋಟವನ್ನು ತಾನೇ ಸಹಿಸಲಾರದೆ ಕೈಗೆ ಸಿಕ್ಕಿದ ಧೂಪಧಾನಿಯನ್ನು ಪಟಾರನೆ ಕನ್ನಡಿಗೆ ರಾಚಿ ಅದನ್ನು ಛಿದ್ರ ಛಿದ್ರ ಮಾಡಿ ಮಂಚದ ಮೇಲೆ ಹೋಗಿ ಬಿದ್ದುಕೊಂಡಳು. ದುಃಖ ಉಕ್ಕಿ ಬಂದು ನೀರಾಗಿ ಹರಿಯಿತು.

ಅನ್ವರ್‌ಬಾಯಿ ಮತ್ತೆ ಮೂರು ದಿವಸ ಮಗಳನ್ನು ಮಾತಾಡಿಸುವ

ಗೋಜಿಗೆ ಹೋಗಿರಲಿಲ್ಲ. ಅವಳಿಗೆ ಚೆನ್ನಾಗಿ ಗೊತ್ತಿತ್ತು ಈ ಸಲ ತನ್ನ ನಿರೀಕ್ಷೆ ವ್ಯರ್ಥವಾಗುವುದಿಲ್ಲವೆಂದು.

ಈ ಮಾತಿಗೆ ಮೂರು ವರ್ಷವಾಗಿತ್ತು.

ಎಲ್ಲ ದುಃಖವನ್ನೂ ಮರೆಯಿಸುವ ಕಾಲ ರೋಷನ್ನಳಿಗೂ ಏನೋ ಒಂದು ಬಗೆಯ ಸಮಾಧಾನವನ್ನು ತಂದಿತ್ತು. ಆ ಸಮಾಧಾನಕ್ಕೂ ಕಾರಣ ವಿಲ್ಲದೆ ಇರಲಿಲ್ಲ. ಅವಳು ತನ್ನ ಸ್ಥಿತಿಯನ್ನೇ ಕುರಿತು ನೂರಾರು ಸಲ ಯೋಚಿಸಿದ್ದಳು; ತನ್ನ ಬದುಕಿನ ಎಲ್ಲ ಪ್ರಶ್ನೆಗಳನ್ನೂ ಅಳೆದು ಸುರಿದು, ತೂಗಿ ನೋಡಿ ತಾನೇ ಒಂದು ನಿರ್ಧಾರಕ್ಕೆ ಬಂದಿದ್ದಳು. ಅವಳ ಮನಸ್ಸಿನಲ್ಲಿ ಒಂದು ಮಾರ್ಗವಂತೂ ಪರಿಷ್ಕಾರವಾಗಿ ಕಾಣುತ್ತಿತ್ತು. ಕಲೆ–ವಿಲಾಸ ಜೀವನಗಳನ್ನು ಬೆರಸಿಕೊಂಡು ತಾಯ ನೆರಳಿನಲ್ಲಿ ನೆಮ್ಮದಿಯಿಂದ ಬಾಳು ವುದೇ? ಇಲ್ಲ, ಮರೀಚಿಕೆಯಂತಿರುವ ಸ್ವತಂತ್ರ ಜೀವನವನ್ನರಸಿ ಹೋಗಿ, ತನ್ನ ರೂಪದ ಬವಣೆಯಿಂದಲೇ ತಪ್ಪಿಸಿಕೊಳ್ಳಲಾಗದೆ ಕಂಡವರ ಕಾಮದ ಕೇಳಿಯ ಗೊಂಬೆಯಾಗಿ ಬೀದಿಯ ಬೆಲೆವೆಣ್ಣಾಗುವುದೇ?

ಎರಡನೆಯ ದಾರಿಯಂತೂ ಅವಳಿಗೆ ಭಯಂಕರವಾಗಿ ಕಂಡಿತು. ಅದರ ಅದೃಶ್ಯ ಘೋರವನ್ನು ಮನಸ್ಸಿನಲ್ಲಿಯೇ ಭಾವಿಸಿಕೊಂಡು ಅವಳು ನಡುಗಿದಳು. ಮೊದಲನೆಯ ಮಾರ್ಗದಲ್ಲಿ ನಡೆಯದಿದ್ದರೆ ವಿಧಿಯೇ ಇರಲಿಲ್ಲ. ಬಾಳಿನಲ್ಲಿ ಸೋತೆನೆಂದುಕೊಂಡು ಅದಕ್ಕೆ ತಲೆಬಾಗಿದಳು.

ಆದರೂ ಮನಸ್ಸು ಒಮ್ಮೊಮ್ಮೆ ಹಟ ಮಾಡುತ್ತಿತ್ತು. ಮಗಳಿಗೆ ತುಂಬ ರೋಸಿದಾಗ ತಾಯಿ ಸೋಲುತ್ತಿದ್ದಳು. ತಾಯಿ ಕೋಪಿಸಿಕೊಂಡಾಗ ಮಗಳು ಮಣಿಯುತ್ತಿದ್ದಳು. ಇಬ್ಬರಲ್ಲೂ ಒಂದು ಸಮಾಧಾನ ಅನಿವಾರ್ಯವಾಗಿ ನೆಲಸಿ ತೂಕ ತಪ್ಪದೆ ನಡೆಯುವ ಪ್ರವೃತ್ತಿಯನ್ನು ಕಲಿಸಿತು.

ಇಂಥ ಸ್ಥಿತಿಯಲ್ಲಿದ್ದಾಗಲೇ ರೋಷನ್ ಮೊದಲ ಸಲ ಮಧುಸೂದನನನ್ನು ಕಂಡದ್ದು.

ಅಂದು ಸಂಗೀತ ಕಚೇರಿಯಲ್ಲಿ ಅವನನ್ನು ನೋಡಿದಾಗ, ಅವನ ಹಾಡಿಕೆ ಯನ್ನು ಕೇಳಿದಾಗ ಅವಳ ಮನಸ್ಸಿನಲ್ಲಿ ಆ ಸ್ವಭಾವಕ್ಕೆ ಸಹಜವಲ್ಲದ ಒಂದು ವಿಕಾರ ತಲೆದೋರಿತು. ಯಾವ ಗಂಡಸನ್ನೂ ಇದುವರೆಗೆ ತಾನಾಗಿ ಬಯಸ ದಿದ್ದವಳು ಮಧುಸೂದನನನ್ನು ಕಂಡು ಸೋತಳು. ಅವನನ್ನು ಕೂಡುವ

ಉತ್ಕಟೇಚ್ಛೆ ಅವಳಿಗೆ ಉಂಟಾಯಿತು. ಅವನ ಸಮಾಗಮನಕ್ಕೆ ಕಾತರಳಾದಳು. ತಾಯಿಗೆ ಹೇಳಿ ಅವನನ್ನು ಮನೆಗೆ ಕರೆಸಿಕೊಂಡಳು. ಹಾಡಿಕೆಯ ವ್ಯಾಜದಲ್ಲಿ ತನ್ನ ಮೋಹಜಾಲವನ್ನು ಬೀರಿ, ಒನಪು ಒಯ್ಯಾರ ತೋರಿ ಅವನನ್ನು ಒಲಿಸಿಕೊಳ್ಳಲೆತ್ನಿಸಿದಳು. ಆದರೆ ಮಧುಸೂದನನ ಮನಸ್ಸು ಅಷ್ಟಕ್ಕೆ ಕಲಕಲಿಲ್ಲ. ಅವಳರ್ಪಿಸಿದ ಮೋಹವನ್ನೊಲ್ಲದೆ ಅದನ್ನು ಕಾಲಿನಿಂದ ಒದೆದು ಹೊರಟುಹೋಗಿದ್ದ.

ಅವನ ತಿರಸ್ಕಾರದಿಂದ ಅವಳ ಮೋಹ ಅಳಿಯುವ ಬದಲು ಕೆರಳಿತ್ತು. ಅವನನ್ನು ವಶಪಡಿಸಿಕೊಳ್ಳುವ ದಾರಿ ಕಾಣದೆ ವಿಹ್ವಲಳಾಗಿ ಕೊನೆಗೆ ಅನುನಯದಲ್ಲಿ ಅವನಿಗೆ ಒಂದು ಪತ್ರ ಬರೆದಿದ್ದಳು. ತನ್ನ ಆಸೆ ಎಂದಾದರೊಂದು ದಿನ ಈಡೇರಬಹುದೆನ್ನುವ ನಂಬಿಕೆ ಅವಳಿಗಿತ್ತು. ಯಾವ ಕಾರಣದಿಂದ ಆ ನಂಬಿಕೆ ಮೂಡಿತ್ತೋ ಅವಳಿಗೇ ಗೊತ್ತಿರಲಿಲ್ಲ.

ಅಂದಿನ ಬಯಕೆ ಇಂದು ಈಡೇರಿತ್ತು. ಅದು ಫಲಿಸಿರುವ ಈ ಸಮಯದಲ್ಲೂ ಅದನ್ನು ಬಿಟ್ಟು ಮನಸ್ಸಿಗೆ ಬೇಡವಾದ ಯಾವುದೋ ಕಹಿ ಪ್ರಸಂಗಗಳನ್ನು ಹಚ್ಚಿಕೊಳ್ಳಬೇಕೆ?

ಹೌದು, ರೋಷನ್ ನಿಜವನ್ನೇ ನುಡಿದಿದ್ದಳು—

"ನಮ್ಮ ಪರಿಸ್ಥಿತಿ ನಿಮಗೆ ತಿಳಿದಿಲ್ಲ. ಸುಮ್ಮನೆ ಕೋಪಿಸಿಕೊಳ್ಳುತ್ತಿರುವಿರಿ."

ನಿಜವೆ? ಈ ಮಾತು ನಿಜವಿರಬಹುದೆ?

ಏತಕ್ಕೆ ನಿಜವಿರಬಾರದು? ಅವಳ ಬಾಳಿನ ಆಳವನ್ನು ಕಂಡರಿಯದ ತನಗೆ ಅದರಲ್ಲಿಳಿದು ನೋಡುವ ಹವ್ಯಾಸವೇಕೆ? ಅವನಿಗೆ ಬೇಕಾಗಿದ್ದುದೇನು? ತನ್ನ ದುಃಖವೆಲ್ಲವನ್ನೂ ಮರೆಸುವ ಸುಖ, ತಾನು ಆಳಿ ಮುಳುಗುವಷ್ಟು ಸುಖ, ತನಗೆ ಹುಚ್ಚು ಹಿಡಿಸುವಂಥ ಸುಖ. ಆ ಸುಖದಲ್ಲಿ ಹಿಂದೆ ಎಷ್ಟು ಜನ ಪಾಲುಗೊಂಡಿದ್ದರೇನು? ಮುಂದೆ ಎಷ್ಟು ಜನ ಭಾಗಿಗಳಾದರೇನು? ಅದರ ಗುತ್ತಿಗೆಯನ್ನು ತಾನೊಬ್ಬನೇ ಪಡೆಯಲೆಳಸುವ ಹಟವೇಕೆ?

ಅಂತರಂಗದಲ್ಲಿ ಮೂಡಿದ ಈ ಪ್ರಶ್ನೆ ಸುಖದ ಸಲ್ಲಾಪದಲ್ಲಿ ಯಾವುದೋ ಹಿಡಿಯಬಾರದ ಜಾಡು ಹಿಡಿದು ವ್ಯಗ್ರತೆಗೆ ತಿರುಗಿದ್ದ ಅವನ ಮನಸ್ಸನ್ನು

ಸಮಾಧಾನಕ್ಕೆ ತಂದಿತು. ತನ್ನ ಕುಟಿಲ ಪ್ರಶ್ನೆಗಳಿಂದ ಅವಳು ಮನ ನೊಂದಿರುವಳೋ?

ಕರಿಯ ನಾಗರದ ಮೈಯ ಹೊಳಪುಳ್ಳ ನೀಳವಾದ ತನ್ನ ಹೆರಳನ್ನು ಕೈಯಲ್ಲಿ ಆಡಿಸುತ್ತ ಪಕ್ಕದಲ್ಲಿ ಮಲಗಿದ್ದ ಆ ಚೆಲುವೆಯನ್ನು ತನ್ನೆಡೆಗೆ ತಿರುಗಿಸಿಕೊಂಡು ಮಧುಸೂದನ ಅವಳ ಮುಖವನ್ನೇ ಒಂದು ಕ್ಷಣ ದಿಟ್ಟಿಸಿ ನೋಡಿದ. ಯೋಚನೆಯ ಮುದ್ರೆಯೊತ್ತಿದಂತಿದ್ದ ಅವಳ ಮುಖ ಮ್ಲಾನವಾಗಿತ್ತು. ಆದರೆ ಆ ಕಣ್ಣುಗಳಲ್ಲಿ ಮಾತ್ರ ಯಾವುದೋ ಆಸೆ ತುಂಬಿ ತುಳುಕುತ್ತಿತ್ತು. ಅವನ ದೃಷ್ಟಿ ಅವಳ ಅಂಗಾಂಗಗಳ ಮೇಲೆಲ್ಲ ಹರಿಯಿತು. ಜಾರಿದ ಸೆರಗಿನ ಮರೆಯಿಂದ ಇಣುಕುತ್ತಿದ್ದ ತುಂಬು ಕುಚಗಳ ಸೊಗಸು ಅವನ ಮನಸ್ಸನ್ನು ಕಲಕಿತು. ತೆಳುವಾದ ಸೀರೆ ತೊಡೆ ನಿತಂಬಗಳ ಮಾಟವನ್ನು ಮುಚ್ಚಿಡಲು ಅಸಮರ್ಥವಾಗಿತ್ತು. ಅವನ ಸ್ಪರ್ಶದಿಂದ ನವಿರೆದ್ದಿದ್ದ ಅವಳ ಮೈ, ರಾಗೋದ್ರೇಕದಿಂದ ಕೆಂಪಡರಿದ್ದ ಕೆನ್ನೆ, ಬಯಕೆಯಿಂದ ಬಿರಿದಂತಿದ್ದ ಅರೆದೆರೆದ ಕೆಂದುಟಿ ಅವನಿಗೆ ರತಿಯ ಆಹ್ವಾನ ನೀಡುತ್ತಿದ್ದವು. ಅಂಕೆ ತಪ್ಪಿದ ಆಸೆಯಿಂದ ಮಧುಸೂದನ ಅವಳನ್ನು ಬಿಗಿದಪ್ಪಿದ. ಹಾವಿನಂತೆ ಮೈಗೆ ಮೈ ಸುತ್ತಿ, ಅವನ ಆಸೆಯನ್ನು ನೂರ್ಮಡಿಯಾಗಿ ಕೆರಳಿಸಿ ರೋಷನ್ ಅವನನ್ನು ಸುಖದ ಮಡುವಿನ ಸುಳಿಯಲ್ಲಿ ಮುಳುಗಿಸಿಬಿಟ್ಟಳು.

೪

ಲಲಿತ ರುಕ್ಮಿಣೀದೇವಿಯ ಆಹ್ವಾನವನ್ನು ನಿರಾಕರಿಸಲು ಕಾರಣವಿಲ್ಲದಿರಲಿಲ್ಲ.

ಆ ಕಾರಣ ಅವಳಿಗೆ ಚೆನ್ನಾಗಿ ಗೊತ್ತಿತ್ತು. ಆದರೆ ಇತರರಿಗೆ ಗೊತ್ತಿರಲು ಸಾಧ್ಯವಿರಲಿಲ್ಲ. ಅಂದು ಕಲಾಕ್ಷೇತ್ರದಲ್ಲಿ ಏರ್ಪಡಿಸಿದ್ದ ನೃತ್ಯಗೋಷ್ಠಿಯಲ್ಲಿ ಲಲಿತನೂ ಬಂದು ಭಾಗವಹಿಸಬೇಕೆನ್ನುವುದು ಅವರ ಬಯಕೆಯಾಗಿತ್ತು. ಅವಳ ಕೈಯಲ್ಲಿ ನಾಟ್ಯ ಕಟ್ಟಿಸಿ, ಅವಳನ್ನು ಹೊಸ ಗೆಳತಿಯರಿಗೆ ಪರಿಚಯ ಮಾಡಿಸಿಕೊಡಬೇಕೆಂದು ಆಕೆ ಬಯಸಿದ್ದರು. ಆದರೆ ಲಲಿತ ಬರುವುದಿಲ್ಲವೆಂದಾಗ ಅವರ ಉತ್ಸಾಹದ ಮೇಲೆ ತಣ್ಣೀರೆರಚಿದ ಹಾಗಾಯಿತು. ಸಂಭ್ರಮದಿಂದ ಕರೆಯಲು ಬಂದಿದ್ದವರು ನಿರಾಶೆಯಿಂದ ಹಿಂತಿರುಗಿದ್ದರು. ಅವರಿಗೆ ಒಮ್ಮೆಯೇ ಅಚ್ಚರಿ ಅಸಮಾಧಾನಗಳು ಉಂಟಾಗಿದ್ದವು.

ಹಾಗಾಗುವುದೆಂದು ಲಲಿತನಿಗೂ ಗೊತ್ತಿತ್ತು. ಆದರೆ ಬೇರೆ ಉಪಾಯವಿರಲಿಲ್ಲ.

ಗಾಳೀ ಸಂಚಾರಕ್ಕೆ ಹೋಗಿದ್ದ ನಟರಾಜ ಅಯ್ಯರರು ಮನೆಗೆ ಹಿಂತಿರುಗಿದಾಗ ರುಕ್ಮಿಣೀದೇವಿ ಬಂದಿದ್ದ ವಿಷಯ ಗೊತ್ತಾಯಿತು. ಸಮಾಚಾರ ತಿಳಿದುಕೊಳ್ಳುವ ಕುತೂಹಲದಿಂದ ಅವರು ಮಗಳ ರೂಮಿಗೆ ಹೋದರು. ಆರಾಮ ಕುರ್ಚಿಯ ಮೇಲೆ ಮಲಗಿ, ಕೈಯಲ್ಲಿ ಹಿಡಿದಿದ್ದ ಪುಸ್ತಕದ ಹಾಳೆಗಳನ್ನು ಸುಮ್ಮನೆ ತಿರುವಿಹಾಕುತ್ತಿದ್ದ ಲಲಿತ ತಂದೆ ಒಳಗೆ ಬಂದದ್ದನ್ನು ಕಂಡು ಎದ್ದು ಕುಳಿತಳು.

" ಏನು ಲಲಿತಾ, ರುಕ್ಮಿಣೀದೇವಿ ಬಂದಿದ್ದರಂತೆ ?"

" ಹೌದು, ಬಂದಿದ್ದರು."

" ಏನು ಸಮಾಚಾರ ?"

" ಕಲಾಕ್ಷೇತ್ರದಲ್ಲಿ ನಾಟ್ಯ ಇದೆಯಂತೆ."

" ನಿನ್ನನ್ನೂ ಕರೆದರೇನು ?"

" ಹೌದು."

" ಹೋಗಿಬಿಟ್ಟು ಬಾ, ಚೆನ್ನಾಗಿರತ್ತೆ."

ಎಂದು ಉತ್ಸಾಹದಿಂದ ನುಡಿದರು. ಲಲಿತ ಸುಮ್ಮನಿದ್ದಳು. ಅವರಿಗಿದ್ದ ಆಸಕ್ತಿ ಅವಳಿಗಿರಲಿಲ್ಲ.

" ಏತಕ್ಕೆ ? ಹೋಗುವುದಿಲ್ಲವೆ ?"

" ಇಲ್ಲ, ಬರುವುದಿಲ್ಲವೆಂದು ಹೇಳಿ ಕಳಿಸಿದೆ."

" ಅವರಿಗೇ ಹಾಗೆ ಹೇಳಿ ಕಳಿಸಿದೆಯಾ ?"

ಲಲಿತ ಸುಮ್ಮನೆ ತಲೆ ಹಾಕಿದಳು. ಅಯ್ಯರರ ಹುಬ್ಬು ಅಸಮಾಧಾನ ದಿಂದೆನ್ನುವಂತೆ ಗಂಟಿಕ್ಕಿತು.

" ಹಾಗೆ ಹೇಳಬಾರದಾಗಿತ್ತು. ಒಂದು ಹೆಜ್ಜೆ ಹೋಗಿ ಬರುವುದಕ್ಕೇನು ಕಷ್ಟ? ಅವರು ನಿನ್ನ ಹಿಂದಿನ ಗುರುವಲ್ಲವೆ ? ಅವರ ಮಾತಿಗೆ ಅಷ್ಟು ಗೌರವ ಬೇಡವೆ ?"

ಲಲಿತ ಉತ್ತರ ಕೊಡಲಿಲ್ಲ. ತಲೆ ತಗ್ಗಿಸಿ ಸುಮ್ಮನೆ ಕುಳಿತಿದ್ದಳು.

" ಏತಕ್ಕೆ ಹೋಗುವುದಿಲ್ಲ? ಮೈಯಲ್ಲಿ ಸ್ವಸ್ಥವಿಲ್ಲವೇನು ?"

" ಇದೆ."

" ಮತ್ತೆ ?"

" ಏನೋ ಬೇಕಾಗಲಿಲ್ಲ."

" ಬೇಕಾಗಲಿಲ್ಲ ಎಂದರೇನರ್ಥ ?"

ಲಲಿತ ಸುಮ್ಮನಿದ್ದಳು. ಅವಳ ಕೈಬೆರಳುಗಳು ತೊಡೆಯ ಮೇಲಿದ್ದ ಪುಸ್ತಕದ ಹಾಳೆಗಳನ್ನು ಅನ್ಯೈಚ್ಛಿಕವಾಗಿ ತಿರುವಿ ಹಾಕುತ್ತಿದ್ದವು. ದೃಷ್ಟಿ ಪುಟ ದಿಂದ ಪುಟಕ್ಕೆ ಅರ್ಥವಿಲ್ಲದೆ ಹಾರುತ್ತಿತ್ತು. ಮಗಳ ಮೌನ ಅಯ್ಯರರಿಗೆ ಹಿತ ವೆನ್ನಿಸಲಿಲ್ಲ. ಅವಳ ರೀತಿ ನೋಡಿ ಅವರಿಗೂ ಬೇಸರವಾಯಿತೇನೋ.

" ನಿನ್ನ ಇಷ್ಟ ಬಂದಹಾಗೆ ಮಾಡಿಕೋ. ನಿನಗೆ ಹೇಳುವರಾರು ?"

ಎಂದು ನುಡಿದು ಅಲ್ಲಿ ನಿಲ್ಲದೆ ಹೊರಟುಹೋದರು. ಯಜಮಾನರು ಮಗಳ ಹತ್ತಿರ ಮಾತಾಡುತ್ತಿದ್ದುದನ್ನು ಕಂಡು ಲಲಿತನ ರೂಮಿಗೆ ಬರುತ್ತಿದ್ದ ಮೀನಾಕ್ಷಮ್ಮನವರು ಅಯ್ಯರರು ತಮ್ಮ ರೂಮಿಗೆ ಹೋದುದನ್ನು ನೋಡಿ ಅವರನ್ನು ಹಿಂಬಾಲಿಸಿದರು.

"ಕೇಳಿದೆಯಾ, ನಿನ್ನ ಮಗಳು ಕೊಟ್ಟ ಉತ್ತರವನ್ನ?"

ಎಂದು ಅಯ್ಯರರು ಸ್ವಲ್ಪ ಅಸಮಾಧಾನದಿಂದಲೇ ನುಡಿದರು.

"ಇಲ್ಲ, ಏನೆಂದಳು?"

"ಅನ್ನುವುದೇನು, ನಾಟ್ಯಕ್ಕೆ ಹೋಗುವುದಿಲ್ಲವಂತೆ."

"ಹೋಗಲಿ ಬಿಡಿ. ಅವಳನ್ನೇಕೆ ಬಲವಂತ ಮಾಡುತ್ತೀರಿ. ಮೈ ಸ್ವಸ್ಥ ವಾಗಿಲ್ಲವೋ ಏನೋ."

"ಸ್ವಸ್ಥವಾಗಿಲ್ಲದೆ ಏನು ಗುನುಗು? ಹೋಗುವುದಕ್ಕೆ ಇಷ್ಟವಿಲ್ಲವಂತೆ."

"ಏತಕ್ಕೆಂದು ಕೇಳಿದಿರಾ?"

"ನಿನ್ನ ಮುಂದೆಯೇ ಹೇಳದಿದ್ದವಳು ನನಗೆ ಹೇಳುತ್ತಾಳೆಯೆ?"

"ಏನೋ ಅವಳ ರೀತಿಯೇ ಈಚೆಗೆ ಒಂದು ತರಹ ಆಗಿದೆ."

"ಏನು ತರಹವೋ, ನನಗಂತೂ ಅರ್ಥವಾಗುವುದಿಲ್ಲ"

ಎನ್ನುತ್ತ ನಟರಾಜ ಅಯ್ಯರರು ಸೋಫಾದ ಮೇಲೆ ಕುಕ್ಕರಿಸಿಕೊಂಡರು. ಮೀನಾಕ್ಷಮ್ಮನವರೂ ಮರುನುಡಿಯದೆ ಪಕ್ಕದ ಕುರ್ಚಿಯಲ್ಲಿ ಕುಳಿತರು. ಇಬ್ಬರ ಮನಸ್ಸನ್ನೂ ಅಸ್ಪಷ್ಟವಾದ ದುಗುಡ ಆವರಿಸಿತ್ತು.

ಲಲಿತನ ಸ್ವಭಾವದಲ್ಲಿ ವ್ಯತ್ಯಾಸವಾಗಿದ್ದುದು ನಿಜ. ಅದನ್ನು ಈಚೆಗೆ ಅವರೂ ಗಮನಿಸಿದ್ದರು. ನಾಟ್ಯದಲ್ಲಿ ಅವಳಿಗೆ ಮೊದಲಿನ ಉತ್ಸಾಹವಿರಲಿಲ್ಲ. ಅದೊಂದರಲ್ಲೇ ಏಕೆ, ಇತರ ಯಾವ ವಿಷಯದಲ್ಲಿಯೂ ಅವಳಿಗೆ ಆಸ್ಥೆ ಇದ್ದಂತಿರ ಲಿಲ್ಲ. ಅವಳ ಉತ್ಸಾಹಹೀನತೆಯನ್ನು ಅಯ್ಯರರೇ ಎರಡು ಮೂರು ಸಂದರ್ಭ ಗಳಲ್ಲಿ ಗಮನಿಸಿದ್ದರು. ಮದರಾಸಿನಲ್ಲಿ ಎಲ್ಲಿ ಒಂದು ಸಂಗೀತವಾಗಲಿ, ನೃತ್ಯ ವಾಗಲಿ ಅಲ್ಲಿಗೆ ತಪ್ಪದೆ ತಂದೆ ಮಗಳು ಹೋಗುತ್ತಿದ್ದುದು ಮೊದಲಿನಿಂದಲೂ ಬಂದ ರೂಢಿಯಾಗಿತ್ತು. ಬಾಲ್ಯದಲ್ಲಿಯೇ ಮಗಳಲ್ಲಿ ನೈಸರ್ಗಿಕವಾಗಿ ಚಿಗುರಿದ್ದ ಕಲಾವಂತಿಕೆಯನ್ನು ಅಯ್ಯರರು ತಮ್ಮ ಅಭಿಮಾನದ ಜಲವೆರೆದು ಪೋಷಿ ಸಿದ್ದರು. ಅವಳ ಮನಸ್ಸು ನಾಟ್ಯದ ಕಡೆ ಸಹಜವಾಗಿಯೇ ಹೊರಳಿದಾಗ

ಅವಳ ಬೆನ್ನುತಟ್ಟಿ ಹುರಿದುಂಬಿಸಿದ್ದರು. ಹೊರಗಡೆಯ ಊರಿನಲ್ಲಿ ಮಗ
ಳನ್ನಿಟ್ಟು ನಾಟ್ಯಶಿಕ್ಷಣ ಕೊಡಿಸುವ ವೆಚ್ಚವನ್ನು ಲೆಕ್ಕಿಸದೆ ಅವಳನ್ನು ಪಂ
ನಲ್ಲೂರಿಗೆ ಕಳಿಸಿದ್ದರು. ಲಲಿತ ಶಿಕ್ಷಣ ಮುಗಿಸಿಕೊಂಡು ಹಿಂತಿರುಗಿದಾ
ಅಯ್ಯರರಿಗೆ ಚತುರ್ಭುಜವಾಗಿತ್ತು.

ಆದರೆ ಉತ್ಸಾಹದ ಊಟೆಯಂತೆ ಕುಣಿಯುತ್ತಿದ್ದ ಲಲಿತನಲ್ಲಿ ಇದ್ದಕ್ಕಿ
ಹಾಗೆ ಆದ ಬದಲಾವಣೆಯನ್ನು ಕಂಡು ಅಯ್ಯರರು ಚಕಿತರಾದರು. ಯಾವು
ಕ್ಕಾಗಿ ಅವಳು ಹಗಲಿರುಳೂ ಸಂಭ್ರಮಪಡುತ್ತಿದ್ದಳೋ ಆ ಕಲೆಯ ವಿಚಾರದ
ಅವಳಿಗೆ ಮೂಡಿದ್ದ ಅನಾಸಕ್ತಿಯನ್ನು ಗಮನಿಸಿ ಅವರಿಗೆ ಅಚ್ಚರಿಯಾಯಿತು
ಅದಕ್ಕೆ ಕಾರಣವಂತೂ ಅವರಿಗೆ ಅರ್ಥವಾಗಿರಲಿಲ್ಲ. ಅವಳ ಈ ಪ್ರವೃತ್ತಿ
ಅವರಿಗೆ ಬಿಡಿಸಲಾಗದ ಒಂದು ಸಮಸ್ಯೆಯಾಗಿತ್ತು.

ಹಿಂದೊಂದು ದಿನವೂ ಹೀಗೆಯೇ ಆಗಿತ್ತು—

ಅಂದು ಗೋಖಲೆ ಹಾಲಿನಲ್ಲಿ ಹೀರಾಬಾಯಿ ಬರೋಡಕರರ ಗಾಯನ
ವಿತ್ತು. ಬೆಳಗ್ಗೆ ಆ ಕಡೆ ಹೋಗಿದ್ದ ಅಯ್ಯರರು ಸಂಜೆ ಹೆಂಡತಿ ಮಗಳನ್ನು
ಸಂಗೀತಕ್ಕೆ ಕರೆದೊಯ್ಯಲು ನಿರ್ಧರಿಸಿ ಹತ್ತು ರೂಪಾಯಿಯ ಮೂರು ಟಿಕೆಟ
ಗಳನ್ನು ಕೊಂಡು, ಸ್ಥಳ ರಿಸರ್ವ್ ಮಾಡಿಸಿ ಬಂದಿದ್ದರು. ಹೀರಾಬಾಯಿಯ
ಹಾಡಿಕೆಯೆಂದರೆ ಅವರಿಗೆ ತುಂಬ ಇಷ್ಟ. ಆಕೆಯ ಗಾಯನ ಮಗಳಿಗೂ ಇಷ್ಟ
ವೆಂದು ಅವರಿಗೆ ಗೊತ್ತಿತ್ತು. ಅಂತೆಯೆ ಅವರು ಟಿಕೆಟುಗಳನ್ನು ಕೊಂಡು
ಉತ್ಸಾಹದಿಂದ ಮನೆಗೆ ಬಂದಿದ್ದರು. ಡ್ರಾಯಿಂಗ್ ರೂಮಿನಲ್ಲಿ ತಾಯಿ-
ಮಗಳು ಕುಳಿತಿದ್ದುದನ್ನು ನೋಡಿ ಅಯ್ಯರರು ತಾವು ತಂದಿದ್ದ ಟಿಕೆಟುಗಳನ್ನು
ಲಲಿತನ ಮುಂದೆ ಟೀಪಾಯ್ ಮೇಲಿಟ್ಟು ಕೋಟಿನ ಗುಂಡಿ ಬಿಚ್ಚುತ್ತ,

"ಇವತ್ತು ಹೀರಾಬಾಯಿ ಬರೋಡಕರ್ ಸಂಗೀತ, ಲಲಿತ."

"ಎಲ್ಲಿ ?"

ಕೇಳಿದವರು ಮೀನಾಕ್ಷಮ್ಮ; ಲಲಿತ ಅಲ್ಲ. ಅಯ್ಯರರು ಮಗಳ ಕಡೆ
ನೋಡಿಯೇ ಆ ಮಾತು ಆಡಿದ್ದರು. ಆದರೆ ಅವಳು ಆ ಮಾತು ತನ್ನ ಕಿವಿಯ
ಮೇಲೆಯೇ ಬೀಳದಂತೆ ಸುಮ್ಮನೆ ಕುಳಿತಿದ್ದಳು.

"ಕೇಳಿಸಲಿಲ್ಲವೆ ಲಲಿತ ನಾನು ಹೇಳಿದ್ದು ?"

"ಕೇಳಿಸಿತು."

"ಸಂಗೀತಕ್ಕೆ ಬರುವುದಿಲ್ಲವೇನು?"

"ಇಲ್ಲ."

ಆ ಉತ್ತರ ಕೇಳಿ ಅವರಿಗೆ ಆಶ್ಚರ್ಯವಾಯಿತು. ಲಲಿತ ಹಿಂದೆಂದೂ ಹಾಗೆ ಉತ್ತರ ಕೊಟ್ಟಿರಲಿಲ್ಲ.

"ಟಿಕೆಟ್ ತಂದುಬಿಟ್ಟಿದ್ದೇನಲ್ಲಾ."

"ನೀವು ಅಮ್ಮ ಹೋಗಿ ಬನ್ನಿ."

"ನಾನೂ ಅವಳೂ ಹೋಗುವುದಕ್ಕೆ ಅವಸರವಾಗಿತ್ತೇನು?"

ಲಲಿತ ಉತ್ತರ ಕೊಡಲಿಲ್ಲ. ಕಿಟಕಿಯಿಂದಾಚೆ ನೋಡುತ್ತ ಸುಮ್ಮನೆ ಕುಳಿತಿದ್ದಳು. ಅವಳ ಅಲಕ್ಷ್ಯ ನೋಡಿ ಅಯ್ಯರರಿಗೆ ಬೇಸರವಾಯಿತು. ಮಾತು ಬೆಳಸಲಿಷ್ಟವಿಲ್ಲದೆ ಸುಮ್ಮನೆ ತಮ್ಮ ರೂಮಿಗೆ ಹೋಗಿಬಿಟ್ಟರು.

"ಏಕೆ ಲಲಿತ ಮೈ ಸರಿಯಾಗಿಲ್ಲವೆ, ತಾಯಿ?"

ಎಂದು ಮೀನಾಕ್ಷಮ್ಮನವರು ಅನುನಯದಿಂದ ಕೇಳಿದರು.

"ಇದೆ, ಏನೋ ಬೇಕಿಲ್ಲ"

ಎನ್ನುತ್ತ ಎದ್ದು ತನ್ನ ರೂಮಿಗೆ ಹೊರಟುಹೋದಳು.

"ನಾಟ್ಯ ಸಂಗೀತ ಬೇಕಾಗಿರುವುದು ನಿನಗೆ, ನಮಗಲ್ಲ. ನೋಡುವ ಹುಡುಗಿ ನಿನಗೇ ಬೇಡವಾದರೆ ನಾವು ಹೋಗಿ ಏನು ಮಾಡಬೇಕಾಗಿದೆ?"

ಎಂದುಕೊಂಡು ಮೀನಾಕ್ಷಮ್ಮನವರು ತಮ್ಮ ಕೆಲಸಕ್ಕೆ ತಾವು ಹೊರಟು ಹೋದರು.

ಅಂದು ಹಾಗಾಗಿತ್ತು; ಇಂದು ಹೀಗೆ. ಲಲಿತನ ಮನಸ್ಸಿನಲ್ಲಿ ಏನಿದೆ ಯೆನ್ನುವುದನ್ನು ತಿಳಿಯಲು ಅಯ್ಯರರಿಗಾಗಲಿ, ಮೀನಾಕ್ಷಮ್ಮನವರಿಗಾಗಲಿ ಶಕ್ಯವಿರಲಿಲ್ಲ. ಅವಳ ವರ್ತನೆಯಿಂದ ಅವರಿಬ್ಬರೂ ಮನಸ್ಸು ಚಿಕ್ಕದುಮಾಡಿ ಕೊಂಡಿದ್ದರು.

ಹಾಗಾಗುವುದೆಂದು ಲಲಿತನಿಗೂ ಗೊತ್ತಿತ್ತು. ಆದರೆ ಅವಳ ಬಳಿ ಅದಕ್ಕೆ ಪರಿಹಾರವಿರಲಿಲ್ಲ.

ಮೈಸೂರಿನಿಂದ ಬಂದ ಮೇಲೆ ಅವಳ ಸ್ಥಿತಿಯೇ ಬದಲಾಯಿಸಿತ್ತು. ನವರಾತ್ರಿಯ ನೋಟ ನೋಡಲು ಎಷ್ಟು ಸಂಭ್ರಮದಿಂದ ಹೋಗಿದ್ದಳೋ ಅಷ್ಟೂ ಅಷ್ಟು ಖಿನ್ನಳಾಗಿ ಹಿಂತಿರುಗಿದ್ದಳು. ತಂದೆ ತಾಯಿಗಳಿಗೆ ಅದೊಂದು

ಬರಿಯ ನೋಟದ ಪ್ರವಾಸ ಮಾತ್ರ ಆಗಿತ್ತು. ಆದರೆ ಅವಳ ಭಾಗಕ್ಕೆ ಆಗಿದ್ದ ಅನುಭವವೇ ಬೇರೆ. ಅದು ಒಂದು ಜೀವಮಾನದಲ್ಲಿ ಮರೆಯುವಂಥ ಅನುಭವ ವಲ್ಲ. ಮಧುಸೂದನನ ಜೊತೆಗೂಡಿ ಓಡಾಡಿದ ಆ ನಾಲ್ಕಾರು ದಿನಗಳು ಸುಂದರ ವಾದ ಕನಸಿನ ಕಲ್ಪನೆಯ ದಿನಗಳಂತೆ ಅವಳ ಸ್ಮೃತಿಪಥದಲ್ಲಿ ಸುಳಿದು ಹೋದವು. ಒಂದು ವಾರ ಎಷ್ಟು ಬೇಗ ಕಳೆದುಹೋಗಿತ್ತು. ಆ ರಸನಿಮಿಷಗಳ ಅನುಭವ ಅವಳೆದೆಯಲ್ಲಿ ಮತ್ತೊಮ್ಮೆ ಗರಿಗೆದರಿ ಅವಳ ಮೈ ಕಂಪಿಸಿತು.

ತೊಡೆಯ ಮೇಲೆ ಪುಸ್ತಕವಿಟ್ಟುಕೊಂಡು ಶೂನ್ಯದೃಷ್ಟಿಯಿಂದ ಅದನ್ನೇ ನೋಡುತ್ತಿದ್ದ ಲಲಿತನ ಕಣ್ಣು ಕಿಟಕಿಯಿಂದಾಚೆ ಕಾಣುತ್ತಿದ್ದ ತೋಟದ ಕಡೆ ಹರಿಯಿತು. ಜೀವಕ್ಕೆ ಹಿತವಾದ ತಣ್ಣನೆಯ ಗಾಳಿಯಲ್ಲಿ ಮಲ್ಲಿಗೆಯ ಬಳ್ಳಿ ಮೆಲ್ಲನೆ ತೂಗುತ್ತಿತ್ತು. ಜಾಜಿ ಅದರೊಡನೆ ಸ್ಪರ್ಧಿಸುತ್ತಿತ್ತು. ಮುಡಿಯಲು ಯೋಗ್ಯವಾದ ಹೂಗಳನ್ನು ಒಡಲಲ್ಲಿ ಹೊತ್ತಿದ್ದ ಗುಲಾಬಿಯ ಗಿಡ ನಿಂತೆಡೆ ಯಿಂದಲೇ ತನ್ನ ಚೆಲುವನ್ನೆರಚುತ್ತಿತ್ತು. ಯಾವ ಅಂಕೆಯೂ ಇಲ್ಲದೆ ಅವುಗಳ ನಡುವೆ ಸುತ್ತಿ ಸುಳಿಯುತ್ತಿದ್ದ ತಂಗಾಳಿ ಆ ಎಲ್ಲ ಸೌರಭವನ್ನೂ ಕದ್ದು ಓಡು ತ್ತಿತ್ತು. ತೋಟದ ಮಧ್ಯೆ ಇದ್ದ ಪುಟ್ಟ ಕಾರಂಜಿ ನಿರಂತರವಾಗಿ ಜಲಧಾರೆ ಸೂಸುತ್ತ ಸುತ್ತಣ ಗಾಳಿಗೆ ತಂಪೆರೆಯುತ್ತಿತ್ತು.

ಈ ತಂಗಾಳಿ, ತರುಲತೆಗಳ ಈ ಸ್ವಚ್ಛಂದ ನೃತ್ಯ, ಮನಮುಟ್ಟುವ ಈ ಸೌರಭ—

ಲಲಿತನ ಹೃದಯದಲ್ಲಿ ನೆನಪು ಉಜ್ವಲಿಸಿ ಅದರ ಹಿಂದೆಯೇ ವೇದನೆ ಮರುಕೊಳಿಸಿತು. ಅಂದು ಬೃಂದಾವನದ ಲತಾಗೃಹದಲ್ಲಿ ಮಧುಸೂದನ ಅವಳನ್ನು ಎದೆಗಪ್ಪಿಕೊಂಡು ಮುದ್ದಿಸಿದಾಗ ತಂಗಾಳಿ ಹೀಗೆಯೇ ಅವರ ಸುತ್ತ ಹರಿದಾಡುತ್ತ ಗಿಡಮರಗಳ ಜೊತೆಯಲ್ಲಿ, ಹರಿಯುವ ನೀರಿನೊಡನೆ ಕೇಳಿ ಯಾಡಿತ್ತು. ಪುನಃ ಅವರು ಒಬ್ಬರನ್ನೊಬ್ಬರು ಅಗಲುವ ಮುನ್ನ ಶಿವ ಸಮುದ್ರದಲ್ಲೊಂದು ಗಳಿಗೆ ಕೂಡಿದ್ದಾಗಲೂ ಗಾಳಿ ಹೀಗೆಯೇ ಅವರನ್ನು ಸುತ್ತುವರಿದಿತ್ತು. ಭೋರ್ಗರೆಯುತ್ತಿದ್ದ ನೀರಿನ ತುಂತುರುಗಳು ಅವರ ಮೈ ಮುಖಗಳ ಮೇಲೆ ಹಾರುತ್ತಿದ್ದವು. ಪ್ರಕೃತಿಯೇ ಅವರ ಆ ಪ್ರೇಮಕ್ಕೆ ಸಾಕ್ಷಿ ಯಾಗಿ ನೋಡುತ್ತ ನಿಂತಿತ್ತು. ಕೊನೆಯ ಗಳಿಗೆ ಬಳಿಸಾರಿದಾಗ ಅವನೂ ಉದ್ವೇಗಗೊಂಡು ದುಃಖವಿಹ್ವಲಳಾದ ಅವಳನ್ನಪ್ಪಿ ಸಂತೈಸಿದ್ದ.

"ಹತಾಶಳಾಗಬೇಡ ಚಿನ್ನಾ. ಏನಾದರೊಂದು ಉಪಾಯ ಯೋಚಿಸೋಣ, ಸುಮ್ಮನಿರು"

ಎಂದು ಧೈರ್ಯ ಹೇಳಿದ್ದ. ಆ ಮಾತನ್ನು ಆಗ ಅವಳು ನಿಜವೆಂದು ನಂಬಿದ್ದಳು.

"ನೀವು ಗಂಡಸರು. ಹತ್ತು ಕೆಲಸದಲ್ಲಿ ಹೇಗಾದರೂ ಮರೆತುಬಿಡುತ್ತೀರಿ"

ಎಂದು ಅವಳು ನುಡಿದಿದ್ದಳು.

"ನಿನ್ನನ್ನು ಮರೆಯುವುದು ಅಷ್ಟು ಸುಲಭವೆಂದು ತಿಳಿದೆಯಾ, ಲಲಿತ?"

ಎಂದು ಒಂದೇ ಮಾತಿನಲ್ಲಿ ಅವಳ ಸಂಶಯವನ್ನು ಪರಿಹರಿಸಿಬಿಟ್ಟಿದ್ದ.

ಇಂದು ಆ ಪ್ರೇಮಕ್ಕೇನಾಯಿತು? ಆ ಭರವಸೆ, ಆ ಸಂಕಲ್ಪ, ಆ ದೀಕ್ಷೆ ಎಲ್ಲಿ ಕರಗಿಹೋದವು?

ಲಲಿತನ ಕಣ್ಣು ಕಂಬನಿದುಂಬಿ ತೊಟತೊಟನೆ ನಾಲ್ಕೈದು ಹನಿಗಳು ಕೆಳಗುರುಳಿದವು. ಅವಳ ಭಾಗಕ್ಕೆ ಪ್ರಪಂಚ ಶೂನ್ಯವಾಗಿತ್ತು. ಅವಳು ಕಾಣುತ್ತಿದ್ದ ಕಲ್ಪನೆಯ ಕನಸು, ಕಟ್ಟುತ್ತಿದ್ದ ಮನೋಮಂದಿರ ನಿಂತ ಹಾಗೆಯೇ ಕುಸಿದಿದ್ದವು.

ಮಧುಸೂದನ ಅವಳನ್ನು ನಂಬಿಸಿ ಮೋಸಮಾಡಿದ್ದನೆ?

ಹಾಗೆಂದು ನಂಬುವುದಕ್ಕೂ ಅವಳಿಗೆ ಸಾಧ್ಯವಿರಲಿಲ್ಲ. ಹಿಂದೊಮ್ಮೆ ಅವನ ಪ್ರಣಯದಲ್ಲಿ ಸಂಶಯ ಬಂದಿತ್ತು, ನಿಜ. ಆದರೆ ಆ ಶಂಕೆ ಬಂದಂದೇ ಅದರ ಕಾಳಿಕೆಯೂ ಕಳೆದುಹೋಗಿತ್ತು. ತನ್ನಲ್ಲಿ ಮೂಡಿದ್ದ ಅವನ ಪ್ರೇಮ ಚೊಕ್ಕ ಬಂಗಾರವೆನ್ನುವ ನಂಬಿಕೆ ಅವಳಿಗೆ ಬಂದಿತ್ತು. ಅದರಲ್ಲಿ ಅನುಮಾನಕ್ಕೆ ಆಸ್ಪದವೇ ಇರಲಿಲ್ಲ. ಹಾಗಾದರೆ ಅವನ ಒಲುಮೆಗೆ ಏನು ಅಡ್ಡಿ ಬಂದಿತು? ಯಾವುದು ಅವನ ಕೈಹಿಡಿಯಿತು?

ಮೂರು ತಿಂಗಳಿಂದಲೂ ಅವನಿಂದ ಒಂದು ಕಾಗದವೂ ಬಂದಿರಲಿಲ್ಲ. ಅವಳು ಮೈಸೂರಿನಿಂದ ಹಿಂತಿರುಗಿದ ಮೇಲೆ ಒಂದೇ ಒಂದು ಕಾಗದ ಬಂದಿತ್ತು. ಅದರಲ್ಲಿ ಮುಂಬಯಿಯಲ್ಲಿ ಕಚೇರಿ ಏರ್ಪಾಡಾಗಿದ್ದ ಸಮಾಚಾರ ತಿಳಿಸಿದ್ದ. ಅಲ್ಲಿಂದ ಹಿಂತಿರುಗಿದ ಮೇಲೆ ಮತ್ತೆ ಬರೆಯುವುದಾಗಿ ಭರವಸೆಯನ್ನೂ ನೀಡಿದ್ದ. ಒಂದು ವಾರದ ತರುವಾಯ ನಟರಾಜ ಅಯ್ಯರರಿಗೆ ಮೈಸೂರಿ

ನಿಂದೊಂದು ಕಾಗದ ಬಂದಿತ್ತು. ಆದರೆ ಅದು ಮಧುಸೂದನನದಲ್ಲ, ಸುಬ್ಬ ಕೃಷ್ಣನದು. ಅದರಿಂದ ವೆಂಕಮ್ಮನವರು ಮೃತರಾದ ಸಂಗತಿ ತಿಳಿದುಬಂದಿತ್ತು. ಅವರು ಸಮಾಧಾನದ ಮಾತುಗಳನ್ನು ಬರೆದು, ಉಪಚಾರವಾಗಿ ಒಂದು ಕಾಗದ ಬರೆದು ಹಾಕಿದ್ದರೇನೋ. ಅದರ ವಿವರ ಅವಳಿಗೆ ಗೊತ್ತಿರಲಿಲ್ಲ. ಆಮೇಲೆಯೂ ಅವರು ಅವನಿಗೆ ಒಂದೆರಡು ಕಾಗದಗಳನ್ನು ಬರೆದಿದ್ದಾರು. ಅದು ಯಾವುದಕ್ಕೂ ಉತ್ತರ ಬಂದಂತಿರಲಿಲ್ಲ. ಅವಳಿಗಂತೂ ಕಾಗದವೇ ಬಂದಿರಲಿಲ್ಲ. ಕೊನೆಗೆ, ವೆಂಕಮ್ಮನವರು ಕಾಲವಾದ ಮೇಲೆ ಒಂದು ತಿಂಗಳು ಬಿಟ್ಟು ಅವಳು ಹಾಕಿದ್ದ ಕಾಗದಕ್ಕೂ ಉತ್ತರ ಬಂದಿರಲಿಲ್ಲ.

ಲಲಿತನಿಗೆ ಏನೊಂದೂ ಅರ್ಥವಾಗದೆ ಮನಸ್ಸಿಗೆ ವ್ಯಾಕುಲವಾಗಿತ್ತು.

ತಾಯಿಯ ಮರಣದ ಶೋಕ ಮಧುಸೂದನನನ್ನು ಕರ್ತವ್ಯಮೂಢ ನನ್ನಾಗಿ ಮಾಡಿತ್ತೆ? ಸ್ವಲ್ಪಕಾಲ ಮಾಡಿರಬಹುದು. ಆದರೆ ಅಚ್ಚಳಿಯದ ಆ ಪ್ರೇಮಕ್ಕೇನಾಯಿತು? ಅದು ಹಾಗೆಯೇ ಮುರುಟಿತೆ? ತನ್ನನ್ನು ನೋಡ ಬೇಕೆನ್ನುವ ಹಂಬಲವೂ ಅವನಿಗೆ ಹುಟ್ಟಲಿಲ್ಲವೆ? ಆಗಲಿಕೆ ಅವನಿಗೆ ಹಿತ ವಾಗಿತ್ತೆ? ಒಂದು ಕಾಗದ ಹಾಕುವಷ್ಟೂ ಕರುಣೆ ಬರಲಿಲ್ಲವೆ? ತನಗೆ ತಿಳಿ ಯದೆ ತನ್ನಿಂದೇನಾದರೂ ಅಪಚಾರವಾಗಿತ್ತೆ? ಅಥವಾ ತಂದೆಯಿಂದ ಆಗಿರ ಬಹುದೋ?

ಲಲಿತನ ಬುದ್ಧಿ ಯೋಚನೆಯಲ್ಲಿ ನೆಲೆತಪ್ಪಿ ಸುತ್ತತೊಡಗಿತು. ಒಂದು ಗಳಿಗೆ ಅವಳು ವಿವೇಕಶೂನ್ಯಳಾಗಿ ಕುಳಿತಳು.

ತಂದೆಯಿಂದ ಆಗಿರಬಹುದೇ?—

ಅವರಿಂದ ಅವನಿಗೆ ಯಾವ ರೀತಿಯಲ್ಲಿ ಅಪಚಾರವಾಗಿದ್ದೀತು? ಅವಳು ಬರಿಯ ಊಹೆ ಮಾಡಬಹುದಾಗಿತ್ತೇ ಹೊರತು ಸ್ಪಷ್ಟವಾಗಿ ನಿರ್ಧರಿಸಿ ಹೇಳುವ ಹಾಗಿರಲಿಲ್ಲ. ನಟರಾಜ ಅಯ್ಯರರಿಂದ ಮಧುಸೂದನನಿಗೆ ಯಾವ ಅಪಚಾರವೂ ಆಗುವುದಕ್ಕೆ ಕಾರಣವಿರಲಿಲ್ಲ. ಅವನ ವಿಷಯದಲ್ಲಿ ಅವರಿಗೆ ಗೌರವ ವಿಶ್ವಾಸ ಗಳೇ ಇದ್ದವು. ಮೈಸೂರಿನಿಂದ ಬಂದ ಮೇಲಂತೂ ಮಧುಸೂದನ ಎಂದರೆ ಅವರ ಮುಖ ಅರಳುತ್ತಿತ್ತು. ಅವನ ಸೌಜನ್ಯದ ಸವಿಯನ್ನುಂಡ ಅವರ ಮನಸ್ಸು ಬೇರೆ ಬಗೆಯಲು ಸಾಧ್ಯವೇ ಇರಲಿಲ್ಲ. ಅದನ್ನವಳು ಸೂಕ್ಷ್ಮವಾಗಿ ಗ್ರಹಿಸಿದ್ದಳು.

ಆದರೆ ತಂದೆಗೆ ಅರಿವಿಲ್ಲದೆಯೆ ಅವರಿಂದ ಏನಾದರೂ ಆಗಿದ್ದಿದ್ದರೆ? ಅವರು ಏನಾದರೂ ಬರೆದಿದ್ದರೆ?—

ಏನು ಬರೆದಿರಬಹುದು? ಏನೆಂದು ಬರೆದಿದ್ದಾರು? ತಮ್ಮಿಬ್ಬರ ನಡುವೆ ಮೂಡಿದ್ದ ಪ್ರಣಯವನ್ನು ಕುರಿತೇನಾದರೂ ಅವನಿಗೆ ಎಚ್ಚರಿಸಿ ಬರೆದಿದ್ದರೆ? ಅದರಿಂದ ಅವನಿಗೆ ಕೋಪ ಬಂದಿತ್ತೆ? ಅವಳಿಗೆ ತಿಳಿದ ಮಟ್ಟಿಗೆ ಆ ಸಂಭವ ಇರಲಿಲ್ಲ. ಏಕೆಂದರೆ, ಅವರಿಬ್ಬರ ಒಲುಮೆ ಬಹಿರಂಗವಾಗಿರಲಿಲ್ಲ. ಅವರಿಗೆ ಮಾತ್ರವಲ್ಲದೆ ಮತ್ತಾರಿಗೂ ಅದನ್ನು ಊಹಿಸಲೂ ಸಾಧ್ಯವಿರಲಿಲ್ಲ. ಆ ವಿಷಯ ದಲ್ಲಿ ಅವರು ಅಷ್ಟು ಜೋಪಾನವಾಗಿದ್ದರು. ಒಲುಮೆಯ ಉಕ್ಕಿನಲ್ಲಿ ಎಂದೂ ಎಚ್ಚರ ತಪ್ಪಿರಲಿಲ್ಲ. ತಮ್ಮ ಪ್ರಣಯ ಪ್ರಸಂಗ ಇನ್ನೊಬ್ಬರ ಕಿವಿ ಕಣ್ಣುಗಳಿಗೆ ಬೀಳುವಂತೆ ಅವರು ದುಡುಕಿರಲಿಲ್ಲ—

ಮತ್ತೆ? ಅಯ್ಯರರು ಮಧುಸೂದನನಿಗೆ ಬರೆದಿರಬಹುದು, ನಿಜ. ತಮ್ಮ ಪ್ರಣಯವನ್ನಲ್ಲದೆ ಬೇರೆ ವಿಚಾರ ಕುರಿತು ಬರೆದಿರಬಹುದು. ಆ ವಿಚಾರ ಯಾವುದು? ತನ್ನ ಮದುವೆಯ ಪ್ರಸ್ತಾಪವೆ?

ಲಲಿತನ ಮನಸ್ಸಿನ ಒಳ ಪದರದ ಮೂಲೆಯೊಂದರಲ್ಲಿ ತಪ್ಪಿಸಿಕೊಂಡು ಕುಳಿತಿದ್ದ ಯೋಚನೆಯ ತುಣುಕೊಂದು ಇದ್ದಕ್ಕಿದ್ದ ಹಾಗೆ ಮೇಲೆ ತೇಲಿತು. ಪ್ರಯತ್ನಪೂರ್ವಕವಾದ ಅವಳ ಯೋಚನೆ ಅದನ್ನು ಮೇಲಕ್ಕೆತ್ತಿತ್ತು.

ಹೌದು, ಅಂಥದೇನಾದರೊಂದು ನಡೆದಿರಬಹುದು.

ಲಕ್ನೋ ಕಾಲೇಜಿನಲ್ಲಿದ್ದ ಮದರಾಸಿನ ತರುಣ ಪ್ರೊಫೆಸರೊಬ್ಬನ ವಿಚಾರ ವನ್ನು ತಂದೆ ಎಂದೋ ಎತ್ತಿದ ಹಾಗೆ ಜ್ಞಾಪಕವಿತ್ತು. ಅವರು ಆ ವಿಚಾರ ಕುರಿತು ತಾಯಿಯೊಡನೆ ಏನೋ ಮಾತಾಡಿದ್ದು ಅವಳ ಕಿವಿಗೂ ಬಿದ್ದಿತ್ತು. ಅದು ಯಾವುದೋ ಮದುವೆಯ ಸಂಬಂಧದ ಮಾತಿರಬಹುದೆಂದು ಅವಳು ಊಹಿಸಿದ್ದಳೇ ವಿನಾ ಯಾವ ವಿಷಯವೂ ಅವಳಿಗೆ ತಿಳಿದಿರಲಿಲ್ಲ. ಅವರು ಅವಳ ಹತ್ತಿರ ಯಾವ ಸಂಗತಿಯನ್ನೂ ಪ್ರಸ್ತಾಪಿಸಿರಲಿಲ್ಲ. ತನಗೇ ತಿಳಿಯದ ಯಾವುದೋ ಅಸ್ಪಷ್ಟ ಸಂಗತಿಯನ್ನು ಕುರಿತು ಅಯ್ಯರರು ಮಧುಸೂದನನಿಗೆ ಬರೆದಿರಬಹುದೆ? ಪ್ರಾಸಂಗಿಕವಾಗಿ ಏನನ್ನಾದರೂ ಬರೆದು ಅವನ ಮನಸ್ಸು ಕೆಡಲು ಅವರು ಕಾರಣರಾಗಿರಬಹುದೆ?

ಅಂಥ ಘೋರ ಸಂಭವವನ್ನು ಪರಿಭಾವಿಸಿಕೊಂಡು ಅವಳ ಮೈ ನಡುಗಿತು.

ಮಧುಸೂದನನಿಗೆಂದು ಮುಡುಪಿಟ್ಟ ಅವಳ ಒಲುಮೆಯನ್ನು ಬೇರೆ ಜೀವಕ್ಕೆರೆಯುವುದು ಕಲ್ಪನೆಯಲ್ಲೂ ಊಹಿಸದ ವಿಷಯವಾಗಿತ್ತು. ಆದರೆ ಅವನು ಯಾವುದೋ ತಪ್ಪುಗ್ರಹಿಕೆಯಿಂದ ತನ್ನ ಕೈಬಿಟ್ಟರೇನು ಗತಿ? ಅಂಥ ಶಂಕೆ ಬಂದಿದ್ದರೆ ಅವನು ಕಾಗದ ಬರೆದು ಸಂಶಯ ಪರಿಹರಿಕೊಳ್ಳಬಾರದಾಗಿತ್ತೆ? ತನ್ನಲ್ಲೂ ಅವನಿಗೆ ವಂಚನೆಯೆ? ಅಥವಾ ತನ್ನ ಪ್ರೇಮವನ್ನೇ ಪೊಳ್ಳೆಂದು ಬಗೆದು ನಿರಾಶನಾದನೋ?

ಲಲಿತನಿಗೆ ಏನು ಯೋಚಿಸಲೂ ತೋರದೆ ಭಾರವಾದ ಹೃದಯದಿಂದ ಕಂಬನಿದುಂಬಿ ಕುಳಿತಳು.

ಮನಸ್ಸಿನಲ್ಲಿ ಹೊಸ ಆಸೆಗಳು ಮೂಡುತ್ತಿದ್ದಂತೆ ಹೊಸ ಭಯಗಳ ಸಂಚಾರವೂ ಆಗುತ್ತಿತ್ತು. ಒಮ್ಮೆ ಮುಳುಗುತ್ತ ಒಮ್ಮೆ ತೇಲುತ್ತ, ಮುಳುಗಿದಾಗ ಜಲಸಮಾಧಿಯೇ ತನ್ನ ಗತಿಯೆಂದು ತಿಳಿಯುತ್ತ, ಮೇಲೆ ಬಂದಾಗ ಬದುಕಿಯೇನೆಂಬ ಆಸೆ ಮೂಡುತ್ತ, ಸಾವು ಜೀವುಗಳ ಸಂಧಿಯಲ್ಲಿ ತಳಮಳಗೊಳ್ಳುವ ಆರ್ತಜೀವದಂತೆ ಲಲಿತ ತತ್ತರಿಸಿದಳು.

ಆ ವಯಸ್ಸಿಗೇ ಅವಳಿಗೆ ಪ್ರಪಂಚದಲ್ಲಿ ಯಾರೂ ಸಹಿಸಲಾರದ ದುಃಖವನ್ನು ಸಹಿಸಿದ್ದೇನೆನ್ನಿಸಿತು. ಅವಳ ವರ್ತನೆಯಿಂದ ತಂದೆ ತಾಯಿಗಳ ಮನನೊಂದಿತ್ತು, ನಿಜ. ಆದರೆ ಅದು ಅವಳ ಕೈಮೀರಿದ ಸಂಗತಿಯಾಗಿತ್ತು. ಎದೆಯಲ್ಲಿ ಭರಿಸಲಾರದ ದುಃಖವನ್ನು ಹೊತ್ತು ತೋರಿಕೆಯ ಸಂತೋಷದಲ್ಲಿ ಕುಣಿಯುವ ಶಕ್ತಿ ಅವಳಿಗಿರಲಿಲ್ಲ.

ಅವಳೀಗ ಏನಾದರೊಂದನ್ನು ಮಾಡುವುದು ಅನಿವಾರ್ಯವಾಗಿತ್ತು. ಇಲ್ಲದಿದ್ದರೆ ಆ ಅಂತಃ ಕ್ಷೋಭೆ ತನ್ನನ್ನು ದಹಿಸಿಬಿಡುವುದೆಂದು ಅವಳು ಮನಗಂಡಳು. ಅವಳೆದೆ ದುಃಖದ ಹುತ್ತವಾಗಿತ್ತು. ಅದರಲ್ಲಡಗಿದ್ದ ಫಣಿ ಕಟ್ಟು ಮೀರಿ ಯಾವಾಗ ಹೊರಬರುವುದೆನ್ನುವುದನ್ನು ಹೇಳುವಂತಿರಲಿಲ್ಲ. ಹಾಗೆ ಬಂದಿದ್ದರೆ ಅದನ್ನು ತಡೆಯುವ ಧೃತಿಯೂ ಅವಳಿಗಿರಲಿಲ್ಲ.

ಏನು ಮಾಡಬೇಕು? ಏನು ಮಾಡುವುದು?

“ಏನಾದರೂ ಮಾಡು, ಏನಾದರೂ ಮಾಡು, ಸುಮ್ಮನಿರಬೇಡ”

ಎಂದು ಮನಸ್ಸು ಮರುನುಡಿಯಿತು.

ಏನು ಮಾಡುವುದು? ಮಧುಸೂದನನಿಗೆ ಮತ್ತೊಮ್ಮೆ ಬರೆಯಲೆ? ತನಗೆ ತೋರಿದ ಶಂಕೆಯನ್ನೆಲ್ಲ ಅವನ ಮುಂದಿಡಲೆ? ಅವನಿಗೆ ಆ ಶಂಕೆ ಇರುವುದಾದರೆ ನಿವಾರಿಸಲೆ? ಅವನನ್ನು ಕಾಡಿ ಬೇಡಲೆ? ತಡೆಯಲಾಗದ ತನ್ನ ದುಃಖವನ್ನು ಅವನ ಮುಂದೆ ಇನ್ನೊಮ್ಮೆ ತೋಡಿಕೊಳ್ಳಲೆ?

"ಬರಿ, ಬರಿ. ಸುಮ್ಮನೆ ಮಾತ್ರ ಇರಬೇಡ"

ಎಂದು ಗಟ್ಟಿಯಾಗಿ ಯಾರೋ ಕಿವಿಯ ಹತ್ತಿರ ಬಗ್ಗಿ ಹೇಳಿದ ಹಾಗಾಯಿತು. ಚಿಂತಿಸಿ ಚಿಂತಿಸಿ ಸೋತಿದ್ದ ಜೀವಕ್ಕೆ ಯಾವುದೋ ಆಸೆ ಸಮಾಧಾನ ವಿತ್ತಿತು. ಆರಾಮ ಕುರ್ಚಿಯ ಮೇಲೆ ಕುಳಿತಿದ್ದವಳು ಕಣ್ಣುಮುಚ್ಚಿ ಕುರ್ಚಿಗೆ ತಲೆ ಕೊಟ್ಟಳು.

ಊಟಕ್ಕೆಂದು ಮಗಳನ್ನೆಬ್ಬಿಸಲು ಸದ್ದಿಲ್ಲದೆ ರೂಮಿನೊಳಗೆ ಬಂದ ಮೀನಾಕ್ಷಮ್ಮನವರು ತೊಡೆಯ ಮೇಲೆ ಪುಸ್ತಕ ಇಟ್ಟುಕೊಂಡ ಹಾಗೇ ಒಂದು ಕಡೆ ತಲೆಬಾಗಿಸಿ ನಿದ್ರಾವಶಳಾಗಿದ್ದ ಮಗಳನ್ನು ನೋಡಿ ಹಾಗೆಯೇ ನಿಂತರು. ಹಡೆದೊಡಲು ತುಂಬಿ ಬಂದು ಮಮತೆ ಉಕ್ಕಿತು.

"ಅಯ್ಯೋ ಕಂದಾ, ಹಸಿದು ಹಾಗೇ ಮಲಗಿಬಿಟ್ಟೆಯಾ?"

ಎನ್ನುತ್ತ ಮೈಮೇಲೆ ತೆಳ್ಳನೆಯ ಒಂದು ಶಲ್ಯವನ್ನೆಳೆದು ಸದ್ದಿಲ್ಲದೆ ಬಂದ ಹಾಗೆಯೇ ಬಾಗಿಲು ಮುಚ್ಚಿಕೊಂಡು ಹೊರಟುಹೋದರು.

೫

"ಬಾಯಿಸಾಹಿಬಾ ಅವರಿಗೆ ಏನುಸಮಯ?"

ಎನ್ನುತ್ತ ಒಳಗೆ ಪ್ರವೇಶಿಸಿದ ಶಂಕರರಾವ್ ಮಧುಸೂದನ ಬಾಯಿಯೊಡನೆ ಮಾತಾಡುತ್ತ ಕುಳಿತಿದ್ದುದನ್ನು ಕಂಡು ಅಚ್ಚರಿಗೊಂಡು ಹಾಗೆಯೇ ನಿಂತ. ಮಧುಸೂದನ ಅಲ್ಲಿರಬಹುದೆನ್ನುವ ಕಲ್ಪನೆಯೇ ಅವನಿಗಿರಲಿಲ್ಲ.

"ಬನ್ನಿ ರಾವ್, ಏತಕ್ಕೆ ಹಾಗೆ ನಿಂತಿರಿ?"

ಎಂದು ಅನ್ವರ್‌ಬಾಯಿ ಆರಾಮು ಕುರ್ಚಿಯ ಮೇಲೆ ಮಲಗಿದ್ದಂತೆಯೇ ಶಂಕರರಾಯನನ್ನು ಆಹ್ವಾನಿಸಿ,

"ಇವರ ಪರಿಚಯ ನಿಮಗಿಲ್ಲವೆ? ಇವರು ಮೈಸೂರಿನ ಪ್ರಸಿದ್ಧ ವಿದ್ವಾಂಸರು ಮಧುಸೂದನ್."

"ನಾನು ಕಾಣೆನೇ? ಉಸ್ತಾದರ ಕಚೇರಿಯನ್ನು ಇಷ್ಟು ಬೇಗ ಮರೆಯಲು ಸಾಧ್ಯವೆ?"

ಎಂದು ಶಂಕರರಾಯ ಸೌಜನ್ಯ ವ್ಯಕ್ತಪಡಿಸಿ ಕೈ ಜೋಡಿಸಿದ. ಅವನನ್ನು ಎಲ್ಲಿ ನೋಡಿರಬಹುದೆಂದು ಮಧುಸೂದನನ ಮನಸ್ಸು ಒಂದು ಕ್ಷಣ ಯೋಚಿಸಿತು. ಆ ಸಂಶಯವನ್ನು ಅನ್ವರ್‌ಬಾಯಿಯೇ ಪರಿಹರಿಸಿದಳು.

"ಇವರು ಸೂರಜ್ ಶಂಕರರಾಯರು. ಮಹಾರಾಷ್ಟ್ರ ಸಂಗೀತ ಸಭೆಯ ವ್ಯವಸ್ಥಾಪಕರು."

ಆ ಮಾತು ಕೇಳಿ ಮಧುಸೂದನನಿಗೆ ಕವಾಸ್ಜಿ ಜಹಾಂಗೀರ್ ಹಾಲಿನಲ್ಲಿ ತನ್ನ ಕಚೇರಿಯಾದ ದಿನ ಶಂಕರರಾಯನ ಭೇಟಿಯಾಗಿದ್ದುದರ ಜ್ಞಾಪಕ ಬಂದಿತು. ಅನ್ವರ್‌ಬಾಯಿ ಶಂಕರರಾಯನಿಗೆ ಕುಳಿತುಕೊಳ್ಳಲು ಹೇಳಿ ಮಧುಸೂದನನ ಕಡೆ ತಿರುಗಿ,

“ರಾಯರು ಹೆಸರಿಗೆ ಮಾತ್ರ ಸಂಗೀತ ಸಭೆಯ ವ್ಯವಸ್ಥಾಪಕರಲ್ಲ. ಕಲೆಯಲ್ಲೂ ತುಂಬ ಅಭಿಮಾನವುಳ್ಳವರು”

ಎಂದು ನಗುತ್ತ ನುಡಿದಳು. ಅವನನ್ನು ಹೊಗಳಬೇಕೆನ್ನುವುದೇ ಅವಳ ಉದ್ದೇಶವಾಗಿತ್ತೆನ್ನುವುದನ್ನು ಸೂಕ್ಷ್ಮಮತಿಯಾದ ಮಧುಸೂದನ ಗ್ರಹಿಸದಿರಲಿಲ್ಲ. ಆದರೆ ಆ ಪ್ರಶಂಸೆ ಕೇಳಿ ಶಂಕರರಾಯನ ಬಾಯಿ ಕಿವಿಯವರೆಗೂ ಹೋಯಿತು.

“ವಿದ್ವಾಂಸರೆದುರಿಗೆ ನನ್ನನ್ನೇ ಹೊಗಳುತ್ತಿರುವಿರಲ್ಲಾ.”

“ಗುಣಕ್ಕೆ ಮತ್ಸರವೇಕೆ ಹೇಳಿ? ಯಾವ ವಸ್ತುವಿನಲ್ಲಾದರೂ ಗುಣವನ್ನು ಬೇಗ ಕಂಡುಕೊಳ್ಳುವ ಗುಣ ಬಾಯಿಯವರಿಗಿದೆ”

ಎಂದು ಮಧುಸೂದನ ಜೋಡಿಸಿದ. ಹೊಗಳಿಕೆಯಿಂದ ಶಂಕರರಾಯನನ್ನು ಉಬ್ಬಿಸಿದೆನೆಂದು ತನ್ನ ಮನಸ್ಸಿನಲ್ಲೇ ಹೆಮ್ಮೆಪಟ್ಟುಕೊಳ್ಳುತ್ತಿದ್ದ ಅನ್ವರ್ ಬಾಯಿಗೆ ಮಧುಸೂದನ ಅದನ್ನು ತನಗೇ ತಿರುಗಿಸಿಕೊಟ್ಟದ್ದನ್ನು ಕಂಡು ತಾನು ಬೇಸ್ತು ಬಿದ್ದೆನೆನ್ನಿಸಿತು. ಆದರೆ ಸ್ವಭಾವತಃ ವಿನೋದ ಪ್ರಿಯೆಯಾದ ಅವಳಿಗೆ ಆ ಮಾತು ಕಹಿಯೆನ್ನಿಸಲಿಲ್ಲ. ಇಬ್ಬರ ಮುಖದ ಮೇಲೂ ಅರ್ಥ ಸೂಚಕವಾದ ಮುಗುಳ್ನಗೆ ತೇಲಿತು. ಬಾಯಿ ಶಂಕರರಾಯನ ಕಡೆ ತಿರುಗಿ,

“ಏನು ಇಷ್ಟು ದೂರ ದಯಮಾಡಿಸಿದ್ದು?”

ಎಂದು ನಯವಾಗಿ ಪ್ರಶ್ನಿಸಿದಳು. ಅವನ ಭೇಟಿಯ ಕಾರಣವನ್ನು ತಿಳಿದುಕೊಳ್ಳುವ ಕುತೂಹಲ ಅವಳಿಗಿತ್ತು. ಶಂಕರರಾಯ ಒಂದು ಕ್ಷಣ ಮಾತಾಡಲಿಲ್ಲ. ಮನಸ್ಸಿನಲ್ಲಿದ್ದುದನ್ನು ಹೇಗೆ ತಿಳಿಸಬೇಕೆಂದು ಅವನು ಯೋಚಿಸುತ್ತಿದ್ದಂತೆ ತೋರಿತು.

“ಒಂದು ಕೆಲಸಕ್ಕೆಂದು ಬಂದವನಿಗೆ ಎರಡು ಕಾರ್ಯ ಆಗುವ ಹಾಗೆ ಕಾಣುತ್ತಿದೆ. ನಾನು ಒಂದೇ ಹಕ್ಕಿಯ ಮೇಲೆ ಲಕ್ಷ್ಯವಿಟ್ಟದ್ದೆ. ಈಗ ಎರಡು ಸಿಕ್ಕಿದ ಹಾಗಾಯಿತು”

ಎಂದು ನಕ್ಕ. ಅವನ ಮಾತು ಅವರಿಬ್ಬರಿಗೂ ಅರ್ಥವಾಗಲಿಲ್ಲ. ಪರಸ್ಪರ ಮುಖ ನೋಡಿಕೊಂಡರು.

“ಏನದು ಹಕ್ಕಿ ಬೇಟೆಯ ವಿಚಾರ?”

ಎಂದು ಅನ್ವರ್‌ಬಾಯಿ ಪ್ರಶ್ನಿಸಿದಳು. ಶಂಕರರಾಯ ದೊಡ್ಡದಾಗಿ ನಕ್ಕ.

" ಹಕ್ಕಿ ಗಿಕ್ಕಿ ಬೇಟೆಯ ಮಾತಲ್ಲ. ನಮ್ಮ ಅದೃಷ್ಟದ ಮಾತು ಎಂದೆ. ನಗರಕ್ಕೆ ಯೆಹೂದಿ ಮೆನೂಹಿನ್ ಬಂದಿದ್ದಾರೆ."

" ಯೆಹೂದಿ ಮೆನೂಹಿನ್ ಬಂದಿದ್ದಾರೆಯೆ ?"

ಎಂದು ಮಧುಸೂದನ ಆತುರದಿಂದ ಕೇಳಿದ.

" ಹೌದು ಬಂದಿದ್ದಾರೆ. ಇವತ್ತು ಬೆಳಗ್ಗೆ ಮದರಾಸಿನಿಂದ ಬಂದರು. ಎದುರುಗೊಳ್ಳಲು ನಾನೂ ಹೋಗಿದ್ದೆ. ಇವತ್ತು ನಾಳೆ ಮುಂಬಯಿಯಲ್ಲಿರುತ್ತಾರೆ. ಅಷ್ಟರೊಳಗೆ ನಮ್ಮ ರೋಷನ್ ಬಾಯಿಯ ಹಾಡಿಕೆ ಅವರಿಗೇಕೆ ಕೇಳಿಸಬಾರದೆಂದು ಯೋಚನೆ ಬಂದಿತು. ಬಾಯಿಸಾಹಿಬಾ ಅವರ ಅಪ್ಪಣೆ ಕೇಳಲು ನೇರವಾಗಿ ಇಲ್ಲಿಗೆ ಬಂದೆ. ನೀವೂ ಇದ್ದೀರಿ. ಸುವರ್ಣಸಂಧಿ."

" ಹೌದು, ನನಗೂ ಮೆನೂಹಿನ್ನರನ್ನು ಭೇಟಿ ಮಾಡಬೇಕೆಂದು ಅಪೇಕ್ಷೆ ಇತ್ತು. ಆದರೆ ದಕ್ಷಿಣದ ಕಡೆ ಅವರು ಬಂದಿದ್ದಾಗ ಅವರನ್ನು ನೋಡಲಾಗಲಿಲ್ಲ. ದೊಡ್ಡ ಕಲಾವಿದರು."

" ನಿಮ್ಮ ವಿಷಯದಲ್ಲೂ ಅವರು ಹಾಗೇ ಅನ್ನುತ್ತಾರೆ. ಮೈಸೂರಿನ ಘನ ವಿದ್ವಾಂಸರೊಬ್ಬರನ್ನು ನೋಡುವ ಅವಕಾಶವಾಗಲಿಲ್ಲವೆಂದು ಪೇಚಾಡಿಕೊಂಡರು. ನೀವು ಇಲ್ಲಿರುವ ಸಮಾಚಾರ ತಿಳಿದಿದ್ದರೆ ನಾನವರಿಗೆ ಆಗಲೇ ಹೇಳುತ್ತಿದ್ದೆ."

" ಅವರನ್ನು ನೋಡುವುದು ಹೇಗೆ ? ಅವರ ಕಾರ್ಯಕ್ರಮಗಳೇನೋ ?"

" ಇವತ್ತು ಸಂಜೆ ಅವರು ಬಿಡುವಾಗಿಯೇ ಇರುತ್ತಾರೆ. ಊರನ್ನು ನೋಡಲು ಸುತ್ತಾಡಿಕೊಂಡು ಬರಬೇಕೆನ್ನುತ್ತಿದ್ದರು. ನೀವು ಒಪ್ಪಿದರೆ ಇಲ್ಲೇ ಕರೆತರುತ್ತೇನೆ."

" ನನ್ನ ಅಭ್ಯಂತರವಿಲ್ಲ"

ಎನ್ನುತ್ತ ಮಧುಸೂದನ ಅನ್ವರ್‌ಬಾಯಿಯ ಮುಖ ನೋಡಿದ. ಅದಕ್ಕೆ ಅವಳ ಆಕ್ಷೇಪಣೆ ಲವಲೇಶವೂ ಇದ್ದಂತಿರಲಿಲ್ಲ. ಯೆಹೂದಿ ಮೆನೂಹಿನ್ನರಂಥ ವಿಶ್ವವಿಖ್ಯಾತ ಕಲಾವಿದ ತನ್ನ ಮನೆಗೆ ಬರುವುದೊಂದು ಭಾಗ್ಯವೆಂದು ಅನ್ವರ್ ಬಾಯಿ ಎಣಿಸಿದಳು.

ಎಲ್ಲರಿಗೂ ಚಹ ಬಂದಿತು. ಬೇಡಬೇಡವೆನ್ನುತ್ತಲೇ ಶಂಕರರಾಯ ಎರಡು ಕಪ್ಪು ಚಹ ಬಸಿದ. ಬಾಯಿಯ ಮನೆಯ ಚಹವೆಂದರೆ ಅವನಿಗೆ

ಪಂಚಪ್ರಾಣ. ಬಾಯಿಗೆ ಧನ್ಯವಾದ ಹೇಳುತ್ತ, ಸಂಜೆಯ ಭೇಟಿಗೆ ವೇಳೆ ಗೊತ್ತು ಮಾಡಿಕೊಂಡು ಹೊರಡಲು ಎದ್ದ. ಅವನು ಹೋಗುವಾಗ,

" ದಯವಿಟ್ಟು ಹೊರಗಿನವರಾರನ್ನೂ ಕರೆತರಬೇಡಿ "

ಎಂದು ಮಧುಸೂದನ ಎಚ್ಚರಿಸಿದ.

" ನನಗೆ ತಿಳಿಯದೇ ?"

ಎಂದು ಶಂಕರರಾಯ ಮಾರ್ಮಿಕವಾಗಿ ನಕ್ಕು ನುಡಿದು ಹೊರಟು ಹೋದ.

ಮೆನೂಹಿನ್ ಬರುವ ಸಮಾಚಾರ ಕೇಳಿ ರೋಷನ್ನಳಿಗೆ ಉಲ್ಲಾಸ ವಾಗಿತ್ತು. ಆತನ ಪಿಟೀಲು ವಾದನದ ಅದ್ಭುತ ಕೌಶಲದ ಕಥೆಯನ್ನು ಅವಳು ಕೇಳಿದ್ದಳು. ಆ ವ್ಯಕ್ತಿಯನ್ನು ನೋಡುವ, ಅವನೆದುರಿಗೆ ಹಾಡುವ ಸಂದರ್ಭ ಅನಿರೀಕ್ಷಿತವಾಗಿ ಒದಗಿದುದು ಅವಳಿಗೆ ಸಂಭ್ರಮವನ್ನುಂಟುಮಾಡಿತು. ಸಂಜೆಯ ಹೊತ್ತಿಗೆ ಶೃಂಗಾರ ಮಾಡಿಕೊಂಡು ಅತಿಥಿಗಳನ್ನು ಸ್ವಾಗತಿಸಲು ಸಿದ್ಧವಾದಳು.

ಏಳು ಘಂಟೆಗೆ ಸರಿಯಾಗಿ ಮೆನೂಹಿನ್ನರ ಪರಿವಾರ ಕಾರಿನಲ್ಲಿ ಬಂದಿಳಿಯಿತು. ಮುಂಬಯಿಯ ತನ್ನ ಪರಿಚಿತರಾರನ್ನಾದರೂ ಶಂಕರರಾವ್ ಎಲ್ಲಿ ಕಟ್ಟಿಕೊಂಡು ಬಂದುಬಿಡುವನೋ ಎಂದು ಶಂಕಿಸುತ್ತಿದ್ದ ಮಧುಸೂದನನಿಗೆ ಕಾರಿನಿಂದ ಮೂರೇ ಜನ ಇಳಿದದ್ದನ್ನು ನೋಡಿ ಸಮಾಧಾನವಾಯಿತು. ಶಂಕರರಾವ್ ಮಾತಿಗೆ ತಪ್ಪದೆ ಮೆನೂಹಿನ್ ದಂಪತಿಗಳನ್ನು ಮಾತ್ರವೇ ಕರೆತಂದಿದ್ದ.

ಬಾಗಿಲ ಹತ್ತಿರ ರೋಷನ್‌ಬಾಯಿ, ಮಧುಸೂದನ ಮೆನೂಹಿನ್ ದಂಪತಿಗಳನ್ನು ಸ್ವಾಗತಿಸಿದರು. ಶಂಕರರಾವ್ ಪರಸ್ಪರ ಪರಿಚಯ ಮಾಡಿಸಿಕೊಟ್ಟ. ಮೆನೂಹಿನ್ ಮಧುಸೂದನನ ಕೈಯನ್ನು ಹಿಡಿದು,

" ನಿಮ್ಮ ವಿಚಾರ ಕೇಳಿದ್ದೆ. ಮೈಸೂರು ಪ್ರವಾಸದಲ್ಲಿ ಭೇಟಿಮಾಡಲು ಆಗಲಿಲ್ಲ. ಆ ಅವಕಾಶ ಈಗ ಅನಿರೀಕ್ಷಿತವಾಗಿ ಲಭಿಸಿತು "

ಎಂದು ಅಂತಃಕರಣಪೂರ್ವಕವಾಗಿ ನುಡಿದರು.

" ನನ್ನ ಭಾವನೆಗೆ ನೀವೇ ನುಡಿಕೊಡುತ್ತಿರುವಿರಿ "

ಎಂದು ಮಧುಸೂದನ ಸೌಜನ್ಯದಿಂದ ಉತ್ತರವಿತ್ತ.

“ಅದು ಹೇಗಾದರೂ ಆಗಲಿ; ಇಬ್ಬರು ಕಲಾವಿದರು ಸೇರುವುದನ್ನಂತೂ ನೋಡುವ ಪುಣ್ಯ ನಮ್ಮದು”

ಎಂದು ಶಂಕರರಾಯ ಸೇರಿಸಿದ. ಎಲ್ಲರೂ ನಗುತ್ತ ಬೈಠಕ್‌ಖಾನೆಗೆ ಬಂದರು. ಏಳಲಾಗದ ಅನ್ವರ್‌ಬಾಯಿಯನ್ನು ಅಲ್ಲೇ ಒಂದು ಆರಾಮ ಕುರ್ಚಿ ಹಾಕಿ ಮಲಗಿಸಲಾಗಿತ್ತು. ದಿಂಬಿಗೆ ವೈಯಾತು ಮಲಗಿದ್ದ ಅನ್ವರ್‌ಬಾಯಿ ಅತಿಥಿಗಳು ಒಳಗೆ ಬಂದದ್ದನ್ನು ನೋಡಿ ತಲೆಯೆತ್ತಿ ಕೈಮುಗಿದು ಸ್ವಾಗತಿಸಿದಳು. ಶಂಕರರಾಯ ಬಾಯಿಗೆ ಮೆನೂಹಿನ್ ದಂಪತಿಗಳ ಪರಿಚಯ ಮಾಡಿಸಿದ.

ಹಾಡಿಕೆಗೆಂದೇ ವಿನ್ಯಾಸಲಾಗಿದ್ದ ಆ ಮಂದಿರ ಸುಸಜ್ಜಿತವಾಗಿತ್ತು. ನಸು ನೀಲಿ ಬಣ್ಣದ ಗೋಡೆಯ ಮೇಲೆ ದೊಡ್ಡ ದೊಡ್ಡ ಆಕೃತಿಯ ಮೊಘಲ್ ಶೈಲಿಯ ಚಿತ್ರಕೃತಿಗಳನ್ನು ತೂಗುಹಾಕಿತ್ತು. ನೆಲ ಕಾಣದಂತೆ ಹಾಸಿದ್ದ ಮೆತ್ತನೆಯ ರತ್ನಕಂಬಳಿಯ ಮೇಲೆ ಅಲ್ಲಲ್ಲೇ ಪುಷ್ಪಧಾನಿಗಳನ್ನಿಟ್ಟಿದ್ದರು. ಹಾಡಿಕೆಗಾಗಿ ಒಂದು ಭಾಗದಲ್ಲಿ ವೇದಿಕೆ ಸಿದ್ಧವಾಗಿತ್ತು. ಅದರ ಮೇಲೆ ಸಂಗೀತದ ನಾನಾ ವಾದ್ಯಗಳನ್ನು ಓರಣವಾಗಿ ಜೋಡಿಸಿಟ್ಟಿತ್ತು. ವೇದಿಕೆಯ ಎದುರಾಗಿ ಸ್ವಲ್ಪ ದೂರದಲ್ಲಿ ನಾಲ್ಕು ಸೋಫಾಗಳಿದ್ದವು. ಎಲ್ಲಕ್ಕೂ ಮಧ್ಯದಲ್ಲಿ ದಂತದ ಕೆಲಸ ಮಾಡಿದ ಟೀಪಾಯ್ ಮೇಲೆ ಸುಂದರವಾದ ಲೋಹ ಧಾನಿಯಿತ್ತು. ಅದರಿಂದ ಪರಿಮಳಭರಿತವಾದ ಸಣ್ಣ ಹೊಗೆ ಏಳುತ್ತಿತ್ತು.

ಸಭಾಂಗಣದ ವ್ಯವಸ್ಥೆ ನೋಡಿ ಮೆನೂಹಿನ್ನರಿಗೆ ತುಂಬ ಸಂತೋಷ ವಾಗಿರಬೇಕು. ಅವರು ಮೆಚ್ಚಿಕೆಯ ದೃಷ್ಟಿಯಿಂದ ಒಮ್ಮೆ ಸುತ್ತಲೂ ನೋಡಿ ಮಧುಸೂದನನ ಪಕ್ಕದಲ್ಲಿ ಸೋಫಾದ ಮೇಲೆ ಮಂಡಿಸಿದರು. ಇನ್ನೊಂದು ಪಕ್ಕದಲ್ಲಿ ಅವರ ಮಡದಿ ಕುಳಿತರು. ಅಷ್ಟು ಹೊತ್ತಿಗೆ ಆಳು ಟ್ರೇಗಳಲ್ಲಿ ಉಪಾಹಾರ ತಂದು ಮುಂದಿಟ್ಟ. ಎಲ್ಲರೂ ಹಣ್ಣು, ಬಿಸ್ಕತ್, ಚಹ ತೆಗೆದು ಕೊಂಡರು.

ರೋಷನ್ ವೇದಿಕೆಯ ಮೇಲೆ ಕುಳಿತು ಮೊದಲೇ ಶ್ರುತಿ ಮಾಡಿಟ್ಟಿದ್ದ ತಂಬೂರಿಯನ್ನು ಎತ್ತಿ ಎದೆಗೊರಗಿಸಿಕೊಂಡು ತಂತಿಗಳ ಮೇಲೆ ಮೃದುವಾಗಿ ಬೆರಳು ಹರಿಸಿದಳು. ಕಮನೀಯವಾದ ತಂತ್ರೀರವ ಸಭಾಮಂದಿರವನ್ನು ತುಂಬಿತು. ಆ ನಾದ ಕೇಳಿ ಮೆನೂಹಿನ್ನರ ಮುಖ ಉಲ್ಲಾಸಗೊಂಡಿತು. ಅವರ ಕಣ್ಣು ಎವೆಮುಚ್ಚದೆ ತಂಬೂರಿಯನ್ನೂ ಅದರ ತಂತಿಗಳ ಮೇಲೆ

ನಿಯತಗತಿಯಿಂದ ಆಡುತ್ತಿದ್ದ ಆ ತೋರು ಬೆರಳನ್ನೂ ದೃಷ್ಟಿಸುತ್ತಿತ್ತು. ಝೇಂಕರಿಸುತ್ತಿದ್ದ ಆ ನಾದದ ಅಲೆಯೊಡನೆ ನೈಸರ್ಗಿಕವಾಗಿ ರೋಷನ್ನಳ ಕಂಠ ಬೆರೆತು ಗುರ್ಜರಿ ರಾಗ ಗಂಭೀರವಾಗಿ ಹೊರಹೊಮ್ಮಿತು. ರೋಷನ್ ಅದರಲ್ಲಿ ಹಿತವಾಗಿ ಒಂದು ಚೀಸ್ ಹಾಡಿದಳು. ಅನಂತರ ಖಂಬಾವತಿಯಲ್ಲಿ ಒಂದು ಖ್ಯಾಲ್, ಮಾರವದಲ್ಲಿ ಒಂದು ತುಮ್ರಿ ಹಾಡಿದಳು. ಅವಳ ಹಾಡಿಕೆ ಯಲ್ಲಿ ಶ್ರುತಿ ಶಾರೀರಗಳ ಅಭೇದ ನ್ಯಾಯವನ್ನು ಕಂಡು ಮೆನೂಹಿನ್ನರು ಮೂಗಿನ ಮೇಲೆ ಬೆರಳಿಟ್ಟುಕೊಂಡರು. ಆ ವರೇಕುಗಳು ಅವರಿಗೆ ತುಂಬ ಮೆಚ್ಚಿಕೆಯಾದವು.

ರೋಷನ್ ಅರ್ಧ ಮುಕ್ಕಾಲು ಘಂಟೆಯ ಹೊತ್ತು ಹಾಡಿ ತಂಬೂರಿ ಕೆಳಗಿಳಿಸಿದಾಗ ಮೆನೂಹಿನ್ ದಂಪತಿಗಳು ಹರ್ಷದಿಂದ ಚಪ್ಪಾಳೆ ತಟ್ಟಿದರು. ಅವಳು ವೇದಿಕೆ ಬಿಟ್ಟಿಳಿದು ಬಂದು ಸತಿ ಮೆನೂಹಿನ್ನರ ಹತ್ತಿರ ನಿಂತಳು. ಆಕೆ ಅವಳ ಮುಖವನ್ನು ವಿಶ್ವಾಸದಿಂದ ನೋಡುತ್ತ ಎರಡು ಕೈಯನ್ನೂ ಹಿಡಿದು ತಮ್ಮ ಪಕ್ಕದಲ್ಲಿ ಕುಳ್ಳಿರಿಸಿಕೊಂಡರು. ಮೆನೂಹಿನ್ ಮುಗುಳ್ನಗೆ ಯಿಂದ ಅನ್ವರ್‌ಬಾಯಿಯ ಮುಖ ನೋಡಿ,

"ಬೇಗಂರವರ ಹಾಡಿಕೆ ಕೇಳಿ ಆನಂದವಾಯಿತು. ನಮ್ಮ ಮೈಸೂರು ವಿದ್ವಾಂಸರ ಗಾಯನವನ್ನು ಕೇಳಬೇಕೆಂದು ಒಂದು ಆಸೆಯಿದೆ"

ಎಂದು ಮಧುಸೂದನನ ಭುಜದ ಮೇಲೆ ಸ್ನೇಹದಿಂದ ಕೈಹಾಕಿದರು. ಮಧುಸೂದನ ಹೆಚ್ಚು ಉಪಚಾರ ಮಾಡಿಕೊಳ್ಳಲಿಚ್ಛಿಸದೆ ವೇದಿಕೆಯ ಮೇಲೆ ಹೋಗಿ ಕುಳಿತು ತಂಬೂರಿಯನ್ನು ಕೈಗೆತ್ತಿಕೊಂಡು ಶ್ರುತಿಮಾಡತೊಡಗಿದ. ಮೆನೂಹಿನ್ ತಟಕ್ಕನೆ ತಮ್ಮ ಸೋಫಾದಿಂದೆದ್ದು ಬಂದು ಅವನು ತಂಬೂರಿಯ ಬಿರಟೆಗಳನ್ನು ತಿರುಗಿಸಿ ಶ್ರುತಿ ಮಾಡುವುದನ್ನು ಹತ್ತಿರದಿಂದ ಗಮನಿಸುತ್ತ ನಿಂತರು. ಮಧುಸೂದನ ಹಾಡಿಕೆ ಆರಂಭಿಸಿದಾಗ ಅವರೂ ವೇದಿಕೆಯ ಮೇಲೆ ಅವನ ಪಕ್ಕದಲ್ಲೇ ಕುಳಿತುಕೊಂಡರು.

'ಶಂಕರಾಭರಣ'ದಲ್ಲಿ ದಿವ್ಯವಾದ ಆಲಾಪನೆ. ಆಮೇಲೆ ಅದರಲ್ಲಿಯೇ ಒಂದು ಕೃತಿ. ಅದಕ್ಕೆ ಚೌಕವಾದ ಸ್ವರಪ್ರಸ್ತಾರ. ಹಾಡಿಕೆಯನ್ನು ಚಿತ್ತವಿಟ್ಟು ಕೇಳುತ್ತಿದ್ದ ಮೆನೂಹಿನ್ ಆ ಶಾರೀರದ ಮಹೋನ್ನತಿಯನ್ನೂ ಗಾಯಕನ

ಪ್ರತಿಭಾಶಕ್ತಿಯ ವಿಸ್ತಾರವನ್ನೂ ಕಂಡು ವಿಸ್ಮಿತರಾದರು. ಮಧುಸೂದನ 'ಕದನಕುತೂಹಲ'ದಲ್ಲಿ ಒಂದು ಕೃತಿ ಹಾಡಿದಾಗ ಮೆನೂಹಿನ್ ಹರ್ಷದಿಂದ ಹಿಗ್ಗಿದರು. ಸ್ವರವಿನ್ಯಾಸದಲ್ಲಿ ಕಂಡುಬರುತ್ತಿದ್ದ ಇಂಗ್ಲಿಷ್ ಸ್ವರಪ್ರಸ್ತಾರಕ್ಕೆ ಸಂವಾದಿಯೋ ಎನ್ನುವ ಹಾಗಿದ್ದ ಆ ಉರುಟುಗಳು ಅವರನ್ನು ಬೆರಗುಗೊಳಿ ಸಿದವು. ಒಂದೆರಡು ಕೃತಿಗಳ ಹಾಡಿಕೆಯಲ್ಲಿಯೇ ಮಧುಸೂದನನ ವಿದ್ವತ್ತು ಕಲಾವಂತಿಕೆಗಳ ಪರಿಚಯ ಅವರಿಗಾಗಿತ್ತು.

"ಇಂಥ ಹಾಡಿಕೆಯ ಸುಖವನ್ನು ಅನುಭವಿಸುವುದು ಈ ದೇಶವೊಂದರಲ್ಲಿ ಮಾತ್ರ ಸಾಧ್ಯ"

ಎಂದು ಒಂದೇ ಮಾತಿನಲ್ಲಿ ಮೆನೂಹಿನ್ ತಮ್ಮ ಅಂತರಂಗದ ಭಾವನೆ ಯನ್ನು ವ್ಯಕ್ತಪಡಿಸಿದರು. ಆದರೆ ಮಧುಸೂದನ ಬರೀ ಪ್ರಶಂಸೆಯಿಂದಲೇ ತೃಪ್ತಿಪಟ್ಟುಕೊಂಡು ಕೂಡಲು ಸಿದ್ಧನಾಗಿರಲಿಲ್ಲ. ಮೆನೂಹಿನ್ನರ ಪಿಟೀಲು ವಾದನವನ್ನು ಕೇಳುವ ಕುತೂಹಲ ಅವನಿಗೂ ಇತ್ತು.

"ನಿಮಗೂ ಸ್ವಲ್ಪ ತೊಂದರೆಕೊಡಲು ಅಪೇಕ್ಷೆಯಿದೆ"

ಎಂದು ಸತಿ ಮೆನೂಹಿನ್ನರ ಕಡೆ ತಿರುಗಿ ಕಣ್ಣು ಮಿಟುಕಿಸಿದ. ಆಕೆ ಗಂಡನ ಮುಖ ನೋಡಿ ನಕ್ಕರು. ಮೆನೂಹಿನ್ ಮರುಮಾತಾಡದೆ ಎದ್ದು ನಿಂತು,

"ನನ್ನ ವಾದನ ಕೇಳಬೇಕೆಂದರೆ ಕೇಳಿಸಲು ಸಿದ್ಧ. ಆದರೆ ದಿವ್ಯವಾದ ಭೋಜನ ಕೂಟವಾದ ಮೇಲೆ ಹರಕು ತಿಂಡಿ ತಿಂದ ಹಾಗೆ ಆದೀತೇನೋ ಎಂದು ನನ್ನ ಶಂಕೆ"

ಎಂದು ನಗುತ್ತ ಹೋಗಿ ವೇದಿಕೆಯ ಮೇಲೆ ಸಿದ್ಧವಾಗಿಯೇ ಇದ್ದ ಪಿಟೀಲಿನ ಪೆಟ್ಟಿಗೆ ತೆರೆದು ವಾದ್ಯವನ್ನು ಕೈಗೆತ್ತಿಕೊಂಡರು. ಮಧುಸೂದನ ತಂಬೂರಿಯನ್ನು ತಾನೇ ಕೈಗೆತ್ತಿಕೊಂಡು ಅವರಿಗೆ ಬೇಕಾದ ಶ್ರುತಿಯ ಒಂದು ಹಿನ್ನೆಲೆಯನ್ನು ಕಲ್ಪಿಸಿ ಮೀಟುತ್ತ ಕುಳಿತ. ಮೆನೂಹಿನ್ ಎರಡೇ ನಿಮಿಷದಲ್ಲಿ ಪಿಟೀಲನ್ನು ಶ್ರುತಿಗೆ ಅಳವಡಿಸಿಕೊಂಡು ನಾಲ್ಕು ಸಲ ಚುರುಕಾಗಿ ಕಮಾನು ಹಾಕಿದರು. ಬಿಠೋವನ್ನನ ಒಂದು ಕೃತಿ ನಾದಭರಿತವಾಗಿ ಸೂಕ್ಷ್ಮ ಸ್ವರ ಭೇದಗಳಿಂದ ವಿರಾಜಿಸತೊಡಗಿತು. ಕಮಾನು ಒಮ್ಮೆ ಮೇಲೆ ಹೋಗಿ ಬರು ವುದರಲ್ಲಿ ಚಪಲವಾದ ಆ ಕೈ ಬೆರಳುಗಳಿಂದ ನೂರಾರು ಮೂರ್ಛನೆಗಳು

ಮಿಂಚಿದವು. ಕಿರುಬೆರಳಿನಿಂದ ಅಪೂರ್ವವಾದ ರೀತಿಯಲ್ಲಿ ಅನುರಣನವನ್ನುಂಟುಮಾಡುತ್ತ ಮೆನೂಹಿನ್ ಮೋಹಕವಾದ ಒಂದು ವಾತಾವರಣವನ್ನು ಸೃಜಿಸಿಬಿಟ್ಟರು. ಅಭ್ಯಾಸಕ್ಕೆಂದು ಇಟ್ಟುಕೊಂಡಿದ್ದ ಸಾಮಾನ್ಯವಾದ ಆ ಪಿಟೀಲು ಅವರ ಕೈಯಲ್ಲಿ ಸ್ವರ್ಗೀಯ ವಾದ್ಯವಾಗಿ ಪರಿಣಮಿಸಿಬಿಟ್ಟಿತು. ಆ ತಂತ್ರಸಿದ್ಧಿಯನ್ನು ಮಧುಸೂದನ ಮನಸಾ ಮೆಚ್ಚಿಕೊಂಡ.

"ಯಾವುದು ಬರೀ ಫಲಾಹಾರ, ಯಾವುದು ರಸಭೋಜನ ಎನ್ನುವುದು ಈಗ ಗೊತ್ತಾದ ಹಾಗೆ ಆಯಿತಲ್ಲ"

ಎಂದ. ಎಲ್ಲರೂ ನಕ್ಕರು. ಹೊರಡಲು ವೇಳೆಯಾಯಿತೆಂದು ಸತಿ ಮೆನೂಹಿನ್ ಗಂಡನ ಕಿವಿಯಲ್ಲಿ ನುಡಿದರು. ಎಲ್ಲರಿಗೂ ಮತ್ತೆ ಚಹ ಬಂದಿತು. ಆಳು ಟ್ರೇಯಲ್ಲಿ ಎರಡು ದೊಡ್ಡ ಹೂವಿನ ಹಾರಗಳನ್ನು ತಂದಿತ್ತ. ಮಧುಸೂದನ ಅದರಲ್ಲಿ ಒಂದನ್ನು ತೆಗೆದುಕೊಂಡು ಮೆನೂಹಿನ್ನರ ಕೊರಳಿಗೆ ಹಾಕಿದ. ಇನ್ನೊಂದನ್ನು ರೋಷನ್ ಸತಿ ಮೆನೂಹಿನ್ನರಿಗೆ ಹಾಕಿದಳು. ದಂಪತಿಗಳ ಹಿಗ್ಗು ಹಿಡಿಸಲಾರದಾಯಿತು. ಬೀಳ್ಕೊಳ್ಳುವ ಮುನ್ನ ಮೆನೂಹಿನ್ ಮಧುಸೂದನನ ಕೈಹಿಡಿದು,

"ನೀವೊಮ್ಮೆ ಅಮೆರಿಕಕ್ಕೆ ಬರಬೇಕು. ನಿಮ್ಮಂಥ ಕಲಾವಿದರ ಸಂಗೀತ ಅಲ್ಲಿನ ಜನ ಕೇಳಬೇಕು."

"ನಿಮ್ಮ ವಿಶ್ವಾಸವಿದ್ದರೆ ಏತಕ್ಕಾಗಬಾರದು ?"

"ಬರೀ ಬಾಯಿಮಾತಿನ ಉಪಚಾರಕ್ಕಲ್ಲ ನಾನು ಹೇಳುತ್ತಿರುವುದು. ನೀವೂ ನಿಮ್ಮ ಚೌಡಯ್ಯನವರೂ ಒಮ್ಮೆ ಅಲ್ಲಿಗೆ ಬರಬೇಕು. ಗಾಯನದಲ್ಲೂ ವಾದ್ಯ ವಾದನದಲ್ಲೂ ತಾವು ಕಂಡು ಕೇಳರಿಯದಂಥ ರತ್ನಗಳು ಭಾರತದಲ್ಲಿವೆಯೆನ್ನುವುದು ಅಲ್ಲಿನವರಿಗೂ ಗೊತ್ತಾಗಲಿ."

"ಆ ಅವಕಾಶ ದೊರೆತರೆ ನಮಗೂ ಸಂತೋಷವೇ."

"ಅದನ್ನು ಬೇಗ ಬರಮಾಡಿಕೊಳ್ಳಬೇಕು. ನ್ಯೂಯಾರ್ಕಿಗೆ ಬಂದರೆ ನನ್ನ ಅತಿಥಿಗಳಾಗಿರಬೇಕೆನ್ನುವುದನ್ನು ಮರೆಯಬೇಡಿ"

ಎಂದು ನುಡಿದು ಮತ್ತೊಮ್ಮೆ ಎಲ್ಲರಿಗೂ ವಂದಿಸಿ, ಅನ್ವರ್‌ಬಾಯಿಗೆ ಉಪಚಾರ ಹೇಳಿ ಹೊರಟುಬಿಟ್ಟರು. ಮಧುಸೂದನ ಬಾಗಿಲವರೆಗೂ ಹೋಗಿ ಅವರನ್ನು ಬೀಳ್ಕೊಟ್ಟು ರೋಷನ್ನಳ ರೂಮಿಗೆ ಹಿಂತಿರುಗಿದ. ಅವನ ಹಿಂದೆಯೇ

ರೂಮನ್ನು ಪ್ರವೇಶಿಸಿದ ರೋಷನ್ ಬಾಗಿಲು ಮುಚ್ಚಿ ಅವನನ್ನೇ ದಿಟ್ಟಿಸಿ ನೋಡುತ್ತ ನಿಂತಳು.

"ಏನು ಬಾಯಿಸಾಹಿಬಾ, ಇವತ್ತು ಹೊಸ ನೋಟದಿಂದ ನೋಡುತ್ತಿರುವ ಹಾಗಿದೆಯಲ್ಲ?"

"ನನ್ನನ್ನೇಕೆ ಹೀಗೆ ಕೆರಳಿಸಿಬಿಟ್ಟಿರಿ?"

"ಹೇಗೆ ಕೆರಳಿಸಿಬಿಟ್ಟೆ?"

"ಅದನ್ನೂ ಹೇಳಬೇಕೇನು? ನೋಡಿದರೆ ತಿಳಿಯುವುದಿಲ್ಲವೆ?"

"ನನಗೆ ತಿಳಿಯುವುದಿಲ್ಲ. ಕೆರಳುವಂತಹುದೇನಾಯಿತು, ಹೇಳು?"

"ಆ ರಾಗ ಹಾಡಿಯೂ ನನ್ನನ್ನೇ ಕೇಳುವಿರಲ್ಲಾ."

"ನಿನಗೂ ಅಂಥ 'ಕುತೂಹಲ' ಹುಟ್ಟಿದೆಯೇನು?"

"ಹಂಗಿಸುವ ಹಾಗೆ ಮಾತಾಡುವುದನ್ನು ನೀವಿನ್ನೂ ಬಿಡಲಿಲ್ಲ."

"ಇನ್ನು ಹೇಗೆ ಮಾತಾಡಬೇಕೋ ಅದನ್ನಾದರೂ ಹೇಳಿಕೊಡು."

"ಪಾಪ, ಇವರಿಗೆ ಹೇಳಿಕೊಡಬೇಕು ನಾನು"

ಎಂದು ಒಯ್ಯಾರದಿಂದ ಮೈ ಕುಲುಕಿಸುತ್ತ ಹತ್ತಿರ ಬಂದಳು. ಅವಳ ಮೈ ಸೋಂಕಿನಿಂದ ಕೆರಳಿ ಮಧುಸೂದನ ಅವಳನ್ನು ಬರಸೆಳೆದಪ್ಪಿ ಚುಂಬಿಸಿದ. ಮೊದಲೇ ಉದ್ರಿಕ್ತವಾಗಿದ್ದ ರೋಷನ್ನಳ ಮನಸ್ಸು ಆ ಚುಂಬನದಿಂದ ಇನ್ನಷ್ಟು ಕೆರಳಿತು. ಕೆಂಪೇರಿದ ಅವಳ ಮುಖ ಉಕ್ಕುತ್ತಿದ್ದ ಅವಳ ಆಸೆಗೆ ಕನ್ನಡಿಯಾಗಿತ್ತು. ಅವನ ಕೊರಳನ್ನು ಎರಡು ತೋಳುಗಳಿಂದಲೂ ಬಳಸಿ, ಹೆಡೆ ಬಿಚ್ಚುತ್ತಿದ್ದ ಅವನ ಬಯಕೆಯನ್ನು ಮತ್ತಷ್ಟು ಕೆಣಕುವಂತೆ ತುಂಬಿದ ತನ್ನೆದೆಯನ್ನು ಅವನ ಎದೆಗೊತ್ತುತ್ತ ಮುಖಕ್ಕೆ ಮುಖವಿಟ್ಟು,

"ಬನ್ನಿ, ದೊರೆ"

ಎನ್ನುತ್ತ ಮೆತ್ತನೆಯ ಹಾಸುಗೆಯಿಂದ ಅಣಿಯಾಗಿದ್ದ ಮಂಚದೆಡೆಗೆ ಅವನನ್ನು ಸೆಳೆದೊಯ್ದಳು.

೬

ಮಧುಸೂದನ ಮುಂಬಯಿಗೆ ಬಂದಿದ್ದಾನೆನ್ನುವ ಸಂಗತಿ ವಾಮನ ರಾಯರ ಕಿವಿಗೆ ಬೀಳಲು ತಡವಾಗಲಿಲ್ಲ. ಮುಂಬಯಿಯಲ್ಲಿ ಹಿರಿಯ ಕನ್ನಡಿಗ ಶ್ರೀಮಂತರಾಗಿ, ಎಲ್ಲ ಕನ್ನಡ ಚಟುವಟಿಕೆಗಳಿಗೂ ಪೋಷಕರಾಗಿದ್ದ ಅವರಿಗೆ ಒಂದಲ್ಲ, ಹತ್ತು ರೀತಿಯಲ್ಲಿ ಸುದ್ದಿ ಸಮಾಚಾರಗಳು ಬರುತ್ತಿದ್ದವು. ಮೈಸೂರು ಸಂಘದ ಆಚಾರ್ಯ, ಕನ್ನಡ ಸಂಘದ ಶರ್ಮ, ಮೊಗವೀರ ಸಂಸ್ಥೆಯ ದತ್ತೋಪಂತ್ ರಾಯರ ಮನೆಗೆ ವಾರಕ್ಕೊಂದೆರಡು ಸಲವಾದರೂ ಬಾರದೆ ಇರುತ್ತಿರಲಿಲ್ಲ. ಹಾಗೆ ಬಂದಾಗ ಕನ್ನಡ ಚಟುವಟಿಕೆಗಳನ್ನು ಕುರಿತು ವಿಚಾರಿಸುತ್ತಿದ್ದುದು, ಮಾತುಕಥೆ ಆಡುತ್ತಿದ್ದುದು ರಾಯರ ಸಂಪ್ರದಾಯವಾಗಿತ್ತು. ಮುಂಬಯಿಗೆ ಯಾವನಾದರೊಬ್ಬ ಕನ್ನಡ ಕಲಾವಿದ ಬಂದನೆಂದರೆ ಅವನಿಗೆ ವಾಮನರಾಯರ ಆತಿಥ್ಯ ಮನ್ನಣೆಗಳು ಮೊದಲು ಲಭಿಸುತ್ತಿದ್ದವು. ಮಧುಸೂದನ ಮೊದಲ ಸಲ ಮುಂಬಯಿಗೆ ಬಂದಾಗ ಅಂಥ ಆದರಾತಿಥ್ಯ ವಾಮನ ರಾಯರ ಮನೆಯಲ್ಲಿ ಅವನಿಗೆ ದೊರೆತಿತ್ತು. ಅವನ ವಿದ್ವತ್ತು ಸೌಜನ್ಯಗಳಿಗೆ ಅವರು ಮಾರುಹೋಗಿದ್ದರು.

ಅಂತೆಯೆ, ಮಧುಸೂದನ ಮುಂಬಯಿಗೆ ಬಂದು ತಮ್ಮನ್ನು ನೋಡದಿರುವುದಕ್ಕಾಗಿ ರಾಯರ ಮನಸ್ಸಿಗೆ ಸ್ವಲ್ಪ ಕಿರಿಕಿರಿಯಾಯಿತು. ಮೂರು ತಿಂಗಳಾದರೂ ನಿನ್ನೆ ಮೊನ್ನೆ ಕೇಳಿದ ಹಾಗಿದ್ದ ಅವನ ಸಂಗೀತ ಕಚೇರಿಯ ಸುಖವನ್ನು ಅವರು ಮರೆತಿರಲಿಲ್ಲ. ತಾಯಿಗೆ ಕಾಹಿಲೆಯೆಂದು ತಂತಿ ಬಂದು ಅವನು ಇದ್ದಕ್ಕಿದ್ದ ಹಾಗೆ ಹೊರಟುಬಿಟ್ಟ ಸಂದರ್ಭ ಅವರಿಗೆ ವಿಷಾದ ವನ್ನುಂಟುಮಾಡಿತ್ತು. ಅವನನ್ನು ಇನ್ನೂ ಎರಡು ದಿವಸ ನಿಲ್ಲಿಸಿಕೊಂಡು ಯಥೋಚಿತ ಮರ್ಯಾದೆ ಸಲ್ಲಿಸುವುದಕ್ಕೆ ಅವಕಾಶವಾಗಲಿಲ್ಲವಲ್ಲಾ ಎಂದು

ಅವರು ಅಂದೇ ಪೇಚಾಡಿಕೊಂಡಿದ್ದರು. ಅವನ ಬಗೆಗೆ ಅವರಿಗೆ ಏನೋ
ಒಂದು ವಾತ್ಸಲ್ಯ ಮೂಡಿತ್ತು.

ಮಧುಸೂದನ ಮುಂಬಯಿಯಲ್ಲಿರುವನೆನ್ನುವ ಸಂಗತಿ ತಿಳಿದ ಕೂಡಲ
ಅವನು ಎಲ್ಲಿ ಇಳಿದಿದ್ದಾನೆನ್ನುವುದನ್ನು ಅರಿತುಕೊಳ್ಳಲು ವಾಮನರಾಯರು
ನಾಲ್ಕಾರು ಕಡೆಗಳಿಗೆ ಆಳುಗಳನ್ನಟ್ಟಿದ್ದರು. ಆಳುಗಳು ಆ ಸಂಘ ಈ ಸಂಘದ
ಕಚೇರಿಗಳ ಬಾಗಿಲು ಹತ್ತಿ ಇಲ್ಲವೆನ್ನಿಸಿಕೊಂಡು ಬಂದಿದ್ದರೇ ವಿನಾ ಉಪ
ಯೋಗಕ್ಕೆ ಬರುವ ಸುದ್ದಿ ಯಾವುದನ್ನೂ ತಂದಿರಲಿಲ್ಲ. ಪಕ್ಕದ ಮನೆಯಲ್ಲಿ
ಒಬ್ಬ ವ್ಯಕ್ತಿ ಹತ್ತು ವರ್ಷ ಇದ್ದರೂ ಗೊತ್ತಾಗದಿರುವಂಥ ಮುಂಬಯಿ ನಗರದಲ್ಲಿ
ಮಧುಸೂದನನನ್ನು ಹುಡುಕಿಸುವ ಪ್ರಯತ್ನ ಸುಲಭವಲ್ಲವೆಂದು ವಾಮನ
ರಾಯರು ಭಾವಿಸಿದರು. ಆದರೆ ಇಂದಲ್ಲ ನಾಳೆ ಅವನ ಭೇಟಿ ಆದೀತೆನ್ನುವ
ನಿರೀಕ್ಷೆ ಅವರಿಗಿತ್ತು.

ಆ ಸಂದರ್ಭ ಒಂದು ದಿನ ತಾನಾಗಿಯೇ ಒದಗಿತು.

ಒಂದು ಸಂಜೆ ಮಧುಸೂದನ ರೋಷನ್ ಜೊತೆಗೂಡಿ ಜುಹೂ ಬೀಚಿಗೆ
ಹೋಗಿ ಹಿಂತಿರುಗುತ್ತಿದ್ದಾಗ ರಸ್ತೆಯ ಒಂದು ತಿರುವಿನಲ್ಲಿ ಕಾರಿನ ವೇಗ ತಗ್ಗಿಸ
ಬೇಕಾಗಿ ಬಂದಿತು. ಮುಂದುಗಡೆ ಹೋಗುತ್ತಿದ್ದ ಒಂದು ಕಾರು ಅನಿರೀಕ್ಷಿತ
ವಾಗಿ ನಿಂತುಬಿಟ್ಟಿತ್ತು. ರೋಷನ್ನಳ ಕಾರಿನ ಡ್ರೈವರ್ ಮುಂದುಗಡೆಯ ಕಾರಿನ
ಡ್ರೈವರಿಗೆ ಸೂಚನೆ ಕೊಡಲು ಹಾರ್ನ್ ಮಾಡತೊಡಗಿದ. ಅದೇ ವೇಳೆಗೆ
ಹಿಂದುಗಡೆ ಇನ್ನಾವುದೋ ಒಂದು ಕಾರು ಬಂದು ನಿಂತು ಮುಂದೆ ಹೋಗಲು
ಜಾಗವಿಲ್ಲದೆ ಅಸಾಧ್ಯವಾಗಿ ಹೊಡೆದುಕೊಳ್ಳುವುದಕ್ಕಾರಂಭಿಸಿತು. ಆ ಹಾರ್ನಿನ
ಸದ್ದು ಕೇಳಲಾರದೆ ಕಾರಿನಲ್ಲಿ ಯಾರಿರಬಹುದೆಂದು ನೋಡಲು ಮಧುಸೂದನ
ಅನೈಚ್ಛಿಕವಾಗಿ ಬಗ್ಗಿ ನೋಡಿದ. ಹಿಂದಿನ ಕಾರಿನಲ್ಲಿ ಡ್ರೈವರನ ಪಕ್ಕದಲ್ಲೇ
ವಾಮನರಾಯರು ಕುಳಿತಿದ್ದುದನ್ನು ನೋಡಿ ಅವನ ಮೈ ಜುಮ್ಮೆಂದಿತು.
ಅದೇ ಸಮಯದಲ್ಲಿ ವಾಮನರಾಯರೂ ಅವನನ್ನು ನೋಡಿಬಿಟ್ಟರು.

ಮಧುಸೂದನನ ಬುದ್ಧಿ ವೇಗವಾಗಿ ಓಡತೊಡಗಿತು. ಅವನ ಸ್ಥಿತಿ
ಕದಿಯುವಾಗ ಸಿಕ್ಕಿಹಾಕಿಕೊಂಡ ಕಳ್ಳನ ಹಾಗಾಗಿತ್ತು. ರೋಷನ್ನಳ ಜೊತೆ
ಯಲ್ಲಿ ವಾಮನರಾಯರ ಕಣ್ಣಿಗೆ ಬೀಳುವುದು ಅವನಿಗಿಷ್ಟವಿರಲಿಲ್ಲ. ಅವರು
ತನ್ನನ್ನು ನೋಡಿದ ಮೇಲೆ, ತಾನು ಅವರನ್ನು ನೋಡಿದೆನೆನ್ನುವುದೂ ಅವರಿಗೆ

ಗೊತ್ತಾದ ಮೇಲೆ ಕಣ್ಣು ತಪ್ಪಿಸಿ ಹೋಗುವುದು ಮರ್ಯಾದೆಯಲ್ಲವೆಂದು ಅವನಿಗೆ ತೋರಿತು. ರೋಪನ್ನಳಿಗೆ ಸೂಕ್ಷ್ಮದಲ್ಲಿ ವಿಚಾರ ತಿಳಿಸಿ ಕೆಳಗಿಳಿದ. ಅವಳು ಅರೆಮನಸ್ಸಿನಿಂದಲೇ ಮನೆಯ ಹಾದಿ ಹಿಡಿಯಬೇಕಾಯಿತು.

ಅಷ್ಟು ಹೊತ್ತಿಗೆ ವಾಮನರಾಯರೂ ತಮ್ಮ ಕಾರಿನಿಂದ ಕೆಳಗಿಳಿದು ನಿಂತಿದ್ದರು. ಮಧುಸೂದನನನ್ನು ಕಂಡಕೂಡಲೇ ಮುಗುಳ್ನಗುತ್ತ,

"ನಮಸ್ಕಾರ, ನಮಸ್ಕಾರ"

ಎಂದು ಮುಂದೆ ಬಂದು ಅವನು ಜೋಡಿಸಿದ್ದ ಎರಡೂ ಕೈಗಳನ್ನೂ ಆದರದಿಂದ ಹಿಡಿದುಕೊಂಡು,

"ಏನು ರಾಯರ, ಮುಂಬಯಿಯಲ್ಲೇ ಮೊಕ್ಕಾಂ ಮಾಡೀರಂತೆ. ನಮಗ ಭೆಟ್ಟಿ ಆಗಲೇ ಇಲ್ಲಲ್ಲಾ"

ಎಂದರು. ಮಧುಸೂದನನ ಮನಸ್ಸು ಇನ್ನಷ್ಟು ಹುಳ್ಳಗಾಯಿತು. ವಾಮನರಾಯರಿಗೆ ಯಾರು ಸಮಾಚಾರ ಕೊಟ್ಟರೆನ್ನುವುದು ಅವನಿಗೆ ಬೇಗ ಹೊಳೆಯಲಿಲ್ಲ. ಅವರಿಗೆ ಏನಾದರೊಂದು ನೆವ ಹೇಳುವುದು ಅಗತ್ಯವಾಗಿತ್ತು.

"ಹೌದು, ಮೊನ್ನೆ ತಾನೇ ಬಂದೆ. ತಮ್ಮ ಭೇಟಿಗೆ ಬರೋಣವೆಂತಲೇ ಇದ್ದೆ. ಆದರೆ ಎಲ್ಲೋ ಗಲಾಟೆಯಲ್ಲಿ ಅವಕಾಶವಾಗಿರಲಿಲ್ಲ. ಇವತ್ತು ನಾಳೆಯಲ್ಲಿ ನಾನೇ ಬರುವವನಿದ್ದೆ."

"ಸರಿ ಸರಿ. ಆದರ ನಮ್ಮಲ್ಲೇ ಇಳದಿದ್ದರಾಗತಿತ್ತು, ನೋಡರಿ. ಇಲ್ಲಿ ನಮ್ಮದೂ ಒಂದು ಮನೀ ಅಂತ ಇರೂವಾಗ ನಿಮ್ಮಂಥಾ ಆಪ್ತಮಂದಿ ಬ್ಯಾರೇ ಕಡೀ ಇಳಕೊಂಬೋದು ಅಂದರ ನನಗ ವಿಷಾದ ಅನಿಸತದ ನೋಡರೀ. ನಮ್ಮ ಮನೀ ಬ್ಯಾರೇ, ನಿಮ್ಮ ಮನೀ ಬ್ಯಾರೇ ಅಂಬೋ ಸಂಕೋಚನೇ ಇರಬಾರದೂ ಅಂತೀನಿ."

"ನಾನೂ ಹಾಗೆ ತಿಳಿದುಕೊಂಡಿಲ್ಲ."

"ಅದು ಚೆಲೋ ಮಾತು. ನಿಮ್ಮಂಥಾವರ ಯೋಗ್ಯತಾಕ್ಕ ಒಪ್ಪೂ ಮಾತು. ವಿಶ್ವಾಸಾ ಅಂದರ ಹಾಂಗಿರಬೇಕು ನೋಡರಿ. ಆದರ ಆಡೂ ಮಾತು ಮಾಡಿ ತೋರಿಸಿದಾಗನೇ ನಂಬಿಕಿ. ಯಾಕ, ನಾ ಅಂಬೋ ಮಾತು ಖರೇ ಹೌದಲ್ಲೋ?"

ಎಂದು ನಿರ್ಮತ್ಸರದ ನಗೆಯನ್ನು ನಕ್ಕರು. ಮಧುಸೂದನ ಸುಮ್ಮನೆ

ತಲೆದೂಗಿದ. ಅವರ ಸೌಜನ್ಯದ ಸವಿಯನ್ನು ಕಂಡಿದ್ದ ಅವನಿಗೆ ಅವರ ಮಾತು ಆ ಸಂಸ್ಕಾರಕ್ಕೆ ತಕ್ಕದ್ದೆನಿಸಿತು. ಅವನು ನಿರುತ್ತರನಾಗಿ ಏನೋ ಯೋಚಿಸುತ್ತ ನಿಂತಿದ್ದ ರೀತಿಯನ್ನು ನೋಡಿ,

"ಯಾಕ, ಮತ್ತೇನು ಯೋಚನಿ? ನಡೀರಲ್ಲ ಮತ್ತ ಹೋಗೋಣು" ಎಂದು ಕಾರಿನ ಬಾಗಿಲನ್ನು ತೆರೆದರು.

"ಇಲ್ಲ, ನಾನು ನಾಳೆ ನಾಳಿದ್ದರಲ್ಲಿ ಬರುತ್ತೇನೆ. ಈಗ ನನ್ನ ಸ್ನೇಹಿತ ಮನೆಯಲ್ಲಿ ಕಾದಿರುತ್ತಾನೆ."

"ಈಗ ಕಾರಿನಲ್ಲಿ ಹೋದವರು ಅವರೇ ಏನು?"

"ಹೌದು ಅವನೇ. ಮಾತುಂಗದಲ್ಲಿದ್ದಾನೆ. ಮೈಸೂರಿನ ಕೇಶವಯ್ಯ ಅಂತ."

"ಮೈಸೂರಿನ ಕೇಶವಯ್ಯ? ಯಾರಪಾ ಅದು, ನಾ ಕಾಣದ ಮೈಸೂರವರು? ಏನು ಉದ್ದಿಮಿ ಮಾಡುತಾರವರು?"

"ಒಂದು ಇಂಗ್ಲಿಷ್ ಕಂಪನಿಗೆ ಏಜೆಂಟಾಗಿ ಈಚೆಗೆ ಮುಂಬಯಿಗೆ ಬಂದಿದ್ದಾನೆ. ಸುಗಂಧವಸ್ತು ವ್ಯಾಪಾರ."

"ಹಾಂಗನ್ನಿರೀ ಮತ್ತ. ಈ ಊರಾಗೆ ಅಂಥ ದೊಡ್ಡ ಉದ್ದಿಮಿ ಇಲ್ಲದ ಹಾಂಗೆ ಕಾರು ಗೀರು ಇಟಕೊಂಡು ಅಡ್ಡಾಡಲಿಕ್ಕೆ ಸಾಧ್ಯ ಇಲ್ಲ, ನೋಡರಿ. ಆತಲ್ಲ, ಒಮ್ಮೆ ಅವರ ಭೆಟ್ಟೀನೂ ನಮಗ ಮಾಡಿಸಿಬಿಡರಿ. ನಮ್ಮ ಆವ್ಹಾನ ನೀವೇ ಅವರಿಗೆ ಮುಟ್ಟಿಸಿ ನಿಮ್ಮ ಸಂಗಾತನೇ ನಮ್ಮ ಮನೀಗೆ ಕರಕೊಂಡು ಬಂದರೂ ಆತು."

"ಹಾಗೇ ಆಗಲಿ."

"ನೀವೀಗ ಮಾತುಂಗಾ ಕಡೀ ಹೋಗುವವರು ಹೌದಲ್ಲೋ? ನಮ್ಮ ಗಾಡಿ ಹಾಂಗೇ ಹೊಡಸಿದರಾತು. ಏ ಡ್ರಾಯವರ್ –"

ಮಧುಸೂದನನಿಗೆ ಉಭಯ ಸಂಕಟಕ್ಕಿಟ್ಟುಕೊಂಡಿತು. ಮಾತುಂಗಾದಲ್ಲಿ ಇಲ್ಲದಿರುವ ಒಂದು ವ್ಯಕ್ತಿಯ ಕುರುಡು ಬೇಟೆಯಲ್ಲಿ ಅವರನ್ನು ತೊಡಗಿಸಲು ಅವನು ಸಿದ್ಧನಾಗಿರಲಿಲ್ಲ. ಆ ಪೇಚಿನಿಂದ ಅವನು ತಪ್ಪಿಸಿಕೊಳ್ಳುವುದು ತೀರ ಅನಿವಾರ್ಯವಾಗಿತ್ತು.

"ನನ್ನ ಸ್ನೇಹಿತ ಈಗ ಬಹುಶಃ ಮನೆಯಲ್ಲಿರಲಾರ. ನಾನೇ ಸಿಧಾನವಾಗಿ ಹೋಗುತ್ತೇನೆ. ಇಲ್ಲಿ ಸ್ವಲ್ಪ ಕೆಲಸವೂ ಇದೆ"

ಎಂದು ಇನ್ನೂ ಒಂದು ಸುಳ್ಳು ಬಿಟ್ಟ. ವಾಮನರಾಯರಿಗೆ ಅದೂ ತೃಪ್ತಿಕರವೆನ್ನಿಸಿತು.

"ಅಡ್ಡಿ ಇಲ್ಲ, ಅಡ್ಡಿ ಇಲ್ಲ. ಹಾಂಗೇ ಮಾಟರಿ. ಅಂದರ ಮನೀ ಕಡಿ ಬರಲಿಕ್ಕೆ ಮಾತ್ರ ತಪ್ಪಿಸಿಕೊಳ್ಳಬೇಡರಿ. ಇಲ್ಲದಿದ್ದರ ನಾವು ನಿಮ್ಮ ಪತ್ತ್ಯಾತರದೂದು ನಡಸಲಿಕ್ಕೆ ಬಂದೀತು"

ಎಂದು ನಕ್ಕು ಕಾರು ಹತ್ತಿ ಕುಳಿತರು. ಮಧುಸೂದನನನ್ನು ಒಂದು ಶಂಕೆ ಬಾಧಿಸುತ್ತಿತ್ತು. ಅದನ್ನು ಪರಿಹರಿಸಿಕೊಳ್ಳುವ ಉದ್ದೇಶದಿಂದ,

"ನಾನು ಬಂದಿರುವ ಸಂಗತಿ ನಿಮಗೆ ಹೇಗೆ ತಿಳಿಯಿತು?"

ಎಂದು ಕೇಳಿದ. ವಾಮನರಾಯರು ಕಾರಿನ ಕಿಟಕಿಯಿಂದ ಹೊರಗೆ ತಲೆ ಹಾಕಿ,

"ನಮ್ಮ ದತ್ತೂ ಹೇಳಿದ. ಸೂರಜ್ ಶಂಕರರಾವ್ ಹೇಳಿದ. ನಿಮ್ಮಂಥಾ ದೊಡ್ಡ ಕಲಾವಿದರು ಮಂದೀ ಕಣ್ಣಿಗೆ ಬೀಳಲಿಕ್ಕೇ ಬೇಕು ನೋಡರೀ. ಆದರ ಒಬ್ಬನಾದರೂ ನಿಮ್ಮ ಪತ್ತ್ಯಾ ಕೊಡಲಿಲ್ಲ. ಅಲ್ಲಿ ಕಂಡಿದ್ದಿವಿ, ಇಲ್ಲಿ ಕಂಡಿದ್ದಿವಿ ಅಂಬೋ ಮಾತು ಹೇಳಿದರೆ ಶಿವಾಯ್ ಎಲ್ಲಿ ಮೊಕ್ಕಾಂ ಮಾಡೀರಿ, ಏನು ಕಥೀ ಅಂಬೋ ಸಮಾಚಾರನೇ ಇಲ್ಲ"

ಎಂದು ನಕ್ಕು ನುಡಿದರು. ಶಂಕರರಾಯನ ಹೆಸರು ಕೇಳಿ ಮಧುಸೂದನನ ಮನಸ್ಸು ತಟಕ್ಕನೆ ಸೆಟೆದುಕೊಂಡಿತು. ಆ ಪಾಪಿ ಇನ್ನೂ ಏನೇನು ಹೇಳಿಬಿಟ್ಟಿರುವನೋ, ವಾಮನರಾಯರು ಮರ್ಯಾದೆಗಾಗಿ ಏನೇನು ಮುಚ್ಚಿಡುತ್ತಿರುವರೋ ಎನ್ನಿಸಿತು. ಅವರ ಕಣ್ಣಿಗೆ ತಾನು ಬೀಳಬಾರದಾಗಿತ್ತು ಎನ್ನಿಸಿತು. ಆದರೆ ಕೈ ಮೀರಿದ ಕೆಲಸಕ್ಕೆ ಉಪಾಯವಿರಲಿಲ್ಲ. ರಾಯರು ಮತ್ತೊಮ್ಮೆ ಅವನಿಗೆ ಮಾರನೆಯ ದಿನದ ಆಹ್ವಾನ ಜ್ಞಾಪಿಸುತ್ತ,

"ನಾ ಬರತೀನಿ ಇನ್ನ. ನಾಳಿ ನಾಳಿದರ ಹಾಂಗ ಖಂಡಿತ ಬನ್ನಿರಿ. ತಪ್ಪಿಸಿಕೊಳ್ಳಬೇಡಿರಿ ಮತ್ತ"

ಎಂದು ಹೇಳಿ ಹೊರಟುಬಿಟ್ಟರು. ಮಧುಸೂದನ 'ಷಿರಾಜ್‌ಮಂಜಿಲ್' ಹಾದಿ ಹಿಡಿದ.

ರೋಷನ್‌ಬಾಯಿ ಸ್ವಲ್ಪ ಅಸಮಾಧಾನದಿಂದಲೇ ಮನೆಗೆ ಹಿಂತಿರುಗಿದ್ದಳು. ಮಧುಸೂದನ ತನ್ನನ್ನು ಹಾಗೆ ನಡುಹಾದಿಯಲ್ಲಿ ಕೈಬಿಟ್ಟದ್ದು ಅವಳ ಮನಸ್ಸಿಗೆ ಹಿತವಾಗಿರಲಿಲ್ಲ. ಅವನು ಯಾರೋ ಗಣ್ಯ ಪರಿಚಿತ ವ್ಯಕ್ತಿಯನ್ನು ಕಂಡು, ತನ್ನ ಜೊತೆಯಲ್ಲಿದ್ದಾಗ ಅವರ ಕಣ್ಣಿಗೆ ಬೀಳಬಾರದೆಂದು ಭಾವಿಸಿ ತನ್ನನ್ನು ಮನೆಗೆ ಸಾಗಹಾಕಿದ್ದನೆನ್ನುವುದು ಅವಳಿಗೇನೂ ಅರ್ಥವಾಗದಿರಲಿಲ್ಲ. ಆ ಸನ್ನಿವೇಶ ಅವಳ ಮನಸ್ಸಿಗೆ ಕಿಂಕೃತಿಯನ್ನುಂಟುಮಾಡಿತ್ತು. ಮಧುಸೂದನನ ಮೇಲೆ ಸ್ವಲ್ಪ ಕೋಪವೂ ಬಂದಿತ್ತು. ಮನೆಗೆ ಬಂದವಳು ಊಟವನ್ನೂ ಮಾಡದೆ ನೇರವಾಗಿ ತನ್ನ ರೂಮು ಸೇರಿ ಬಾಗಿಲು ಹಾಕಿಕೊಂಡು ಮಲಗಿಬಿಟ್ಟಳು.

ಮಧುಸೂದನ ಹಿಂತಿರುಗಿದಾಗ ರೋಷನ್ನಳ ರೂಮಿನ ಬಾಗಿಲು ಮುಚ್ಚಿದ್ದುದನ್ನು ಕಂಡು ಅವನಿಗೆ ಆಶ್ಚರಿಯಾಯಿತು. ಅವರಿಬ್ಬರೂ ಒಳಗಿದ್ದಾಗಲ್ಲದೆ ಬೇರೆ ಯಾವಾಗಲೂ ಹೀಗೆ ಬಾಗಿಲು ಹಾಕುತ್ತಿರಲಿಲ್ಲ. ಅವಳೊಬ್ಬಳೇ ಒಳಗಿದ್ದರೆ ಬಾಗಿಲೇಕೆ ಹಾಕಿಕೊಳ್ಳಬೇಕು ? ಇಲ್ಲ, ಅವಳೊಡನೆ ರೂಮಿನಲ್ಲಿ ಇನ್ನಾರಾದರೂ ಇದ್ದಾರೆಯೆ ಎಂದು ಅವನ ಮನಸ್ಸು ಒಂದು ಕ್ಷಣದಲ್ಲಿ ಸಂಶಯಗ್ರಸ್ತವಾಯಿತು. ಒಮ್ಮೆ ಮೆಲ್ಲನೆ ಬಾಗಿಲು ತಟ್ಟಿ ಅಲ್ಲೇ ನಿಂತುಕೊಂಡ.

ಎರಡು ನಿಮಿಷ ಬಿಟ್ಟು ರೋಷನ್ ಬಂದು ಬಾಗಿಲು ತೆರೆದಳು. ಅವಳ ಮುಖದ ಮೇಲೆ ಅಸಮಾಧಾನದ ಚಿಹ್ನೆಗಳು ಸ್ಪಷ್ಟವಾಗಿ ಕಾಣುತ್ತಿದ್ದವು.

"ಸುತ್ತಾಡಿದ್ದೆಲ್ಲಾ ಆಯಿತೆ ?"

ಧ್ವನಿ ಕಠಿನವಾಗಿಯೇ ಇತ್ತು. ಅದರೊಡನೆ ಸೂಕ್ಷ್ಮ ವ್ಯಂಗ್ಯವೂ ಕಾಣುತ್ತಿತ್ತು.

"ಸುತ್ತಾಡುವುದಕ್ಕೆ ನಾನೆಲ್ಲಿಗೆ ಹೋಗಿದ್ದೆ ?"

"ಎಲ್ಲಿಗೆ ಹೋಗಿದ್ದಿರೆನ್ನುವುದು ನನಗೇನು ಗೊತ್ತು ? ನಿಮಗೂ ನಿಮ್ಮ ಶ್ರೀಮಂತ ಮಿತ್ರರಿಗೂ ಗೊತ್ತು."

"ಅವರು ಬರೀ ಶ್ರೀಮಂತರು ಮಾತ್ರವೇ ಅಲ್ಲ, ಸಜ್ಜನವೂ ಹೌದು."

"ಅದಕ್ಕೇ ನನ್ನ ಕೈಬಿಟ್ಟು ಅವರನ್ನು ಮಾತಾಡಿಸಲು ಹೋದಿರೇನೋ ?"

"ಏಕೆ, ನಾನವರೊಡನೆ ಮಾತಾಡಬಾರದಾಗಿತ್ತೆ ?"

" ಆಡಿಸಬಾರದೆಂದು ನಾನು ಹೇಳಲಿಲ್ಲ."

" ಮತ್ತೇನು ನೀನು ಹೇಳಿದ್ದು ?"

" ನನ್ನ ಜೊತೆಯಲ್ಲಿ ಅವರ ಕಣ್ಣಿಗೆ ಬೀಳಬಾರದೆಂದು ನೀವು ಭಾವಿಸಿದಿರಿ, ಅಲ್ಲವೆ ?"

" ಹೌದು, ಅದರಲ್ಲಿ ಒಂದು ಸೂಕ್ಷ್ಮವಿತ್ತು."

" ಏನದು, ಸೂಕ್ಷ್ಮ? ನನ್ನ ಕೂಡ ನೀವಿದ್ದುದನ್ನು ಅವರು ಕಂಡಿದ್ದರೆ ನಿಮಗೆ ಅಪಮಾನವಾಗುತ್ತಿತ್ತೇನು ?"

ರೋಷನ್ ಆಯಕಟ್ಟಾದ ಸ್ಥಳ ನೋಡಿ ಹೊಡೆದಳು. ಆ ಮಾತಿನೇಟಿಗೆ ತತ್ತರಿಸಿದ ಮಧುಸೂದನ ಉತ್ತರಕೊಡಲಾರದೆ ಹೋದ.

" ಹೇಳಿ, ಸಂಕೋಚವೇಕೆ ?"

" ಒಂದು ರೀತಿಯಲ್ಲಿ ತೊಡಕಾಗುತ್ತಿತ್ತು ; ನಾಲ್ಕು ಜನದ ಬಾಯಿಗೆ ಬೀಳುತ್ತಿತ್ತು."

" ಹಾಗೆ ಬಿದ್ದಿದ್ದರೆ ನಿಮಗೇನು ಭಯವಿರುತ್ತಿತ್ತು ?"

ಮಧುಸೂದನ ಉತ್ತರ ಕೊಡದೆ ಸುಮ್ಮನೆ ಇದ್ದ.

" ಹೌದು ? ನಿಮಗೆ ಅಪಮಾನವಾಗುತ್ತಿತ್ತು. ದೊಡ್ಡ ವಿದ್ವಾಂಸರು ಸಿಕ್ಕಿದ ಹೆಂಗಸರೊಡನೆ ಅಲೆಯುತ್ತಾರೆಂದು ಜನ ಆಡಿಯಾರೆಂದು ನಿಮಗೆ ದಿಗಿಲಾಯಿತು, ಅಲ್ಲವೆ ?"

" ದಿಗಿಲಲ್ಲ, ಒಂದು ರೀತಿಯಲ್ಲಿ ಸಂಕೋಚವಾಯಿತೆನ್ನಬೇಕು. ಸಭ್ಯ ಸಮಾಜದಲ್ಲಿ ವ್ಯವಹರಿಸುವಾಗ ನಾವು ಅನೇಕ ಸಂಗತಿಗಳನ್ನು ಗಮನಿಸ ಬೇಕಾಗುತ್ತದೆ, ರೋಷನ್."

" ಅಂಥ ಸಭ್ಯ ಸಮಾಜಕ್ಕೆ ನಮ್ಮಂಥವರು ತಕ್ಕವರಲ್ಲವೆಂದು ನೀವೆಣಿ ಸಿದಿರಲ್ಲವೆ ?"

" ನೀನು ಸುಮ್ಮನೆ ತಪ್ಪು ತಿಳಿದುಕೊಳ್ಳುತ್ತಿದ್ದೀ. ನಾನೆಂದೂ ಹಾಗೆ ಭಾವಿಸಿಲ್ಲ."

" ಭಾವಿಸದೆ ಹಾಗೆ ಮಾಡಿದಿರಾ ? ಅದರಿಂದ ನನ್ನ ಮನಸ್ಸು ಎಷ್ಟು ನೊಂದಿತೆನ್ನುವುದನ್ನು ಬಲ್ಲಿರಾ ?"

"ನಿನ್ನ ಮನಸ್ಸು ನೊಂದಿದ್ದರೆ ಅದಕ್ಕೆ ಕಾರಣ ನಾನಲ್ಲ; ನಾನೂ ನೀನೂ ನಿರೀಕ್ಷಿಸದಿದ್ದ ಸನ್ನಿವೇಶ."

"ನಮ್ಮಲ್ಲಿ ತಪ್ಪಿಟ್ಟುಕೊಂಡು ಸನ್ನಿವೇಶದ ಮೇಲೇಕೆ ಹಾಕಬೇಕು?"

"ನಿನಗೆ ಉತ್ತರ ಕೊಡುವ ಇಚ್ಛೆ ನನಗಿಲ್ಲ. ಹೇಗೆ ಬೇಕೋ ಹಾಗೆ ಮಾತಾಡಿಕೋ."

"ನನಗೂ ನಿನ್ನೊಡನೆ ಚರ್ಚೆ ಬೆಳೆಸಲಿಷ್ಟವಿಲ್ಲ"

ಎಂದು ಉಕ್ಕುತ್ತಿದ್ದ ಅಸಮಾಧಾನದಲ್ಲಿ ರೂಮಿನ ದೀಪ ಆರಿಸಿ, ಸರ್ರನೆ ಹೋಗಿ ಮಂಚದ ಮೇಲೆ ಬಿದ್ದುಕೊಂಡು ಮುಖ ಮುಚ್ಚುವಂತೆ ರಗ್ಗ ಳೆದು ಕೊಂಡಳು. ಮಧುಸೂದನನಿಗೂ ಅಲ್ಲಿ ನಿಲ್ಲಲಾಗಲಿಲ್ಲ. ಕೈಗೆ ಸಿಕ್ಕಿದ ಒಂದು ಶಾಲನ್ನೆಳೆದುಕೊಂಡು ಅವನೂ ಬೈಠಕ್‌ಖಾನೆಯತ್ತ ಹೊರಟುಹೋದ.

ಅವನ ಮನಸ್ಸೂ ಖಿನ್ನವಾಗಿತ್ತು. ಬೈಠಕ್‌ಖಾನೆ ಸೇರಿ ಬಾಗಿಲನ್ನು ಮುಂದೆ ಮಾಡಿ ಸೋಫಾದ ಮೇಲೆ ಸುಮ್ಮನೆ ಬಿದ್ದುಕೊಂಡ. ಮಂದಿರದಲ್ಲಿ ಮಂದಪ್ರಕಾಶವುಳ್ಳ, ನಸುನೀಲಿಯ ದೀಪವೊಂದು ಸಣ್ಣಗೆ ಉರಿಯುತ್ತಿತ್ತು. ಸುತ್ತಲೂ ನಿಶ್ಶಬ್ದವಾಗಿತ್ತು. ಹಾಡಿಕೆಯ ವೇಳೆಗಳಲ್ಲಿ ಕಳಕಳಿಸುತ್ತಿದ್ದ ಆ ಮಂದಿರ ಈಗ ಶೂನ್ಯವಾಗಿ ಕಳಾವಿಹೀನವಾಗಿತ್ತು. ಆ ಆವರಣ ಅವನ ಮನಸ್ಸಿನ ವೇದನೆಯನ್ನು ಪುಟಗೊಳಿಸಿತು. ಮುಂಬಯಿಗೆ ಬಂದ ಮೇಲೆ ಮೊದಲ ಬಾರಿಗೆ ಅವನ ಹೃದಯ ಒಂಟಿಯಾಗಿತ್ತು. ಆತ್ಮದ ಏಕಾಂತದಲ್ಲಿ ಅವನ ಬುದ್ಧಿ ಗತಾವಲೋಕನದಲ್ಲಿ ಮುಳುಗಿತು—

ತವಿಸಲಾರದ ದುಃಖವೊಂದನ್ನು ಮರೆಯಲು ಅವನು ಸುಖವನ್ನರಸಿ ಮುಂಬಯಿಗೆ ಬಂದಿದ್ದ. ಆ ಸುಖವನ್ನು ಅವನಿಗೆ ರೋಷನ್ ನಿರ್ವಂಚನೆ ಯಿಂದ ನೀಡಿದ್ದಳು. ಇತರರ ವಿಷಯದಲ್ಲಿ ಅವಳ ಭಾವನೆ ಹೇಗಾದರೂ ಇದ್ದಿರಲಿ, ಮಧುಸೂದನನ ವಿಷಯದಲ್ಲಿ ಆಸಕ್ತಿಯಿಂದಲೇ ಇದ್ದಳು. ಅವನೂ ಬಿಂಗಿಯಂತೆ ಬರಿಗೈಯಲ್ಲಿ ಬಂದು ನಿಂತು ಅವಳ ಸ್ನೇಹಭಿಕ್ಷೆಗೆ ಕೈಚಾಚಿರಲಿಲ್ಲ. ಮೈಸೂರಿನಿಂದ ಬರುವಾಗ ನಗದು ಐದುಸಾವಿರ ರೂಪಾಯಿಗಳನ್ನು ತಂದಿದ್ದ. ಮುಂಬಯಿಗೆ ಬಂದ ದಿನವೇ ಐದು ನೂರು ರೂಪಾಯಿಗಳ ಒಂದು ನೋಟಿನ ಕಟ್ಟನ್ನು ರೋಷನ್ನಳ ಕೈಯಲ್ಲಿಟ್ಟಿದ್ದ. ಆದರೆ ಅವಳದನ್ನು ಒಮ್ಮೆಯೇ ಸ್ವೀಕರಿಸಿಬಿಡುವಂಥ ಲೋಭಿಯಾಗಿರಲಿಲ್ಲ.

"ನಾನು ಈ ಹಣಕ್ಕಾಗಿ ನಿಮ್ಮನ್ನು ಅಪೇಕ್ಷಿಸಿದೆನೆಂದು ತಿಳಿದಿರಾ?" ಎಂದು ಪ್ರಶ್ನಿಸಿದ್ದಳು. ಅವಳ ದೊಡ್ಡ ಗುಣ ನೋಡಿ ಅವನಿಗೇ ಅಚ್ಚರಿಯಾಗಿತ್ತು.

"ನೀನು ಅಪೇಕ್ಷೆ ಪಡುತ್ತೀಯೆಂದು ನಾನು ಕೊಡುತ್ತಿಲ್ಲ. ನನ್ನ ಅಭಿಮಾನಕ್ಕಾಗಿ ಕೊಡುತ್ತಿದ್ದೇನೆ. ನನ್ನದಾಗಿ ಇದು ನಿನ್ನಲ್ಲಿರಲಿ."

"ಬೇಡ, ನಿಮ್ಮ ಹತ್ತಿರವೇ ಇರಲಿ. ಬೇಕಾದರೆ ಕೇಳುತ್ತೇನೆ" ಎಂದು ನಿರಾಕರಿಸಿಬಿಟ್ಟಿದ್ದಳು. ಆದರೆ ಅವಳೆಂದೂ ಹಣಕ್ಕಾಗಿ ಅವನನ್ನು ಕೇಳಿರಲಿಲ್ಲ. ಬಂದ ಒಂದು ತಿಂಗಳ ಅವಧಿಯಲ್ಲಿ ಅವನೇ ಮನೆಯ ಖರ್ಚಿಗೋ ಬೇರೆಯ ಓಡಾಟಕ್ಕೋ ಒಂದು ಸಾವಿರ ರೂಪಾಯಿ ವೆಚ್ಚಮಾಡಿದ್ದ. ರೋಷನ್ನಳಿಗೆ ಒಂದು ಜೊತೆ ಬೆಲೆ ಬಾಳುವ ಜುಂಕಿ, ಒಂದು ಟಿಷ್ಯೂ ಸೀರೆ ತೆಗೆದುಕೊಟ್ಟಿದ್ದ. ಅವುಗಳನ್ನು ತೆಗೆದುಕೊಟ್ಟಾಗ ಅವಳು ಬೇಡವೆನ್ನಲಿಲ್ಲ; ಸುಮ್ಮನಿದ್ದಿದ್ದರೆ ಬಹುಶಃ ಕೇಳುತ್ತಲೂ ಇರಲಿಲ್ಲ. ತಾಯಿ ಖರ್ಚಿಗೆ ಕೊಡುತ್ತಿದ್ದ ಹಣವೇ ಅವಳ ಕೈಯ್ಯಲ್ಲಿ ಸಾಕಷ್ಟು ಓಡಾಡುತ್ತಿತ್ತು. ಆದರೆ ತನ್ನ ಮರ್ಯಾದೆಗಾಗಿ ಮಧುಸೂದನ ವೆಚ್ಚಮಾಡುವುದು ಅಗತ್ಯವಾಗಿತ್ತು.

ರೂಪಕ್ಕೆ ಹತ್ತು ಪಾಲು ಮಿಗಿಲಾದ ರಸಿಕತೆ ಅವಳಲ್ಲಿತ್ತು. ಅವನಿಗೆ ಅವಳ ಅಂಗಸುಖ ಎಷ್ಟು ಬೇಕಾಗಿತ್ತೋ ಅದಕ್ಕೆ ಇಮ್ಮಡಿಯಾಗಿ ಅವಳಿಗೂ ಅವನ ಸಹವಾಸ ಬೇಕಾಗಿತ್ತು. ಅದರಲ್ಲಿ ಅವಳು ಮುಚ್ಚುಮರೆ ಮಾಡುತ್ತಿರಲಿಲ್ಲ. ಮಧುಸೂದನ ಬಂದ ಮೇಲೆ ಮೊದಲ ಮೂರು ದಿವಸ ಇಬ್ಬರೂ ಉನ್ಮತ್ತರಾಗಿ ಬರ ಬಿಡಿಸುವಂತೆ ಸುಖದಲ್ಲಿ ಮುಳುಗಿಬಿಟ್ಟಿದ್ದರು. ಆ ಉಬ್ಬರ ಕಳೆಯುವವರೆಗೂ ಇಬ್ಬರಿಗೂ ಪ್ರಜ್ಞೆ ಇರಲಿಲ್ಲ. ಆ ಬಳಿಕವೂ ಅವಳ ಉತ್ಸಾಹ ಇಳಿಮುಖವಾಗಿರಲಿಲ್ಲ. ಅವಳ ಹುರುಪು ಅವನಿಗೂ ಸೋಕಿತ್ತು.

ಆ ಕಾಲದಲ್ಲೇ ಅವಳು ಅವನಿಗೆ ಮದ್ಯದ ಸವಿಯನ್ನೂ ತೋರಿಸಿದ್ದಳು. ಅದನ್ನು ಕಂಡು ಮೊದಲು ಅವನು ಅಸಹ್ಯಪಟ್ಟುಕೊಂಡಿದ್ದ; ಜೊತೆಗೆ ಭಯವೂ ಆಗಿತ್ತು. ಮದ್ಯ ವಿನಾಶಕ್ಕೆ ಹೆಬ್ಬಾಗಿಲು ಎನ್ನುವ ಕಲ್ಪನೆ ಅವನ ಮನಸ್ಸಿನ ಸುತ್ತ ಒಂದು ಕೋಟೆಯನ್ನೇ ನಿರ್ಮಿಸಿಬಿಟ್ಟಿತ್ತು. ಆದರೆ ರೋಷನ್ ಅನುನಯದಲ್ಲಿ ಆ ಕೋಟೆಯನ್ನು ಪ್ರವೇಶಿಸಿದ್ದಳು.

“ ಭೋಗಕ್ಕೆ ಇದು ವ್ಯಂಜನವಿದ್ದಂತೆ, ದೊರೆ. ಇದಿಲ್ಲದಿದ್ದರೆ ಅದ
ರುಚಿಸುವುದಿಲ್ಲ ”

ಎಂದು ಅರ್ಥವತ್ತಾಗಿ ನುಡಿದಿದ್ದಳು. ಭೋಗವಿತರಣೆಯಲ್ಲಿ ಅವಳೊಂದ
ರತ್ನದಂತಿದ್ದಳು. ಅವಳ ಪ್ರೌಢಿಮೆ ಕಂಡು ಅವನಿಗೇ ಅಚ್ಚರಿಯಾಗಿತ್ತು
ಅವನು ಅವಳಲ್ಲಿ ಪೂರ್ತಿ ಸುಖಪಟ್ಟಿದ್ದ. ಅದರಲ್ಲಿ ಪ್ರೇಮವಿತ್ತೋ ಇಲ್ಲವೊ
ಎನ್ನುವುದು ಅವನ ಭಾಗಕ್ಕೆ ಗೌಣವಾದ ವಿಷಯವಾಗಿತ್ತು. ಅವನಿ
ಬೇಕಾಗಿದ್ದುದು ಮೈಮರೆಸುವ ಸುಖ. ಅದನ್ನವಳು ಧಾರಾಳವಾಗಿ ನೀಡಿದ್ದಳು
ನಿಜವಾದ ಸುಖದಿಂದ ವಂಚಿತನಾಗಿದ್ದವನಿಗೆ ಇದಕ್ಕಿಂತ ಇನ್ನೇನು ಬೇಕಾಗಿತ್ತು

ನಿಜವಾದ ಸುಖ? ಅಂಥ ಸುಖವನ್ನು ಅವನು ಎಂದೋ ಹಿಂದೆ ಬಿಟ್ಟು
ಬಂದಿದ್ದ.

ಮಧುಸೂದನನ ಮನಸ್ಸಿನ ಮುಂದೆ ಲಲಿತನ ಲಾವಣ್ಯಮಯ ಮೂರ್ತಿ
ಇದ್ದಕ್ಕಿದ್ದ ಹಾಗೆ ಎದ್ದುನಿಂತಿತು. ಅದರ ದರ್ಶನದಿಂದ ಅವನ ಬುದ್ಧಿ ಒಂದ
ಗಳಿಗೆ ಅಪ್ರತಿಭವಾಯಿತು. ಯಾವುದೋ ಕಳಂಕದಿಂದ ಅಳುಕಿದವನಂತೆ
ಆ ರೂಪವನ್ನು ನೋಡಲಾರದೆ ಮುಖ ಮುಚ್ಚಿಕೊಂಡ.

ಅವನು ಲಲಿತನಿಗೆ ವಂಚನೆ ಮಾಡಿ ಬಂದಿದ್ದನೆ? ವಂಚನೆ ಮಾಡಿದ್ದ
ವರು ಯಾರು? ಹಾಗೆ ಮಾಡಬೇಕೆಂದಿದ್ದರೆ ಅವಳೇ ತನ್ನ ಸರ್ವಸ್ವವೆಂದು
ಭಾವಿಸಿ ಪ್ರೀತಿಸುವ ಅಗತ್ಯವಾದರೂ ಏನಿತ್ತು? ಲಲಿತನಿಗೆ ಗಂಡು ನೋಡಿದ್ದೆ
ವೆಂದು ಅಯ್ಯರರು ಬರೆದಾಗ ಅವಳ ಒಪ್ಪಿಗೆಯಿಲ್ಲದೆ ಬರೆದಿದ್ದರೆ? ಅವಳಿಂದ
ಬಂದಿದ್ದ ಕಾಗದಗಳೊಂದರಲ್ಲಿಯೂ ಆ ವಿಷಯದ ಪ್ರಸ್ತಾಪವೇ ಇಲ್ಲದಿದ್ದುದಕ್ಕೆ
ಏನರ್ಥ? ಅಂತರ್ಯ ಹೀಗಿದ್ದೂ ಅವಳ ಬರಿಯ ಬಾಯಿಮಾತಿನ ಉಪಚಾರಕ್ಕೆ
ತಾನು ಮರುಳಾಗಬೇಕಾಗಿತ್ತೆ? ತಾನೊಲಿದ ಹೆಣ್ಣು ಅವಳ ಇಚ್ಛೆಯಿಂದಾ
ಗಿಯೇ ಅನ್ಯರ ಸ್ವತ್ತಾಗುವುದನ್ನು ನೋಡಿಯೂ ಸುಮ್ಮನೆ ಕುಳಿತಿರಬೇಕಾಗಿತ್ತೆ?

“ ನನ್ನ ಮಗಳ ಮದುವೆಯಾದಾಗ ನಿಮ್ಮದೇ ಸಂಗೀತ ಕಚೇರಿ!”

ಅದು ಅಯ್ಯರರ ಕಾಗದದಲ್ಲಿದ್ದ ಮಾತು. ಎಂಥ ಅಣಕ, ಎಂಥ
ವಿಪರ್ಯಾಸ. ತನ್ನದಲ್ಲದ ಆ ಸುಖವನ್ನು ನೋಡುವುದು ಸಾಲದೆ ಹಾಡಿ
ಹೊಗಳುವುದಕ್ಕೂ ತಾನು ಹೋಗಬೇಕಾಗಿತ್ತೇ?

ಮಧುಸೂದನ ಮರುಕೊಳಿಸಿದ ಹಳೆಯ ವೇದನೆಯಿಂದ ತರಹರಿಸಿದ.

ಅವನ ಅಂತಸ್ತಾಪವನ್ನು ಮರೆಯಿಸುವ ಒಂದೇ ಒಂದು ಜೀವಕ್ಕೆ ಅವನ ಮೇಲೆ ಸಿಟ್ಟು ಬಂದಿತ್ತು. ಅನಿರೀಕ್ಷಿತವಾಗಿ ಒದಗಿದ ಒಂದು ಪ್ರಸಂಗ ನಿರಾತಂಕವಾಗಿ ನಡೆಯುತ್ತಿದ್ದ ಅವರ ಭೋಗ ಜೀವನದ ಸವಿಗೆ ಹುಳಿ ಹಿಂಡಿ ಬಿಟ್ಟಿತ್ತು. ಕೈಮೀರಿದ ಪ್ರಸಂಗಕ್ಕೆ ಮಧುಸೂದನ ತನ್ನನ್ನು ತಾನೇ ಹಳಿದು ಕೊಂಡ.

ರೋಷನ್ನಳಿಗಾದರೂ ನಿದ್ದೆ ಬಂದಿತ್ತೆ?

ಅವಳೂ ನಿದ್ದೆಯಿಲ್ಲದೆ ಹಾಸಿಗೆಯ ಮೇಲೆ ಹೊರಳಾಡುತ್ತಿದ್ದಳು. ಏನು ಮಾಡಿದರೂ ನಿದ್ದೆ ಅವಳ ಹತ್ತಿರ ಸುಳಿಯಲೊಲ್ಲದು. ಒಂದು ತಿಂಗಳಿಂದ ಅವನ ಸಾಹಚರ್ಯ ಅವಳಿಗೆ ಅಭ್ಯಾಸವಾಗಿ ಹೋಗಿತ್ತು. ಆ ಸಹವಾಸ ಅವಳ ಮನಸ್ಸಿಗೊಂದು ನೆಮ್ಮದಿಯನ್ನು ತಂದಿತ್ತು. ಅದರಲ್ಲಿ ಅವಳು ಒಂದು ಸವಿಯನ್ನು ಕಂಡಿದ್ದಳು. ಅವನೊಡನೆ ಸುಖದಲ್ಲಿ ಮುಳುಗಿದಷ್ಟೂ ಅವಳ ದಾಹ ಹೆಚ್ಚುತ್ತಿತ್ತು. ಅದರಲ್ಲಿ ಏನೋ ಒಂದು ಮೋಹಕತೆ ಇತ್ತು. ಅಂಥ ಅನುಭವ ಅವಳಿಗೆ ಬೇರೆ ಕಡೆ ಆಗಿರಲಿಲ್ಲ. ಇತರರ ಸಂಗ ಮಾಡಲು ಎಂದೂ ತಾನಾಗಿ ಬಯಸದಿದ್ದ ರೋಷನ್ ಮಧುಸೂದನನೊಡನೆ ಮೈಬಿಚ್ಚಿ, ಮನಬಿಚ್ಚಿ ಕೂಡಿದ್ದಳು. ಅವನ ಸನಾಗಮ ಅವಳಿಗೆ ಪ್ರಿಯವಾಗಿತ್ತು.

ಅವನ ಮೇಲೆ ಅವಳಿಗೆ ಅತಿಶಯವಾದ ಮೋಹವಿತ್ತು. ಅಂತೆಯೇ ಅವನ ವಿದ್ವತ್ತು ಕೀರ್ತಿಗಳ ಬಗೆಗೆ ಗೌರವವೂ ಇತ್ತು. ಹಾಗೆಂದು ಅವಳು ಅವನಿಗೆ ತನ್ನ ಸರ್ವಸ್ವವನ್ನೂ ಒಪ್ಪಿಸಿರಲಿಲ್ಲ. ಅವಳಿಗೂ ಒಂದು ವ್ಯಕ್ತಿತ್ವವಿತ್ತು, ಆತ್ಮಗೌರವವಿತ್ತು, ಕಲಾವಿದರ ಪಂಕ್ತಿಯಲ್ಲಿ ಸ್ಥಾನವಿತ್ತು. ಆ ಸ್ಥಾನ ಮಧುಸೂದನನಷ್ಟು ಉನ್ನತವಲ್ಲದಿರಬಹುದು. ಆದರೆ ತನ್ನಮಟ್ಟಿಗೆ ಗಣ್ಯ ವಾಗಿಯೇ ಇತ್ತು. ಅವಳೇನೂ ಬೀದಿಯ ಬೆಲೆವೆಣ್ಣಾಗಿ ಕಂಡವರ ಕಣ್ಣ ನೋಟಕ್ಕೆ ಸೋಲುವಂಥವಳಾಗಿರಲಿಲ್ಲ. ಒಂದು ರೀತಿಯಲ್ಲಿ ತನ್ನ ಗೌರವವನ್ನು ತಾನು ಉಳಿಸಿಕೊಂಡೇ ಬಂದಿದ್ದಳು. ಅದನ್ನಾದರೂ ಅವನು ಲಕ್ಷಿಸ ಬಹುದಾಗಿತ್ತು.

ತಮ್ಮಿಬ್ಬರ ಸಂಬಂಧದಲ್ಲಿ ಪರಸ್ಪರ ಆಕರ್ಷಣೆಯೇ ಮುಖ್ಯವಾಗಿತ್ತೆನ್ನು ವುದನ್ನು ಅವಳು ಮರೆತಿರಲಿಲ್ಲ. ಅದನ್ನರಿತೇ ಇಬ್ಬರೂ ಭೋಗಾಸಕ್ತರಾಗಿದ್ದರು. ಆದರೆ ಅದನ್ನು ಮೀರಿದುದು ಮತ್ತೊಂದಿಲ್ಲವೆನ್ನುವಂತೆ ಬಹಿರಂಗವಾಗಿ

ವರ್ತಿಸುವುದು ಕಠಿನತೆಯ ಚಿಹ್ನೆಯಾಗಿತ್ತು. ಮಧುಸೂದನನ ಈ ವರ್ತನೆ
ಯಿಂದ ಅವಳಿಗೆ ಸಿಟ್ಟು ಬಂದಿತ್ತು. ಮನೆಗೆ ಬಂದೊಡನೆಯೇ ಅವನನ್ನು
ಚೆನ್ನಾಗಿ ಛೇಡಿಸಿ ತನ್ನ ಆಗ್ರಹವನ್ನು ತೀರಿಸಿಕೊಂಡುಬಿಟ್ಟಿದ್ದಳು.

ಆದರೀಗ ಆ ಸಿಟ್ಟು ಇಳಿದುಹೋಗಿತ್ತು. ಮಳೆಗಾಲದಲ್ಲಿ ಹುಚ್ಚು
ಹೊಳೆಗೆ ಬಂದ ಪ್ರವಾಹ ಬಂದಷ್ಟೇ ಬೇಗ ಇಳಿದುಹೋಗುವಂತೆ ಅವಳ
ಮನಸ್ಸಿನ ಎರಡೂ ದಡಗಳನ್ನು ತುಂಬಿ ಹರಿಯುತ್ತಿದ್ದ ಕೋಪದ ತೊರೆ ಬತ್ತಿ
ಪಾತ್ರ ತಿಳಿಯಾಗಿತ್ತು. ಆಗ್ರಹ ಕಳೆದ ಮನಸ್ಸಿನಲ್ಲಿ ತಿಳಿವಿನ ಸಂಚಾರವಾಗಿ
ಅವಳಿಗೆ ತನ್ನ ಭಾಗದ ತಪ್ಪೂ ಗೋಚರವಾಯಿತು. ಮಧುಸೂಧನನ ಜೀವನದ
ಯಾವುದೋ ಒಂದು ಭಾಗದಲ್ಲಿ ಅವಳಿಗೆ ಪ್ರವೇಶವಿತ್ತೇ ವಿನಾ ಅವನ ಇಡಿಯ
ಜೀವನವನ್ನೇ ನಿಯಮನ ಮಾಡುವ ಅಧಿಕಾರ ಅವಳಿಗಿರಲಿಲ್ಲ. ಅದನ್ನರಿತು
ಅವಳು ಎಚ್ಚರಗೊಂಡಳು. ತನ್ನ ದುಡುಕಿಗಾಗಿ ಅವಳಿಗೆ ಪಶ್ಚಾತ್ತಾಪವಾಯಿತು.
ಅವಳ ಮಾತುಗಳಿಂದ ಅವನು ಮನನೊಂದು ಹೊರಟುಹೋಗಿದ್ದ. ಅವಳ
ಛೇಡನೆಗೆ ಅವನ ಬಳಿ ಉತ್ತರವೂ ಇರಲಿಲ್ಲ. ಅವನ ಬಗೆಗೆ ಅವಳಿಗೆ ಏನೋ
ಒಂದು ಬಗೆಯ ಮರುಕ ಮೂಡಿತು. ಅವನನ್ನು ಸಂತೈಸುವ ತವಕ ಹುಟ್ಟಿತು.

ಆ ಸಂಕಲ್ಪ ಬಂದದ್ದೇ ತಡ, ಮಲಗಿದ್ದವಳು ಧಿಗ್ಗನೆದ್ದು ತೆಳ್ಳನೆಯ
ಅಂಗವಸ್ತ್ರವೊಂದನ್ನು ಮೈಮೇಲೆ ಹಾಕಿಕೊಂಡು ಬೈಠಕ್‌ಖಾನೆಯ ಕಡೆ
ಹೊರಟಳು.

ಯೋಚನೆಯ ಕೈಗೆ ಮನ ತೆತ್ತು, ಒಂದು ಪಕ್ಕದಿಂದ ಇನ್ನೊಂದು
ಪಕ್ಕಕ್ಕೆ ಹೊರಳುತ್ತ ಸೋಫಾದ ಮೇಲೆಯೇ ಮಲಗಿದ್ದ ಮಧುಸೂದನ
ಬಾಗಿಲು ತೆರೆದ ಸದ್ದಾದುದನ್ನರಿತು ಅತ್ತ ತಿರುಗಿ ನೋಡಿದ. ರೋಷನ್
ಬಾಗಿಲ ಹತ್ತಿರ ಬಂದು ನಿಂತಿದ್ದಳು.

"ಬನ್ನಿ, ಒಬ್ಬರೇ ಇಲ್ಲಿ ಮಲಗಿಕೊಂಡು ಏನು ಮಾಡುತ್ತೀರಿ?"

ಎಂದು ತಗ್ಗಿದ ಧ್ವನಿಯಲ್ಲಿ ನುಡಿದಳು. ಮಧುಸೂದನ ನಿರುತ್ತರನಾಗಿ
ಒಂದು ಕ್ಷಣ ಅವಳ ಮುಖವನ್ನೇ ದಿಟ್ಟಿಸಿ ನೋಡಿದ. ಅವಳ ಧ್ವನಿಯಲ್ಲಿದ್ದ
ಅರಕೆ ಅವನಿಗೆ ಅರ್ಥವಾಯಿತು. ಅದನ್ನರಿತು ಅವನ ಮನಸ್ಸಿನಲ್ಲೂ ಅನು
ಕಂಪದ ಒಂದು ಅಲೆಯೆದ್ದಿತು. ಮಲಗಿದ್ದವನು ಧಿಗ್ಗನೆದ್ದು ನಾಲ್ಕು
ಹೆಜ್ಜೆಯಲ್ಲಿ ಅವಳನ್ನು ಸಮೀಪಿಸಿ ಅವಳ ಕೈ ಹಿಡಿದುಕೊಂಡ. ರೋಷನ್
ಉನ್ಮತ್ತಳಂತೆ ಅವನನ್ನಪ್ಪಿದಳು.

೭

ನಟರಾಜ ಅಯ್ಯರರ ಮನೆಗೆ ಸುಂದರ ಭೇಟಿ ಕೊಡುವುದಕ್ಕೆ ಅವರಿತ್ತಿದ್ದ ಆಹ್ವಾನವೇ ಕಾರಣವಾಗಿತ್ತು. ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಶಿವಸ್ವಾಮಿಯೂ ಸುಂದರನೂ ಒಟ್ಟಿಗೆ ಡಿಗ್ರಿ ತೆಗೆದುಕೊಂಡಿದ್ದರು. ಆದರೆ ಶಿವಸ್ವಾಮಿ ಎಂ. ಎಸ್ಸಿ ಮುಗಿಸಿಕೊಂಡು ಡಾಕ್ಟೊರೇಟ್ ಗಳಿಸಿ ಬರಲು ಇಂಗ್ಲೆಂಡಿಗೆ ಹೊರಟ. ಸುಂದರ ವಿದೇಶಕ್ಕೆ ಹೋಗುವ ಅವಕಾಶವಿಲ್ಲದೆ ಪ್ರೆಸಿಡೆನ್ಸಿ ಕಾಲೇಜಿನಲ್ಲಿಯೇ ಹಂಗಾಮಿ ಲೆಕ್ಚರರಾಗಿ ಕೆಲಸಕ್ಕೆ ಸೇರಿದ. ಲಕ್ನೋ ಕಾಲೇಜಿನಲ್ಲಿ ಭೌತಶಾಸ್ತ್ರದ ಅಸಿಸ್ಟೆಂಟ್ ಪ್ರೊಫೆಸರ ಕೆಲಸ ಖಾಲಿ ಇದೆಯೆಂದು ಜಾಹೀರಾತು ಬಂದಾಗ ಹತ್ತರಲ್ಲಿ ಹನ್ನೊಂದಾಗಿ ಸುಂದರನ ಅರ್ಜಿಯೂ ಹೋಗಿತ್ತು. ಅರ್ಜಿ ಹಾಕಿದ ಮೇಲೆ ಅವನು ಅದರ ಆಸೆ ಬಿಟ್ಟೇ ಕುಳಿತಿದ್ದ. ಭೇಟಿಗೆ ಕರೆ ಬಂದಾಗಲೂ ಅವನಿಗೆ ನೆಚ್ಚಿಕೆಯಿರಲಿಲ್ಲ. ಆದರೆ ಕಾಲೇಜಿನ ಅಧಿಕಾರ ವರ್ಗ ತನ್ನನ್ನೇ ಆರಿಸಿಕೊಂಡಾಗ ಅವನಿಗೆ ಸಂತೋಷಕ್ಕಿಂತ ಹೆಚ್ಚಾಗಿ ಆಶ್ಚರ್ಯವಾಗಿತ್ತು.

ಕೆಲಸಕ್ಕೆ ಸೇರಿದ ಎರಡು ವರ್ಷಗಳಲ್ಲಿಯೇ ಸುಂದರ ತನ್ನ ದಕ್ಷತೆಯನ್ನು ತೋರಿಸಿಕೊಂಡಿದ್ದ. ವಿದ್ಯಾರ್ಥಿ ವರ್ಗದಲ್ಲಿ ಅವನ ಬಗೆಗೆ ಗೌರವ ಮೂಡಿತ್ತು. ವಿಶ್ವವಿದ್ಯಾನಿಲಯದ ಪ್ರೊಫೆಸರರ ವರ್ಗ ಅವನನ್ನೊಬ್ಬ ಗಣ್ಯನೆಂದು ಭಾವಿಸ ತೊಡಗಿತು. ಭೌತಶಾಸ್ತ್ರದ ಪ್ರೊಫೆಸರ ಅನಿರೀಕ್ಷಿತ ಮರಣ ಸುಂದರನನ್ನು ಆ ಸ್ಥಾನಕ್ಕೆ ಅರ್ಹನನ್ನಾಗಿ ಮಾಡಿತು. ಅದೃಷ್ಟ ಅವನ ಬಾಗಿಲಿಗೇ ಬಂದಿತು. ಅವನು ಬಹು ಬೇಗ ಪ್ರಗತಿಯ ಮೆಟ್ಟಲನ್ನು ಹತ್ತತೊಡಗಿದ.

ನಟರಾಜ ಅಯ್ಯರರು ಮದರಾಸಿನಲ್ಲಿದ್ದರೂ ಸುಂದರನ ವಿಚಾರ ಅವರಿಗೆ

ಆಗಾಗ ತಿಳಿಯುತ್ತಲೇ ಇತ್ತು. ದೊಡ್ಡ ಹುದ್ದೆಯಲ್ಲಿದ್ದ ತಂದೆಯನ್ನು ಬಾಲ್ಯ ದಲ್ಲಿಯೇ ಕಳೆದುಕೊಂಡಿದ್ದರೂ ಸುಂದರ ಚಿಕ್ಕಪ್ಪ ನೀಡುತ್ತಿದ್ದ ಅಲ್ಪ ಸಹಾಯ ದಲ್ಲಿಯೇ ವಿದ್ಯಾರ್ಜನೆ ಮುಗಿಸಿ, ಸ್ವಸಾಮರ್ಥ್ಯದಿಂದ ಮುಂದಕ್ಕೆ ಬಂದಿದ್ದ ಬಗೆಯನ್ನು ಅಯ್ಯರರು ಮೆಚ್ಚಿಕೊಂಡಿದ್ದರು. ಅವನು ಲಕ್ನೋದಲ್ಲಿ ಕಾಲೇಜಿನ ಪ್ರೊಫೆಸರಾಗಿ ನೆಲೆ ನಿಂತು ದಿನದಿನಕ್ಕೆ ಮುಂದಕ್ಕೆ ಬರುತ್ತಿದ್ದುದನ್ನು ಗಮನಿಸುತ್ತಿದ್ದ ಅವರು ತಮ್ಮ ಮನಸ್ಸಿನಲ್ಲಿಯೇ ಅವನಿಗೆ ಲಲಿತನ ಜೋಡಿ ಹಾಕಿ ನೋಡಿದ್ದರು. ಸುಂದರನನ್ನು ತಮ್ಮ ಅಳಿಯನನ್ನಾಗಿಸಿಕೊಳ್ಳಬೇಕೆನ್ನುವ ಇಚ್ಛೆ ಅಯ್ಯರರ ಮನಸ್ಸಿನಲ್ಲಿ ಅಂಕುರವಾಗಿ ಅದು ಬಹು ಬೇಗ ಮೊಳಕೆಯಿಟ್ಟು ಚಿಗುರೊಡೆಯಿತು.

ಲಲಿತನೇನೂ ಪುಟ್ಟ ಮಗುವಾಗಿರಲಿಲ್ಲ. ಮಗುವಿನ ತಾಯಿಯಾಗುವ ವಯಸ್ಸು ಅವಳಿಗಾಗಿತ್ತು. ಈ ಮಾಘಕ್ಕೆ ಅವಳಿಗೂ ಇಪ್ಪತ್ತುಮೂರು ತುಂಬುತ್ತಿತ್ತು. ಅವಳ ಓರಗೆಯ ಸುಧಾ, ಕುಮಾರಿ, ಪ್ರೇಮಾ ಅವರೆಲ್ಲ ಮದುವೆಯಾಗಿ ಗಂಡಂದಿರ ಮನೆ ಸೇರಿ ವರ್ಷ ಎರಡು ವರ್ಷ ಆಗಿತ್ತು. ಮಗಳನ್ನು ಯೋಗ್ಯವಾದ ಕಡೆನೋಡಿ ಮದುವೆ ಮಾಡಿಕೊಡದೆ ಅನಿಶ್ಚಿತವಾಗಿ ಮನೆಯಲ್ಲಿಟ್ಟುಕೊಂಡಿರುವುದು ಅಯ್ಯರರಿಗೆ ವಿಹಿತವಾಗಿರಲಿಲ್ಲ. ಜೊತೆಗೆ ಸ್ವಾಮಿನಾಥನ್, ಕೇಶವಪ್ಪೈಗಳೂ ಮನೆಗೆ ಬಂದಾಗಲೆಲ್ಲಾ ಲಲಿತನ ಮದುವೆಯ ಪ್ರಸ್ತಾಪವೆತ್ತುತ್ತಿದ್ದರು. ಮೀನಾಕ್ಷಮ್ಮನವರ ಒತ್ತಾಯವೂ ಹೆಚ್ಚಾಗಿತ್ತು. ಇವೆಲ್ಲಕ್ಕಿಂತ ಹೆಚ್ಚಾದ ಇನ್ನೊಂದು ಕಾರಣವೂ ಇತ್ತು.

ಲಲಿತನಲ್ಲಿ ಆಗುತ್ತಿದ್ದ ವ್ಯತ್ಯಾಸಗಳನ್ನು ಅಯ್ಯರ್ ದಂಪತಿಗಳು ಗಮನಿಸಿದ್ದರು. ಈಚೆಗೆ ಎಲ್ಲಾ ವಿಚಾರಗಳಲ್ಲಿಯೂ ಅವಳು ತೋರಿಸುತ್ತಿದ್ದ ಅನಾಸಕ್ತಿಗೆ ಅವರು ಬೇರೊಂದು ರೀತಿಯ ಅರ್ಥ ಮಾಡಿದ್ದರು. ಮಗಳ ಮನಸ್ಸು ದಾಂಪತ್ಯ ಜೀವನಕ್ಕೆ ಹಂಬಲಿಸುತ್ತಿರಬಹುದೆ? ಅದನ್ನು ಅವಳು ಬಾಯಿಬಿಟ್ಟು ಹೇಳಲಾರದೆ ತಪಿಸುತ್ತಿರಬಹುದೆ? ಅದರ ಪ್ರತಿಕ್ರಿಯೆ ಹೀಗೆ ವ್ಯಕ್ತ ಪಡುತ್ತಿರಬಹುದೆ? – ಎಂದು ಅವರು ಯೋಚಿಸಿದರು. ವಯಸ್ಸಿನ ಸಮಸ್ಯೆಗೆ ಮದುವೆಯೇ ಮದ್ದೆನ್ನುವ ತೀರ್ಮಾನಕ್ಕೆ ಅವರು ಸುಲಭವಾಗಿಯೇ ಬಂದರು. ಆ ಉದ್ದೇಶದಿಂದಲೇ ಅವರು ಬೇಸಗೆಯ ರಜಕ್ಕೆ ಮದರಾಸಿಗೆ ಬಂದಿದ್ದ

ಸುಂದರನನ್ನು ಮನೆಗೆ ಆಹ್ವಾನಿಸಿದ್ದರು. ಸುಂದರನ ವಿಷಯದಲ್ಲಿ ಸ್ವಾಮಿನಾಥನ್ನರ ಶಿಫಾರಸೂ ಇಲ್ಲದಿರಲಿಲ್ಲ.

ಸುಂದರ ತನ್ನನ್ನು ನೋಡಲು ಬರುವುದು ಲಲಿತನಿಗೆ ಸ್ವಲ್ಪವೂ ಇಷ್ಟವಿರಲಿಲ್ಲ. ಈ ಪ್ರಸಂಗ ಅವಳಿಗೆ ನುಂಗಲಾರದ ತುತ್ತಾಗಿತ್ತು. ತನ್ನ ಇಷ್ಟಕ್ಕೆ ವಿರೋಧವಾದ ಒಂದು ಸನ್ನಿವೇಶ ಬಳಿಸಾರುತ್ತಿರುವುದನ್ನು ಕಂಡು ಅವಳು ಖಿನ್ನಳಾದಳು. ಹಿಂದೊಮ್ಮೆ, ಮೀನಾಕ್ಷಮ್ಮನವರು ಮದುವೆಯ ಪ್ರಸ್ತಾಪವೆತ್ತಿದ್ದಾಗಲೇ ಅವಳು ಅಸಮ್ಮತಿ ಸೂಚಿಸಿದ್ದಳು. ಆದರೆ ಅದು ಅವರ ಮನಸ್ಸಿನ ಮೇಲೆ ಯಾವ ಪರಿಣಾಮವನ್ನೂ ಉಂಟುಮಾಡಿರಲಿಲ್ಲ. ಅವಳ ಕೋಪವನ್ನು ಅವರು ಗಣನೆಗೆ ತಂದುಕೊಳ್ಳದೆ ಸುಮ್ಮನೆ ನಕ್ಕುಬಿಟ್ಟಿದ್ದರು.

"ಮದುವೆಯಿಲ್ಲದೆ ಹೀಗೇ ಮುದುಕಿಯಾಗುತ್ತೀಯಾ, ಕಂದಾ?"

ಎಂದು ಹಂಗಿಸುವ ಧ್ವನಿಯಲ್ಲಿ ಪ್ರಶ್ನಿಸಿದ್ದರು. ಅದಕ್ಕೆ ಅವಳ ಹತ್ತಿರ ಉತ್ತರವೂ ಇತ್ತು.

"ಮುದುಕಿಯೋ ತದಕಿಯೋ, ನನಗೆ ಈಗ ಮದುವೆ ಬೇಡ."

"ಈಗ ಬೇಡದಿದ್ದರೆ ಇನ್ನು ಯಾವಾಗ ಮಾಡಿಕೊಳ್ಳುತ್ತೀ?"

"ಯಾವಾಗಲೋ. ಈಗಂತೂ ನನಗೆ ಬೇಡ."

"ಯಾವಾಗಲೋ ಎಂದರೆ ಏನರ್ಥ, ಲಲಿತ? ನಮ್ಮ ಕಣ್ಣೆದುರಿಗೆ ನಿನಗೆ ಮದುವೆಯಾಗಬೇಡವೇನೆ? ನೀನಲ್ಲದೆ ನಮ್ಮ ಮನೆಯಲ್ಲಿ ತಾನೇ ಎಷ್ಟು ಜನ ಹೆಣ್ಣುಮಕ್ಕಳಿದ್ದಾರಮ್ಮ? ನಿನ್ನ ಸಂಸಾರ ನಾವು ನೋಡಿ ಸಂತೋಷಪಡುವುದು ಬೇಡವೆನ್ನುತ್ತೀಯಾ?"

"ಆ ಸಂತೋಷಕ್ಕೆ ಇನ್ನೂ ನಾಲ್ಕು ದಿವಸ ತಡೆಯುವುದಕ್ಕಾಗುವುದಿಲ್ಲವೇನು? ಅದಕ್ಕೆ ಈಗಲೇ ಅವಸರವೆ?"

"ಸುಮ್ಮನೆ ಹೀಗೆ ಕಾಲ ನೂಕುತ್ತ ಕುಳಿತಿದ್ದರಾಗುತ್ತದೆಯೆ? ಕಂಡವರು ಏನೆಂದುಕೊಳ್ಳುತ್ತಾರೆ? ನಿನಗಂತೂ ಅದರ ಯೋಚನೆಯಿಲ್ಲ. ನಾವಾದರೂ ಮಾಡದಿದ್ದರೆ ಹೇಗೆ?"

"ಕಂಡವರಿಗೋಸ್ಕರ ನಾವು ಕುಣಿಯುವುದಕ್ಕಾಗುವುದಿಲ್ಲ"

ಎಂದು ಲಲಿತ ಸಿಡಕ್ಕನೆ ತನ್ನ ರೂಮಿಗೆ ಹೊರಟುಹೋಗಿದ್ದಳು. ಮೀನಾಕ್ಷಮ್ಮನವರು ನಕ್ಕು,

"ಹುಚ್ಚು ಹುಡುಗಿ, ಹೋಗು. ನಿನಗೇನು ಗೊತ್ತು"

ಎಂದು ತಮ್ಮ ಕೆಲಸಕ್ಕೆ ತಾವು ಎದ್ದು ಹೊರಟುಹೋಗಿದ್ದರು. ಅ
ಮಾತು ಅವಳ ಕಿವಿಗೂ ಬಿದ್ದಿತ್ತು. ಅವರ ಮನಸ್ಸಿನ ದೃಢತೆ ಕಂಡು ಅವಳ
ಅಧೀರಳಾಗಿದ್ದಳು.

ತಂದೆ ತಾಯಿಗಳು ಪದೇ ಪದೇ ಮದುವೆಯ ಮಾತಾಡುತ್ತಿದ್ದರು
ಅವಳ ಹೃದಯದಲ್ಲಿ ಮೊದಲೇ ಹೊತ್ತಿದ್ದ ಬೆಂಕಿಯನ್ನು ಅದು ಬೀಸಿ ಕೆರಳಿಸ
ತ್ತಿತ್ತು. ಆ ತಾಪದಿಂದ ಅವಳು ತಪ್ಪಿಸಿಕೊಳ್ಳಲೆತ್ನಿಸಿದಷ್ಟೂ ಅದು ಉಗ್ರವಾಗಿ
ಅವಳನ್ನು ದಹಿಸುತ್ತಿತ್ತು. ಅದಕ್ಕೆ ತಂಪನ್ನೆರೆಯಬಲ್ಲ ಒಂದೇ ಒಂದು ಜೀವ
ಅವಳ ವಿಷಯದಲ್ಲಿ ವಿಮುಖವಾಗಿತ್ತು. ಮಧುಸೂದನನಿಗೆ ಹಾಕಿದ್ದ ಈಚಿನ
ಕಾಗದಕ್ಕೂ ಉತ್ತರ ಬಂದಿರಲಿಲ್ಲ. ಅದರಿಂದ ಅವಳಿಗೆ ತುಂಬ ನಿರಾ
ಯಾಗಿತ್ತು. ಮನಸ್ಸು ಎಲ್ಲ ಆಸೆಗಳನ್ನೂ ಕಳೆದುಕೊಂಡು ನಿರ್ವಿಣ್ಣವಾಗುವ
ಸ್ಥಿತಿಗೆ ಬಂದಿತ್ತು. ಆದರೆ ಜೀವ ಅಷ್ಟಕ್ಕೇ ಸೋಲಲೊಪ್ಪದೆ ಯಾವುದೋ
ದೂರದ ಆಸೆಗೆ ಜೋತುಬಿದ್ದಿತ್ತು.

ಗಾಯದ ಮೇಲೆ ಬರೆ ಹಾಕುವಂತೆ ಈಗ ಈ ಪ್ರಸಂಗ; ತನ್ನನ್ನು
ಮದುವೆಯಾಗಲು ಬಯಸಿ ನೋಡಲು ಬರುವ ಜನದ ಸಂಭ್ರಮ; ಅವರನ್ನು
ಬರಮಾಡಿಕೊಳ್ಳಲು ತಂದೆ ತಾಯಿಗಳ ಉತ್ಸಾಹ. ಅವಳಿಗೆ ಸಂಭ್ರಮವೂ
ಇರಲಿಲ್ಲ, ಉತ್ಸಾಹವೂ ಇರಲಿಲ್ಲ. ಅವಳ ದೃಷ್ಟಿಯಲ್ಲಿ ಅದಕ್ಕೆ ಅರ್ಥವೇ
ಇರಲಿಲ್ಲ. ಅದು ಅವಳಿಗೆ ತೀರ ಹಾಸ್ಯಾಸ್ಪದವಾಗಿ ಕಂಡಿತು. ಆದರೆ ಅನಿಷ್ಟ
ಪ್ರಸಂಗವೊಂದು ಮೈಮೇಲೆ ಕವಿದುಬಂದಿತ್ತು. ಅದರಿಂದ ತಪ್ಪಿಸಿಕೊಳ್ಳಲು
ಬೇರೆ ದಾರಿಯೇ ಇರಲಿಲ್ಲ. ಆದದ್ದಾಗಲೆಂದು ಲಲಿತ ಮನಸ್ಸನ್ನು ಕಲ್ಲು
ಮಾಡಿಕೊಂಡಳು.

ಸುಂದರ ಭಾನುವಾರ ಮಧ್ಯಾಹ್ನ ಬರುವುದಾಗಿ ಹೇಳಿ ಕಳಿಸಿದ್ದ
ಲಲಿತನನ್ನು ನೋಡಿರದಿದ್ದರೂ ಅವಳ ರೂಪ ವೈದುಷ್ಯಗಳ ಬಗೆಗೆ ಅವನು
ಬೇಕಾದಷ್ಟು ಕೇಳಿದ್ದ. ಅದು ಅವನ ಬಾಯಲ್ಲಿ ನೀರೊಡಸಿತ್ತು. ಅಂ
ಕಲಾವಂತ ಸುಂದರಿಯ ಕೈ ಹಿಡಿಯುವ ಭಾಗ್ಯ ತನ್ನದಾದರೆ ಧನ್ಯನೆಂದು
ಕೊಂಡ. ರೂಪದೊಡನೆ ಸಿರಿಯನ್ನೂ ಭೋಗಿಸಬಹುದೆನ್ನುವ ಆಸೆ ಅವ

ಮನಸ್ಸಿನಲ್ಲಿ ಕಲ್ಪನೆಯ ನಾನಾ ಜಾಲಗಳನ್ನೂ ನೆಯ್ಯತೊಡಗಿತು. ಅವನ ಮನಸ್ಸು ಸವಿಯಾದ ಹಗಲುಗನಸಿನಲ್ಲಿ ಮುಳುಗಿತು.—

"ಏಳುವುದಿಲ್ಲವೇನೋ? ಇನ್ನೂ ಹೊತ್ತಾಗಲಿಲ್ಲವೇ?"

ಎಂದು ರೂಮಿನ ಬಾಗಿಲಿಗೆ ಬಂದು ನರಸಿಂಹನ್ ಕೇಳಿದಾಗಲೇ ಅವನ ಸುಖ ಸ್ವಪ್ನಕ್ಕೆ ಭಂಗ ಬಂದದ್ದು. ಚಿಕ್ಕಪ್ಪನ ಧ್ವನಿ ಕೇಳಿ ಸುಂದರ ಜಾಗೃತನಾದ. ಅವನಂತೂ ಸಿಸ್ತಾಗಿ ಉಡುಪು ಧರಿಸಿ ಸಿದ್ಧನಾಗಿಯೇ ಕುಳಿತಿದ್ದ. ಅವನಿಂದ ಒಂದು ನಿಮಿಷವೂ ತಡವಾಗಲು ಕಾರಣವಿರಲಿಲ್ಲ. ಅವನ ಸಡಗರ ನೋಡಿ ಅವರ ಮುಖದ ಮೇಲೆ ತೆಳುನಗೆ ಕಾಣಿಸಿಕೊಂಡಿತು. ನಟರಾಜ ಅಯ್ಯರರು ಕಳಿಸಿದ್ದ ಕಾರಿನಲ್ಲಿ ಕುಳಿತು ಇಬ್ಬರೂ ಕೀಲಪಾಕಿಗೆ ಹೊರಟರು.

ಅಯ್ಯರರು ಅತಿಥಿಗಳನ್ನು ಆದರದಿಂದಲೇ ಸ್ವಾಗತಿಸಿದರು. ಎರಡೂ ಕಡೆಯ ಪೂರ್ವೋತ್ತರಗಳನ್ನು ಚೆನ್ನಾಗಿ ಅರಿತಿದ್ದ ಸ್ವಾಮಿನಾಥನ್ ತಾವೇ ಮಾತು ಆರಂಭಿಸಿ ಉಭಯತ್ತರ ಸಂಬಂಧಕ್ಕೆ ಯೋಗ್ಯವಾದ ಒಂದು ಸನ್ನಿವೇಶ ಬಂದಿದೆಯೆಂದು ಪೀಠಿಕೆ ಹಾಕಿದರು. ನಟರಾಜ ಅಯ್ಯರರಿಗಾದರೂ ಅದಲ್ಲದೆ ಬೇರೆ ಅಭಿಪ್ರಾಯವಿರಲಿಲ್ಲ. ಎರಡು ದೊಡ್ಡ ವಂಶಗಳು ಸೇರಿ ಕುಡಿಯೊಡೆಯುವುದನ್ನೇ ಅವರ ಮನಸ್ಸೂ ಬಯಸುತ್ತಿತ್ತು.

ಕಾಫಿ ತಿಂಡಿ ಬಂದಿತು. ಸ್ವಾಮಿನಾಥನ್ನರ ಲಘುಹಾಸ್ಯದೊಡನೆ ವಾತಾವರಣ ಉಲ್ಲಾಸಕರವಾಗಿ ಪರಿಣಮಿಸಿತು. ಎಲ್ಲರೂ ಲೋಕಾಭಿರಾಮವಾಗಿ ಮಾತಾಡುತ್ತ ಸ್ವಲ್ಪ ಹೊತ್ತು ಕಳೆದರು.

ಇನ್ನು ಗಂಡು–ಹೆಣ್ಣು ಒಬ್ಬರನ್ನೊಬ್ಬರು ನೋಡುವ ಒಂದು ಘಟ್ಟ ಉಳಿದಿತ್ತು. ಹಿಂದಿನ ಕಾಲದವರ ಹಾಗೆ ದೂರದಿಂದಲೇ ಮೂಕಕನ್ಯೆಯನ್ನು ತೋರಿಸಿ ಮರೆಮಾಜುವ ಪದ್ಧತಿ ಯಾರಿಗೂ ಸಮ್ಮತವಾಗಿರಲಿಲ್ಲ. ಮದುವೆಯಾಗತಕ್ಕವರು ಪರಸ್ಪರ ಕಲೆತು ಮಾತಾಡಿ ಅಭಿಪ್ರಾಯ ತಿಳಿದುಕೊಳ್ಳುವುದೇ ವಿಹಿತವೆನ್ನಿಸಿತು. ಈ ಸಲಹೆ ಸುಂದರನಿಂದಲೇ ಬಂದಾಗ ಅಯ್ಯರರು ಅದಕ್ಕೆ ಕೂಡಲೆ ಒಪ್ಪಿದರು. ಅದಕ್ಕೆ ಅವರ ಅಡ್ಡಿ ಸ್ವಲ್ಪವೂ ಇರಲಿಲ್ಲ.

ಈ ಸನ್ನಿವೇಶಕ್ಕೆ ಅವಕಾಶ ಮಾಡಿಕೊಡಲು ಅಯ್ಯರರು ಮೆಲ್ಲನೆದ್ದು ವರಾಂಡಕ್ಕೆ ಹೋದರು. ಸ್ವಾಮಿನಾಥನ್, ನರಸಿಂಹನ್ ಇಂಗಿತವರಿತು ಅವರನ್ನು ಹಿಂಬಾಲಿಸಿದರು. ಅವರ ಹಿಂದೆಯೇ ವರಾಂಡದ ಕಡೆ ಹೋಗುವ

ರೂಮಿನ ಬಾಗಿಲೂ ಮುಚ್ಚಿತು. ಅದೇ ಸಮಯಕ್ಕೆ ಮೀನಾಕ್ಷಮ್ಮನವರು ಹಜಾರದ ಬಾಗಿಲಿನಿಂದ ಲಲಿತನನ್ನು ಒಳಗೆ ಕಳಿಸಿದರು.

ಈ ಪ್ರದರ್ಶನದ ವ್ಯವಸ್ಥೆ ನೋಡಿ ಲಲಿತನ ಮೈಮೇಲೆ ಮುಳ್ಳು ಏಳುವ ಹಾಗಾಗಿತ್ತು. ಆದರೆ ವಿಧಿಯಿಲ್ಲದೆ ಅವಳು ಅದರಲ್ಲಿ ಭಾಗಿಯಾಗಿದ್ದಳು. ಸುಂದರನನ್ನು ಕಂಡು ಮಾತಾಡುವ ಅಗತ್ಯ ಅವಳಿಗೂ ಇತ್ತು. ಸನ್ನಿವೇಶ ವನ್ನೆದುರಿಸಲು ಮನಸ್ಸನ್ನು ಸಾಕಷ್ಟು ಕಲ್ಲು ಮಾಡಿಕೊಂಡೇ ಅವಳೂ ಒಳಗೆ ಬಂದಳು.

ಅವಳನ್ನು ಕಂಡ ಕೂಡಲೇ ಸುಂದರ ನಗುಮೊಗದಿಂದ ಸ್ವಾಗತಿಸಿದ. ಲಲಿತನೂ ಮೌನವಾಗಿ ಕೈ ಜೋಡಿಸಿ ಪಕ್ಕದ ಸೋಫಾದಲ್ಲಿ ಮಂಡಿಸಿದಳು. ಅವಳು ಎದುರಿಗಿದ್ದ ಸೋಫಾದಲ್ಲಿ ಕುಳಿತಿದ್ದರೆ ಚೆನ್ನಾಗಿತ್ತೆಂದು ಅವನಿಗನ್ನಿ ಸಿತು. ಪಕ್ಕದ ನೋಟ ಅವನ ಮನಸ್ಸಿಗೆ ಅಷ್ಟು ಸಮಗ್ರವಾಗಿರಲಿಲ್ಲ. ಅವನು ಮುಗುಳ್ನಗುತ್ತ ತನ್ನ ಸ್ಥಳ ಬಿಟ್ಟೆದ್ದು ಎದುರಿನ ಸೋಫಾದಲ್ಲಿ ಕುಳಿತುಕೊಂಡು ಕಣ್ಣು ತಣಿಯುವಂತೆ ಅವಳ ಲಾವಣ್ಯವನ್ನು ಸವಿಯತೊಡಗಿದ.

ಅವನ ದೃಷ್ಟಿ ತನ್ನ ಅಂಗಾಂಗಗಳ ಮೇಲೆ ಹರಿದಾಡುತ್ತಿದ್ದುದು ಲಲಿತ ನಿಗೆ ಭಾಸವಾಯಿತು. ಅವನ ಹಸಿದ ನೋಟಕ್ಕೆ ಅವಳ ಮನಸ್ಸು ಹೇಸಿತು; ಮೈ ಮುದುರಿಕೊಂಡಿತು. ನಿರ್ವಾಹವಿಲ್ಲದೆ ಸುಮ್ಮನೆ ಕೈಕಟ್ಟಿ ಕುಳಿತಳು. ಒಂದು ಸಲವಾದರೂ ಅವಳ ದೃಷ್ಟಿ ಅವನ ನೋಟದೊಡನೆ ಬೆರೆಯಲಿಲ್ಲ.

ಸುಂದರನ ಜೀವ ಬಾಯಿಗೆ ಬಂದಿತ್ತು. ಏನಾದರೂ ಮಾತಾಡ ಬೇಕೆಂದು ಅವನ ಮನಸ್ಸು ಹಂಬಲಿಸಿತು. ಆದರೆ ಅವಳೆದುರಿಗೆ ಅವನ ಬಾಯೇ ಕಟ್ಟಿಹೋಗಿತ್ತು. ಕಾಲೇಜಿನಲ್ಲಿ ಘಂಟೆಗಟ್ಟಲೆ ನಿರರ್ಗಳವಾಗಿ ಪಾಠ ಹೇಳುತ್ತಿದ್ದ ಅವನಿಗೆ ಮಾತನ್ನು ಹೇಗೆ ಆರಂಭಿಸಬೇಕೆನ್ನುವುದೇ ಗೊತ್ತಾಗಲಿಲ್ಲ. ಮಾತಿಲ್ಲದೆ ರಸನಿಮಿಷಗಳು ಕಳೆದುಹೋಗುತ್ತಿದ್ದವು. ಅವನು ಬಂದಿದ್ದುದು ತನ್ನ ನಲ್ಲೆಯಾಗುವ ಹೆಣ್ಣಿನೊಡನೆ ನಾಲ್ಕಾರು ಸರಸದ ಮಾತುಗಳನ್ನಾಡಿ ಹೋಗುವುದಕ್ಕೆ. ಮೌನಗೌರಿಯ ಪೂಜೆಮಾಡಿ ಹೋಗುವುದಕ್ಕಲ್ಲ. ಆ ನಿರ್ಧಾರ ಮಾತುಕಟ್ಟಿದ ಅವನ ಬಾಯನ್ನು ಬಿಡಿಸಿತು.

" ನೀವು ಭರತನಾಟ್ಯವನ್ನೂ ಚೆನ್ನಾಗಿ ಕಲಿತಿದ್ದೀರೆಂದು ಕೇಳಿದೆ."

" ಏನೋ ತಕ್ಕಮಟ್ಟಿಗೆ."

“ ಪಂದನಲ್ಲೂರಿನಲ್ಲೇ ಶಿಕ್ಷಣ ಆಯಿತಂತೆ.”

“ ಹೌದು.”

“ ನಿಮ್ಮ ನಾಟ್ಯ ನೋಡುವ ಅವಕಾಶ ನನಗಿನ್ನೂ ಆಗಿಲ್ಲ. ಅದನ್ನೂ ಬೇಗ ಮಾಡಿಸಿಕೊಡಿ.”

ಲಲಿತ ಸುಮ್ಮನಿದ್ದಳು. ಅವಳ ದೃಷ್ಟಿ ನೆಲಕ್ಕೆ ಹಾಸಿದ್ದ ರತ್ನಗಂಬಳಿಯ ಹೂವಿನ ಮೇಲಿತ್ತು.

“ ಕಾಲೇಜಿನಲ್ಲಿ ಎಲ್ಲಿಯ ತನಕ ಓದಿದಿರಿ ?”

“ ಇಂಟರ್ ಆದ ಕೂಡಲೆ ಬಿಟ್ಟುಬಿಟ್ಟೆ.”

“ ಡಿಗ್ರಿ ಪರೀಕ್ಷೆ ಮುಗಿಸಿಕೊಳ್ಳಬಹುದಾಗಿತ್ತು.”

ಲಲಿತ ಅದಕ್ಕೆ ಉತ್ತರ ಕೊಡಲಿಲ್ಲ. ಮಾತಿನ ಸರಣಿ ಅಷ್ಟಕ್ಕೇ ಕತ್ತರಿಸಿತು. ಸುಂದರ ಸಂಭಾಷಣೆಗೆ ಇನ್ನೊಂದು ಕೊಂಡಿ ಹುಡುಕಬೇಕಾಯಿತು.

“ ಶಿವಸ್ವಾಮಿಯೂ ನಾನೂ ಒಟ್ಟಿಗೆ ಓದಿದವರು.”

“ ಹಾಗೆ ಅಂತ ಕೇಳಿದೆ.”

“ ಅವನು ಡಾಕ್ಟೊರೇಟ್ ಪಡೆದು ಬರಲು ಇಂಗ್ಲೆಂಡಿಗೆ ಹೋದ. ನಾನು ಕಾಲೇಜ್ ಪ್ರೊಫೆಸರಾಗಿ ಲಕ್ನೋ ಸೇರಿದೆ.”

ಅದೂ ಗೊತ್ತಿದ್ದ ವಿಚಾರವೇ. ಅದನ್ನು ಅವನು ಹೊಸದಾಗಿ ಹೇಳಬೇಕಾಗಿರಲಿಲ್ಲ. ಆದರೆ ಸಂಭಾಷಣೆಯನ್ನು ಜೀವಂತವಾಗಿಡಲು ಅವನಿಗೆ ಏನಾದರೊಂದು ಮಾತು ಬೇಕಾಗಿತ್ತು.

“ ಆಗ ನಿಮ್ಮ ಪರಿಚಯವಾಗಲು ಅವಕಾಶವೇ ಇರಲಿಲ್ಲ ಎನ್ನಿ. ಈಗ ಆ ಅವಕಾಶ ಬಂದಿತು ”

ಎಂದು ಮೆಲ್ಲನೆ ನಕ್ಕ. ಲಲಿತ ಯಾವ ಭಾವವನ್ನೂ ತೋರ್ಪಡಿಸದೆ ಸುಮ್ಮನಿದ್ದಳು. ಅವಳು ತನ್ನೊಡನೆ ಮನ ಬಿಚ್ಚಿ ಮಾತಾಡುತ್ತಿಲ್ಲವೆಂದು ಅವನಿಗೆ ಅರಿವಾಯಿತು. ಸಂಕೋಚವೋ, ನಿರಾಸಕ್ತಿಯೋ ಅವಳ ಬಾಯನ್ನು ಕಟ್ಟಿತ್ತೆಂದು ಅವನಿಗೆ ತೋರಿತು. ಸುತ್ತುಬಳಸಿನ ಮಾತಿನಿಂದ ಕಾಲಹರಣ ಮಾಡುವುದು ಅವನಿಗೂ ಇಷ್ಟವಿರಲಿಲ್ಲ. ಅವಳ ಮನೋಗತ ತಿಳಿದುಕೊಳ್ಳಲು ಅವನು ಉತ್ಸುಕನಾಗಿದ್ದ. ಅವಳ ಅಭಿಪ್ರಾಯ ಅವನಿಗೆ ಮುಖ್ಯವಾಗಿತ್ತು.

“ ಮದುವೆಯ ವಿಚಾರದಲ್ಲಿ ನಿಮ್ಮ ಅಭಿಪ್ರಾಯವೇನು, ಲಲಿತಾದೇವಿ ?”

ಎಂದು ನೇರವಾಗಿಯೇ ಪ್ರಶ್ನೆ ಹಾಕಿದ.

"ಯಾವ ಮದುವೆ?"

ಪ್ರಶ್ನೆಗೆ ಉತ್ತರವಾಗಿ ಥಟ್ಟನೆ ಮರುಪ್ರಶ್ನೆ ಬಂದಿತು. ಆ ಮಾತು ಅವನನ್ನು ಆಚ್ಚರಿಗೊಳಿಸಿತು.

"ನಮ್ಮ ಮದುವೆ."

"ನಮ್ಮ ಎಂದರೆ?"

ಅದು ಅವನನ್ನು ಧೃತಿಗೆಡಿಸಿತು. ಒಂದು ಕ್ಷಣ ಮಾತು ಮರೆತು ತಬ್ಬಿಬ್ಬಾದ. ಆದರೆ ಅಷ್ಟಕ್ಕೇ ಬಿಡಲು ಅವನು ಸಿದ್ಧನಾಗಿರಲಿಲ್ಲ.

"ನನ್ನ ಮತ್ತು ನಿಮ್ಮ ವಿವಾಹ."

"ನನ್ನನ್ನು ಲಗ್ನವಾಗಲು ನಿಮಗೆ ಅಪೇಕ್ಷೆ ಇದೆಯೆ?"

ಎಂದು ಲಲಿತ ಮೊದಲನೆಯ ಸಲ ತಲೆಯೆತ್ತಿ ಅವನನ್ನು ದಿಟ್ಟಿಸಿ ನೋಡಿ ಕೇಳಿದಳು. ಹುಬ್ಬಿನಲ್ಲಿ ಪ್ರಶ್ನೆಯನ್ನು ಕೊಂಕಿಸಿ ಅವಳು ಕೇಳಿದ ರೀತಿ ತುಂಬ ಮೋಹಕವಾಗಿತ್ತು. ಅವಳ ಕಣ್ಣ ಹೊಳಪು, ಮಾತಿನಲ್ಲಿ ಅರೆದೆರೆದು ಹಾಗೆಯೇ ನಿಂತ ಚೆಂದುಟಿ, ಅದರ ನಡುವೆ ಬೆಳ್ಳಕ್ಕಿಯ ಸಾಲಿನ ಹಾಗೆ ಹೊಳೆಯುತ್ತಿದ್ದ ದಂತಪಂಕ್ತಿ, ಬಿಳುಪಾದ ಕೆನ್ನೆ, ಹವಣು ಮೀರದೆ ತುಂಬಿ ನಿಂತಿದ್ದ ಎದೆ, – ಆ ನೋಟದಲ್ಲಿ ಸುಂದರ ಒಂದು ಗಳಿಗೆ ಸೊಕ್ಕಿದಂತಾಗಿ ಮೈ ಮರೆತ. ಆದರೆ ವಿವೇಕ ಮರುಕ್ಷಣವೇ ಅವನನ್ನು ಎಚ್ಚರಿಸಿತು.

"ನೀವು ಹೇಳಿದ್ದು ನನಗೆ ಅರ್ಥವಾಗಲಿಲ್ಲ."

"ನೀವು ಕೇಳಿದ್ದೂ ನನಗೆ ತಿಳಿಯಲಿಲ್ಲ."

"ಈ ಮಾತಿನಿಂದೇನು ಪ್ರಯೋಜನ, ಲಲಿತಾದೇವಿ? ನಿಮ್ಮ ಅಭಿಪ್ರಾಯ ತಿಳಿಸಿಬಿಟ್ಟರೆ ಆಯಿತು."

"ನನ್ನ ಅಭಿಪ್ರಾಯ ನಿಮಗಿನ್ನೂ ಅರ್ಥವಾಗಿಲ್ಲವೆ?"

"ಇಲ್ಲ. ನೀವೇ ಹೇಳಿ."

"ನನಗೀಗ ಮದುವೆಯಾಗುವ ಯೋಚನೆಯಿಲ್ಲ."

"ಎಂದರೆ? ನಿಮ್ಮ ತಂದೆ ತಾಯಿಗಳಿಗೆ ಆ ಅಭಿಪ್ರಾಯ ಇರುವ ಹಾಗಿದೆ."

"ಇರಬಹುದು. ಆದರೆ ಮದುವೆಯಾಗುವವರು ಅವರಲ್ಲ."

ಮುಖಕ್ಕೆ ಅಪ್ಪಳಿಸುವಂತೆ ಆಡಿದ ಮಾತಿನಿಂದ ಸುಂದರ ತತ್ತರಿಸಿದ. ಒಂದು ಕ್ಷಣ ಅವನು ನಿರುತ್ತರನಾಗಿ ಕುಳಿತ. ಆದರೆ ಆಸೆ ಇನ್ನೂ ಅವನ ಕೈ ಬಿಟ್ಟಿರಲಿಲ್ಲ.

"ಕಾಲಾವಕಾಶ ಬೇಕಾದರೆ ಆಗಬಹುದು. ನನ್ನ ಅಡ್ಡಿ ಇಲ್ಲ. ಆದರೆ ನೀವು ಆಗಲಿ ಅಂತ ಒಂದು ಮಾತು ಹೇಳಿದರೆ ಸಾಕು."

"ನೀವು ಅಂಥ ಯಾವ ಆಸೆಯನ್ನೂ ಇಟ್ಟುಕೊಳ್ಳಬಾರದೆಂದೇ ನಾನು ಹೇಳುತ್ತಿರುವುದು, ಮಿ. ಸುಂದರಂ"

ಎಂದು ಒಂದು ಕಡ್ಡಿಯನ್ನು ಎರಡು ತುಂಡು ಮಾಡುವಂತೆ ಖಂಡಿತವಾಗಿ ಹೇಳಿಬಿಟ್ಟಳು. ಅವಳ ಬಾಯಲ್ಲಿ ತನ್ನ ಹೆಸರು ಬಂದದ್ದನ್ನು ಕೇಳಿ ಅವನ ಮನಸ್ಸಿಗೆ ಹೇಗೋ ಆಯಿತು. ಅದೇ ಮಾತು ವಿಹಿತವಾದ ಸಂದರ್ಭದಲ್ಲಿ ಬಂದಿದ್ದರೆ ಅವನಿಗೆ ಆಪ್ಯಾಯನವಾಗುತ್ತಿತ್ತೋ ಏನೋ. ಈಗ ಹಾಗಾಗುವುದಕ್ಕೆ ಅವಕಾಶವಿರಲಿಲ್ಲ. ಈಗ ಅದು ಬರಿಯ ಒಂದು ಭೇಟಿಗೆ ಮುಕ್ತಾಯ ಸೂಚನೆಯಾಗಿತ್ತು. ಅವನ ಮನಸ್ಸನ್ನು ವಿಷಾದ ಆವರಿಸಿತು. ಅವನು ಮರು ಮಾತಾಡದೆ ಎದ್ದು ನಿಂತ.

"ಸರಿ, ನಾನಿನ್ನು ಹೊರಡುತ್ತೇನೆ."

"ಸಂತೋಷ"

ಎಂದು ಎದ್ದು ರೂಮಿನಿಂದ ಹೊರಟುಹೋದಳು. ಅವನ ಮನಸ್ಸಿನಲ್ಲಿ ಮೂಡಿದ್ದ ಆಸೆಯ ಕುಡಿಬೆಳಕು ನಂದಿತು; ಅವನು ಹಂತ ಹಂತವಾಗಿ ಕಟ್ಟುತ್ತಿದ್ದ ಕಲ್ಪನಾ ಸೌಧ ಕಳಚಿಬಿತ್ತು. ಅವನು ಭ್ರಾಂತನಂತೆ ಏನೂ ತೋರದೆ ಒಂದು ಗಳಿಗೆ ಸುಮ್ಮನೆ ನಿಂತುಕೊಂಡ. ಲಲಿತ ಹೊರಗೆ ಹೊರಟುಹೋದುದನ್ನು ಗಮನಿಸಿದ ನಟರಾಜ ಅಯ್ಯರರು ವರಾಂಡದ ಕಡೆಯಿಂದ ರೂಮಿಗೆ ಬಂದರು. ಸುಂದರನ ಖಿನ್ನವಾದ ಮುಖ ನೋಡಿ ಅವರು ಚಕಿತರಾದರು. ಏನೋ ಅಚಾತುರ್ಯ ನಡೆದಿರಬಹುದೆಂದು ಅವರ ಬುದ್ಧಿ ಸಹಜವಾಗಿಯೇ ಊಹಿಸಿತು.

೮

ಸುಬ್ಬಕೃಷ್ಣನ ಕಣ್ಣಿಗೆ ಸುದ್ದಿ ಬಿದ್ದುದು ತೀರ ಅನಿರೀಕ್ಷಿತ.

ಕಾಲೇಜಿನ ವಾಚನಾಲಯಕ್ಕೆ ಬರುತ್ತಿದ್ದ ಕನ್ನಡ ಪತ್ರಿಕೆಗಳನ್ನು ದಿನ ಕ್ಕೊಮ್ಮೆ ನೋಡುವುದು ಅವನ ರೂಢಿಯಾಗಿತ್ತು. ಅಂದೂ ಹಾಗೆಯೇ ನೋಡಲು ಬಂದು ಕುಳಿತಿದ್ದ. ಮೇಜಿನ ಮೇಲೆ ಹರಡಿದ್ದ ಪತ್ರಿಕೆಗಳ ರಾಶಿಯಲ್ಲಿ ತನಗೆ ಬೇಕಾದ ಸುದ್ದಿ ಸಿಕ್ಕುವುದೆಂದು ಅವನು ಸರ್ವಥಾ ಎಣಿಸಿರಲಿಲ್ಲ. ಒಂದಾದ ಮೇಲೊಂದರಂತೆ ಪತ್ರಿಕೆಗಳನ್ನು ಕೈಗೆತ್ತಿಕೊಂಡು ಅನ್ಯಮನಸ್ಕನಾಗಿ ಪುಟಗಳನ್ನು ತಿರುಗಿಸುತ್ತ ಕುಳಿತ. ಅವನ ಕಣ್ಣು ಕಾಲಮಿನಿಂದ ಕಾಲಮಿಗೆ ಹರಿಯುತ್ತಿತ್ತು. ನೋಡಿದ್ದೆಲ್ಲವನ್ನೂ ಬುದ್ಧಿ ಗ್ರಹಿಸದೆ ಮುಂದೆ ಮುಂದೆ ಹೋಗುತ್ತಿತ್ತು. ಕೈಯಲ್ಲಿದ್ದ ಪತ್ರಿಕೆಯನ್ನು ಮೇಜಿನ ಮೇಲೆ ಹಾಕಿ ಏಳಲೆತ್ನಿಸುತ್ತಿದ್ದಾಗ ಒಂದು ಶೀರ್ಷಿಕೆ ಅವನ ಲಕ್ಷ್ಯವನ್ನು ಸೆಳೆಯಿತು. ಆ ಸುದ್ದಿಯನ್ನು ಅವನು ಕುತೂಹಲದಿಂದ ಓದತೊಡಗಿದ.

" ಮೈಸೂರಿನ ಪ್ರಸಿದ್ಧ ಗಾಯಕರಾದ ವಿದ್ವಾನ್ ಮಧುಸೂದನರಿಗೂ ಭಾರತ ಪ್ರವಾಸ ಮುಗಿಸಿಕೊಂಡು ಮೊನ್ನೆತಾನೇ ಅಮೆರಿಕಕ್ಕೆ ಹಿಂದಿರುಗಿದ ವಿಶ್ವವಿಖ್ಯಾತ ಪಿಟೀಲು ವಾದ್ಯಗಾರ ಯೆಹೂದಿ ಮೆನೂಹಿನ್ನರಿಗೂ ಸಂಗೀತ ವಿದುಷಿ ರೋಷನ್ ಬೇಗಂರವರ ನಿವಾಸದಲ್ಲಿ ಭೇಟಿ ಏರ್ಪಟ್ಟಿತ್ತೆಂದು ಗೊತ್ತಾಗಿದೆ. ಮಧುಸೂದನರ ಹಾಡಿಕೆಯನ್ನು ಮೆಚ್ಚಿದ ಮೆನೂಹಿನ್ನರು ಅವರನ್ನು ಅಮೆರಿಕಕ್ಕೆ ಆಹ್ವಾನಿಸಿರುವರೆಂದೂ ಸಹ ತಿಳಿದುಬಂದಿದೆ. ವಿದ್ವಾನ್ ಮಧುಸೂದನರು ಕೆಲವು ದಿನಗಳಿಂದ ಇಲ್ಲೇ ಬಿಡಾರ ಮಾಡಿದ್ದಾರೆ. ಅವರ ಕಾರ್ಯಕ್ರಮಗಳೇನೆಂದು ಇನ್ನೂ ಖಚಿತವಾಗಿ ಗೊತ್ತಾಗಿಲ್ಲ. ಅವರು ಇಲ್ಲಿಗೆ ಬಂದಿರುವ ಆವಕಾಶ ಉಪ

ಯೋಗಿಸಿಕೊಂಡು ನಗರದ ಕೆಲವು ಸಂಘ ಸಂಸ್ಥೆಗಳು ಅವರ ಸಂಗೀತ ಕಚೇರಿಗಳನ್ನೇರ್ಪಡಿಸಬಹುದೆಂದು ಊಹಿಸಲಾಗಿದೆ."

ಮುಂಬಯಿಯ ಮರಾಟೀ ಪತ್ರಿಕೆ 'ನವಕಾಲ್' ಪ್ರಕಟಸಿದ್ದ ಈ ಸುದ್ದಿಯನ್ನು ಹುಬ್ಬಳ್ಳಿಯ ಕನ್ನಡ 'ಹಂಸ' ಉದ್ಧರಿಸಿತ್ತು.

ಪತ್ರಿಕೆಯನ್ನು ಮುಂದಿಟ್ಟುಕೊಂಡು ಸುಬ್ಬಕೃಷ್ಣ ಯೋಚಿಸುತ್ತ ಕುಳಿತ. ಅವನಿಗೆ ಏಕಕಾಲದಲ್ಲಿ ಸಂತೋಷ ಅಸಮಾಧಾನಗಳೆರಡೂ ಉಂಟಾಗಿದ್ದವು. ಮಧುಸೂದನ ಎಲ್ಲಾದರೂ ಇರಲಿ, ಸುರಕ್ಷಿತವಾಗಿರುವನಲ್ಲಾ ಎನ್ನುವ ಭಾವನೆ ಅವನ ಸಂತೋಷಕ್ಕೆ ಕಾರಣವಾಗಿತ್ತು. ಆದರೆ ಅವನಿಂದ ಒಂದು ಕಾಗದವೂ ಬಾರದಿರುವುದು ಸಹಜವಾಗಿಯೇ ಅಸಮಾಧಾನಕ್ಕೆ ಎಡೆಗೊಟ್ಟಿತ್ತು. ಎಂದೂ, ಯಾವ ವಿಷಯದಲ್ಲಿಯೂ ತನ್ನೊಡನೆ ಯೋಚಿಸದೆ ಪ್ರವರ್ತಿಸದಿದ್ದ ಮಧುಸೂದನ ಒಂದು ಮಾತನ್ನೂ ಹೇಳದೆ ಮುಂಬಯಿಗೆ ಹೊರಟುಹೋಗಿದ್ದುದು ಸುಬ್ಬಕೃಷ್ಣನಿಗೆ ವ್ಯಾಕುಲವನ್ನುಂಟುಮಾಡಿತ್ತು. ಹೋಗುತ್ತೇನೆಂದು ಅವನು ಹೇಳಿದ್ದರೆ ತಾನು ಬೇಡವೆನ್ನುತ್ತಿರಲಿಲ್ಲ. ಹೋದ ಮೇಲೆ ಅವನು ಒಂದು ಕಾಗದ ಹಾಕಿದ್ದರೂ ತಪ್ಪಾಗುತ್ತಿರಲಿಲ್ಲ. ಮಧುಸೂದನ ಯಾವ ಕಾರಣದಿಂದಲೋ ಎರಡರಲ್ಲಿ ಒಂದನ್ನೂ ಮಾಡದೆ ಏಕಾಂತ ಬಯಸಿ ತಮ್ಮಿಂದ ದೂರ ಹೊರಟು ಹೋಗಿದ್ದ. ಅವನ ದುಃಖದಲ್ಲಿ ತಮಗಾರಿಗೂ ಅನುತಾಪವಿರಲಿಲ್ಲವೆಂದಲ್ಲ. ಆದರೆ ಅವನು ಅದನ್ನೇ ಅಷ್ಟು ಮಹತ್ತರವಾಗಿ ಮಾಡಿಕೊಂಡು ಹೊರಟು ಹೋಗುವನೆಂದು ಯಾರೂ ಭಾವಿಸಿರಲಿಲ್ಲ. ಅವನ ವರ್ತನೆಯಿಂದ ತನಗೂ ದಾಸರಿಗೂ ಇಬ್ಬರಿಗೂ ಮನನೊಂದಿತ್ತು. ಆ ಸ್ನೇಹ ವಿಶ್ವಾಸಗಳನ್ನಾದರೂ ಅವನು ಲಕ್ಷ್ಯಕ್ಕೆ ತಂದುಕೊಳ್ಳಬಹುದಾಗಿತ್ತು.

ಸುಬ್ಬಕೃಷ್ಣನಿಗೆ ಮಧುಸೂದನನ ಮೇಲೆ ಎಲ್ಲೂ ಇಲ್ಲದ ಕೋಪ ಬಂದಿತು. ಆ ಒಂದು ಕ್ಷಣದ ವಿಕಾರದಲ್ಲಿ, ಅವನು ಎಲ್ಲಿಗಾದರೂ ಹೋಗಲಿ ಅದನ್ನು ಕಟ್ಟಿಕೊಂಡು ತನಗೇನು? ಸ್ನೇಹಕ್ಕೆ ಅವನೇ ಮನ್ನಣೆ ಕೊಡದಿದ್ದ ಮೇಲೆ ತಾನೇಕೆ ಅದನ್ನು ಹಚ್ಚಿಕೊಳ್ಳಬೇಕು – ಎನ್ನಿಸಿತು. ಆ ಆಗ್ರಹದಲ್ಲಿ ಅವನ ಅಂತಃಕರಣ ತಪ್ತವಾಯಿತು.

ಹಿಂದೆಂದೂ ಅವನಿಗೆ ಹೀಗೆ ಕೋಪ ಬಂದಿರಲಿಲ್ಲ. ಇಪ್ಪತ್ತು ವರ್ಷದ ಆ ಅವಿಚ್ಛಿನ್ನವಾದ ಸ್ನೇಹದಲ್ಲಿ ವಿರಸವೆನ್ನುವುದು ಅವರಿಬ್ಬರೂ ಕಂಡು ಕೇಳರಿ

ಯದ ವಸ್ತುವಾಗಿತ್ತು. ಇಬ್ಬರಿಗೂ ಒಂದು ಕುತ್ತಿಗೆಯಲ್ಲಿ ಪ್ರಾಣ ಎಂದು ಹೆರವರು ಆಡಿಕೊಳ್ಳುತ್ತಿದ್ದುದು ಅವರ ಪಾಲಿಗೆ ನಿಜವೇ ಆಗಿತ್ತು. ದಿನ ಕಳೆದಂತೆ ಅವರ ಸ್ನೇಹ ಬೆಳೆಯುತ್ತಿತ್ತೇ ವಿನಾ ಕುಗ್ಗಲವಕಾಶವೇ ಇರಲಿಲ್ಲ. ಆದರೀಗ ಮಧುಸೂದನನ ಈ ಅನಿರೀಕ್ಷಿತ ವರ್ತನೆ ಇಂಥ ಸ್ನೇಹದ ಬೇರಿಗೆ ಬಿಸಿನೀರನ್ನು ಹೊಯ್ಯಲೆಳಸುವಂತಿತ್ತು. ಅವನು ಕ್ರಮೇಣ ಸುಬ್ಬಕೃಷ್ಣನಿಂದ ದೂರವಾಗುತ್ತಿದ್ದ ಹಾಗೆ ತೋರಿತು.

ಸುಬ್ಬಕೃಷ್ಣನ ಮನಸ್ಸಿನಲ್ಲಿ ಅಸ್ಪಷ್ಟವಾದ ಒಂದು ಯಾತನೆಯಾಗಿ ಅವನ ಗಂಟಲಿನಲ್ಲಿ ಭಾರವಾದುದೇನನ್ನೋ ತುರುಕಿದ ಹಾಗಾಯಿತು. ಅವನಿಗರಿಯದೆಯೇ ಅವನ ಕಣ್ಣು ಒದ್ದೆಯಾಯಿತು.

ಗೆಳೆಯನ ವಿಷಯದಲ್ಲಿ ಅವನ ಮನಸ್ಸು ಅಷ್ಟು ಆರ್ದ್ರವಾಗಿತ್ತೆ?

ಏಕಿರಬಾರದು? ಆ ಸ್ನೇಹ ಕಡಿದುಹೋಗುವಂಥ ದುರ್ಬಲ ತಂತುವಾಗಿರಲಿಲ್ಲ; ಆ ಒಡನಾಟ ಕೇವಲ ಎಳೆತನದ ಒಡನಾಟವಾಗಿರಲಿಲ್ಲ. ಅದು ನಿರ್ವ್ಯಾಜವಾದ ಶಾಶ್ವತ ಮೈತ್ರಿಯಾಗಿತ್ತು. ಅದಕ್ಕೆ ಭಂಗಬರುವುದು ಬಹುಶಃ ಈ ಜನ್ಮದಲ್ಲಿ ಸಾಧ್ಯವಿರಲಿಲ್ಲ. ಸಾವಿನಿಂದ ಅದನ್ನು ಕಳಚಿಕೊಳ್ಳಬಹುದಾಗಿತ್ತೇ ವಿನಾ ಬದುಕಿನಲ್ಲಿ ಅದನ್ನು ಬೇರ್ಪಡಿಸುವುದು ಸುಲಭವಾಗಿರಲಿಲ್ಲ.

ಸುಬ್ಬಕೃಷ್ಣನ ಮನಸ್ಸಿನಲ್ಲಿ ಉಂಟಾದ ಯಾತನೆ ಮಧುಸೂದನನ ಬಗೆಗೆ ಅವನಿಗಿದ್ದ ಗಾಢವಾದ ಸ್ನೇಹಕ್ಕೆ ಸಾಕ್ಷಿಯಾಗಿತ್ತು. ಅದರ ಪವಿತ್ರತೆಯ ಬಗೆಗೆ ಅವನಿಗೆ ಗೌರವ ಮೂಡಿತು. ವ್ಯಗ್ರವಾಗಿದ್ದ ಅವನ ಮನಸ್ಸು ಒಂದು ಕ್ಷಣ ಗಂಭೀರವಾಯಿತು. ಅಲೌಕಿಕವಾದ ದೃಶ್ಯದ ಎದುರಿನಲ್ಲಿ ಆತ್ಮ ವಿನೀತವಾಗುವಂತೆ ತನ್ನ ಮನಸ್ಸಿನ ಮುಂದೆ ಮೂರ್ತಿಮತ್ತಾಗಿ ನಿಂತ ಸ್ನೇಹಕ್ಕೆ ಅವನ ಅಂತಃಕರಣ ತುಂಬಿ ತಲೆಬಾಗಿತು.

ಹೌದು, ವಿಚಾರ ತಿಳಿದುಕೊಳ್ಳದೆ ಆಗ್ರಹಕ್ಕೆ ಮಾರುಹೋಗುವುದು ತಪ್ಪು. ಅದು ಅವನಿಗೆ ಒಂದು ಕ್ಷಣದಲ್ಲಿ ಹೊಳೆಯಿತು. ಕೈಯಲ್ಲಿದ್ದ ಪತ್ರಿಕೆಯನ್ನು ಮೇಜಿನ ಮೇಲಿಟ್ಟು ಎದ್ದು ಕಾಲೇಜಿನ ಆವರಣದಿಂದ ಹೊರಗೆ ಹೊರಟುಹೋದ. ಯೋಚನೆಯಲ್ಲಿ ಎದುರಿಗೆ ಕಂಡ ಲೆಕ್ಚರರುಗಳನ್ನಾಗಲಿ, ವಿದ್ಯಾರ್ಥಿಗಳನ್ನಾಗಲಿ ಅವನು ಗಮನಿಸಲೇ ಇಲ್ಲ.

"ನಮಸ್ಕಾರ, ದ್ಯಾವರೂ."

ಚಿನ್ನಪ್ಪ ನಿಂತು ಕೂಗಿದಾಗಲೇ ಸುಬ್ಬಕೃಷ್ಣ ಬಹಿರ್ಮುಖನಾದದ್ದು. ಕಪ್ಪಗೆ ಎಣ್ಣೆ ಬಸಿಯುತ್ತಿದ್ದ ಮುಖದಲ್ಲಿ ಹೊರವಾಗಿ ಬೆಳೆದಿದ್ದ ವಿಾಸೆಯ ನಡುವೆ ಮೂವತ್ತೆರಡು ಹಲ್ಲೂ ಹೊಳೆಯುವಂತೆ ಚಿನ್ನಪ್ಪ ನಗುತ್ತ,

"ಏನು, ಅಂಗೇ ಬೆಳೀತಾ ಐತಲ್ಲ ಪಾದಾ?"

"ಓಹೋ, ನಮಸ್ಕಾರ ಸಾಹುಕಾರರೇ. ಕಾಣಲಿಲ್ಲ, ಕ್ಷಮಿಸಬೇಕು."

"ದೊಡ್ಡೋರ ನಿಗಾ ಎಂಗೆಂಗೋ. ನಾವು ಕಣ್ಣಿಗೆ ಬೀಳೋದು ಇಲ್ಲೇ ಐತಾ?"

ಎಂದು ವಕ್ರವಾಗಿ ನಕ್ಕ. ಸುಬ್ಬಕೃಷ್ಣ ಅವನನ್ನು ಸಮಾಧಾನಪಡಿಸುವ ಧ್ವನಿಯಲ್ಲಿ,

"ಹಾಗಲ್ಲ ಚಿನ್ನಪ್ಪನವರೇ, ಏನೋ ಯೋಚನೆ ಮಾಡುತ್ತಾ ಹೋಗುತ್ತಿದ್ದೆ."

"ಬುಡಿ ಮೇಸ್ಟ್ರೆ, ಓದಿಸೋ ಐಗೋಳಿಗೆಲ್ಲಾ ಎಂತಾ ಯೋಚಣೆ. ಅದೇನು ಯಾಪಾರ ಕೆಟ್ಟೋಯ್ತಾ?"

ಅವನ ಅಜ್ಞಾನ ನೋಡಿ ಸುಬ್ಬಕೃಷ್ಣನಿಗೆ ನಗೆ ಬಂದಿತು. ಅದನ್ನು ತೋರಗೊಡದೆ,

"ಅದೂ ಒಂದು ತರಹ ವ್ಯಾಪಾರವೇ ಸಾಹುಕಾರರೇ. ಬುದ್ಧಿಯ ವ್ಯಾಪಾರ."

"ನಮಗದೆಲ್ಲಾ ತಿಳಿಯೋಕಿಲ್ಲ. ಕಲ್ಲು, ಮಣ್ಣು, ಗಾರೆ, ನಾಟಾ ಬಾಬತ್ತಾದರೆ ಏಳಿ. ಒಂದು ಕೈ ನೋಡೋವ."

"ನಾನು ಯೋಚಿಸುತ್ತಿದ್ದುದು ನಿಮಗೂ ಸಂಬಂಧಪಟ್ಟ ವಿಚಾರವೇ ಅನ್ನಿ."

"ಅದೆಂಗೆ?"

"ಮಧುಸೂದನನಿಂದ ಈಚೆಗೆ ನಿಮಗೇನಾದರೂ ಸಮಾಚಾರ ಬಂದಿತ್ತೆ?"

"ಬರದೇ ಉಂಟಾ? ಮನೆ ಇನ್ನೂ ಅವರ ಸುಪರ್ದಿನಾಗೇ ಐತಲ್ಲಾ."

"ಏನಂತ ಕಾಗದ ಬಂದಿತ್ತು?"

" ಕಾಗ್ದ ಗೀಗ್ದ ಇಲ್ರ. ಆದ್ರೆ ಮನೆ ಬಾಡಿಗೆ ಬಾಬ್ತು ಅಂತ ಮೂರು ತಿಂಗಳು ಅಡ್ವಾನ್ಸ್ ಕಳಿಸವ್ರೆ."

" ಮನಿಆರ್ಡರ್ ಬಂದಿತ್ತೆ? ಎಲ್ಲಿಂದ ಬಂದಿತ್ತು ?"

" ಬೊಂಬಾಯಿಂದ ಬಂದೈತೆ ಅಂತ ಪೋಷ್ಟ್‌ಮ್ಯಾನ್ ಏಳಿದ. ಯೆಸರು ನೋಡಿ ನಾನೂ ತಕೊಂಡೆ."

" ವಿಳಾಸ ನೋಡಿಕೊಳ್ಳಲಿಲ್ಲವೆ ?"

" ಇಲ್ರ. ಆದರ ಮ್ಯಾಗೆ ನಿಗಾ ಬೀಳ್ನಿಲ್ಲ."

" ಅದು ತಿಳಿದುಕೊಂಡಿದ್ದರೆ ಚೆನ್ನಾಗಿತ್ತು."

" ಯಾಕೆ, ನಿಮಗೆ ಬರೀನಿಲ್ಲವೋ ಅವ್ರು ?"

ಎಂದು ಚಿನ್ನಪ್ಪ ಕೇಳಿದ. ಸುಬ್ಬಕೃಷ್ಣ ಅವನ ಪ್ರಶ್ನೆಗೆ ಉತ್ತರ ಕೊಡದೆ,

" ಇನ್ನೊಂದು ಸಲ ನಿಮಗೆ ಕಾಗದ ಬಂದರೆ ದಯವಿಟ್ಟು ತಿಳಿಸಿ ಸಾಹು ಕಾರರೇ. ಸಾವಕಾಶವಾಗಿ ಕಾಣುತ್ತೇನೆ"

ಎಂದು ಹೊರಟುಬಿಟ್ಟ. ಅವನ ಪ್ರಶ್ನೆ ಅರ್ಥವಾಗದ ಚಿನ್ನಪ್ಪ ಅವನು ಹೋದ ದಾರಿಯನ್ನೇ ನಿಟ್ಟಿಸುತ್ತ ಒಂದು ಗಳಿಗೆ ಬೆಪ್ಪನಂತೆ ನಿಂತ.

ಸುಬ್ಬಕೃಷ್ಣ ನೇರವಾಗಿ ದಾಸರ ಮನೆಗೆ ಬಂದ. ಮಧ್ಯಾಹ್ನದ ನಿದ್ದೆ ಮುಗಿಸಿ ಎದ್ದು ಕುಳಿತಿದ್ದ ದಾಸರು ಅವನನ್ನು ಕಂಡು,

" ಬಾಪ್ಪ ಸುಬ್ಬೂ, ಕುಳಿತುಕೋ. ಏನು ಈಚೆಗೆ ಕಾಣಲೇ ಇಲ್ಲವಲ್ಲ ?"

ಎನ್ನುತ್ತ ತಾವು ಹಾಸಿಕೊಂಡು ಕುಳಿತಿದ್ದ ಹರಕು ಚಾಪೆಯನ್ನೇ ಇನ್ನಷ್ಟು ದೊಡ್ಡದಾಗಿ ಬಿಚ್ಚಿ ಅವನಿಗೆ ಸ್ಥಳ ಮಾಡಿಕೊಟ್ಟರು. ಸುಬ್ಬಕೃಷ್ಣ ಗೋಡೆಗೆ ಸೇರಿದ ಹಾಗೆ ಚಾಪೆಯ ಒಂದು ಕೊನೆಯಲ್ಲಿ ಕುಳಿತು,

" ಎಲ್ಲೋ ವಿರಾಮವಾಗಲಿಲ್ಲ. ಮಧುಸೂದನನ ಸಮಾಚಾ ಕೇಳಿದಿರಾ ?"

" ಇಲ್ಲ. ಏನು ಸಂಗತಿ ? ನಿನಗೇನಾದರೂ ತಿಳಿಯಿತೇನು ?"

ಎಂದು ಕುತೂಹಲ ಸೂಚಿಸುವ ಧ್ವನಿಯಲ್ಲಿ ಕೇಳಿದರು.

" ಯಾವುದೋ ಒಂದು ಪತ್ರಿಕೆಯಲ್ಲಿ ನೋಡಿದೆ. ಮುಂಬಯಿಯಲ್ಲಿ ಇದಾನಂತೆ."

" ಮುಂಬಯಿಯಲ್ಲಿದಾನೆಯೆ ?"

“ಹಾಗೆ ಅಂತ ಓದಿದೆ.”

“ನಮಗೊಂದು ಕಾಗದ ಬರೆಯಬಾರದಾಗಿತ್ತೆ? ನಾವು ಮಾಡಿದ ಪಾಪ ವೇನು?”

“ನನಗೂ ಹಾಗೆಯೇ ಅನ್ನಿಸಿತು. ಅವನ ಸಮಾಚಾರ ನಮಗೆ ಬೇರೆ ಕಡೆಯಿಂದ ತಿಳಿಯಬೇಕಾಗಿ ಬಂದಿದೆ, ನೋಡಿ.”

“ಹೋಗಲಿ. ಸದ್ಯ ಸುಖವಾಗಿದಾನಲ್ಲಾ, ಅಷ್ಟೇ ಬೇಕಾದ್ದು. ನನಗೆ ಅವನ ಯೋಚನೆಯೇ ಆಗಿತ್ತು. ನೀನಾದರೂ ಅವನಿಗೆ ಒಂದು ಕಾಗದ ಬರಿ, ಸುಬ್ಬೂ.”

“ಕಾಗದ ಬರೆಯುವುದಕ್ಕೆ ವಿಳಾಸ ಗೊತ್ತಿದ್ದರೆ ತಾನೇ?”

ಎಂದು ಚಿನ್ನಪ್ಪ ಸಿಕ್ಕಿದ್ದ ಸಂಗತಿ ತಿಳಿಸಿದ. ದಾಸರು ಒಂದು ಗಳಿಗೆ ಯೋಚಿಸುತ್ತ ಸುಮ್ಮನೆ ಕುಳಿತರು. ಅವರ ಬುದ್ಧಿ ಸಮಸ್ಯೆಗೆ ಪರಿಹಾರ ಹುಡುಕುತ್ತಿತ್ತು. ಒಂದು ಕ್ಷಣ ಬಿಟ್ಟು,

“ಹಾಗಾದರೆ ಏನು ಮಾಡಬೇಕೆನ್ನುತ್ತೀ?”

“ನಾನೂ ಅದನ್ನೇ ಯೋಚಿಸುತ್ತಿದೇನೆ. ಮುಂಬಯಿಯಲ್ಲಿ ಮಧುಸೂದನನ ಪರಿಚಯವಿರುವ ಯಾವುದಾದರೂ ಸಂಘಕ್ಕೆ ಬರೆದು ತಿಳಿದುಕೊಳ್ಳಬೇಕು.”

“ಅಂಥ ಸಂಘ ಅಲ್ಲಿ ಯಾವುದಿದೆ?”

“ಮೈಸೂರು ಸಂಘ ಇದೆ, ಕನ್ನಡ ಸಂಘ ಇದೆ. ಯಾವುದಕ್ಕೆ ಬರೆದರೂ ಆಯಿತು.”

“ಹಾಗಾದರೂ ಮಾಡು”

ಎಂದು ದಾಸರು ನುಡಿದರು. ಸುಬ್ಬಕೃಷ್ಣ ಹೊರಡಲು ಎದ್ದ.

“ಸರಿ, ನಾನು ನಿಮ್ಮನ್ನು ಮತ್ತೊಮ್ಮೆ ನೋಡುತ್ತೇನೆ.”

“ಒಂದು ಗಳಿಗೆ ಕುಳಿತುಕೋ. ಲೇ, ಸುಬ್ಬೂಗೆ ಒಂದು ಲೋಟ ಪಾನಕವನ್ನಾದರೂ ಮಾಡಿಕೊಡೆ. ಉರಿಯುವ ಬಿಸಿಲಲ್ಲಿ ಬಂದಿದಾನೆ, ಪಾಪ.”

“ನೀವು ತೊಂದರೆ ತೆಗೆದುಕೊಳ್ಳಬೇಡಿ, ದಾಸರೇ. ಕಾಲೇಜ್ ರೆಸ್ಟುರಾದಲ್ಲಿ ನಾನು ಈಗ ತಾನೇ ಕಾಫಿ ಕುಡಿದು ಬಂದೆ.”

“ಕುಡಿಯದೆ ಬರುತ್ತೀಯಾಪ್ಪ. ಇರಲಿ, ಕುಳಿತುಕೋ. ನಮ್ಮ ಮನೆಯಲ್ಲಿ

ಒಂದು ಗುಟುಕು ನೀರನ್ನಾದರೂ ಕುಡಿಯುವೆಯಂತೆ. ನೀನು ಬರುವುದೇ
ಅಪರೂಪ. ನಾವು ಆದರಿಸುವುದೂ ಅಷ್ಟರಲ್ಲೇ ಇದೆ."

"ನಿಮ್ಮ ವಿಶ್ವಾಸಕ್ಕಿಂತ ಬೇರೆ ಆದರ ಬೇಕೆ, ದಾಸರೇ?"

"ಮಧುಸೂದನನೂ ಹಾಗೇ ಅನುತ್ತಾ ಇದ್ದ. ನಿಮ್ಮಿಬ್ಬರ ಅಂತಃ
ಕರಣವೂ ಒಂದೇ ತರಹ. ದೇವರು ನೂರುಕಾಲ ನಿಮ್ಮನ್ನು ಚೆನ್ನಾಗಿಟ್ಟಿರ
ಬೇಕಪ್ಪ"

ಎಂದರು. ಕಲ್ಮಷ ಕಾಣದ ಅವರ ಮನಸ್ಸು ವಾತ್ಸಲ್ಯದಿಂದ ಆರ್ದ್ರ
ವಾಗಿತ್ತು. ಸುಬ್ಬಕೃಷ್ಣ,

"ನಿಮ್ಮ ಆಶೀರ್ವಾದ"

ಎಂದಷ್ಟೇ ನುಡಿದ. ನರಸಕ್ಕ ಎರಡು ಬಟ್ಟಲಿನ ತುಂಬ ನಿಂಬೇಹಣ್ಣಿನ
ಪಾನಕಮಾಡಿ ತಂದಿತ್ತರು. ಸುಬ್ಬಕೃಷ್ಣ ಪಾನಕ ಕುಡಿಯುತ್ತಿದ್ದಾಗ ಅವರ
ದೃಷ್ಟಿ ಅವನ ಮೇಲೆ ನೆಲಸಿತು.

"ಎಷ್ಟು ಬಡವಾಗಿ ಹೋಗಿದ್ದೀ, ಸುಬ್ಬೂ? ನಿನ್ನ ನೋಡಿ ತಿಂಗಳು
ಗಟ್ಟಲೆ ಆಗಿಹೋಯಿತು. ಬಡವರ ಮನೆ ಅಂತ ಮರೆತುಬಿಡಬೇಡಪ್ಪಾ.
ಆಗಾಗ ಬರುತ್ತಾ ಇರು. ಇನ್ನೇನು ಮಾಡುವುದಕ್ಕಿಲ್ಲದಿದ್ದರೂ ಒಂದು ಲೋಟ
ನೀರನ್ನಾದರೂ ಕೊಡುತ್ತೇವೆ"

ಎಂದು ಸಂಕೋಚದಿಂದ ನುಡಿದು ನಕ್ಕರು.

"ಹಾಗನ್ನಬೇಡಿ ನರಸತ್ತೆ. ವಿಶ್ವಾಸದಲ್ಲಿ ಒಂದು ಹನಿಯೇ ಸಾಗರ.
ಅಂತಃಕರಣವಿಲ್ಲದ ಬರೀ ಉಪಚಾರದಿಂದೇನು ಪ್ರಯೋಜನ, ಹೇಳಿ?"

"ಏನು ಅಂತಃಕರಣವೋಪ್ಪ. ನಾವು ನಿನಗೆ ಮಾಡಿರುವ ಷೋಡಶೋಪ
ಚಾರವಾದರೂ ಏನು? ನಮ್ಮ ಮನೆಗೆ ಏತಕ್ಕೆ ಬರುತ್ತೀ? ಬಿಸಿಲಿನಲ್ಲಿ ಬಂದ
ಹುಡುಗನಿಗೆ ಒಂದು ತಿಂಡಿ ತೀರ್ಥ ಮಾಡಿಕೊಡುವ ಯೋಗ್ಯತೆಯನ್ನೂ
ದೇವರು ಕೊಡಲಿಲ್ಲ"

ಎಂದು ನರಸಕ್ಕ ಮನಸ್ಸು ಚಿಕ್ಕದು ಮಾಡಿಕೊಂಡರು.

"ನೀವು ಸುಮ್ಮನೆ ಮನಸ್ಸಿಗೆ ಕಿರಿಕಿರಿಪಟ್ಟುಕೊಳ್ಳಬೇಡಿ, ನರಸತ್ತೆ.
ಇದಕ್ಕಿಂತ ಬೇರೆ ಇನ್ನೇನು ಬೇಕು? ನಾನು ಬಂದಾಗಲೆಲ್ಲಾ ಆದರದಿಂದ ಇಷ್ಟು
ಕೊಡುತ್ತಿರಿ ಸಾಕು. ನನಗಿದೇ ಅನಂತ."

" ನಿನ್ನ ಅಂತಃಕರಣಕ್ಕೆ ಹಾಗನ್ನಿಸುತ್ತೀ ಸುಬ್ಬೂ. ಅಲ್ಪವನ್ನೇ ಅನಂತವೆಂದುಕೊಳ್ಳುವುದು ದೊಡ್ಡ ಗುಣ"

ಎಂದು ಸುಮ್ಮನಾದರು. ಹೊರಡಲನುವಾದ ಸುಬ್ಬಕೃಷ್ಣನನ್ನು ನೋಡಿ ದಾಸರು,

" ಏನಾದರೂ ಸಮಾಚಾರ ಬಂದರೆ ನನ್ನ ಕಿವಿಯ ಮೇಲೂ ಹಾಕು ಸುಬ್ಬೂ. ನನಗೆ ಆ ಹುಡುಗನದೇ ಯೋಚನೆ."

" ನಿಮಗೆ ತಿಳಿಸದೆ ಎರಡನೆಯ ಕೆಲಸವನ್ನೇ ಮಾಡುವುದಿಲ್ಲ"

ಎಂದು ಸುಬ್ಬಕೃಷ್ಣ ಉತ್ತರವಿತ್ತು ಹೊರಟ. ಅವನ ಲಕ್ಷ್ಯ ಮುಂದಿನ ಕೆಲಸದ ಕಡೆಗಿತ್ತು.

" ಬಂಗಾರದಂಥ ಹುಡುಗ. ಎಷ್ಟು ಒದ್ದುಕೊಳ್ಳುತಾನೆ ನೋಡಿ ಅಂದ್ರೆ"

ಎಂದು ಮೆಟ್ಟಲಿಳಿದು ಕಣ್ಮರೆಯಾದ ಸುಬ್ಬಕೃಷ್ಣನ ಕಡೆ ನೋಡುತ್ತ ವಾತ್ಸಲ್ಯ ತುಂಬಿದ ಧ್ವನಿಯಲ್ಲಿ ನರಸಕ್ಕ ನುಡಿದರು.

" ಒಳ್ಳೆಯ ಜೀವದ ಲಕ್ಷಣವೇ ಹಾಗೆ ಕಣೇ"

ಎಂದು ದಾಸರು ಗಂಭೀರವಾಗಿ ಉತ್ತರವಿತ್ತರು. ಇಬ್ಬರ ಮನಸೂ ಅವ್ಯಾಜವಾದ ಮಮತೆಯಿಂದ ತುಂಬಿತ್ತು.

೯

"ನವಕಾಲ್" ಪತ್ರಿಕೆಯಲ್ಲಿ ಬಂದಿದ್ದ ಲೇಖನ ಸುಬ್ಬಕೃಷ್ಣನೊಬ್ಬನ ಲಕ್ಷ್ಯವನ್ನೇ ಸೆಳೆದಿರಲಿಲ್ಲ. ಮುಂಬಯಿಯಲ್ಲೂ ಅದು ಹತ್ತಾರು ಜನರ ಕಣ್ಣಿಗೆ ಬಿದ್ದಿತ್ತು. ಆ ಪೈಕಿ ಕನ್ನಡ ಸಂಘದ ಅಧ್ವರ್ಯು ವಿದ್ವಾನ್ ರಾಮಶರ್ಮ ರೊಬ್ಬರು.

ಶರ್ಮರಿಗೆ ಪತ್ರಿಕೆಯನ್ನೋದಿ ಅಚ್ಚರಿಯಾಯಿತು.

"ಎಲಾ, ಮುಂಬಯಿಯಲ್ಲಿದ್ದೂ ನಮ್ಮ ಕಣ್ಣಿಗೆ ಬೀಳದೆ ತಪ್ಪಿಸಿಕೊಂಡಿ ರುವರಲ್ಲಾ!"

ಎಂದುಕೊಂಡರು. ವಿಷಯವನ್ನು ಅಷ್ಟಕ್ಕೇ ಬಿಡಲು ಅವರಿಗೆ ಮನಸ್ಸಾಗ ಲಿಲ್ಲ. ಮೈಸೂರು ಸಂಘದ ಆಚಾರ್ಯರಿಗೆ ಕೂಡಲೇ ಫೋನ್ ಮಾಡಿ ಅವರನ್ನೂ ಕರೆದುಕೊಂಡು ವಾಮನರಾಯರ ಮನೆಗೆ ಬಂದರು. ಕೈಯಲ್ಲಿದ್ದ ಪತ್ರಿಕೆಯನ್ನು ರಾಯರ ಮುಂದಿಟ್ಟು,

"ಸುದ್ದಿ ನೋಡಿದರೇನು?"

ಎಂದರು. ವಾಮನರಾಯರು ಮೂಗಿನ ತುದಿಯ ಮೇಲೆ ಕನ್ನಡಕ ವೇರಿಸಿ ಲೇಖನದ ಮೇಲೆ ಸ್ಥೂಲವಾಗಿ ಕಣ್ಣು ಓಡಿಸಿದರು.

"ಹೌದ್ರಪಾ, ಸುದ್ದಿ ಖರೆ. ನನಗ ಭೆಟ್ಟಿಯಾಗಿದ್ದರೂ ಆತ. ಮನಿ ಕಡೆ ಬರಲಿಕ್ಕೆ ಹೇಳಿಬಂದೀನಿ."

"ಎಲ್ಲಿ ಇಳಿದಿದ್ದಾರಂತೆ?"

"ಮಾತುಂಗಾದಲ್ಲಿ ಇಳಿದಾರಂತೆ. ಇವತ್ತು ನಾಳಿ ಒಳಗ ಬರಲಿಕ್ಕೆ ಬೇಕು."

"ಅವರ ವಿಳಾಸ ತಿಳಿದುಕೊಂಡಿದ್ದರಾಗುತ್ತಿತ್ತು, ರಾಯರೇ. ನಾವೇ ಯಾರನ್ನಾದರೂ ಅಲ್ಲಿಗೆ ಕಳಿಸಬಹುದಾಗಿತ್ತು."

"ಹೌಂದು. ತಿಳಿದಿದ್ದರಾಗತಿತು. ತಿಳೀಲಿಲ್ಲ. ಈಗ ಏನು ಮಾಡಲಿಕ್ಕೆ ಬರತದ?"

ಆ ಪ್ರಶ್ನೆಗೆ ಶರ್ಮರ ಹತ್ತಿರ ಉತ್ತರವಿರಲಿಲ್ಲ. ಅವರು ಮೌನವಾಗಿ ಆಚಾರ್ಯರ ಮುಖ ನೋಡಿದರು.

"ಮಾತುಂಗಾದಲ್ಲಿ ಬೇಕಾದರೆ ನಾನು ವಿಚಾರಿಸುತ್ತೇನೆ"

ಎಂದು ಆಚಾರ್ಯರಂದರು. ಆದರೆ ಅದೇನೂ ಅಷ್ಟು ತೃಪ್ತಿಕರವಾದ ಭರವಸೆಯಾಗಿರಲಿಲ್ಲ. ರಾಮಶರ್ಮರು ಮಧುಸೂದನನನ್ನು ಕಾಣುವ ಬಗೆಯನ್ನು ಯೋಚಿಸುತ್ತ ಕುಳಿತರು.

"ನನ್ನ ಆಹ್ವಾನದ ಪ್ರಕಾರ ಅವರು ಬರಲಿಕ್ಕೇ ಬೇಕು, ಶರ್ಮ. ನೀವು ಯಾಕ ಸುಮ್ಮಗ ಕಾಳಜಿ ಮಾಡತೀರಿ?"

ಅದೂ ಫಲವಿಲ್ಲದ ಭರವಸೆಯೇ ಆಯಿತು. ವಾಮನರಾಯರು ಆಹ್ವಾನ ಕೊಟ್ಟು ಬಂದು ಮೂರು ದಿವಸವಾದರೂ ಮಧುಸೂದನ ಆ ಕಡೆ ತಲೆ ಹಾಕಲಿಲ್ಲ.

ಶರ್ಮರಿಗೊಂದು ಬಯಕೆಯಿತ್ತು. ಕಳೆದ ಸಲ ಮಧುಸೂದನನ ಕಚೇರಿ ನಡೆದ ಸಂದರ್ಭದಲ್ಲಿ ಕನ್ನಡ ಸಂಘದ ಪರವಾಗಿ ಅವನಿಗೊಂದು ಸತ್ಕಾರಕೂಟ ಏರ್ಪಡಿಸಬೇಕೆಂದು ಅವರು ಯೋಚಿಸಿದ್ದರು. ಮುಂಬಯಿಯಲ್ಲಿರುವ ಪ್ರಮುಖ ಕನ್ನಡಿಗರನ್ನೆಲ್ಲಾ ಸಮಾರಂಭಕ್ಕೆ ಆಹ್ವಾನಿಸಿ ಮಧುಸೂದನನನ್ನು ಗೌರವಿಸುವ ಉದ್ದೇಶ ಅವರಿಗಿತ್ತು. ಆ ಆಲೋಚನೆಗೆ ವಾಮನರಾಯರ ಪೂರ್ಣ ಬೆಂಬಲ ಸಹಕಾರಗಳಿದ್ದವು. ಆ ಏರ್ಪಾಡಿಗೆ ಎರಡು ಮೂರು ದಿನಗಳ ಕಾಲಾವಕಾಶವಾದರೂ ಅಗತ್ಯವಾಗಿತ್ತು. ಆದರೆ ಕಚೇರಿ ನಡೆದ ಮಾರನೆಯ ದಿನವೇ ಮಧುಸೂದನನಿಗೆ ಮೈಸೂರಿನಿಂದ ತಂತಿ ಬಂದು ಅವನು ಇದ್ದಕ್ಕಿದ್ದ ಹಾಗೆ ಹೊರಟುಬಿಟ್ಟಿದ್ದ. ಇದರಿಂದ ಮುಂಬಯಿಯ ಸಮಾರಂಭದಲ್ಲಿ ಅವನನ್ನು ನೋಡುವ ಭರವಸೆ ಇಟ್ಟುಕೊಂಡಿದ್ದ ಅನೇಕ ಅಭಿಮಾನಿಗಳಿಗೆ ನಿರಾಶೆಯಾಗಿತ್ತು.

ಅಷ್ಟೇ ಅಲ್ಲ. ಕಚೇರಿಗೆ ಬರಲಾಗದಿದ್ದ ಮುಂಬಯಿಯ ಅನೇಕ ರಸಿಕರು ಪತ್ರಿಕೆಗಳಲ್ಲಿ ಅದರ ವಿಮರ್ಶೆ ಓದಿ ಒಂದು ಒಳ್ಳೆಯ ಹಾಡಿಕೆ ಕೇಳುವ ಅವಕಾಶ

ತಮಗೆ ತಪ್ಪಿತಲ್ಲಾ ಎಂದು ಪೇಚಾಡಿಕೊಂಡಿದ್ದರು. ಅಂಥ ಹತ್ತಾರು ಮಂ
ಶರ್ಮರಿಗೆ ಫೋನ್ ಮಾಡಿಯೋ ಕಾಗದ ಬರೆದೋ ತಮ್ಮ ಅಪೇಕ್ಷೆ ಸೂಚಿ
ದ್ದರು; ಸಾಧ್ಯವಾದಷ್ಟು ಬೇಗ ಮತ್ತೊಮ್ಮೆ ಮೈಸೂರು ಗಾಯಕನ ಸಂಗೀ
ವನ್ನು ತಾವು ಕೇಳುವ ಅವಕಾಶ ಕಲ್ಪಿಸಿಕೊಡಬೇಕೆಂದು ಕೋರಿದ್ದರು.

ಮಧುಸೂದನ ಮುಂಬಯಿಯಲ್ಲಿರುವನೆನ್ನುವ ಸಂಗತಿ ಕೇಳಿ ಶರ್ಮ
ಮನಸ್ಸಿನಲ್ಲಿ ಹಿಂದಿನ ಬಯಕೆ ಮತ್ತೆ ತಲೆದೋರಿತು. ಮಧುಸೂದನ ಸಿಕ್ಕಿ
ಆತನಿಗೆ ವಿರಾಮವಿದ್ದರೆ ಮತ್ತೊಂದು ಕಚೇರಿಯನ್ನೂ ಅದಾದ ತರುವಾಯ
ಸತ್ಕಾರ ಕೂಟವನ್ನೂ ಏಕೆ ಇಟ್ಟುಕೊಳ್ಳಬಾರದೆಂದು ಅವರು ಯೋಚಿಸಿದರು
ಆ ಕಾರಣದಿಂದಲೇ 'ನವಕಾಲ'ದಲ್ಲಿ ಸುದ್ದಿ ಓದಿದ ಕೂಡಲೆ ಅವರು ವಾಮ
ರಾಯರ ಮನೆಗೆ ಬಂದದ್ದು. ವಾಮನರಾಯರಿಗೂ ಮಧುಸೂದನ ಇಳಿದಿರು
ಸ್ಥಳ ಗೊತ್ತಿಲ್ಲದೆ ಇಬ್ಬರೂ ಅಸಹಾಯಕ ಪರಿಸ್ಥಿತಿಯನ್ನೆದುರಿಸಬೇಕಾಯಿತು

ಆದರೆ ಶರ್ಮರೇನೂ ಪೇಚಾಡುತ್ತ ಕೂಡಬೇಕಾಗಿರಲಿಲ್ಲ. ಮಧುಸೂದ
ಮಾತುಂಗಾದಲ್ಲಿ ಮಾರನೆಯ ದಿನವೇ ಆಚಾರ್ಯರ ಕಣ್ಣಿಗೆ ಬಿದ್ದ. ಅವರ
ಅವನನ್ನು ಬಿಡದೆ ಕಾರಿನಲ್ಲಿ ಕೂಡಿಸಿಕೊಂಡು ಕನ್ನಡ ಸಂಘಕ್ಕೆ ಕರೆತಂದರು
ಅವನನ್ನು ಕಂಡು ಶರ್ಮರಿಗೆ ತುಂಬ ಸಂತೋಷವಾಯಿತು. ವಿಶ್ವಾಸದಿಂ
ಕೈಹಿಡಿದುಕೊಂಡು,

"ನಮ್ಮ ಮೇಲೆ ನಿಮಗೆ ಅಭಿಮಾನವೇ ಇಲ್ಲವೆಂದು ಕಾಣುತ್ತದೆ."

"ಏಕೆ ಹಾಗೆನ್ನುತ್ತೀರಿ?"

"ಮುಂಬಯಿಯಲ್ಲಿದ್ದೂ ನಮಗೆ ಭೇಟಿ ಕೊಡಬಾರದೆ? ನೀವು ಬರು
ಸಮಾಚಾರ ಗೊತ್ತಿದ್ದರೆ ಇಳಿದುಕೊಳ್ಳಲು ನಾವೇ ಏರ್ಪಾಡುಮಾಡುತ್ತಿದ್ದೆವು
ನಿಮ್ಮವರಾಗಿ ನಾವು ಇಲ್ಲಿದ್ದೂ ನೀವು ಬೇರೆ ಕಡೆ ಇಳಿದುಕೊಳ್ಳಬೇಕೆ
ವಾಮನರಾಯರಂತೂ ತುಂಬ ಪೇಚಾಡಿಕೊಂಡರು."

"ಹೌದು. ಅವರಿಗೂ ಬರುವುದಾಗಿ ಹೇಳಿದ್ದೆ. ಎಲ್ಲೋ ವಿರಾ
ವಾಗಲಿಲ್ಲ."

ಈಗ ಮುಂಬಯಿಗೆ ಬಂದಿರುವುದು ವಿರಾಮಕ್ಕಾಗಿ ತಾನೆ?"

"ಹೌದು, ಬಂದ ಉದ್ದೇಶವೇನೋ ಅದೇ. ಆದರೆ ವಿರಾಮವಿಲ್ಲ
ಓಡಾಡುತ್ತಿರುವುದೇ ಆಗಿದೆ"

ಎಂದು ನಕ್ಕ. ಶರ್ಮರು ಆ ನಗೆಯಲ್ಲಿ ತಾವೂ ಭಾಗಿಯಾಗಿ,

"ಕಲಾವಿದರೆಂದರೆ ಸುಮ್ಮನಾಯಿತೆ? ಅವರ ಕಾಲ ಅವರದಲ್ಲ. ಜನರಿಂದ ಎಷ್ಟೇ ತಪ್ಪಿಸಿಕೊಳ್ಳಬೇಕೆಂದರೂ ಜನ ಅವರನ್ನು ಬಿಡುವುದಿಲ್ಲ."

"ತಪ್ಪಿಸಿಕೊಳ್ಳಬೇಕೆನ್ನುವ ಉದ್ದೇಶವೂ ನನಗಿಲ್ಲ. ನಾನಿರುವುದೇ ಜನ ಸೇವೆಗೆ."

"ಅದು ದೊಡ್ಡ ಮಾತು. ನಾವು ನಿಮಗೆ ಪದೇ ಪದೇ ತೊಂದರೆ ಕೊಡಲು ನಮಗಿರುವ ಧೈರ್ಯವಾದರೂ ಅದೇ"

ಎಂದರು. ಆಚಾರ್ಯರು ಮಧ್ಯೆ ಮಾತೆತ್ತಿ,

"ವಾಮನರಾಯರ ಮನೆಗೆ ಒಂದು ಹೆಜ್ಜೆ ಹೋಗಿಬರಬಹುದಲ್ಲಾ. ಅವರೂ ನಿರೀಕ್ಷಿಸುತ್ತಿರುತ್ತಾರೆ"

ಎಂದರು. ಅಷ್ಟು ಹೊತ್ತಿಗೆ ಆಳು ಕಿತ್ತಳೆಹಣ್ಣು, ಬಿಸ್ಕತ್, ಕಾಫಿ ತಂದಿತ್ತ. ಮೂವರೂ ಉಪಾಹಾರ ಮುಗಿಸಿಕೊಂಡು ವಾಮನರಾಯರ ಮನೆಯ ಕಡೆಗೆ ಹೊರಟರು.

ವಾಮನರಾಯರಿಗೆ ಮಧುಸೂದನನನ್ನು ಕಂಡು ಆದ ಸಂತೋಷ ಅಷ್ಟಿಷ್ಟಲ್ಲ. ವಿಶ್ವಾಸದಿಂದ ಸ್ವಾಗತಿಸುತ್ತ,

"ಕಡೀಗೂ ಬಂದ್ರಲ್ಲಾ ಮಹರಾಯರು. ಬರ್ರಿ ಬರ್ರಿ, ಹೀಂಗ ಕೂಡ್ರಿ"

ಎಂದು ಅವನನ್ನು ತಮ್ಮ ಪಕ್ಕದಲ್ಲೇ ಸೋಫಾದ ಮೇಲೆ ಕೂಡಿಸಿ ಕೊಳ್ಳುತ್ತ,

"ಶರ್ಮ, ನೀವು ಹೀಂಗ ಬನ್ರಿ. ಆಚಾರ್ಯ, ನೀವು ಇಲ್ಲಿ ಕೂಡ್ರಿ"

ಎಂದು ಸಡಗರಪಟ್ಟರು. ಅವರ ಅಭಿಮಾನದ ಸೋಂಕು ಎಲ್ಲರಿಗೂ ತಾಕುವ ಹಾಗಾಯಿತು. ರಾಯರು ಕುಳಿತ ಹಾಗೆಯೇ ಸ್ವಿಚ್ ಒತ್ತಿದ್ದರಿಂದ ಅಡುಗೆಯ ಮನೆಯಲ್ಲಿ ಗಂಟೆಯ ಸದ್ದಾಯಿತು. ಪರಿಚಾರಿಕೆಯ ಹುಡುಗ ಶೀನಯ್ಯ ಬಾಗಿಲ ಹತ್ತಿರ ಕಾಣಿಸಿಕೊಂಡು ಅಲ್ಲೇ ನಿಂತುಕೊಂಡ. ವಾಮನ ರಾಯರು ಅವನು ಬಂದದ್ದನ್ನು ಗಮನಿಸಿ,

"ಏನಪಾ ಶೀಣ್ಯಾ, ಬಾಯಾಡಲಿಕ್ಕೆ ಏನಾದರೂ ಅದನೋ ಇಲ್ಲೋ? ಹಾಂಗ ಚಹಾ ಗಿಹಾ ಇದ್ದರ ನೋಡು"

"ಈಗ ತಾನೇ ಶರ್ಮರ ಆತಿಥ್ಯ ಆಯಿತು, ರಾಯರೇ. ತಾವು ಸುಮ್ಮನೆ ತೊಂದರೆ ತೆಗೆದುಕೊಳ್ಳಬೇಡಿ"

ಎಂದು ಮಧುಸೂದನ ನುಡಿದ. ವಾಮನರಾಯರು ಅದಕ್ಕೊಪ್ಪುವ ಹಾಗಿರಲಿಲ್ಲ.

"ಆಗಿರವೊಲ್ದ್ಯಾಕ? ಶರ್ಮ ಕಡಿಮಿ ಆಸಾಮಿ ಅಂತ ತಿಳಿದೀರೇನು ನೀವು? ಭಯಂಕರ ಅದಾರ್‍ರೀ ಅವರು, ಭಯಂಕರ ಅದಾರ."

ಆ ಮಾತಿಗೆ ಎಲ್ಲರೂ ನಕ್ಕರು. ವಿನೋದವಾದ ಸಲ್ಲಾಪದ ನಡುವೆ ತಿಂಡಿ, ಚಹ ಮುಗಿಯಿತು. ಶೀನಯ್ಯ ಬೆಳ್ಳಿಯ ತಟ್ಟೆಯಲ್ಲಿ ಒಂದು ಕವಳಿಗೆ ಚಿಗುರು ವೀಳೆಯದೆಲೆ, ಸೊಗಸಾಗಿ ಬಣ್ಣ ಕಟ್ಟಿದ ಅಡಿಕೆ, ಕೇಸರಿ ಹಾಕಿದ್ದ ಸುಣ್ಣವನ್ನು ಅಣಿಮಾಡಿ ತಂದಿತ್ತ. ರಾಯರಿಗೆ ತಾಂಬೂಲ ಎಂದರೆ ತುಂಬ ಪ್ರೀತಿ. ಅವರು ಬಾಯಿತುಂಬ ಅಡಿಕೆ ಹಾಕಿಕೊಂಡು ವೀಳೆಯದೆಲೆಯನ್ನು ಮಡಿಸಿ ಮಡಿಸಿ ಬಾಯಿಗೆ ತುರುಕಿಕೊಂಡು ಮೆಲ್ಲಲಾರಂಭಿಸಿದರು. ಆಚಾರ್ಯರೂ ತಾಂಬೂಲದ ಅಭ್ಯಾಸದವರೇ. ಅವರೂ ತಟ್ಟೆಗೆ ಕೈ ಹಾಕಿದರು. ಆದರೆ ಮಧುಸೂದನ, ಶರ್ಮ ಮುಟ್ಟಲಿಲ್ಲ.

ಮುಂದಿನ ಕಾರ್ಯಕ್ರಮ ಗೊತ್ತುಪಡಿಸುವುದು ವಾಮನರಾಯರಿಗೆ ಸೇರಿದ ಭಾಗವಾಗಿತ್ತು. ಶರ್ಮರು ಅವರ ಕಡೆ ನೋಡಿ ಸೂಕ್ಷ್ಮವಾಗಿ ಕಣ್ಣು ಮಿಟುಕಿಸಿದರು. ರಾಯರು ಮುಗುಳ್ನಗೆಯಿಂದ ವಿಷಯಕ್ಕೆ ಪ್ರಸ್ತಾವನೆ ಹಾಕುತ್ತ,

"ಆತಲ್ಲ ಪ್ರಾಣದೇವರ ತೃಪ್ತಿ. ಇನ್ನು ವ್ಯವಹಾರ ಮಾತಾಡಲಿಕ್ಕೆ ಅಡ್ಡಿ ಇಲ್ಲ. ಶರ್ಮ, ಎಂದು ಇಡಿಸಬೇಕು ಅಂತ ಮಾಡೀರಿ ನಮ್ಮ ಮಧುಸೂದನರ ಕಚೇರಿ?"

"ಅವರು ಒಪ್ಪಿದಾಗ ನಾವು ಪ್ರಕಟನೆ ಮಾಡಲು ಸಿದ್ಧ. ಆ ಒಪ್ಪಿಗೆಗೇ ನಾವೂ ಕಾದಿದೇವೆ."

ಇಬ್ಬರೂ ಸೇರಿ ಉಪಾಯವಾಗಿ ತನ್ನನ್ನು ಬಂಧನಕ್ಕೆ ಸಿಕ್ಕಿಸಿಕೊಳ್ಳಲು ಪ್ರಯತ್ನಿಸುತ್ತಿರುವರೆನ್ನುವುದು ಮಧುಸೂದನನಿಗೆ ಅರ್ಥವಾಗದಿರಲಿಲ್ಲ. ಮುಂಬಯಿಯಲ್ಲಿ ಇಷ್ಟು ಬೇಗ ಸಂಗೀತ ಕಚೇರಿ ಮಾಡಲು ಅವನಿಗಿಷ್ಟವಿರಲಿಲ್ಲ. ಅವನ ಮನಸ್ಸು ಏಕೋ ಈಚೆಗೆ ಸಂಗೀತ ಪ್ರಪಂಚದಿಂದಲೇ ವಿಮುಖವಾಗಿತ್ತು.

ಮೊದಲಿನ ಉತ್ಸಾಹ ಇಳಿದಿತ್ತು. ಸ್ವಲ್ಪ ಕಾಲವಾದರೂ ಆ ಪ್ರಪಂಚ, ಅದಕ್ಕೆ ಸಂಬಂಧಪಟ್ಟ ನೆನಪುಗಳನ್ನು ಮರೆತು ಮರೆಯಾಗಿರೋಣವೆಂದುಕೊಂಡಿದ್ದ. ಆದರೆ ವಿಶ್ವಾಸದ ಜನ ಅವನನ್ನು ಹಾಗೆ ಇರಗೊಡಿಸದೆ ಹೊರಗೆಳೆಯಲು ಪ್ರಯತ್ನಿಸುತ್ತಿದ್ದರು.

"ಯಾಕ, ವಿದ್ವಾಂಸರು ಏನಂತಾರ?"

ಎಂದು ವಾಮನರಾಯರು ಮೌನವಾಗಿ ಕುಳಿತಿದ್ದ ಮಧುಸೂದನನ ಕಡೆ ತಿರುಗಿ ಕೇಳಿದರು. ಮಧುಸೂದನ ಕಾರ್ಯಕ್ರಮವನ್ನು ಹೇಗಾದರೂ ಮಾಡಿ ಮುಂದೆ ಹಾಕಿಸಬೇಕೆಂದು ಯೋಚಿಸಿ,

"ಇನ್ನು ನಾಲ್ಕು ದಿನ ತಡೆದರಾಗದೆ? ನನ್ನ ಕಚೇರಿಗೆ ಅಷ್ಟು ಅವಸರವೆ?"

"ಅವಸರ? ಏನು ಹಾಂಗಂದರ? ತಿಂಗಳೊಪ್ಪತ್ತಿನಿಂದ ಮಂದಿ ಕಾದು ಕಾದು ನಮ್ಮ ಮ್ಯಾಲೆ ಸಿಟ್ಟಾಗ್ಯೇರ. ಪ್ರೋಗ್ರಾಂ ಮುಂದಕ್ಕೆ ಹಾಕಲಿಕ್ಕೆ ಬರೂದಿಲ್ಲ. ನೀವು ಸುಮ್ಮಗ ಹೂಞ ಅಂದುಬಿಡಿರಿ ಮತ್ತ"

ಎಂದು ನಿರ್ಧಾರವಾಗಿ ನುಡಿದುಬಿಟ್ಟರು. ಮಧುಸೂದನ ಶರ್ಮರ ಮುಖ ನೋಡಿದ. ಅವರ ಮುಖದಲ್ಲಿಯೂ ಅವನ ಬಗೆಗೆ ಸಹಾನುಭೂತಿಯಿದ್ದಂತಿರಲಿಲ್ಲ. ಅವರೂ ನಸುನಗುತ್ತಲೇ,

"ತಾವು ದಯವಿಟ್ಟು ಒಪ್ಪಿಕೊಂಡು ಬಿಡಿ, ಮಿ. ಮಧುಸೂದನ್"

ಎಂದರು. ಆ ವಿಶ್ವಾಸದ ಒತ್ತಾಯಕ್ಕೆ ಕಟ್ಟುಬೀಳದೆ ವಿಧಿಯೇ ಇರಲಿಲ್ಲ.

ಮಧುಸೂದನನ ಒಪ್ಪಿಗೆ ದೊರೆತದ್ದೇ ತಡ, ಶರ್ಮರು ಮುಂದಿನ ಕೆಲಸದಲ್ಲಿ ನಿರತರಾದರು. ವಿಜಯನಗರಕ್ಕೆ ದ್ವಾರಂರವರಿಗೊಂದು, ಗುಂಟೂರಿಗೆ ಹರಿಹರನಾಥ ಶಾಸ್ತ್ರಿಗಳಿಗೊಂದು ಎರಡು ತಂತಿ ಕಳಿಸಿದರು. ಈ ಮೂವರು ವಿದ್ವಾಂಸರ ಮೇಳ ಹಿಂದಿನ ಕಚೇರಿಯಲ್ಲಿ ಚೆನ್ನಾಗಿ ಕಳೆ ಕಟ್ಟಿತ್ತು. ಆದ್ದರಿಂದ ಮತ್ತೆ ಅವರನ್ನೇ ಕಲೆ ಹಾಕಿದರೆ ಕಚೇರಿ ಯಶಸ್ವಿಯಾಗುವುದರಲ್ಲಿ ಸಂದೇಹವಿಲ್ಲವೆಂದು ಶರ್ಮರು ಭಾವಿಸಿದರು. ಈ ವ್ಯವಸ್ಥೆ ಮಧುಸೂದನನಿಗೂ ಒಪ್ಪಿಗೆಯಾಗಿತ್ತು.

ಶರ್ಮರಿಗೂ ಆಚಾರ್ಯರಿಗೂ ಕೈತುಂಬ ಕೆಲಸವಾಯಿತು. ಸಭಾ ಮಂದಿರದ ವ್ಯವಸ್ಥೆ, ನೋಟೀಸುಗಳ ಮುದ್ರಣ, ಹಂಚಿಕೆ, ಪತ್ರಿಕೆಗಳಿಗೆ

ಜಾಹೀರಾತು ಕಳಿಸುವುದು ಮುಂತಾದ ಕೆಲಸಗಳಲ್ಲಿ ಅವರಿಗೆ ಬಿಡುವೇ ಇಲ್ಲ ವಾಯಿತು. ಪ್ರಸಾರದ ಬೆಲೆ ಅರಿತಿದ್ದ ಅವರು 'ಟೈಂಸ್ ಆಫ್ ಇಂಡಿಯಾ' 'ಬಾಂಬೇ ಕ್ರಾನಿಕಲ್' 'ಲೋಕಸಕ್ತ' 'ನವಕಾಲ್' ಮುಂತಾದ ಮುಂಬಯಿಯ ಪತ್ರಿಕೆಗಳಿಗೂ ಹೊರಗಿನ ಕನ್ನಡ ಪತ್ರಿಕೆಗಳಿಗೂ ಜಾಹೀರಾತುಗಳನ್ನು ಕಳಿಸಿಕೊಟ್ಟರು. ಮಧುಸೂದನನ ಗಾನಕಲೆಯ ಬಗೆಗೆ ಅಭಿಮಾನ ತಳೆದಿದ್ದ ಒಬ್ಬರಿಬ್ಬರು ವಿಮರ್ಶಕರು ಅವನನ್ನು ಕುರಿತು ಪತ್ರಿಕೆಗಳಲ್ಲಿ ಸುದೀರ್ಘ ಲೇಖನ ಬರೆದರು. ಈ ಎಲ್ಲ ಚಟುವಟಿಕೆಗಳಿಗೂ ಪ್ರೇರಕ ಶಕ್ತಿಯಾಗಿ, ಆಧಾರಭೂತವಾಗಿ ವಾಮನರಾಯರು ಹಿಂದೆ ನಿಂತರು.

ಕಚೇರಿಗೆ ಇನ್ನು ಮೂರು ದಿವಸ ಇದೆ ಎನ್ನುವಾಗ ದ್ವಾರಂರವರ ಹಾಗೂ ಹರಿಹರನಾಥ ಶಾಸ್ತ್ರಿಗಳ ಅನುಮೋದನೆ ಬಂದಿತು. ಇಬ್ಬರು ವಿದ್ವಾಂಸರೂ ಮುಂಬಯಿಗೆ ಬಂದು ಮಧುಸೂದನನ ಕಚೇರಿಗೆ ಪಕ್ಕವಾದ್ಯ ನುಡಿಸಲು ಸಂತೋಷದಿಂದ ಒಪ್ಪಿದ್ದರು.

ಭಾರತೀಯ ವಿದ್ಯಾ ಭವನದಲ್ಲಿ ಕಚೇರಿ ನಡೆಸುವುದೆಂದು ಗೊತ್ತಾಗಿತ್ತು. ಮಧುಸೂದನನ ಹಿಂದಿನ ಕಚೇರಿಯ ಯಶಸ್ಸನ್ನರಿತಿದ್ದ ಮುಂಬಯಿಯ ರಸಿಕ ಜನ ಎರಡು ದಿನ ಮುಂಚಿನಿಂದಲೇ ತಮ್ಮ ಸ್ಥಳಗಳನ್ನು ರಿಸರ್ವ್ ಮಾಡಿಸಿ ಕೊಳ್ಳಲಾರಂಭಿಸಿದರು. ಕಚೇರಿಯ ದಿನದ ವೇಳೆಗೆ ಕೊನೆಯ ಒಂದು ತರಗತಿಯ ವಿನಾ ಉಳಿದೆಲ್ಲವೂ ಭರ್ತಿಯಾಗಿ ಹೋಗಿದ್ದವು.

ವಾಮನರಾಯರು ಬಲವಂತಮಾಡಿ ಮಧುಸೂದನನನ್ನು ತಮ್ಮ ಮನೆಯಲ್ಲೇ ನಿಲ್ಲಿಸಿಕೊಂಡುಬಿಟ್ಟಿದ್ದರು. ಅದು ಅವನಿಗೆ ಇಷ್ಟವಿಲ್ಲದಿದ್ದರೂ ವಿಧಿಯಿಲ್ಲದೆ ಅವರ ಒತ್ತಾಯಕ್ಕೆ ಕಟ್ಟು ಬೀಳಬೇಕಾಗಿ ಬಂದಿತು. ಕಚೇರಿಯ ಓಡಾಟಗಳು ಮುಗಿಯುವವರೆಗೂ ಅವನು ಆ ಸ್ಥಳ ಬಿಡಲು ಅವಕಾಶವಿರಲಿಲ್ಲ. ಹಾಗೆ ಬಿಟ್ಟುಹೋಗಿದ್ದರೂ ಜನ ಅವನ ಬೆನ್ನು ಹತ್ತುತ್ತಿದ್ದರು. ಅದನ್ನರಿತೇ ಅವನೂ ಸುಮ್ಮನಾದ.

ಕಚೇರಿಯ ಬೆಳಗ್ಗೆ ರೈಲಿನಲ್ಲಿ ದ್ವಾರಂರವರೂ ಹರಿಹರನಾಥಶಾಸ್ತ್ರಿಗಳೂ ಬಂದಿಳಿದರು. ಆಚಾರ್ಯರೇ ಹೋಗಿ ಅವರನ್ನು ಸ್ವಾಗತಿಸಿದರು. ವಾಮನ ರಾಯರ ಮನೆಯಲ್ಲೇ ಬಿಡಾರದ ಏರ್ಪಾಡಾಯಿತು. ರಾಯರ ಮನೆಯಲ್ಲಿ

ಮಧುಸೂದನನನ್ನು ಕಂಡ ಕೂಡಲೆ ದ್ವಾರಂರವರು ಅವನನ್ನು ವಿಶ್ವಾಸದಿಂದ ಆಲಿಂಗಿಸಿಕೊಂಡರು. ವಿದ್ವಾಂಸರು ಸಂಜೆಯವರೆಗೂ ವಿಶ್ರಾಂತಿ ಪಡೆದರು.

ಸಂಜೆ ಐದಕ್ಕೆ ವಿದ್ವಾಂಸರ ಪರಿವಾರ ರಾಯರ ಮನೆಬಿಟ್ಟು ಹೊರಟಿತು. ಒಂದು ಕಾರಿನಲ್ಲಿ ಮಧುಸೂದನ, ದ್ವಾರಂ, ಹರಿಹರನಾಥಶಾಸ್ತ್ರಿ ಮತ್ತು ಶರ್ಮರು ಕುಳಿತರು. ಇನ್ನೊಂದು ಕಾರಿನಲ್ಲಿ ದ್ವಾರಂರವರ ಒಬ್ಬರಿಬ್ಬರು ಶಿಷ್ಯರು ವಾದ್ಯಗಳೊಡನೆ ಹೊರಟರು. ವಾಮನರಾಯರು, ಅವರ ಹೆಂಡತಿ ಗಂಗೂಬಾಯಿ, ಮಗಳು ಸುಮಾ, ಮತ್ತೊಂದು ಕಾರಿನಲ್ಲಿ ಬಂದರು.

ಭವನದ ಬಳಿ ಜನಸಂದಣಿ ಬೆಳೆದುಹೋಗಿತ್ತು. ಕಣ್ಣು ಓಡುವವರೆಗೂ ಕಾರುಗಳು ಸಾಲುಗಟ್ಟಿ ನಿಂತಿದ್ದವು. ಮಂದಿರ ತುಂಬಿ ಜನರು ಹೊರಗೆಲ್ಲಾ ಕುಳಿತುಬಿಟ್ಟಿದ್ದರು. ಧ್ವನಿವರ್ಧಕ ಹಾಗೂ ಪೋಲೀಸ್ ವ್ಯವಸ್ಥೆ ಇಡೀ ಕಾರ್ಯಕ್ರಮಕ್ಕೆ ರಕ್ಷೆಯಾಗಿದ್ದವು. ವಿದ್ವಾಂಸರ ಆಗಮನಕ್ಕೆ ಜನ ಆತುರವಾಗಿ ಕಾದಿದ್ದರು.

ವಿದ್ವಾಂಸರು ಸಭಾಭವನ ಪ್ರವೇಶಮಾಡಿ ವೇದಿಕೆಯ ಮೇಲಕ್ಕೆ ಬಂದಾಗ ಕಿವಿ ಕಿವುಡಾಗುವಂತೆ ಎರಡು ನಿಮಿಷ ಒಂದೇಸಮನಾಗಿ ಜಯ ಘೋಷವಾಯಿತು. ಮಧುಸೂದನ ಸಾಗರದಂತೆ ತುಂಬಿದ್ದ ಸಭೆಗೆ ಭಕ್ತಿಯಿಂದ ನಮಸ್ಕರಿಸಿ ಕುಳಿತ. ದ್ವಾರಂರವರೂ ಹರಿಹರನಾಥ ಶಾಸ್ತ್ರಿಗಳೂ ಸಭೆಗೆ ಕೈ ಮುಗಿದು ಕುಳಿತು ತಮ್ಮ ವಾದ್ಯಗಳನ್ನು ಶ್ರುತಿ ಮಾಡಿಕೊಳ್ಳಲಾರಂಭಿಸಿದರು.

ಸಭೆ ಮುಂಬಯಿಯ ಗಣ್ಯ ಜನರಿಂದ ತುಂಬಿಹೋಗಿತ್ತು. ಮಂತ್ರಿಗಳು, ಹೈಕೋರ್ಟ್ ಜಡ್ಜಿಗಳು, ಶ್ರೀಮಂತರು, ಉನ್ನತ ಸಿವಿಲ್ ಮತ್ತು ಮಿಲಿಟರಿ ಅಧಿಕಾರಿಗಳು ಮುಂದುಗಡೆಯ ಸ್ಥಳಗಳನ್ನಾಕ್ರಮಿಸಿ ಕುಳಿತಿದ್ದರು. ಸಂಗೀತ ಪ್ರಪಂಚದ ದಿಗ್ದಂತಿಗಳಿಗೇ ಒಂದು ಭಾಗ ಮೀಸಲಾಗಿತ್ತು. ಗಾಯಕ-ವಿದ್ವನ್ಮಣಿಗಳಾದ ಪಂಡಿತ ಓಂಕಾರನಾಥ್, ಪ್ರೊ. ರತ್ನಝುಂಕಾರ್, ಹೀರಾಬಾಯಿ ಬರೋಡಕರ್ ಮುಂತಾದವರು ಒಂದು ಕಡೆ ಮಂಡಿಸಿದ್ದರು. ಪ್ರಸಿದ್ಧ ಮರಾಟೀ ಸಾಹಿತಿ ಮಾಮಾ ವರೇರಕರ್, ಕಲಾವಿಮರ್ಶಕ ಮಿಣಜಿಗಿ ಇನ್ನೊಂದೆಡೆ ಕುಳಿತಿದ್ದರು. ಮುಂಬಯಿಯ ಗವಯಿಗಳನೇಕರು ದಕ್ಷಿಣಾದಿ ಸಂಗೀತ ಕೇಳಲು ಆಸಕ್ತರಾಗಿ ಬಂದಿದ್ದರು. ಅವರ ನಡುವೆ ರೋಷನ್

ಬಾಯಿಯೂ ಕುಳಿತಿದ್ದಳು. ಸಭೆ ಕಾಲೂರಲೂ ಸ್ಥಳವಿಲ್ಲದಂತೆ ತುಂಬಿ ಹೋಗಿತ್ತು.

ಜೋಡಿ ತಂಬೂರಿಯ ಮೃದುಮಧುರ ನಿನಾದ ಸಭಾಂಗಣವನ್ನು ತುಂಬಿತು. ಸಭೆಯಲ್ಲಾಗುತ್ತಿದ್ದ ಗುಸುಗುಸು ಸದ್ದು ಒಂದು ನಿಮಿಷದಲ್ಲಿ ಅಡಗಿಹೋಯಿತು. ಎಲ್ಲರ ಲಕ್ಷ್ಯವನ್ನೂ ತಂಬೂರಿಯ ನಾದ ಸೆಳೆದುಕೊಂಡು ಬಿಟ್ಟಿತು. ಕುತೂಹಲಾವಿಷ್ಟರಾಗಿ ನೋಡುತ್ತ ಕುಳಿತಿದ್ದ ಶ್ರೋತೃವರ್ಗದ ಚಿತ್ತ ಗಾಯಕ ಆರಂಭಿಸಿದ ಕೃತಿಯಲ್ಲಿ ಮುಳುಗಿತು.

"ಚಿದ್ಘನ, ಸ್ವಯಂಪ್ರಕಾಶ ಮೂರ್ತೇ..."

ಅಪರೂಪವಾದ ಸಂಸ್ಕೃತದ ವರ್ಣ. 'ನಾಮ ನಾರಾಯಣಿ' ರಾಗವೆನ್ನುವುದನ್ನು ಅರ್ಥಮಾಡಿಕೊಳ್ಳಲು ವಿದ್ವಜ್ಜನರಿಗೆ ಕಷ್ಟವಾಗಲಿಲ್ಲ. ಆದರೆ ಆ ತಾಳದ ನಡೆ ವಿಚಿತ್ರವಾಗಿತ್ತು. ಅದನ್ನು ಯಾವ ಜಾತಿಗೆ ಸೇರಿಸಬೇಕೆನ್ನುವುದು ಹಲವರಿಗೆ ಬೇಗನೆ ಭಾಸವಾಗಲಿಲ್ಲ. ಅವರ ಕುತೂಹಲ ಸಹಜವಾಗಿಯೇ ಕೆರಳಿ ವರ್ಣದ ಗತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತ ಕುಳಿತರು.

"...ನಾದಚಿಂತ್ಯ, ಸ್ವರಭಾಸುನ ತೈಜಸ"

ಗಾಯಕನ ಉನ್ನತಕಂಠದಿಂದ ವರ್ಣ ಶೋಭಾಯಮಾನವಾಗಿ ನುಡಿಯುತ್ತಿತ್ತು. ಕಠಿನವಾದ ಸಂಕೀರ್ಣ ಜಾತಿಯ ವರ್ಣ ಬನಿಯಾದ ಆ ಶಾರೀರಕ್ಕೆ ಬಾಗಿ ಮಯಣದಂತಾಗಿತ್ತು. ಅನೂಹ್ಯವಾದ ಸ್ವರಕಲ್ಪನೆಯಲ್ಲಿ ರಾಗದ ಜೀವ ಎದ್ದು ಮಿಡಿಯುತ್ತಿತ್ತು. ಅರ್ಥವತ್ತಾದ ಹಾಡಿಕೆ ವರ್ಣ ಸಾಹಿತ್ಯಕ್ಕೆ ರಂಗೇರಿಸಿ ರಸಿಕರ ಮನಸ್ಸಿನಲ್ಲಿ ಭಾವದ ಊಟೆಯನ್ನು ಉಕ್ಕಿಸುತ್ತಿತ್ತು. ಮಧುಸೂದನ ವರ್ಣವನ್ನು ಕಾಲುಘಂಟೆ ಉತ್ಸಾಹದಿಂದ ಹಾಡಿ ಮುಗಿಸಿದಾಗ ಸಭೆಯಲ್ಲಿ ಜಯಧ್ವನಿಯಾಯಿತು. ಉಲ್ಲಾಸಕರವಾದ ವಾತಾವರಣ ಶ್ರೋತೃಜನವನ್ನಾವರಿಸಿತು.

ಅದರ ಹಿಂದೆಯೇ ಒಂದು ಹೊಸ ರಾಗದ ಆಲಾಪನೆ. ವಿಶಿಷ್ಟವಾದ ವಿಳಂಬಶಯ್ಯೆಯಲ್ಲಿ ಆರಂಭವಾದ ರಾಗದ ಜಾಡನ್ನು ದ್ವಾರಂರವರು ತಕ್ಷಣ ಗುರುತಿಸಿದರು. ಅವರ ಮುಖದ ಮೇಲೆ ಹರ್ಷದ ಒಂದು ಅಲೆ ಸುಳಿಯಿತು, ಮಧುಸೂದನನ ಕಡೆ ನೋಡಿ ಅರ್ಥಗರ್ಭಿತವಾಗಿ ನಕ್ಕು ಕಮಾನನ್ನು ತಂತಿಗಳ

ಮೇಲೆ ಹರಿಸಿದರು. ಗಾಯಕನ ಕಂಠ ವಾದ್ಯ ವೈಭವದಲ್ಲಿ ಲೀನವಾಯಿತು. ರಾಗ ಸುಂದರವಾದ ಪಲುಕುಗಳಿಂದ ವಿರಳ ವಿರಳವಾಗಿ ವೃದ್ಧಿಗೊಳ್ಳಲಾರಂಭಿಸಿತು. ಮೋಹಕವಾದ ಒಂದು ಚಿತ್ರ ರಸಿಕಜನರ ಕಣ್ಣ ಮುಂದೆ ಕಟ್ಟತೊಡಗಿತು.

ಸಭೆಯಲ್ಲಿದ್ದ ವಿದ್ವಜ್ಜನರು ಒಬ್ಬರ ಮುಖ ಒಬ್ಬರು ನೋಡಿಕೊಂಡರು. ರಾಗರಹಸ್ಯವನ್ನು ಭೇದಿಸುವ ಕುತೂಹಲ ಅವರಲ್ಲಿ ಸಹಜವಾಗಿಯೇ ಮೂಡಿತು. ಹಲವಾರು ಮೇಳಕರ್ತಗಳಿಗೆ ರಾಗದ ಛಾಯೆಗಳನ್ನು ಒರೆಯಿಟ್ಟು ನೋಡತೊಡಗಿದರು. ಆದರೂ ಬಗೆಹರಿಯಲಿಲ್ಲ. ವಿದ್ವಾಂಸರಲ್ಲಿಯೇ ಗುಸಗುಸ ಚರ್ಚೆಗೆ ಆರಂಭವಾಯಿತು. ಗುಂಪಿನ ಮಧ್ಯೆ ಕುಳಿತಿದ್ದ ಹಿರಿಯ ವಿದ್ವಾಂಸರೊಬ್ಬರು ಸಮಸ್ಯೆಗೆ ಸಿಕ್ಕಿದ್ದವರ ಕಡೆ ತಿರುಗಿ,

"ಅವರದೇ ಹೊಸ ರಾಗ. ಚಿತ್ರಮಯೂರಿ ಇರಬಹುದು"

ಎಂದರು. ಸಭೆ ನಿಶ್ಶಬ್ದವಾಗಿ ಕುಳಿತು ಆಲಿಸತೊಡಗಿತು.

ಮಳೆ ಬಿದ್ದು ಪ್ರಕೃತಿ ನಕ್ಕ ಭೂಮಿಯಲ್ಲಿ ಹರ್ಷದಿಂದ ಗರಿಗೆದರಿ ಆಡುವ ನವಿಲಿನಂತೆ ನಿದಾನವಾಗಿ ವೈ ಬಿಚ್ಚಿದ ರಾಗದಲ್ಲಿ ರಸಿಕಜನ ಹಲವು ಹತ್ತು ಕಣ್ಣಿನ ಹೊಳಹನ್ನು ಕಂಡು ಪುಲಕಿತರಾದರು. ಹೆಜ್ಜೆ ಹೆಜ್ಜೆಗೂ ಮಯೂರ ನೃತ್ಯದ ಗತಿಯನ್ನು ಬಿಡಿಸುತ್ತಿದ್ದ ಗಾಯಕನ ಕಲ್ಪನಾ ವಿಲಾಸ ವಿಳಂಬದಿಂದ ದ್ರುತಕ್ಕೆ ಹೊರಳಿ ಊಹೆಗೆ ಮೀರಿದ ನಯದಲ್ಲಿ ಸ್ವರಸಂಚಾರ ಮಾಡಿದಾಗ ಸಭೆ ಅಪೂರ್ವವಾದ ಆ ಸ್ವರಸುಖದಲ್ಲಿ ಸೊಕ್ಕಿತು. ರಾಗ ಷಡ್ಜದಲ್ಲಿ ವಿರಮಿಸಿದ ಸನ್ನಿವೇಶವಂತೂ ಶ್ರೋತೃವರ್ಗವನ್ನು ಹರ್ಷೋದ್ಗಾರದಲ್ಲಿ ಮುಳುಗಿಸಿಬಿಟ್ಟಿತು. ಮಧುಸೂದನ ರಾಗ ಮುಗಿಸಿ, ಕೃತಿ ಹಾಡಿ ನಿಲ್ಲಿಸಿದಾಗ ಐದು ನಿಮಿಷ ಪ್ರಚಂಡ ಕರತಾಡನವಾಯಿತು.

ಆ ಸಮ್ಮೋಹನದಿಂದ ಚೇತರಿಸಿಕೊಳ್ಳಲು ಸಭೆಗೆ ಒಂದೆರಡು ನಿಮಿಷ ಬೇಕಾಯಿತು. ಅನೇಕರು ತಾವೆಲ್ಲಿದ್ದೇವೆನ್ನುವುದನ್ನೇ ಮರೆತುಬಿಟ್ಟಿದ್ದರು. ರೋಷನ್ ಕಡೆದ ಗೊಂಬೆಯಂತೆ ಕುಳಿತಿದ್ದಳು. ಅವಳ ಮನಸ್ಸಿನಲ್ಲಿ ವಿವಿಧ ಭಾವಗಳ ತರಂಗಗಳೇಳುತ್ತಿದ್ದವು. ವಾಮನರಾಯರಂತೂ ಹರ್ಷದ ಬುಗ್ಗೆಯಾಗಿಬಿಟ್ಟಿದ್ದರು. ಸುಮಾ ಮಧುಸೂದನನ ಮೇಲೆ ನೆಲಸಿದ್ದ ತನ್ನ ದೃಷ್ಟಿಯನ್ನು ಕಿತ್ತುಕೊಳ್ಳಲಾರದಾದಳು. ಅವಳ ಅಂತರಂಗದಲ್ಲಿ ಹೊಸ ಭಾವನೆ

ಯೊಂದು ಅಂಕುರವಾಗಿ ಲಜ್ಜೆ ಅವಳನ್ನಾವರಿಸಿತು. ಮುಖದ ಮೇಲೆ ಬೆವರು ಹನಿಗಳು ಮೂಡಿದವು.

ಮಧುಸೂದನ ತ್ಯಾಗರಾಜರ ಎರಡು ಮೂರು ಕೃತಿಗಳನ್ನು ಹಾಡಿದ. ಬಳಿಕ ಒಂದೆರಡು ದೇವರ ನಾಮುಗಳನ್ನು ಹಾಡಿದ. ಕನ್ನಡದ ಕೃತಿಗಳು ವಾಮನರಾಯರಿಗೆ ತುಂಬ ಮೆಚ್ಚಿಕೆಯಾದವು. ಅವುಗಳ ಮುಗಿತಾಯದಲ್ಲಿ ಅವರು ಎದ್ದು ನಿಂತು ಚಪ್ಪಾಳೆ ತಟ್ಟದರು. ಕನ್ನಡ ಶ್ರೋತೃವರ್ಗ ಉತ್ಸಾಹ ದಿಂದ ಅವರನ್ನು ಅನುಕರಿಸಿತು.

ವಿದ್ವಾನ್ ರಾಮಶರ್ಮರು ವೇದಿಕೆ ಹತ್ತಿ ಬಂದು ಮಧುಸೂದನನ ಕಿವಿ ಯಲ್ಲಿ ಏನೋ ಪಿಸುಗುಟ್ಟದರು. ಅವನು ನಸುನಕ್ಕು 'ಗೀತಗೋವಿಂದ'ದ ಒಂದು ಶ್ಲೋಕವನ್ನು ರಾಗಮಾಲಿಕೆಯಾಗಿ ಹಾಡಲು ಎತ್ತಿಕೊಂಡ.

"ಭ್ರೂಚಾಪೇ ನಿಹಿತಃ ಕಟಾಕ್ಷ ವಿಶಿಖೋ..."

ಶೃಂಗಾರ ರಸಭರಿತವಾದ ಗೀತಿಕೆ ನಾಲ್ಕು ರಾಗಗಳಲ್ಲಿ ಮನೋಜ್ಞವಾಗಿ ಮೂಡಿತು. ಮಧುಸೂದನ ಭಾವಪೂರ್ಣವಾಗಿ ರಾಗಗಳನ್ನು ವಿಸ್ತರಿಸುತ್ತಿದ್ದ ರೀತಿ ಅರಿತ ಜನಕ್ಕೆ ತುಂಬ ಮೆಚ್ಚಿಕೆಯಾಯಿತು. ಅವನು ಒಂದು ರಾಗದಿಂದ ಇನ್ನೊಂದಕ್ಕೆ ಜಾರಿದ ಬಗೆಯಲ್ಲಿ ವಿದ್ವಜ್ಜನರು ಸಿದ್ಧಕಲಾವಿದನ ಕೌಶಲವನ್ನು ಕಂಡು ಬೆರಗಾದರು. ಹಿಂದೂಸ್ತಾನೀ ಗಾನರಸಿಕರಿಗೆ ದೇಶ್, ಮಾಲಕಂಸ್, ಭೂಪ್, ದುರ್ಗಾಗಗಳಲ್ಲಿನ ಆ ಸಂಚಾರಕ್ರಮ ಆಹ್ಲಾದವನ್ನುಂಟುಮಾಡಿತು.

ಚೀಟಿಗಳ ಮೇಲೆ ಚೀಟಿಗಳು ಬರುತ್ತಲೇ ಇದ್ದವು. ರಸಿಕರು ಒಂದಾದ ಮೇಲೊಂದರಂತೆ ಕೃತಿಗಳನ್ನು ಅಪೇಕ್ಷಿಸುತ್ತಲೇ ಇದ್ದರು. ಅವುಗಳನ್ನೆಲ್ಲಾ ಹಾಡಬೇಕಾದರೆ ಇನ್ನೊಂದು ಕಚೇರಿಯನ್ನೇ ಏರ್ಪಡಿಸಬೇಕಾಗಿತ್ತು. ಮಧು ಸೂದನ ಬೇಡಿಕೆಯನ್ನು ಪೂರ್ತಿ ತಿರಸ್ಕರಿಸಲೂ ಆರದೆ ಜನತೃಪ್ತಿಗಾಗಿ ಒಂದೆ ರಡು ಚೀಸು ತುಮ್ರಿಗಳನ್ನು ಹಾಡಿದ. ಮುಂಬಯಿಯ ರಸಿಕರು ಅವನ್ನು ತುಂಬು ಮನಸ್ಸಿನಿಂದ ಮೆಚ್ಚಿಕೊಂಡರು. ಮಂಗಳ ಹಾಡಿ ಕಚೇರಿ ಮುಗಿಸುವ ಹೊತ್ತಿಗೆ ರಾತ್ರಿ ಒಂಬತ್ತೂವರೆಯಾಗಿತ್ತು.

ಶರ್ಮರು ಪುಟ್ಟ ಭಾಷಣಮಾಡಿ ಆಭಾರ ಮನ್ನಿಸಿ ಮುಗಿಸುವ ಹೊತ್ತಿಗೆ ಜನ ವೇದಿಕೆಯ ಸುತ್ತ ಮುತ್ತಿಕೊಂಡುಬಿಟ್ಟರು. ಎಲ್ಲರಿಗೂ ಮೈಸೂರು ವಿದ್ವಾಂಸರನ್ನು ಹತ್ತಿರದಿಂದ ನೋಡಿ ಒಂದೆರಡು ಮಾತಾಡಬೇಕೆಂದು ಕುತೂ

ಹಲ. ಈ ನೂಕುನುಗ್ಗಲಿನಲ್ಲಿ ಪತ್ರಿಕಾ ಪ್ರತಿನಿಧಿಗಳಿಗೇ ಅವಕಾಶ ಸಿಕ್ಕದೆ ಅವರು ಹಿಂದೆ ನಿಲ್ಲಬೇಕಾಯಿತು. ವಾಮನರಾಯರು ವೇದಿಕೆ ಹತ್ತಿ ಬಂದು ಮೂವರು ವಿದ್ವಾಂಸರಿಗೂ ಹಾರ ಹಾಕಿ ಯಥೋಚಿತ ಸಂಭಾವನೆ ಸಲ್ಲಿಸಿದರು. ಪಂಡಿತ ಓಂಕಾರನಾಥರೂ ಪ್ರೊ. ರತ್ನಝುಂಕಾರರೂ ವೇದಿಕೆಯ ಹತ್ತಿರ ಬಂದು ಮಧುಸೂದನನನ್ನು ಮನಸಾ ಅಭಿನಂದಿಸಿ ತಮ್ಮ ಪ್ರೀತ್ಯಾದರಗಳನ್ನು ವ್ಯಕ್ತ ಪಡಿಸಿದರು. ವೇದಿಕೆಯ ಒಂದು ಕಡೆ ನಿಂತು ಈ ಗೌರವಾರ್ಪಣೆಯನ್ನು ನೋಡುತ್ತಿದ್ದ ಸುಮಾಬಾಯಿಯ ಕಣ್ಣು ಅಭಿಮಾನದಿಂದ ಹೊಳಪೇರಿತು.

ಸಂತೃಪ್ತ ಜನಸಮೂಹ ನಿದಾನವಾಗಿ ಸಭೆಯಿಂದ ಕರಗತೊಡಗಿತು. ರೋಷನ್ ಸಭೆ ಬಿಟ್ಟು ಹೋಗಲು ಉದ್ದೇಶಪೂರ್ವಕವಾಗಿಯೇ ಒಂದೆರಡು ನಿಮಿಷ ತಡಮಾಡಿದಳು. ಮಧುಸೂದನನನ್ನು ಕಂಡು ಒಂದೆರಡು ಮಾತನ್ನಾದರೂ ಆಡಿ ಹೋಗಬೇಕೆಂದು ಅವಳಿಗೆ ಅಪೇಕ್ಷೆಯಿತ್ತು. ಆದರೆ ರಸಿಕರು ಕಟ್ಟಿದ್ದ ಗುಂಪಿನ ಕೋಟೆಯ ಹಿಂದೆ ಮರೆಯಾದ ಮಧುಸೂದನ ಮತ್ತೆ ಅವಳ ಕಣ್ಣಿಗೆ ಬೀಳಲೇ ಇಲ್ಲ. ಅವಳ ಅಂತರಂಗ ಕ್ಷೋಭೆಗೀಡಾಯಿತು. ಉಕ್ಕುತ್ತಿದ್ದ ದುಗುಡದಿಂದ ಅಲ್ಲಿ ನಿಲ್ಲಲಾರದೆ ಹೊರಟುಹೋದಳು.

ವಾಮನರಾಯರು ಮಧುಸೂದನನನ್ನು ಕಾರಿನಲ್ಲಿ ಕೂಡಿಸಿಕೊಂಡು ತಮ್ಮ ಮನೆಗೆ ಕರೆದೊಯ್ದರು.

೧೦

ಲಲಿತ ಸುಂದರನನ್ನು ತಿರಸ್ಕರಿಸಿದ ಬಗೆ ನೋಡಿ ನಟರಾಜ ಅಯ್ಯರರಿಗೆ ಅಸಮಾಧಾನವಾಗಿತ್ತು. ಅತಿಥಿ ಅಭ್ಯಾಗತರ ಬಗೆಗೆ ಅವರು ನಡೆದುಕೊಳ್ಳುತ್ತಿದ್ದ ರೀತಿ ಅವರ ಸುಶಿಕ್ಷಿತ ಸ್ವಭಾವಕ್ಕೆ ನಿದರ್ಶನವಾಗಿತ್ತು. ಸಂದರ್ಭವೇನೇ ಇರಲಿ, ಮನೆಯ ತನಕ ಬಂದವರನ್ನು ಅಪಮಾನಮಾಡಿ ಕಳಿಸುವುದೆನ್ನುವುದು ಅವರ ಜಾಯಮಾನದಲ್ಲೇ ಬಂದಿರಲಿಲ್ಲ. ಸಂಪ್ರದಾಯ ಶಿಷ್ಟಾಚಾರಗಳಲ್ಲಿ ಇತರರಿಗೆ ಮೇಲ್ಪಂಕ್ತಿ ಹಾಕುವಂತಿದ್ದ ಅಯ್ಯರರು ತಮ್ಮ ಕಡೆಯಿಂದಲೇ ಇಂಥ ಅಪಚಾರ ನಡೆಯಿತಲ್ಲಾ ಎಂದು ಪರಿತಾಪಪಟ್ಟರು.

ಅವರ ಅಸಮಾಧಾನಕ್ಕೆ ನರಸಿಂಹನ್ ಕೊಟ್ಟ ಸುದ್ದಿಯೂ ಕಾರಣವಾಗಿತ್ತು. ಲಲಿತ ತನ್ನಲ್ಲಿ ನಡೆದುಕೊಂಡಿದ್ದ ರೀತಿಯಿಂದ ಕೋಪಗೊಂಡಿದ್ದ ಸುಂದರ ಅವಳೊಡನೆ ತಾನು ನಡೆಸಿದ ಮಾತುಕಥೆಗಳನ್ನೂ ಅವಳು ಕೊಟ್ಟ ಉತ್ತರಗಳನ್ನೂ ಬಣ್ಣ ಹಚ್ಚಿ ಚಿಕ್ಕಪ್ಪನಿಗೆ ಹೇಳಿದ್ದ. ನರಸಿಂಹನ್ ಅದಕ್ಕೆ ಕೈಕಾಲು ಹುಟ್ಟಸಿ ಅಯ್ಯರರ ಕಿವಿಯ ಮೇಲೆ ಹಾಕಿದ್ದರು. ಸುಂದರನನ್ನು ಒಪ್ಪಿಕೊಳ್ಳದಿರುವುದರ ಜೊತೆಗೆ ಅವನನ್ನು ಅಪಮಾನಮಾಡಿ ಕಳಿಸುವುದೂ ಲಲಿತನ ಉದ್ದೇಶವಾಗಿತ್ತೆಂದು ಅರ್ಥ ಬರುವ ಹಾಗೆ ನರಸಿಂಹನ್ ಮಾತಾಡಿದ್ದರು. ಅದನ್ನು ಕೇಳಿ ಅಯ್ಯರರು ಜುಗುಪ್ಸಿತರಾದರು. ಮನೆಗೆ ಬಂದೊಡನೆಯೇ ಅವರು ಹೆಂಡತಿಯನ್ನೂ ಮಗಳನ್ನೂ ಒಟ್ಟಗೆ ತರಾಟೆಗೆ ತೆಗೆದುಕೊಂಡರು.

" ಇದೇ ಏನು ನೀನು ಅವಳಿಗೆ ಹೇಳಿಕೊಟ್ಟಿರುವ ಪಾಠ ?"

ಎಂದು ಹೆಂಡತಿಯನ್ನು ಮುರದುರನೆ ನೋಡುತ್ತ ಕೇಳಿದರು.

" ನನ್ನನ್ನೇಕೆ ನೀವು ಸುಮ್ಮನೆ ಅನ್ನುತ್ತೀರಿ ?"

"ಇನ್ನು ಯಾರನ್ನು ಅನ್ನಬೇಕು? ನೀನು ವಹಿಸಿಕೊಂಡು ಬಂದು ಬಂದೇ ಅವಳು ಹೀಗಾದದ್ದು."

"ನಾನವಳಿಗೆ ಬೇಡ ಅಂತ ಅನ್ನು ಎಂದು ಹೇಳಿಕೊಟ್ಟೆನೆ?"

"ಬೇಡ ಅನ್ನುವುದರಲ್ಲಿಯೂ ರೀತಿ ನೀತಿ ಬೇಡವೆ? ಮನೆಗೆ ಬಂದವರನ್ನು ಹೀಗೆ ಅಪಮಾನಮಾಡಿ ಕಳಿಸಬೇಕೆ?"

"ಅಪಮಾನ ಮಾಡಿದವರು ಯಾರು?"

"ನಿನ್ನ ಮಗಳನ್ನೇ ಕೇಳು."

"ನೀವೇ ಕೇಳಿ. ಏಕೆ, ನೀವು ಅವಳ ಹತ್ತಿರ ಮಾತಾಡುವುದಿಲ್ಲವೇನು?"

"ನನಗವಳ ಹತ್ತಿರ ಮಾತು ಬೇಕಾಗಿಲ್ಲ."

"ಅದಕ್ಕೆ ನನ್ನನ್ನು ಅನ್ನುತ್ತೀರೇನೋ. ಏನು ನಡೆಯಿತು ಅನ್ನುವುದನ್ನು ವಿಚಾರಿಸದೆ ಸುಮ್ಮನೆ ರೇಗುವುದೊಂದೇ ನಿಮಗೆ ಗೊತ್ತಿರುವುದು."

"ನಾನು ಸುಮ್ಮನೆ ರೇಗುತ್ತಿದ್ದೇನೆಯೆ? ನರಸಿಂಹನ್ ಏನು ಹೇಳಿದರು ಗೊತ್ತೇನು?"

"ಏನು ಹೇಳಿದರು?"

"ಮದುವೆ ಮಾಡಿಕೊಳ್ಳುವರು ನಮ್ಮ ತಂದೆ ತಾಯಿಗಳಲ್ಲ ಅಂದಳಂತೆ. ನಮಗಷ್ಟು ಮರ್ಯಾದೆ ಸಾಲದೇ?"

ಆ ಮಾತು ಕಠಿನವಾಗಿಯೇ ಇತ್ತು. ಮೀನಾಕ್ಷಮ್ಮನವರು ಅದಕ್ಕೆ ಉತ್ತರ ಕೊಡಲಾರದೆ ಒಂದು ಕ್ಷಣ ಸುಮ್ಮನಿದ್ದರು. ಮಗಳು ದುಡುಕಿದ್ದಳೆನ್ನುವುದನ್ನು ಅವರ ಮನಸ್ಸೂ ಗ್ರಹಿಸಿತು. ಆದರೆ ಅವರು ಅಷ್ಟಕ್ಕೇ ಅವಳನ್ನು ಬಿಟ್ಟುಕೊಡಲು ಸಿದ್ಧರಾಗಿರಲಿಲ್ಲ.

"ಅವರು ನೂರು ಹೇಳುತ್ತಾರೆ. ಅದನ್ನೆಲ್ಲಾ ನಂಬುವುದಕ್ಕಾಗುತ್ತದೆಯೆ?"

"ಹಾಗಾದರೆ ಅವರು ಸುಳ್ಳು ಹೇಳುತ್ತಾರೆ ಅನ್ನು. ನಮ್ಮ ಮೇಲೆ ಅವರಿಗೆ ಹೊಟ್ಟೆಕಿಚ್ಚೆ?

ಮೀನಾಕ್ಷಮ್ಮನವರು ಏನೋ ಉತ್ತರ ಕೊಡುವುದಕ್ಕೆ ಹೋಗಿದ್ದವರು ಸ್ವಾಮಿನಾಥನ್ ಬಂದುದನ್ನು ಕಂಡು ಮಾತು ನಿಲ್ಲಿಸಿ ಒಳಗೆ ಎದ್ದುಹೋದರು.

ಗಂಡಹೆಂಡತಿಯರಿಗೆ ಏನೋ ಬಿಸಿಯಾಗಿ ಚರ್ಚೆ ನಡೆಯುತ್ತಿದೆಯೆನ್ನುವುದನ್ನು ಗಮನಿಸಿದ ಸ್ವಾಮಿನಾಥನ್ ವರಾಂಡದಲ್ಲಿಯೇ ನಿಂತುಕೊಂಡರು.

"ಬನ್ನಿ ಸ್ವಾಮಿನಾಥನ್, ಕುಳಿತುಕೊಳ್ಳಿ"

ಎಂದು ಸಿಡುಕಿನ ಧ್ವನಿಯಲ್ಲಿಯೇ ಅಯ್ಯರರು ನುಡಿದು ಎದ್ದು ಬಂದರು. ಮುಖದ ಮೇಲಿದ್ದ ಕೋಪ ಪರಿಷ್ಕಾರವಾಗಿ ಕಾಣುತ್ತಿತ್ತು. ಲಲಿತ ಸುಂದರನನ್ನು ಒಪ್ಪಿಕೊಳ್ಳಲಿಲ್ಲವೆನ್ನುವ ಸಂಗತಿ ಸ್ವಾಮಿನಾಥನ್ನರಿಗೆ ಮೊದಲೇ ಸೂಕ್ಷ್ಮವಾಗಿ ತಿಳಿದಿತ್ತು. ಆದರೆ ಸುಂದರನಿಗೆ ಅಪಮಾನವಾಯಿತೆನ್ನುವ ವಿಚಾರ ಅವರ ಕಿವಿಗೆ ಬಿದ್ದಿರಲಿಲ್ಲ. ಅದನ್ನು ನರಸಿಂಹನ್ ಉದ್ದೇಶಪೂರ್ವಕವಾಗಿ ಅಯ್ಯರರೊಬ್ಬರಿಗೇ ಹೇಳಿದ್ದರು.

"ನಾನು ಅಕಾಲದಲ್ಲಿ ಬಂದ ಹಾಗಿದೆ"

ಎಂದು ಸ್ವಾಮಿನಾಥನ್ ಇಲ್ಲದ ನಗೆಯನ್ನು ಮುಖದಲ್ಲಿ ತಂದುಕೊಳ್ಳುತ್ತ ನಿಂತುಕೊಂಡೇ ಹೇಳಿದರು.

"ಏನೂ ಇಲ್ಲ, ಕುಳಿತುಕೊಳ್ಳಿ. ನಿಮಗೆ ಅಕಾಲವೆ?"

"ಹಾಗಲ್ಲ... ಮನೆಯಲ್ಲಿ ಏಕಾಂತವಾಗಿ ಮಾತಾಡುತ್ತಿರುವಾಗ...."

"ಸರಿ, ಸರಿ. ನೀವು ಕಾಣದ ನನ್ನ ಏಕಾಂತ ಯಾವುದಿದೆ, ಹೇಳಿ?"

ಎಂದು ಅಯ್ಯರರು ನಿಸ್ಸಾರವಾಗಿ ನಕ್ಕು ಕುಳಿತುಕೊಂಡರು. ಸ್ವಾಮಿನಾಥನ್ ಅವರ ಪಕ್ಕದಲ್ಲಿ ಮಂಡಿಸಿದರು. ಇಬ್ಬರೂ ಒಂದು ಗಳಿಗೆ ಮೌನವಾಗಿದ್ದರು. ಚರ್ಚೆಯ ಸಂಗತಿ ಏನೆಂದು ತಿಳಿದುಕೊಳ್ಳುವ ಕುತೂಹಲ ಸ್ವಾಮಿನಾಥನ್ನರಿಗಿತ್ತು. ಆದರೆ ಅವರು ನೇರವಾಗಿ ಕೇಳದೆ ಬಳಸಿಕೊಂಡು ಪ್ರಶ್ನೆ ಹಾಕಿದರು.

"ಲಲಿತ ಏನೆನ್ನುತ್ತಾಳೆ?"

ಆ ಪ್ರಶ್ನೆಗೆ ಏನು ಉತ್ತರ ಕೊಡಬೇಕೆಂದು ಅಯ್ಯರರ ಮನಸ್ಸು ಒಂದು ಕ್ಷಣ ಯೋಚಿಸಿತು. ಸ್ವಾಮಿನಾಥನ್ ಆಪ್ತ ಮಿತ್ರರಾದರೂ ಲಲಿತನ ಕೈಯಲ್ಲಿ ಸುಂದರನಿಗೆ ಅಪಮಾನವಾದ ಸಂಗತಿಯನ್ನು ತಿಳಿಸಲು ಅಯ್ಯರರು ಸಂಕೋಚಪಟ್ಟುಕೊಂಡರು. ಮಾತನ್ನು ತೇಲಿಸುತ್ತ,

"ಅನ್ನುವುದೇನು, ಅವಳಿಗೆ ಮದುವೆ ಬೇಡವಾಗಿದೆ"

“ನಾಲ್ಕು ದಿವಸ ಹಾಗೂ ಇರಲಿ ಬಿಡಿ. ನೀವೂ ಏಕೆ ಬಲವಂತ ಮಾಡುತ್ತೀರಿ?”

“ನೀವೇ ಹೀಗೆ ಮಾತಾಡುತ್ತೀರಲ್ಲಾ. ಸ್ವಾಮಿನಾಥನ್, ಅವಳಿಗೇನು ವಯಸ್ಸು ಕಡಮೆಯಾಗಿದೆಯೆಂದು ತಿಳಿದುಕೊಂಡಿರಾ?”

“ನಾನು ಇಲ್ಲವೆನ್ನುತ್ತೇನೆಯೆ? ಅವಳಿಗೇನೋ ಬೇಸರವಾಗಿದೆ. ಸ್ವಲ್ಪ ದಿನ ನೀವೂ ಸುಮ್ಮನಿರಿ. ಕೊಂಚ ನಿದಾನಿಸಿದರೆ ತಪ್ಪೇನು?”

“ಕೊನೆಗೂ ನಾನೇ ಸೋಲುವ ಹಾಗೆ ಮಾಡುತ್ತೀರಿ?”

“ಸೋಲುವರೇ ಗೆಲ್ಲುವರೆನ್ನುವುದನ್ನು ನಿಮಗೆ ನಾನು ಹೇಳಬೇಕೆ?”

ಎಂದು ಸ್ವಾಮಿನಾಥನ್ ನಗುತ್ತ ಉತ್ತರವಿತ್ತರು. ಪಕ್ಕದ ರೂಮಿನಲ್ಲೇ ಇದ್ದ ಲಲಿತನಿಗೆ ಅವರ ಒಂದೊಂದು ಮಾತು ಕಿವಿಗೆ ಬೀಳುತ್ತಿತ್ತು. ತನ್ನ ವಿಷಯ ಸ್ವಾಮಿನಾಥನ್ನರವರೆಗೂ ಹೋದುದನ್ನರಿತು ಅವಳ ಜೀವ ಹಿಡಿಯಾಯಿತು. ಖಿನ್ನವಾದ ಮನಸ್ಸಿನಿಂದ ಹಾಸಿಗೆಯ ಮೇಲೆ ಹೋಗಿ ಬಿದ್ದುಕೊಂಡಳು.

ಸುಂದರನನ್ನು ತಿರಸ್ಕರಿಸಿದ ಅವಳ ಮನಸ್ಸಿಗೂ ನೆಮ್ಮದಿಯಿರಲಿಲ್ಲ. ಅವನು ಅವಳಿಗೆ ತೀರ ಅಪರಿಚಿತ. ಇದಕ್ಕೆ ಮುನ್ನ ಅವಳು ಅವನ ಮುಖವನ್ನೇ ನೋಡಿರಲಿಲ್ಲ. ಶಿವಸ್ವಾಮಿ ಇದ್ದಾಗ ಅವನ ವಿಷಯ ಏನು ಹೇಳಿದ್ದನೋ ಏನು ಬಿಟ್ಟಿದ್ದನೋ ಅವಳಿಗೆ ನೆನಪಿರಲಿಲ್ಲ. ತಂದೆಯ ಬಾಯಲ್ಲಿ ಅವನ ವಿಚಾರ ಕೇಳಿದಾಗಲೇ ಅವನು ಇಂಥವನೆಂದು ಅವಳಿಗೆ ಗೊತ್ತಾದದ್ದು. ಅವನ ಮೇಲೆ ಅವಳಿಗೆ ದ್ವೇಷಕ್ಕೆ ಯಾವ ಕಾರಣವೂ ಇರಲಿಲ್ಲ.

ಅವನೂ ಅಂಥ ತೆಗೆದು ಹಾಕುವ ಮನುಷ್ಯನಾಗಿರಲಿಲ್ಲ. ಹಾಗೆ ನೋಡುವುದಕ್ಕೆ ಹೋದರೆ ಅವನಿಗೂ ತಕ್ಕಮಟ್ಟಿನ ರೂಪವಿತ್ತು, ಕುಲವಿತ್ತು, ವಿದ್ಯೆಯಿತ್ತು, ಉತ್ತಮ ಭವಿಷ್ಯವಿತ್ತು. ಯಾವ ದೃಷ್ಟಿಯಿಂದಲೂ ಅವನು ವಿವಾಹಕ್ಕೆ ಅಯೋಗ್ಯನಾಗಿರಲಿಲ್ಲ. ಯಾವ ಹೆಣ್ಣಾದರೂ ಅವನ ಕೈಹಿಡಿದು ಸುಖವಾಗಿ ಬಾಳಬಹುದಾಗಿತ್ತು. ಆ ವಿಷಯದಲ್ಲಿ ಲಲಿತನಿಗೆ ಸಂಶಯವಿರಲಿಲ್ಲ. ಅವಳ ಜೀವನದಲ್ಲಿ ಮಧುಸೂದನ ಪ್ರವೇಶಿಸದಿದ್ದರೆ ಅವಳು ಸುಂದರನನ್ನೇ

ಒಪ್ಪಿಕೊಳ್ಳುತ್ತಿದ್ದಳೇನೋ. ಆದರೆ ಈಗ ಅವಳಿಗೆ ಅದು ಬೇಡವಾಗಿತ್ತು. ಅವಳ ನಿರಾಕರಣೆ ತಂದೆ ತಾಯಿಗಳಿಗೆ ಅಸಂತೋಷವನ್ನುಂಟುಮಾಡಿತ್ತು.

ಸುಂದರನ ಮನಸ್ಸನ್ನು ನೋಯಿಸಬೇಕೆಂದಾಗಲಿ ತಂದೆ ತಾಯಿಗಳಿಗೆ ಅಗೌರವವನ್ನುಂಟುಮಾಡಬೇಕೆಂದಾಗಲಿ ಲಲಿತ ಇಚ್ಛಿಸಿರಲಿಲ್ಲ. ತನ್ನ ಉತ್ತರದಿಂದ ಅವನಿಗೆ ನಿರಾಶೆಯಾಗುವುದೆಂದು ಅವಳಿಗೂ ಗೊತ್ತಿತ್ತು. ಆದರೆ ಕೋಪ ಬರುವುದೆಂದು ತಿಳಿದಿರಲಿಲ್ಲ. ಅವಳು ಜುಗುಪ್ಸೆಯಿಂದ ಒಂದೆರಡು ಮಾತನ್ನು ಹೆಚ್ಚಾಗಿಯೂ ಆಡಿದ್ದಳು. ಅದಕ್ಕೆ ಅವನ ಪ್ರಶ್ನೆಗಳೇ ಕಾರಣ. ತನ್ನ ಮನಸ್ಸಿಗೆ ಬೇಡವಾದ ಒಂದು ಸನ್ನಿವೇಶದಲ್ಲಿ ಅವಳು ಹೇಗೆ ನಡೆದು ಕೊಳ್ಳಬೇಕೋ ಹಾಗೆ ನಡೆದುಕೊಂಡಿದ್ದಳು. ಅದರಿಂದ ಯಾರಿಗಾದರೂ ಅಸಮಾಧಾನವಾಗಿದ್ದರೆ ಅದಕ್ಕೆ ಅವಳು ಕಾರಣವಾಗಿರಲಿಲ್ಲ. ಆದರೆ ಆ ಹೊಣೆಯೆಲ್ಲಾ ಈಗ ಅವಳ ಮೇಲೆಯೇ ಬಿದ್ದಿರುವ ಹಾಗೆ ಎಲ್ಲರೂ ಮಾತಾಡುತ್ತಿದ್ದರು. ತಂದೆಗಂತೂ ಅವಳ ಮೇಲೆ ತುಂಬ ಕೋಪ ಬಂದಿತ್ತು. ಅವರ ಆಗ್ರಹ ಅವಳನ್ನು ಅಧೀರಳನ್ನಾಗಿ ಮಾಡಿತ್ತು.

ಲಲಿತನ ಮನಸ್ಸು ಯೋಚನೆಯಲ್ಲಿ ತಳಮಳಗೊಂಡಿತು. ತಾನು ಯಾರಿಗೂ ಬೇಡವಾದ ವಸ್ತುವಾದೆನೇ ಎಂದು ಅವಳಿಗನ್ನಿಸಿತು. ಗೊಂಡಾರಣ್ಯದಲ್ಲಿ ಒಂಟಿಯಾದ ಹಸುಳೆಯಂತೆ ಸ್ನೇಹದೂರವಾದ ವಾತಾವರಣದಲ್ಲಿ ಸಿಕ್ಕಿ ಅವಳು ಅಸುಖಿಯಾದಳು. ಆಪ್ತಜೀವನದ ಸಾಂತ್ವನಕ್ಕೆ ಅವಳ ಎದೆ ಹಾತೊರೆಯಿತು.

ಸಹಜವಾಗಿಯೇ ಅವಳಿಗೆ ಕನಕಾಂಗಿಯ ನೆನಪಾಯಿತು. ಆ ನೆನಪಿನಿಂದ ಅವಳ ಅಂತಃಕರಣ ಆರ್ದ್ರವಾಯಿತು.

ಶಿವಸ್ವಾಮಿಯ ಮದುವೆಯಾದ ಮೇಲೆ ಕನಕಾಂಗಿ ಒಂದೇ ಒಂದು ಸಲ ಮದರಾಸಿಗೆ ಬಂದಿದ್ದಳು. ಅವಳಿದ್ದುದು ನಾಲ್ಕೇ ದಿನವಾದರೂ ಆ ನಾಲ್ಕು ದಿನದಲ್ಲಿ ಲಲಿತ ಅವಳ ಸ್ವಭಾವವನ್ನು ಚೆನ್ನಾಗಿ ಗ್ರಹಿಸಿದ್ದಳು. ಕನಕಾಂಗಿ ಅತ್ತೆಯ ಮನೆಗೆ ಬಂದ ಸೊಸೆಯ ಹಾಗಿರಲಿಲ್ಲ; ತಾಯಿಯ ಮನೆಗೆ ಬಂದ ಮಗಳಂತಿದ್ದಳು. ಕಪಟವಿಲ್ಲದ ಅವಳ ಮನಸ್ಸು ಲಲಿತನನ್ನು ಆಕರ್ಷಿಸಿತು. ಸಮವಯಸ್ಸಿನ ಅತ್ತಿಗೆಯಲ್ಲಿ ಅವಳು ತನ್ನ ಜೀವದ ಗೆಳತಿಯನ್ನು ಕಂಡಳು. ನಾಲ್ಕೇ ದಿನದಲ್ಲಿ ಇಬ್ಬರ ಮನಸ್ಸೂ ಹಾಲು ಸಕ್ಕರೆಯ ಹಾಗೆ ಹೊಂದಿಕೊಂಡಿತು.

ಕನಕಾಂಗಿ ಊರಿಗೆ ಹೊರಟು ಹೋದ ದಿನ ಲಲಿತನಿಗೆ ಎಲ್ಲೂ ನಿಲ್ಲುವುದಕ್ಕೆ ಆಗಲಿಲ್ಲ. ಅವಳ ಮನಸ್ಸಿಗೆ ಮನೆಯೆಲ್ಲಾ ಭಣ ಭಣ ಎನ್ನುತ್ತಿರುವ ಹಾಗಿತ್ತು.

ಈ ಬೇಸರದ ಸಮಯದಲ್ಲಿ ಲಲಿತನಿಗೆ ಮತ್ತೆ ಕನಕಾಂಗಿಯ ಜೊತೆ ಬೇಕಾಯಿತು. ಅವಳು ಬಂದರೆ ತನ್ನ ದುಃಖದ ಹೊರೆ ಎಷ್ಟೋ ಇಳಿದೀತೆನ್ನಿಸಿತು. ಆದರೆ ಅವಳು ಬರುವಳೆ?

ಮನಸ್ಸಿನಲ್ಲಿ ರೂಪುಗೊಂಡ ಆಲೋಚನೆಯನ್ನು ಲಲಿತ ಹಿಂದು ಮುಂದು ತಿರುಗಿಸಿ ನೋಡಿದಳು. ತಾಯಿಯ ಜೊತೆಗೂಡಿ ಆಲೋಚಿಸಿ ಕನಕಾಂಗಿಗೆ ಕಾಗದ ಬರೆಯುವುದೇ ಲೇಸೆಂದು ಅವಳಿಗನ್ನಿಸಿತು. ಈ ನಿರ್ಧಾರ ಮೂಡಿ ಲಲಿತ ಮೆಲ್ಲನೆ ಅಡುಗೆಯ ಮನೆಗೆ ಹೋದಳು.

"ಅಮ್ಮಾ, ಕನಕಾಂಗಿಗೆ ಒಂದು ಕಾಗದ ಹಾಕಲೆ?"

ಅನಿರೀಕ್ಷಿತವಾಗಿ ಬೆನ್ನ ಹಿಂದೆ ಕೇಳಿದ ಪ್ರಶ್ನೆಗೆ ಮೀನಾಕ್ಷಮ್ಮನವರು ಬೆಚ್ಚಿ ತಟಕ್ಕನೆ ತಿರುಗಿ ನೋಡಿದರು. ಲಲಿತ ಬಾಗಿಲಲ್ಲಿ ನಿಂತಿದ್ದಳು.

"ಯೋಗಕ್ಷೇಮಕ್ಕೆ ಮೊನ್ನೆಯೇ ಕಾಗದ ಹಾಕಿತಲ್ಲಾ, ಲಲಿತ?"

"ಕ್ಷೇಮಸಮಾಚಾರಕ್ಕೇನೋ ಹಾಕಿತು. ಆದರೆ ಅವಳನ್ನ ಎರಡು ದಿನದ ಮಟ್ಟಿಗೆ ಬಾ ಎಂದು ಬರೆದರೆ?"

"ಏಕೆ, ನಿನಗೆ ಒಬ್ಬಳೇ ಇದ್ದು ತುಂಬ ಬೇಸರವಾಗಿದೆಯೇನು?"

ಲಲಿತ ಉತ್ತರ ಕೊಡಲಿಲ್ಲ. ಮೌನವಾಗಿಯೇ ತಾಯಿಯ ಮುಖ ನೋಡಿದಳು. ಕಂಬನಿ ತೆಳುವಾಗಿ ತೆರೆ ಹಾಕಿದ್ದ ಕಣ್ಣು ಮೀನಾಕ್ಷಮ್ಮನವರಿಗೆ ಮಾತಿಗಿಂತ ಹೆಚ್ಚಾದುದನ್ನು ತಿಳಿಸಿತು. ಅವರ ಕರುಳು ಚುರುಕ್ ಎಂದಿತು.

"ಹಾಗೆಯೇ ಮಾಡು ಕಂದಾ. ಬೇಕಾದರೆ ನಾಳೆಯೇ ಒಂದು ಕಾಗದ ಹಾಕು.?

"ಅಣ್ಣ ಏನಾದರೂ ಅಂದರೆ?"

"ಅವರೇನೆನ್ನುತ್ತಾರೆ? ಸೊಸೆ ಬಂದರೆ ಬೇಡವೆನ್ನುತ್ತಾರೆಯೆ? ನೀನು ಸುಮ್ಮನೆ ಬರಿ"

ಎಂದರು. ತಾಯಿಯ ಭರವಸೆಯ ನುಡಿಯಿಂದ ಅವಳ ಮನಸ್ಸಿನ ದುಗುಡದ ಭಾರ ಇಳಿಯಿತು. ಅವಳು ಮರುಮಾತಾಡದೆ ತನ್ನ ರೂಮಿಗೆ ಹೊರಟುಹೋದಳು.

ಮೀನಾಕ್ಷಮ್ಮನವರೇನೂ ಲಲಿತನ ವಿಚಾರ ಯೋಚಿಸದೆ ಸುಮ್ಮನೆ ಕುಳಿತಿರಲಿಲ್ಲ. ಸಮಸ್ಯೆಯನ್ನು ಬಿಡಿಸಲು ಅವರ ಮನಸ್ಸೂ ತೊಡಗಿತ್ತು. ಅವಳು ಸುಂದರನನ್ನು ಬೇಡವೆಂದದ್ದರಿಂದ ಅವರಿಗೂ ನಿರಾಶೆಯಾಗಿತ್ತು, ನಿಜ. ಆದರೆ ಅಯ್ಯರರಂತೆ ಅವರಿಗೆ ಕೋಪ ಬಂದಿರಲಿಲ್ಲ. ಅದಕ್ಕೆ ಬದಲಾಗಿ ಮಗಳ ನಿರಾಕರಣೆಗೆ ಕಾರಣವೇನಿರಬಹುದೆಂದು ಅವರ ಹೆಣ್ಣುಬುದ್ಧಿ ಅರಸುತ್ತಿತ್ತು.

ಹುಡುಗ ಲಕ್ಷಣವಾಗಿರಲಿಲ್ಲವೆಂದು ಲಲಿತ ಅವನನ್ನು ಬೇಡವೆಂದಿರಲಿಲ್ಲ. ಆ ವಿಷಯದಲ್ಲಿ ಮೀನಾಕ್ಷಮ್ಮನವರಿಗೆ ಯಾವ ಶಂಕೆಯೂ ಇರಲಿಲ್ಲ. ಲಲಿತ ರೂಪವನ್ನೇ ಪ್ರಧಾನವೆಂದು ಎಣಿಸುವ ಹಾಗಿದ್ದರೆ ಅಂಥ ಗಂಡುಗಳಿಗೂ ಕೊರತೆ ಇರಲಿಲ್ಲ. ಸುಂದರನಲ್ಲದಿದ್ದರೆ ಬೇರೆ ಯಾರನ್ನಾದರೂ ತರಬಹುದಾಗಿತ್ತು. ಆದರೆ ಅವಳ ಮನಸ್ಸು ಮದುವೆಗೇ ವಿರೋಧವಾಗಿತ್ತು. ಅದೇನೋ ಮೀನಾಕ್ಷಮ್ಮನವರಿಗೆ ಪರಿಷ್ಕಾರವಾಗಿ ಗೊತ್ತಾಗಿತ್ತು. ಏಕೆ ಎನ್ನುವುದು ಮಾತ್ರ ಅಷ್ಟು ಸುಲಭವಾಗಿ ಗೊತ್ತಾಗುವ ಹಾಗಿರಲಿಲ್ಲ. ಅದಕ್ಕೆ ಆಳವಾದ ಕಾರಣವೊಂದಿರಬೇಕೆಂದು ಅವರು ಊಹಿಸಿದರು.

ಈ ಸಂದರ್ಭದಲ್ಲಿ ಕನಕಾಂಗಿ ನಾಲ್ಕು ದಿನದ ಮಟ್ಟಿಗಾದರೂ ಬರುವುದು ಅವರಿಗೂ ಸಮ್ಮತವೆನ್ನಿಸಿತು. ಅವಳ ಆಗಮನದ ನಿರೀಕ್ಷೆಯಲ್ಲಿ ಅವರ ಮನಸ್ಸು ಮುಂದಿನ ವ್ಯೂಹದ ಒಂದು ಹಂಚಿಕೆ ಹಾಕಿಕೊಂಡಿತು.

೧೧

ಮಧುಸೂದನ ವಾಮನರಾಯರ ಮನೆಯಲ್ಲಿ ಮೂರು ದಿವಸ ನಿಲ್ಲ ಬೇಕಾಯಿತು. ಅವನೇನೋ ಕಚೇರಿಯಾದ ಮಾರನೆಯ ಬೆಳಗ್ಗೆಯೇ ಹೊರಡಲು ಸಿದ್ಧನಾಗಿದ್ದ. ಆದರೆ ವಾಮನರಾಯರು ಹಾಯಗೊಡಲಿಲ್ಲ.

"ಹೀಂಗ ಲಗೂನ ಹೋಗಲಿಕ್ಕೆ ಅವಸರನಾದರೂ ಏನದ? ಎರಡು ದಿನ ಆರಾಮಾಗಿ ಇದ್ದು ಬಿಡಿರಿ ಮತ್ತ. ಹಾಂಗ ಬೇಕಾದರೆ ನಿಮ್ಮ ಕೇಶವಯ್ಯಗೆ ಸಮಾಚಾರ ಮುಟ್ಟಸಲಿಕ್ಕೆ ಬರತದ"

ಎಂದುಬಿಟ್ಟರು. ಅವರ ಬಾಯಲ್ಲಿ ಕೇಶವಯ್ಯನ ಹೆಸರು ಕೇಳಿ ಮಧು ಸೂದನನ ಮೈ ಜುಮ್ಮೆಂದಿತು. ಹೆಚ್ಚು ಮಾತಾಡಿದರೆ ಇನ್ನೇನು ಆತಂತ್ರ ವಾಗುವುದೋ ಎಂದು ಅವನು ಸುಮ್ಮನಾದ.

ಕಚೇರಿಯಾದ ಮಾರನೆಯ ದಿನ ಬೆಳಗ್ಗೆ ಮಧುಸೂದನನನ್ನು ಹುಡುಕಿ ಕೊಂಡು ನಗರದ ರಸಿಕಜನರ ಒಂದು ಗೋಷ್ಠಿಯೇ ಬಂದುಬಿಟ್ಟಿತು. ಎಲ್ಲ ರೊಡನೆಯೂ ಎರಡೆರಡು ಮಾತಾಡಿ ಅವರನ್ನೆಲ್ಲಾ ಕಳಿಸಬೇಕಾದರೆ ಹನ್ನೆರಡು ಘಂಟೆ ಹೊಡೆದುಹೋಯಿತು. ಶೀನಯ್ಯ ಬಂದು ವಾಮನರಾಯರನ್ನೂ ಮಧುಸೂದನನನ್ನೂ ಊಟಕ್ಕೆ ಎಬ್ಬಿಸಿದ.

ಊಟ ಮುಗಿಸಿಕೊಂಡು ಮಧುಸೂದನ ಮುಂದುಗಡೆಯ ಡ್ರಾಯಿಂಗ್ ರೂಮಿಗೆ ಬಂದು ಕುಳಿತ. ವಾಮನರಾಯರು ಹತ್ತು ನಿಮಿಷ ತಡವಾಗಿ ಬಂದರು. ಅವರ ಕೈಯಲ್ಲೊಂದು ಕಾಗದವಿತ್ತು. ಮುಖದಲ್ಲಿ ಬೇಸರ ಎದ್ದು ಕಾಣುತ್ತಿತ್ತು.

"ಹೀಂಗ ನೋಡಿರಿ ಮತ್ತ. ಆಪ್ತಮಂದಿ ಬಂದಾರಂದರ ಅವರ ಸಂಗಾತ ಮಾತೂ ಕಥೀ ಆಡಲಿಕ್ಕೆ, ಅಡ್ಡಾಡಿಕೊಂಡು ಬರಲಿಕ್ಕೆ ನಮಗ ಲಭ್ಯ ಇಲ್ಲ.

ಮನೀ, ಹೊಲಾ, ಗದ್ದೀ ಅಂತ ಕಟಕೊಂಡುಬಿಟರ ಆತು ನೋಡಿರಿ. ಯಾವ ಗೃಹಸ್ಥಗ ನೆಮ್ಮದಿ ಇರತಾವ? ಚಿಂತೀ ತಲೀ ವ್ಯಾಪಿಸಿಬಿಡಶಾವ. ಆ ಹುಳಾ ಬುರಡೀ ಹೊಕ್ಕಿತಂದರ ಮುಗೀತು ನೋಡಿರಿ ಕಥೀ. ವ್ಯಾಜ್ಯಾ ಸಾಜ್ಯಾ ಅಂದರ ನಮಗಂತೂ ಕೆಟ್ಟ ಅನಿಸತದಪಾ. ಆದರ ಮಂದೀ ಏನರೆ ಒಂದು ಚಾಷ್ಟೀ ಮಾಡಿದರಂದರ ಸುಮ್ಮಗ ಕೂಡಲಿಕ್ಕೆ ಬರೂದಿಲ್ಲ. ನಾ ಸುಮ್ಮ ಗಿರೋವನಾದರೂ ನಮ್ಮ ಕಾರಕೂನ ಸುಮ್ಮಗಿರವೊಲ್ಲನೇಳ್ರಿ. ಝುಗಳಾ ಅಂದರ ಅವಗ ಮುಂಡಿಗಿ ಇದ್ದಾಂಗ, ಮುಂಡಿಗಿ"

ಎಂದು ವಾಮನರಾಯರು ಫಕ್ಕನೆ ನಕ್ಕು ಮಧುಸೂದನನ ಪಕ್ಕದಲ್ಲಿ ಬಂದು ಕುಳಿತುಕೊಂಡರು. ರತ್ನಗಿರಿಯಿಂದ ಬಂದಿದ್ದ ತಂತೀವಾರ್ತೆ ಅವರ ಚಿತ್ತದ ಸಮತೆಯನ್ನು ಕೆಡಿಸಿತ್ತು. ಅವರ ವ್ಯಗ್ರತೆಯನ್ನು ಮನಗಂಡ ಮಧು ಸೂದನ ಸಹಾನುಭೂತಿಯ ಧ್ವನಿಯಲ್ಲಿ,

"ಪ್ರಮಾದವೇನೂ ಇಲ್ಲವಷ್ಟೆ?"

ಎಂದ. ರಾಯರು ದೊಡ್ಡದಾಗಿ ತಲೆ ಅಲ್ಲಾಡಿಸಿದರು.

"ಪ್ರಮಾದನೂ ಇಲ್ಲಾ ಏನೂ ಇಲ್ಲಪಾ. ನಾ ಒಮ್ಮೆ ರತ್ನಗಿರೀಕ್ಕ ಹೋಗಿ ಬಂದರಂದರಾತು ನೋಡಿರಿ. ನಮ್ಮ ಕಾರಕೂನ ಯಾರ ಸಂಗಾತ ಝುಗಳಾ ಮಾಡ್ಯಾನೋ, ಏನು ರಾಮಾಯಣನೋ ತಿಳೀವೊಲ್ಲದು. ರೈತರ ಸಂಗಾತ ವ್ಯವಹಾರಾ ನಡಸೂದಂದರ ಪುಕ್ಕಟ ಆಗಿಹೋತೇನು?"

"ಹಾಗಾದರೆ ತಾವು ರತ್ನಗಿರಿಗೆ ಹೊರಡಬೇಕೇನು?"

"ಹೋಗಲಿಕ್ಕೇ ಬಂದದ ನೋಡಿರಿ ಮತ್ತ. ದಿನ ಎರಡು ದಿನದಾಗೇ ವಾಪಸ ಬರತೀನನ್ರೀ. ಅದರ ಚಿಂತಿ ಬ್ಯಾಡಾ. ನಾ ಬರೂತನಕ ನೀವು ಆರಾಮ ಇದ್ದು ಬಿಡಿರಿ ಮತ್ತ. ಹೋಗೂ ಸುದ್ದಿ ಈಗೇ ಬ್ಯಾಡಾ."

"ಸುಮ್ಮನೆ ನಾನಿದ್ದು ಏನು ಮಾಡುವುದು, ರಾಯರೇ?"

"ಒಳ್ಳೇ ಪ್ರಶ್ನಿ. ಏನು ಮಾಡೂದಂದರ ಏನು? ನಿಮ್ಮ ಕೇಶವಯ್ಯನ ಮನ್ಯಾಗೆ ಏನು ಮಾಡಲಿಕ್ಕೆ ಬರುತದೋ ಇಲ್ಲ್ಯೂನೂ ಅದೇ ಮಾಡಿದರಾತು. ಅಲ್ಲೀ ಆರಾಮನೇ ಇಲ್ಲೀಗೆ ಬರವೊಲ್ಲೆ ಅಂತದೇನು? ನೀವು ಇರಲಿಕ್ಕೇ ಬೇಕು. ಅಡ್ಡಾಡಲಿಕ್ಕೆ ಬೇಕಂದರ ಮೋಟರ್ ಅದೆ. ಏನರೆ ಸೌಕರ್ಯ ಬೇಕಂದರ ನಮ್ಮ ಶೀಣ್ಯಾನ ಕಿವೀ ಮ್ಯಾಲೆ ಹಾಕಿಬಿಡಿರಿ. ಒಳ್ಳೇ ಶಾಣಾ ಇದಾನವನು.

ಹೆಚ್ಚಿಗಿ ವಿಚಾರ ಅಂದರ ನಮ್ಮ ಸುಮಕ್ಕನ ಕಡೀಗೆ ತಿಳಿಸಿಬಿಡಿರಿ. ಆತಲ್ಲ, ನಾ ಹೋಗಿ ಬರಲಾ ಇನ್ನ?"

ಎನ್ನುತ್ತ ವಾಮನರಾಯರು ಎದ್ದೇ ಬಿಟ್ಟರು. ಅವರ ಮಾತಿನ ಮುಂದೆ ಮಧುಸೂದನನ ಪ್ರತಿಭಟನೆ ನಿಲ್ಲುವ ಹಾಗೇ ಇರಲಿಲ್ಲ. ರಾಯರು ಒಳಗೆ ಸಮಾಚಾರ ಕೊಟ್ಟು ಹೊರಟುಹೋದರು. ಮಧುಸೂದನ ಮಹಡಿ ಹತ್ತಿ ಹೋಗಿ ತನ್ನ ರೂಮು ಸೇರಿದ.

ವಾಮನರಾಯರು ಮಧುಸೂದನನಿಗಾಗಿಯೇ ಮಹಡಿಯ ಮೇಲೆ ಪ್ರತ್ಯೇಕವಾದ ಒಂದು ರೂಮನ್ನು ತೆರವು ಮಾಡಿಸಿ ಕೊಟ್ಟಿದ್ದರು. ಅದಕ್ಕೆ ಸೇರಿದ ಹಾಗೇ ಸ್ನಾನ, ಶೌಚ ಗೃಹಗಳಿದ್ದವು. ರೂಮಿನ ಒಂದು ಕಡೆಯಿಂದ ಬಿಸಿಲು ಮಚ್ಚಿಗೆ ಹೋಗುವ ಬಾಗಿಲಿತ್ತು. ರೂಮು ಕುರ್ಚಿ, ಸೋಫಾ, ನಿಲುಗನ್ನಡಿ, ಸೊಳ್ಳೆಪರದೆ ಹಾಕಿದ ಮಂಚದಿಂದ ಸುಸಜ್ಜಿತವಾಗಿತ್ತು.

ಮಧುಸೂದನ ರೂಮು ಸೇರಿ ಬಾಗಿಲನ್ನು ಮುಂದಕ್ಕೆ ನೂಕಿ ಮಂಚದ ಮೇಲೆ ಉರುಳಿಕೊಂಡ. ವಾಮನರಾಯರು ಹಿಂತಿರುಗಿ ಬರುವವರೆಗೂ ಅವನಿಗೆ ಮಾಡಲು ಏನೂ ಕೆಲಸವಿರಲಿಲ್ಲ. ಎರಡು ದಿನವನ್ನು ಹೇಗಾದರೂ ಕಳೆಯುವುದು ಅಗತ್ಯವಾಗಿತ್ತು. ಅವನು ನಿರ್ವಾಹವಿಲ್ಲದೆ ಅವರ ಸೌಜನ್ಯದ ಬಂದಿಯಾಗಿದ್ದ.

ತಿಳಿದವರನೇಕರು ಅವನನ್ನು ಹುಡುಕಿಕೊಂಡು ಬರುತ್ತಿದ್ದರು. ಅವರೆಲ್ಲರ ಕಣ್ಣು ತಪ್ಪಿಸಿ ಸದಾ ರೋಷನ್ನಳ ಮನೆಯಲ್ಲೇ ಇರುವುದು ಸಾಧ್ಯವಿರಲಿಲ್ಲ. ವಾಮನರಾಯರಿಗೆ ಅವನು ಅಲ್ಲಿದ್ದುದು ಬಹುಶಃ ಗೊತ್ತಿರಲಾರದು. ಶಂಕರ ರಾಯನಂತೂ ಹೇಳಿರಲಾರ. ಗೊತ್ತಾಗಿದ್ದರೆ ಅವರೇನೆಂದುಕೊಳ್ಳುತ್ತಿದ್ದರೋ. ಯಾರನ್ನಾದರೂ ಸಂಕೋಚವಿಲ್ಲದೆ ನೋಡಬಹುದಾದ ಒಂದು ನೆಲೆ ಅವನಿಗೆ ಈಗ ಅಗತ್ಯವಾಗಿತ್ತು. ಮಧ್ಯರಾಷ್ಟ್ರವಾದ ಮಾತುಂಗದ ಒಂದು ಹೋಟೆಲಿನ ಮೇಲೆ ಅವನ ದೃಷ್ಟಿ ಬಿದ್ದಿತ್ತು. ಸ್ವಲ್ಪಕಾಲದ ಮಟ್ಟಿಗಾದರೂ ಅಲ್ಲಿ ಒಂದು ರೂಮನ್ನು ಗೊತ್ತುಮಾಡಿಕೊಳ್ಳುವುದು ಯುಕ್ತವೆಂದು ಅವನಿಗನ್ನಿಸಿತು. ನೋಡಲು ಬರುವವರ ಗೊಂದಲವಿಲ್ಲದಿದ್ದ ಕಾಲವನ್ನು ಅವನು ರೋಷನ್ನಳ ಹತ್ತಿರ ಕಳೆಯಬಹುದಾಗಿತ್ತು.

ಒಂದೇ ದಿಕ್ಕು ಹಿಡಿದು ಆಲೋಚನೆಯ ಬೆನ್ನುಹತ್ತಿದ್ದ ಮಧುಸೂದನನ ಮನಸ್ಸು ಅವನಿಗರಿವಿಲ್ಲದೆಯೆ ನಿಧಾನವಾಗಿ ನಿದ್ದೆಗೆ ಜಾರಿತು.

ಶೀನಯ್ಯ ಟ್ರೇ ಮೇಲೆ ತಿಂಡಿಯ ತಟ್ಟೆಗಳನ್ನೂ ಚಹ ಪಾತ್ರೆಗಳನ್ನೂ ಇಟ್ಟುಕೊಂಡು ಬಂದು ಮೃದುವಾಗಿ ಕೂಗಿದಾಗಲೇ ಎಚ್ಚರ.

“ ರಾಯರ.”

ಧ್ವನಿ ಕೇಳಿ ಮಧುಸೂದನನಿಗೆ ನಿದ್ದೆ ಹರಿಯಿತು. ಅವನು ಕಣ್ಣುಜ್ಜಿ ಕೊಳ್ಳುತ್ತ ಎದ್ದು ಕುಳಿತ. ಕೈಗಡಿಯಾರ ಐದು ಘಂಟೆ ತೋರಿಸುತ್ತಿತ್ತು. ಎದ್ದು ಮುಖ ತೊಳೆದುಕೊಂಡು ಬಂದು ತಿಂಡಿ, ಚಹ ಸೇವನೆಗೆ ಕುಳಿತ. ಶೀನಯ್ಯ ಹೊರಗಡೆ ಕಾದಿದ್ದು ಮಧುಸೂದನ ಉಪಾಹಾರ ಮುಗಿಸಿದ ಮೇಲೆ ತಟ್ಟೆ ಬಟ್ಟಲುಗಳನ್ನು ತೆಗೆದುಕೊಂಡು ಹೊರಟುಹೋದ.

ಅವನು ಹೊರಟುಹೋದ ಮೇಲೆ ಮಧುಸೂದನ ಬಾಗಿಲನ್ನು ಮುಂದಕ್ಕೆ ತಳ್ಳಿ ಬಟ್ಟೆ ಬದಲಾಯಿಸಿಕೊಂಡು ಬಿಸಿಲುಮಚ್ಚಿಗೆ ಬಂದು ನಿಂತ. ಮಹಡಿಯ ಮೇಲಿನಿಂದ ಸುತ್ತಮುತ್ತಣ ದೃಶ್ಯ ಚೆನ್ನಾಗಿ ಕಾಣುತ್ತಿತ್ತು. ಹಾಸು ಹೊಕ್ಕಾಗಿದ್ದ ಅಂಧೇರಿಯ ಬೀದಿಗಳು ಪಗಡೆಯ ಹಾಸಿನಂತಿದ್ದವು. ಆಫೀಸಿನಿಂದ ಹಿಂತಿರುಗು ತ್ತಿದ್ದ ಜನ, ವಿಹಾರಾರ್ಥವಾಗಿ ಹೋಗುತ್ತಿದ್ದ ಜನ ರಸ್ತೆಗಳಲ್ಲಿ ತುಂಬಿ ಹೋಗಿದ್ದರು. ಕಾರು, ಬೈಸಿಕಲ್, ರಿಕ್ಷಾಗಳು ಕೊನೆ ಮೊದಲಿಲ್ಲದೆ ಬಂದು ಬಂದು ಹೋಗುತ್ತಿದ್ದವು. ಅಲೆಯ ಮೇಲೆ ಅಲೆ ಬರುವಂತೆ ಸಂಜೆಯ ಆ ಜನಸಂದಣಿಗೆ ಆದಿ ಅಂತ್ಯಗಳೇ ಇರಲಿಲ್ಲ. ಬೆಳಗಿನಿಂದ ಮನೆಯಲ್ಲೇ ಕಾಲು ಕಟ್ಟಿ ಕುಳಿತಿದ್ದ ಮಧುಸೂದನನ ದೃಷ್ಟಿಯನ್ನು ಆ ಜನಸ್ತೋಮ ಸೆಳೆಯಿತು.

ಅವನೂ ಏಕೆ ಎಲ್ಲಿಗಾದರೂ ಹೋಗಬಾರದು ?

ಎಲ್ಲಿಗೇಕೆ ? – ರೋಷನ್ನಳ ಮನೆಯಿಲ್ಲವೆ ?

ಹೌದು. ಅಲ್ಲಿಗೇಕೆ ಹೋಗಬಾರದು ? ಅವಳನ್ನೂ ಬಿಟ್ಟು ಬಂದು ಎರಡು ಮೂರು ದಿನವಾಗಿತ್ತು. ತನ್ನನ್ನು ಕಾಣದೆ ಅವಳೂ ಏನೆಂದುಕೊಳ್ಳು ತ್ತಿರುವಳೋ. ಇಲ್ಲಿ ಸುಮ್ಮನೆ ಕುಳಿತು ಕಾಲ ಕಳೆಯುವುದಕ್ಕಿಂತ ಅಲ್ಲಿಗೆ ಹೋಗಿ ಬರಬಹುದು. ಸಂಜೆ ಹೋಗಿ ಬೆಳಗ್ಗೆ ಬಂದರೆ ಸರಿ. ರಾತ್ರಿಯ ಊಟಕ್ಕೆ ಬರುವುದಿಲ್ಲವೆಂದು ತಿಳಿಸಿ ಹೋದರಾಯಿತು.

ಬೀದಿಯತ್ತ ನೋಟ ಹರಿಸಿ ಆಲೋಚನೆಯಲ್ಲಿ ಮುಳುಗಿದ್ದ ಮಧುಸೂದನನಿಗೆ ಬೆನ್ನ ಹಿಂದೆ ಹೆಜ್ಜೆಯ ಸದ್ದಾದದ್ದು ಗಮನಕ್ಕೆ ಬರಲಿಲ್ಲ.

" ರಾಯರ."

ಧ್ವನಿ ಕೇಳಿ ತಟಕ್ಕನೆ ಹಿಂತಿರುಗಿ ನೋಡಿದ. ಶೀನಯ್ಯ ಬಿಸಿಲು ಮಚ್ಚಿಗೆ ಬಂದು ನಿಂತಿದ್ದ.

" ಏನು ಶೀನಯ್ಯ ?"

" ಎಲ್ಲಾದರೂ ಅಡ್ಡಾಡಲಿಕ್ಕೆ ಹೋಗಬೇಕಾಗಿತ್ತೇನ್ರಿ, ರಾಯರ ?"

" ಹೋಗೋಣವೆಂದೇ ಯೋಚಿಸುತ್ತಿದ್ದೆ."

" ಕಾರು ಬೇಕು, ಹೌದಲ್ಲೋ ?"

" ಇದ್ದರೆ ಅನುಕೂಲ – "

ಮಧುಸೂದನನ ಬಾಯಲ್ಲಿ ಮಾತು ತಪ್ಪಿ ಬಂದುಬಿಟ್ಟಿತು. ವಾಮನ ರಾಯರ ಕಾರಿನಲ್ಲಿ ರೋಷನ್ನಳ ಮನೆಗೆ ಹೋಗುವುದೆ? ಡ್ರೈವರಿಗೆ ಗೊತ್ತಾಗಿ ಯಾರ ಕಿವಿಗಾದರೂ ಬಿದ್ದರೆ ಆಭಾಸವಾಗಬಹುದು. ಅಥವಾ ಪರೇಲಿನಲ್ಲಿ ಒಂದು ಕಡೆ ಇಳಿದು ಕಾರನ್ನು ಹಿಂದಕ್ಕೆ ಕಳಿಸಿಬಿಟ್ಟರೋ? ಆಗ ತಾನು ಎಲ್ಲಿಗೆ ಹೋದೆನೆನ್ನುವ ಸುಳುವು ಯಾರಿಗೂ ಗೊತ್ತಾಗುವುದಿಲ್ಲ. ಮನಸ್ಸು ಆ ನಿಶ್ಚಯ ಮುಟ್ಟಿದೊಡನೆಯೇ,

" ಕಾರು ತರಲು ಡ್ರೈವರಿಗೆ ಹೇಳು, ಶೀನಯ್ಯ"

ಎಂದು ನುಡಿದ.

" ಡ್ರಾಯವರಿಲ್ಲರೀ, ಸುಮಕ್ಕಗೆ ಹೇಳತೀನಿ."

" ಸುಮಕ್ಕನಿಗೆ ಹೇಳುತೀ ?"

" ಹೌಂದು, ಸುಮಕ್ಕಗೆ ಡ್ರಾಯವಿಂಗ್ ಬರತಾವ."

" ಹಾಗಾದರೆ ಅವರೇ ಈಗ ಡ್ರೈವ್ ಮಾಡುತ್ತಾರೇನು ?"

ಶೀನಯ್ಯ ಮಾತಿಲ್ಲದೆ ತಲೆದೂಗಿದ. ಮಧುಸೂದನ ಆಚ್ಚರಿಯಿಂದ ಅವನ ಮುಖ ನೋಡಿದ. ಅವನಿಗೆ ಒಳ್ಳೇ ಪೇಚಾಟಕ್ಕಿಟ್ಟುಕೊಂಡಿತು. ಈಗೇನು ಮಾಡುವುದು? ಹೋಗುವುದೆ, ಬಿಡುವುದೆ? ಅವನ ಬುದ್ಧಿ ಕ್ಷಣ ಕಾಲ ಯೋಚಿಸಿತು. ಮನಸ್ಸು ನಿರ್ಧಾರ ಅನಿರ್ಧಾರಗಳ ನಡುವೆ ತೂಗುತ್ತಿದ್ದ ಹಾಗೆಯೇ ಸುಮಾನೇ ಮಹಡಿ ಹತ್ತಿ ಬಂದಳು.

" ಶೀನಯ್ಯ ಹೇಳಿದನೋ ಇಲ್ಲವೋ ಎಂದಿದ್ದೆ."

" ಹೇಳಿದ, ಸರಿ. ಆದರೆ ನೀವೇಕೆ ಸುಮ್ಮನೆ ತೊಂದರೆ ತೆಗೆದುಕೊಳ್ಳುತ್ತೀರಿ? ನಾನು ನಡೆದೇ ಹೋಗುತ್ತೇನೆ. ನನಗೂ ಸ್ವಲ್ಪ ವ್ಯಾಯಾಮ ಬೇಕಾಗಿದೆ.

" ಬೇರೆ ಏನಾದರೂ ಕೆಲಸವಿತ್ತೇನು ?"

" ಅಂಥ ಕೆಲಸವೇನೂ ಇಲ್ಲ. ಕೊಂಚ ದೂರ ತಿರುಗಾಡಿಕೊಂಡು ಬಂದರಾಯಿತು. ಅದಕ್ಕೇಕೆ ಕಾರು ?"

" ಮುಂಬಯಿ ಬೀದಿಗಳ ಗೊಂದಲದಲ್ಲಿ ಮನಸ್ಸಿಗಾಗಲಿ ಮೈಗಾಗಲಿ ವ್ಯಾಯಾಮ ಸಿಕ್ಕುವುದೆ? ಬೀಚಿಗೋ ಎಲ್ಲಿಗಾದರೂ ಕಾರಿನಲ್ಲಿ ಹೋಗಿ ಅಲ್ಲಿ ತಿರುಗಾಡಿದರಾಯಿತು. ಹವೆಯೂ ಚೆನ್ನಾಗಿರುತ್ತದೆ. ನೀವು ಸಂಕೋಚ ಪಟ್ಟುಕೊಳ್ಳಬೇಕಾಗಿಲ್ಲ."

ನನಗೆ ಸಂಕೋಚವಿಲ್ಲ. ಡ್ರೈವರಿಲ್ಲದಿರುವಾಗ ನಿಮಗೆ ಸುಮ್ಮನೆ ತೊಂದರೆಯಾಗುವುದಲ್ಲಾ ಎಂದು ಹೇಳಿದೆ."

" ಡ್ರೈವರ್ ಕೂಸಿಗೆ ಮೈಯಲ್ಲಿ ಜಡ್ಡಾಗಿದೆಯೆಂದು ಹೇಳಿ ಹೋದ. ನನಗೂ ಮನೆಯಲ್ಲಿ ಕೂತು ಕೂತು ಮನಸ್ಸಿಗೆ ಜಡ್ಡಾಗಿತ್ತು. ಕಾರಿನಲ್ಲಿ ಹೋದರೆ ನೀವೂ ಬರುವಿರೇನೋ ಎಂದುಕೊಂಡೆ"

ಎಂದು ಅವನ ಮುಖವನ್ನು ಕುತೂಹಲ ಪ್ರಶ್ನೆಗಳು ಬೆರೆತ ದೃಷ್ಟಿಯಿಂದ ನೋಡಿದಳು. ಅವಳ ತುಟಿಯ ಮೇಲೆ ಎಳೆನಗು ಮೂಡಿತ್ತು. ಒಲ್ಲೆ ಎನ್ನಲು ಮನಸ್ಸಾಗಲಿಲ್ಲ.

" ಆಗಬಹುದು "

ಎಂದು ಮಧುಸೂದನ ನುಡಿದ. ಆ ನೋಟ, ಕಂಡೂಕಾಣದ ಆ ಮಂದಹಾಸ ಅವನ ಮನಸ್ಸಿನಲ್ಲಿ ಯಾವುದೋ ಭಾವನೆಯ ತಂತಿಯನ್ನು ಮಿಾಟಿದವು.

ಸುಮಾ ಗ್ಯಾರೇಜಿನಿಂದ ಕಾರು ತರಲು ಮಹಡಿಯಿಳಿದು ಹೊರಟು ಹೋದಳು. ಮಧುಸೂದನ ಅವಳನ್ನು ಹಿಂಬಾಲಿಸಿದ. ಶೀನಯ್ಯ ಅಡುಗೆ ಮನೆಯ ಹಾದಿ ಹಿಡಿದ.

ಕಾರು ಸ್ವಲ್ಪ ದೂರ ಹೋಗುವವರೆಗೂ ಇಬ್ಬರೂ ಮಾತಾಡಲಿಲ್ಲ.

ಸುಮಳ ದೃಷ್ಟಿ ರಸ್ತೆಯ ಮೇಲಿತ್ತು. ಅವಳ ಪಕ್ಕದಲ್ಲಿ ಕುಳಿತಿದ್ದ ಮಧುಸೂದನ ಜನಭರಿತವಾಗಿದ್ದ ಅಂಧೇರಿಯ ರಸ್ತೆಯ ತಿರುಗುಮುರುಗುಗಳಲ್ಲಿ ಅವಳ ಕೈ ತೋರಿಸುತ್ತಿದ್ದ ಚಳಕವನ್ನು ಮೆಚ್ಚಿಕೆ ಬೆರೆತ ವಿಸ್ಮಯದಿಂದ ಗಮನಿಸುತ್ತಿದ್ದ. ವೇಗವಾಗಿ ಚಲಿಸುತ್ತಿದ್ದ ಕಾರಿನ ಮೇಲೆ ಅವಳಿಗೆ ಸಂಪೂರ್ಣ ಹತೋಟಿಯಿದ್ದಂತಿತ್ತು.

"ಪರವಾಗಿಲ್ಲ, ಚೆನ್ನಾಗಿಯೇ ಡ್ರೈವ್ ಮಾಡುತ್ತೀರಿ"

ಎಂದು ಮಧುಸೂದನ ಇಬ್ಬರ ನಡುವಣ ಮೌನವನ್ನು ಭೇದಿಸುತ್ತ ಹೇಳಿದ.

"ಹೌದು, ನನಗೆ ಡ್ರೈವಿಂಗ್ ಅಂದರೆ ತುಂಬ ಪ್ರೀತಿ. ಆದರೆ ಕಾಕಾ ಊರಿನಲ್ಲಿದ್ದರೆ ಅದಕ್ಕೆ ಆಸ್ಪದ ಕೊಡುವುದಿಲ್ಲ. ಮುಂಬಯಿಯ ರಸ್ತೆಗಳಲ್ಲಿ ಕಾರನ್ನು ನಡೆಸುವುದೆಂದರೆ ಅವರಿಗೆ ತುಂಬ ಅಂಜಿಕೆ. ಡ್ರೈವರ್ ಕೈಗೆ ಸ್ಟಿಯರಿಂಗ್ ಕೊಟ್ಟು ಹಿಂದೆ ಕೂಡುವುದೇ ಅವರಿಗೆ ಸಂತೋಷ"

ಎಂದು ಮೆಲ್ಲನೆ ನಕ್ಕಳು. ಮಧುಸೂದನನ ದೃಷ್ಟಿ ಅವಳ ಮೇಲೆ ನೆಲಸಿತು.

ಸುಮಾ ಕಿತ್ತಳೆಯ ಬಣ್ಣದ ತೆಳುವಾದ ಸೀರೆಯನ್ನುಟ್ಟು ಡ್ರೈವಿಂಗಿಗೆ ಅನುಕೂಲಿಸುವಂತೆ ಅಡ್ಡ ಸೆರಗೆಳೆದು ಸಿಕ್ಕಿಸಿಕೊಂಡಿದ್ದಳು. ಬಿಳಿಯ ರೇಸಿಮೆಯ ಚೋಲಿ ಅವಳ ತುಂಬು ತೋಳಿಗೆ ಒಪ್ಪುತ್ತಿತ್ತು. ಕುತ್ತಿಗೆಯಲ್ಲಿ ಬಂಗಾರದ ಎರಡೆಳೆಯ ಚೈನಿತ್ತೇನೋ. ಅದರ ಅರ್ಧಭಾಗ ಮೇಲೆ ಕಾಣುತ್ತಿತ್ತು. ಉಳಿದರ್ಧ ತುಂಬಿದ ಎದೆಯೊಳಗೆ ಎಲ್ಲೋ ಹುದುಗಿಹೋಗಿತ್ತು. ಹಣೆಯಲ್ಲಿ ಒಂದು ಹಸುರು ಚುಕ್ಕಿಯಿತ್ತು. ಹೆರಳನ್ನು ಸಿಂಬಿಯ ಹಾಗೆ ಸುತ್ತಿ ಅದಕ್ಕೆ ನೆಟ್ ಹಾಕಿಕೊಂಡಿದ್ದಳು. ಕಿವಿಯಲ್ಲಿದ್ದ ಮುತ್ತಿನ ಓಲೆ ಬಿಳುಪಾದ ಆ ಕೆನ್ನೆಯ ಕಾಂತಿಯನ್ನು ಹೆಚ್ಚಿಸುತ್ತಿತ್ತು.

ಮಧುಸೂದನನ ದೃಷ್ಟಿ ತನ್ನ ಮೇಲಿದೆಯೆನ್ನುವುದು ಅವಳಿಗೆ ಅರಿವಾಗಿರಬೇಕು. ಕೆನ್ನೆ ನಸುಲಜ್ಜೆಯಿಂದ ಕೆಂಪೇರಿತು. ಮನಸ್ಸು ಒಂದು ಕ್ಷಣ ಡ್ರೈವಿಂಗಿನಿಂದ ವಿಮುಖವಾಯಿತು.

"ಈಗ ಎಲ್ಲಿಗೆ ಹೋಗುವುದು ?"

"ಎಲ್ಲಿಗಾದರೂ ಹೋಗೋಣ. ಮಾಹೀಂ ತೀರಕ್ಕೆ ಹೋಗೋಣ. ನಾನು ಆ ಕಡೆ ಹೋಗಿಲ್ಲ."

"ಸರಿ"

ಎಂದುತ್ತರವಿತ್ತು ಕಾರಿನ ವೇಗವನ್ನು ಹೆಚ್ಚಿಸಿದಳು. ಮಾಹೀಂ ತಲಪುವವರೆಗೂ ಇಬ್ಬರೂ ಮಾತಾಡಲಿಲ್ಲ. ಸುಮಾ ತೀರಕ್ಕೆ ಸ್ವಲ್ಪ ದೂರದಲ್ಲಿ ಕಾರು ನಿಲ್ಲಿಸಿ ಕೆಳಗಿಳಿದಳು.

"ಸಮುದ್ರದ ದಂಡೆಗೆ ಹೋಗೋಣವೆ?"

"ಹೋಗೋಣ"

ಎಂದು ಮಧುಸೂದನ ಅವಳನ್ನು ಹಿಂಬಾಲಿಸಿದ. ಸಂಜೆಯ ಪ್ರಶಾಂತ ವಾತಾವರಣದಲ್ಲಿ ಇಬ್ಬರೂ ಕಡಲಿನತ್ತ ನಡೆದರು. ತಂಪಾದ ಗಾಳಿ ನೀರ ಮೇಲಿನಿಂದ ಬೀಸಿ ಬರುತ್ತಿತ್ತು. ಇಲ್ಲೊಬ್ಬರು ಅಲ್ಲೊಬ್ಬರಂತೆ ಜನ ತೀರದಲ್ಲಿ ಕುಳಿತಿದ್ದರು. ಸಾಗರದ ನಿರಂತರ ಘೋಷ ಕಿವಿಯನ್ನು ತುಂಬುತ್ತಿತ್ತು.

"ಸಮುದ್ರ ಹಾಡುತ್ತಿರುವ ಹಾಗಿದೆ"

ಎಂದು ಮಧುಸೂದನ ಮೆಲ್ಲನೆ ನಕ್ಕ.

"ಅದನ್ನು ಸಂಗೀತಗಾರರು ವರ್ಣಿಸಿದರೇ ಚೆಂದ."

"ನಾನು ಸಂಗೀತಗಾರನಿರಬಹುದು. ಆದರೆ ಕವಿಯಲ್ಲ."

"ನಿನ್ನೆ ನಿಮ್ಮ ಸಂಗೀತ ಕೇಳಿದವರಿಗೆ ಹಾಗೆನಿಸುವುದಿಲ್ಲ."

"ಅದು ಅಭಿಮಾನದ ಮಾತು."

"ಸಂಗೀತದಲ್ಲಿ ಕವಿಯ ಪ್ರತಿಭೆಯೂ ಇರುವುದೆಂದು ನನಗೆ ತಿಳಿದಿರಲಿಲ್ಲ."

"ನನ್ನ ಹಾಡಿಕೆ ಅಷ್ಟು ಚೆನ್ನಾಗಿತ್ತೆ?"

"ನಿಮ್ಮ ಹಾಡಿಕೆಯನ್ನು ವಿಮರ್ಶಿಸುವಷ್ಟು ಪ್ರಾಜ್ಞಳು ನಾನಲ್ಲ. ಆದರೆ ಅದು ಎಲ್ಲರ ಮೆಚ್ಚಿಕೆಗೂ ಪಾತ್ರವಾಯಿತೆಂದು ಮಾತ್ರ ಹೇಳಬಲ್ಲೆ."

"ಅದನ್ನು ನೀವು ಹೇಳಬೇಕು. ನಾನೇನೋ ಮೊದಲು ಕಚೇರಿ ಚೆನ್ನಾಗುವುದಿಲ್ಲವೆಂದೇ ತಿಳಿದಿದ್ದೆ."

"ಹಾಗೇಕೆ ಭಾವಿಸಿದ್ದಿರಿ? ಅದಕ್ಕೇನು ಕಾರಣವಿತ್ತು?"

"ಅದನ್ನು ಇನ್ನೊಮ್ಮೆ ಹೇಳುತ್ತೇನೆ"

ಎಂದು ಮಾತನ್ನು ಅಷ್ಟಕ್ಕೇ ನಿಲ್ಲಿಸಿದ. ಮಧುಸೂದನ ಏಕೆ ಹಾಗೆಂದ ನೆನ್ನುವುದು ಅವಳಿಗೆ ಅರ್ಥವಾಗಲಿಲ್ಲ. ಇಬ್ಬರೂ ನೀರಿಗೆ ತೀರ ಹತ್ತಿರ ಬಂದು ಮರಳಿನಲ್ಲಿ ಕುಳಿತುಕೊಂಡರು. ನಿಮಿಷಕ್ಕೊಮ್ಮೆ ಬಂದು ದಡವನ್ನು ಅಪ್ಪಳಿಸಿ ಹಿಮ್ಮೆಟ್ಟುತ್ತಿದ್ದ ಅಲೆಗಳು ಅವರ ದೃಷ್ಟಿಯನ್ನು ಸೆರೆಹಿಡಿದವು. ಇಬ್ಬರನ್ನೂ ಮೌನ ಆವರಿಸಿತು.

ಸಂಧ್ಯೆಯೂ ಮೌನವಾಗಿತ್ತು.

ಮಧುಸೂದನ ಮನಸ್ಸಿನಲ್ಲಿ ವಿಷಾದದ ಸಣ್ಣ ಸುಳಿಯೊಂದು ಏಳುತ್ತಿತ್ತು. ಅನಿರೀಕ್ಷಿತವಾಗಿ ಆಡಿದ ಒಂದು ಮಾತು ಅವನ ಅಂತರಂಗವನ್ನು ಕಲಕಿತು. ಇದ್ದಕ್ಕಿದ್ದ ಹಾಗೆ ಅವನಿಗೆ ತನ್ನ ಒಂಟಿತನದ ಅನುಭವವಾಯಿತು. ಆ ಸಂಧ್ಯೆ, ಆ ಮೌನ, ಹೆಣ್ಣಿನ ಆ ಸಾಮೀಪ್ಯ ಅವನ ಮನಸ್ಸನ್ನು ಮಿಡಿಯುತ್ತಿದ್ದವು. ಸುಪ್ತವಾಗಿದ್ದ ಬಯಕೆಯ ಬಾಗಿಲು ಮೆಲ್ಲಮೆಲ್ಲನೆ ತೆರೆಯತೊಡಗಿತು. ಅವಳೊಡನೆ ಮಾತಾಡಬೇಕೆನ್ನುವ ಅವನ ಆಸೆ ಬಲಿಯಿತು.

"ನಿಮ್ಮ ವಿಚಾರ ಏನೂ ಹೇಳಲೇ ಇಲ್ಲವಲ್ಲಾ, ಸುಮಾಬಾಯಿ ?"

ಎಂದು ಮೌನವನ್ನೊಡೆದು ತಟಕ್ಕನೆ ಕೇಳಿದ. ಆ ಪ್ರಶ್ನೆಗೆ ಸುಮಾ ಅವಾಕ್ಕಾದಳು. ಒಂದೇ ಒಂದು ಕ್ಷಣ ಇಬ್ಬರ ದೃಷ್ಟಿಯೂ ಬೆರೆತು ಸಿಡಿಯಿತು. ಅವಳ ಮೈಯಲ್ಲಿ ವಿದ್ಯುತ್ತು ಹರಿದ ಹಾಗಾಯಿತು. ಮೆಲ್ಲನೆ ತಲೆತಗ್ಗಿಸಿದಳು.

"ನನ್ನ ವಿಚಾರ ಹೇಳುವಂತಹುದೇನಿಲ್ಲ."

"ಏಕೆ, ಇಷ್ಟೇ ಪರಿಚಯ ಸಾಕೆನ್ನುತ್ತೀರಾ ?"

"ಹಾಗೆನ್ನಲಿಲ್ಲ."

"ಮತ್ತೇಕೆ ಹೇಳಬಾರದು ?"

ಸುಮಾ ಉತ್ತರ ಕೊಡಲಿಲ್ಲ. ಅವಳ ಮನಸ್ಸಿನಲ್ಲಿ ಯಾವುದೋ ಭಾವನೆ ಕಡೆಯುತ್ತಿರುವ ಹಾಗಿತ್ತು. ಮುಖದ ಮೇಲೆ ಖಿನ್ನತೆ ಮೂಡಿತು. ತಾನು ಕೇಳಬಾರದ ಪ್ರಶ್ನೆಯನ್ನು ಕೇಳಿದೆನೇ ಎಂದು ಮಧುಸೂದನನಿಗನ್ನಿಸಿತು. ಅವಳ ಜೀವನದಲ್ಲಿ ಯಾವ ರಹಸ್ಯವಡಗಿತ್ತು ?

"ಹೋಗಲಿ ಬಿಡಿ. ನಿಮ್ಮ ಮನಸ್ಸಿಗೆ ಬೇಡವಾದ ಪ್ರಶ್ನೆ ಕೇಳುವುದಿಲ್ಲ"

ಎಂದು ಮೃದುವಾದ ಧ್ವನಿಯಲ್ಲಿ ನುಡಿದ. ಸುಮಳ ಕಣ್ಣಿನಂಚು ಕೆಂಪಾಗಿತ್ತು.

ಸಂಜೆ ಕಳೆದು ಮಬ್ಬು ಆವರಿಸುತ್ತಿತ್ತು. ತೀರದಲ್ಲಿ ಅಲ್ಲೊಂದು ಇಲ್ಲೊಂದು ದೀಪಗಳು ಹೊತ್ತಿಕೊಳ್ಳುತ್ತಿದ್ದುವು. ಸಮುದ್ರತೀರ ನಿರ್ಜನವಾಗಿತ್ತು.

"ಮನೆಗೆ ಹೋಗೋಣವೆ? ಹೊತ್ತಾಯಿತೆಂದು ಕಾಣುತ್ತದೆ"

ಎಂದು ಸುಮಾ ನುಡಿದು ಮೇಲಕ್ಕೆದ್ದಳು. ಮಧುಸೂದನ ಯಾವ ಮಾತನ್ನೂ ಆಡದೆ ಎದ್ದು ನಿಂತ. ಇಬ್ಬರೂ ಒಬ್ಬರ ಪಕ್ಕದಲ್ಲೊಬ್ಬರು ನಡೆಯುತ್ತ ಕಾರಿನೆಡೆಗೆ ಹೊರಟರು. ಸುಮಳ ಮನಸ್ಸೂ ತಲ್ಲಣಗೊಂಡಿತ್ತು. ಅವಳ ನಿರೀಕ್ಷೆಗೆ ಮೀರಿದ ಭಾವನೆಗಳು ಅಂತರಂಗದಲ್ಲಿ ಸೆಣಸಾಡುತ್ತಿದ್ದವು. ತನ್ನ ಮೌನದಿಂದ ಮಧುಸೂದನನಿಗೆ ಅಸಮಾಧಾನವಾಗಿರಬಹುದೇ ಎಂದು ಅವಳಿಗನ್ನಿಸಿತು. ಹಾಗೆ ಆಗಿದ್ದರೆ ಅದನ್ನು ಪರಿಹರಿಸುವ ಬಗೆ ಹೇಗೆ ಎನ್ನುವುದು ಅವಳಿಗೆ ಹೊಳೆಯಲಿಲ್ಲ.

ಕಾರು ನಾಲ್ಕೈದು ಮಾರು ದೂರ ಇದೆ ಎನ್ನುವಾಗ ಸುಮಾ ಕೆಳಗಿದ್ದ ಒಂದು ಕಲ್ಲನ್ನು ಕಾಣದೆ ಎಡವಿದಳು. ಎಡವಿದ ರಭಸಕ್ಕೆ ಅವಳ ಮೈ ಮುಂದಕ್ಕೆ ತೂಗಿ ಬೀಳುವ ಹಾಗಾಯಿತು. ಮಧುಸೂದನ ತಕ್ಷಣ ಅವಳನ್ನು ಹಿಡಿದುಕೊಂಡ. ಅವನ ಆಸರೆಯಿಲ್ಲದಿದ್ದರೆ ಅವಳು ಪಕ್ಕದ ಹಳ್ಳಕ್ಕೆ ಉರುಳಿಬಿಡುತ್ತಿದ್ದಳು.

"ಕಾಲಿಗೆ ಏಟು ಬಿತ್ತೆ?"

"ಇಲ್ಲ."

"ಕತ್ತಲಲ್ಲಿ ಈ ಹಳ್ಳ ತಿಟ್ಟೇ ಕಾಣುವುದಿಲ್ಲ. ಹುಷಾರಾಗಿ ಬನ್ನಿ."

ಅವನ ತೋಳು ಅವಳ ಭುಜವನ್ನು ಬಳಸಿತ್ತು. ಆ ಸ್ಪರ್ಶಕ್ಕೆ ಅವಳ ಮೈಯಲ್ಲಿ ರೋಮಾಂಚನವೇಳುತ್ತಿತ್ತು. ಇಬ್ಬರೂ ಮೈಗೆ ಮೈ ತಾಕುವಂತೆ ನಡೆಯುತ್ತ ಬಂದು ಕಾರಿನಲ್ಲಿ ಕುಳಿತರು. ಕಾರಿನ ಬೆಳಕಿನಲ್ಲಿ ಮಧುಸೂದನ ಅವಳ ಮುಖವನ್ನು ದಿಟ್ಟಿಸಿ ನೋಡಿದ. ಅವಳ ಹಣೆಯ ಮೇಲಿನ ಮುತ್ತಿನಂಥ ಬೆವರುಹನಿಗಳು ಸಾಲಿಟ್ಟಿದ್ದವು. ಅವಳ ನೋಟ ಅವನ ನೋಟದೊಡನೆ ಬೆರೆಯಿತು. ಸುಮಾ ನಾಚಿ ತಲೆ ತಗ್ಗಿಸಿದಳು.

ಕಾರು ಸದ್ದಿಲ್ಲದೆ ಅಂಧೇರಿಯ ಹಾದಿ ಹಿಡಿಯಿತು.

ರಾತ್ರಿಯ ಊಟ ಮುಗಿದಾಗ ಒಂಬತ್ತು ಘಂಟೆ. ಅಡುಗೆಯ ಮನೆಯಲ್ಲಿ

ಶೀನಯ್ಯ ಎಲೆ ಹಾಕಿ ಮೊದಲು ಮಧುಸೂದನನಿಗೆ ಬಡಿಸಿದ. ಅವನ ಊಟವಾದ ಮೇಲೆ ಗಂಗೂಬಾಯಿ, ಸುಮಾ ಊಟ ಮಾಡಿದರು.

ಊಟ ಮುಗಿಸಿಕೊಂಡು ಮಧುಸೂದನ ಮಹಡಿಯ ಮೇಲಿನ ತನ್ನ ರೂಮು ಸೇರಿದ. ಪಕ್ಕದ ಮೇಜಿನ ಮೇಲೆ ಸಾಲುಸಾಲಾಗಿದ್ದ ಇಂಗ್ಲಿಷ್ ಕನ್ನಡ ಪುಸ್ತಕಗಳು ಕಣ್ಣಿಗೆ ಬಿದ್ದವು. ಅವುಗಳನ್ನು ಒಂದೊಂದನ್ನೇ ಕೈಗೆತ್ತಿಕೊಂಡು ಪುಟ ತಿರುವಿಹಾಕತೊಡಗಿದ. ಕಣ್ಣಿಗೆ ಬಿದ್ದ ಒಂದು ಅಕ್ಷರವನ್ನೂ ಬುದ್ಧಿ ಗ್ರಹಿಸಲಾರದೆ ಹೋಯಿತು. ಬೇಸತ್ತು ಹಾಸುಗೆಯ ಮೇಲೆ ಬಿದ್ದು ಹೊರಳಾಡತೊಡಗಿದ. ನಿದ್ದೆ ಹತ್ತಿರ ಸುಳಿಯುವಂತೆಯೂ ಕಾಣಲಿಲ್ಲ. ಮನಸ್ಸು ಅಲ್ಲಕಲ್ಲೋಲವಾಗಿತ್ತು.

"ಸುಮಾ, ಸುಮಾ"

ಎಂದು ಅವನ ಕ್ಷುಭಿತಚಿತ್ತ ಹಾತೊರೆಯಿತು.

ಸಂಜೆ ಅವಳ ಮೈಮೇಲೆ ಕೈ ಇಟ್ಟಾಗ ಅವನ ಮೈ ಜುಮ್ಮೆಂದಿತ್ತು. ಹೆಣ್ಣಿನ ಆ ದೇಹ ಸ್ಪರ್ಶಕ್ಕೆ ಎಷ್ಟು ಮೃದುವಾಗಿತ್ತು, ಎಷ್ಟು ಹಿತವಾಗಿತ್ತು. ಆಗಲೇ ಅವಳನ್ನು ಗಾಢವಾಗಿ ಅಪ್ಪಿ ಮುದ್ದಿಸಿಬಿಡಬೇಕೆಂದಿದ್ದ. ಆದರೆ ಆದರೆ ಅದೇಕೋ ಹಾಳು ವಿವೇಕ ಮಧ್ಯೆ ಬಂದು ಕೈ ತಡೆದಿತ್ತು. ಅವನ ತೋಳು ಅವಳ ಭುಜವನ್ನು ಬಳಸಿದಾಗ ಅವಳು ಬೇಡವೆನ್ನಲಿಲ್ಲ; ಮುಗ್ಗರಿಸಿದವಳನ್ನು ಎತ್ತಿ ನಿಲ್ಲಿಸಿದ ಮೇಲೂ ಅವನು ಕೈ ತೆಗೆದಿರಲಿಲ್ಲ; ಆಗಲೂ ಅವಳು ಸುಮ್ಮನಿದ್ದಳು. ಅವಳಿಗೂ ಅದು ಹಿತವಾಗಿತ್ತೇನೋ. ಇಲ್ಲದಿದ್ದರೆ ಬೇಡವೆನ್ನದೆ ಸುಮ್ಮನಿರುತ್ತಿದ್ದಳೆ? ಅವಳ ನೋಟವೇ ಅದನ್ನು ಹೇಳಲಿಲ್ಲವೆ? ಅದಕ್ಕಿಂತ ಅವನಿಗೆ ಬೇರೆ ಸಾಕ್ಷಿ ಬೇಕಾಗಿತ್ತೆ?—

ಮಧುಸೂದನನ ಸರ್ವಾಂಗವೂ ಮೇರೆ ಮೀರಿದ ಬಯಕೆಯಿಂದ ಬೆಂಕಿಯಾಯಿತು.

ಅವಳಿಗಾದರೂ ನಿದ್ದೆ ಬಂದಿತ್ತೆ? ಅವಳೂ ಹಾಸಿಗೆಯ ಮೇಲೆ ಮಲಗಿ ಸುಮ್ಮನೆ ಹೊರಳಾಡುತ್ತಿದ್ದಳು. ಸಂಜೆ ಹೇಗೆ ಮನೆಗೆ ಬಂದಳೋ, ಏನು ಊಟ ಮಾಡಿದಳೋ, ತಾಯಿಯೊಡನೆ ಏನು ಮಾತಾಡಿದಳೋ ಅವಳಿಗೇ ಗೊತ್ತಿರಲಿಲ್ಲ. ಅವಳ ಮನಸ್ಸು ಅವಳ ಕೈ ಬಿಟ್ಟಿತ್ತು; ಮಧುಸೂದನನ ಅನಿರೀಕ್ಷಿತ ಸ್ಪರ್ಶ ಅವಳನ್ನು ವಿವಶಳನ್ನಾಗಿ ಮಾಡಿಬಿಟ್ಟಿತ್ತು. ಅವನ ಮಾತು,

ಅವನ ಅನುನಯ, ಅವನ ರೂಪ ಅವಳ ಕಣ್ಣು ಕಿವಿಗಳನ್ನು ತುಂಬಿಬಿಟ್ಟಿದ್ದವು. ಅವಳ ಮನಸ್ಸು ಪೂರ್ತಿ ಸೋತಿತ್ತು.

ಆಶಾತೃಷೆ ಅವಳ ಎದೆಯಲ್ಲಿ ಹಾಲಾಹಲದಂತೆ ಕಡೆಯಿತು.

ಘಂಟೆ ಹತ್ತೋ ಹನ್ನೊಂದೋ ಆಗಿತ್ತು. ಮನೆಯಲ್ಲಿ ಎಲ್ಲರೂ ಮಲಗಿ ನಿದ್ರಿಸುತ್ತಿದ್ದರು. ಗಂಗೂಬಾಯಿ ಅವರ ರೂಮು ಸೇರಿ ಆಗಲೇ ಏಳು ಕನಸುಗಳನ್ನು ಕಂಡಿದ್ದರು. ಶೀನಯ್ಯ ಅಡುಗೆಯ ಮನೆಯ ಪಕ್ಕದ ಕೋಣೆ ಯಲ್ಲಿ ಎಲ್ಲೋ ಸುರುಟಿಕೊಂಡು ಗೊರಕೆ ಹೊಡೆಯುತ್ತಿದ್ದ. ಆಳುಗಳು ಹಿತ್ತಿಲಮನೆಯಲ್ಲೆಲ್ಲೋ ಮಲಗಿದ್ದರು.

ಸುಮಾ ಹಾಸುಗೆಯಿಂದ ಮೆಲ್ಲನೆ ಎದ್ದು ಕುಳಿತಳು. ಯಾವುದೋ ಶಕ್ತಿ ಅವಳನ್ನು ಸೆಳೆಯುತ್ತಿತ್ತು. ರೂಮಿನ ಬಾಗಿಲು ತೆಗೆದು ಒಮ್ಮೆ ಹೊರಗೆ ಇಣುಕಿ ನೋಡಿದಳು. ಕತ್ತಲಲ್ಲಿ ಮನೆ ಪ್ರಶಾಂತವಾಗಿತ್ತು. ಯಾರ ಸುಳುವೂ ಇರಲಿಲ್ಲ. ಎಲ್ಲ ಮೌನವಾಗಿತ್ತು.

ಅವಳ ಕಾಲುಗಳು ಅವಳನ್ನು ಮಹಡಿಯತ್ತ ಸೆಳೆಯತೊಡಗಿದವು. ಉದ್ವೇಗಕ್ಕೆ ಎದೆ ಬಡಿದುಕೊಳ್ಳುತ್ತಿತ್ತು. ತನ್ನ ಉಸಿರೇ ತನಗೆ ಕೇಳಿಸುವಂತಿತ್ತು. ಹಜಾರದಲ್ಲಿದ್ದ ಸೋಫ ಕುರ್ಚಿಗಳ ಮೇಲೆ ಎಲ್ಲಿ ಬಿದ್ದುಬಿಡುವೆನೋ ಎಂದು ಅಳುಕಿದಳು. ಕಣ್ಣುಕಾಣದ ಆ ಕತ್ತಲಿನಲ್ಲಿ ವಿಶಾಲವಾದ ಆ ಹಜಾರ ಅವಳ ಮನಸ್ಸಿಗೆ ಕೊನೆ ಮೊದಲಿಲ್ಲದ ನಿರ್ಜನವಾದ ದೇಗುಲದಂತೆ ಭಾಸವಾಯಿತು. ಮಹಡಿಯ ಕೊನೆಯ ಮೆಟ್ಟಲನ್ನು ಹತ್ತಿ ನಿಂತಾಗ ತಾನೆಷ್ಟು ವರ್ಷದಿಂದ ಹೀಗೆ ಹತ್ತಿ ಬರುತ್ತಿರುವೆನೋ ಎಂದು ಅವಳಿಗನ್ನಿಸಿತು. ಆಸರೆಗಾಗಿ ಕಟ ಕಟೆಯ ಕಂಬವನ್ನೊರಗಿ ನಿಂತಳು. ಅವಳ ಕೈ ಅದನ್ನು ಬಳಸಿದಾಗ ಅದಕ್ಕೆ ಬಳೆ ತಾಕಿ ಝಣಲ್ಲೆಂದಿತು. ಆ ಸದ್ದು ಕೇಳಿ ಅವಳಿಗೆ ಜೀವವೇ ಹಾರಿ ಹೋದಂತಾಯಿತು.

ಆ ಕ್ಷಣದಲ್ಲಿ ಮಧುಸೂದನನ ರೂಮಿನ ಬಾಗಿಲು ತೆರೆಯಿತು.

ರೂಮಿನಿಂದ ಹೊರಹರಿದ ಬೆಳಕಿನಲ್ಲಿ ಮಧುಸೂದನ ಸುಮಾ ನಿಂತಿದ್ದು ದನ್ನು ಕಂಡ ಅವನ ದೇಹಾದ್ಯಂತವೂ ವಿದ್ಯುತ್ಪ್ರವಾಹವೊಂದಕ್ಕೆ ಸಿಕ್ಕಿ ದಂತಾಯಿತು. ನಾಲ್ಕೇ ಹೆಜ್ಜೆಯಲ್ಲಿ ಅವಳನ್ನು ಸಮೀಪಿಸಿ ಕೈಹಿಡಿದು ತನ್ನ ರೂಮಿಗೆ ಕರೆದೊಯ್ದು. ಹೆದರಿದ ಪಾರಿವಾಳದಂತೆ ಅವಳ ಮೈ ಥರಥರನೆ

ನಡುಗುತ್ತಿತ್ತು. ಮಧುಸೂದನ ಅವಳನ್ನು ಬಿಗಿದಪ್ಪಿದ. ಹುಚ್ಚು ಪ್ರವಾಹದಂತೆ ಅವನ ಆಸೆ ನುಗ್ಗಿ ಬರುತ್ತಿತ್ತು.

"ಸುಮಾ ಎಷ್ಟು ಹೊತ್ತು ಕಾಯಿಸಿಬಿಟ್ಟೆ, ಚಿನ್ನಾ."

"ನೀವು ನನ್ನನ್ನು ನಿರೀಕ್ಷಿಸುತ್ತಿದ್ದಿರಾ?"

ಎಂದು ಅವನ ಅಪ್ಪುಗೆಯಲ್ಲಿದ್ದಂತೆಯೇ ಕೇಳಿದಳು. ಆ ಮಾತು ಕೇಳಿ ಮಧುಸೂದನನಿಗೆ ನಗೆ ಬಂದಿತು. ಎಸಳಾದ ಅವಳ ಕಪೋಲದ ಮೇಲೆ ಒಂದು ಮುತ್ತಿಟ್ಟು,

"ನಾನು ನಿರೀಕ್ಷಿಸದೆ ನೀನು ಬಂದೆಯಾ?"

ಎಂದ. ಇಬ್ಬರೂ ನಕ್ಕರು. ಸುಮಾ ದೀಪದ ಕಡೆ ಕೈ ತೋರಿಸಿ,

"ದಯವಿಟ್ಟು ಅದನ್ನು ಆರಿಸಿಬಿಡಿ, ಅದಿದ್ದರೆ ನನಗೆ ಅಂಜಿಕೆ"

ಎಂದಳು. ಮಧುಸೂದನ ನಕ್ಕು ದೊಡ್ಡ ದೀಪ ಆರಿಸಿ ಸಣ್ಣ ದೀಪದ ಸ್ವಿಚ್ ಹಾಕಿದ. ನೀಲಿಯ ದೀಪದ ಮಂದಪ್ರಕಾಶ ರೂಮನ್ನು ತುಂಬಿತು. ಇಬ್ಬರೂ ಮಂಚವನ್ನು ಸೇರಿದರು.—

ಎರಡು ಸಂಜೆ, ಎರಡು ರಾತ್ರಿ ಸುಖ ಅವರಿಬ್ಬರ ನಡುವೆ ಸೂರೆಯಾಯಿತು.

ಮೂರನೆಯ ದಿನ ಮಧ್ಯಾಹ್ನ ವಾಮನರಾಯರು ರೈಲಿನಲ್ಲಿ ಬಂದಿಳಿದರು. ಅವರು ಊರು ಬಿಟ್ಟು ಹೊರಟಾಗ ಏಕೆ ಹೋದರೋ ಎನ್ನಿಸಿದ ಮಧುಸೂದನನಿಗೆ ಅವರು ಹಿಂತಿರುಗಿದಾಗ ಏಕೆ ಬಂದರೋ ಎನ್ನಿಸಿತು.

೧೨

ಮನೆತಪ್ಪಿದ ಮಗಳು ಸುಮಾ.

ಇಪ್ಪತ್ತೈದು ವರ್ಷದ ಆ ಹೆಣ್ಣಿನ ಜೀವನದ ಹಿಂದೆ ದಾರುಣವಾದ ಕಥೆ ಅಡಗಿತ್ತು.

ರತ್ನಗಿರಿಯಲ್ಲಿ ವಾಮನರಾಯರೆಂದರೆ ದೊಡ್ಡ ಹೆಸರು. ನೂರು ಎಕರೆ ಗದ್ದೆ, ಭಾರಿ ತೆಂಗಿನ ತೋಟ, ಭವ್ಯವಾದ ನಾಲ್ಕು ಮನೆಗಳೆಂದರೆ ಅವರ ಐಶ್ವರ್ಯದ ಕಲ್ಪನೆ ಯಾರಿಗಾದರೂ ಬರುತ್ತಿತ್ತು. ಐವತ್ತು ಸಹಸ್ರ ರೂಪಾಯಿ ಬರೀ ಲೇವಾದೇವಿಯಲ್ಲೇ ಓಡಾಡುತ್ತಿತ್ತು. ಮನೆಯ ತುಂಬ ಆಳುಕಾಳು ಗಳಿದ್ದರು. ನಾಲ್ಕಾರು ಹಸುಗಳನ್ನು ಕಟ್ಟಿಕೊಂಡಿದ್ದರು. ವಂಶಪಾರಂಪರ್ಯ ವಾಗಿ ಬಂದಿದ್ದ ಆಸ್ತಿಯನ್ನು ವಾಮನರಾಯರು ಪೋಲು ಮಾಡದೆ ಸ್ವಬುದ್ಧಿ ಸಾಮರ್ಥ್ಯಗಳಿಂದ ಚೆನ್ನಾಗಿ ರೂಢಿಸಿಕೊಂಡಿದ್ದರು.

ಅವರ ಹೆಸರು ಊರಿಗೆ ಮುಖ್ಯವಾಗಲು ಕೇವಲ ಐಶ್ವರ್ಯವೇ ಕಾರಣವಾಗಿರಲಿಲ್ಲ. ವಾಮನರಾಯರಲ್ಲಿ ಮಿಗಿಲಾದ ಔದಾರ್ಯ ಮನೆ ಮಾಡಿಕೊಂಡಿತ್ತು. ಊರೇ ಅವರ ಸ್ವಗೃಹದಂತಿತ್ತು. ರತ್ನಗಿರಿಗೆ ಯಾರೇ ಬರಲಿ ರಾಯರ ಮನೆಯಲ್ಲೇ ಇಳಿಯಬೇಕು; ಗಣ್ಯವಾದ ಯಾವ ಕೆಲಸವೇ ನಡೆಯಲಿ ಅದಕ್ಕೆ ಅವರೇ ಅಧ್ವರ್ಯುವಾಗಿ ನಿಲ್ಲಬೇಕು; ಊರಿಗೆ ಯಾವ ಅನುಕೂಲ ಬೇಕಾಗಲಿ ಅದು ಅವರ ಮುಖಾಂತರವೇ ನಡೆಯಬೇಕು. ವಾಮನರಾಯರೆಂದರೆ ಬರಿಯ ಒಬ್ಬ ಧನಾಢ್ಯ ವ್ಯಕ್ತಿಯೆನ್ನಿಸಿರಲಿಲ್ಲ; ಅವರು ಗುಣಾಢ್ಯ ವ್ಯಕ್ತಿಯೂ ಆಗಿದ್ದರು.

ಅಂತೆಯೇ, ಕಲೆಕ್ಟರರಿಂದ ಹಿಡಿದು ಮಂತ್ರಿಗಳವರೆಗೂ ವಾಮನರಾಯರ ಮಾತೆಂದರೆ ಬೆಲೆಯಿತ್ತು. ತಮ್ಮ ಸುಖಕ್ಕಾಗಿ ಯಾವುದನ್ನೂ ಅಪೇಕ್ಷಿಸದೆ

ಊರಿನ ಜನರ ನೆಮ್ಮದಿಗೆ ದುಡಿಯುತ್ತಿದ್ದ ಆ ಜೀವ ಎಲ್ಲರ ಗೌರವಾಭಿಮಾನ ಗಳಿಗೂ ಪಾತ್ರವಾಗಿತ್ತು. ರಾಯರ ಕೀರ್ತಿ ಪ್ರತಿಷ್ಠೆಗಳು ಸುತ್ತಲೂ ಹಬ್ಬಿ ಜನಕ್ಕೆ ರತ್ನಗಿರಿಯೆಂದ ಕೂಡಲೆ ಅಭೇದ ನ್ಯಾಯದಂತೆ ಅವರ ಹೆಸರೂ ಕೂಡಿಯೇ ನೆನಪಿಗೆ ಬರುತ್ತಿತ್ತು.

ಇಷ್ಟಾದರೂ ಅವರಿಗೆ ಗೃಹಜೀವನದಲ್ಲಿ ತೃಪ್ತಿಯಿರಲಿಲ್ಲ. ಅನುಕೂಲಕ್ಕೇನೂ ಅವರಿಗೆ ಕಡಮೆಯಾಗಿರಲಿಲ್ಲ. ಅದು ಬೇಕಾದ ಹಾಗಿತ್ತು. ಮನೋನುಕೂಲೆಯಾದ ಪತ್ನಿ ಅವರಿಗೆ ನೆರಳಿನ ಹಾಗಿದ್ದರು. ಗಂಡನ ಔದಾರ್ಯಕ್ಕೆ ಆಕೆಯ ಶೀಲ ಸದ್ಗುಣಗಳು ಬೆಳಕಾಗಿದ್ದವು. ಆದರೆ ಅವರ ಹೊಟ್ಟೆ ತೆರೆದು ಕುಲಕ್ಕೊಬ್ಬ ವಂಶೋದ್ಧಾರಕ ಹುಟ್ಟಲಿಲ್ಲ. ಗಂಗೂಬಾಯಿ ಮಾಡಿ ಮುಗಿಸದ ಯಾತ್ರೆ ತೀರ್ಥಗಳಿರಲಿಲ್ಲ, ಹರಕೆ ಹೊರದ ದೇವರಿರಲಿಲ್ಲ, ಕೈಗೊಳ್ಳದ ವ್ರತ ನೇಮಗಳಿರಲಿಲ್ಲ. ಏನೇ ಮಾಡಿದರೂ ಅವರಿಗೆ ದೈವ ಪುತ್ರಭಾಗ್ಯವನ್ನು ಕರುಣಿಸಲಿಲ್ಲ. ಅವರ ಜೀವ ನಿರರ್ಥಕವಾದ ಆಸೆಯಲ್ಲಿ ಹಣ್ಣಾಯಿತು.

ಮದುವೆಯಾದ ಹತ್ತು ವರ್ಷ ಕಾಲ ಮಕ್ಕಳಿಲ್ಲವೆನ್ನುವ ಚಿಂತೆಗೆ ಸಿಕ್ಕಿ ಬೆಂದ ಆಕೆಯ ಹೊಟ್ಟೆಯಲ್ಲಿ ಕೊನೆಗೆ ಹುಟ್ಟಿದವಳು ಸುಮಾ.

ಆ ಹೆಣ್ಣನ್ನು ನೋಡಿ ಗಂಗೂಬಾಯಿಗೆ ಸಂತೋಷವಾಗಲಿಲ್ಲ. ಬೆಟ್ಟದಷ್ಟಿದ್ದ ಆಸೆ ಮಂಜಿನ ಹಾಗೆ ಕರಗಿ ಹೋಯಿತು. ಹೆಂಡತಿಯನ್ನು ಸಮಾಧಾನ ಪಡಿಸುವ ಹೊರೆಯನ್ನೂ ವಾಮನರಾಯರೇ ಹೊರಬೇಕಾಯಿತು.

"ಅಯ್ಯೋ ಹುಚ್ಚಿ, ಹೀಂಗೇಕೆ ಕಾಳಜೀ ಮಾಡುತ್ತೀ? ಈ ಹೆಣ್ಣು ಕೂಸೇ ಗಂಡೆಂದು ತಿಳಕೊಂಡರಾಗಲಿಲ್ಲೇ? ಇದೂ ಹುಟದಿದ್ದರೆ ಏನು ಮಾಡಲಿಕ್ಕೆ ಬರತಿತ್ತು?"

ಎಂದು ತಮ್ಮ ಚಿಂತೆಯನ್ನೇ ಮರೆಮಾಜಿ ಸಂತೈಸುತ್ತಿದ್ದರು. ಆದರೆ ಬಾಯಲ್ಲಿ ಹಾಗೆ ಹೇಳುವುದು ಸುಲಭವಾಗಿತ್ತೇ ವಿನಾ ಮನಸ್ಸಿಗೆ ಸಮಾಧಾನ ತಂದುಕೊಳ್ಳುವುದು ಸುಲಭವಾಗಿರಲಿಲ್ಲ. ವಾಮನರಾಯರ ಮನೋನಿರ್ಧಾರವೂ ಅವರ ಹೆಂಡತಿಗಿರಲಿಲ್ಲ. ಗಂಡಾಗಲಿಲ್ಲವೆನ್ನುವ ಚಿಂತೆಯಲ್ಲಿ ಅವರು ನವೆದರು. ಅವರ ಜೀವಕ್ಕೆ ಅದೊಂದು ನಿರಂತರ ಶೋಕವಾಯಿತು.

ಸುಮಾ ವಾಮನರಾಯರಿಗೆ ಅಚ್ಚುಮೆಚ್ಚಾದ ಹಾಗೆ ಗಂಗೂಬಾಯಿಗೆ

ಆಗಲೇ ಇಲ್ಲ. ಮಗಳ ಬಾಳು ತಂದೆಯನ್ನೇ ಹೆಚ್ಚಾಗಿ ನೆಮ್ಮಿ ಬೆಳೆಯ ತೊಡಗಿತು.

ವಾಮನರಾಯರಂತೂ ಮನಸ್ಸಿನಲ್ಲಿ ಒಂದು ನಿರ್ಧಾರಮಾಡಿಕೊಂಡು ಬಿಟ್ಟಿದ್ದರು. ಹೆಂಡತಿಯ ಸಮಾಧಾನಕ್ಕಾಗಿ ಅವರಾಡಿದ ಮಾತನ್ನೇ ಅವರ ಮನಸ್ಸೂ ಹತ್ತು ಸಲ ಆಡಿತ್ತು. ಹೌದು, ಸುಮಾ ಗಂಡೆಂದೇ ತಿಳಿದುಕೊಂಡರಾಗದೇ? ಹೆಣ್ಣೆಂದು ಅವಳನ್ನು ಅತ್ತ ನೂಕಬೇಕೆ? ಆ ಜೀವವೇ ಗಂಡಾಗಿದ್ದರೆ ಅದನ್ನೇ ಕುಲೋದ್ಧಾರಕನೆಂದು ತಾವು ತಲೆಯ ಮೇಲೆ ಹೊತ್ತು ಮೆರೆಸುತ್ತಿರಲಿಲ್ಲವೆ? ಆ ವಾತ್ಸಲ್ಯವನ್ನೇ ಅವಳಿಗೂ ಏಕೆ ನೀಡಬಾರದು?

ಈ ನಿರ್ಧಾರದಿಂದ ಸುಮಾ ಅವರ ಬಾಳಿನಲ್ಲಿ ನಿಕೃಷ್ಟಳಾದ ಹೆಣ್ಣು ಮಗಳಾಗಿಯೇ ಉಳಿಯದೆ ಅವರ ಎಲ್ಲ ಮಮತೆಗೂ ಪಾತ್ರಳಾದ ಪ್ರೇಮಪುತ್ರಿಯಾದಳು. ಅವಳ ಲಾಲನೆ ಪಾಲನೆ ವಿದ್ಯಾಭ್ಯಾಸಗಳಲ್ಲಿ ಅವರು ಆಸಕ್ತಿ ವಹಿಸಿದರು. ಗಂಗೂಬಾಯಿಗಾದರೂ ಮಗಳ ಮೇಲೆ ದ್ವೇಷವಿರಲಿಲ್ಲ. ಹಡೆದೊಡಲಿನ ಮಮತೆ ಇದ್ದೇ ಇತ್ತು. ಆದರೆ ಅವಳ ಬೆಳವಣಿಗೆಯಲ್ಲಿ ಗಂಡ ತೋರಿಸುತ್ತಿದ್ದ ಉತ್ಸಾಹವನ್ನು ಅವರು ತೋರಿಸುತ್ತಿರಲಿಲ್ಲ. ಹೆಣ್ಣು ಬೋಕಿ ಹೇಗೆ ಬೆಳೆದರೇನು ಎನ್ನುವ ಅನಾಸಕ್ತಿ ಅವರಲ್ಲಿ ಮೂಡಿತ್ತು.

ದಿನದಿನಕ್ಕೆ ಬೆಳೆಯುತ್ತಿದ್ದ ಮಗಳ ಬಾಳಿನ ಸುತ್ತ ಆಸೆಯ ಪತಂಗವನ್ನು ಬಿಟ್ಟು ಹಾರಿಸುತ್ತಿದ್ದ ವಾಮನರಾಯರ ಮನಸ್ಸು ಮುಂದಿನ ಯೋಚನೆಯನ್ನೂ ಮಾಡದಿರಲಿಲ್ಲ. ಅವಳ ಇಂಟರ್ ಪರೀಕ್ಷೆಯ ಫಲಿತಾಂಶ ಬಂದ ದಿವಸ ಅವರ ಆ ಆಲೋಚನೆ ಹಣ್ಣಾಗಿ ಕೈಗೆ ಬಿತ್ತು. ಆ ಹಣ್ಣನ್ನೇಕೆ ಸತ್ಪಾತ್ರಕ್ಕೆ ಒಪ್ಪಿಸಬಾರದೆಂದು ಅವರು ಯೋಚಿಸಿದರು.

ಹದಿನೆಂಟು ವರ್ಷದ ಹುಡುಗಿ ಸುಮಳ ಕೈಹಿಡಿಯಲು ಮುಕುಂದ ಸಿದ್ಧನಾಗಿಯೇ ಇದ್ದ.

ಮುಂಬಯಿಯಲ್ಲಿ ಬಿ.ಎ. ಮುಗಿಸಿ ಎಲ್.ಎಲ್‌ಬಿ. ಓದುತ್ತಿದ್ದ ಮುಕುಂದರಾಯರಿಗೇನೂ ಹೊಸಬನಾಗಿರಲಿಲ್ಲ. ಅವನ ತಂದೆ ಬಲವಂತರಾಯರು ವಾಮನರಾಯರ ಹತ್ತಿರ ಆಗಾಗ ಲೇವಾದೇವಿ ಮಾಡುತ್ತಿದ್ದರು. ಅವರೇನೂ ವಾಮನರಾಯರಷ್ಟು ಆಢ್ಯರಲ್ಲದಿದ್ದರೂ ಮುಂಬಯಿಯಲ್ಲಿ ವಕೀಲರಾಗಿ ತಕ್ಕ ಮಟ್ಟಿನ ನೆಮ್ಮದಿಯಿಂದಲೇ ಇದ್ದರು. ವಾಮನರಾಯರು ನೋಡಿದ್ದು ಬಲ

ವಂತರಾಯರ ಸಂಪತ್ತನ್ನೂ ಅಲ್ಲ, ಮನೆತನವನ್ನೂ ಅಲ್ಲ. ಮುಕುಂದನ ಸದ್ಗುಣವನ್ನು. ಅವನಲ್ಲಿ ಅವರು ತಮ್ಮ ಉತ್ತರಾಧಿಕಾರಿಯನ್ನು ಕಂಡರು; ಮಗನಲ್ಲದಿದ್ದರೂ ಅಳಿಯನಾಗಿ ತಮ್ಮ ಮನೆತನದ ಹೆಸರು ಹೇಳುವ ಕುಲೋದ್ಧಾರಕನನ್ನು ಕಂಡರು.

ಆ ವೈಶಾಖದಲ್ಲಿ ಸುಮಾ ಮುಕುಂದನ ಕೈಹಿಡಿದು ಅವನ ಮಡದಿಯಾದಳು.

ಮಗಳ ವಿದ್ಯಾಭ್ಯಾಸದ ಸಂಬಂಧದಲ್ಲಿ, ಇತರ ವ್ಯವಹಾರಗಳ ಓಡಾಟದಲ್ಲಿ ವಾಮನರಾಯರಿಗೆ ಮುಂಬಯಿಯ ಸಂಪರ್ಕ ಹೆಚ್ಚಾಗಿ ಬೆಳೆದಿತ್ತು. ಅವರು ಬಂದು ಹೋದಾಗ ಇಳಿದುಕೊಳ್ಳುವುದಕ್ಕೆ ಯೋಗ್ಯವಾದ ಒಂದು ಮನೆ ಅಗತ್ಯವಾಗಿತ್ತು. ಬಲವಂತರಾಯರ ಕಕ್ಷಿಗಾರ ವಿಠಲದಾಸ್ ಅಂಧೇರಿಯಲ್ಲಿದ್ದ ತನ್ನ ಮನೆಯನ್ನು ಮಾರುವುದಕ್ಕಿದ್ದಾಗ ಅದು ಬೇರೆ ಯಾರ ಕೈಗೂ ಹೋಗದೆ ವಾಮನರಾಯರಿಗೇ ಬಂದಿತು. ಒಂದೂವರೆ ಲಕ್ಷ ಕೊಟ್ಟು ಕೊಂಡರೂ. ಮನೆ ತಮ್ಮ ಮನಸ್ಸಿಗೆ ತೃಪ್ತಿಕರವಾಗಿರುವುದನ್ನು ಕಂಡು ವಾಮನರಾಯರು ಹಿಗ್ಗಿದರು. ಅವರ ಮನಸ್ಸು ಮುಂದಿನ ಹಲವು ಹತ್ತು ಹವಣಿಕೆಯಲ್ಲಿ ಮುಳುಗಿತು.

ಆದರೆ ತೆರೆಯುತ್ತಿದ್ದ ಅದೃಷ್ಟದ ಬಾಗಿಲು ಇದ್ದಕ್ಕಿದ್ದ ಹಾಗೆ ಮುಚ್ಚಿಕೊಂಡಿತು. ಬಯಕೆ ರೂಪುಗೊಳ್ಳುವ ಮುನ್ನವೇ ಬರಸಿಡಿಲು ಬಂದು ಬಡಿಯಿತು.

ಲಾ ಕಾಲೇಜಿನಿಂದ ಮೋಟರ್ ಬೈಸಿಕಲ್ ಮೇಲೆ ಮನೆಗೆ ಹಿಂದಿರುಗುತ್ತಿದ್ದ ಮುಕುಂದ ಹಠಾತ್ತಾಗಿ ಎದುರಿಗೆ ಬಂದ ಲಾರಿಗೆ ಸಿಕ್ಕಿ ಹತನಾದ.

ಘಟನೆ ನಡೆದಾಗ ವಾಮನರಾಯರು ರತ್ನಗಿರಿಯಲ್ಲೇ ಇದ್ದರು. ತಂತಿ ನೋಡಿ ಅವರ ಕಣ್ಣು ಮಂಜಾಯಿತು. ನಿಂತ ನಿಲುವಿನಲ್ಲೇ ಕುಸಿದು ಬಿದ್ದರು. ಗಂಗೂಬಾಯಿಗೆ ಪ್ರಜ್ಞೆ ತಪ್ಪಿತು. ಸುಮಾ ಗರ ಬಡಿದವಳಂತೆ ಕುಳಿತುಬಿಟ್ಟಳು.

ಮದುವೆಯಾಗಿ ಒಂದು ವರ್ಷ ಕೂಡ ತುಂಬಿರಲಿಲ್ಲ.

ಗಂಡನ ಮುಖವನ್ನು ಸರಿಯಾಗಿ ನೋಡುವ ಮುನ್ನವೇ, ದಾಂಪತ್ಯದ ಸವಿಯನ್ನು ಕಾಣುವ ಮೊದಲೇ ಮುಕುಂದ ಸುಮಳ ಕೈಬಿಟ್ಟು ನಡೆದುಬಿಟ್ಟಿದ್ದ.

ಆ ದುಃಖದಲ್ಲಿ ವಾಮನರಾಯರು ನಿರ್ವಿಣ್ಣರಾದರು. ಹತಾಶೆ ಅವರನ್ನಾವರಿಸಿತು; ಅವರ ಆಸೆಯ ಜೇಡ ನೆಯ್ದಿದ್ದ ತಂತು ಕತ್ತರಿಸಿ ಬಿತ್ತು; ಅವಳ ಕೊರಳಿಗೆ ವೈಧವ್ಯ ಕಟ್ಟಿದ್ದನ್ನು ನೋಡಿ ಅವರು ಸಹಿಸಲಾರದಾದರು; ಮಗಳ ಬಾಳನ್ನು ಮಣ್ಣುಗೂಡಿಸಿದ ವಿಧಿಯ ಕ್ರೂರಲೀಲೆ ನೋಡಿ ಅವರಿಗೆ ಹಿಡಿಸಲಾರದಷ್ಟು ಸಿಟ್ಟು ಬಂದಿತು.

ಆದರೆ ಯಾವ ದುಃಖದಿಂದಲೂ ಏನೂ ಆಗುವ ಹಾಗಿರಲಿಲ್ಲ.

ಭ್ರಾಂತರಾದ ಹೆಂಡತಿ ಮಗಳನ್ನು ಸಂತೈಸುವ ಭಾರವೂ ಅವರ ಮೇಲೆಯೇ ಬಿತ್ತು. ಅದರಲ್ಲಿ ವಾಮನರಾಯರು ಹಣ್ಣಾದರು. ರತ್ನಗಿರಿಯ ಜೀವನ ಮನಸ್ಸಿಗೆ ಬೇಸರವಾಯಿತು. ಹೆಂಡತಿ ಮಗಳೊಡನೆ ಮುಂಬಯಿಗೆ ಬಂದುಬಿಟ್ಟರು. ಆ ವ್ಯಥೆಯಿಂದ ಚೇತರಿಸಿಕೊಳ್ಳಲು ಅವರಿಗೆ ದೀರ್ಘಕಾಲ ಬೇಕಾಯಿತು. ಕಾಲದಂಥ ದೊಡ್ಡ ಸಮಾಧಾನಿಯ ನೆರಳಿನಲ್ಲಿ ಮನಸ್ಸಿನ ನೋವು ನಿಧಾನವಾಗಿ ಮರೆಯಾಗುತ್ತ ಬಂದಿತು.

ರಾಯರ ಆಪ್ತ ಮಿತ್ರರು ಸುಮಳ ಪುನರ್ವಿವಾಹದ ಮಾತನ್ನೂ ಎತ್ತದಿರಲಿಲ್ಲ. ಏನೂ ಕಾಣದಿದ್ದ ಆ ಹೆಣ್ಣು ಇಂಥ ದುರ್ವಿಧಿಗೆ ಬಲಿಯಾಗಬೇಕೆ? ಅವಳ ಬಾಳು ಹಾಗೆಯೇ ಮುರುಟಿಹೋಗಬೇಕೆ? ಸಮಾಜ ಸುಧಾರಣೆಯ ಈ ಕಾಲದಲ್ಲಿ ವಿಧವಾ ವಿವಾಹ ಪುರಸ್ಕರಣೀಯವಲ್ಲವೆ? ವಾಮನರಾಯರಂಥ ಗಣ್ಯ ವ್ಯಕ್ತಿಯೇ ಇದನ್ನು ಮಾಡಿ ಇತರರಿಗೆ ಮೇಲ್ಪಂಕ್ತಿ ಹಾಕದಿದ್ದರೆ ಇತರರು ಯಾರು ಮಾಡಬೇಕು? – ಎಂದು ಅವರು ವಾದಿಸಿದರು. ಆದರೆ ಪೂರ್ವಾಚಾರ ಸಂಪ್ರದಾಯಗಳಲ್ಲಿ ಆಳಿ ಮುಳುಗಿದ್ದ ಆ ದಂಪತಿಗಳಿಗೆ ಅಂಥ ಒಂದು ಸಂಭವ ಸಹ್ಯವಾಗಲಿಲ್ಲ. ವಾಮನರಾಯರು ಒಂದು ತಾಳಿ ಕಟ್ಟಿಸಿದ ಕುತ್ತಿಗೆಗೆ ಇನ್ನೊಂದು ತಾಳಿ ಕಟ್ಟಿಸುವ ಪಾಪಕ್ಕೆ ಹೋಗುವುದಿಲ್ಲವೆಂದುಬಿಟ್ಟರು. ಸುಮಳಿಗೆ ವೈಧವ್ಯವೇ ಶಾಶ್ವತವಾಯಿತು.

ಮುಂಬಯಿಯಲ್ಲಿ ಅವಳಿಗೂ ಮಾಡಲು ಏನೂ ಕೆಲಸವಿರಲಿಲ್ಲ. ಮಹಿಳಾ ಸಂಘಕ್ಕೆ ಸೇರಿದಳು. ಅದರ ಚಟುವಟಿಕೆಗಳಲ್ಲಿ ಭಾಗವಹಿಸಲಾರಂಭಿಸಿದಳು. ಹಿಂದೀ ಕಲಿತಳು; ಸ್ತ್ರೀ ಸಮಸ್ಯೆಗಳನ್ನು ಅಧ್ಯಯನ ಮಾಡತೊಡಗಿದಳು. ಸಂಗೀತ ಕಲೆಗಳಲ್ಲಿ ಅವಳ ಅಭಿರುಚಿ ಬೆಳೆಯಿತು. ಅವಳ ಮನಸ್ಸಿಗೆ ತುಕ್ಕು

ಹಿಡಿಯದಂತೆ ಯಾವ ಚಟುವಟಿಕೆಯಲ್ಲಾದರೂ ಅವಳು ನಿರತಳಾಗಿರಲೆಂದು ವಾಮನರಾಯರೂ ಪ್ರೋತ್ಸಾಹಿಸುತ್ತ ಬಂದರು.

ಆರು ವರ್ಷ ಕಳೆಯಿತು.

ಆ ಆರು ವರ್ಷದಲ್ಲಿ ವಾಮನರಾಯರ ಜೀವನದಲ್ಲಿ ಹಲವು ಬದಲಾವಣೆಗಳಾದವು. ಸಾರ್ವಜನಿಕ ಕಾರ್ಯಗಳಲ್ಲಿ ಅವರು ಆಸಕ್ತಿ ವಹಿಸಿ ಕೆಲಸಮಾಡತೊಡಗಿದರು. ಕನ್ನಡ ಚಳವಳಿ ಅವರನ್ನು ಸೆಳೆಯಿತು. ಮುಂಬಯಿಯ ಕನ್ನಡ ಜನಕ್ಕೆ ಅವರು ಹಿರಿಯ ನಾಯಕರಾದರು. ಸ್ವಭಾವಜನ್ಯವಾಗಿಯೇ ನಾಡು ನುಡಿಗಳ ಬಗೆಗೆ ಅಭಿಮಾನ ತಳೆದಿದ್ದ ರಾಯರು ಮುಂಬಯಿಯಲ್ಲಿ ಕನ್ನಡಿಗರ ಒಂದು ಕೂಟವನ್ನು ಕಟ್ಟುವ ಪರಿಸ್ಥಿತಿ ಒದಗಿತು. ಆ ಕಾರ್ಯವನ್ನು ಅವರು ಸಂತೋಷದಿಂದ ಕೈಕೊಂಡರು. ಅವರ ಹಿಂದೆ ಕನ್ನಡ ಭಕ್ತರ ತಂಡವೊಂದು ತಾನಾಗಿಯೇ ಕಟ್ಟಿಕೊಂಡಿತು.

ಮಧುಸೂದನ ಮುಂಬಯಿಗೆ ಮೊದಲು ಬಂದದ್ದು ಇಂಥ ಸುವರ್ಣ ಸಂಧಿಯಲ್ಲಿ; ನಿರಾಶೆಯಿಂದ ಮುಂಕುಬಡಿದು ಕುಳಿತಿದ್ದ ವಾಮನರಾಯರು ಹಳೆಯ ಪೊರೆ ಕಳಚಿ ಹೊಸ ಚೈತನ್ಯಕ್ಕೆ ಧುಮುಕಿದ್ದ ಸಂದರ್ಭದಲ್ಲಿ.

ಅಂದಿನ ಅವನ ಸಂಗೀತಕ್ಕೂ ಸುಮಾ ಬಂದಿದ್ದಳು. ಆದರೆ ಆಗ ಮಧುಸೂದನನನ್ನು ದೂರದಿಂದ ನೋಡಿದುದೆಷ್ಟೋ ಅಷ್ಟೆ. ಅವನ ಸಂಗೀತವನ್ನು ಅವಳು ಶ್ಲಾಘಿಸಿದ್ದಳೇ ವಿನಾ ಮನಸ್ಸು ಅದರಿಂದ ಮುಂದಕ್ಕೆ ಹೋಗಿರಲಿಲ್ಲ.

ಅಂದಿಗೂ ಇಂದಿಗೂ ಕಳೆದ ಕಾಲದ ಒಂದು ಅಂತರದಲ್ಲಿ ಅವಳ ಮನಸ್ಸಿನಲ್ಲಿ ಏನೋ ಮಾರ್ಪಾಟಾಗಿತ್ತು. ಮಧುಸೂದನನ ವ್ಯಕ್ತಿತ್ವ ಅವಳಿಗರ್ಥವಾಗದ ರೀತಿಯಲ್ಲಿ ಅವಳನ್ನು ಆಕರ್ಷಿಸಿತ್ತು.

ಅಂದಿನ ಕಚೇರಿ ಕೇಳಿ ಸುಮ್ಮನೆ ಮೆಚ್ಚಿ ಬಂದಿದ್ದವಳು ಇಂದಿನ ಕಚೇರಿಯಿಂದ ಹಿಂತಿರುಗುವಾಗ ಪ್ರಕ್ಷುಬ್ಧಳಾಗಿದ್ದಳು. ಕಚೇರಿ ಕೇಳುತ್ತಿದ್ದಾಗಲೇ ಅವಳಲ್ಲಿ ವಿಕಾರ ಮೂಡಿತ್ತು. ಅವನ ಹಾಡಿಕೆ ಅವಳ ಅಂತರಂಗದಲ್ಲಿ ಸುಪ್ತವಾಗಿದ್ದ ಬಯಕೆಯ ಫಣಿಯನ್ನು ಹೊಡೆದೆಬ್ಬಿಸಿತು. ಆ ವಿಕಾರದ ಉಲ್ಬಣದಲ್ಲಿ ಅವಳು ತಲ್ಲಣಿಸಿದಳು.

ಮನೆಗೆ ಬಂದವಳೇ ಊಟಮಾಡದೆ ತನ್ನ ರೂಮಿಗೆ ಹೋಗಿ ಮಲಗಿ

ಬಿಟ್ಟಳು. ಮಧುಸೂದನನ ರೂಪ ಅವಳ ಕಣ್ಣಿಗೆ ಕಟ್ಟಿತ್ತು; ಅವನ ಹಾಡಿಕೆ ಅವಳ ಕಿವಿಯಲ್ಲಿ ಪ್ರತಿಧ್ವನಿಕೊಡುತ್ತಿತ್ತು. ಅಯಸ್ಕಾಂತಕ್ಕೆ ತಗಲುವ ಲೋಹ ದಂತೆ ಅವಳ ಮನಸ್ಸು ಅವನನ್ನು ಸೇರಿತು.

ಆ ಅನುಭವದಲ್ಲಿ ಸುಮಾ ಹೆದರಿದಳು. ಯಾವ ಬಯಕೆ ತನ್ನನ್ನು ಯಾವ ಪಪಾತಕ್ಕೆ ತಳ್ಳುವುದೋ ಎಂದು ಭೀತಳಾದಳು. ಗಟ್ಟಿಯಾಗಿ ಕಣ್ಣು ಮುಚ್ಚಿ ಮನಸ್ಸನ್ನು ಮುತ್ತುತ್ತಿದ್ದ ಆಶಾಭೂತವನ್ನು ಹೊಡೆದಟ್ಟಲು ಯತ್ನಿಸಿ ದಳು. ಆದರೆ ಅದು ದೂರ ಸರಿಯದೆ ಕವಿದು ಬಂದು ಅವಳನ್ನಪ್ಪಿ ಗಹಗಹಿಸಿ ನಕ್ಕಿತು.

ವಾಮನರಾಯರ ಅನಿರೀಕ್ಷಿತ ಪ್ರಯಾಣ ಕೆರಳಿದ್ದ ಆ ಆಶಾನಲಕ್ಕೆ ಆಜ್ಯಹೊಯ್ದಿತು.

ಅವರಿಗೂ ಆಗಲೇ ಪ್ರಯಾಣ ನೆಗಳಬೇಕೆ? ಡ್ರೈವರ್ ಕೂಸಿಗೂ ಕಾಹಿಲೆ ಆಗಲೇ ಕಾದಿತ್ತೆ?

ಸಂಜೆ ಮಧುಸೂದನನನ್ನು ಹೊರಗೆ ಹೋಗಲು ಕರೆದಾಗಲೂ ಅವಳ ಮನಸ್ಸು ಸ್ತಿಮಿತದಲ್ಲಿರಲಿಲ್ಲ. ಬುದ್ಧಿ ಬೇಡವೆನ್ನುತ್ತಿದ್ದರೂ ಮನಸ್ಸು ಹೋಗಿ ಅವನನ್ನು ಕರೆಯಿತು. ಅವನು ಒಪ್ಪಿ ಅವಳೊಡನೆ ಬಂದಾಗಲೂ ಅವಳಿಗೆ ಸಂದೇಹವಿದ್ದೇ ಇತ್ತು. ಅವಳ ಬಗೆಗೆ ಅವನ ಮನಸ್ಸು ಹೇಗಿತ್ತೋ ಎನ್ನು ವುದನ್ನು ತಿಳಿಯಲವಕಾಶವಿರಲಿಲ್ಲ. ಆದರೆ ಅವನು ಅವಳನ್ನು ಮಾತಾಡಿಸಿದ ಬಗೆ, ಅವಳು ಮುಗ್ಗರಿಸಿದಾಗ ಅಪ್ಪಿ ಹಿಡಿದುಕೊಂಡ ರೀತಿ ಅವಳ ಸಂಶಯ ವನ್ನು ಪರಿಹರಿಸಿಬಿಟ್ಟವು. ಆ ನಿಜ ಅವಳ ಮನಸ್ಸಿಗೆ ಹೊಳೆದಾಗ ಮೈಯಲ್ಲಿ ವಿದ್ಯುತ್ತು ಹರಿದ ಹಾಗಾಯಿತು. ತನ್ನಂತೆಯೇ ಅವನೂ ತನ್ನನ್ನು ಬಯಸಿರುವ ನೆಂದು ಅವಳು ಖಚಿತ ಮಾಡಿಕೊಂಡಳು.

ಆ ರಾತ್ರಿ ಅವಳ ಕಣ್ಣು ಮುಂದೆ ಭೋಗಮಂದಿರದ ಬಾಗಿಲು ತೆರೆಯಿತು. ಅದು ತೆರೆದಾಗ ಒಳಗೆ ಹೋಗಲೊಲ್ಲೆ ಎನ್ನುವ ಶಕ್ತಿ ಅವಳಿಗಿರಲಿಲ್ಲ. ಪುರುಷ ಸುಖದಿಂದ ವಂಚಿತವಾಗಿದ್ದ ಜೀವ ಅದಕ್ಕೆ ಹಾತೊರೆಯಿತು; ದೇಹ ಅದಕ್ಕೆ ತಾನಾಗಿಯೇ ಮಣಿಯಿತು. ಮಧುಸೂದನನ ಅಪ್ಪುಗೆಯಲ್ಲಿ ಅವಳು ಬೆಣ್ಣೆ ಯಂತೆ ಕರಗಿಹೋದಳು.

೧೩

ಕನಕಾಂಗಿ ಮದರಾಸಿಗೆ ಬಂದು ಒಂದು ವಾರವಾಗಿತ್ತು.

ಬೇಸರವಾಗಿದೆ, ನಾಲ್ಕು ದಿವಸ ಬಂದು ಹೋಗು ಎಂದು ಲಲಿತ ಬರೆದಿದ್ದ ಕಾಗದದಲ್ಲಿ ಅವಳಿಗೆ ವಿಶೇಷ ಅರ್ಥವೇನೂ ಹೊಳೆದಿರಲಿಲ್ಲ. ಅವಳೂ ಮದರಾಸಿಗೆ ಬಂದು ತುಂಬ ದಿವಸವಾಗಿತ್ತು. ನಾಲ್ಕು ದಿವಸ ಅತ್ತೆಯ ಮನೆಯಲ್ಲಿದ್ದು ಅತ್ತಿಗೆಯೊಡನೆ ಹಾಯಾಗಿ ಓಡಾಡಿಕೊಂಡಿರುವುದು ಅವಳಿಗೂ ಬೇಕಾಗಿತ್ತು. ಅಂತೆಯೆ ಕಾಗದ ಕಂಡೊಡನೆ ತಡಮಾಡದೆ ಹೊರಟು ಬಂದಳು. ಸುಂದರಂ ಅಯ್ಯರರು ಭಾವ ಮೈದುನನ ಜೊತೆ ಮಾಡಿ ಮಗಳನ್ನು ಬೀಗರ ಮನೆಗೆ ಕಳಿಸಿಕೊಟ್ಟರು.

ಕನಕಾಂಗಿ ಮದರಾಸಿಗೆ ಬರುವ ಮುನ್ನ ಅವಳಿಗೆ ಅಲ್ಲಿನ ಸಂಗತಿ ಯಾವುದೂ ತಿಳಿದಿರಲಿಲ್ಲ. ಲಲಿತನ ಮದುವೆಯ ಪ್ರಸ್ತಾಪ, ಅವಳು ಹುಡುಗನನ್ನು ಒಪ್ಪಿಕೊಳ್ಳದಿದ್ದುದು, ಅಯ್ಯರರಿಗೆ ಮಗಳ ಮೇಲೆ ಅಸಮಾಧಾನ ವಾಗಿದ್ದುದು – ಈ ಯಾವ ಸಮಾಚಾರವೂ ಅವಳಿಗೆ ಗೊತ್ತಿರಲಿಲ್ಲ. ಅವಳು ಬಂದ ಮಾರನೆಯ ದಿನ ಮೀನಾಕ್ಷಮ್ಮನವರು ಸೊಸೆಯನ್ನು ಹತ್ತಿರ ಕೂಡಿಸಿ ಕೊಂಡು ಸಂಗತಿಯನ್ನು ಸೂಕ್ಷ್ಮವಾಗಿ ತಿಳಿಸಿದರು.

ಕನಕಾಂಗಿ ಊರಿಗೆ ಬಂದ ಮಾರನೆಯ ದಿನ ಒಂದು ಘಟನೆ ನಡೆಯಿತು.

ಅಂದು ಬೆಳಿಗ್ಗೆ ಲಲಿತ ಕನಕಾಂಗಿ ರೂಮಿನಲ್ಲಿ ಮಾತಾಡುತ್ತ ಕುಳಿತಿದ್ದರು. ಅಯ್ಯರರು ತಿರುಗಾಡಿಕೊಂಡು ಬರಲು ಹೊರಗೆ ಹೋಗಿದ್ದರು. ಮೀನಾಕ್ಷಮ್ಮನವರು ಹಿತ್ತಿಲ ಕಡೆ ಇದ್ದರು. ಆಳು 'ಹಿಂದೂ' ಪತ್ರಿಕೆ ತಂದು ರೂಮಿನೊಳಗಿಟ್ಟು ಹೊರಟುಹೋದ. ಲಲಿತ ಅದನ್ನು ಕೈಗೆತ್ತಿಕೊಂಡು ಪುಟ

ತಿರುವಿಹಾಕತೊಡಗಿದಳು. ಮಾತು ಸಾಗುತ್ತಲೇ ಇತ್ತು. ಕನಕಾಂಗಿ ಮಾತಿನ ಮಲ್ಲಿ.

ಇದ್ದಕ್ಕಿದ್ದ ಹಾಗೆ ಲಲಿತ ಮಾತು ನಿಲ್ಲಿಸಿಬಿಟ್ಟಳು. ಕನಕಾಂಗಿ ಆಡುತ್ತಿದ್ದ ಮಾತು ಅವಳ ಕಿವಿಯ ಮೇಲೆ ಬೀಳದಂತಾಯಿತು. ಯಾವುದೋ ಸುದ್ದಿ ತಟಕ್ಕನೆ ಅವಳ ಗಮನ ಸೆಳೆಯಿತು. ಆತುರದಿಂದ ಅದನ್ನು ಓದತೊಡಗಿದಳು. ಅವಳ ಅನ್ಯಮನಸ್ಕತೆಯನ್ನು ಗಮನಿಸದಿದ್ದ ಕನಕಾಂಗಿ ಮಾತಿನ ಹೊಳೆಯನ್ನು ಹರಿಸುತ್ತಲೇ ಇದ್ದಳು.

ಸುದ್ದಿ ಓದಿ ಲಲಿತನ ಮುಖಕ್ಕೆ ಕೆಂಪಡರಿತು. ನಾಲಗೆ ಥಟ್ಟನೆ ಬಿಸಿಯಾಯಿತು. ಕುತ್ತಿಗೆಯ ಸೆಲೆ ಉಬ್ಬಿ ಬಂದಿತು. ಪತ್ರಿಕೆಯನ್ನು ಪಕ್ಕಕ್ಕೆ ಬಿಸುಟು ಮಂಚದ ಮೇಲೆ ಹೋಗಿ ಬೋರಲಾಗಿ ಬಿದ್ದುಕೊಂಡುಬಿಟ್ಟಳು. ಅಳು ಒತ್ತರಿಸಿ ಬಂದಿತು. ಬಾಯಿ ಮುಚ್ಚಿಕೊಂಡು ಬಿಕ್ಕಿಬಿಕ್ಕಿ ಅಳತೊಡಗಿದಳು.

ಕನಕಾಂಗಿಗೆ ಒಂದೇ ಕಾಲದಲ್ಲಿ ಅಚ್ಚರಿ ಗಾಬರಿಗಳೆರಡೂ ಉಂಟಾದವು. ಸೋಫಾದಿಂದ ಎದ್ದು ಹಾರಿ ಹೋಗಿ ಲಲಿತನ ಪಕ್ಕದಲ್ಲಿ ಕುಳಿತುಕೊಂಡಳು.

"ಲಲಿತಾ, ಯಾಕಮ್ಮಾ? ಏನಾಯಿತೆ?"

ಲಲಿತ ಉತ್ತರ ಕೊಡಲಿಲ್ಲ. ತಡೆಯಲಾರದ ದುಃಖದಿಂದ ಅವಳ ದೇಹಾದ್ಯಂತವೂ ಕಂಪಿಸುತ್ತಿತ್ತು. ಕನಕಾಂಗಿ ಲಲಿತನ ಮುಖವನ್ನು ಮೆಲ್ಲನೆ ನೇವರಿಸುತ್ತ ಅವಳ ಭುಜ ಹಿಡಿದು ತನ್ನ ಕಡೆಗೆ ತಿರುಗಿಸಿಕೊಂಡಳು.

"ಹೇಳುವುದಿಲ್ಲವೇನೆ?"

"ನನ್ನನ್ನು ಏನೂ ಕೇಳಬೇಡ, ಕನಕಾ."

"ಕೇಳಬೇಡ ಎಂದರೆ ಏನರ್ಥ? ಏನಾಯಿತೆಂದು ಹೇಳಬಾರದೆ?"

"ನನಗೆ ಏನೂ ಆಗಿಲ್ಲ."

"ಏನೂ ಆಗದೆ ಅಳುತ್ತಿದ್ದೀಯಾ?"

ಆ ಮಾತಿಗೆ ಲಲಿತ ಉತ್ತರ ಕೊಡಲಿಲ್ಲ. ಬಿಕ್ಕಳಿಸುತ್ತಲೇ ಮಲಗಿದ್ದಳು. ಕನಕಾಂಗಿ ಅವಳ ಮೈಯನ್ನು ಮೃದುವಾಗಿ ಸವರುತ್ತ ಅನುನಯದ ಧ್ವನಿಯಲ್ಲಿ,

"ನೀನು ಹೇಳದಿದ್ದರೆ ನಾನು ಎದ್ದು ಹೋಗುತ್ತೇನೆ. ನಿನ್ನ ಜೊತೆ ಮಾತಾಡುವುದಿಲ್ಲ."

"ಬೇಡ ಕುಳಿತುಕೋ."

" ಹಾಗಾದರೆ ಹೇಳು ಮತ್ತೆ ?"

ಲಲಿತ ಮಾತಿಲ್ಲದೆ ಮೌನವಾಗಿ ಪತ್ರಿಕೆಯ ಕಡೆ ಕೈ ತೋರಿಸಿದಳು. ಕನಕಾಂಗಿಗೆ ಅರ್ಥವಾಗಲಿಲ್ಲ.

" ಅದರಲ್ಲೇನಿದೆ ?"

" ನೀನೇ ನೋಡು "

ಎಂದು ಒಂದು ಕೈಯೂರಿ ಹಾಸುಗೆಯ ಮೇಲೆ ಎದ್ದು ಕುಳಿತು 'ಹಿಂದೂ' ಪತ್ರಿಕೆಯನ್ನೆತ್ತಿ ಕನಕಾಂಗಿಯ ಕೈಗಿತ್ತು ತಾನು ಓದಿದ ಸುದ್ದಿಯ ಕಡೆ ಬೆರಳುಮಾಡಿ ತೋರಿಸಿದಳು. ಕನಕಾಂಗಿ ಅದನ್ನು ಆಮೂಲಾಗ್ರವಾಗಿ ಓದಿದಳು.

" ಮುಂಬಯಿಯ ರಸಿಕರಿಗೆ ಮೈಸೂರಿನ ಪ್ರಸಿದ್ಧ ವಿದ್ವಾಂಸ ಮಧುಸೂದನರ ಸಂಗೀತ ಕಚೇರಿಯನ್ನು ಮತ್ತೆ ಕೇಳುವ ಅವಕಾಶ ಇಷ್ಟು ಬೇಗ ಒದಗಿದುದು ಪುಣ್ಯವೆಂದೇ ಹೇಳಬೇಕು. ಕೇವಲ ಮೂರು ತಿಂಗಳ ಹಿಂದೆ ಅವರ ಕಚೇರಿ ಮೊದಲನೆಯ ಬಾರಿ ಇಲ್ಲಿ ನಡೆದಾಗಲೇ ರಸಿಕಜನಕ್ಕೆ ಅವರು ತುಂಬ ಮೆಚ್ಚಿಕೆಯಾಗಿದ್ದರು. ನಿನ್ನೆಯ ಕಚೇರಿ ಅದಕ್ಕೂ ಮಿಗಿಲೆನ್ನಿಸಿತು. ಶ್ರೀಯುತರು ಅಪರೂಪವಾದ ರಾಗಗಳನ್ನು ಹಾಡಿ ತಮ್ಮ ವೈದುಷ್ಯವನ್ನೂ ಪ್ರತಿಭೆಯನ್ನೂ ಪ್ರಕಾಶಪಡಿಸಿದರು. ದ್ವಾರಂರವರಂಥ ನಿಸ್ಸೀಮ ವಿದ್ವಾಂಸರಲ್ಲದೆ ಬೇರೆ ಯಾರಾದರೂ ಆಗಿದ್ದರೆ ಮಧುಸೂದನರ ಸತ್ತ್ವಯುಕ್ತವಾದ ಆ ಹಾಡಿಕೆಗೆ ಸರಿದೂಗುವುದು ಸಾಧ್ಯವಾಗುತ್ತಿರಲಿಲ್ಲ. ಈ ಗಾಯಕರು ತಮ್ಮ ವಿಶಿಷ್ಟವಾದ ಶೈಲಿ ಸಂಪ್ರದಾಯಗಳಿಂದ ಈ ಕಿರಿಯ ವಯಸ್ಸಿಗೇ ಇಷ್ಟು ಪ್ರಖ್ಯಾತಿಗೆ ಬಂದಿರುವುದು ಅಭಿನಂದನಾರ್ಹ. ಅವರ ಕಚೇರಿಯನ್ನೇರ್ಪಡಿಸಿ ಮುಂಬಯಿಯ ಜನತೆಗೆ ಕರ್ಣಾಟಕದ ಶ್ರೇಷ್ಠ ಕಲಾವಿದರೊಬ್ಬರ ಗಾಯನ ಕೇಳುವ ಅವಕಾಶ ಕಲ್ಪಿಸಿದ್ದಕ್ಕಾಗಿ ಕನ್ನಡ ಸಂಘದ ಕಾರ್ಯಕರ್ತರು ವಂದ್ಯರು."

ಕನಕಾಂಗಿ ಸುದ್ದಿಯನ್ನು ಒಂದಲ್ಲ, ಎರಡು ಸಲ ಓದಿ ಪತ್ರಿಕೆಯನ್ನು ಪಕ್ಕದಲ್ಲಿಟ್ಟಳು.

" ಇದಕ್ಕೇಕೆ ಅಳಬೇಕು ?"

ಲಲಿತ ಪ್ರತ್ಯುತ್ತರ ಕೊಡದೆ ಕಂಬನಿಯ ತೆರೆ ಹರಿಯದಿದ್ದ ಕಣ್ಣುಗಳಿಂದ

ಕನಕಾಂಗಿಯನ್ನು ದುರದುರನೆ ನೋಡಿದಳು. ಕನಕಾಂಗಿಯ ಮನಸ್ಸು ಏನನ್ನೋ ಯೋಚಿಸುತ್ತಿತ್ತು.

"ನನ್ನ ಮದುವೆಯಲ್ಲಿ ಹಾಡಿದವರು ಇವರೇ ಅಲ್ಲವಾ ?"

ಲಲಿತ ಮಾತಿಲ್ಲದೆ ಸುಮ್ಮನೆ ತಲೆ ಆಡಿಸಿದಳು.

"ಇವರನ್ನು ನೀನು ಬಲ್ಲೆಯೇನು ?"

ಲಲಿತನಿಗೆ ಕನಕಾಂಗಿಯ ಮುಖ ನೋಡುವುದಕ್ಕಾಗಲಿಲ್ಲ. ಎರಡು ಕೈಗಳಿಂದಲೂ ಮುಖ ಮುಚ್ಚಿಕೊಂಡು ಕುಳಿತಳು. ಕನಕಾಂಗಿಯ ಮುಖದ ಮೇಲೆ ಎಳೆನಗು ಮೂಡಿತು. ಅವಳ ಮನಸ್ಸಿನಲ್ಲಿ ಮೂಡಿದ್ದ ಸಮಸ್ಯೆ ಗಂಟು ಬಿಚ್ಚಿಕೊಳ್ಳತೊಡಗಿತು. ರೂಮಿನ ಬಾಗಿಲನ್ನು ಮುಚ್ಚಿ ಲಲಿತನ ಹತ್ತಿರ ಬಂದು ಕುಳಿತುಕೊಂಡು ಅವಳನ್ನು ಮೆಲ್ಲನೆ ಅಪ್ಪಿದಳು.

"ಅದೇನು ನನ್ನ ಹತ್ತಿರ ಹೇಳು, ಚಿನ್ನಾ"

ಎಂದಳು. ಲಲಿತ ನಿರುತ್ತರಳಾಗಿದ್ದಳು. ಮುಖ ಮುಚ್ಚಿದ ಕೈ ತೆಗೆಯಲಿಲ್ಲ. ಕನಕಾಂಗಿ ಅವಳ ಕೈಯನ್ನು ಮೆಲ್ಲನೆ ಬಿಡಿಸಿ ಅವಳ ಕೆನ್ನೆಯನ್ನು ಹಿಡಿದು ತನ್ನ ಕಡೆಗೆ ತಿರುಗಿಸಿಕೊಂಡಳು.

"ಹೇಳುವುದಿಲ್ಲವಾ ?"

ಅಡಗುತ್ತಿದ್ದ ದುಃಖ ಮತ್ತೆ ಒತ್ತರಿಸಿ ಬಂದಿತು. ಲಲಿತ ಕನಕಾಂಗಿಯ ಭುಜದ ಮೇಲೆ ತಲೆಯಿಟ್ಟು ರೋದಿಸತೊಡಗಿದಳು. ಅವಳನ್ನು ಸಂತೈಸುವುದು ಕನಕಾಂಗಿಗೆ ಕಷ್ಟವಾಯಿತು. ಅವಳು ಅಸಮಾಧಾನ ಸೂಚಿಸುವ ಧ್ವನಿಯಲ್ಲಿ,

"ನೀನು ಹೀಗೆಲ್ಲಾ ಮಾಡಿದರೆ ನಾನು ಎದ್ದು ಹೋಗುತ್ತೇನಮ್ಮಾ. ಹೇಳು ಎಂದರೆ ಎಷ್ಟು ಜಂಬವೆ ನಿನಗೆ ?"

"ನನಗೆ ಜಂಬವಲ್ಲ, ಕನಕಾ. ನಾನು ದುಃಖದಲ್ಲಿ ಬೇಯುತ್ತಿದೇನೆ."

"ಅದೇನು ಬಾಯಿಬಿಟ್ಟು ಹೇಳಬಾರದೆ ? ನನ್ನ ಹತ್ತಿರವೂ ಗುಟ್ಟೇನು ?"

"ಅದು ನಾನೊಬ್ಬಳೇ ಅನುಭವಿಸಬೇಕಾದ ಸಂಕಟ, ಕನಕಾ. ನಿನಗೂ ಹೇಳಬಾರದು."

"ಹಾಗಾದರೆ ನನ್ನ ಮೇಲೆ ನಿನಗೆ ಇರುವ ಪ್ರೀತಿ ಎಷ್ಟು ಎನ್ನುವುದು ಗೊತ್ತಾಯಿತು, ಬಿಡು"

ಎಂದು ಕನಕಾಂಗಿ ಸರಕ್ಕನೆ ದೂರ ಸರಿದು ಕುಳಿತಳು. ಲಲಿತನಿಗೆ ಕರುಳು ಹಿಂಡಿದ ಹಾಗಾಯಿತು.

"ಕೋಪಿಸಿಕೊಳ್ಳಬೇಡ, ಕನಕಾಂಗಿ."

ಕನಕಾಂಗಿ ಮಾತಾಡದೆ ಸುಮ್ಮನೆ ಕುಳಿತಳು. ಅವಳ ಮನಸ್ಸಿನಲ್ಲೂ ಅಸಮಾಧಾನದ ಅಲೆ ಏಳುತ್ತಿತ್ತು. ಲಲಿತ ಹತ್ತಿರ ಜರುಗಿ ಅವಳ ಮೈಗೆ ಮೈ ತಾಕುವ ಹಾಗೆ ಕುಳಿತು ಭುಜದ ಮೇಲೆ ಕೈಯಿಟ್ಟು,

"ನೀನು ಯಾರ ಹತ್ತಿರವೂ ಹೇಳುವುದಿಲ್ಲವೆಂದು ಮಾತು ಕೊಟ್ಟರೆ ಹೇಳುತ್ತೇನೆ."

"ನಾನು ಯಾರ ಹತ್ತಿರ ಹೇಳಬೇಕೆ, ಲಲಿತಾ? ನನ್ನ ಮನಸ್ಸು ನಿನಗೆ ತಿಳಿಯದೆ?"

"ಅಮ್ಮನ ಹತ್ತಿರವೂ ಹೇಳಬಾರದು. ಹೇಳಿದರೆ ನನ್ನಾಣೆ."

"ಥೂ, ಬಿಡತು ಅನ್ನು. ಆಣೆ ಪ್ರಮಾಣ ಮಾಡಬೇಡ. ನಮ್ಮ ವಿಷಯ ದೊಡ್ಡವರಿಗೇಕೆ ತಿಳಿಯಬೇಕು?"

"ನನಗೆ ತುಂಬ ಹೆದರಿಕೆ, ಕನಕಾ. ಅದು ಯಾರಿಗಾದರೂ ತಿಳಿದರೆ ಪ್ರಾಣ ಹೋಗುವಷ್ಟು ಅವಮಾನವಾಗತ್ತೆ."

"ಯಾರಿಗೂ ತಿಳಿಯುವುದಿಲ್ಲ ಧೈರ್ಯವಾಗಿರು. ನಿನ್ನ ಗುಟ್ಟು ರಕ್ಷಿಸುವ ಭಾರ ನನ್ನದು"

ಎಂದು ನುಡಿದು ತನ್ನ ಭುಜದ ಮೇಲಿದ್ದ ಲಲಿತನ ಕೈಯನ್ನು ಹಿಡಿದು ಮೃದುವಾಗಿ ಅದುಮಿದಳು. ವಾತ್ಸಲ್ಯದ ಆ ಕೈಯೊತ್ತಿನಲ್ಲಿ ಮಾತಿಗೂ ಮೀರಿದ ಭರವಸೆಯಿತ್ತು.

ಲಲಿತನ ಗುಟ್ಟು ಕನಕಾಂಗಿಗೆ ತಿಳಿಯುವುದಕ್ಕೆ ಬಹಳ ಹೊತ್ತು ಬೇಕಾಗಲಿಲ್ಲ. ಅವಳು ಅದನ್ನು ಕೇಳಿ ಲಲಿತನ ಮುಖವನ್ನು ಸಮಸ್ಯಾತ್ಮಕವಾಗಿ ನೋಡಿದಳು.

"ಅದಕ್ಕೇ ಮದುವೆ ಬೇಡವೆಂದೆಯಾ?"

"ಹೌದು. ನಿನಗೆ ಯಾರು ಅದನ್ನು ಹೇಳಿದವರು?"

"ನೀನೇ ಹೇಳು."

"ಅಮ್ಮ ಹೇಳಿದಳೆ?"

ಕನಕಾಂಗಿ ಮಾತಿಲ್ಲದೆ ಸುಮ್ಮನೆ ತಲೆಹಾಕಿದಳು.

" ಯಾವಾಗ ಹೇಳಿದಳು ?"

" ನಾನು ಬಂದ ಮರುದಿನವೇ ಹೇಳಿದರು."

ಆ ಮಾತು ಕೇಳಿ ಲಲಿತನಿಗೆ ತಾಯಿಯ ಮೇಲೆ ಅಸಮಾಧಾನ ಮೂಡಿತು. ಅವಳು ಹೆಚ್ಚು ಮಾತಾಡದೆ ಸುಮ್ಮನೆ ಕುಳಿತಳು. ಕನಕಾಂಗಿಯೂ ಯೋಚಿಸುತ್ತಿದ್ದಳು. ಸಮಸ್ಯೆ ಅವಳಿಗೂ ಅಗಾಧವಾಗಿ ಕಂಡಿತು. ಇಂಥ ವಿಷಯದಲ್ಲಿ ಸಲಹೆ ಕೊಡುವ ಅನುಭವ ಅವಳಿಗಿರಲಿಲ್ಲ. ಅವಳೂ ಸ್ವಲ್ಪ ಹೊತ್ತು ಸುಮ್ಮನಿದ್ದಳು. ಬಳಿಕ,

" ಹೋಗಲಿ, ಈಗೇನು ಮಾಡಬೇಕೆನ್ನುತ್ತೀ ?"

" ನನಗೆ ಒಂದೂ ತೋರುವುದಿಲ್ಲ. ನೀನೇ ಹೇಳು."

ಅವರ ಮನಸ್ಸು ಬೇರೆ ಕಡೆಗೆ ತಿರುಗಿರಬಹುದೆ ?"

" ನಾನು ಹೇಗೆ ಹೇಳಲಿ ?"

" ಅವರ ಪ್ರೇಮ ನಿಜವೆಂದು ದೃಢಪಡಿಸಿಕೊಳ್ಳದೆಯೆ ನಿನ್ನ ಮನಸ್ಸನ್ನು ಅವರಿಗೆ ಒಪ್ಪಿಸಿದೆಯಾ ?"

ಲಲಿತ ತಲೆ ತಗ್ಗಿಸಿದಳು. ಒಂದು ನಿಮಿಷ ಅವಳ ಬಾಯಲ್ಲಿ ಮಾತೂ ಹೊರಡಲಿಲ್ಲ. ಬಳಿಕ ನಿಧಾನವಾಗಿ,

" ನಿಜವೆಂದು ತಿಳಿದೇ ಹಾಗೆ ಮಾಡಿದೆ."

" ಹಾಗಾದರೆ ಅದು ಸುಳ್ಳಾಯಿತಲ್ಲ."

" ನನ್ನನ್ನು ಕೇಳಿದರೆ ಏನು ಹೇಳಲಿ ಕನಕಾ ? ನನ್ನ ಕೈ ಬಿಟ್ಟಿರುವ ಅವರ ಮನಸ್ಸನ್ನು ಕೇಳಬೇಕು "

ಎಂದು ಸುಮ್ಮನಾದಳು. ಅವಳ ಕಣ್ಣು ಮತ್ತೆ ಹನಿಗೂಡಿತು.

ಕನಕಾಂಗಿಯ ಮನಸ್ಸೂ ಅದೇ ದಿಕ್ಕಿನಲ್ಲಿ ಯೋಚಿಸುತ್ತಿತ್ತು. ಲಲಿತನಿಂದ ಮಧುಸೂದನನಿಗೆ ಯಾವ ಅಪಚಾರವೂ ಆಗಿರಲಿಲ್ಲ. ಆದರೆ ಮಾವನವರಿಂದ ಆಗಿತ್ತೆ ಎಂದು ಅವಳ ಬುದ್ಧಿ ಪ್ರಶ್ನಿಸಿತು. ಅವರು ಅವನಿಗೆ ಏನು ಬರೆದಿದ್ದಾರೆನ್ನುವುದು ಇಬ್ಬರಿಗೂ ಗೊತ್ತಿರಲಿಲ್ಲ. ಏನೋ ಬರೆದಿರಬಹುದು, ಅದರಿಂದ ಅವನ ಮನಸ್ಸು ಕೆಟ್ಟಿರಬಹುದು ಎಂದು ಊಹಿಸುವುದು ಮಾತ್ರ ಸಾಧ್ಯವಿತ್ತು. ಅದು ಮದುವೆಯ ಪ್ರಸ್ತಾಪವೇ ಇದ್ದಿರಬಹುದೆನ್ನುವುದರಲ್ಲಿ

ಅನುಮಾನವಿರಲಿಲ್ಲ. ಇಲ್ಲದಿದ್ದರೆ ಮಧುಸೂದನ ಲಲಿತನ ಬಗೆಗೆ ಇದ್ದಕ್ಕಿದ್ದ ಹಾಗೆ ಹೀಗಾಗಲು ಕಾರಣವೇನು ?

ಕನಕಾಂಗಿಗೂ ಒಂದು ವಿಷಯ ಸ್ಪಷ್ಟವಾಗದೆ ಇತ್ತು. ಮಧುಸೂದನ ಲಲಿತನಿಗೇಕೆ ಬರೆದು ನಿಜಸ್ಥಿತಿ ತಿಳಿದುಕೊಳ್ಳಲಿಲ್ಲ? ಹಾಗೆ ಬರೆಯುವುದು ಅವನಿಗೆ ಬೇಡವಾಯಿತೆ? ಅವಳ ಕಾಗದಗಳಿಗೆ ಉತ್ತರವನ್ನೂ ಕೊಡದಿರುವಷ್ಟು ಅವಳ ವಿಷಯದಲ್ಲಿ ಬೇಸರವಾಯಿತೆ? ಯಾವುದನ್ನು ನಂಬಿ ಅವನ ಮನಸ್ಸು ಹೀಗಾಯಿತು ?

ಈ ಪ್ರಶ್ನೆಗಳಿಗೆ ಉತ್ತರ ದೊರೆಯುವುದು ಸುಲಭವಾಗಿರಲಿಲ್ಲ.

ಜೀವನದಲ್ಲಿ ಸುಖವಾಗಿ ಬೆಳೆದ ಶ್ರೀಮಂತ ಪುತ್ರಿ ಕನಕಾಂಗಿಗೆ ಪ್ರಪಂಚದ ಕಷ್ಟಗಳ ಅನುಭವವಿರಲಿಲ್ಲ. ಇಪ್ಪತ್ತೆರಡು ವರ್ಷದ ಅವಳ ಬಾಳಿನಲ್ಲಿ ಯಾವ ದುಃಖವೂ ಸುಳಿದಿರಲಿಲ್ಲ. ಮದುವೆಯಾದ ಮೇಲೆ ಶಿವಸ್ವಾಮಿ ಅವಳನ್ನು ಬಿಟ್ಟು ಇಂಗ್ಲೆಂಡಿಗೆ ತೆರಳಿದಾಗ ಜೀವನದಲ್ಲಿ ಮೊದಲನೆಯ ಸಲ ಅವಳ ಮನಸ್ಸಿಗೆ ವ್ಯಾಕುಲವಾಗಿತ್ತು. ಹೆಂಡತಿಯನ್ನು ಬಿಟ್ಟು ಹೋಗುವುದು ಅವನಿಗೂ ಕಷ್ಟವಾಗಿತ್ತು. ಅವಳಿಂದ ಬೀಳ್ಕೊಳ್ಳುವ ಮುನ್ನ ಅವಳ ರೂಮಿಗೆ ಹೋದಾಗ ಅವಳ ಮುಖ ಮ್ಲಾನವಾಗಿತ್ತು. ಶಿವಸ್ವಾಮಿ ಅವಳನ್ನು ಮೃದುವಾಗಿ ಅಪ್ಪಿ ಚುಂಬಿಸಿದ್ದ.

"ತುಂಬ ದೂರ ಹೊರಟು ಹೋಗುತ್ತೀರಿ. ಬರುವುದು ಇನ್ನು ಯಾವಾಗಲೋ"

ಎಂದು ಗದ್ಗದ ಕಂಠದಿಂದ ನುಡಿದಿದ್ದಳು. ಅವಳ ಉದ್ವೇಗದ ಸೋಂಕು ಅವನಿಗೂ ತಾಕಿತ್ತು.

"ಇನ್ನು ಆರೇ ತಿಂಗಳು, ಕನಕಾ. ಆಮೇಲೆ ನಿನ್ನನ್ನು ಒಂದು ದಿನವೂ ಬಿಟ್ಟುಹೋಗುವುದಿಲ್ಲ"

ಎಂದು ಸಂತೈಸಿದ್ದ. ಆ ಆರು ತಿಂಗಳು ಅವಳ ಭಾಗಕ್ಕೆ ಆರು ವರ್ಷದ ಹಾಗಾಯಿತು. ಮದುವೆಯಾಗುವುದು ಗಂಡ ಹೆಂಡತಿಯರು ಅಗಲುವುದಕ್ಕೇನು ಎಂದು ಅವಳ ಮನಸ್ಸು ನಿಷ್ಠುರದ ಪ್ರಶ್ನೆ ಹಾಕಿತ್ತು.

ಆದರೆ ಶಿವಸ್ವಾಮಿ ಅವಳಿಗೆ ಹದಿನೈದು ದಿನಕ್ಕೊಮ್ಮೆ ತಪ್ಪದೆ ಕಾಗದ

ಬರೆಯುತ್ತಿದ್ದ. ಅದು ಅವಳ ಮನಸ್ಸಿಗೆ ಸಮಾಧಾನ ನೀಡುತ್ತಿತ್ತು. ಅವನ ಆಗಮನದ ನಿರೀಕ್ಷೆ ಅಗಲಿಕೆಯ ನೋವನ್ನು ಕಡಮೆ ಮಾಡಿತ್ತು.

ವಿವಾಹಬಾಹಿರವಾದ ಪ್ರಣಯದ ವಿಷಯ ಕನಕಾಂಗಿಗೆ ಹೊಸದಾಗಿರಲಿಲ್ಲ. ಅಂಥ ಅನೇಕ ಸಂಗತಿಗಳನ್ನು ಅವಳು ಓದಿ ಕೇಳಿ ತಿಳಿದಿದ್ದಳು. ನಾಟಕವನ್ನು ನೋಡಿ ಬರುವ ಪ್ರೇಕ್ಷಕ ಆ ಸಮಯವಾದ ಮೇಲೆ ಅದನ್ನು ಮರೆಯುವಂತೆ ಅಂಥ ಘಟನೆಗಳು ಅವಳ ಮನಸ್ಸಿನಿಂದ ಸಹಜವಾಗಿಯೇ ಜಾರಿ ಹೋಗುತ್ತಿದ್ದವು. ಅವುಗಳಲ್ಲಿ ಅವಳಿಗೆ ಯಾವ ಆಪ್ತತೆಯೂ ಇರಲಿಲ್ಲ.

ಆದರೆ ಈಗಿನ ಪ್ರಸಂಗವೇ ಬೇರೆ. ಇದು ತೀರ ಹತ್ತಿರದ ಪ್ರಸಂಗ. ತನ್ನ ಸ್ವಂತ ಅತ್ತಿಗೆಯ ಪ್ರಣಯದ ಪ್ರಸಂಗ. ಅದೂ ಇತರರಿಗೆ ತಿಳಿಯದ ಗುಟ್ಟು. ಇದರಲ್ಲಿ ಹೇಗೆ ನಡೆದುಕೊಳ್ಳುವುದು ಸರಿ ಎನ್ನುವುದು ಅವಳಿಗೆ ಹೊಳೆಯಲಿಲ್ಲ. ಲಲಿತ ಏಕಾಂತ ದುಃಖದಲ್ಲಿ ಬೇಯುತ್ತಿರುವಳೆನ್ನುವುದೇನೋ ಕನಕಾಂಗಿಗೆ ಚೆನ್ನಾಗಿ ಮನವರಿಕೆಯಾಗಿತ್ತು. ಆ ದುಃಖದಲ್ಲಿ ಈಗ ಅವಳೂ ಭಾಗಿಯಾಗಿದ್ದಳು. ಗಂಡನ ಅಗಲಿಕೆಯಿಂದ ನೊಂದಿದ್ದ ಕನಕಾಂಗಿಯ ಮನಸ್ಸು ಸಹಜವಾಗಿಯೇ ಕರಗಿತು. ಲಲಿತನ ಬಗೆಗೆ ಅವಳಲ್ಲಿ ಅನುಕಂಪ ಮೂಡಿತು. ಅವಳ ದುಃಖವನ್ನು ಪರಿಹರಿಸುವ ಬಗೆಯೇನೆಂದು ಯೋಚಿಸತೊಡಗಿದಳು.

ಇದ್ದಕ್ಕಿದ್ದ ಹಾಗೆ ಅವಳಿಗೆ ಒಂದು ಉಪಾಯ ಹೊಳೆಯಿತು.

"ಮುಂಬಯಿಯಲ್ಲಿ ನನ್ನ ಸ್ನೇಹಿತೆ ಗಿರಿಜಾ ಇದಾಳೆ"

ಎಂದು ಏನೋ ಉತ್ಸಾಹ ಮೂಡಿದವಳಂತೆ ಹೇಳಿದಳು.

"ಇದ್ದರೆ?"

"ಅವಳಿಗೊಂದು ಕಾಗದ ಬರೆದರಾಯಿತು."

"ಏನೆಂದು ಬರೆಯುತ್ತೀ, ಕನಕಾ?"

"ಮಧುಸೂದನರ ವಿಳಾಸ ಪತ್ತೆ ಮಾಡಿ ತಿಳಿಸು ಅಂತ ಬರೆಯೋಣ."

"ಆ ಕೆಲಸ ಅವಳು ಮಾಡುವುದು ಸಾಧ್ಯವೆ?"

"ಅವಳಲ್ಲ, ಅವಳ ಗಂಡ ಮಾಡುತ್ತಾರೆ."

"ಇದು ಕಂಡವರ ಬಾಯಿಗೆ ಬಿದ್ದು ಮಾನ ಹೋಗುವ ಹಾಗಾಗಬಾರದು ಕನಕಾ. ನಾವು ಏನೋ ಒಂದು ಮಾಡುವುದಕ್ಕೆ ಹೋಗಿ ಅದು ಇನ್ನೇನಾದರೂ ಆದೀತಮ್ಮಾ."

“ ಏನೂ ಆಗುವುದಿಲ್ಲ, ಸುಮ್ಮನಿರು. ಗಿರಿಜೆಯ ಗಂಡ ಊರಲ್ಲೆಲ್ಲಾ ಓಡಾಡುತ್ತಾರೆ. ಅವರಿಗೆ ಮಧುಸೂದನರಂಥ ಹೆಸರಾದ ವ್ಯಕ್ತಿಯ ನೆಲೆ ಗೊತ್ತುಹಚ್ಚುವುದು ಕಷ್ಟವಾಗುವುದಿಲ್ಲ. ನಮ್ಮ ಊರಿನವರಿಗೆ ಯಾರಿಗೋ ಬೇಕಾಗಿದೆ, ವಿಳಾಸ ತಿಳಿಸಿ ಅಂತ ಬರೆಯೋಣ. ಅದು ಗೊತ್ತಾದರೆ ನೀನೊಂದು ಕಾಗದ ಬರೆದು ನೋಡು.”

“ ನಿನಗೆ ಹೇಗೆ ಬೇಕೋ ಹಾಗೆ ಮಾಡು. ಆದರೆ ಗುಟ್ಟಾಗಿ ಮಾಡು ಕನಕಾ. ನನಗೆ ಜೀವದಲ್ಲಿ ಜೀವವಿಲ್ಲ ಕಣೇ ”

ಎಂದು ಲಲಿತ ದುಗುಡ ತುಂಬಿದ ಧ್ವನಿಯಲ್ಲಿ ನುಡಿದಳು. ಕನಕಾಂಗಿಯ ಮನಸ್ಸು ಹೊಸ ಹಂಚಿಕೆಯಲ್ಲಿ ಮುಳುಗಿತು.

೧೪

ಗೋವಿಂದದಾಸನ ದಾಹ ಒಂದು ದಿನಕ್ಕೇ ಅಡಗಿರಲಿಲ್ಲ. ಅವನು ರೋಷನ್ನಳನ್ನು ಬಲಾತ್ಕಾರದಿಂದ ಕೂಡಿದ್ದರೂ ಆ ಬಲಾತ್ಕಾರದಲ್ಲೇ ಅವನಿ ಗೊಂದು ಸವಿ ಕಂಡು ಬಂದಿತ್ತು. ಬಲಾತ್ಕಾರದ್ದಾದರೂ ಸುಲಭವಾಗಿ ಮರೆಯ ಲಾಗದ ಆ ಒಂದು ದಿನದ ಸುಖ ಅವನನ್ನು ನಾಲಗೆ ಚಪ್ಪರಿಸಿಕೊಳ್ಳುವ ಹಾಗೆ ಮಾಡಿತ್ತು. ಹೆಣ್ಣಿನ ಸುಖದಲ್ಲಿ ಹಲವು ಹದಿನೆಂಟು ಬಗೆಯನ್ನು ಕಂಡಿದ್ದ ಸೇಟ್ ಒಮ್ಮೆ ಮುಡಿದು ಬಿಸುಟ ಹೂವನ್ನು ಮತ್ತೆ ಮುಡಿಯಲು ಆಶಿಸುತ್ತಿರ ಲಿಲ್ಲ. ಅವನ ಭಾಗಕ್ಕೆ ರೋಷನ್ ಹತ್ತರಲ್ಲಿ ಹನ್ನೊಂದಾಗಿರಲಿಲ್ಲ. ಅವಳಲ್ಲಿ ಅವನಿಗೆ ಏನೋ ನವೀನತೆ ಕಂಡು ಬಂದಿತ್ತು. ಆ ಸುಖಕ್ಕೆ ಅವನ ಮನಸ್ಸು ಮತ್ತೆ ಮತ್ತೆ ಹಾತೊರೆಯುತ್ತಿತ್ತು. ಒಮ್ಮೆ ಬಲಾತ್ಕಾರದಿಂದ ಹೊಸಗಿ ಬಿಸುಟ ಆ ಹೂವನ್ನು ಮತ್ತೆ ಮುಡಿಯಲು ಅವನು ಕಾತರನಾದ.

ಹಾಳು ಕೆಲಸ ಅವನನ್ನು ಎಡಬಿಡದೆ ಕಾಡುತ್ತಿತ್ತು. ಪುಣೆಯಲ್ಲಿ ದೊಡ್ಡ ಮಿಲಿಟರಿ ಕಂಟ್ರಾಕ್ಟೆಂದರೆ ಬಾಯಿ ಮಾತಾಗಿರಲಿಲ್ಲ. ಅದರುದ್ದಕ್ಕೂ ಅವನು ಹೆಣಗಬೇಕಾಗಿತ್ತು. ಸ್ವಲ್ಪ ಕಣ್ಣು ತಪ್ಪಿದರೆ ಲಕ್ಷಾಂತರ ರೂಪಾಯಿ ಕೈಬಿಡು ತ್ತಿತ್ತು. ಅವನು ಹೊಡೆಯುತ್ತಿದ್ದ ಕೊಳ್ಳೆಯ ಮೇಲೆ ಕಣ್ಣಿಟ್ಟದ್ದ ನಾಲ್ಕಾರು ಜನ ಕದೀಮರು ಅವನನ್ನುರುಳಿಸಲು ಒಳಗೆ ಹೊರಗೆ ಸಂಚು ಮಾಡುತ್ತಲೇ ಇದ್ದರು. ಅದರ ಸುಳುವು ಅವನಿಗೂ ಗೊತ್ತಿತ್ತು. ಆ ಕಾರಣದಿಂದಲೇ ಅವನು ಪುಣೆಯನ್ನು ಬಿಡಲಾರದೆ ಅಲ್ಲೇ ಬಿದ್ದು ತೊಳಲುತ್ತಿದ್ದ. ಬಂದರೆ ತಿಂಗಳಿಗೋ ಎರಡು ತಿಂಗಳಿಗೋ ಒಮ್ಮೆ ಮುಂಬಯಿಗೆ ಬರುತ್ತಿದ್ದ. ಹಾಗೆ ಬಂದಾಗ ನಾಲ್ಕಾರು ದಿನ ಇದ್ದು ಸುಖದ ಬಾಕಿಗಳನ್ನೆಲ್ಲಾ ತೀರಿಸಿಕೊಂಡು ಹೊರಟು ಹೋಗುತ್ತಿದ್ದ. ಪುಣೆಯಲ್ಲೇನೂ ಅವನ ರಸಿಕತೆ ಕಡಮೆಯಾಗಿರಲಿಲ್ಲ. ಆದ

ಮುಂಬಯಿಯಲ್ಲಿ ಅವನು ಕಂಡಿದ್ದ ನಾಲ್ಕಾರು ಪದಾರ್ಥಗಳ ರುಚಿ ಪುಣೆಯಲ್ಲಿ ಅವನಿಗೆ ಸಿಕ್ಕುತ್ತಿರಲಿಲ್ಲ. ಆ ಪದಾರ್ಥಗಳಲ್ಲಿ ತೀರ ಹೊಸತೆನ್ನಿಸುವ ರೋಷನ್ ಅವನ ಹುಚ್ಚನ್ನು ಕೆರಳಿಸಿಬಿಟ್ಟಿದ್ದಳು.

ಅಂತೆಯೇ, ಅವನು ಮುಂಬಯಿಗೆ ಬಂದಾಗ ಒಂದು ನಿರ್ಧಾರ ಮಾಡಿ ಕೊಂಡೇ ಬಂದಿದ್ದ. ಅನ್ವರ್‌ಬಾಯಿಯನ್ನು ಕಾಣಲು ಅವಳ ಮನೆಗೆ ಬಂದಾಗ ಆ ನಿರ್ಧಾರವನ್ನು ಅವಳಿಗೆ ತಿಳಿಸಲು ಅವನು ಹಿಂಜರಿಯಲಿಲ್ಲ.

ಚಹ ಕುಡಿದು ಆರಾಮವಾಗಿ ಸೋಫಕ್ಕೆ ಮೈ ಚಾಚಿದ ಸೇಟ್ ಒಂದು ಗಳಿಗೆ ಅನ್ವರ್‌ಬಾಯಿಯ ಮುಖವನ್ನು ದಿಟ್ಟಿಸಿ ನೋಡಿದ. ಅವನ ಪ್ರಳಯಾಂತಕ ಬುದ್ಧಿ ಏನೋ ಹವಣಿಕೆಯಲ್ಲಿದೆಯೆಂದು ಅನ್ವರ್‌ಬಾಯಿಗೆ ಭಾಸವಾಯಿತು. ಅದನ್ನು ತಿಳಿದುಕೊಳ್ಳುವ ಕುತೂಹಲ ಅವಳಿಗುಂಟಾಯಿತು.

"ಸೇಟರು ಏನೋ ಯೋಚಿಸುತ್ತಿರುವ ಹಾಗಿದೆಯಲ್ಲಾ?"

ಎಂದು ಮೆಲ್ಲನೆ ಕೆಣಕಿದಳು. ಸೇಟ್ ನೀಳವಾಗಿ ಉಸಿರ್ಗರೆದ.

"ಯೋಚಿಸುವುದೇನು ಬಂತು? ಹಾಳು ಕೆಲಸ ತಲೆ ಚಿಟ್ಟು ಹಿಡಿಸುತ್ತಿದೆ."

"ಅಲ್ಲವೇ ಮತ್ತೆ? ಲಕ್ಷಾಂತರ ರೂಪಾಯಿ ಲಾಭ ಹೊಡೆಯುವುದು ಸುಮ್ಮನಾಯಿತೆ?"

"ಏನು ಲಾಭವೋ ಜೀವಕ್ಕಂತೂ ಸುಖವಿಲ್ಲ, ಬಿಡು."

"ಏಕೆ, ಪುಣೆಯಲ್ಲಿ ನಿನಗೆ ಏನು ಕಡಮೆಯಾಗಿದೆ?"

"ಏನೂ ಕಡಮೆಯಾಗಿಲ್ಲ. ಬೇಕಾದ ಪದಾರ್ಥ ಮಾತ್ರ ಸಿಕ್ಕುವುದಿಲ್ಲ."

"ಇಷ್ಟು ದೊಡ್ಡ ಮಿಲಿಟರಿ ಕಂಟ್ರಾಕ್ಟರಿಗೆ ಪದಾರ್ಥಗಳಿಗೆ ಕೊರತೆಯೆ?"

"ಕಚ್ಚಾ ಮಾಲು ಸಿಕ್ಕಿದರೆ ಏನು ಸುಖ, ಅನ್ವರ್? ಅಲ್ಲಿ ಅಪ್ಪಟ ಸರಕಿಲ್ಲ."

"ಪುಣೆಯಲ್ಲಿ ಅಪ್ಪಟ ಸರಕಿಲ್ಲವೆಂದರೆ ಯಾರಾದರೂ ನಗುತ್ತಾರೆ."

"ನಗುವವರಿಗೇನು ಗೊತ್ತು ನನ್ನ ಕಷ್ಟ? ನನಗೆ ಬೇಕಾದ ಮಾಲು ಅಲ್ಲಿಲ್ಲ."

"ಮತ್ತೆ ಇನ್ನೆಲ್ಲಿದೆ?"

"ತಿಳಿದೂ ತಿಳಿದೂ ನನ್ನನ್ನೇ ಕೇಳುತ್ತೀಯಲ್ಲಾ ಅನ್ವರ್? ನನ್ನ ಅಭಿರುಚಿ ನಿನಗೆ ಗೊತ್ತು."

"ಏನದು, ಬಾಯಿ ಬಿಟ್ಟು ಹೇಳಬಾರದೆ?"

"ನನಗೆ ರೋಷನ್ ಬೇಕು, ಅನ್ವರ್‌ಬಾಯಿ. ನಾಲ್ಕು ದಿವಸದ ಮಟ್ಟಿಗೆ ಅವಳನ್ನು ಕಳಿಸಿಕೊಡು."

ಆ ಮಾತು ಕೇಳಿ ಅನ್ವರ್‌ಬಾಯಿ ಹೌಹಾರಿದಳು. ಸೇಟ್ ರೋಷನ್ನಳನ್ನು ಮತ್ತೆ ಅಪೇಕ್ಷಿಸುವನೆಂದು ಅವಳು ತಿಳಿದಿರಲಿಲ್ಲ. ಗಲ್ಲದ ಮೇಲೆ ಕೈ ಇಟ್ಟುಕೊಂಡು ಸುಮ್ಮನೆ ಕುಳಿತಳು. ಗೋವಿಂದದಾಸ್ ಸಮಯ ನೋಡಿ ಏಟು ಹಾಕಿದ್ದ. ಅದನ್ನು ಸರಿಯಾಗಿ ಕೊನೆ ಮುಟ್ಟಿಸದೆ ಬಿಡಬಾರದೆಂದು ಅವನಿಗನ್ನಿಸಿತು.

"ಏತಕ್ಕೆ ಸುಮ್ಮನೆ ಕುಳಿತೆ?"

"ಏನು ಹೇಳಲಿ ಸೇಟ್. ನಿನ್ನ ಪ್ರಶ್ನೆ ನನಗೆ ಮಂಕು ಹಿಡಿಸಿದೆ."

"ಅಲ್ಲವೇ ಮತ್ತೆ? ನಾನು ಕೇಳುತ್ತಿರುವುದು ಬಹು ಅಗಾಧ ನೋಡು."

"ಅಗಾಧದ ಮಾತಲ್ಲ. ರೋಷನ್ ಏನನ್ನುವಳೋ ಎಂದು ನನಗೆ ಅನುಮಾನ."

"ಅನ್ನುವುದೇನು? ಸುಮ್ಮನೆ ಬರುತ್ತಾಳೆ. ಆ ಮೈಸೂರು ಬಿಕನಾಸಿಯ ಸಹವಾಸ ಅವಳಿಗಿನ್ನೂ ಸಾಕಾಗಿಲ್ಲವೇನು? ಅವನಿಗಿಂತ ನಾನು ಕಡಮೆಯಾಗಿ ಹೋದೆನೇ?"

"ನಿನಗೆ ಯಾರು ಅದನ್ನು ಹೇಳಿದವರು?"

"ಯಾರು ಹೇಳುವುದೇನು? ನನಗೆ ಕಣ್ಣಿಲ್ಲವೆ? ಕಿವಿಯಿಲ್ಲವೆ? ಇಲ್ಲಿ ನಡೆಯುತ್ತಿರುವ ಆಟಗಳೊಂದೂ ನನಗೆ ತಿಳಿಯುವುದಿಲ್ಲವೆಂದುಕೊಂಡೆಯಾ? ಬೆಕ್ಕು ಕಣ್ಣು ಮುಚ್ಚಿಕೊಂಡು ಹಾಲು ಕುಡಿದರೆ ಇತರರಿಗೆ ಕಾಣುವುದಿಲ್ಲವೇನು? ಇದರಲ್ಲಿ ನಿನ್ನ ಕುಮ್ಮಕ್ಕೂ ಇದೆ. ನಿನ್ನ ಬಲವಿಲ್ಲದೆ ಇದೆಲ್ಲಾ ನಡೆಯುವುದಿಲ್ಲವೆನ್ನುವುದು ನನಗೆ ಗೊತ್ತಿದೆ, ಅನ್ವರ್."

"ನನ್ನ ಕುಮ್ಮಕ್ಕೇನು ಬಂತು ಸೇಟ್ ಇದರಲ್ಲಿ?"

"ನಿನ್ನ ಸಮ್ಮತಿಯಿಲ್ಲದೆ ಆ ಮೈಸೂರಿನವನು ಇಲ್ಲಿ ಬಂದಿರಲು ಸಾಧ್ಯವೇನು? ಈ ಮನೆಗೆ ಯಾರೂ ಯಜಮಾನರೇ ಇಲ್ಲವೆ? ನಿನ್ನ ಉದ್ದಕ್ಕೂ

ಣ ಸುರಿದ ನಾನು ಸತ್ತುಹೋಗಿದೇನೆಯೆ? ನನಗೊಂದು ಮಾತು ತಿಳಿಸು
ದಕ್ಕೆ ನಿನಗೇನಾಗಿತ್ತು? ಏನೋ ಒಂದೆರಡು ದಿನ ಇದ್ದು ತೊಲಗುತ್ತಾನೆಂದರೆ
ವನನ್ನು ಖಾಯಂ ಗಿರಾಕಿಯನ್ನಾಗಿಯೇ ಮಾಡಿಕೊಂಡುಬಿಟ್ಟೆಯಾ?
ೕಷನ್ ಅವರಪ್ಪ ಹಾಕಿದ ಆಲದ ಮರವೇನು?"

ಉಕ್ಕಿದ ಕೋಪದಲ್ಲಿ ಸೇಟು ಉಚಾಯಿಸಿ ನುಡಿದ. ಆ ಮಾತಿನ
ೊಡೆತದಲ್ಲಿ ಅನ್ವರ್‌ಬಾಯಿಯೂ ತಬ್ಬಿಬ್ಬಾದಳು. ಅವಳ ಮನಸ್ಸು ತಪ್ಪಿಸಿ
ೊಳ್ಳಲೊಂದು ದಾರಿಯನ್ನು ಶೀಘ್ರವಾಗಿ ಹುಡುಕುತ್ತಿತ್ತು. ಗೋವಿಂದ
ಾಸನನ್ನು ಕೆರಳಿಸುವುದಕ್ಕೆ ಅವಳಿಗಿಷ್ಟವಾಗಿರಲಿಲ್ಲ. ಅವಳ ಜೀವನದ ಆಧಾರ
ಂಭಗಳಲ್ಲಿ ಅವನೂ ಒಬ್ಬನಾಗಿದ್ದ. ಅವಳು ಉಪಾಯವಾಗಿ ಅವನ
ನವೊಲಿಸಿಕೊಳ್ಳಲೆತ್ನಿಸಿದಳು.

"ಹೋಗಲಿ ಬಿಡು, ಕೋಪಿಸಿಕೊಂಡರೆ ಏನು ಫಲ? ಈಗ ಮಾಡುವು
ಾದರೂ ಏನು ತಿಳಿಸು."

"ಮಾಡುವುದೇನು? ಸುಮ್ಮನೆ ಹೆಚ್ಚು ಮಾತಾಡದೆ ನಾಳೆ ಅವಳನ್ನು
ನ್ನ ಜೊತೆಗೆ ಕಳಿಸು."

"ಎರಡು ದಿನ ಅವಕಾಶ ಕೊಡು, ಸೇಟ್. ಅವಳ ಅಭಿಪ್ರಾಯ ತಿಳಿದು
ಲಸ ಮಾಡೋಣ."

"ಅವಳ ಅಭಿಪ್ರಾಯ ಬೇರೆ ಕೇಳಬೇಕೋ? ನಾನೇನು ಅವಳ ಕಾಸ್ತಾರ
ಟ್ಟುಹೋದೆನೇ ಅವಳ ಸಮಯ ಕಾಯುವುದಕ್ಕೆ?"

"ನೋಡು, ನೀನು ದುಡುಕಿದರೆ ಪ್ರಯೋಜನವಿಲ್ಲ. ಸ್ವಲ್ಪ ತಾಳ್ಮೆ
ಂದುಕೋ."

"ನನ್ನ ತಾಳ್ಮೆಯೆಲ್ಲಾ ಮುಗಿದುಹೋಗಿದೆ."

"ಹಾಗಾದರೆ ಏನು ಮಾಡಬೇಕೆನ್ನುತ್ತೀ?"

"ಸುಮ್ಮನೆ ಕಳಿಸಿಕೊಡು."

"ನೀನು ಅಷ್ಟು ಹಟ ಹಿಡಿದರೆ ಕಷ್ಟ, ಸೇಟ್."

"ನನಗದೆಲ್ಲಾ ಗೊತ್ತಿಲ್ಲ. ನಾಳೆ ಅವಳು ನನ್ನ ಜೊತೆಯಲ್ಲಿ ಬರಬೇಕು."

"ಅವಳು ಬರುವುದಿಲ್ಲವೆಂದರೆ?"

"ಬರುವುದಿಲ್ಲ ಎನ್ನಲಿ, ನೋಡೋಣ."

“ ನಿನಗೆ ಹೇಗೆ ಬೇಕೋ ಹಾಗೆ ಮಾಡಿಕೋ. ನಾನು ಯಾವ ಮಾತಿಗ
ಬರುವುದಿಲ್ಲ. ನೀನುಂಟು, ಅವಳುಂಟು ”

ಎಂದು ಅನ್ವರ್‌ಬಾಯಿ ಸಿಡಕ್ಕನೆ ಮುಖವನ್ನತ್ತ ತಿರುಗಿಸಿಕೊಂಡಳ
ಗೋವಿಂದದಾಸ್ ಸೋಫಾ ಬಿಟ್ಟದ್ದು ರೋಷನ್ನಳ ರೂಮಿನತ್ತ ಹೊರಟ
ಅವನ ಮನಸ್ಸಿನಲ್ಲಿ ಹೊಸ ಹಂಚಿಕೆಯೊಂದು ತಟಕ್ಕನೆ ತಲೆಹಾಕಿತು.

ಅಸ್ತವ್ಯಸ್ತವಾಗಿದ್ದ ಸೀರೆಯಲ್ಲಿ ಹಾಸುಗೆಯ ಮೇಲೆ ಮಲಗಿ ಯಾವುದೊ
ಚಿಂತೆಯಲ್ಲಿ ಮುಳುಗಿದ್ದ ರೋಷನ್ ಮೆಲ್ಲನೆ ಬಾಗಿಲು ತೆರೆದ ಸದ್ದಾಗಲ
ಮನಸ್ಸಿನ ನಿರೀಕ್ಷೆ ಬಾಯಿಗೆ ಬಂದಂತಾಗಿ ಧಿಗ್ಗನೆ ಎದ್ದು ಕುಳಿತಳು. ಆದ
ಆ ನಿರೀಕ್ಷೆ ಬಂದ ವೇಗದಲ್ಲೇ ಕರಗಿಹೋಯಿತು. ಒಳಗೆ ಬಂದವನು ಮಧ
ಸೂದನನಲ್ಲ, ಸೇಟ್ ಗೋವಿಂದದಾಸ್.

ರೋಷನ್ ಗಾಬರಿಯಾಗಿ ಎದ್ದು ಕುಳಿತಳು. ಬಾಗಿಲು ಮುಚ್ಚಿ ಅಲ್ಲೆ
ನಿಂತ ಸೇಟ್ ಬಿಚ್ಚಿದ ಮೈಯ ಆ ಲಾವಣ್ಯವನ್ನು ಕಂಡು ಒಂದು ಕ್ಷಣ ಸೊಕ
ದಂತಾದ. ಆಸೆ ತುಂಬಿದ ಅವನ ಕಣ್ಣು ಅವಳಲ್ಲಿ ಕೀಲಿಸಿತು.

“ ಹೆದರಿದೆಯಾ, ರೋಷನ್ ?”

ಧ್ವನಿಯಲ್ಲಿ ಕೃತ್ರಿಮವಾದ ನಯವಿತ್ತು, ಒರಟುತನದಿಂದ ಸಾಧಿಸಲಾ
ದುದನ್ನು ಉಪಾಯದಿಂದ ಸಾಧಿಸುವ ಎಚ್ಚರಿಕೆಯಿತ್ತು.

ರೋಷನ್ ಅವನ ಮಾತಿಗೆ ಉತ್ತರ ಕೊಡದೆ ಅವನನ್ನೇ ದಿಟ್ಟಿಸಿ
ನೋಡಿದಳು. ಬಡಿಯುವ ಹಾವಿನ ಹೆಡೆಯಿಂದ ಪಾರಾಗಲು ರೆಕ್ಕೆ ಬಿಚ್ಚ
ಲನುವಾದ ಹಕ್ಕಿಯಂತೆ ಅವಳ ಮನಸ್ಸು ರಕ್ಷಣೆಗೆ ಸಜ್ಜಾಗಿ ಜಾಗೃತಿಗೊಂಡಿತ್ತು
ಆದರೆ ಅವಳೇನೂ ಅಂಥ ಸಂಭವವನ್ನು ನಿರೀಕ್ಷಿಸಬೇಕಾಗಿರಲಿಲ್ಲ. ಸೇಟು ಅ
ಕ್ಷಣದ ಸುಖಕ್ಕೆಳಸಿ ಅವಳ ಮೈಮೇಲೆ ಬೀಳಲು ಬಂದಿರಲಿಲ್ಲ. ಅವನ ಯೋಜನ
ಅದಕ್ಕಿಂತ ಆಳವಾಗಿತ್ತು. ಮುಖದಲ್ಲಿ ನಗೆ ಸೂಸುತ್ತ ಅವನು ಎದುರಿಗಿದ್ದ
ಸೋಫಾದ ಮೇಲೆ ಮಂಡಿಸಿದ. ರೋಷನ್ ಹಿಂದಿನ ಅನುಭವವನ್ನು
ಮರೆತಿರಲಿಲ್ಲ. ಸಂಶಯ ದೃಷ್ಟಿಯಿಂದ ಅವನನ್ನೇ ನೋಡುತ್ತಿದ್ದಳು.

ಅವಳ ಶಂಕೆ ಅರ್ಥವಾಗಿ ಅವನು ಗಹಗಹಿಸಿ ನಕ್ಕ.

“ ನನ್ನನ್ನು ಭೂತವೋ ಪಿಶಾಚಿಯೋ ಎಂದು ನೀನು ತಿಳಿದುಕೊಂಡಿರುವ
ಹಾಗಿದೆ, ಅಲ್ಲವೆ ?”

ಎಂದು ಎದುರಿಗಿದ್ದ ಟೀಪಾಯ್ ಮೇಲೆ ಕಾಲು ನೀಡಿ ಸೋಫಕ್ಕೆ ಮೈ ಒರಗಿಸಿದ. ರೋಷನ್ ಆಗಲೂ ನಿರುತ್ತರಳಾಗಿಯೇ ಇದ್ದಳು.

"ಏಕೆ, ನನ್ನ ಮೇಲೆ ಕೋಪವೇ?"

"ಇಲ್ಲ, ವಿಶ್ವಾಸವುಂಟಾಗುವ ಯಾವ ಕೆಲಸವನ್ನು ನೀನು ಮಾಡಿರುವೆ?"

"ಒಂದು ಸಲ ದುಡುಕಿದ್ದೇನೋ ನಿಜ. ಆದರೆ ನೀನೂ ಹಟ ಮಾಡಬಾರದಾಗಿತ್ತು."

"ನೀನು ಬಲಾತ್ಕಾರ ಮಾಡಿದ್ದೇಕೆ?"

"ನನಗೆ ನಿನ್ನ ಕಂಡರೆ ತುಂಬ ಆಸೆ, ರೋಷನ್. ನಿನಗದು ಗೊತ್ತಿಲ್ಲ."

"ಆಸೆಯಿದ್ದರೆ ಪಶುವಿನಂತೆ ವರ್ತಿಸಬೇಕೆ?"

"ಕಳೆದು ಹೋದ ಸಂಗತಿ ಮನಸ್ಸಿನಲ್ಲಿಟ್ಟುಕೊಳ್ಳಬೇಡ, ರೋಷನ್. ಅವೊತ್ತು ನನ್ನ ಮನಸ್ಸೇ ನನ್ನ ವಶದಲ್ಲಿರಲಿಲ್ಲ. ಆ ವಿಷಯಕ್ಕೆ ಆಮೇಲೆ ನಾನೂ ನೊಂದುಕೊಂಡೆ."

"ಈಗ ಅದನ್ನು ಮತ್ತೆ ಜ್ಞಾಪಿಸಿ ಪ್ರಯೋಜನವೇನು?"

"ನನ್ನ ನಿಜವಾದ ಮನಸ್ಸು ನಿನಗೆ ತಿಳಿಯಲೆಂದು ಹೇಳುತ್ತಿದೇನೆ. ನಿನ್ನ ಮೇಲೆ ನನಗೆ ಪ್ರೀತಿಯೇ ಹೊರತು ದ್ವೇಷವಿಲ್ಲ. ನೀನೂ ಹಾಗೆಯೇ ಇದ್ದರೆ ಚೆನ್ನ."

"ಆ ಮಾತಿರಲಿ. ಈಗ ಬಂದ ಕಾರಣವೇನು?"

"ಕಾರಣವೇನು ಬಂತು? ನಿನ್ನನ್ನು ನೋಡಲೆಂದೇ ಬಂದೆ. ನಾಲ್ಕು ದಿವಸ ಪುಣೆಗೆ ಬಂದು ಹೋಗಬಾರದೆ?"

"ನಾನೇಕೆ ಬರಬೇಕು."

"ಏತಕ್ಕೂ ಇಲ್ಲ, ಸುಮ್ಮನೆ. ಬಂದರೆ ಸಂತೋಷ; ಆದರೆ ಬಲವಂತವಿಲ್ಲ. ಯೋಚನೆಮಾಡಿ ಹೇಳು"

ಎಂದು ಏನನ್ನೋ ಮರೆತಿದ್ದವನಂತೆ ಜೇಬಿಗೆ ಕೈಹಾಕಿ ಒಂದು ಸಣ್ಣ ಪೆಟ್ಟಿಗೆ ತೆಗೆದು ಅವಳು ಕುಳಿತಿದ್ದ ಹಾಸುಗೆಯ ಮೇಲೆಸೆದ. ರೋಷನ್ ಅದನ್ನು ಕೈಯಲ್ಲಿ ಮುಟ್ಟದೆ,

"ಇದೇನು?"

"ತೆಗೆದು ನೋಡಬಾರದೆ?"

ಇಷ್ಟವಿಲ್ಲದ ಮನಸ್ಸಿನಿಂದ ಪೆಟ್ಟಿಗೆಯನ್ನು ಕೈಗೆತ್ತಿಕೊಂಡು ತೆಗೆದು ನೋಡಿದಳು. ಒಳಗೆ ಮುದ್ದಾದ ಪುಟ್ಟ ಕೈಗಡಿಯಾರವಿತ್ತು.

"ಇದನ್ನು ನನಗೆ ಕೊಡಲು ತಂದೆಯಾ?"

"ತಂದ ಉದ್ದೇಶವೇನೋ ಅದೇ. ಆದರೆ ನೀನು ಬೇಡವೆಂದರೆ ಬಲವಂತ ಮಾಡುವುದಿಲ್ಲ. ಇಷ್ಟಪಟ್ಟು ಇಟ್ಟುಕೊಂಡರೆ ನನಗೂ ಸಂತೋಷ"

ಎಂದು ನಕ್ಕು ನುಡಿದು,

"ಪುಣೆಗೆ ಬರುವ ವಿಚಾರ ಯೋಚಿಸಿ ಹೇಳು. ಬೆಳಗ್ಗೆ ಮತ್ತೊಮ್ಮೆ ಬರುತ್ತೇನೆ. ನಾನಂತೂ ನಾಳೆಯೇ ಹೊರಡಬೇಕು"

ಎಂದು ಅವಳ ಉತ್ತರವನ್ನೂ ಕಾಯದೆ ಎದ್ದು ಹೊರಟುಬಿಟ್ಟ. ಅವನು ಹೊರಟು ಹೋದ ಮೇಲೂ ರೋಷನ್ ಎಷ್ಟೋ ಹೊತ್ತಿನವರೆಗೆ ಕುಳಿತಿದ್ದ ಸ್ಥಳ ಬಿಟ್ಟು ಕದಲಲಿಲ್ಲ. ಅವಳ ಮನಸ್ಸಿನ ಮೇಲೆ ಹೊಸ ಯೋಚನೆಯೊಂದು ದಾಳಿ ಮಾಡಿತು.

ಮಧುಸೂದನ ಅವಳನ್ನಗಲಿ ಹೋಗಿ ನಾಲ್ಕು ದಿವಸವಾಗಿತ್ತು. ಸಂಗೀತ ಕಚೇರಿಯಲ್ಲೇ ಅವನನ್ನು ಕಂಡು ಬೇಗ ಮನೆಗೆ ಬರುವಂತೆ ಹೇಳಿ ಹೋಗ ಬೇಕೆಂದಿದ್ದಳು. ಆದರೆ ಆಗ ಅವನನ್ನು ನೋಡುವ ಅವಕಾಶವಾಗಲಿಲ್ಲ. ಮಾರನೆಯ ದಿನವಾದರೂ ಅವನು ಹಿಂತಿರುಗುವನೆನ್ನುವ ನಿರೀಕ್ಷೆ ಅವಳಿಗಿತ್ತು. ಮಾರನೆಯ ದಿನವಲ್ಲ, ಮೂರು ದಿನವಾದರೂ ಅವನು ಬರಲಿಲ್ಲ. ಮೂರು ಹಗಲು ಮೂರು ರಾತ್ರಿಗಳನ್ನು ಅವಳು ನಿರೀಕ್ಷೆಯಿಂದಲೇ ಕಳೆದು ಹತಾಶಳಾಗಿ ದ್ದಳು. ಹತಾಶೆ ನಿಧಾನವಾಗಿ ಕೋಪಕ್ಕೆಡೆಗೊಟ್ಟಿತ್ತು. ತಾನು ಅವನನ್ನು ಬಯಸುವಷ್ಟು ಅವನು ತನ್ನನ್ನು ಬಯಸದಿರಬಹುದೆನ್ನುವ ಶಂಕೆ ಮನಸ್ಸಿನಲ್ಲಿ ಬೇರೂರಿತು. ಆ ಅರಿವು ಅವಳಿಗೆ ವ್ಯಾಕುಲವನ್ನುಂಟುಮಾಡಿತು.

ಸೇಟ್ ಬಂದಾಗಲೂ ಮಧುಸೂದನನೇ ಬಂದನೆಂದು ಭಾವಿಸಿ ಆತುರ ದಿಂದ ಎದ್ದು ಕುಳಿತಿದ್ದಳು. ಆದರೆ ಒಳಗೆ ಬಂದವನು ಅವನಲ್ಲವೆಂದರಿತು ಅವಳಿಗೆ ನಿರಾಶೆಯಾಯಿತು. ಆ ನಿರಾಶೆಯ ಮನಸ್ಸಿಗೆ ಸೇಟ್ ಅನುನಯದ ಆಮಿಷ ತೋರಿಸಿಹೋಗಿದ್ದ. ಗಂಭೀರವಾಗಿ ಕುಳಿತು ಮಾತಾಡಿಸಿ ಪುಣೆಗೆ ಬರುವಂತೆ ಆಹ್ವಾನಿಸಿದ್ದ. ಬಂದರೆ ಸಂತೋಷ, ಬರದಿದ್ದರೆ ಬಲಾತ್ಕಾರವಿಲ್ಲ ಎಂದೂ ನುಡಿದು ತೀರ್ಮಾನವನ್ನು ಅವಳ ಇಚ್ಛೆಗೇ ಬಿಟ್ಟಿದ್ದ. ತನ್ನ ಮಾತಿ

ನಿಂದ, ನಡವಳಿಕೆಯಿಂದ ಅವಳ ಸ್ವಾತಂತ್ರ್ಯದ ಬಗೆಗೆ ತನಗೆ ಗೌರವವಿರುವಂತೆ ನಡೆದುಕೊಂಡಿದ್ದ. ಅವನು ಬಂದಾಗ ಅವಳ ಮನಸ್ಸಿನಲ್ಲಿ ಹುಟ್ಟಿದ್ದ ಭೀತಿ ಸಂದೇಹಗಳು ಅವನು ಮಾತು ಮುಗಿಸಿ ಹೋಗುವ ವೇಳೆಗೆ ಮರೆಯಾಗಿದ್ದವು. ಅದರೊಡನೆ ಅವಳಿಗೊಂದು ಹೊಸ ಯೋಚನೆಯೂ ಮೂಡಿತ್ತು.

ಹೌದು, ಪುಣೆಗೆ ಏತಕ್ಕೆ ಹೋಗಬಾರದು?

ಏತಕ್ಕೆ ಹೋಗಬಾರದು ಎಂದು ಅವಳ ಮನಸ್ಸು ಮರುನುಡಿಯಿತು. ಹೋದರೆ ಅವಳನ್ನು ಅಡ್ಡಿಪಡಿಸುವವರು ಯಾರೂ ಇರಲಿಲ್ಲ. ತಾಯಿಗಂತೂ ಅದು ಸಮ್ಮತಿಯೇ ಆಗಿತ್ತು. ಇನ್ನು ಮಧುಸೂದನ? ಅವನ ಇಷ್ಟ ಏನಿತ್ತೋ ಯಾರಿಗೆ ಗೊತ್ತು? ಅವನೇನೋ ಅವಳ ಸುಖ ತನ್ನೊಬ್ಬನಿಗೇ ಮೀಸಲೆಂದು ಭಾವಿಸಿದ್ದಿರಬಹುದು. ಅದನ್ನು ಅವಳು ಮನ್ನಿಸಿದ್ದ ಕಾಲವೂ ಒಂದಿತ್ತು. ಅವನಲ್ಲದೆ ಬೇರೆಯವರಿಗೆ ಮೈನೀಡುವ ಮನಸ್ಸು ಅವಳಿಗೂ ಇರಲಿಲ್ಲ. ಆದರೆ ಅವನು ಅವಳ ವಿಷಯದಲ್ಲಿ ಆ ವಿಶ್ವಾಸವನ್ನು ಉಳಿಸಿಕೊಂಡಿರಲಿಲ್ಲ. ಮುಂಬಯಿಯಲ್ಲಿದ್ದರೂ ನಾಲ್ಕು ದಿವಸಗಳಿಂದ ತನ್ನನ್ನು ನೋಡದಷ್ಟು ನಿರ್ಘೃಣತೆ ಅವನಿಗಿದ್ದ ಮೇಲೆ ಅವನ ವಿಷಯದಲ್ಲಿ ತಾನು ಹೇಗೆ ನಡೆದುಕೊಳ್ಳಬೇಕು? ಯಾವ ಹೆಣ್ಣಿನ ತೋಳ ತೆಕ್ಕೆಯಲ್ಲಿ ಮೈಮರೆತು ಅವನು ತನ್ನನ್ನು ತೃಣೀಕರಿಸಿರಬಹುದು?

ರೋಷನ್ನಳ ಮನಸ್ಸಿನಲ್ಲಿ ಹುಚ್ಚು ಪ್ರತೀಕಾರದ ಬೇಗೆ ಎದ್ದಿತು. ಆ ಸಂತಪ್ತಸ್ಥಿತಿ ತಾನಾಗಿ ಬಯಸದಿದ್ದ ನಿರ್ಧಾರಕ್ಕೆ ಅವಳನ್ನು ನೂಕಿತು. ಅದೇ ಸರಿಯೆಂದು ಅವಳ ಮನಸ್ಸು ಆ ತೀರ್ಮಾನವನ್ನು ಒಪ್ಪಿಕೊಂಡಿತು.

ಬೆಳಗ್ಗೆ ಗೋವಿಂದದಾಸ್ ಮನೆಗೆ ಬಂದಾಗ ಅವನನ್ನು ನಗುನಗುತ್ತಲೇ ಸ್ವಾಗತಿಸಿದಳು. ಮುಖ ಕೊಟ್ಟು ಮಾತಾಡಲೂ ಹಿಂಜರಿಯುತ್ತಿದ್ದ ಅವಳ ವರ್ತನೆ ನೋಡಿ ಅವನು ವಿಸ್ಮಿತನಾದ.

"ಪುಣೆಗೆ ಹೋಗೋಣವೇ, ರೋಷನ್?"

"ಯಾವಾಗ ಹೊರಡುವುದು?"

"ಸಾಯಂಕಾಲ ಹೋಗೋಣ."

"ಬೇಡ, ಈಗಲೇ ಹೊರಟುಹೋಗೋಣ, ನಡಿ"

ಎಂದು ಹೊರಡಲು ಸಜ್ಜಾಗಿ ನಿಂತಳು. ಸೇಟ್ ತನ್ನ ಕಿವಿಯನ್ನು

ತಾನೇ ನಂಬಲಾರದಾದ. ಹರ್ಷದಿಂದ ಅವನ ಮನಸ್ಸು ಪುಲಕಗೊಂಡಿತು. ನಿರೀಕ್ಷಿಸದಿದ್ದ ಭಾಗ್ಯ ತಾನಾಗಿ ಬಂದು ಬಾಗಿಲು ತಟ್ಟುವಂತೆ ಅವನಿಗೆ ತೋರಿತು. ಸಂಜೆಯವರೆಗೂ ಅವನು ಮುಂಬಯಿಯಲ್ಲಿದ್ದು ಮುಗಿಸಬೇಕಾದ ಕೆಲಸವಿತ್ತು. ಆದರೆ ಪ್ರಯಾಣವನ್ನು ಮುಂದೆ ತಳ್ಳಿದರೆ ರೋಷನ್ ಎಲ್ಲಿ ಮನಸ್ಸು ಬದಲಾಯಿಸಿಬಿಡುವಳೋ ಎಂದು ಅವನು ಶಂಕಿತನಾದ. ಎಲ್ಲ ಕೆಲಸವನ್ನೂ ಬದಿಗೊತ್ತಿ ನಿಂತ ನಿಲುವಿನಲ್ಲಿ ಪುಣೆಗೆ ಹೊರಡಲು ನಿರ್ಧರಿಸಿದ. ಕಾದ ಕಬ್ಬಿಣವನ್ನು ಬಡಿಯುವ ಕಲೆ ಅವನಿಗೆ ಚೆನ್ನಾಗಿ ಸಾಧಿಸಿತ್ತು.

ಆ ಸಂಜೆಯೇ ಮಧುಸೂದನ ಮನೆಗೆ ಬಂದ.

ಮನೆ ಜನಶೂನ್ಯವಾಗಿದ್ದಂತೆ ಅವನ ಮನಸ್ಸಿಗೆ ತೋರಿತು. ಬೈಠಕ್ ಖಾನೆಯಲ್ಲಿ ಯಾರೂ ಇರಲಿಲ್ಲ. ರೋಷನ್ನಳ ರೂಮೂ ಬಿಕೋ ಎನ್ನುತ್ತಿತ್ತು. ಹೊರಗೆ ಬಂದು ಆಳನ್ನು ಕರೆದ.

"ಬೇಗಂ ಸಾಹಿಬಾ ಎಲ್ಲಿ, ಹಮೀದ್ ?"

"ಯಾವ ಸಾಹಿಬಾ, ಹುಜೂರ್ ?"

"ಚಿಕ್ಕವರು, ರೋಷನ್ ಬಾಯಿ ?"

ಹಮೀದ್ ಒಂದು ಕ್ಷಣ ಹಿಂದು ಮುಂದು ನೋಡಿ ಧ್ವನಿ ತಗ್ಗಿಸಿ,

"ಅವರು ಊರಿನಲ್ಲಿರುವ ಹಾಗಿಲ್ಲ, ಹುಜೂರ್."

"ಎಲ್ಲಿಗೆ ಹೋಗಿದ್ದಾರೆ ?"

"ಗೊತ್ತಿಲ್ಲ. ಮಧ್ಯಾಹ್ನ ಕಾರಿನಲ್ಲಿ ಎಲ್ಲಿಗೋ ಹೋದರು."

ಮಧುಸೂದನನಿಗೆ ಆ ಮಾತು ಕೇಳಿ ಅಚ್ಚರಿಯಾಯಿತು. ರೋಷನ್ ಎಲ್ಲಿಗೆ ಹೋಗಿರಬಹುದು ?

"ದೊಡ್ಡ ಬಾಯಿಸಾಹಿಬಾರನ್ನು ಕೇಳಿ ಬಾ"

ಎಂದ. ಹಮೀದ್ ಕೈ ಉಜ್ಜುತ್ತ ಸುಮ್ಮನೆ ನಿಂತ. ಅನ್ವರ್‌ಬಾಯಿಯ ಬಳಿಗೆ ಹೋಗಲು ಅವನಿಗೆ ಮನಸ್ಸಿದ್ದಂತಿರಲಿಲ್ಲ.

"ಆ ಮಾತು ತಾವೇ ಕೇಳುವುದು ವಾಸಿ"

ಎಂದು ನುಡಿದು ಅಲ್ಲಿ ನಿಲ್ಲದೆ ಹೊರಟುಹೋದ. ಮಧುಸೂದನ ನೇರವಾಗಿ ಅನ್ವರ್‌ಬಾಯಿಯ ರೂಮಿಗೆ ಹೋದ. ಮಂಚದ ಮೇಲೆ ಮಲಗಿದ್ದ ಅನ್ವರ್ ಅವನನ್ನು ಕಂಡು ಮೆಲ್ಲನೆ ಎದ್ದು ಕುಳಿತಳು.

"ಬನ್ನಿ, ಯಾವಾಗ ಬಂದಿರಿ?"

"ಇದೇ ತಾನೆ ಬಂದೆ. ಸ್ನೇಹಿತರ ಕೈಗೆ ಸಿಕ್ಕಿ ನಾಲ್ಕು ದಿನದಿಂದ ಈ ಕಡೆಗೆ ಬರುವುದಕ್ಕೇ ಅವಕಾಶವಾಗಲಿಲ್ಲ."

"ನಾವೂ ಏತಕ್ಕೆ ಬರಲಿಲ್ಲವೋ ಎಂದುಕೊಂಡೆವು. ರೋಷನ್ ನಾಲ್ಕಾರು ಬಾರಿ ಕೇಳಿದಳು."

"ಎಲ್ಲಿ, ಆಕೆ ಕಾಣುವುದಿಲ್ಲವಲ್ಲಾ?"

ಅನ್ವರ್‌ಬಾಯಿ ಆ ಮಾತಿಗೆ ನೇರವಾಗಿ ಉತ್ತರ ಕೊಡಲಿಲ್ಲ.

"ಕುಳಿತುಕೊಳ್ಳಿ. ಚಹ ತರಿಸಲೇನು?"

"ಬೇಡ. ನಾನೀಗ ಉಪಾಹಾರ ಮುಗಿಸಿಕೊಂಡು ಬಂದಿದ್ದೇನೆ"

ಎನ್ನುತ್ತ ಅವಳೆದುರಿಗಿದ್ದ ಕುರ್ಚಿಯಲ್ಲಿ ಕುಳಿತುಕೊಂಡ. ಅವನ ಪ್ರಶ್ನೆಗೆ ಉತ್ತರ ಬೇಕಾಗಿತ್ತು. ಅವನು ಉತ್ತರ ನಿರೀಕ್ಷೆಯಲ್ಲಿರುವನೆನ್ನುವುದನ್ನು ಅವಳೂ ಗ್ರಹಿಸಿದಳು. ಒಂದು ಕ್ಷಣ ಬಿಟ್ಟು,

"ರೋಷನ್ ಊರಿನಲ್ಲಿಲ್ಲ. ಪುಣೆಗೆ ಹೋಗಿದ್ದಾಳೆ."

"ಯಾವಾಗ ಹೋದಳು?"

"ಇವತ್ತು ಮಧ್ಯಾಹ್ನ ಹೋದಳು. ಅಲ್ಲಿಂದ ಕರೆ ಬಂದಿತ್ತು."

"ಬರುವುದು?"

"ಅದು ಗೊತ್ತಿಲ್ಲ. ಹದಿನೈದು ದಿವಸಕ್ಕೇ ಬರುತ್ತಾಳೆಯೋ, ತಿಂಗಳಿಗೇ ಬರುತ್ತಾಳೆಯೋ. ಕಲಾವಿದರ ಸಂಗತಿ ಹೀಗೇ ಎಂದು ಹೇಳುವುದಕ್ಕಾಗುವುದಿಲ್ಲ, ನೋಡಿ"

ಎಂದು ಏನೋ ಅರ್ಥವನ್ನು ಸೂಚಿಸುವಂತೆ ನಕ್ಕಳು. ಅವಳ ಮನಸ್ಸಿನಲ್ಲಿದ್ದುದೇನೆನ್ನುವುದು ಮಧುಸೂದನನಿಗೆ ಸ್ಪಷ್ಟವಾಗಲಿಲ್ಲ. ರೋಷನ್ನಳ ಪ್ರಯಾಣದ ಉದ್ದೇಶವನ್ನು ತಿಳಿದುಕೊಳ್ಳುವ ಕುತೂಹಲ ಅವನಿಗಿತ್ತು.

"ಅಲ್ಲೇನಾದರೂ ಬೈಠಕ್ ಏರ್ಪಾಡಾಗಿದೆಯೇನು?"

"ಅದೂ ಒಂದು ಉದ್ದೇಶ"

ಎಂದು ಗುಂಭವಾಗಿ ನುಡಿದು ಸುಮ್ಮನಾದಳು. ಅವಳು ಮನಬಿಚ್ಚಿ ಮಾತಾಡುತ್ತಿಲ್ಲವೆಂದು ಅವನಿಗೆ ಭಾಸವಾಯಿತು. ವಿಷಯವನ್ನು ಹೆಚ್ಚು ಬೆದಕಿ ಪ್ರಯೋಜನವಿಲ್ಲವೆಂದರಿತು ಅಲ್ಲಿಂದೆದ್ದು ತನ್ನ ರೂಮಿಗೆ ಬಂದ. ಅವನ

ಬಟ್ಟೆಬರೆಗಳನ್ನೆಲ್ಲಾ ಸೂಟ್‌ಕೇಸಿಗೆ ತುಂಬಿ ಮೇಜಿನ ಮೇಲಿಟ್ಟಿತ್ತು. ಅದರ ಪಕ್ಕದಲ್ಲೇ ಹಾಸುಗೆ ಸೇರಿಸಿ ಸುತ್ತಿದ ಹೋಲ್ಡಾಲ್ ಇತ್ತು. ರೋಷನ್ ಒಂದು ಕಾಗದವನ್ನು ಕೂಡ ಬರೆದಿಟ್ಟು ಹೋಗಿರಲಿಲ್ಲ. ಅದರ ಅರ್ಥವೇನು?

ಮಧುಸೂದನ ಒಂದು ಗಳಿಗೆ ನಿಂತು ಯೋಚಿಸಿದ. ಅವನ ಮನಸ್ಸಿನಲ್ಲಿ ವಿವಿಧ ಭಾವನೆಗಳೇಳುತ್ತಿದ್ದವು.

ಆಳಿಗೆ ಏನಾದರೂ ವಿಷಯ ಗೊತ್ತಿರಬಹುದೆ? ತಿಳಿದೂ ಅವನೇನನ್ನಾದರೂ ಮರೆಮಾಜುತ್ತಿರಬಹುದೆ? ಮಧುಸೂದನ ಮತ್ತೆ ಹೊರಗೆ ಬಂದು ಆಳನ್ನು ಕೂಗಿದ.

"ಕೂಗಿದಿರಾ, ಹುಜೂರ್?"

ಎನ್ನುತ್ತ ಹವಿಾದ್ ಬಂದು ಎದುರಿಗೆ ನಿಂತ. ಮಧುಸೂದನ ಜೇಬಿನಿಂದ ಐದು ರೂಪಾಯಿಯ ಒಂದು ನೋಟು ತೆಗೆದು ಅವನ ಕೈಯಲ್ಲಿತ್ತ. ಹವಿಾದನ ಮುಖ ಹಿಗ್ಗಿತು.

"ಏನು ಸಮಾಚಾರ ಹವಿಾದ್; ನನ್ನೊಡನೆ ಹೇಳು."

ಆಳು ಒಂದು ಕ್ಷಣ ನಿರುತ್ತರನಾಗಿ ನಿಂತ. ಜಾಗೃತಗೊಂಡ ಅವನ ದೃಷ್ಟಿ ಸುತ್ತ ಹರಿದಾಡಿತು. ಬಳಿಕ ಮಧುಸೂದನನ ಹತ್ತಿರ ಬಂದು ತಗ್ಗಿದ ಧ್ವನಿಯಲ್ಲಿ,

"ಚಿಕ್ಕ ಬಾಯಿಸಾಹಿಬಾ ಸೇಟರ ಸಂಗಡ ಪುಣೆಗೆ ಹೋದರು"

ಎಂದ. ಅವನ ಮುಖದ ಮೇಲೆ ಕೊಂಕುನಗೆ ಕಾಣಿಸಿಕೊಂಡಿತು.

"ಯಾವ ಸೇಟ್?"

"ಸೇಟ್ ಗೋವಿಂದದಾಸ್, ದೊಡ್ಡ ಅಮ್ಮಾವರ –"

ಎಂದು ಅರ್ಧೋಕ್ತಿಯಲ್ಲಿ ವ್ಯಂಗ್ಯವಾಗಿ ನಿಲ್ಲಿಸಿದ. ಅದನ್ನು ಕೇಳಿ ಮಧುಸೂದನನ ಮೈ ಬೆಂಕಿಯಾಯಿತು.

"ಯಾವಾಗ ಬರುವಳೆನ್ನುವುದು ಗೊತ್ತೆ?"

"ಸದ್ಯಕ್ಕೆ ಬರುವ ಹಾಗೆ ಕಾಣಲಿಲ್ಲ, ಹುಜೂರ್. ಬಾಯಿಸಾಹಿಬಾ ಒಂದು ಹೋಲ್ಡಾಲ್, ಎರಡು ಸೂಟ್ ಕೇಸು ತೆಗೆದುಕೊಂಡು ಹೋಗಿದ್ದಾರೆ."

ಆ ಮಾತು ಕೇಳಿ ಮಧುಸೂದನನ ಮೈಯಲ್ಲಿ ಮುಳ್ಳೆದ್ದ ಹಾಗಾಯಿತು. ಕುರ್ಚಿಯ ಮೇಲೆ ಕುಳಿತು ಎರಡು ಕೈಗಳಿಂದಲೂ ತಲೆಯನ್ನು ಒತ್ತಿಹಿಡಿದು

ಕೊಂಡ. ಜುಗುಪ್ಸೆ ಅವನ ಮನಸ್ಸನ್ನಾವರಿಸಿತು. ಆ ಮನೆಯಲ್ಲಿ ಒಂದು ಗಳಿಗೆಯೂ ನಿಲ್ಲುವುದು ಸಾಧ್ಯವಿಲ್ಲವೆನ್ನಿಸಿತು. ಇನ್ನು ಅವನಿಗೆ ಅಲ್ಲಿ ಸ್ಥಳ ವಿರಲಿಲ್ಲ. ರೋಷನ್ ಅವಳನ್ನು ಕಾಲುಕಸದಂತೆ ಒತ್ತರಿಸಿ ಹೆರರ ತೆಕ್ಕೆಗೆ ಹಾರಿದ್ದಳು.

"ಹಮಾದ್, ಒಂದು ಟ್ಯಾಕ್ಸಿ ತೆಗೆದುಕೊಂಡು ಬಾ"

ಎಂದು ಉದ್ವಿಗ್ನನಾಗಿ ಎದ್ದು ನಿಂತ. ಆಳು ಬೆಪ್ಪನಂತೆ ಸುಮ್ಮನೆ ಮುಖ ನೋಡುತ್ತ ನಿಂತಿದ್ದ.

"ಹೋಗು, ಬೇಗ ಹೋಗು. ನನ್ನನ್ನು ಕಾಯಿಸಬೇಡ"

ಎಂದು ಅವನನ್ನಟ್ಟಿದ. ಕಾಲು ಘಂಟೆಯೊಳಗೆ ಟ್ಯಾಕ್ಸಿ ಬಂದು ಬಾಗಿಲಲ್ಲಿ ನಿಂತಿತು. ಮಧುಸೂದನ ಸೂಟ್‌ಕೇಸ್ ಹೋಲ್ಡಾಲುಗಳನ್ನು ಆಳಿನ ಕೈಯಲ್ಲಿ ತೆಗೆಸಿಕೊಂಡು ಹೊರಗೆ ಬಂದ.

"ಯಾರಾದರೂ ಕೇಳಿದರೆ ನಾನು ಹೊರಟುಹೋದೆನೆಂದು ಹೇಳು"

ಎನ್ನುತ್ತ ಟ್ಯಾಕ್ಸಿ ಹತ್ತಿ ಕುಳಿತ. ಹಮಾದ್ ಬಾಯಿಬಿಟ್ಟುಕೊಂಡು ನೋಡುತ್ತ ನಿಂತಿದ್ದಂತೆಯೇ ಟ್ಯಾಕ್ಸಿ 'ಷಿರಾಜ್ ಮಂಜಿಲ್' ಬಿಟ್ಟು ಹೊರಟು ಹೋಯಿತು.

೧೫

ಶಿವರಾಮಯ್ಯ ಕೆಟ್ಟು ಬದುಕಿದ ಮನುಷ್ಯ.

ಅವನು ಕೆಡುವುದಕ್ಕೂ ಕಾರಣವಿತ್ತು, ಬದುಕುವುದಕ್ಕೂ ಕಾರಣವಿತ್ತು.

ಪದವೀಧರನೆಂದು ಅವನು ಪಟ್ಟಣ ಸೇರಲು ಹಾತೊರೆಯಲಿಲ್ಲ. ನೌಕರಿಗೆ ಆಸೆ ಪಟ್ಟಿದ್ದರೆ ಉಪಾಧ್ಯಾಯನೋ ಗುಮಾಸ್ತೆಯೋ ಆಗಿ ಎಲ್ಲೋ ಇರಬಹುದಾಗಿತ್ತು. ಆದರೆ ಆ ಮೂರು ಕಾಸಿನ ತಾಪೇದಾರಿ ಅವನಿಗೆ ಬೇಕಾಗಿರಲಿಲ್ಲ. ಎರಡು ಎಕರೆ ಗದ್ದೆ, ಮೂರಂಕಣದ ಮನೆ ಹಳ್ಳಿಯ ಜೀವನಕ್ಕೆ ಸಾಕಾಗಿದ್ದವು. ಜೊತೆಗೆ, ತಂದೆ ಸತ್ತ ಮೇಲೆ ಶ್ಯಾನುಭೋಗಿಕೆಯೂ ಕೈಗೆ ಬಂದಿತ್ತು. ಶಿವರಾಮಯ್ಯ ನೇರಳೆಯಲ್ಲೇ ನೆಲಸಿ ಸ್ವಂತ ವ್ಯವಸಾಯಕ್ಕೆ ಗಮನ ಕೊಟ್ಟ. ಇರುವ ಭೂಮಿ ಕಾಣಿಗಳನ್ನು ಊರ್ಜಿತಪಡಿಸಿಕೊಂಡರೆ ಅದೇ ಸಾಕೆಂದು ಅವನಿಗನ್ನಿಸಿತು.

ಹಳ್ಳಿಯನ್ನು ಆದರ್ಶಗ್ರಾಮವನ್ನಾಗಿ ಮಾಡಬೇಕೆನ್ನುವ ಅಪೇಕ್ಷೆ ಅವನಿಗಿತ್ತು. ಪಾರ್ಟಿ ವೈಷಮ್ಯ, ಜಮೀನು ವ್ಯಾಜ್ಯಗಳಿಂದ ಗ್ರಾಮದ ಜನ ಕೋರ್ಟು ಕಚೇರಿ ಹತ್ತಿ ಕೈಬಾಯಿ ಬರಿದು ಮಾಡಿಕೊಂಡು ಬರುತ್ತಿದ್ದರು. ಅವರನ್ನು ತಿದ್ದಿ ಅವರಲ್ಲಿ ಸೋದರಭಾವನೆ ತುಂಬುವುದು ಅಗತ್ಯವಾಗಿತ್ತು. ಜನಕ್ಕೆ ಶಿಸ್ತು ನೈರ್ಮಲ್ಯಗಳನ್ನು ಬೋಧಿಸಿ ಅವರ ಜಡಜೀವನಕ್ಕೆ ಹುರುಪು ಕೊಡುವುದು ಅವಶ್ಯವಾಗಿತ್ತು.

ಶಿವರಾಮಯ್ಯ ಈ ಕೆಲಸಗಳನ್ನೆಲ್ಲಾ ಉತ್ಸಾಹದಿಂದ ಮಾಡಬೇಕೆಂದುಕೊಂಡ. ಓದಿದ ಹುಡುಗಿ ಕುಮುದಾ ಅವನ ಕೈಹಿಡಿದಾಗ ಅವನ ಬಯಕೆ ಕವಲೊಡೆಯಿತು. ವಿದ್ಯಾವಂತ ಹೆಂಡತಿಯ ನೆರವಿನಿಂದ ತನ್ನ ಆದರ್ಶವನ್ನು

ಸುಲಭವಾಗಿ ಸಾಧಿಸಬಹುದೆಂದುಕೊಂಡ. ನೇರಳೆ ಸುತ್ತಮುತ್ತಣ ಹಳ್ಳಿಗಳಿಗೆ ಭೂಷಣವಾದೀತೆನ್ನುವ ಅಪೇಕ್ಷೆಯ ಹಗಲುಗನಸುಗಳು ಅವನನ್ನು ಮುತ್ತಿದವು.

ಆದರೆ ಕುಮುದನನ್ನು ಮದುವೆಯಾದಾಗ ಶಿವರಾಮಯ್ಯನಿಗೆ ಇದ್ದ ಉತ್ಸಾಹ ಅವಳು ಮನೆಗೆ ಬಂದಾಗ ಇರಲಿಲ್ಲ.

ಅವನ ಹುಚ್ಚು ಆದರ್ಶವನ್ನು ನೋಡಿ ಅವಳು ನಕ್ಕಳು. ಅವನ ಗ್ರಾಮೋದ್ಧಾರ ನೀತಿ ಅವಳಿಗೆ ಹಿಡಿಸಲಿಲ್ಲ. ಬೆಟ್ಟಕ್ಕೆ ಕಲ್ಲು ಹೊರುವ ಕೆಲಸ ಅವಳಿಗೆ ಸ್ವಲ್ಪವೂ ಸಮ್ಮತವಾಗಲಿಲ್ಲ. ಬಂದ ನಾಲ್ಕು ದಿವಸಕ್ಕೇ ತನ್ನ ಅಸಮಾಧಾನವನ್ನು ಸೂಚಿಸಿದಳು.

ಅವಳಿಗೆ ಬೇಕಾಗಿದ್ದುದು ಹಳ್ಳಿಯ ಆದರ್ಶ ಜೀವನವಲ್ಲ, ನಗರದ ಸುಖಲೋಲುಪ್ತ ಜೀವನ. ಬಂದ ಒಂದು ತಿಂಗಳೊಳಗಾಗಿಯೇ ಶಿವರಾಮಯ್ಯನನ್ನು ನಾಲ್ಕು ಸಲ ಮೈಸೂರಿಗೆ ಹೊರಡಿಸಿಕೊಂಡು ಹೊರಟುಬಿಟ್ಟಳು. ನೇರಳೆಯಂಥ ಕುಗ್ರಾಮದ ಮುಖ ನೋಡುವುದೂ ಅವಳಿಗೆ ಬೇಡವಾಗಿತ್ತು.

ಶಿವರಾಮಯ್ಯನಿಗೆ ತಾಪತ್ರಯಕ್ಕಿಟ್ಟುಕೊಂಡಿತು. ಅವನು ಹೆಂಡತಿಯನ್ನು ಅಸಮಾಧಾನಪಡಿಸಲೊಲ್ಲ; ತನ್ನ ಆದರ್ಶವನ್ನು ಬಿಡಲೂ ಒಲ್ಲ. ಅವಳ ಹುಚ್ಚು ಕುಣಿತಕ್ಕೆ ಈಡಾಗುವುದೂ ಅವನಿಗೆ ಅಸಾಧ್ಯವಾಯಿತು. ಎರಡು ಶಕ್ತಿಗಳ ನಡುವೆ ಘರ್ಷಣೆ ಅನಿವಾರ್ಯವಾಯಿತು. ಅವನು ಬೇಸರಪಟ್ಟುಕೊಂಡು ಮೈಸೂರಿಗೆ ಬರಲೊಲ್ಲೆನೆಂದಾಗ ಅವಳೊಬ್ಬಳೇ ಹೋಗಿಬಿಡುತ್ತಿದ್ದಳು. ನಾಲ್ಕೋ ಎಂಟೋ ದಿನ ಇದ್ದು ಬಂದರೆ ಮತ್ತೆ ಮೂರು ದಿನ ತುಂಬುವ ಮೊದಲೇ ಕಾಲ್ತೆಗೆಯುತ್ತಿದ್ದಳು. ಆ ಬಣ್ಣದ ಬೀಸಣಿಗೆಯ ಓಡಾಟ ನೋಡಿ ಹಳ್ಳಿಯ ಆ ಜನಕ್ಕೆ ಸೋಜಿಗವಾಯಿತು.

ನೇರಳೆಯುವರನ್ನು ಅವಳು ಕಾಣುತ್ತಿದ್ದ ರೀತಿಯೂ ತುಂಬ ತುಚ್ಛವಾಗಿತ್ತು. ಅವಳ ಅಭಿಪ್ರಾಯದಲ್ಲಿ ಅವರು ಅನಾಗರಿಕ ಪಶುಗಳಾಗಿದ್ದರು. ಮನೆಯ ಆಳುಕಾಳುಗಳನ್ನು, ಹಳ್ಳಿಯ ಹೆಂಗಸರನ್ನು ನಿಕೃಷ್ಟವಾಗಿ ಕಂಡು ಮಾತಾಡಿಸುತ್ತಿದ್ದಳು. ಅವರಲ್ಲಿ ಅವಳಿಗೆ ವಿಶ್ವಾಸದ ಮಾತಿರಲಿ, ಸಹನೆಯೂ ಇರಲಿಲ್ಲ.

ಅಷ್ಟಕ್ಕೇ ನಿಂತಿದ್ದರೆ ಹೇಗೋ ಆಗುತ್ತಿತ್ತು. ಆದರೆ ಕುಮುದಾ ಇನ್ನೂ ಹಲವು ಬಗೆಯಲ್ಲಿ ಮುಂದುವರಿದಿದ್ದಳು.

ಮೈಸೂರಿನಲ್ಲಿ ಅವರ ತಾಯಿ, ಚಿಕ್ಕಮ್ಮ ಪ್ರಖ್ಯಾತಿ ಪಡೆದಿದ್ದರು.

ಕಾಲೇಜಿನಲ್ಲಿದ್ದಾಗ ಅವಳ ಕೀರ್ತಿಯೂ ಚೆನ್ನಾಗಿ ಬೆಳಗಿತ್ತು. ಜೊತೆಯ ವಿದ್ಯಾರ್ಥಿಗಳೊಡನೆ, ಲೆಕ್ಚರರುಗಳೊಡನೆ ಅವಳ ಸ್ನೇಹ ಸರಸಗಳಿಗೆ ಕೊನೆ ಮೊದಲಿರಲಿಲ್ಲ. ಅವಳು ಕಾಲೇಜು ಬಿಟ್ಟು ಬರುವವರೆಗೂ ಒಂದಲ್ಲ ಒಂದು ರೀತಿಯ ಗುಲ್ಲು ಆಗುತ್ತಲೇ ಇತ್ತು. ಆದರೆ ಅದೆಲ್ಲಾ ಹೇಗೋ ಮುಚ್ಚಿ ಶಿವರಾಮಯ್ಯನ ಕೊರಳಿಗೆ ಅವಳು ಗಂಟು ಬಿದ್ದಿದ್ದಳು.

ಕೋರ್ಟಿನ ಕೆಲಸಕ್ಕೆ, ಮತ್ತೊಂದು ವ್ಯವಹಾರಕ್ಕೆ ಮೈಸೂರಿಗೆ ಹೋಗಿ ಬರುತ್ತಿದ್ದ ಗೌಡಕುಳಗಳು ನೇರಳೆಗೆ ಒಂದೊಂದೇ ಸುದ್ದಿ ತರುತ್ತಿದ್ದರು. ನೇರಳೆಯ ಜನ ಕುಮುದನನ್ನು ಹೊಸ ದೃಷ್ಟಿಯಿಂದ ನೋಡತೊಡಗಿತು.

"ಏನೋಂತಿದ್ದೋ. ಐನೋರ ಹೆಡ್ತಿ ಹಿಂಗಾ?"

ಎಂದು ಗ್ರಾಮದ ಹಿರಿಯ ಹೆಂಗಸರು ಮೂಗಿನ ಮೇಲೆ ಬೆರಳಿಟ್ಟು ಕೊಂಡರು. ಪಡ್ಡೆಯ ಹುಡುಗರಲ್ಲಿ ಐನೋರ ಹೆಂಡತಿಯ ಸುದ್ದಿ ನಗೆಪಾಟ ಲಾಯಿತು. ಶಿವರಾಮಯ್ಯನ ಕಿವಿಗೂ ಆಗೊಂದು ಈಗೊಂದು ಅರ್ಥಗರ್ಭಿತ ವಾದ ಮಾತು ಬಿದ್ದು ಹಳ್ಳಿಯಲ್ಲಿ ಅವನು ತಲೆಯೆತ್ತಿಕೊಂಡು ತಿರುಗಲಾರದ ಹಾಗಾಯಿತು. ಕುಮುದಾ ಅವನಿಗೆ ನುಂಗಲಾರದ ತುತ್ತಾದಳು. ಬಂಗಾರದ ಕತ್ತಿ ಹೊಟ್ಟೆಯನ್ನೇ ಕೊಯ್ಯತೊಡಗಿತು.

ಶಿವರಾಮಯ್ಯನ ಮೃದು ಸ್ವಭಾವಕ್ಕೆ ಅವಳು ಜಗ್ಗುವ ಹೆಣ್ಣಾಗಿರಲಿಲ್ಲ. ಅವನ ದಾರಿಗೆ ಅವಳು ಬರುವುದಿರಲಿ, ಅವನ ಮಾನ ಉಳಿಯುವುದೇ ಕಷ್ಟವಾಯಿತು. ಅವಳನ್ನು ಕಟ್ಟಿಕೊಂಡು ಅವನು ನೇರಳೆಯಲ್ಲಿ ನಾಲ್ಕು ಜನರ ನಡುವೆ ಮಾನವಾಗಿ ಬಾಳುವುದು ಕಷ್ಟವಾಯಿತು. ನೇರಳೆಯನ್ನು ಬಿಡುವುದಲ್ಲದೆ ಬೇರೆ ಮಾರ್ಗವೇ ಉಳಿದಿರಲಿಲ್ಲ. ಶಿವರಾಮಯ್ಯ ಮೈಸೂರಿನ ಒಬ್ಬಿಬ್ಬರು ಗೆಳೆಯರ ಸಲಹೆಯಂತೆ ನೇರಳೆಯ ಸ್ವತ್ತನ್ನು ಆರಕ್ಕೆ ಮೂರಾಗಿ ಮಾರಿ ಹೆಂಡತಿಯೊಡನೆ ಮೈಸೂರು ಸೇರಿದ.

ಶಿವರಾಂ ಪೇಟೆಯಲ್ಲಿ ಒಂದು ಹೋಟೆಲನ್ನು ತೆರೆದದ್ದಾಯಿತು. ಅವನ ಹತ್ತಿರ ಬರುತ್ತಿದ್ದ ಗೆಳೆಯರು, ಸಲಹೆ ನೀಡಲು ಸಿದ್ಧರಾಗಿದ್ದ ಹಿತೈಷಿಗಳು ಅವನ ಮುದ್ದುಮುಖ ನೋಡಿಕೊಂಡು ಹೋಗುವುದಕ್ಕೆ ಬರುತ್ತಿರಲಿಲ್ಲ. ಅವರಿಗೆ ಬೇಕಾಗಿದ್ದುದು ಕುಮುದನ ಸ್ನೇಹ, ಅವಳೊಡನೆ ಸರಸ, ಆ ಅವಕಾಶ ವನ್ನು ಅವರು ಧಾರಾಳವಾಗಿ ಉಪಯೋಗಿಸಿಕೊಳ್ಳುತ್ತಿದ್ದರು. ಅವನ

ಹೋಟೆಲಿಗೆ ಬರುತ್ತಿದ್ದ ಗಿರಾಕಿಗಳಲ್ಲಿ ಸಾಲದಲ್ಲಿ ತಿಂಡಿ ತಿಂದು ಅವನ ಹೆಂಡತಿಯ ಮೇಲೆ ಕಣ್ಣು ಹಾಕಿ ಹೋಗುತ್ತಿದ್ದ ಮಂದಿಯೇ ಹೆಚ್ಚಾಗಿದ್ದರು. ಹೆಂಡತಿಯ ಷೋಕಿಯಲ್ಲಿ, ದುಂದು ವೆಚ್ಚದಲ್ಲಿ, ಸ್ವೇಚ್ಛಾ ಜೀವನದಲ್ಲಿ ಶಿವರಾಮಯ್ಯ ಹಣ್ಣಾದ. ಮೂರೇ ತಿಂಗಳಲ್ಲಿ ಹೋಟೆಲು ದಿವಾಳಿಯೆದ್ದಿತು. ಶಿವರಾಮಯ್ಯ ಇದ್ದಬದ್ದ ಕಾಸು ಜೋಡಿಸಿಕೊಂಡು ಹೇಳದೆ ಕೇಳದೆ ಹೆಂಡತಿಯೊಡನೆ ಮುಂಬಯಿಯ ಹಾದಿ ಹಿಡಿದ.

ಮಾತುಂಗದಲ್ಲಿ 'ವಿಜಯವಿಲಾಸ' ಅವತರಿಸಿತು.

ತೂಕಡಿಸುತ್ತಿದ್ದವಳಿಗೆ ಹಾಸುಗೆ ಹಾಸಿಕೊಟ್ಟ ಹಾಗಾಯಿತು. 'ವಿಜಯವಿಲಾಸ'ಕ್ಕೆ ಬರುತ್ತಿದ್ದ ರಸಿಕ ಗಿರಾಕಿಗಳೊಡನೆ ಕುಮುದಾ ಸ್ನೇಹ ಬೆಳೆಸಲಾರಂಭಿಸಿದಳು. ಹೆಂಡತಿಯ ಸ್ವೈರಬುದ್ಧಿ ನೋಡಿ ಶಿವರಾಮಯ್ಯನಿಗೆ ಮೊದಲು ಮೊದಲು ಜುಗುಪ್ಸೆಯಾಯಿತು. ಅದರೊಡನೆ ಕೋಪವೂ ಮೂಡಿತು. ಆದರೆ ಅವು ಯಾವುದಕ್ಕೂ ಅವಳು ಸೊಪ್ಪುಹಾಕುವ ಹಾಗಿರಲಿಲ್ಲ. ಗಂಡನನ್ನು ಪೂರ್ತಿಯಾಗಿ ನಿರ್ಲಕ್ಷಿಸಿ ತನ್ನ ಆಟದಲ್ಲಿ ತಾನು ಮುಳುಗಿದಳು. ಅವಳ ದಾರಿಗೆ ಅವನು ಬರದೆ ವಿಧಿಯೇ ಇರಲಿಲ್ಲ. ಆ ಸ್ಥಿತಿ ಕ್ರಮೇಣ ಅವನಿಗೂ ಅಭ್ಯಾಸವಾಗಿಬಿಟ್ಟಿತು.

ಆ ಅಭ್ಯಾಸ ಅವನ ಮನಸ್ಸಿನಲ್ಲಿ ಹೊಸ ಹಂಚಿಕೆಯೊಂದರ ಮೊಳಕೆಯನ್ನಿಟ್ಟಿತು. ಹೋಟೆಲಿನ ವ್ಯಾಪಾರ ಅಷ್ಟೇನೂ ತೃಪ್ತಿಕರವಾಗಿರಲಿಲ್ಲ. ಅದನ್ನು ಕುದುರಿಸಲು ಅವನಲ್ಲಿ ಸಾಕಷ್ಟು ಹಣವಿರಲಿಲ್ಲ. ಹೆಂಡತಿಯ ಚಟವನ್ನೇ ವ್ಯಾಪಾರಕ್ಕೊಂದು ಸಾಧನವನ್ನಾಗಿ ಏಕೆ ಉಪಯೋಗಿಸಿಕೊಳ್ಳಬಾರದೆಂದು ಅವನು ಯೋಚಿಸಿದ. ವ್ರತವನ್ನು ಎಂದೋ ಕೆಟ್ಟದ್ದಾಗಿತ್ತು. ಇನ್ನು ಅದರಿಂದ ಸುಖವಾದರೂ ಲಭಿಸುವ ಹಾಗಿದ್ದರೆ ಅದನ್ನೂ ಏಕೆ ಬಿಡಬೇಕೆಂದು ಅವನ ಬುದ್ಧಿ ಯೋಚಿಸಿತು. ಹೆಂಡತಿಯ ಆಧಾರದ ಮೇಲೆ ವ್ಯಾಪಾರಕ್ಕೆ ಬಂಡವಾಳ ಕೊಡುವ ಧನಿಕರಿಗೆ ಮುಂಬಯಿಯಲ್ಲೇನೂ ಕೊರತೆ ಇರಲಿಲ್ಲ.

'ವಿಜಯವಿಲಾಸ' ಕಟ್ಟಡ ಬದಲಾಯಿಸಿತು. ಊಟ ವಸತಿಗಳ ವ್ಯವಸ್ಥೆ

ಆಯಿತು. ಜೊತೆಗೆ ನಾಲ್ಕಾರು ಹುಡುಗಿಯರೂ ಬಂದು ಸೇರಿದರು. ಶಿವರಾಮಯ್ಯನ ವ್ಯಾಪಾರ ಮೂರಕ್ಕೆ ಮೂವತ್ತಾಗಿ ಕುದುರಿತು.

ಮಧುಸೂದನ 'ವಿಜಯವಿಲಾಸ'ದಲ್ಲಿ ರೂಮು ಗೊತ್ತುಮಾಡಿಕೊಂಡು ಬಂದಿಳಿದಾಗ ಕುಮುದನ ಕಣ್ಣು ಅವನ ಮೇಲೆ ಬಿತ್ತು.

ಅವನೇನೂ ಆವಳಿಗೆ ಹೊಸಬನಾಗಿರಲಿಲ್ಲ. ಮುಖ ಪರಿಚಯವಿಲ್ಲ ದಿದ್ದರೂ ಅವನ ವಿಷಯವನ್ನು ಕುಮುದಾ ಸಾಕಷ್ಟು ತಿಳಿದುಕೊಂಡಿದ್ದಳು. ಮೈಸೂರಿನಲ್ಲಿ ಅವನ ಸಂಗೀತ ಕಚೇರಿಗಳನ್ನು ಕೇಳಿ ಮಾರುಹೋಗಿದ್ದಳು. ಒಮ್ಮೆ ಅವನ ಸ್ನೇಹಕ್ಕೆ ಕಾತರಿಸಿ ಕಾಗದವನ್ನೂ ಬರೆದಿದ್ದಳು. ಆದರೆ ಮಧುಸೂದನ ಆದನ್ನು ಲಕ್ಷಿಸಿದಂತಿರಲಿಲ್ಲ. ಅವಳು ಬರೆದಿದ್ದ ಕಾಗದಕ್ಕೂ ಅದರೊಡನೆ ಕಳಿಸಿದ್ದ ಭಾವಚಿತ್ರಕ್ಕೂ ಯಾವ ಗತಿ ಒದಗಿತ್ತೆನ್ನುವುದು ಅವಳಿಗೆ ಗೊತ್ತಿರಲಿಲ್ಲ.

ಈಗ ಅನಾಯಾಸವಾಗಿ ಬೇಟೆ ತಾನಾಗಿ ಬಂದು ಬಲೆಗೆ ಬಿದ್ದಿತ್ತು. ಕುಮುದಾ ತನ್ನ ಅದೃಷ್ಟಕ್ಕೆ ಮನಸ್ಸಿನಲ್ಲೇ ಬೆನ್ನು ತಟ್ಟಿಕೊಂಡಳು.

ಆ ರಾತ್ರಿ ಮಧುಸೂದನನ ಊಟಕ್ಕೆ ವಿಶೇಷ ವ್ಯವಸ್ಥೆಯಾಯಿತು. ಕುಮುದಾ ಅಡಿಗೆಯವನನ್ನು ಬಿಡದೆ ಬಡಿಸಲು ತಾನೇ ನಿಂತುಕೊಂಡಳು. ಹೋಟೆಲಿನಲ್ಲಿ ಹೆಂಗಸರ ಕೈಯಲ್ಲಿ ಊಟಮಾಡುವ ಅನುಭವ ಮಧುಸೂದನನಿಗೆ ಹೊಸದಾಗಿತ್ತು. ಗಡಿಬಿಡಿಯ ವಾತಾವರಣವಿಲ್ಲದೆ ಮನೆಯಂತೆ ಉಪಚಾರ ನಡೆದ ರೀತಿ ನೋಡಿ ಅವನ ಮನಸ್ಸಿಗೆ ಹಿತವಾಯಿತು. ಆ ಸನ್ನಿವೇಶ ಅವನ ಬೇಸರವನ್ನು ಬಹುಮಟ್ಟಿಗೆ ಕಡಮೆ ಮಾಡಿತು.

ಊಟವಾಗಿ ಅವನು ಕೈತೊಳೆದುಕೊಂಡು ತನ್ನ ರೂಮಿಗೆ ಹೋದ ಸ್ವಲ್ಪ ಹೊತ್ತಿನಲ್ಲೇ ಕುಮುದಾ ಕೈಯಲ್ಲಿ ವೀಳ್ಯದ ತಟ್ಟೆ ಹಿಡಿದು ಬಂದಳು. ಮಧುಸೂದನನಿಗೆ ಅದನ್ನು ನೋಡಿ ಅಚ್ಚರಿಯಾಯಿತು. ಆದರೂ ಅದನ್ನು ತೋರಗೊಡದೆ ಸೌಜನ್ಯ ತುಂಬಿದ ಧ್ವನಿಯಲ್ಲಿ,

"ನೀವೇ ಬರಬೇಕಾಗಿತ್ತೆ? ಎಷ್ಟು ತೊಂದರೆ ತೆಗೆದುಕೊಳ್ಳುತ್ತಿರುವಿರಿ"

ಎಂದ. ಕುಮುದನ ಮುಖದಲ್ಲಿ ಮುಗುಳ್ನಗೆ ಸೂಸಿತು.

"ನಿಮ್ಮಂಥವರ ಸೇವೆ ಮಾಡುವುದೂ ತೊಂದರೆಯೆ?"

ಎಂದು ಅವನ ಕಡೆ ಅರ್ಥಗರ್ಭಿತ ನೋಟವನ್ನು ಬೀರಿದಳು. ಮಧು

ಸೂದನ ಅವಳ ಮುಖವನ್ನು ದಿಟ್ಟಿಸಿ ನೋಡಿದ. ಕುಮುದಾ ಚಲುವೆಯೆನ್ನಲು ಅಡ್ಡಿಯಿರಲಿಲ್ಲ. ಆ ಕಣ್ಣು, ಕೆನ್ನೆ, ಮುಖಭಾವ ಅವನಿಗೆ ಪರಿಚಿತವಾಗಿದ್ದಂತೆ ತೋರಿತು. ಅವಳನ್ನು ಎಲ್ಲೋ ನೋಡಿರಬಹುದೆಂದು ನೆನಪಾಯಿತು. ಎಲ್ಲೆನ್ನುವುದು ಬೇಗ ಹೊಳೆಯಲಿಲ್ಲ. ಅವಳನ್ನೇ ಕೇಳಿದರೆ ಸಮಸ್ಯೆ ಬಗೆಹರಿಯಬಹುದೆಂದುಕೊಂಡ.

"ನಿಮ್ಮನ್ನು ಎಲ್ಲೋ ನೋಡಿರುವ ಹಾಗೆ ಜ್ಞಾಪಕ. ಈ ಮೊದಲು ನಾವು ಎಲ್ಲಾದರೂ ಭೇಟಿಯಾಗಿದ್ದೆವೆ?"

"ನನ್ನನ್ನು ನೋಡಿರಲಾರಿರಿ; ನನ್ನ ಫೋಟೋ ನೋಡಿರಬಹುದು"

ಎಂದು ತಕ್ಷಣ ಉತ್ತರ ಕೊಟ್ಟಳು. ಫೋಟೋ ಎನ್ನುತ್ತಲೂ ಮಧುಸೂದನನ ಸ್ಮೃತಿಯ ಆಳದಲ್ಲಿ ಮುಳುಗಿದ್ದ ಒಂದು ಘಟನೆ ಥಟಕ್ಕನೆ ಮೇಲೆ ತೇಲಿತು.

"ನೀವು ಯಾವಾಗಲಾದರೂ ನನಗೆ ಕಾಗದ ಬರೆದಿದ್ದಿರಾ?"

"ಬರೆದಿದ್ದೆ."

"ನಿಮ್ಮ ಹೆಸರು ಕುಮುದಾ ಅಲ್ಲವೆ?"

"ಹೌದು"

ಎನ್ನುತ್ತ ನಸುನಾಚಿ ತಲೆ ತಗ್ಗಿಸಿದಳು. ಅವಳು ಅಲ್ಲಿಗೆ ಹೇಗೆ ಬಂದಳೆನ್ನುವುದು ಬಂದು ಮಧುಸೂದನನಿಗೆ ಅರ್ಥವಾಗಲಿಲ್ಲ.

"ಹಾಗಾದರೆ ನೀವು, ಇಲ್ಲಿ...."

ಎಂದು ಅರ್ಧೋಕ್ತಿಯಲ್ಲಿ ನಿಲ್ಲಿಸಿದ.

"ಈ ಹೋಟೆಲಿನ ಮಾಲೀಕರು ನಮ್ಮ ಯಜಮಾನರು"

ಎಂದು ಕುಮುದಾ ಸಂಶಯ ಪರಿಹರಿಸಿದಳು. ಸ್ವಲ್ಪಹೊತ್ತು ಇಬ್ಬರೂ ಮೌನವಾಗಿದ್ದರು. ಕುಮುದಾ ಬಾಗಿಲು ಮುಂದೆ ಮಾಡಿ ಬಂದು ವೀಳ್ಯದ ತಟ್ಟೆಯನ್ನು ಮೇಜಿನ ಮೇಲೆ ಅವನ ಹತ್ತಿರ ಜರುಗಿಸಿದಳು.

"ತಾಂಬೂಲ ಹಾಕಿಕೊಳ್ಳುವುದಿಲ್ಲವೆ?"

"ನನಗೆ ಅದರ ಅಭ್ಯಾಸ ಅಷ್ಟಿಲ್ಲ."

"ಸಂಗೀತಗಾರರಾಗಿ ತಾಂಬೂಲದ ಅಭ್ಯಾಸವಿಲ್ಲವೆ? ಎರಡು ಎಲೆ ಹಾಕಿಕೊಳ್ಳಿ ಅಂದ್ರೆ. ನಾನು ಮಡಿಸಿಕೊಡುತ್ತೇನೆ"

ಎಂದು ಮಧುರವಾಗಿ ನುಡಿದಳು. ಮಧುಸೂದನನಿಗೆ ಆ ಅನುನಯವನ್ನು ನಿರಾಕರಿಸಲು ಮನಸ್ಸಾಗಲಿಲ್ಲ. ಅವನು ಮುಗುಳ್ನಗೆಯಿಂದ ಸಮ್ಮತಿಯಿತ್ತ. ಕುಮುದಾ ಬಣ್ಣಕಟ್ಟಿದ ಅಡಕೆಯ ಪುಡಿಯನ್ನು ಅವನ ಕೈಯಲ್ಲಿತ್ತು ತೆಳ್ಳಗೆ ಸುಣ್ಣ ಹಚ್ಚಿ ಒಂದೊಂದೇ ಎಲೆಯನ್ನಾಗಿ ಸೀಳು ತೆಗೆದು ಮಡಿಸಿ ಕೊಡತೊಡಗಿದಳು. ಅವಳ ಕೈಯ ಸ್ಪರ್ಶದಿಂದ ಅವನ ರಕ್ತಕ್ಕೆ ಕಾವೇರಿತು. ಏಕಾಂತ ಸನ್ನಿವೇಶ ಬಯಕೆಯನ್ನು ಮೀಟಲಾರಂಭಿಸಿತು. ಅವಳು ಕೊನೆಯ ಎಲೆಯನ್ನು ಮಡಿಸಿಕೊಟ್ಟಾಗ ಅವಳ ಕೈಯನ್ನು ಬಿಡದೆ ಹಾಗೆಯೇ ಹಿಡಿದುಕೊಂಡ.

"ಬೇಡ ಬಿಡಿ. ಬಾಗಿಲು ಬೇರೆ ತೆಗೆದಿದೆ"

ಎಂದು ಕುಮುದಾ ಇಲ್ಲದ ಬಡಿವಾರ ತೋರಿ ಕೈಕೊಸರಿಕೊಳ್ಳಲೆತ್ನಿಸಿದಳು. ಮಧುಸೂದನ ಅವಳ ಕೈಬಿಡದೆ ಹತ್ತಿರ ಎಳೆದುಕೊಂಡು ಬಿಗಿದಪ್ಪಿದ. ಬೇಡವೆಂದವಳು ಅವನ ಮೈಯನ್ನು ನೆಮ್ಮಿನಿಂತು ಆಸೆ ಕೆರಳಿಸುವ ಧ್ವನಿಯಲ್ಲಿ,

"ನಿಮ್ಮನ್ನು ಎಷ್ಟು ದಿವಸದಿಂದ ಬಯಸಿದ್ದೆ, ಗೊತ್ತೆ?"

ಎಂದು ತುಂಬಿದ ತನ್ನ ಎದೆಯನ್ನು ಅವನ ಎದೆಗೊತ್ತಿದಳು. ಮಧುಸೂದನ ಅವಳ ಮಾತಿಗೆ ಉತ್ತರ ಕೊಡುವ ಸ್ಥಿತಿಯಲ್ಲಿರಲಿಲ್ಲ. ಮಾದಕವಾದ ಅವಳ ಮೈಯ ಪರಿಮಳಕ್ಕೆ ಅವನ ಮನಸ್ಸು ಸೊಕ್ಕುತ್ತಿತ್ತು; ಅವಳ ಬಿಸಿಯುಸಿರು ಅವನ ಕೆನ್ನೆಯನ್ನು ಸುಡುತ್ತಿತ್ತು; ಹುಚ್ಚು ಆಸೆ ಅವನ ಅಂಗಾಂಗಗಳಲ್ಲೆಲ್ಲಾ ಹರಿಯಿತು. ಬಾಗಿಲಿಗೆ ಅಗುಳಿ ಹಾಕದಿದ್ದುದನ್ನೂ ಲಕ್ಷಿಸದೆ ಉದ್ವೇಗದ ಭರದಲ್ಲಿ ಅವಳನ್ನೆತ್ತಿಕೊಂಡು ಒಳಗಡೆಯ ರೂಮಿಗೆ ಧಾವಿಸಿದ.

ಆ ಇಡೀ ರಾತ್ರಿಯನ್ನು ಅವರಿಬ್ಬರೂ ನಿದ್ದೆಯಿಲ್ಲದೆಯೆ ಕಳೆದರು.

ಬೆಳಗಿನ ಜಾವದಲ್ಲಿ ಮಧುಸೂದನನಿಗೆ ನಿದ್ದೆ ಹತ್ತಿದ್ದನ್ನು ಕಂಡು ಕುಮುದಾ ಸದ್ದಿಲ್ಲದೆ ಎದ್ದು ರೂಮಿನ ಬಾಗಿಲನ್ನು ಮುಂದಕ್ಕೆ ಎಳೆದುಕೊಂಡು ಹೊರಟು ಹೋದಳು. ಯಾವುದೋ ಗೆಲುವನ್ನು ಸಾಧಿಸಿದಂತೆ ಅವಳ ಮನಸ್ಸು ಹರ್ಷದಿಂದ ಉಬ್ಬಿತ್ತು.

೧೬

ಚಿನ್ನಪ್ಪ ಒಂದೇ ಸಮನೆ ಗಲಾಟೆ ಮಾಡುತ್ತಿದ್ದ.

ಮಧುಸೂದನ ಕಳಿಸಿದ್ದ ಮೂರು ತಿಂಗಳ ಬಾಡಿಗೆಯ ಅಡ್ವಾನ್ಸಿನಲ್ಲಿ ಇನ್ನೊಂದು ತಿಂಗಳದು ಅವನ ಮೇಲೆಯೇ ಇದ್ದರೂ ಚಿನ್ನಪ್ಪ ಸುಮ್ಮನೆ ಚಡಪಡಿಸುತ್ತಿದ್ದ. ಒಂಟಿಕೊಪ್ಪಲಿನಲ್ಲಿ ಅವನು ಕಟ್ಟಿಸಿದ್ದ ಮನೆಗಳಲ್ಲಿ ಒಂದಕ್ಕೂ ಹೀಗೆ ಬೀಗ ಹಾಕಿರಲಿಲ್ಲ. ಎಲ್ಲದರಲ್ಲಿಯೂ ಒಂದಲ್ಲ ಒಂದು ಸಂಸಾರ ಬಾಡಿಗೆಗಿತ್ತು. ವಾಸಕ್ಕೆ ಕಟ್ಟಿಸಿದ ಮನೆ ದೀರ್ಘಕಾಲ ಬಾಗಿಲು ಮುಚ್ಚಿರುವುದನ್ನು ನೋಡಿದಾಗಲೆಲ್ಲಾ ಚಿನ್ನಪ್ಪನ ಮನಸ್ಸಿಗೆ ಹೇಗೆ ಹೇಗೋ ಆಗುತ್ತಿತ್ತು. ಬಾಡಿಗೆ ಅವನ ಮೇಲೆಯೇ ಮುಂಗಡವಾಗಿದ್ದುದರಿಂದ ಅವನು ಮಿಸುಕಾಡುವ ಹಾಗಿರಲಿಲ್ಲ. ಆದರೂ ಅವನ ಮನಸ್ಸಿಗೆ ಕಿರಿಕಿರಿ ತಪ್ಪಿರಲಿಲ್ಲ. ಮನೆಗೆ ಹಮೇಷ ಬೀಗ ಹಾಕಿರುವುದನ್ನು ನೋಡಿ ಜನ ಹಲವು ರೀತಿಯಲ್ಲಿ ಮಾತಾಡಿಕೊಳ್ಳುತ್ತಿದ್ದರು; ಬಾಯಿಗೆ ಬಂದ ಪ್ರಶ್ನೆಗಳನ್ನು ಕೇಳುತ್ತಿದ್ದರು.

"ಮನೆಯಲ್ಲಿ ಯಾರಾದರೂ ಸತ್ತಿದ್ದಾರೆಯೆ?"

"ಕೆಟ್ಟ ನಕ್ಷತ್ರದ ಮನೆಯೆ?"

"ದೆವ್ವ ಭೂತ ಸೇರಿಕೊಂಡಿದೆಯೆ?"

"ಕೋರ್ಟು ಕಚೇರಿಗಳ ವ್ಯಾಜ್ಯದಲ್ಲಿ ಮುಚ್ಚಿದೆಯೆ?"

ಹತ್ತೆಂಟು ಮನಸ್ಸು ಹತ್ತೆಂಟು ಬಗೆಯಲ್ಲಿ ಯೋಚಿಸುತ್ತಿತ್ತು, ಊಹೆ ಮಾಡುತ್ತಿತ್ತು, ಕತೆ ಕಟ್ಟುತ್ತಿತ್ತು. ಚಿನ್ನಪ್ಪನ ಕಿವಿಗೆ ಅದೆಲ್ಲಾ ಬೀಳುತ್ತಿತ್ತು. ವೆಂಕಮ್ಮನವರು ಸತ್ತ ಮೇಲೆ ಮಧುಸೂದನ ಒಂದು ತಿಂಗಳೊಳಗೇ ಮನೆ ಬಿಟ್ಟು ಹೊರಟುಹೋಗಿದ್ದುದನ್ನು ಜನ ಗಮನಿಸಿದ್ದರು. ಗೊತ್ತಿದ್ದವರಿಗೆ ಗೊತ್ತಿತ್ತು ಆಕೆ ಕೆಟ್ಟ ನಕ್ಷತ್ರದಲ್ಲಿ ಪ್ರಾಣ ಬಿಡಲಿಲ್ಲವೆಂದು. ಆದರೆ ಹಕ್ಕಿ

ಕುಳಿತು ಕೂಡಲೆ ಹಣ್ಣು ಬಿದ್ದಂತೆ ಒಂದು ಜೀವ ಹೋದ ಸ್ವಲ್ಪ ಕಾಲದಲ್ಲೇ ಮನೆಯ ಬಾಗಿಲು ಮುಚ್ಚಿದ್ದು ಜನ ನಾನಾ ಊಹೆಗಳನ್ನು ಮಾಡಲು ಅವಕಾಶ ಮಾಡಿಕೊಟ್ಟಿತ್ತು. ಹೊಟ್ಟೆಕಿಚ್ಚಿನ ಜನ ತಮ್ಮ ಊಹೆಗೆ ಕೈಕಾಲು ಮೂಡಿಸಿ, ಸತ್ತ ವೆಂಕಮ್ಮ ದೆವ್ವವಾಗಿ ಹಿತ್ತಿಲ ಸೀಬೆಯ ಗಿಡದ ಮೇಲೆ ನೆಲಸಿದ್ದಾರೆಂದು ಹುಟ್ಟಿಸಿದ್ದರು. ಆ ಕಡೆ ಸುಳಿದಾಡುತ್ತಿದ್ದ ಜನ ಮನೆಯನ್ನು ಒಂದು ಬಗೆಯ ಸಂಶಯದೃಷ್ಟಿಯಿಂದ ನೋಡುತ್ತಿದ್ದರು. ಬೀದಿಯಲ್ಲಿ ಆಟವಾಡುವ ಹುಡುಗರಂತೂ ಸುಮ್ಮನಿರುತ್ತಲೇ ಇರಲಿಲ್ಲ.

"ಲೋ, ಆ ಮನೆಯ ಹತ್ತಿರ ಹೋಗಬೇಡಿರೋ. ದೆವ್ವ ಇದೆ"

ಎಂದು ಸಹಪಾಠಿಗಳನ್ನು ಎಚ್ಚರಿಸುತ್ತಿದ್ದರು. ಕತ್ತಲಾದ ಮೇಲಂತೂ ಯಾವ ಹುಡುಗನೂ ಆ ಕಡೆ ತಲೆಹಾಕುತ್ತಿರಲಿಲ್ಲ.

ಇದೆಲ್ಲಾ ಚಿನ್ನಪ್ಪನ ಮನಸ್ಸಿಗೆ ಹಿತವಾಗಿರಲಿಲ್ಲ. ಮನೆಗೆ ಸಲ್ಲಬೇಕಾದ ಬಾಡಿಗೆಯೇನೋ ಮುಂಗಡವಾಗಿಯೇ ಸಲ್ಲುತ್ತಿತ್ತು, ನಿಜ. ಆದರೆ ಜನಕ್ಕೆ ಅದು ಕಾಣುತ್ತಿರಲಿಲ್ಲ. ಚಿನ್ನಪ್ಪ ಮನೆ ಕಟ್ಟಿಸಿದ್ದಾದರೂ ವಾಸಕ್ಕೇ ಹೊರತು ಬಾಗಿಲು ಮುಚ್ಚಿಸಿ ಅದಕ್ಕೆ ಬಾಡಿಗೆ ತೆಗೆದುಕೊಳ್ಳುವುದಕ್ಕಲ್ಲ. ಮನೆಗೆ ಯಾವುದಾದರೂ ಕೆಟ್ಟ ಹೆಸರು ಹತ್ತಿದರೆ ಮುಂದೆ ಸಂಸಾರಸ್ಥರು ಬಾಡಿಗೆಗೆ ಬರಲು ಹಿಂಜರಿಯುತ್ತಾರೆಂದು ಅವನಿಗೆ ಗೊತ್ತಿತ್ತು. ಆ ಕಾರಣದಿಂದಲೇ ಅವನು ಮಧುಸೂದನನಿಗೆ ಕಾಗದ ಬರೆದು ವಿಷಯವನ್ನು ಯಾವುದಾದರೊಂದು ರೀತಿಯಲ್ಲಿ ಇತ್ಯರ್ಥ ಮಾಡಿಕೊಳ್ಳಬೇಕೆಂದುಕೊಂಡ.

ಆದರೆ ಅವನಿಗೆ ಮಧುಸೂದನನ ವಿಳಾಸವೇ ಗೊತ್ತಿರಲಿಲ್ಲ. ಹಿಂದೆ ಮನಿಆರ್ಡರ್ ಬಂದಿದ್ದಾಗ ವಿಳಾಸವನ್ನೇ ಸರಿಯಾಗಿ ಕೊಟ್ಟಿರಲಿಲ್ಲವೋ ಅಥವಾ ದುಡ್ಡು ತೆಗೆದುಕೊಳ್ಳುವ ಆತುರದಲ್ಲಿ ಚಿನ್ನಪ್ಪನೇ ಅದನ್ನು ಗಮನಿಸಿರಲಿಲ್ಲವೋ ಗೊತ್ತಿರಲಿಲ್ಲ. ಅವನು ಸುಮ್ಮನೆ ರುಜು ಹಾಕಿ ಹಣ ಪಡೆದುಕೊಂಡುಬಿಟ್ಟಿದ್ದ. ಈಗ ಪೇಚಾಟದ ಸ್ಥಿತಿ ಬಂದಿತ್ತು.

ಮಧುಸೂದನನ ವಿಚಾರ ಸುಬ್ಬಕೃಷ್ಣನಿಗೆ ಚೆನ್ನಾಗಿ ಗೊತ್ತಿತ್ತು. ಮನೆಯನ್ನು ಅವನಿಗೆ ಕೊಡಿಸಿದ್ದವನೇ ಸುಬ್ಬಕೃಷ್ಣ. ಆದ್ದರಿಂದ ಚಿನ್ನಪ್ಪನ ಅಸಮಾಧಾನ ಸಹಜವಾಗಿಯೇ ಸುಬ್ಬಕೃಷ್ಣನ ಕಡೆ ತಿರುಗಿತು. ಅವನನ್ನು ಕಂಡು ಮಾತಾಡಲು ಒಂದು ದಿನ ಉದ್ದೇಶಪೂರ್ವಕವಾಗಿಯೇ ಕಾಲೇಜಿನ

ಹತ್ತಿರ ಹೋದ. ತರಗತಿ ಮುಗಿಸಿಕೊಂಡು ಆಗತಾನೇ ಹೊರಗೆ ಬರುತ್ತಿದ್ದ ಸುಬ್ಬಕೃಷ್ಣ ಚಿನ್ನಪ್ಪನಿಗೆ ಕಷ್ಟವಿಲ್ಲದೆಯೇ ಸಿಕ್ಕಿದ. ಚಿನ್ನಪ್ಪನನ್ನು ಸುಬ್ಬಕೃಷ್ಣ ನೋಡಿ ಎರಡು ತಿಂಗಳಾಗಿತ್ತು. ಅವನನ್ನು ಕಂಡೊಡನೆಯೇ ನಿಂತುಕೊಂಡ.

"ಓಹೋ, ಏನು ಸಾಹುಕಾರರೇ ಇಷ್ಟು ದೂರ?"

"ಐತಲ್ಲಾ ಮೇಷ್ಟ್ರೆ, ನಿತ್ಯಾ ಅಲೆಯೋದು ನಂ ಆಣೇಬರಾ."

"ಏನು ಸಮಾಚಾರ, ಹೇಳಿ?"

"ಏಳೋ ಅಂತಾದೇನೈತೆ? ನೀವಂತೂ ಒಳ್ಳೇ ಅಸಲು ಗಿರಾಕೀನೇ ಅಂಟಿಸಿಬಿಟ್ರಿ."

ಆ ವ್ಯಂಗ್ಯ ಸುಬ್ಬಕೃಷ್ಣನಿಗೆ ಅರ್ಥವಾಗಲಿಲ್ಲ. ಚಿನ್ನಪ್ಪ ಯಾವ ವಿಚಾರ ಕುರಿತು ಮಾತಾಡುತ್ತಿರಬಹುದೆಂದು ಅವನ ಬುದ್ಧಿ ಯೋಚಿಸಲಾರಂಭಿಸಿತು.

"ಏನಪ್ಪಾ ಅದು, ನಾನು ಮಾಡಿದ ಅಪರಾಧ? ಸ್ವಲ್ಪ ಬಿಡಿಸಿ ಹೇಳಿ."

"ಅದೇ ನಿಮ್ಮ ಮಧುಸೂದನಪ್ಪನೋರ ಇಚಾರ. ಒಳ್ಳೇ ಬಾಡಿಗೆ ದಾರ್ರನ್ನೇ ತಂದು ಮಡಗಿದಿರಿ, ಅಂದೆ."

"ಏಕೆ, ನಿಮಗೇನಾಗಿದೆ ಅರೆ? ನಿಮ್ಮ ಮೇಲೆ ಬಾಡಿಗೆ ಹಣ ಇಲ್ಲವೆ? ಮೂರು ತಿಂಗಳು ಅಡ್ವಾನ್ಸ್ ಕಳಿಸಿದರು ಅಂತ ಅವೊತ್ತು ನೀವೇ ಹೇಳಿದ್ದರಲ್ಲಾ."

"ಏನು ಮೇಷ್ಟ್ರೆ, ನೀವೂ ಯಿವಾರ ತಿಳೀದಂಗೆ ಮಾತಾಡುತೀರ. ಬಾಡಿಗೆ ಕಳಿಸಿಬಿಟ್ಟರೆ ಆಗೋಯ್ತಾ?"

"ಇನ್ನೇನಾಗಬೇಕು ಅಂತೀನಿ?"

"ನಾನು ಮನೆ ಕಟ್ಟಿಸಿರೋದು ವಾಸಕ್ಕೋ, ಇಲ್ಲ ಬಾಕಲು ಬಂದು ಮಾಡಿಕೊಂಡು ಓಗೋಕೋ?"

ಆ ಮಾತು ಕೇಳಿ ಸುಬ್ಬಕೃಷ್ಣನಿಗೆ ನಗೆ ಬಂದಿತು.

"ಒಳ್ಳೇ ಪ್ರಶ್ನೆ ಕೇಳುತೀರಿ ಚಿನ್ನಪ್ಪನವರೇ. ಮನೆ ಬಾಡಿಗೆಗೆ ಕೊಟ್ಟ ಮೇಲೆ ಮನೆಯವರು ವಾಸವಾಗಿದ್ದರೇನು, ಬಾಗಿಲು ಹಾಕಿಕೊಂಡು ಹೋಗಿದ್ದರೇನು? ನಿಮಗೆ ಬೇಕಾದ್ದು ಕಾಲಕಾಲಕ್ಕೆ ಸಲೀಸಾಗಿ ಬಾಡಿಗೆ ತಾನೆ? ಅದಕ್ಕೇನಾದರೂ ಮೋಸವಾಗಿದೆಯೋ?"

"ಅದು ಅಂಗಲ್ಲ ಮೇಷ್ಟ್ರು. ಮನೆ ಬಾಡಿಗೆಗೆ ಕೊಟ್ಟ ಮೇಲೆ ಸಂಸಾರ ವಾಸಮಾಡುತಾ ದೀಪಗೀಪ ಅಚ್ಚಿಕೊಂಡು ಇದ್ದರೆ ಸಂದಾಕಿರತ್ತೆತೆ. ವಾಸಾನೇ

ಮಾಡದೀರ ಮುಚ್ಚಿಕೊಂಡು ಕುಂತಿದ್ದರೆ ಸಂದಾಕಿರತೈತಾ? ಅದೂ ಅಲ್ದೆ ಆ ಮನ್ಯಾಗೆ ಆ ವಮ್ಮ ಜೇರೆ ಸತ್ತವ್ರೆ. ಆ ವೈಯ್ನೋರು ಇಂಗೆ ವೊಂಟೋದರೆ ಜನ ಏನಂತೈತೆ? ಮುಚ್ಚಿದ ಬಾಕಲು, ಝುನಲ್ಲು ನೋಡಿ ಜನ ಕತೆ ಕಟ್ಟತೈತೆ. ಆಗಲೇ ನಮ್ಮ ಕೇರಿ ಜನ ಆ ಮನ್ಯಾಗೆ ದೆಯ್ಯ ಸೇರಿಕೊಂಡು ಬಿಟ್ಟೈತೆ ಅಂತಾ ಪುಕಾರು ಮಾಡುತಾ ಅವ್ರೆ. ನಾಳೆ ಬಾಡಿಗೆಗೆ ಬರೋವರು ಸುಮ್ಕೆ ಬತ್ತಾರಾ? ದೆಯ್ಯದ ಮನೆ ಅಂತ ಎಸರಾಗಿಬಿಟ್ರೆ ಗಿರಾಕಿ ಸಿಕ್ಕತೈತಾ? ಖಾಲೀ ಮನೆ ಮಡಗಿಕೊಂಡರೆ ನನಗೆ ಲುಕ್ಸಾನ್ ಆಗೋಕಿಲ್ವಾ? ನೀವೇ ಏಳಿ."

"ಜನದ ಮಾತಿಗೆ ಅರ್ಥವಿದೆಯೆ ಸಾಹುಕಾರರೇ? ಅವರ ಮನಸ್ಸು ಬಂದ ಹಾಗೆ ಅವರು ಮಾತಾಡುತಾರೆ. ಅದಕ್ಕೆಲ್ಲಾ ಬೆಲೆ ಕೊಡುವುದಕ್ಕಾಗುತ್ತದೆಯೆ?"

"ನೀವೂ ನಾನೂ ಅಂಗನ್ನಬೌದು. ಆದರೆ ಜನದ ಬಾಯಿ ಕಟ್ಟೋಕಾಗತೈತಾ? ನಾಳೆ ನನಗೆ ಗಿರಾಕಿ ಓದರೆ ಏನು ಮಾಡೋಣೆ?"

ಸುಬ್ಬಕೃಷ್ಣ ಸುಮ್ಮನಿದ್ದ. ಚಿನ್ನಪ್ಪನ ವಾದದಲ್ಲಿಯೂ ಒಂದು ಅರ್ಥವಿತ್ತು. ಒಂದು ಕ್ಷಣ ಬಿಟ್ಟು,

"ನಾನೂ ಅವನಿಗೆ ಕಾಗದ ಬರೆದಿದ್ದೇನೆ. ಇನ್ನೂ ಜವಾಬು ಬಂದಿಲ್ಲ. ಅವನೂ ಸಂಗೀತ ಕಚೇರಿಗಳ ಗಲಾಟೆಯಲ್ಲಿ ಇದಾನೇನೋ."

"ಗಲಾಟೆ ಇರಲಿ. ಆದರೂ ಬೊಂಬಾಯೇನು ಬಲು ದೂರವಾ? ಒಂದು ದಫ ಬಂದು ಓಗೋಕಾಗೋಕಿಲ್ವಾ? ಅದೇನು ದಿಲ್ಲೀನಾ, ದೀಪಾಂತರವಾ?"

ಚಿನ್ನಪ್ಪನ ಪ್ರಶ್ನೆಗೆ ಉತ್ತರ ಕೊಡದೆ ಸುಬ್ಬಕೃಷ್ಣ ಸುಮ್ಮನೆ ನಕ್ಕ.

"ಆಗಲಿ, ನಾನು ಇನ್ನೊಮ್ಮೆ ಬರೆಯುತ್ತೇನೆ. ನೀವು ಯೋಚಿಸಬೇಡಿ"

ಎಂದು ಸಮಾಧಾನ ಹೇಳಿ ಅವನಿಂದ ಬೀಳ್ಕೊಂಡು ಹೊರಟ.

ಸುಬ್ಬಕೃಷ್ಣನ ಮನಸ್ಸಿಗೂ ಸಮಾಧಾನವಿರಲಿಲ್ಲ. ಅವನು ಮುಂಬಯಿಯ ಕನ್ನಡ ಸಂಘದ ವ್ಯವಸ್ಥಾಪಕರ ಹೆಸರಿನ ಮೇಲೆ ಮಧುಸೂದನನಿಗೆ ಬರೆದಿದ್ದ ಕಾಗದಕ್ಕೆ ಉತ್ತರವೇ ಬಂದಿರಲಿಲ್ಲ. ಕಾಗದ ತಲಪಿತ್ತೋ ಇಲ್ಲವೋ ಎನ್ನುವುದು ಕೂಡ ಗೊತ್ತಾಗುವ ಹಾಗಿರಲಿಲ್ಲ. ಮುಂಬಯಿಯಲ್ಲಿ ನಡೆದ ಮಧುಸೂದನನ ಸಂಗೀತ ಕಚೇರಿಯ ಬಗೆಗೆ ಪತ್ರಿಕೆಗಳಲ್ಲಿ ಬಂದಿದ್ದ ವರದಿ

ಸುಬ್ಬಕೃಷ್ಣನ ಕಣ್ಣಿಗೂ ಬಿದ್ದಿತ್ತು. ಆ ಕಚೇರಿಯನ್ನು ಕನ್ನಡ ಸಂಘದವರೇ ಏರ್ಪಡಿಸಿದ್ದರೆಂದ ಮೇಲೆ ಮಧುಸೂದನನ ಚಲನವಲನ ಅವರಿಗೆ ತಿಳಿಯದಿದ್ದೀತೆ? ಕಾಗದ ಅವರಿಗೆ ಮುಟ್ಟಿದ್ದರೆ ಅದು ಮಧುಸೂದನನ ಕೈಸೇರಲು ಸಂದೇಹವಿರಲಿಲ್ಲ. ಹಾಗೆ ಅದು ಅವನಿಗೆ ತಲುಪಿಯೂ ಉತ್ತರ ಕೊಡದೆ ಸುಮ್ಮನಿರುವನೋ? ಅಥವಾ ಅವನು ಮುಂಬಯಿಯಲ್ಲೇ ಇಲ್ಲವೊ? ಅಲ್ಲಿಯ ಸಮಾಚಾರ ಹೀಗೇ ಎಂದು ತಿಳಿಯದಿರುವಾಗ ಯಾವ ಊಹೆಯನ್ನೂ ಮಾಡುವುದು ಸಾಧ್ಯವಿರಲಿಲ್ಲ. ಸುಬ್ಬಕೃಷ್ಣ ಕನ್ನಡ ಸಂಘದ ಹೆಸರಿನಲ್ಲೇ ಮಧುಸೂದನನಿಗೆ ರಿಜಸ್ಟರ್ ಕಾಗದ ಬರೆಯಬೇಕೆಂದುಕೊಂಡ.

ಮಧುಸೂದನನ ವಿಷಯದಲ್ಲಿ ಆಸಕ್ತಿ ತಾಳಿದ್ದವರು ಮೈಸೂರಿನಲ್ಲಿ ಹಲವು ಜನರಿದ್ದರು. ದಾಸರು, ಅವರ ಕುಟುಂಬ ನರಸಕ್ಕ, ಸಂಜೀವಯ್ಯ, ಶಂಕರಪ್ಪ ಮುಂತಾದವರಿಗೆ ಅವನ ಮೇಲೆ ನಿರತಿಶಯವಾದ ಅಭಿಮಾನವಿತ್ತು. ಸಮಯ ಸಿಕ್ಕಿದಾಗಲೆಲ್ಲಾ ಅವರು ವಿಚಾರಿಸುತ್ತಿದ್ದರು. ಮೊದಲಿನಿಂದಲೂ ಮಧುಸೂದನನ ಸಹಪಾಠಿಯಾಗಿದ್ದ ಸುಬ್ಬಕೃಷ್ಣ ಕಣ್ಣಿಗೆ ಬಿದ್ದರಂತೂ ಅವರು ಯೋಗಕ್ಷೇಮ ಕೇಳದೆ ಇರುತ್ತಲೇ ಇರಲಿಲ್ಲ. ಚಿನ್ನಪ್ಪನಂತೂ ವ್ಯವಹಾರ ನಿಮಿತ್ತ ದಿನಕ್ಕೊಂದು ಸಲವಾದರೂ ಮಧುಸೂದನನ ಸ್ಮರಣೆ ಮಾಡುತ್ತಲೇ ಇದ್ದ.

ಆದರೆ ಈ ಎಲ್ಲ ಬಗೆಯ ಆಸಕ್ತಿಗಳಿಗಿಂತ ಭಿನ್ನವಾದ ಆಸಕ್ತಿಯುಳ್ಳ ಒಂದು ಗುಂಪು ಮೈಸೂರಿನಲ್ಲಿತ್ತು. ಸ್ವಪ್ರತಿಭೆಯಾಗಲಿ ಬುದ್ಧಿಶಕ್ತಿಯಾಗಲಿ ಅಷ್ಟಾಗಿ ಇಲ್ಲದೆ ಬರಿಯ ಗಿಣಿಯ ಪಾಠದ ಬಲದಿಂದಲೇ ಸಂಗೀತಗಾರರ ಮಟ್ಟಕ್ಕೆ ಏರಿದ್ದ ಕೆಲವರು ಮಧುಸೂದನನ ಉತ್ಕರ್ಷವನ್ನು ನೋಡಿ ಮೊದಲಿನಿಂದಲೂ ಕರುಬುತ್ತಿದ್ದರು. ಅವನ ಹೆಸರನ್ನು ಹಿಂದೆ ಮುಂದೆ ಎತ್ತಿ ಆಡುವುದರಲ್ಲಿ, ಕಳಂಕ ಹಚ್ಚುವುದರಲ್ಲಿ ಅವರಿಗೆ ತುಂಬ ಆಸಕ್ತಿಯಿತ್ತು. ನಾಲ್ಕು ಜನ ಸೇರಿದ ಕಡೆ ಮಧುಸೂದನನ ವಿಷಯ ಬಂದರೆ ಅವರ ನಾಲಗೆ ಮೊಳದುದ್ದವಾಗುತ್ತಿತ್ತು. ಅವನ ಹೆಸರಿಗೆ ಮಸಿ ಬಳಿಯುವ ಯಾವುದಾದರೊಂದು ಮಾತನ್ನಾಡದಿದ್ದರೆ ಅವರಿಗೆ ಸಮಾಧಾನವೇ ಇರುತ್ತಿರಲಿಲ್ಲ.

ಅಗ್ರಹಾರದ ಚೆಲುವಯ್ಯಂಗಾರಿ ಈ ಕೆಲಸದ ಗುತ್ತಿಗೆಯನ್ನು ತಾನೇ ಪಡೆದವನ ಹಾಗೆ ಆಡುತ್ತಿದ್ದ. ಸಂಗೀತಕ್ಕೆ ಇಪ್ಪತ್ತುವರ್ಷ ಮಣ್ಣು ಹಾಕಿದ್ದರೂ

ಅವನು ಶ್ರುತಿ ಹಿಡಿದು ಹಾಡುವುದೇ ಅಪರೂಪವಾಗಿತ್ತು. ಜೊತೆಯ ಸಂಗೀತಗಾರರೇ ಅವನಿಗೆ 'ಶ್ರುತಿಭೇದದ ಚೆಲುವಯ್ಯಂಗಾರಿ' ಎಂದು ಹಾಸ್ಯದ ಪ್ರಶಸ್ತಿಯಿತ್ತಿದ್ದರು. ತನ್ನ ಎಲೆಯಲ್ಲಿ ಕತ್ತೆ ಸತ್ತುಬಿದ್ದಿದ್ದರೂ ಇತರರ ಎಲೆಯ ನೊಣ ಓಡಿಸುವ ಕೆಲಸಕ್ಕೆ ಕರೆಯದಿದ್ದರೂ ಬರುತ್ತಿದ್ದ ಅವನನ್ನು ಹಿರಿಯ ಸಂಗೀತಗಾರರು ಯಾರೂ ಹತ್ತಿರ ಸೇರಿಸುತ್ತಿರಲಿಲ್ಲ. ಠೇಂಕಾರದ ಮೊಟ್ಟೆಯಾಗಿದ್ದ ಚೆಲುವಯ್ಯಂಗಾರಿ ತನ್ನ ಮಹಾವಿದ್ಯೆಯ ಫಲ ತನಗೊಬ್ಬನಿಗೇ ಸಾಲದೆಂದು ನಾಲ್ಕಾರು ಹುಡುಗರಿಗೆ ಪಾಠ ಹೇಳಿಕೊಡುತ್ತ ಅವರಿಗಿದ್ದ ಅಲ್ಪಸ್ವಲ್ಪ ಭವಿಷ್ಯಕ್ಕೂ ಕಲ್ಲುಹಾಕುತ್ತಿದ್ದ.

ಮಧುಸೂದನ ನರಸೀಪುರದ ಮೀನಾಕ್ಷಿಯ ತಮ್ಮ ರಾಜಣ್ಣನಿಗೆ ಪಾಠ ಹೇಳುತ್ತಿದ್ದಾಗಲೇ ಚೆಲುವಯ್ಯಂಗಾರಿಯ ವಕ್ರದೃಷ್ಟಿ ಅವನ ಮೇಲೆ ಬಿದ್ದಿತ್ತು. ಅವನೂ ಅವನ ಚೇಲರೂ ಸೇರಿಕೊಂಡು ಅಪಪ್ರಚಾರವನ್ನಾರಂಭಿಸಿದ್ದರು.

"ಆ ರಾಜಣ್ಣನ ಮುದ್ದುಮುಖ ನೋಡಿ ಮಧುಸೂದನ ಇಷ್ಟು ಶ್ರದ್ಧೆಯಿಂದ ಅವನಿಗೆ ಪಾಠ ಹೇಳುತ್ತಾನೇನಯ್ಯ? ಅವರಕ್ಕನ ಮೇಲೆ ಅವನ ಕಣ್ಣು ಬಿದ್ದಿದೆ"

ಎಂದು ಅವರು ನಾಲ್ಕು ಜನ ಸೇರಿದ ಕಡೆ ಬಹಿರಂಗವಾಗಿ ಒಬ್ಬರೊಡನೊಬ್ಬರು ಮಾತಾಡಿಕೊಳ್ಳುತ್ತಿದ್ದರು. ಮಧುಸೂದನನಿಗೆ ಮೀನಾಕ್ಷಿಯ ಮೇಲೆ ಕಣ್ಣಿತ್ತೋ ಇಲ್ಲವೋ ಗೊತ್ತಿದ್ದವರು ಯಾರೂ ಇರಲಿಲ್ಲ. ಆದರೆ ಚೆಲುವಯ್ಯಂಗಾರಿಯ ಗುಂಪು ಬಣ್ಣಕಟ್ಟಿ ಹಬ್ಬಿಸಿದ್ದ ಸಂಗತಿ ಮಾತ್ರ ಹತ್ತಾರು ಜನರ ಕಿವಿಗೆ ಬಿದ್ದಿತ್ತು.

ವೆಂಕಮ್ಮನವರು ಸತ್ತ ಮೇಲೆ ಮಧುಸೂದನ ಊರನ್ನು ಬಿಟ್ಟ ಸಂದರ್ಭ ಈ ಅಪಪ್ರಚಾರಕರಿಗೆ ಒಳ್ಳೆಯ ಸಾಧನವಾಯಿತು. ಸಂಗೀತದಲ್ಲಿ ಓಡದಿದ್ದ ಅವರ ಮಂದಬುದ್ಧಿ ಪಿಸುಣತನದಲ್ಲಿ ಚುರುಕಾಯಿತು. ಅವರು ದಿನಕ್ಕೊಂದು ಪುರಲೆ ಹಾರಿಸತೊಡಗಿದರು. ಮದರಾಸಿನಿಂದ ಯಾವಳೋ ನೃತ್ಯಪ್ರವೀಣೆ ಬಂದಿದ್ದಳಂತೆ. ಮಧುಸೂದನ ಅವಳ ಬೆನ್ನು ಹತ್ತಿ ಮದರಾಸಿಗೆ ಹೋದನಂತೆ. ಅಲ್ಲೇನೋ ಅತಂತ್ರವಾಗಿ ಅವನು ಮುಂಬಯಿಗೆ ಕಾಲ್ತೆಗೆದನಂತೆ. ಅಲ್ಲೊಬ್ಬ ವೇಶ್ಯೆ ಅವನಿಗೆ ಗಂಟುಬಿದ್ದು ಹತ್ತಿರ ಇದ್ದದ್ದನ್ನೆಲ್ಲಾ ಹಿರಿದುಕೊಂಡಳಂತೆ. ಈಗ ಅವನಿಗೆ ತಿನ್ನುವುದಕ್ಕೂ ಗತಿಯಿಲ್ಲದೆ, ಮೈಸೂರಿಗೆ ಬರಲೂ ಮುಖವಿಲ್ಲದೆ

ಅಲ್ಲೇ ಬಿದ್ದು ಒದ್ದಾಡುತ್ತಿದ್ದಾನಂತೆ– ಎಂದು ಬಾಯಲ್ಲಿ ನೀರೂರುವ ಹಾಗೆ ಕಥೆ ಹೇಳಿಕೊಂಡು ಚೆಲುವಯ್ಯಂಗಾರಿಯ ಪರಿವಾರ ತಿರುಗುತ್ತಿತ್ತು. ಈ ಒಂದೊಂದು ಸಂಗತಿ ದಾಸರ ಕಿವಿಗೂ ಬಿದ್ದು ಅವರ ಮನಸ್ಸು ಖಿನ್ನವಾಗಿತ್ತು.

ಈ ಸುಳ್ಳಿನ ಸೃಷ್ಟಿಗೆ ಚೆಲುವಯ್ಯಂಗಾರಿಯೇ ಪಿತಾಮಹನೆನ್ನುವುದನ್ನು ರಾಜಣ್ಣನೇ ಸುಬ್ಬಕೃಷ್ಣನಿಗೆ ಹೇಳಿದ್ದ. ಸಮಯ ಸಿಕ್ಕಿದಾಗ ಅವನಿಗೆ ಗ್ರಹ ಚಾರ ಬಿಡಿಸಬೇಕೆಂದು ಸುಬ್ಬಕೃಷ್ಣನೂ ಕಾಯುತ್ತಿದ್ದ.

ಚಿನ್ನಪ್ಪನ ಭೇಟಿಯಾದ ಮೇಲೆ ಒಂದು ದಿನ ಸುಬ್ಬಕೃಷ್ಣ, ರಾಜಣ್ಣ ದಾಸರ ಮನೆಗೆ ಬರುತ್ತಿದ್ದರು. ಅಗ್ರಹಾರದ ಲಿಂಗಣ್ಣನ ಅಂಗಡಿಯ ಹತ್ತಿರ ಚೆಲುವಯ್ಯಂಗಾರಿ ಯಾರ ಹತ್ತಿರವೋ ಹರಟೆ ಹೊಡೆಯುತ್ತ ನಿಂತಿದ್ದ. ಅವನನ್ನು ಕಂಡು ರಾಜಣ್ಣ ಬೆಚ್ಚಿದ.

"ಸಾರ್, ಚೆಲುವಯ್ಯಂಗಾರಿ!"

ಎಂದು ಭಯ ಹೊಕ್ಕವನಂತೆ ನುಡಿದ.

"ಇರಲಿ ಸುಮ್ಮನಿರು. ನಾನು ವಿಚಾರಿಸಿಕೊಳ್ಳುತ್ತೇನೆ."

"ನಮ್ಮ ಅಕ್ಕನ ವಿಷಯ ಏನೇನೋ ಅಂತಾನೆ, ಸಾರ್."

"ನೀನು ಧೈರ್ಯವಾಗಿ ನನ್ನ ಜೊತೆಗೆ ಬಾ, ರಾಜಣ್ಣ"

ಎಂದು ಸುಬ್ಬಕೃಷ್ಣ ಭರವಸೆಯಿತ್ತು ಹೆಜ್ಜೆಹಾಕತೊಡಗಿದ. ರಾಜಣ್ಣ ಸ್ವಲ್ಪ ಅಳುಕಿದೆಯಿಂದಲೇ ಅವನನ್ನು ಹಿಂಬಾಲಿಸಿದ. ಚೆಲುವಯ್ಯಂಗಾರಿಯ ಗಮನ ಸ್ನೇಹಿತರೊಡನೆ ಆಡುತ್ತಿದ್ದ ಮಾತಿನ ಕಡೆಗೇ ಇರಲಿಲ್ಲ. ರಸ್ತೆಯಲ್ಲಿ ಹೋಗಿ ಬರುತ್ತಿದ್ದವರ ಮೇಲೂ ಅವನಿಗೆ ಒಂದು ಕಣ್ಣಿತ್ತು. ರಾಜಣ್ಣ ಯಾರೊಡನೆಯೋ ಕೂಡಿ ಬರುತ್ತಿರುವುದನ್ನು ಅವನೂ ದೂರದಿಂದಲೇ ಗಮನಿಸಿದ್ದ. ಸುಬ್ಬಕೃಷ್ಣ ರಾಜಣ್ಣ ತೀರ ಹತ್ತಿರಕ್ಕೆ ಬಂದಾಗ ಚೆಲುವಯ್ಯಂಗಾರಿ ಮಾತು ನಿಲ್ಲಿಸಿ ಅವರನ್ನೇ ದುರದುರನೆ ನೋಡುತ್ತ ನಿಂತ. ಪಾಪಿ, ಬೀದಿಯಲ್ಲಿ ಏನು ಮಾನ ಕಳೆಯುವನೋ ಎಂದು ರಾಜಣ್ಣನ ಮನಸ್ಸು ಅಳುಕಿತು.

ಚೆಲುವಯ್ಯಂಗಾರಿಯ ದೃಷ್ಟಿ ತಮ್ಮ ಮೇಲೆ ಬಿದ್ದಿದೆಯೆನ್ನುವುದು ಸುಬ್ಬಕೃಷ್ಣನಿಗೂ ಅರಿವಾಯಿತು. ಆದರೂ ಅವನು ಅದನ್ನು ಗಮನಿಸದಂತೆ ಸುಮ್ಮನೆ ಹೆಜ್ಜೆ ಹಾಕುತ್ತಿದ್ದ. ಅಯ್ಯಂಗಾರಿ ಕೂಗದಿದ್ದರೆ ಅವರು ತಮ್ಮ ಪಾಡಿಗೆ ತಾವು ಹೊರಟುಹೋಗುತ್ತಿದ್ದರೇನೋ. ಆದರೆ ಅಷ್ಟು ಸುಲಭವಾಗಿ

ರಾಜಣ್ಣನನ್ನು ಬಿಟ್ಟುಕೊಡಲು ಚೆಲುವಯ್ಯಂಗಾರಿ ಸಿದ್ಧನಾಗಿರಲಿಲ್ಲ. ಹೋಗುತ್ತಿದ್ದವನನ್ನು ಕೂಗಿ ನಿಲ್ಲಿಸಿದ.

"ಏ ರಾಜಣ್ಣ, ಬಾರೋ ಇಲ್ಲಿ."

ಧ್ವನಿ ಕೇಳಿ ರಾಜಣ್ಣನಿಗೆ ಜೀವವೇ ಹೋದ ಹಾಗಾಯಿತು. ಅವನು ಮರವಟ್ಟಂತೆ ರಸ್ತೆಯಲ್ಲಿ ಸುಮ್ಮನೆ ನಿಂತುಕೊಂಡ. ಸುಬ್ಬಕೃಷ್ಣನ ಧೈರ್ಯ ವಿಲ್ಲದಿದ್ದರೆ ಅವನಿಗೆ ಕಾಲೇ ಏಳುತ್ತಿರಲಿಲ್ಲ.

"ಹೋಗು, ಧೈರ್ಯವಾಗಿ ಮಾತಾಡು. ಹೆದರಬೇಡ"

ಎಂದು ಪಕ್ಕದಲ್ಲೇ ಇದ್ದ ಸುಬ್ಬಕೃಷ್ಣ ಮೆಲ್ಲನೆ ನುಡಿದು ರಾಜಣ್ಣನ ಜೊತೆಗೇ ನಿಂತುಕೊಂಡ. ಚೆಲುವಯ್ಯಂಗಾರಿ ಸುಬ್ಬಕೃಷ್ಣನ ಕಡೆಗೆ ಸಂಶಯ ದೃಷ್ಟಿಯಿಂದ ನೋಡುತ್ತ,

"ಎಲ್ಲೋ ನಿಮ್ಮ ಗುರುಗಳು? ಇನ್ನೂ ಬರಲಿಲ್ಲವೇನೋ?"

ಎಂದ. ರಾಜಣ್ಣ ಹಿಂದೆ ಮುಂದೆ ನೋಡುತ್ತ,

"ಇಲ್ಲ."

"ಎಲ್ಲಿ ಹೊರಟಿದೆಯೋ ನಿಮ್ಮ ಗುರುಗಳ ಸವಾರಿ? ಬೊಂಬಾಯೋ, ಕಲ್ಕತ್ತವೋ, ಮದ್ರಾಸೋ?"

"ನನಗೆ ಗೊತ್ತಿಲ್ಲ."

"ಪಟ್ಟಶಿಷ್ಯನಾಗಿ ನಿನಗೆ ಗೊತ್ತಿಲ್ಲವೆಂದರೇನೋ? ನಿನಗೆ ತಿಳಿಯ ದಿದ್ದರೂ ನಿಮ್ಮಕ್ಕನಿಗೆ ಗೊತ್ತಿರಬೇಕಲ್ಲೋ?"

ಎಂದು ಗಹಗಹಿಸಿ ನಕ್ಕ. ಅವನ ವಿಕಟ ನಗೆಯೊಡನೆ ಅವನ ಸ್ನೇಹಿತರೂ ಭಾಗಿಗಳಾದರು. ಬೀದಿಯಲ್ಲಿ ಹೋಗುತ್ತಿದ್ದ ಜನ ಆ ನಗೆ ಕೇಳಿ ಕುತೂಹಲದಿಂದ ಅತ್ತ ತಿರುಗಿ ನೋಡಿದರು. ಸುಬ್ಬಕೃಷ್ಣನ ಮೈ ಬೆಂಕಿ ಯಾಯಿತು. ಸುಪ್ತ ಕೋಪವನ್ನು ಸೂಚಿಸುವ ಧ್ವನಿಯಲ್ಲಿ,

"ಹುಡುಗನ ಹತ್ತಿರ ಏನ್ರೀ ನಿಮ್ಮದು ಕುಚೇಷ್ಟೆ?"

ಎಂದ. ಚೆಲುವಯ್ಯಂಗಾರಿ ಕಣ್ಣು ಕೆಕ್ಕರಿಸಿಕೊಂಡು ಸುಬ್ಬಕೃಷ್ಣನ ಕಡೆ ನೋಡಿದ.

"ತಾವು ಯಾರೋ?"

"ಯಾರಾದರೇನು? ನಿಮ್ಮ ನಾಲಗೆಯ ಮೇಲೆ ಸ್ವಲ್ಪ ಹತೋಟಿ ಇಟ್ಟು ಕೊಂಡು ಮಾತಾಡಿ."

"ನಿಮ್ಮನ್ನ ಯಾರ್ರೀ ಕರೆದವರು ಈ ಮಾತಿಗೆ?"

"ನಿಮ್ಮ ಕೆಟ್ಟ ನಾಲಗೆ. ಬೀದಿಯಲ್ಲಿ ಹೋಗುವವರನ್ನು ಕಾಲುಕೆರೆದು ಜಗಳಕ್ಕೆ ಕರೆಯದಿದ್ದರೆ ನಿಮಗೆ ತಿಂದ ಅನ್ನ ಅರಗುವುದಿಲ್ಲವೋ?"

"ಅವನ ಕೈಲಿ ಮಾತಾಡಿದರೆ ನಿಮಗೇನ್ರಿ ಆಯಿತು? ನಿಮಗೆ ಅವನೇನಾದರೂ ಆಗಬೇಕೇನ್ರಿ? ಅವರಕ್ಕನ ಸ್ನೇಹ ನಿಮಗೂ ಇದೆಯೇನ್ರಿ?"

"ಇಲ್ಲದಿದ್ದರೆ ನೀವು ಮಾಡಿಸುತ್ತೀರೇನು? ನಿಮ್ಮ ಆಸಕ್ತಿ ನೋಡಿದರೆ ಹಾಗೇ ಕಾಣಿಸತ್ತೆ"

ಎಂದು ಸುಬ್ಬಕೃಷ್ಣ ಮರ್ಮವಾಗಿ ನುಡಿದ. ಆ ಮಾತು ಕೇಳಿ ಅಯ್ಯಂಗಾರಿಯ ಸ್ನೇಹಿತರೇ ಗೊಳ್ಳೆಂದು ನಕ್ಕರು. ಅಯ್ಯಂಗಾರಿಯ ಮುಖ ಕೋಪದಿಂದ ಕೆಂಪಾಯಿತು. ರೇಷ್ಮೆಯ ಜುಬ್ಬವನ್ನು ತೋಳ ಮೇಲೆ ಮುದುರಿ ಕೊಳ್ಳುತ್ತ,

"ಭಡವಾ, ಹೆಚ್ಚು ಮಾತಾಡಿದರೆ...."

ಎಂದು ಮುಂದೆ ಬಂದು ಮುಖಕ್ಕೆ ಮುಖ ಕೊಟ್ಟು ನಿಂತ. ಭಡವಾ ಎನ್ನುವ ಮಾತು ಕೇಳಿ ಸುಬ್ಬಕೃಷ್ಣನ ರಕ್ತ ಕುದಿಯಿತು. ಅವನು ತಟಕ್ಕನೆ ಕೈಚಾಚಿ ಅಯ್ಯಂಗಾರಿ ಕುತ್ತಿಗೆಗೆ ಇಳಿಬಿಟ್ಟಿದ್ದ ಪಟ್ಟೆಹಿಡಿದ ಜರತಾರಿ ಶಲ್ಯವನ್ನು ಹಿಡಿದು ಅವನ ಕುತ್ತಿಗೆಗೇ ಸೇಣಿನಂತೆ ಬಿಗಿದು ಮುಷ್ಟಿಯನ್ನು ಅವನ ಮುಖದವರೆಗೂ ತೆಗೆದುಕೊಂಡು ಹೋಗಿ,

"ಯಾರು ಭಡವಾ? ನಾನೋ, ನೀನೋ?"

ಎನ್ನುತ್ತ ಅವನ ಮೂಗಿನ ಸೆಲೆ ಒಡೆಯುವ ಹಾಗೆ ಫಟ್ಟನೆ ಒಂದೇಟು ಕೊಟ್ಟ. ಚೆಲುವಯ್ಯಂಗಾರಿಯು ತಲೆ ದಿಮ್ಮೆಂದಿತು. ಉಸಿರುಕಟ್ಟಿ ಪ್ರಾಣ ಹೋಗುವ ಹಾಗಾಯಿತು. ಅವನ ಬಾಯಲ್ಲಿ ಮಾತು ಹೊರಡದಾಯಿತು. ಅಂಗಡಿಯ ಮೇಲೆ ಕುಳಿತು ನೋಡುತ್ತಿದ್ದ ಲಿಂಗಣ್ಣ ಪರಿಸ್ಥಿತಿ ವಿಕೋಪಕ್ಕೆ ಹೋದುದನ್ನರಿತು ಗಲ್ಲದಿಂದ ಇಳಿದು ಓಡಿಬಂದ.

"ಹೋಗಲಿ ಬಿಡಿ, ಸಾರ್"

ಎನ್ನುತ್ತ ಸುಬ್ಬಕೃಷ್ಣನ ಕೈಹಿಡಿದುಕೊಂಡ. ಬೀದಿಯಲ್ಲಿ ಆಗಲೇ ಹತ್ತಾರು ಜನ ಸೇರಿಬಿಟ್ಟಿದ್ದರು.

"ನೀವು ಸುಮ್ಮನಿರಿ ಸಾಹುಕಾರರೇ. ಈ ಅಯೋಗ್ಯನ ಅಪಪ್ರಚಾರ ಕೇಳಿ ಕೇಳಿ ನನ್ನ ಮೈ ಬೆಂಕಿಯಾಗಿಹೋಗಿದೆ. ಇವನ ಹೊಲಸು ನಾಲಗೆಯಿಂದ ಮರ್ಯಾದೆವಂತರು ಬಾಳುವ ಹಾಗಿಲ್ಲ. ಇವನಿಗೆ ಬುದ್ಧಿ ಕಲಿಸದೆ ಬಿಟ್ಟರೆ ಈ ಉಪದ್ರವ ಇನ್ನೂ ಹೆಚ್ಚಾಗತ್ತೆ"

ಎಂದು ಸುಬ್ಬಕೃಷ್ಣ ಅಯ್ಯಂಗಾರಿಯ ಹಣೆಗೆ ಗುರಿಯಿಟ್ಟು ಇನ್ನೊಂದು ಮುಷ್ಟಿ ಎತ್ತಿದ. ಆದರೆ ಲಿಂಗಣ್ಣ ಅದಕ್ಕೆ ಅವಕಾಶ ಕೊಡದೆ ಅವನನ್ನು ತಬ್ಬಿ ಹಿಡಿದು ದೂರ ಸೆಳೆದುಕೊಂಡ. ಸುಬ್ಬಕೃಷ್ಣನ ವಜ್ರಮುಷ್ಟಿಯಿಂದ ಬಿಡುಗಡೆಯಾಗಿ ಏದುತ್ತ ನಿಂತ ಅಯ್ಯಂಗಾರಿ ತಬ್ಬಿಬ್ಬಾಗಿ ಸುತ್ತಲೂ ನೋಡಿದ. ಅವನ ಆಪ್ತಮಿತ್ರರು ಯಾರೂ ಅವನ ಸಹಾಯಕ್ಕೆ ಬಂದಿರಲಿಲ್ಲ. ಅವರು ಯಾವಾಗಲೋ ಪಕ್ಕದ ಗಲ್ಲಿ ಬಿದ್ದು ಕಾಲಿಗೆ ಬುದ್ಧಿ ಹೇಳಿಬಿಟ್ಟಿದ್ದರು.

"ನೀವು ಹೋಗಿ, ಸಾರ್"

ಎಂದು ಲಿಂಗಣ್ಣ ಸುಬ್ಬಕೃಷ್ಣನಿಗೆ ಹೇಳಿ ಚೆಲುವಯ್ಯಂಗಾರಿಯ ಕಡೆ ತಿರಸ್ಕಾರ ದೃಷ್ಟಿಯಿಂದ ನೋಡುತ್ತ,

"ಇಷ್ಟು ವಯಸ್ಸಾದರೂ ನಿಮಗೆ ಬುದ್ಧಿ ಬರಲಿಲ್ಲವಲ್ಲರೀ, ಅಯ್ಯಂಗಾರ್ರೇ"

ಎಂದು ನುಡಿದ. ಸುತ್ತಲೂ ಘೇರಾಯಿಸಿದ್ದ ಜನ ಗೊಳ್ಳೆಂದು ನಕ್ಕರು. ಅಯ್ಯಂಗಾರಿಗೆ ಪ್ರಾಣವೇ ಹೋದ ಹಾಗಾಯಿತು. ಅವನು ಏಟು ತಿಂದ ನಾಯಿಯ ಹಾಗೆ ಬಾಲ ಮುದುರಿಕೊಂಡು ಉಸಿರೆತ್ತದೆ ಪಕ್ಕದ ಗಲ್ಲಿ ಬಿದ್ದು ಹೊರಟುಹೋದ.

ನಡೆದ ಸಂಗತಿಯನ್ನು ದಾಸರ ಮನೆಯಲ್ಲಿ ರಾಜಣ್ಣನೇ ಹೇಳಿದ.

ಸುದ್ದಿ ಕೇಳಿ ದಾಸರು ಒಂದು ಗಳಿಗೆ ಸುಮ್ಮನೆ ಕುಳಿತುಕೊಂಡರು. ಅವರ ಮನಸ್ಸಿಗೆ ವ್ಯಾಕುಲವಾಗಿತ್ತು.

"ಈ ಕೆಟ್ಟ ಮಾತುಗಳನ್ನು ಇನ್ನೆಷ್ಟು ದಿನ ಕೇಳಬೇಕು, ಸುಬ್ಬೂ?"

"ಅವನಿಗೆ ಬುದ್ಧಿ ಬರುವವರೆಗೆ."

"ಅದು ಯಾವಾಗ ಬರುತ್ತೋಪ್ಪ, ನಾನು ಬೇರೆ ಕಾಣೆ"

ಎಂದು ದಾಸರು ನುಡಿದು ನೀಳವಾಗಿ ಉಸಿರ್ಗರೆದರು. ಸುಬ್ಬಕೃಷ್ಣ ಮಾತಾಡಲಿಲ್ಲ. ಅವನ ಮನಸ್ಸನ್ನೂ ದುಗುಡ ಆವರಿಸಿತ್ತು. ರಾಜಣ್ಣ ಇಬ್ಬರ ಮುಖವನ್ನೂ ನೋಡುತ್ತ ಬೆಪ್ಪನ ಹಾಗೆ ಸುಮ್ಮನೆ ಕುಳಿತಿದ್ದ.

೧೭

ಕನಕಾಂಗಿ ಬರುವುದಕ್ಕೆ ಮೊದಲು ಮೀನಾಕ್ಷಮ್ಮನವರಿಗಿದ್ದ ಉತ್ಸಾಹ ಅವಳು ಬಂದ ಮೇಲೆ ಉಳಿಯಲಿಲ್ಲ. ಸೊಸೆ ಊರಿಗೆ ಬಂದರೆ ಅವಳ ಕೈಯಲ್ಲಿ ಮಗಳಿಗೆ ಬುದ್ಧಿವಾದ ಹೇಳಿಸಿ ಅವಳ ಮನಸ್ಸನ್ನು ತಿದ್ದಬಹುದೆಂದು ಅವರು ಯೋಚಿಸಿದ್ದರು. ಕನಕಾಂಗಿ ಬಂದ ಮಾರನೆಯ ದಿನವೇ ಅವಳನ್ನು ಹತ್ತಿರ ಕೂಡಿಸಿಕೊಂಡು ಸಂಗತಿಯನ್ನು ತಿಳಿಸಿಯೂ ಇದ್ದರು. ಸುಂದರನನ್ನು ಒಪ್ಪದಿದ್ದ ಮಾತಿರಲಿ, ಲಲಿತನ ಮನಸ್ಸು ಮದುವೆಗೇ ವಿರೋಧವಾಗಿರುವುದು ತಮಗೂ ಯಜಮಾನರಿಗೂ ಕ್ಲೇಶಕ್ಕೆ ಕಾರಣವಾಗಿದೆಯೆಂದು ಹೇಳಿ ಮಗಳ ಮನಸ್ಸನ್ನು ಒಲಿಸುವ ಕಾರ್ಯಭಾರವನ್ನು ಕನಕಾಂಗಿಯ ಮೇಲೆ ಹೊರಿಸಿದ್ದರು. ಕನಕಾಂಗಿ ಅವರ ಎಲ್ಲ ಮಾತಿಗೂ ಸುಮ್ಮನೆ ಹೂಗುಟ್ಟಿ ಎದ್ದುಹೋಗಿದ್ದಳು. ಅವಳ ರಾಯಭಾರ ಎಷ್ಟುಮಟ್ಟಿಗೆ ಫಲಿಸುವುದೋ ಎನ್ನುವ ಕುತೂಹಲ ನಿರೀಕ್ಷೆಗಳಲ್ಲಿ ಮೀನಾಕ್ಷಮ್ಮನವರು ಕಾದು ಕುಳಿತರು.

ಒಂದು ವಾರವಲ್ಲ, ಒಂದು ತಿಂಗಳು ಕಳೆದರೂ ಕನಕಾಂಗಿ ಮೀನಾಕ್ಷಮ್ಮನವರ ಹತ್ತಿರ ಆ ವಿಷಯವನ್ನೇ ಎತ್ತಲಿಲ್ಲ. ಲೋಕಾಭಿರಾಮವಾಗಿ ಮಾತಾಡುತ್ತ ಕುಳಿತಾಗ ಹಲವು ಹತ್ತು ವಿಚಾರ ಬಂದು ಹೋಗುತ್ತಿತ್ತೇ ವಿನಾ ಲಲಿತನ ಮದುವೆಯ ಪ್ರಸ್ತಾಪ ಬರಲೇ ಇಲ್ಲ.

ಮೀನಾಕ್ಷಮ್ಮನವರ ಮನಸ್ಸು ಸಂಶಯದಲ್ಲಿ ತೂಗಿತು. ತಾವು ಹೇಳಿದ್ದ ಕೆಲಸವನ್ನು ಕನಕಾಂಗಿ ಮಾಡಿದಳೋ ಇಲ್ಲವೋ, ಅಥವಾ ಮಾಡಿಯೂ ವಿಫಲಳಾದಳೋ ಎಂದು ಅವರು ಯೋಚಿಸತೊಡಗಿದರು. ಬಾಯಿ ಬಿಟ್ಟು ಹೇಳದೆ ಯಾವ ವಿಷಯವೂ ತಿಳಿಯುವ ಹಾಗಿರಲಿಲ್ಲ. ಅವಳ ಮೌನ ಅವರಿಗೆ ಅರ್ಥ

ವಾಗಲಿಲ್ಲ. ಈ ಸಂಶಯ ಸ್ಥಿತಿಯನ್ನು ತಾವೇ ಪರಿಹರಿಸಬೇಕೆಂದು ಅವರೊಂದು ದಿನ ನಿರ್ಧರಿಸಿದರು.

"ನಾನು ಹೇಳಿದ ವಿಷಯ ನೀನು ಮರೆತೇಬಿಟ್ಟಿರುವ ಹಾಗಿದೆ, ಕನಕಾ"

ಎಂದು ಯಾವುದೋ ಮಾತಿನ ಮಧ್ಯೆ ತಟಕ್ಕನೆ ಜ್ಞಾಪಿಸುವಂತೆ ಕೇಳಿ ಅವಳ ಮುಖವನ್ನೇ ನೋಡುತ್ತ ಕುಳಿತರು. ಕನಕಾಂಗಿ ಅದಕ್ಕೆ ಸಿದ್ಧವಾಗಿರ ಲಿಲ್ಲ. ಮಾತಿನ ನಡುವೆ ಎಚ್ಚರ ತಪ್ಪಿ ಹರಿಯುತ್ತಿದ್ದ ಅವಳ ಮನಸ್ಸು ಆ ಪ್ರಶ್ನೆ ಕೇಳಿ ಜಾಗ್ರತಗೊಂಡಿತು. ಅವಳು ಮಾತಿಲ್ಲದೆ ಸುಮ್ಮನೆ ಮೀನಾಕ್ಷಮ್ಮ ನವರ ಮುಖ ನೋಡಿದಳು.

"ಜ್ಞಾಪಕವಿದೆಯೆ?"

"ಇದೆ."

"ಲಲಿತನ ಹತ್ತಿರ ಮಾತಾಡಿದೆಯಾ?"

"ಮಾತಾಡಿದೆ."

"ಏನೆಂದಳು?"

"ಸುಮ್ಮನಿದ್ದಳು."

"ಅವಳು ಸುಮ್ಮನಿದ್ದಳೆಂದು ನೀನೂ ಸುಮ್ಮನಿದ್ದುಬಿಟ್ಟೆಯಾ?"

ಕನಕಾಂಗಿಯ ಮನಸ್ಸು ಏನೋ ಉತ್ತರ ಕೊಡಬೇಕೆಂದು ಹಿಂದು ಮುಂದು ನೋಡುತ್ತಿತ್ತು. ಮೀನಾಕ್ಷಮ್ಮನವರ ಮುಖದ ಮೇಲೆ ಅಸಮಾ ಧಾನದ ಗೆರೆಗಳು ಮೂಡುತ್ತಿದ್ದವು.

"ಉಪಾಯವಾಗಿ ಹೇಳಿ ನೋಡಬಾರದಾಗಿತ್ತೆ?"

"ಹೇಳಿದ್ದಾಯಿತು. ಅವಳಿಗೆ ಈಗ ಮದುವೆ ಬೇಡವಂತೆ."

"ಬೇಡ ಎನ್ನುವುದು ನನಗೂ ಗೊತ್ತು. ಅದನ್ನು ಹೊಸದಾಗಿ ಹೇಳ ಬೇಕಾಗಿಲ್ಲ. ಆದರೆ ಬೇಕು ಎನ್ನಿಸುವ ಹಾಗೆ ನೀನು ಮಾಡುವೆಯೇನೋ ಎಂದಿದ್ದೆ. ಆ ಕೆಲಸ ನಿನ್ನಿಂದಾಗಲಿಲ್ಲ"

ಎಂದು ಅಸಮಾಧಾನ ನಿರುತ್ಸಾಹಗಳನ್ನು ಸೂಚಿಸುವ ಧ್ವನಿಯಲ್ಲಿ ನುಡಿದರು. ಆ ಕೆಲಸ ತನ್ನಿಂದಲೇ ಏನು, ಮತ್ತಾರಿಂದಲೂ ಆಗುವುದಿಲ್ಲವೆಂದು ಹೇಳಿಬಿಡಬೇಕೆಂದು ಕನಕಾಂಗಿಗೆ ತುದಿ ನಾಲಗೆಯವರೆಗೂ ಬಂದಿತು. ಆದರೆ

ದೊಡ್ಡವರೆನ್ನುವ ಗೌರವದಲ್ಲಿ ಅವಳು ನಾಲಗೆಯನ್ನು ಬಿಗಿಹಿಡಿದು ಸುಮ್ಮ ನಾದಳು.

ತಪ್ಪು ತನ್ನದೇ ಎನ್ನುವ ರೀತಿಯಲ್ಲಿ ಅತ್ತೆ ಮಾತಾಡಿದ್ದು ಕನಕಾಂಗಿಗೆ ರುಚಿಸಲಿಲ್ಲ. ಲಲಿತನಿಗೆ ಮದುವೆ ಇಷ್ಟವಿಲ್ಲವೆನ್ನುವುದು ಒಂದು ತಪ್ಪಾಗಿ, ಆ ತಪ್ಪಿಗೆ ತಾನು ಹೊಣೆಯಾಗುವ ಸ್ಥಿತಿ ಅವಳ ಮನಸ್ಸಿಗೆ ವಿಚಿತ್ರವಾಗಿ ಕಂಡಿತು. ಯಾರಿಂದಲೂ ಛೇಡಿಸಿಕೊಂಡು ಅಭ್ಯಾಸವಿಲ್ಲದಿದ್ದ ಅವಳಿಗೆ ಮೀನಾಕ್ಷಮ್ಮ ನವರ ಕೊಂಕು ಮಾತು ಕೇಳಿ ಬೇಸರವಾಯಿತು ಈ ಗೊಂದಲಕ್ಕೆ ತಾನೇಕೆ ಬಂದು ಸಿಕ್ಕಿಕೊಂಡೆನೋ ಎಂದು ಅವಳ ಮನಸ್ಸಿಗೆ ಮುಜಗರವಾಯಿತು.

ಕನಕಾಂಗಿ ಮದರಾಸಿಗೆ ಬರುವ ಮುನ್ನ ಒಂದು ವಾರದ ಮಟ್ಟಿಗೆ ಇದ್ದು ಹೋಗೋಣವೆಂದೇ ಬಂದಿದ್ದಳು. ಲಲಿತನ ಸ್ಥಿತಿ ತಿಳಿದ ಮೇಲೆ ಅವಳನ್ನು ಅಷ್ಟು ಬೇಗ ಬಿಟ್ಟು ಹೋಗುವುದು ಸಾಧ್ಯವಿಲ್ಲವೆನ್ನಿಸಿತು. ನಾಲ್ಕು ದಿನ ವಾದರೂ ಜೊತೆಗಿದ್ದು ಅವಳನ್ನು ಸಮಾಧಾನಪಡಿಸಿ ಹೋಗಬೇಕೆಂದು ಕೊಂಡಳು. ತಾಯಿಯನ್ನು ಎಡಬಿಡದೆ ಕೈಕಾಲಿಗೆ ಸುತ್ತಿಕೊಳ್ಳುವ ಹಸುಳೆಯ ಹಾಗೆ ಮೂರು ಹೊತ್ತೂ ತನ್ನನ್ನು ಬಿಡಲಾರದೆ ಒದ್ದುಕೊಳ್ಳುತ್ತಿದ್ದ ಲಲಿತನನ್ನು ನೋಡಿ ಕನಕಾಂಗಿಯ ಮನಸ್ಸು ಮಮ್ಮಲ ಮರುಗಿತು; ಅವಳ ಕೈ ಕೊಸರಿ ಕೊಂಡು ಊರಿಗೆ ಹೋಗಲು ಮನಸ್ಸು ಬಾರದಾಯಿತು.

ಈಗ ಮೀನಾಕ್ಷಮ್ಮನವರು ಮಾತಾಡಿದ ಬಗೆ ನೋಡಿ ತಾನಿಷ್ಟು ದಿವಸ ನಿಲ್ಲಬಾರದಾಗಿತ್ತೇನೋ ಎಂದು ಅವಳಿಗನ್ನಿಸಿತು.

ಕನಕಾಂಗಿಯ ಮುಖ ದುಗುಡದಿಂದ ಕಳೆಗುಂದಿದ್ದುದನ್ನು ಲಲಿತ ಗಮನಿಸದಿರಲಿಲ್ಲ. ಅವಳು ರೂಮಿಗೆ ಬಂದಾಗ ಬಾಗಿಲು ಮುಚ್ಚಿ ಅವಳ ಹತ್ತಿರ ಹೋಗಿ ಕುಳಿತುಕೊಂಡಳು.

"ಏತಕ್ಕೆ ಕನಕಾ, ಒಂದು ತರಹ ಇದ್ದೀ? ಏನಾಯಿತೆ?"

"ಏನೂ ಇಲ್ಲ."

"ಏನೂ ಇಲ್ಲದೆ ಮುಖ ಹೀಗೆ ಕಂಗೆಟ್ಟಿದೆಯೆ?"

ಕನಕಾಂಗಿ ಮಾತಾಡದೆ ಸುಮ್ಮನೆ ತಲೆ ತಗ್ಗಿಸಿ ಕುಳಿತಿದ್ದಳು. ಲಲಿತ ಮೆಲ್ಲನೆ ಅವಳ ಗಲ್ಲವನ್ನು ಹಿಡಿದೆತ್ತಿದಳು. ಕಣ್ಣಿನಂಚಿನಲ್ಲಿ ನೀರು ಸೇರುತ್ತಿತ್ತು.

ಅದನ್ನು ನೋಡಿ ಲಲಿತನ ಮನಸ್ಸು ನೊಂದಿತು. ಅವಳ ಕುತ್ತಿಗೆಯನ್ನು ಸ್ನೇಹ ದಿಂದ ಬಳಸಿ,

" ಅಮ್ಮ ಏನಾದರೂ ಅಂದಳೆ?"

" ಏನಂದರೋ. ಮುಖ್ಯ ನಾನು ಬರಬಾರದಾಗಿತ್ತು, ಲಲಿತಾ. ಬಂದ ಮೇಲೆ ಬೇಗ ಹೊರಟುಹೋಗಬೇಕಾಗಿತ್ತು. ಇಷ್ಟು ದಿವಸ ನಿಂತದ್ದೇ ನನ್ನ ತಪ್ಪು"

ಎಂದು ಕಂಬನಿದುಂಬಿದಳು. ಲಲಿತ ಅವಳನ್ನು ಅಕ್ಕರೆಯಿಂದಪ್ಪಿ,

" ನಿನ್ನ ಮನಸ್ಸು ನೋಯುವ ಸಂಗತಿ ಏನು ನಡೆಯಿತು, ಹೇಳು. ನೀನು ಹೇಳದಿದ್ದರೆ ನಾನು ಬಿಡುವುದಿಲ್ಲ"

ಎಂದು ಹಟಹಿಡಿದಂತೆ ಕುಳಿತುಬಿಟ್ಟಳು. ಕನಕಾಂಗಿ ನಡೆದ ಸಂಗತಿ ಯನ್ನು ಹೇಳದೆ ಬೇರೆ ದಾರಿಯೇ ಇರಲಿಲ್ಲ. ಅದನ್ನು ಕೇಳಿ ಲಲಿತನ ಮನಸ್ಸನ್ನೂ ದುಗುಡ ಆವರಿಸಿತು. ಭಾರವಾದ ಧ್ವನಿಯಲ್ಲಿ,

" ತಪ್ಪು ನಿನ್ನದಲ್ಲ ಕನಕಾ, ನನ್ನದು. ನನ್ನಿಂದ ನೀನು ಮಾತು ಕೇಳ ಬೇಕಾಯಿತು "

ಎಂದು ಅವಳ ಎರಡು ಕೈಗಳನ್ನೂ ಹಿಡಿದುಕೊಂಡು ತಪ್ಪೊಪ್ಪಿಕೊಳ್ಳುವ ಧ್ವನಿಯಲ್ಲಿ ನುಡಿದಳು. ಕನಕಾಂಗಿಯ ಮನಸ್ಸೂ ಕರಗಿತು. ಅವಳು ಲಲಿತ ನನ್ನು ಹತ್ತಿರ ಸೆಳೆದುಕೊಂಡು,

" ಯಾರ ತಪ್ಪೂ ಅಲ್ಲ. ಹೋಗಲಿ ಸುಮ್ಮನಿರು, ಲಲಿತಾ "

ಎಂದು ತಾನೇ ಸಮಾಧಾನದ ಮಾತನ್ನಾಡಿದಳು. ಇಬ್ಬರೂ ಕ್ಷಣಕಾಲ ಮೌನವಾಗಿದ್ದರು. ಸ್ವಲ್ಪಹೊತ್ತು ಬಿಟ್ಟು ಲಲಿತ,

" ನೀನು ಕೋಪಿಸಿಕೊಂಡರೆ ನನ್ನ ದುಃಖವನ್ನು ಕೇಳುವವರೇ ಇಲ್ಲ ವಾಗುತ್ತದೆ, ಕನಕಾ."

" ಇಲ್ಲಮ್ಮ, ಕೋಪಿಸಿಕೊಳ್ಳುವುದಿಲ್ಲ. ಏನೋ ಬೇಸರವಾಯಿತು, ಅಷ್ಟೆ."

" ಊರಿಗೆ ಹೋಗುವ ಮಾತನ್ನೂ ಆಡಬೇಡ. ನೀನಿದ್ದರೆ ನನಗೆ ಎಷ್ಟೋ ಧೈರ್ಯ, ಕಣೇ."

“ಹಾಗಾದರೆ ಇನ್ನೆಷ್ಟು ದಿವಸ ನನ್ನ ಇರು ಎನ್ನುತ್ತೀ, ಲಲಿತಾ? ಬಂದು ಆಗಲೇ ಒಂದು ತಿಂಗಳಾಯಿತಲ್ಲೇ?”

“ಗೌರೀ ಹಬ್ಬದವರೆಗಾದರೂ ಇರೆ. ಹೋಗುತೀನಿ ಎನ್ನಬೇಡ.”

“ಆಗಲಮ್ಮ ಇರುತ್ತೇನೆ. ನಿನ್ನ ಮಾತು ಮೀರುವುದಿಲ್ಲ”

ಎಂದು ಕನಕಾಂಗಿ ನುಡಿದಳು. ಲಲಿತನ ಮನಸ್ಸು ಕೃತಜ್ಞತೆಯಿಂದ ತುಂಬಿತು.

ಬೇಸರ ಕಳೆಯಲು ಇಬ್ಬರೂ ಸಂಜೆಯ ಹೊತ್ತು ಎಲ್ಲಿಗಾದರೂ ಹೋಗಿ ಬರುತ್ತಿದ್ದರು. ಸಮುದ್ರವೆಂದರೆ ಕನಕಾಂಗಿಗೆ ಮೊದಲಿನಿಂದಲೂ ಇಷ್ಟ. ತೀರದ ಹತ್ತಿರ ಹೋಗಿ ಕುಳಿತುಕೊಂಡರೆ ಎಷ್ಟು ಹೊತ್ತಾದರೂ ಎದ್ದು ಬರುವುದಕ್ಕೇ ಅವಳಿಗೆ ಮನಸ್ಸು ಬರುತ್ತಿರಲಿಲ್ಲ. ಲಲಿತ ಎಚ್ಚರಿಸಿದಾಗ ಮಾತ್ರ ಮನೆಯ ಜ್ಞಾಪಕ ಬರುತ್ತಿತ್ತು.

ಸಮುದ್ರತೀರಕ್ಕೆ ಹೋಗುವುದರಲ್ಲಿ ಕನಕಾಂಗಿಗೆ ಇದ್ದ ಉತ್ಸಾಹ ಲಲಿತನಿಗೆ ಇರಲಿಲ್ಲ. ಕೆಲವು ಜಾಗಗಳಿಗೆ ಹೋದರಂತೂ ಅವಳು ಮಾತಾಡದೆ ಗಂಭೀರವಾಗಿ ಮಂಡಿಯ ಮೇಲೆ ಕೈಕಟ್ಟಿ ಕುಳಿತುಬಿಡುತ್ತಿದ್ದಳು. ಅವಳ ದುಗುಡ ನೋಡಿ ಕನಕಾಂಗಿಗೆ ಇದ್ದ ಅಲ್ಪಸ್ವಲ್ಪ ಉತ್ಸಾಹವೂ ಹೋಗಿ ಬಿಡುತ್ತಿತ್ತು.

ಒಂದು ಸಂಜೆ ಇಬ್ಬರೂ ಕಾರಿನಲ್ಲಿ ಹೊರಟಿದ್ದರು. ಕನಕಾಂಗಿಯೇ ಡ್ರೈವ್ ಮಾಡುತ್ತಿದ್ದಳು. ಅವಳು ಟ್ರಿಪ್ಲಿಕೇನ್ ಹತ್ತಿರ ಕಾರನ್ನು ಸಮುದ್ರ ತೀರದ ಕಡೆಗೆ ತಿರುಗಿಸಿದ್ದನ್ನು ಕಂಡು ಲಲಿತ ಬೆಚ್ಚಿದಳು. ಕನಕಾಂಗಿಯ ಭುಜದ ಮೇಲೆ ಕೈಯಿಟ್ಟು,

“ಕನಕಾ ಅಲ್ಲಿಗೆ ಬೇಡ. ಇನ್ನೆಲ್ಲಿಗಾದರೂ ಹೋಗೋಣ”

ಎಂದಳು. ಆ ಮಾತು ಕೇಳಿ ಕನಕಾಂಗಿಗೆ ಆಶ್ಚರ್ಯವಾಯಿತು.

“ಏತಕ್ಕೆ ಬೇಡ? ಅಲ್ಲಿ ಜಾಗ ಚೆನ್ನಾಗಿಲ್ಲವೆ?”

“ಇದೆ. ಆದರೆ ಅಲ್ಲಿಗೆ ಹೋಗುವುದು ಬೇಡ. ಇನ್ನೆಲ್ಲಿಗಾದರೂ ತಿರುಗಿಸು.”

“ಒಂದು ಗಳಿಗೆ ಕುಳಿತಿದ್ದು ಹೋಗೋಣವೇ ಲಲಿತಾ. ಸಮುದ್ರ ನೋಡು ಇಲ್ಲಿ ಎಷ್ಟು ಚೆನ್ನಾಗಿದೆ”

ಎಂದು ಕನಕಾಂಗಿ ಲಲಿತನ ಮಾತನ್ನು ಲಕ್ಷಿಸದೆ ತೀರದ ಹತ್ತಿರಕ್ಕೆ ಕಾರನ್ನು ತೆಗೆದುಕೊಂಡು ಹೋದಳು. ಇಬ್ಬರೂ ಕಾರಿನಿಂದಿಳಿದು ಸ್ವಲ್ಪ ದೂರ ಮರಳಿನ ಮೇಲೆ ನಡೆದು ಹೋಗಿ ನೀರಿನ ಹತ್ತಿರ ಕುಳಿತರು. ಸಮುದ್ರದ ಮೇಲಿನಿಂದ ತಂಪಾದ ಗಾಳಿ ಬಂದು ಬೀಸುತ್ತಿತ್ತು. ಅಲೆಯ ಕಡೆತಕ್ಕೆ ಸಿಕ್ಕಿ ಮೇಲೆ ಹಾರುತ್ತಿದ್ದ ಸೀರ್ಪನಿಗಳು ಸಂಧ್ಯಾ ಸೂರ್ಯನ ರಶ್ಮಿಯಲ್ಲಿ ಬಂಗಾರದ ಹನಿಗಳಾಗಿದ್ದವು. ಒಂದೇ ಸಮನೆ ತೀರವನ್ನಪ್ಪಳಿಸಿ ಹಿಮ್ಮೆಟ್ಟುತ್ತಿದ್ದ ಅಲೆಗಳು ಮರಳೊಟ್ಟನ ಮೇಲೆ ಶಂಖಗಳನ್ನೂ ಕಪ್ಪೆಚಿಪ್ಪುಗಳನ್ನೂ ಈಡಾಡಿ ಹೋಗುತ್ತಿದ್ದವು. ಈ ಮುಗಿಯದ ಆಟವನ್ನು ನೋಡುತ್ತ ಕುಳಿತ ಕನಕಾಂಗಿಯ ದೃಷ್ಟಿ ಅದರಲ್ಲಿಯೇ ಕೀಲಿಸಿಹೋಯಿತು.

"ಎಷ್ಟು ಚೆನ್ನಾಗಿದೆ ನೋಡೆ, ಲಲಿತ."

ಲಲಿತ ಉತ್ತರ ಕೊಡಲಿಲ್ಲ. ಅವಳ ಮನಸ್ಸು ಯಾವುದೋ ನೆನಪಿನಲ್ಲಿ ಮುಳುಗಿಹೋಗಿತ್ತು.

"ಅಲ್ಲಿ ನೋಡು, ಯಾವುದೋ ದೋಣಿ"

ಎನ್ನುತ್ತ ಕನಕಾಂಗಿ ಹರ್ಷದಿಂದ ಎದ್ದು ನಿಂತು ನಾಲ್ಕು ಹೆಜ್ಜೆಯಲ್ಲಿ ನೀರನ್ನು ಸಮೀಪಿಸಿದಳು. ಗಾಳಿಯಲ್ಲಿ ಪಟ ಆಡುತ್ತಿದ್ದ ಬೆಸ್ತರ ದೋಣಿಯೊಂದು ನಿಧಾನವಾಗಿ ತೀರದ ಕಡೆಗೆ ಬರುತ್ತಿತ್ತು.

"ನೋಡು ಬಾರೆ ಇಲ್ಲಿ, ಎಷ್ಟು ಚೆನ್ನಾಗಿ ಕಾಣತ್ತೆ."

ಕನಕಾಂಗಿಯ ಮಾತು ಲಲಿತನ ಕಿವಿಯ ಮೇಲೆ ಬೀಳಲಿಲ್ಲ. ಅವಳ ಮನಸ್ಸಿನಲ್ಲಿ ನೆನಪಿನ ಸರಪಳಿ ಕೊಂಡಿಕೊಂಡಿಯಾಗಿ ಬಿಚ್ಚಿಕೊಳ್ಳತೊಡಗಿತ್ತು. ಹಿಂದೆ ಇದೇ ಜಾಗದಲ್ಲಿ ಅವಳೊಮ್ಮೆ ಮಧುಸೂದನನೊಡನೆ ಬಂದು ಕುಳಿತಿದ್ದಳು. ಆಪ್ತವಾದ ಆ ಸನ್ನಿವೇಶದಲ್ಲಿ ಅವರಿಬ್ಬರಲ್ಲೂ ಅನುರಕ್ತಿ ಮೂಡಿತ್ತು. ಅವನು ಅವಳನ್ನು ಮನಸಾ ಮೆಚ್ಚಿಕೊಂಡಿದ್ದ; ಹೃದಯಕ್ಕೆ ಹಿತವಾಗುವಂಥ ಮಾತುಗಳನ್ನಾಡಿದ್ದ. ಆ ಮಾತು ಅವಳ ಸ್ಮೃತಿಯ ಆಳದಿಂದ ಒಂದೊಂದಾಗಿ ಉಕ್ಕಿ ಬರುತ್ತಿತ್ತು:

"ನಿಮ್ಮ ಸೌಜನ್ಯದಲ್ಲಿ ನನ್ನನ್ನು ಋಣಿಯಾಗಿಸಿದ್ದೀರಿ."

"ನಿಮ್ಮೊಡನೆ ಎಷ್ಟು ಹೊತ್ತು ಕುಳಿತಿದ್ದರೂ ನನಗೆ ಬೇಸರವಿಲ್ಲ."

"ನಿಮ್ಮ ನಾಟ್ಯವೊಂದೇ ಅಲ್ಲ, ನೀವೂ ಮೆಚ್ಚಿಕೆಯಾದಿರಿ."

ನವ ಪ್ರಣಯದ ಹೊಸಿಲಲ್ಲಿ ಬಂದು ನಿಂತ ಅವಳಿಗೆ ಆ ಮಾತು ಕೇಳಿ ಹೃದಯ ಹರ್ಷದಿಂದ ಬಿರಿದಿತ್ತು. ಕೊನೆಗೆ, ಕಾರಿನಲ್ಲಿ ಕುಳಿತು ಮನೆಗೆ ಹೋಗುವಾಗ ಅವಳು ಅವನಿಗೆ ಒಂದು ಮಾತು ಹೇಳಿದ್ದಳು :

" ನೀವು ನನ್ನನ್ನು ಬಹುವಚನದಲ್ಲಿ ಮಾತಾಡಿಸಬಾರದು."

" ಏಕೆ, ಈಗಲೇ ಅಷ್ಟು ಸ್ವಾತಂತ್ರ್ಯ ಕೊಟ್ಟು ಬಿಡುತ್ತೀರಾ ?"

ಎಂದು ಅವಳನ್ನು ಮೃದುವಾಗಿ ಅಪ್ಪಿಕೊಂಡಿದ್ದ. ಅವಳೂ ತನ್ನ ತಲೆಯನ್ನು ಅವನ ಭುಜದ ಮೇಲಿಟ್ಟು ಒಂದು ಕ್ಷಣ ಮೈಮರೆತಿದ್ದಳು.

ಈಗ ಅದು ಅವಳ ಭಾಗಕ್ಕೆ ಬರಿಯ ಒಂದು ನೆನಪಾಗಿ ಮಾತ್ರ ಉಳಿದಿತ್ತು ; ಕಡಲ ನೀರನೊರೆಯಂತೆ ಕ್ಷಣದಲ್ಲಿ ಅಳಿಸಿಹೋಗಿತ್ತು.

ಕೆದರಿದ ನೋವಿನಲ್ಲಿ ಲಲಿತನ ಮನಸ್ಸು ವಿಷಣ್ಣವಾಯಿತು. ಹಾಗೇ ಮಂಡಿಯ ಮೇಲೆ ತಲೆಯೂರಿದಳು. ದುಃಖ ಒತ್ತರಿಸಿ ಬಂದು ಕಣ್ಣಿಂದ ಹನಿ ಹನಿಯಾಗಿ ನೀರುಕ್ಕಿತು. ಬಿಕ್ಕಿದ ಧ್ವನಿ ಕೇಳಿ ಹಿಂತಿರುಗಿ ನೋಡಿದ ಕನಕಾಂಗಿಗೆ ಲಲಿತನನ್ನು ನೋಡಿ ಎದೆ ಧಸಕ್ಕೆಂದಿತು.

" ಲಲಿತಾ – "

ಎಂದು ಒಂದೇ ಹಾರಿನಲ್ಲಿ ಅವಳ ಬಳಿಗೆ ಬಂದು ಕುಳಿತಳು.

" ಏಕೆ, ಏನಾಯಿತೆ ?"

ಎಂದು ಗಾಬರಿಯಾಗಿ ನುಡಿಯುತ್ತ ಅವಳ ತಲೆಯನ್ನು ಹಿಡಿದೆತ್ತಿದಳು. ಲಲಿತ ಮಾತಾಡದೆ ಕನಕಾಂಗಿಯ ಭುಜಕ್ಕೆ ತಲೆ ಕೊಟ್ಟು ಸುಮ್ಮನೆ ರೋದಿಸತೊಡಗಿದಳು. ಅವಳ ಇಷ್ಟಕ್ಕೆ ವಿರೋಧವಾಗಿ ಅವಳನ್ನು ಅಲ್ಲಿಗೆ ಕರೆತಂದದ್ದು ತಪ್ಪಾಯಿತೆಂದು ಕನಕಾಂಗಿಗೆ ತೋರಿತು.

" ಏಳು, ಮನೆಗೆ ಹೋಗೋಣ "

ಎಂದು ಮೆಲ್ಲನೆ ಕೈಹಿಡಿದೆಬ್ಬಿಸಿ ಕಾರಿನ ಬಳಿಗೆ ಕರೆದೊಯ್ದಳು. ಮನೆ ಸೇರುವವರೆಗೂ ಇಬ್ಬರೂ ಮಾತಾಡಲಿಲ್ಲ.

ರಾತ್ರಿ ಊಟಕ್ಕೆ ಕುಳಿತಾಗ ಲಲಿತನ ಗಂಟಲಲ್ಲಿ ಒಂದು ತುತ್ತು ಅನ್ನವೂ ಇಳಿಯಲಿಲ್ಲ.

" ಏಕೆ ಲಲಿತಾ, ಊಟವೇ ಮಾಡುವುದಿಲ್ಲ? ಸಾಯಂಕಾಲ ಏನು ತಿಂದಿರೇ ?"

ಎಂದು ಮೀನಾಕ್ಷಮ್ಮನವರು ಕೇಳಿದರು.

“ಏನೂ ಇಲ್ಲಮ್ಮ, ಏಕೋ ಹಸಿವಿಲ್ಲ, ಅಷ್ಟೆ”

ಎಂದು ಉತ್ತರವಿತ್ತು ಅವರ ಮುಖ ನೋಡದೆ ತಲೆ ತಗ್ಗಿಸಿದಳು. ಕನಕಾಂಗಿ ತನ್ನ ಕಡೆಗೆ ಬೀರಿದ ಅರ್ಥವತ್ತಾದ ನೋಟದಲ್ಲಿ ಅವಳ ಜೀವ ಹಿಡಿಯಾಯಿತು.

೧೮

ತನ್ನ ಮೂಗು ಹೋದರೂ ಹೋಗಲಿ, ಇನ್ನೊಬ್ಬರಿಗೆ ಅವಲಕ್ಷಣವಾದರೆ ಸಾಕೆಂದು ನಡೆಯುವವರ ಹಾಗೆ ಮಧುಸೂದನನ ಮೇಲಿನ ಸಿಟ್ಟಿಗೆ ಗೋವಿಂದ ದಾಸನ ಜೊತೆಗೂಡಿ ಪುಣೆಗೆ ಹೋದ ರೋಸನ್ನಳಿಗೆ ತನ್ನ ದುಡುಕಿನ ಅರಿವಾಗಲು ಹೆಚ್ಚು ದಿನ ಬೇಕಾಗಲಿಲ್ಲ. ಮುಂಬಯಿಯನ್ನು ಬಿಟ್ಟು ಹೋಗುವಾಗ ಅವಳೇನೋ ಹುಚ್ಚು ಪ್ರತೀಕಾರದ ಭಾವನೆಯಿಂದಲೇ ಹೊರಟುಹೋಗಿದ್ದಳು. ಮಧುಸೂದನ ಮನೆಗೆ ಬಂದು ನೋಡಬೇಕು, ತಾನಿಲ್ಲದುದನ್ನು ಕಂಡು ಎಲ್ಲಿ ಹೋದಳೆಂದು ವಿಚಾರಿಸಬೇಕು, ಗೋವಿಂದದಾಸನ ಸಂಗಡ ಹೋದ ಸಂಗತಿ ಕೇಳಿ ಅವನ ಹೊಟ್ಟೆಯಲ್ಲಿ ಕರುಬಿನ ದಳ್ಳುರಿ ಏಳಬೇಕು, ತನ್ನನ್ನು ಅಲಕ್ಷಿಸಿದ್ದಕ್ಕೆ ಎಂಥ ಮರುಪೆಟ್ಟು ಬಿದ್ದಿತೆನ್ನುವುದನ್ನು ಅವನು ಮನಗಾಣಬೇಕು, ತಾನಿಲ್ಲದ ಜೀವನ ಎಷ್ಟು ಸುಖವೋ ಅನುಭವಿಸಿ ನೋಡಬೇಕು – ಎಂದು ಅವಳು ಲೆಕ್ಕಹಾಕಿ ಸೇಡಿನಿಂದ ಸಿಡಿಯುತ್ತ ಹೊರಟುಹೋಗಿದ್ದಳು.

ಆ ಪ್ರತೀಕಾರ ಭಾವನೆಯೇ ಸೇಟನ ಶಯ್ಯೆಗೂ ಅವಳನ್ನು ನೂಕಿತ್ತು. ಯಾವನನ್ನು ಕಂಡರೆ ಹೇಸಿಕೆಯಿಂದ ಮೈ ಮನಸ್ಸುಗಳನ್ನು ಮುದುರಿಕೊಳ್ಳುತ್ತಿದ್ದಳೋ ಅವನ ತೋಳಸೆರೆಗೇ ಅವಳು ಆ ಹುಚ್ಚುಕೋಪದಲ್ಲಿ ಧಾವಿಸಿದ್ದಳು. ಆ ಗಳಿಗೆಯಲ್ಲಿ ತಾನೇನು ಮಾಡುತ್ತಿರುವೆನೆನ್ನುವ ಅರಿವು ಅವಳಿಗಿಲ್ಲದಿದ್ದರೂ ಬಗ್ಗಡವಾದ ಮನಸ್ಸು ತಿಳಿಯಾದ ಮೇಲೆ ಆ ಸತ್ಯ ಗೋಚರಿಸುವುದಕ್ಕೆ ತಡವಾಗಲಿಲ್ಲ. ಅದು ಗೋಚರಿಸಿದ ಮೇಲೆ ಅವಳ ಸ್ಥಿತಿಯೇ ಬೇರೆಯಾಯಿತು.

ಪುಣೆಗೆ ಬಂದ ಮೇಲೆ ನಾಲ್ಕು ದಿವಸ ರೋಸನ್ ಹೇಗೋ ಇದ್ದಳು. ಗೋವಿಂದದಾಸನ ಜೊತೆಯಲ್ಲಿ ತಿರುಗುವುದರಲ್ಲಿ, ಆ ಪಾನಗೋಷ್ಠಿ, ವಿಲಾಸ ವೈಭವಗಳಲ್ಲಿ ಅವಳಿಗೆ ಯೋಚನೆಗೆ ಅವಕಾಶವೇ ಇರಲಿಲ್ಲ. ಸೇಟಿಗಂತೂ

ಭಾಗ್ಯಲಕ್ಷ್ಮಿಯೇ ತನ್ನ ಕೈಹಿಡಿದು ಬಂದಷ್ಟು ಸಂತಸವಾಗಿತ್ತು. ಅವಳ ಮೈಗೆ ದಿನಕ್ಕೊಂದು ಒಡವೆ ತೊಡಿಸಿ ನೋಡಿ ಹಿಗ್ಗದಿದ್ದರೆ ಅವನಿಗೆ ತೃಪ್ತಿಯೇ ಇರುತ್ತಿರಲಿಲ್ಲ. ಅವನ ಪೂಜೆ ಪ್ರಶಂಸೆಗಳು ಅವಳ ಹೆಮ್ಮೆಗೆ ಧೂಪ ಹಾಕಿದವು. ಆ ಉರುಬಿನಲ್ಲಿ ತನ್ನ ಮೈಯನ್ನು ಅವನಿಗೆ ಒಪ್ಪಿಸಿಬಿಟ್ಟಳು. ನಿಧಿಯನ್ನು ಕಂಡು ದೋಚಿಕೊಳ್ಳಲೆಳಸುವ ಕಡುಲೋಭಿಯ ಹಾಗೆ ಸೇಟು ಅವಳ ರೂಪ ಯೌವನಗಳನ್ನು ಹಸಿದ ಆತುರದಿಂದ ಸವಿಯತೊಡಗಿದ.

ಹದಿನೈದು ದಿವಸ ಅವನ ವಿಕೃತ ಕಾಮಕ್ಕೆ ಈಡಾಗುವುದರಲ್ಲಿ ಅವಳಿಗೆ ಬೇಸರ ಹತ್ತಿತು. ತಿಂಗಳು ಕಳೆಯುವುದರಲ್ಲಿ ಅವನ ಸಹವಾಸ ಪೂರ್ತಿ ಬೇಡವಾಯಿತು. ಹೊತ್ತುಗೊತ್ತೆನ್ನದೆ ಪಶುವಿನಂತೆ ಬಂದು ಮೇಲೆ ಬೀಳುತ್ತಿದ್ದ ಅವನ ಕಾಮಪ್ರವೃತ್ತಿ ಅವಳಲ್ಲಿ ಜುಗುಪ್ಸೆಯನ್ನು ಹುಟ್ಟಿಸಿತು. ಆ ಜುಗುಪ್ಸೆಯ ಹಿಂದೆಯೇ ವಿವೇಕದ ಬೆಳಕೂ ಮೂಡಿತು. ಅರ್ಥವಿಲ್ಲದ ಸೇಡಿನಲ್ಲಿ ತಾನು ದುಡುಕಿದೆನೇ ಎನ್ನುವ ಪಶ್ಚಾತ್ತಾಪದ ಬೇಗೆ ಅವಳ ಎದೆಯಲ್ಲಿ ಹೊತ್ತಿತು.

ಈ ಭಾವನೆ ಬಂದದ್ದೇ ತಡ, ಅಲ್ಲಿಂದ ಪಾರಾಗಬೇಕೆಂದು ಅವಳ ಮನಸ್ಸು ಹಾತೊರೆಯಿತು. ಯಾರ ತೋಳತೆಕ್ಕೆಗೆ ತಾನಾಗಿ ನುಗ್ಗಿ ಬಂದಿದ್ದಳೋ ಅಲ್ಲಿಂದ ಜಾರುವ ಉಪಾಯವನ್ನು ಅವಳು ಆಲೋಚಿಸತೊಡಗಿದಳು.

ಸೇಟು ಕುಡಿಯದೆ ಒಂದು ದಿನವೂ ಬರುತ್ತಿರಲಿಲ್ಲ. ವಯಸ್ಸಿನಲ್ಲಿ ಅವಳ ತಂದೆಯ ಹಾಗಿದ್ದ ಅವನಿಗೆ ಅವಳ ಹತ್ತಿರ ಬರಲು ಅದೇ ಧೈರ್ಯದ ಊರೆಗೋಲಾಗಿತ್ತು. ಅದರ ಸಹಾಯವಿಲ್ಲದಿದ್ದರೆ ಅವಳ ಬಳಿ ತನ್ನ ಆಟವೊಂದೂ ನಡೆಯುವುದಿಲ್ಲವೆಂದು ಅವನಿಗೆ ಗೊತ್ತಿತ್ತು. ಕುಡಿತದ ಅಮಲಿನಲ್ಲಿ ಅವನು ಮಾಡುತ್ತಿದ್ದ ಶೃಂಗಾರ ಚೇಷ್ಟೆಗಳನ್ನು ನೋಡಿ ಅವಳಿಗೆ ಅಸಹ್ಯವಾಗುತ್ತಿತ್ತು. ಭೋಗದಲ್ಲಿ ನಯ ನಾಜೂಕುಗಳನ್ನರಿಯದ ಅವನ ಅಸಂಸ್ಕೃತ ಪ್ರವೃತ್ತಿ ಅವಳಿಗೆ ಅನಾಗರಿಕವಾಗಿ ಕಂಡಿತು. ಮಧುಸೂದನನ ರಸಿಕತೆಯ ಸವಿಯನ್ನು ಕಂಡಿದ್ದ ಅವಳಿಗೆ ಗೋವಿಂದದಾಸ್ ಹೇಯವ್ಯಕ್ತಿಯಾಗಿ ಕಂಡ.

ಅವಳ ಜುಗುಪ್ಸೆ ಪರಾಕಾಷ್ಠೆ ಮುಟ್ಟುವ ಪ್ರಸಂಗ ಒಂದು ದಿನ ನಡೆಯಿತು.

ಆ ರಾತ್ರಿ ಇಬ್ಬರೂ ಒಂದು ಮಿಲಿಟರಿ ಭೋಜನಕೂಟಕ್ಕೆ ಹೋಗಿದ್ದರು.

ಕೂಟದಲ್ಲೇ ಸೇಟು ಕಂಠಪೂರ್ತಿಯಾಗಿ ಕುಡಿದಿದ್ದ. ರೋಷನ್ ಒಲ್ಲೆನೆನ್ನದೆ ಉಪಚಾರಕ್ಕೆ ಸ್ವಲ್ಪ ಮಾತ್ರ ಸೇವಿಸಿದ್ದಳು. ಆದರೆ ಅವನ ಹಾಗೆ ಅವಳಿಗೆ ಅಮಲೇರಿರಲಿಲ್ಲ.

ಮನೆಗೆ ಹಿಂತಿರುಗುವ ಹೊತ್ತಿಗೆ ಹನ್ನೆರಡು ಘಂಟೆ ಹೊಡೆದುಹೋಗಿತ್ತು. ಆಯಾಸಪಟ್ಟಿದ್ದ ರೋಷನ್ ನೇರವಾಗಿ ತನ್ನ ರೂಮಿಗೆ ಹೋಗಿ ಮಲಗಿಬಿಟ್ಟಳು. ಸೇಟ್ ತನ್ನ ರೂಮು ಸೇರಿ ಬಟ್ಟೆ ಬಿಚ್ಚಿ ಮೇಜಿನ ಮುಂದೆ ಕುಳಿತುಕೊಂಡ. ಕೂಟದಲ್ಲಿ ಕುಡಿದ ಮದ್ಯದಿಂದ ಅವನ ನೆತ್ತಿಗೆ ಹತ್ತಿದ್ದ ಅಮಲು ಇನ್ನೂ ಇಳಿದಿರಲಿಲ್ಲ. ಮೈ ಎತ್ತಲೋ ತೂಗುತ್ತಿತ್ತು; ಮನಸ್ಸು ಎತ್ತಲೋ ಎಳೆಯುತ್ತಿತ್ತು.

ಎಂದಿನಂತೆ ಅಂದು ಅವನಿಗೆ ರೋಷನ್ನಳೊಡನೆ ಸರಸವಾಡುವ ಅವಕಾಶವೇ ಸಿಕ್ಕಿರಲಿಲ್ಲ. ಭೋಜನಕೂಟದಲ್ಲಿ ಅಮೂಲ್ಯವಾದ ವೇಳೆ ವ್ಯಯವಾಗಿಹೋಗಿತ್ತು.

ಅವಳ ನೆನಪಾಗಿ ಅವನ ಮನಸ್ಸಿನ ವಿಕಾರ ಉಲ್ಬಣವಾಯಿತು. ಭೋಗೇಚ್ಛೆ ಅವನ ಮೈಯಲ್ಲಿ ಒತ್ತರಿಸಿಕೊಂಡು ಬಂದಿತು. ಥಿಗ್ಗನೆದ್ದು ಮೇಜಿನ ಮೇಲಿದ್ದ ವ್ಹಿಸ್ಕಿ ಸೀಸೆಯನ್ನೂ ಸೋಡಾ ಬಾಟಲನ್ನೂ ಕಂಕುಳಲ್ಲಿ ಇರುಕಿಕೊಂಡು ಅವಳ ರೂಮಿಗೆ ಧಾವಿಸಿದ.

ಧಡಾರನೆ ಬಾಗಿಲನ್ನು ನೂಕಿ ಬಿರುಗಾಳಿಯಂತೆ ಒಳಗೆ ನುಗ್ಗಿದ ಅವನನ್ನು ಕಂಡು ಅರೆನಿದ್ದೆಯಲ್ಲಿದ್ದ ರೋಷನ್ ಎಚ್ಚರಗೊಂಡು ಗಾಬರಿಯಾಗಿ ಎದ್ದು ಕುಳಿತಳು.

ಸೇಟ್ ಬಾಗಿಲನ್ನು ಮುಚ್ಚಿ ಅಗುಳಿ ಹಾಕಿ ಮಂಚದ ಮೇಲೆ ಅವಳ ಪಕ್ಕದಲ್ಲಿ ಹೋಗಿ ಕುಳಿತ.

“ಆಗಲೇ ಮಲಗಿಬಿಟ್ಟೆಯಾ? ಭೋಜನಕೂಟ ತೀರಿಸಿಕೊಂಡು ಬಂದದ್ದು ಮಲಗಿ ನಿದ್ದೆ ಮಾಡುವುದಕ್ಕೇನು?”

ಎನ್ನುತ್ತ ಅವಳ ಮೈಮೇಲೆ ಕೈಹಾಕಿದ. ಅವನ ಸ್ಪರ್ಶಕ್ಕೆ ಅವಳು ಬೆಚ್ಚಿ ಮೈ ಮುದುರಿಕೊಂಡಳು.

“ಇದೇನು ಇವತ್ತು ಹೀಗೆ? ಮೈ ಮುಚ್ಚಿಕೊಳ್ಳುವಷ್ಟು ನಾಚಿಕೆ?”

ಎಂದು ಅವಳ ಮೇಲೆ ಬೀಳುವ ಹಾಗೆ ಬಂದು ಮುಖದ ಹತ್ತಿರ ಮುಖ

ವಿಟ್ಟು ಕೇಳಿದ. ಅವನ ಉಸಿರಿನಲ್ಲಿ ಮದ್ಯದ ಅಸಹ್ಯ ವಾಸನೆ ಹೊಡೆಯು ತ್ತಿತ್ತು. ರೋಷನ್ ಸಹಿಸಲಾರದೆ ಎರಡು ಕೈಗಳಿಂದಲೂ ಅವನನ್ನು ಹಿಂದಕ್ಕೆ ದಬ್ಬಿದಳು.

"ಸೇಟ್, ಇವತ್ತು ನನ್ನ ತಂಟೆಗೆ ಬರಬೇಡ. ನನಗೆ ಆಯಾಸವಾಗಿದೆ."

"ಆಯಾಸಕ್ಕೆ ಔಷಧಿ ಇಲ್ಲಿದೆ"

ಎಂದು ವ್ಹಿಸ್ಕಿ ಸೀಸೆಯನ್ನು ಅವಳ ಮುಂದೆ ಆಡಿಸಿದ.

"ನೀನೇ ಕುಡಿ, ಹೋಗು"

ಎಂದು ಅವನು ಮುಖದ ಮುಂದೆ ಹಿಡಿದ ಸೀಸೆಯನ್ನತ್ತ ನೂಕಿ ಗೋಡೆಯ ಕಡೆಗೆ ಮುಖ ತಿರುಗಿಸಿ ಮಲಗಿಕೊಂಡಳು. ಗೋವಿಂದದಾಸ್ ಬಿಡದೆ ಅವಳ ಸೆರಗನ್ನೆಳೆದು ಬಲವಂತವಾಗಿ ತನ್ನ ಕಡೆಗೆ ತಿರುಗಿಸಿಕೊಂಡ.

"ನಾನೊಬ್ಬನೇ ಕುಡಿದು ಮೂಲೆಯಲ್ಲಿ ಮುದುಡಿಕೊಳ್ಳಲು ಇಲ್ಲಿಗೆ ಬರ ಬೇಕಾಗಿತ್ತೆ? ಏಳು, ಏಳು. ಸುಮ್ಮನೆ ಮಾತಿನಲ್ಲಿ ಹೊತ್ತು ಕಳೆಯಬೇಡ. ಸರದಿ ತಪ್ಪಿದರೆ ನನ್ನ ಮೈಗಾಗುವುದಿಲ್ಲ"

ಎಂದ. ಆ ಮಾತು ಕೇಳಿ ಅವಳಿಗೆ ಕೋಪ ಬಂದಿತು. ತನ್ನ ದೇಹಾ ಲಸ್ಯವನ್ನೂ ಲೆಕ್ಕಿಸದೆ ಮೇಲೆ ಬಿದ್ದು ಕಾಮಪಿಪಾಸೆ ತೀರಿಸಿಕೊಳ್ಳಲು ಹದ್ದಿನ ಹಾಗೆ ಕಾದಿದ್ದ ಅವನನ್ನು ದೃಷ್ಟಿಯಿಂದಲೇ ಸುಟ್ಟುಬಿಡುವಂತೆ ದುರದುರನೆ ನೋಡಿದಳು. ಮದಿರೆಯಿಂದ ಆಗಲೇ ಅರ್ಧ ಪ್ರಜ್ಞೆ ಕಳೆದುಕೊಂಡಿದ್ದ ಅವನ ಮಂದಬುದ್ಧಿಗೆ ಅವಳ ನೋಟದ ಕಣೆ ನಾಟಲಿಲ್ಲ. ಅವನು ನಿಶ್ಚಿಂತೆಯಿಂದ ವ್ಹಿಸ್ಕಿ–ಸೋಡಾ ಸೀಸೆಗಳನ್ನೊಡೆದು ಒಂದು ಕಪ್ಪಿನಲ್ಲಿ ಬೆರಸಿ ಬಸಿದುಕೊಂಡು ಅದರ ಆನಂದದಲ್ಲಿ ಗಟ್ಟಿಯಾಗಿ ನಾಲಗೆ ಚಪ್ಪರಿಸತೊಡಗಿದ.

"ನಿನಗೆ ಬೇಡದಿದ್ದರೆ ನನಗೇ ಆಯಿತು."

"ಕುಡಿ; ಕುಡಿದು ಹಾಳಾಗಿ ಹೋಗು."

ಸೇಟ್ ಗಹಗಹಿಸಿ ನಕ್ಕ.

"ಹಾಳಾಗಿ ಹೋಗಬೇಕೆ? ನಿನ್ನನ್ನು ಬಿಟ್ಟು ಹೋಗುವುದೆಲ್ಲಿಗೆ? ಇವತ್ತು ನಿನ್ನೊಡನೆ ಭೋಗಿಸದೆ ಹೋಗುವೆನೆಂದು ತಿಳಿದುಕೊಂಡೆಯಾ?"

ಎಂದ. ಅವನ ಕಣ್ಣಾಲಿಗೆ ಕೆಂಪಡರಿತ್ತು; ಮೈ ಹಿಂದಕ್ಕೂ ಮುಂದಕ್ಕೂ ತೂಗುತ್ತಿತ್ತು; ಮಾತು ಅಸ್ಪಷ್ಟವಾಗಿ ಹೊರಡುತ್ತಿತ್ತು. ಅವನ ದೃಷ್ಟಿಗೆ

ರೋಷನ್ ಹತ್ತಾಗಿ ಕಂಡಳು. ಅವಳ ಮುಖ, ಅವಳ ಕಣ್ಣು ಅವನನ್ನು ಎಲ್ಲೆಡೆಯಿಂದಲೂ ಕರೆಯುತ್ತಿರುವಂತೆ ತೋರಿತು. ಎದೆಯಲ್ಲಿ ಭುಗ್ಗನೆ ಹೊತ್ತಿದ ಹುಚ್ಚು ಆಸೆಯಲ್ಲಿ ಅವನು ಮುಂದೆ ನುಗ್ಗಿ ಬಂದು ಅವಳ ಉಡಿಗೆ ಕೈಹಾಕಿ ಜಗ್ಗಿಸಿದ. ಆ ರಭಸಕ್ಕೆ ಅವಳ ಸೀರೆಯ ಬಿಗಿ ಕಳಚಿತು.

ರೋಷನ್ ಕೋಪದಿಂದ ಸಿಡಿದೆದ್ದು ಅವನ ಮುಖಕ್ಕೆ ಅಪ್ಪಳಿಸಲು ಕೈಯೆತ್ತಿದಳು. ಅದನ್ನು ಊಹಿಸಿಯೋ ಏನೋ ಅವನು ಅವಳನ್ನು ಎರಡು ಕೈಗಳಲ್ಲಿಯೂ ತಬ್ಬಿ ಹಿಡಿದು ಸಡಿಲವಾದ ಅವಳ ಸೀರೆಯ ನಿರಿಯನ್ನು ತನ್ನ ಉಂಗುಟದಿಂದ ಕೆಳಕ್ಕೆಳೆಯತೊಡಗಿದ.

"ಬಿಡಿಸಿಕೊಳ್ಳುತ್ತೀಯೇನು? ಹಟ ಮಾಡುತ್ತೀಯೇನು? ನಿನ್ನ ಉದ್ಧಕ್ಕಾಗಿ ದುಡ್ಡು ಸುರಿದ ನನಗೇ ಈ ಮೈಯನ್ನು ನೀಡದೆ ವಂಚಿಸುತ್ತೀಯಾ?"

ಎಂದು ಅವಳನ್ನು ಸಂಪೂರ್ಣವಾಗಿ ವಿವಸ್ತ್ರಳನ್ನಾಗಿಮಾಡುತ್ತ ಆ ಮೈಯ ಮಾಟವನ್ನು ನೋಡಿದ ಉನ್ಮಾದದಲ್ಲಿ ಗಟ್ಟಿಯಾಗಿ ಕೇಕೆಹಾಕಿ ನಗತೊಡಗಿದ.

"ಅಹ್ಹ ಹ್ಹ ಹ್ಹ ಹ್ಹ ಹ್ಹಾ—"

ಅವನ ಮದ್ಯಮಿಶ್ರಿತವಾದ ಉಸಿರಿನಲ್ಲಿ ಅವಳಿಗೆ ತಲೆ ತಿರುಗುವ ಹಾಗಾಯಿತು; ಅವನ ಕಠಿನವಾದ ತೋಳತಬ್ಬಿನಲ್ಲಿ ಅವಳ ಮೈಯ ಮೂಳೆಗಳು ಪುಡಿ ಪುಡಿಯಾಗುವಂತಾದವು; ಅವನ ಉನ್ಮಾದದ ಆವೇಗವನ್ನು ತಡೆಯಲಾರದೆ ಅವಳ ಮೈ ಝಲ್ಲೆಂದು ಬೆವತಿತು.

ಆ ಯಮಬಂಧನದಿಂದ ಪಾರಾಗಲು ದಾರಿಯೇ ಇರಲಿಲ್ಲ.

ಇನ್ನೇನು, ಕೆಳಗುರುಳಿ ಅವನ ಪೈಶಾಚಿಕ ಕಾಮಕ್ಕೆ ಬಲಿಯಾಗಬೇಕೆನ್ನುವ ಹೊತ್ತಿನಲ್ಲಿ ಅವಳ ಬುದ್ಧಿಗೆ ಥಟ್ಟನೆ ಏನೋ ಹೊಳೆಯಿತು. ಅವನ ಭಾರ ತಾಳಲಾರದೆ ನೆಲಕ್ಕೆ ವಾಲುತ್ತಿದ್ದವಳು ಬೀಳುವ ಮುನ್ನ ತನ್ನ ಶಕ್ತಿಯನ್ನೆಲ್ಲಾ ಒಟ್ಟುಗೂಡಿಸಿ ಮಂಡಿಯಿಂದ ಅವನ ಆಯಕಟ್ಟು ಸ್ಥಳಕ್ಕೆ ಮೇಲಿಂದ ಮೇಲೆ ಬಲವಾಗಿ ಘಾತಿಸಿಬಿಟ್ಟಳು.

"ಹ್ಹಾ—"

ಎಂದು ಸೇಟ್ ಅಪಾರವಾದ ವೇದನೆಗೆ ಸಿಕ್ಕಿ ತರಹರಿಸಿದ. ಅವನ ಮೈಯನ್ನು ಒಂದೇ ಸಲ ಸಾವಿರ ಸೂಜಿಗಳಿಂದ ಚುಚ್ಚಿದ ಹಾಗಾಯಿತು; ಅವನ

ನಾಳಗಳಲ್ಲಿ ಹರಿಯುತ್ತಿದ್ದ ರಕ್ತ ಥಿಲ್ಲೆಂದು ಹೆಪ್ಪುಗಟ್ಟಿದಂತಾಯಿತು; ಅವಳನ್ನು ತಬ್ಬಿದ್ದ ಅವನ ತೋಳಿನಲ್ಲಿ ಶಕ್ತಿ ಉಡುಗಿತು; ಜಂಘಾಬಲ ಕುಸಿಯಿತು. ಅಪ್ಪಳಿಸಿದಂತೆ ಕವಿದು ಬಂದ ಬವಳಿಯಲ್ಲಿ ಅವನು ಕೆಳಗುರುಳಿ ನಿಶ್ಚೇಷ್ಟಿತನಾದ.

ಮರದ ಕೊರಡಿನಂತೆ ತನ್ನ ಕಾಲ ಕೆಳಗೆ ಬಿದ್ದಿದ್ದ ಆ ಪುರುಷ ಪಶುವನ್ನು ರೋಷನ್ ಕಾಲಿನೊಂದೊದೆದು ತನ್ನ ಕೋಪ ತೀರಿಸಿಕೊಂಡಳು.

ಹೊತ್ತು ಕಳೆಯಲು ಸ್ವಲ್ಪವೂ ಅವಕಾಶವಿರಲಿಲ್ಲ. ಅವಳಾಗಲೇ ಅಲ್ಲಿಂದ ಪಾರಾಗಬೇಕಾಗಿತ್ತು. ಸೇಟಿಗೆ ಜ್ಞಾನ ಬಂದರೆ ಅವಳನ್ನು ಜೀವಸಹಿತ ಬಿಡುವ ಹಾಗಿರಲಿಲ್ಲ.

ರೋಷನ್ನಳ ಬುದ್ಧಿ ವೇಗವಾಗಿ ಚಲಿಸತೊಡಗಿತು.

ಬಂಗಲೆ ನಿಶ್ಶಬ್ದವಾಗಿತ್ತು. ಹಿಂದುಗಡೆಯ ಮನೆಯಲ್ಲಿ ಡ್ರೈವರ್ ಎಲ್ಲೋ ಒಂದು ಕಡೆ ಮಲಗಿದ್ದ. ಕೆಲಸದ ಆಳು ತನ್ನ ಹೆಂಡತಿಯೊಡನೆ ಹಿತ್ತಿಲ ಕೊನೆಯ ಷೆಡ್ಡಿನಲ್ಲಿ ಸುಖನಿದ್ರೆ ಕಾಣುತ್ತಿದ್ದ. ಅಡಿಗೆಯವನು ಯಾವ ಕೋಣೆಯಲ್ಲಿ ಸುರುಟಿಕೊಂಡಿದ್ದನೋ ಗೊತ್ತಿರಲಿಲ್ಲ.

ರೋಷನ್ ಕೈಗೆ ಸಿಕ್ಕಿದ ತನ್ನ ಬಟ್ಟೆಬರೆಗಳನ್ನೆಲ್ಲಾ ಬೇಗ ಬೇಗ ಸೂಟುಕೇಸುಗಳಿಗೆ ತುಂಬಿದಳು. ತೆಳ್ಳನೆಯ ಮೇಲುದವೊಂದನ್ನು ಮೈಮೇಲೆ ಹಾಕಿಕೊಂಡಳು. ಸದ್ದಾಗದಂತೆ ಪೆಟ್ಟಿಗೆಗಳನ್ನು ಮುಚ್ಚಿ ರೂಮಿನ ಹೊರಗಿಟ್ಟು ಬೀರುವಿನಲ್ಲಿದ್ದ ಟಾರ್ಚನ್ನು ಕೈಗೆ ತೆಗೆದುಕೊಂಡು ರೂಮಿನ ದೀಪ ಆರಿಸಿ ಈಚೆಗೆ ಬಂದಳು.

ಎದೆ ಡವಡವ ಎಂದು ಹೊಡೆದುಕೊಳ್ಳುತ್ತಿತ್ತು; ಗಾಬರಿಯಲ್ಲಿ ಹೆಜ್ಜೆ ತೊಡರುತ್ತಿತ್ತು. ಟಾರ್ಚಿನ ಬೆಳಕನ್ನು ಮುಂದೆ ಹರಿಸುತ್ತ ಹಜಾರದ ಹಿಂದಿನ ಬಾಗಿಲ ಬಳಿ ಬಂದು ನಿಂತು ಒಂದು ಗಳಿಗೆ ಕಿವಿಗೊಟ್ಟು ಆಲಿಸಿದಳು. ಮನೆಯಲ್ಲಿ ಯಾವ ಸದ್ದೂ ಇರಲಿಲ್ಲ. ಹಿಂದುಗಡೆಯ ರೂಮಿನಿಂದ ಗೊರಕೆಯ ಸದ್ದು ಮಾತ್ರ ಕೇಳಬರುತ್ತಿತ್ತು. ಅಲ್ಲಿ ಯಾರು ಮಲಗಿದ್ದರೋ ಅವಳಿಗೆ ಗೊತ್ತಿರಲಿಲ್ಲ. ಅಡಿಗೆಯವನೋ, ಡ್ರೈವರೋ?

ರೋಷನ್ ಹಿಂದಿನ ಬಾಗಿಲು ತೆಗೆದು ಮೆಲ್ಲನೆ ಹೊರಗೆ ಬಂದಳು. ಪುಣ್ಯಕ್ಕೆ ಪಕ್ಕದ ರೂಮಿನ ಬಾಗಿಲು ಹಾಕಿರಲಿಲ್ಲ. ಸೆಕೆಗೆಂದೋ ಏನೋ ಅರ್ಧ ತೆರೆದಿತ್ತು. ಅವಳು ಹೆಜ್ಜೆಯ ಮೇಲೆ ಹೆಜ್ಜೆಯಿಟ್ಟುಕೊಂಡು ಬಾಗಿಲ

ಬಳಿ ಬಂದು ನಿಂತು ಒಂದೇ ಒಂದು ಕ್ಷಣ ಟಾರ್ಚಿನ ಬೆಳಕನ್ನು ಒಳಗೆ ಹರಿಸಿ ಬಗ್ಗಿ ನೋಡಿದಳು. ಡ್ರೈವರನ ಬಟ್ಟೆ ಗೂಟದಿಂದ ನೇತಾಡುತ್ತಿತ್ತು. ಅವನು ನೆಲದ ಮೇಲೆ ಹಾಸಿದ್ದ ಹಳೆಯ ಜಮುಖಾನವೊಂದರ ಮೇಲೆ ಮಲಗಿ ನಿದ್ರಿಸುತ್ತಿದ್ದ.

"ಕಾಸೀಂ, ಕಾಸೀಂ."

ಗಂಟಲಿನಿಂದ ಸ್ವರವೇ ಹೊರಡದಷ್ಟು ಮೆಲ್ಲನೆ ರೋಷನ್ ಕೂಗಿದಳು. ಡ್ರೈವರ್ ಅಲುಗಾಡದೆ ನಿದ್ದೆ ಮಾಡುತ್ತಲೇ ಇದ್ದ.

"ಅರೇ, ಕಾಸೀಂ"

ಎಂದು ಸ್ವಲ್ಪ ಧ್ವನಿ ಎತ್ತರಿಸಿ ಕೂಗಿ ಟಾರ್ಚಿನ ಬೆಳಕು ಅವಳ ಮುಖದ ಮೇಲೆ ಬೀಳುವಂತೆ ಬಿಟ್ಟಳು. ಕಣ್ಣು ಚುಚ್ಚುವ ಆದರ ಬೆಳಕಿನಲ್ಲಿ ಅವನ ನಿದ್ದೆ ಹರಿಯಿತು.

"ಆಂ, ಯಾರು?"

ಎನ್ನುತ್ತ ಗಾಬರಿಯಾಗಿ ಎದ್ದು ಕುಳಿತ.

"ಹುಶ್, ಕೂಗಬೇಡ. ನಾನೇ."

"ಯಾರು, ಬೀಬಿಸಾಹಿಬಾನೇ?"

"ಹೌದು."

"ಏನಮ್ಮಾ, ಇಷ್ಟು ಹೊತ್ತಿನಲ್ಲಿ?"

ಎಂದು ಕಾಸೀಂ ಆಚ್ಚರಿಯಿಂದ ಕಣ್ಣುಜ್ಜಿಕೊಳ್ಳುತ್ತ ಕೇಳಿದ.

"ನಿನ್ನಿಂದ ಒಂದು ಉಪಕಾರವಾಗಬೇಕು, ಕಾಸೀಂ. ನನ್ನನ್ನು ರೈಲ್ವೇ ಸ್ಟೇಷನ್ನಿಗೆ ಕರೆದುಕೊಂಡು ಹೋಗಬೇಕು."

"ಇಷ್ಟು ಹೊತ್ತಿನಲ್ಲಿ ಯಾಕಮ್ಮ ರೈಲಿಗೆ? ಬೆಳಗ್ಗೆ ಹೋದರಾಗುವುದಿಲ್ಲವೆ?"

ಎಂದು ದೊಡ್ಡದಾಗಿ ಆಕಳಿಸುತ್ತ ಮೈಮುರಿದ. ಅವನ ಮೈ ಮನಸ್ಸುಗಳನ್ನು ನಿದ್ದೆ ಎಳೆಯುತ್ತಿತ್ತು.

"ಈಗ ಚರ್ಚೆ ಮಾಡಬೇಡ, ಕಾಸೀಂ. ನಾನು ಹೇಳಿದ ಹಾಗೆ ಕೇಳು"

ಎಂದು ಅವನ ಮುಂದೆ ಹತ್ತು ರೂಪಾಯಿಯ ಎರಡು ನೋಟುಗಳನ್ನು

ಹಿಡಿದಳು. ಅದನ್ನು ಕಂಡು ಕಾಸೀಮನ ಕಣ್ಣರಳಿತು. ಅವಳ ಮುಖವನ್ನು ದಿಟ್ಟಿಸಿ ನೋಡಿದ. ಅವನಿಗೇನೋ ಅರ್ಥವಾಗಿರಬೇಕು.

"ಏಳು ಕಾಸೀಂ, ತಡಮಾಡಬೇಡ"

ಎಂದು ರೋಷನ್ ಅವಸರಿಸಿದಳು. ಕಾಸೀಂ ಹಿಂದು ಮುಂದು ನೋಡಿ,

"ಸೇಟ್‌ಜೀ?"

"ಅವರು ಮಲಗಿದ್ದಾರೆ."

"ಅವರಿಗಿದು ಗೊತ್ತಿಲ್ಲವೆ?"

"ಇಲ್ಲ."

"ಅವರಿಗೆ ತಿಳಿದರೆ ನನ್ನನ್ನು ಸುಮ್ಮನೆ ಬಿಡುತ್ತಾರೇನಮ್ಮಾ?"

"ಅವರಿಗೆ ಹೇಗೆ ತಿಳಿಯಬೇಕು? ನೀನು ಯಾರ ಹತ್ತಿರವೂ ಬಾಯಿ ಬಿಡಬೇಡ."

"ನೀವೆಲ್ಲಿಗೆ ಹೋಗಬೇಕು?"

"ಮುಂಬಯಿಗೆ."

"ಇಷ್ಟು ಹೊತ್ತಿನಲ್ಲಿ ಯಾವುದಮ್ಮಾ ರೈಲು?"

"ಅಲ್ಲಿ ಹೋಗಿ ವಿಚಾರಿಸೋಣ, ಬೇಗ ಏಳು. ಮಾತಿನಲ್ಲೇ ಹೊತ್ತು ಹೋಗುತ್ತಿದೆ"

ಎಂದಳು. ಕಾಸೀಂ ನೋಟುಗಳನ್ನು ನಿಕ್ಕರ್ ಜೇಬಿಗೆ ಸಿಕ್ಕಿಸುತ್ತ ಇಷ್ಟವಿಲ್ಲದ ಮನಸ್ಸಿನಿಂದ ಎದ್ದ. ಈ ಕೆಲಸದಲ್ಲಿ ಭಾಗಿಯಾದರೆ ಪರಿಣಾಮವೇನಾಗುವುದೋ ಎನ್ನುವ ಭಯ ಅವನಿಗೂ ಇತ್ತು.

ಅವನು ಗ್ಯಾರೇಜಿನಿಂದ ಕಾರನ್ನು ಹೊರಗೆ ತರುವುದರಲ್ಲಿ ರೋಷನ್ ಒಳಗೆ ಹೋಗಿ ಸೂಟ್‌ಕೇಸುಗಳನ್ನು ತಂದು ಮುಂದುಗಡೆಯ ಪೋರ್ಟಿಕೋದಲ್ಲಿಟ್ಟುಕೊಂಡಿದ್ದಳು. ಕಾರಿನ ಎಂಜಿನ್ನಿನ ಸದ್ದಿಗೆ ಹಿಂದುಗಡೆಯ ಷೆಡ್ಡಿನಲ್ಲಿ ಮಲಗಿದ್ದ ಆಳು ಎಲ್ಲಿ ಎಚ್ಚರಗೊಳ್ಳುವನೋ ಎನ್ನುವ ಭೀತಿ ಕಾಸೀಮನಿಗಿತ್ತು. ಆದರೆ ಆ ಸದ್ದು ನಿದ್ದೆಯ ಆಳದಲ್ಲಿ ಮುಳುಗಿದ್ದ ಆಳನ್ನಾಗಲಿ ಅಡುಗೆಯವನನ್ನಾಗಲಿ ಮುಟ್ಟಿದಂತೆ ಕಾಣಲಿಲ್ಲ. ಕಾರು ಸದ್ದಿಲ್ಲದೆ ಬಂದು ಪೋರ್ಟಿಕೋದಲ್ಲಿ ನಿಂತಿತು. ಡ್ರೈವರ್ ಎರಡು ಸೂಟ್‌ಕೇಸುಗಳನ್ನೂ ತೆಗೆದು ಒಳಗಿಟ್ಟ. ರೋಷನ್ ತಕ್ಷಣ ಹತ್ತಿ ಕುಳಿತಳು.

ಕಾರು ರೈಲ್ವೇಸ್ಟೇಷನ್ನಿನ ಅಭಿಮುಖವಾಗಿ ವೇಗದಿಂದ ಹೊರಟಿತು.

ಸ್ಟೇಷನ್ ತಲಪಿದಾಗ ರಾತ್ರಿ ಎರಡು ಘಂಟೆಯಾಗಿತ್ತು. ಯಾವ ಯಾವುದೋ ರೈಲುಗಳಿಗೆ ಕಾಯುತ್ತ ಪ್ರಯಾಣಿಕರು ಅಲ್ಲಲ್ಲೇ ಕುಳಿತಿದ್ದರು. ಕೆಲವರು ತಮ್ಮ ಗಂಟು ಮೂಟೆಗಳನ್ನಿಟ್ಟುಕೊಂಡ ಹಾಗೇ ಸುರುಟಿಕೊಂಡು ನಿದ್ದೆ ಹೋಗುತ್ತಿದ್ದರು.

ರೋಷನ್ ಕಾರಿನಿಂದಿಳಿಯುತ್ತಿದ್ದ ಹಾಗೇ ಒಬ್ಬ ಪೋರ್ಟರ್ ಹತ್ತಿರ ಬಂದ.

" ಈಗ ಮುಂಬಯಿಗೆ ಯಾವುದಾದರೂ ರೈಲು ಹೋಗುತ್ತದೆಯೆ ?"

" ಈಗ ಹೋಗುವುದಿಲ್ಲ. ಬೆಳಗಿನ ಜಾವ ನಾಲ್ಕಕ್ಕೆ ಒಂದು ಲೋಕಲ್ ಹೋಗುತ್ತದೆ."

" ಹೋಗಲಿ. ನನ್ನನ್ನು ವೈಟಿಂಗ್ ರೂಮಿಗೆ ಕರೆದುಕೊಂಡು ಹೋಗು"

ಎನ್ನುತ್ತ ರೋಷನ್ ಕಾಸೀಂ ಕಡೆ ತಿರುಗಿ ಪಿಸುದನಿಯಲ್ಲಿ,

" ಎಚ್ಚರಿಕೆ ಕಾಸೀಂ. ಸೇಟರ ಹತ್ತಿರ ಬಾಯಿ ಬಿಟ್ಟೀಯೆ. ಮುಂಬಯಿಗೆ ಬಂದಾಗ ನಮ್ಮ ಮನೆಗೆ ಬಾ, ನಿನಗೆ ಇನಾಮು ಕೊಡುತ್ತೇನೆ"

ಎಂದು ಹೇಳಿ ಸೂಟ್‌ಕೇಸುಗಳನ್ನು ಹೆಗಲ ಮೇಲೆ ಹೊತ್ತು ಹೊರಟ ಪೋರ್ಟರನ್ನು ಹಿಂಬಾಲಿಸಿದಳು. ಕಾಸೀಂ ಕಾರನ್ನು ಮನೆಯ ಕಡೆ ತಿರುಗಿಸಿದ. ಅವನಿಗೆ ಜೀವದಲ್ಲಿ ಜೀವವಿರಲಿಲ್ಲ.

೧೯

ಮಾತುಂಗದಲ್ಲಿ ಮೈಸೂರು ಸುಗಂಧ ವಸ್ತುಗಳ ಏಜೆಂಟ್ ಕೇಶವಯ್ಯ ಎಲ್ಲಿದ್ದಾರೆಂದು ವಿಚಾರಿಸುತ್ತ ಬಂದ ಮೈಸೂರು ಸಂಘದ ಆಚಾರ್ಯರಿಗೆ ಮಧುಸೂದನ 'ವಿಜಯ ವಿಲಾಸ'ದಲ್ಲಿ ಇಳಿದುಕೊಂಡಿರುವನೆನ್ನುವ ಸುದ್ದಿ ಕೇಳಿ ಆಶ್ಚರ್ಯವಾಯಿತು. ಅವರು ನೇರವಾಗಿ ಅಲ್ಲಿಗೇ ಬಂದರು.

"ನೀವು ಇಲ್ಲಿ ಇಳಿದಿರುವಿರೆಂದು ಗೊತ್ತೇ ಇರಲಿಲ್ಲ. ನಾನು ಕೇಶವಯ್ಯನವರ ಮನೆ ಹುಡುಕಿಕೊಂಡು ಹೊರಟಿದ್ದೆ"

ಎಂದು ಮಧುಸೂದನನ ಮುಖ ಕಂಡ ಕೂಡಲೇ ಹೇಳಿದರು.

"ಕೇಶವಯ್ಯ ಈಗ ಊರಲ್ಲಿಲ್ಲ. ಆತ ವ್ಯಾಪಾರಕ್ಕಾಗಿ ನಾಲ್ಕಾರು ಕಡೆ ಓಡಾಡುತ್ತಿರಬೇಕಾಗುತ್ತದೆ."

"ನಮ್ಮಲ್ಲೇ ಇಳಿದಿದ್ದರಾಗುತ್ತಿತ್ತು. ನಮ್ಮ ಮನೆಯಿಲ್ಲವೆ? ಶರ್ಮರ ಮನೆಯಿಲ್ಲವೆ? ವಾಮನರಾಯರ ಮನೆಯಿಲ್ಲವೆ? ನಿಮ್ಮವರಾಗಿ ನಾವಿಷ್ಟು ಮಂದಿ ಇದ್ದೂ ನೀವು ಹೋಟೆಲಿನಲ್ಲಿರಬೇಕೆ?"

"ಹೋಟೆಲು ಎಂದರೆ ಇದೇನೂ ಹಾಗೆ ಹೋಟೆಲಿನಂತಿಲ್ಲ. ಸ್ವಲ್ಪ ಹೆಚ್ಚು ಕಡಮೆ ಮನೆ ಇದ್ದ ಹಾಗೆಯೇ ಇದೆ, ಅನ್ನಿ. ಮೈಸೂರಿನವರು ಇಲ್ಲಿ ಬಹಳ ಮಂದಿ ಬಂದು ಇಳಿದುಕೊಳ್ಳುತ್ತಾರೆ. ಇದರ ಮಾಲೀಕನೂ ಮೈಸೂರಿನವನೇ. ಶಿವರಾಮಯ್ಯ ಅಂತ."

"ಸರಿ. ಆದರೂ...."

ಎಂದು ಆಚಾರ್ಯರು ಮಾತನ್ನು ಅರ್ಧದಲ್ಲಿ ನುಂಗಿ ಅವನು ಹೋಟೆಲಿ

ನಲ್ಲಿರುವುದು ತಮಗೆ ಸಮ್ಮತಿಯಿಲ್ಲವೆನ್ನುವ ಭಾವವನ್ನು ಮುಗಿಯದ ವಾಕ್ಯದಿಂದ ಸೂಚಿಸಿದರು.

ಇಬ್ಬರೂ ಒಂದು ನಿಮಿಷ ಮೌನವಾಗಿದ್ದರು. ಅವರು ತನ್ನನ್ನು ಹುಡುಕಿಕೊಂಡು ಬಂದ ಉದ್ದೇಶ ತಿಳಿದುಕೊಳ್ಳಲು ಮಧುಸೂದನನಿಗೆ ಕುತೂಹಲವಿತ್ತು. ಆಚಾರ್ಯರು ಇನ್ನಾವುದಾದರೂ ಕಚೇರಿಗೆ ಪೀಠಿಕೆ ಹಾಕಲು ಬಂದಿರುವರೋ ಎಂದು ಅವನಿಗನ್ನಿಸಿತು.

" ನಿಮ್ಮನ್ನು ನೋಡಿ ತುಂಬ ದಿವಸವಾಯಿತು "

ಎಂದು ಅವನೇ ಮಾತಿಗೆ ಪ್ರಾರಂಭಿಸಿದ.

" ಹೌದು. ನಿಮ್ಮ ಕಚೇರಿಯಾದ ಮೇಲೆ ಮತ್ತೆ ಭೇಟಿ ಮಾಡಲು ಅವಕಾಶವೇ ಆಗಲಿಲ್ಲ. ಕೆಲಸದಲ್ಲಿ ಸ್ವಲ್ಪ ಬಿಡುವು ಮಾಡಿಕೊಂಡು ನಾನೂ ಬರೋಣವೆಂತಲೇ ಇದ್ದೆ "

ಎಂದು ಆಚಾರ್ಯರು ನುಡಿದು,

" ನಿಮಗೊಂದು ಕಾಗದ ಬಂದಿದೆ, ನೋಡಿ. ಆಳಿನ ಕೈಯಲ್ಲಿ ಕಳಿಸುವುದೇನೆಂದು ನಾನೇ ತೆಗೆದುಕೊಂಡು ಬಂದೆ. ಇದರ ನಿಮಿತ್ತದಿಂದಲಾದರೂ ಭೇಟಿಯಾಯಿತಲ್ಲ "

ಎಂದು ಮುಗುಳ್ನಗುತ್ತ ಜೇಬಿನಿಂದ ಒಂದು ಕವರನ್ನು ತೆಗೆದು ಅವನ ಕೈಯಲ್ಲಿತ್ತರು.

" ತುಂಬ ಸಂತೋಷ. ನಿಮಗೆ ತೊಂದರೆಯಾಯಿತು "

ಎನ್ನುತ್ತ ಮಧುಸೂದನ ಕವರನ್ನು ತೆಗೆದುಕೊಂಡು ತಿರುಗಿಸಿ ನೋಡಿದ. ಅದರ ಮೇಲಿದ್ದ ಬರವಣಿಗೆಯಿಂದ ಅದು ಸುಬ್ಬಕೃಷ್ಣನದೆಂದು ಅವನಿಗೆ ತಕ್ಷಣ ತಿಳಿಯಿತು. ಅವನು ಕಾಗದವನ್ನು ಒಡೆಯದೆ ಪಕ್ಕದಲ್ಲಿಟ್ಟು,

" ಏನಾದರೂ ಉಪಾಹಾರ ತರಿಸಲೆ ?"

" ಬೇಡ, ನಾನು ಊಟ ಮುಗಿಸಿಕೊಂಡೇ ಈ ಕಡೆಗೆ ಬಂದೆ."

" ಪಾನೀಯವನ್ನಾದರೂ ತೆಗೆದುಕೊಳ್ಳಿ "

ಎಂದು ಬೆಲ್ ಒತ್ತಿ, ಒಳಗೆ ಬಂದ ಮಾಣಿಗೆ ಎರಡು ಕಪ್ಪು ನಿಂಬೆ ಹಣ್ಣಿನ ಷರಬತ್ತು ತರಲು ಹೇಳಿದ. ಮಾಣಿ ತಂದಿತ್ತ ಷರಬತ್ತನ್ನು ಕುಡಿಯುತ್ತ ಆಚಾರ್ಯರು,

"ಮುಂಬಯಿಯಲ್ಲಿ ಇನ್ನೆಷ್ಟು ದಿನ ಬಿಡಾರ? ಬೇರೆ ಕಾರ್ಯಕ್ರಮಗಳೇನಾದರೂ ಉಂಟೇನು?"

"ಸದ್ಯಕ್ಕೆ ಯಾವುದೂ ಗೊತ್ತಾಗಿಲ್ಲ. ಉತ್ತರಭಾರತದ ಪ್ರವಾಸ ಮಾಡಬೇಕೆಂದು ಬಹು ದಿವಸದಿಂದ ಯೋಚನೆಯಿತ್ತು. ಆದರೆ ಇಲ್ಲಿಗೆ ಬಂದ ಮೇಲೆ ನಿರೀಕ್ಷೆ ಮೀರಿ ಹೆಚ್ಚು ದಿನ ನಿಲ್ಲಬೇಕಾಯಿತು, ಅಷ್ಟೆ."

"ಸಹಜವೇ. ನಿಮ್ಮಂಥ ಕಲಾವಿದರನ್ನು ಬೇಗ ಬಿಟ್ಟುಕೊಡಲು ಮುಂಬಯಿ ನಗರವೂ ಸಿದ್ಧವಾಗಿಲ್ಲ"

ಎಂದು ಸೌಜನ್ಯ ತುಂಬಿದ ಧ್ವನಿಯಲ್ಲಿ ನುಡಿದು ನಕ್ಕರು.

ಲೋಕಾಭಿರಾಮವಾದ ಮಾತಿನಲ್ಲಿ ಅರ್ಧ ಮುಕ್ಕಾಲು ಘಂಟೆ ಕಳೆಯಿತು. ಹೊತ್ತಾಯಿತೆಂದು ಆಚಾರ್ಯರು ಎದ್ದರು. ಮಧುಸೂದನ ಬಾಗಿಲವರೆಗೂ ಬಂದು ಅವರನ್ನು ಬೀಳ್ಕೊಡುತ್ತ,

"ರಾಯರಿಗೂ ಶರ್ಮರಿಗೂ ನನ್ನ ವಂದನೆ ತಿಳಿಸಿ. ಹೊರಡುವ ಮುನ್ನ ಸಾಧ್ಯವಾದರೆ ನಿಮ್ಮನ್ನೆಲ್ಲ ಮತ್ತೊಮ್ಮೆ ನೋಡುತ್ತೇನೆ"

ಎಂದು ಹೇಳಿ ತನ್ನ ರೂಮಿಗೆ ಹಿಂತಿರುಗಿದ. ಅವನ ಮನಸ್ಸೆಲ್ಲಾ ಸುಬ್ಬಕೃಷ್ಣ ಬರೆದಿದ್ದ ಕಾಗದದಲ್ಲಿತ್ತು. ರೂಮಿನ ಬಾಗಿಲನ್ನು ಮುಂದೆ ಮಾಡಿ ಮಂಚದ ಮೇಲೆ ಉರುಳಿಕೊಂಡು ಕವರನ್ನೊಡೆದು ಓದತೊಡಗಿದ.

"ಪ್ರಿಯ ಮಿತ್ರ,

ನೀನು ಇದ್ದಕ್ಕಿದ್ದ ಹಾಗೆ ಮೈಸೂರನ್ನು ಬಿಟ್ಟು ಹೊರಟುಹೋದುದು ನಮಗೆಲ್ಲ ತುಂಬ ವ್ಯಥೆಯನ್ನುಂಟುಮಾಡಿದೆ. ಹೋಗುವ ಮುನ್ನ ನನಗಾದರೂ ಒಂದು ಮಾತು ತಿಳಿಸಬಹುದಾಗಿತ್ತು; ಇಲ್ಲವೆ, ಒಂದು ಕಾಗದವನ್ನಾದರೂ ಬರೆಯಬಹುದಾಗಿತ್ತು. ಅದು ನಿನ್ನ ಮನಸ್ಸಿಗೆ ಬರಲಿಲ್ಲ. ನೀನು ಮುಂಬಯಿಯಲ್ಲಿರುವ ಸಂಗತಿಯನ್ನು ನಾವು ಪತ್ರಿಕೆಗಳಲ್ಲಿ ನೋಡಿ ತಿಳಿದುಕೊಳ್ಳಬೇಕಾಯಿತು.

ನಿನ್ನ ಮನಸ್ಸಿನ ಸ್ಥಿತಿ ಹೇಗೇ ಇದ್ದಿರಲಿ, ನೀನು ಊರನ್ನು ಬಿಟ್ಟು ಹೋದ ಸಂದರ್ಭ ನನ್ನ ಮನಸ್ಸಿಗೆ ಹಿತವೆನಿಸಲಿಲ್ಲ. ಮೊದಲೇ ನಿನ್ನ ಮೇಲೆ ಅಪಪ್ರಚಾರ ಮಾಡುತ್ತಿದ್ದ ಕುಹಕಿಗಳಿಗೆ ಇದರಿಂದ ಒಂದು ಅವಕಾಶ ಸಿಕ್ಕಿದಂತಾಗಿದೆ. ಅವರ ಕ್ಷುಲ್ಲಕವಾದ ಮಾತುಗಳನ್ನು ಕೇಳಿ ತಲೆ ತಗ್ಗಿಸಬೇಕಾಗಿ

ಬಂದಿದೆ. ಅವರು ಹರಡುತ್ತಿರುವ ಸುಳ್ಳು ಸುದ್ದಿಗಳಿಂದ ನಿನ್ನ ಕೀರ್ತಿಯ ಮೇಲಾಗುವ ದುಷ್ಪರಿಣಾಮಗಳನ್ನು ಯೋಚಿಸಬೇಕು. ನಿನ್ನ ಬಗೆಗೆ ವಿಶ್ವಾಸ ವುಳ್ಳವರಿಗೆಲ್ಲ ಈ ಪ್ರಸಂಗ ನೋವನ್ನುಂಟುಮಾಡಿದೆ.

ದಾಸರಿಗೂ ಯೋಚನೆಯೇ. ಅವರೂ ದಿನ ಬೆಳಗೆದ್ದರೆ ನಿನ್ನ ಸಮಾಚಾರ ಕೇಳುತ್ತಲೇ ಇರುತ್ತಾರೆ. ಅವರ ಮನಸ್ಸೂ ನೊಂದಿದೆ. ಚಿನ್ನಪ್ಪನ ಗಲಾಟೆ ಯಂತೂ ಹೇಳತೀರದು. ಮನೆ ಖಾಲಿ ಮಾಡಿಸಬೇಕೆಂದು ಅವನೂ ತಗಾದೆ ಮಾಡುತ್ತಿದ್ದಾನೆ. ಜನ ಮನೆಗೆ ಸಲ್ಲದ ಹೆಸರನ್ನಿಡುತ್ತಿದ್ದಾರೆ.

ಇಲ್ಲಿನ ಸಂದರ್ಭ ಹೀಗಿದೆ. ವಿಷಘಳಿಗೆಯಲ್ಲಿ ಏನೋ ಆಗಿಹೋಯಿತು. ಈಗ ಅದನ್ನು ಚಿಂತಿಸಿ ಫಲವಿಲ್ಲ. ಮುಂದೆ ಅದನ್ನು ಸರಿಪಡಿಸುವ ಯೋಚನೆ ಮಾಡುವುದು ಯುಕ್ತ. ನನ್ನ ಅಭಿಪ್ರಾಯದಲ್ಲಿ ಈ ಕಾಗದ ತಲಪಿದ ಕೂಡಲೆ ನೀನು ಹೊರಟು ಬರುವುದು ವಿಹಿತವೆಂದು ತೋರುತ್ತದೆ. ನಾನೇ ಮುಂಬಯಿಗೆ ಬರೋಣವೆಂದುಕೊಂಡಿದ್ದೆ. ಆದರೆ ನಿನಗೆ ತಿಳಿಸದೆ ಬರುವುದು ಸರಿಯಲ್ಲ ವೆಂದು ತೋರಿತು. ನಾನು ಬರುವ ಅಗತ್ಯವಿಲ್ಲದೆ ನೀನೇ ಹೊರಟು ಬಂದರೆ ತುಂಬ ಸಂತೋಷ.

ನಿನ್ನ ಪ್ರತ್ಯುತ್ತರವನ್ನು, ಅಂತೆಯೇ ಆಗಮನವನ್ನು ನಿರೀಕ್ಷಿಸುತ್ತಿರುವ

ನಿನ್ನ ಮಿತ್ರ

—ಸುಬ್ಬಕೃಷ್ಣ ”

ಕಾಗದವನ್ನು ಓದಿ ಮಧುಸೂದನನ ಮನಸ್ಸು ತಳಮಳಗೊಂಡಿತು.

ಸುಬ್ಬಕೃಷ್ಣ ಬರೆದಿದ್ದುದರಲ್ಲಿ ಯಾವುದನ್ನೂ ತಪ್ಪೆಂದು ಬೆರಳಿಟ್ಟು ತೋರಿಸುವ ಹಾಗಿರಲಿಲ್ಲ. ಹವಣು ಮೀರಿದ ಒಂದು ಮಾತನ್ನಾದರೂ ಅವನು ಬರೆದಿರಲಿಲ್ಲ. ಆದರೆ ತಿಳಿಸಬೇಕಾದ ಸಂಗತಿಯನ್ನು ಮುಚ್ಚು ಮರೆಯಿಲ್ಲದಂತೆ ತಿಳಿಸಿದ್ದ. ಅದರಲ್ಲಿ ನಿಷ್ಠುರವಿರಲಿಲ್ಲ, ನಯವಿತ್ತು; ಆಗ್ರಹವಿರಲಿಲ್ಲ, ಔದಾರ್ಯವಿತ್ತು; ತನ್ನ ಹಿತವನ್ನು ಚಿಂತಿಸುವ ಸದ್ಭಾವನೆಯಿತ್ತು. ಕಾಠಿಣ್ಯದ ಸೆಲೆ ಲವಲೇಶವೂ ಇಲ್ಲದ ಆ ಮಾರ್ದವ ಸಬಳಿಗಿಂತಲೂ ಕೂರಾಗಿ ಮಧು ಸೂದನನ ಎದೆಗೆ ನಾಟಿತು.

ಹೌದು, ಕಾಗದ ಬರೆದಿದ್ದುದರಲ್ಲಿ ಸುಬ್ಬಕೃಷ್ಣನ ತಪ್ಪೇನೂ ಇರಲಿಲ್ಲ. ತಪ್ಪೆಲ್ಲ ತನ್ನದೇ ಆಗಿತ್ತು.

ಕವಿದು ಬಂದ ದುಃಖವನ್ನೆದುರಿಸಲಾರದೆ ತಾನೇ ಹೇಡಿಯಂತೆ ಊರು ಬಿಟ್ಟು ಓಡಿ ಬಂದಿದ್ದ. ಯಾವ ಸುಖ ಶಾಂತಿಗಳಿಂದ ತಾನು ವಂಚಿತನಾಗಿದ್ದನೋ ಅವನ್ನು ಬೇರೆ ಕಡೆ ಅರಸಿ ಆ ವಿಸ್ಮೃತಿಯಲ್ಲಿ ಎಲ್ಲವನ್ನೂ ಮುಳುಗಿಸಿಬಿಡಬಹುದೆಂದುಕೊಂಡಿದ್ದ. ಆದರೆ ಆ ವಿಸ್ಮೃತಿ ಅವನ ಭಾಗಕ್ಕೆ ಶಾಶ್ವತವಾಗಿರದೆ ಕ್ಷಣಿಕವಾಗಿತ್ತು. ಭೋಗ ಅವನ ಮನಸ್ಸಿನ ನೋವನ್ನು ಆರಿಸದೆ ಅದನ್ನು ಪ್ರಜ್ವಲಗೊಳಿಸುತ್ತಿತ್ತು. ಬೆಂಕಿಯನ್ನು ಬೆಂಕಿಯಿಂದಲೇ ಆರಿಸುವ ಹುಚ್ಚು ಕೆಲಸಕ್ಕೆ ಅವನು ಕೈಹಾಕಿದ್ದ. ಅದರ ಕಿಚ್ಚು ಅವನನ್ನೇ ಆವರಿಸಿ ದಹಿಸುತ್ತಿತ್ತು.

ಯಾವುದರಿಂದ ತನ್ನನ್ನು, ತನ್ನ ಕ್ಲೇಶಗಳನ್ನು ಮರೆಯುವುದು ಸುಲಭವೆಂದು ಭಾವಿಸಿದ್ದನೋ ಅದೇ ಅವನ ನೋವನ್ನು ಮರುಕೊಳಿಸುತ್ತಿತ್ತು. ಅವನು ಕೂಡಿದ್ದ ಹೆಣ್ಣುಗಳಲ್ಲಿ ಒಬ್ಬಳಾದರೂ ಅವನ ಮನಸ್ಸಿಗೆ ಬೇಕಾದ ಶಾಂತಿ ಸಮಾಧಾನಗಳನ್ನು ನೀಡಿರಲಿಲ್ಲ. ಎಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಅವನ ಅಶಾಂತಿಯನ್ನು ಕೆರಳಿಸಿದ್ದರು; ಅವನ ಚಿತ್ತದ ಸಮತೆಯನ್ನು ಕದಡಿದ್ದರು. ಅವರ ನೆನಪಾಗಿ ಅವನ ಮನಸ್ಸಿನಲ್ಲಿ ಮಿಶ್ರಭಾವನೆಗಳ ತರಂಗವೆದ್ದಿತು.

ಆ ವಂಚಕಿ, ರೋಷನ್—

ಅವಳ ಸ್ಮರಣೆಯಿಂದ ಮಧುಸೂದನನ ಚೇತನ ಕ್ಷಣಕಾಲ ಸ್ತಬ್ಧವಾಯಿತು. ಅವಳೊಡನೆ ಪಟ್ಟ ನಾಲ್ಕು ದಿನದ ಸುಖವನ್ನು ಅವನು ಮರೆಯುವ ಹಾಗಿರಲಿಲ್ಲ. ಅದರಲ್ಲಿ ಅವನಿಗೆ ಏನೋ ಒಂದು ಉಲ್ಲಾಸ ಕಂಡುಬಂದಿತ್ತು; ಅವನ ಜೀವನದ ಕಹಿಯನ್ನು ಅದು ಸ್ವಲ್ಪಮಟ್ಟಿಗೆ ಮರೆಸಿತ್ತು. ಅವಳನ್ನು ಕೂಡಿದಾಗ ಸುಖವೇ ಅವನಿಗೆ ಮುಖ್ಯವಾಗಿತ್ತು, ನಿಜ. ಅವಳ ಬಾಳಿನ ರಹಸ್ಯ ಬೆದಕುವ ಗೊಡವೆ ತನಗೇಕೆಂದುಕೊಂಡು ಸುಮ್ಮನಿದ್ದ. ಅವಳೊಡನೆ ಸುಖ ಪಡುವ ಗುತ್ತಿಗೆ ತನ್ನೊಬ್ಬನದೇ ಆಗಿರಬೇಕೆಂಬ ಹಟವೂ ಅವನಿಗಿರಲಿಲ್ಲ. ಆ ನಿಶ್ಚಯು ಅವನ ಮನಸ್ಸಿಗೆ ಒಂದು ಸಮಾಧಾನವನ್ನು ನೀಡಿತ್ತು. ಅದರ ಫಲವಾಗಿ ಸುಖ ಮಿಗಿಲಾಗಿಯೇ ಕಂಡಿತ್ತು.

ಆದರೆ ನಾಲ್ಕು ದಿನ ಅವಳು ತನ್ನೊಡನೆ ನಕ್ಕು ನಲಿದು ಸುಖಿಸಿದ ಮೇಲೆ ಅವಳ ಅನುರಾಗಕ್ಕೆ ತಾನೊಬ್ಬನೇ ಬಾಧ್ಯನೆಂಬ ಭಾವನೆ ಅವನಲ್ಲಿ ಬೇರೂರತೊಡಗಿತು. ಆ ಆವರಣ ಇತರರು ಕಾಲಿಡುವುದಕ್ಕೆ ನಿಷಿದ್ಧವೆನ್ನುವ

ಪ್ರವೃತ್ತಿಯನ್ನು ಅವನ ಬುದ್ಧಿ ಅವನಿಗರಿವಿಲ್ಲದೆಯೆ ಬೆಳಸಿಕೊಂಡಿತು. ಅವನ ಕಲ್ಪನೆ ಯಾವುದೋ ಆಶಾಸೌಧವನ್ನು ಕಟ್ಟತೊಡಗಿತು.

ಯಾವ ಸುಖಕ್ಕೆ ಚ್ಯುತಿಯಿಲ್ಲವೆಂದು ಅವನು ತಿಳಿದಿದ್ದನೋ ಅದಕ್ಕೇ ಪೆಟ್ಟು ಬಿದ್ದಾಗ ಅವನ ಚಿತ್ತದ ಸಮತೆ ತಪ್ಪಿತು. ಆ ಸ್ಥಿತಿಯನ್ನು ಅವನು ಸಹಿಸದಾದ. ತನ್ನ ಆಲಿಂಗನದಲ್ಲಿದ್ದಂತೆಯೇ ಮತ್ತೊಂದು ಶಯ್ಯೆಗೆ ಮೈ ಹೊರಳಿಸಿದ ಅವಳ ವಂಚನೆಯನ್ನರಿತು ಅವನ ಮನಸ್ಸು ರೋಸಿತು, ಹೇಸಿತು. ಅವಳ ಆಳವನ್ನರಿಯದೆ ಅವಳು ಹೊತ್ತಿಸಿದ ಮೋಹದ ಬೆಂಕಿಗೆ ಸಿಕ್ಕಿ ಅವನು ಪತಂಗದಂತೆ ರೆಕ್ಕೆ ಸುಟ್ಟುಕೊಂಡಿದ್ದ. ಎಂಥ ಹುಚ್ಚುತನ, ಎಂಥ ಅವಿವೇಕ.

ಮಧುಸೂದನನ ಮನಸ್ಸು ಆ ಅನುಭವದಲ್ಲಿ ತತ್ತರಿಸಿತು.

ಅದರ ಹಿಂದೆಯೇ ಇನ್ನೊಂದು ನೆನಪು; ಸುಮಳ ನೆನಪು.

ಆ ಮುಗ್ಧೆ, ಸುಮಾ—

ಆಹತವಾಗಿದ್ದ ಮಧುಸೂದನನ ಮನಸ್ಸು ಅವಳ ನೆನಪಿನಲ್ಲಿ ಕ್ಷಣಕಾಲ ಪ್ರಸನ್ನವಾಯಿತು. ಅವಳಲ್ಲಿ ಕಂಡ ಅಪೂರ್ವ ಸುಖದ ಸ್ಮರಣೆಯಿಂದ ಅವನ ಮೈ ರೋಮಾಂಚನಗೊಂಡಿತು. ಅಂಥ ಸನ್ನಿವೇಶ ಬರುವುದೆಂದು ಅವನು ಕನಸಿನಲ್ಲಿಯೂ ನಿರೀಕ್ಷಿಸಿರಲಿಲ್ಲ. ಅದು ಹಠಾತ್ತಾಗಿ ಒದಗಿ ಬಂದಾಗ ಅವನ ಮನಸ್ಸಿನ ಕಟ್ಟು ಬಿಚ್ಚಿತು; ವಾಂಛೆ ಉಕ್ಕಿ ಹರಿಯಿತು. ಜೀವ ತಳೆದ ಬಂಗಾರದ ಪುತ್ತಳಿಯಂತೆ ತನ್ನ ಹೊಸಿಲವರೆಗೂ ನಡೆದು ಬಂದ ಆ ಸೊಬಗಿಯನ್ನು ಅವನು ಆತುರದಿಂದ ಅಪ್ಪಿಕೊಂಡಿದ್ದ. ಅವಳ ಲಜ್ಜೆ, ಅವಳ ಭಯ ಅವನ ಮೋಹಾಗ್ನಿಗೆ ಧೂಪ ಹಾಕಿದ್ದವು.

ಅದೆಂಥ ಸುಂದರ ರಾತ್ರಿ.

ಅವಳೊಡನೆ ಪಟ್ಟ ಎರಡು ದಿನದ ಸುಖಕ್ಕೆ ಪ್ರಪಂಚದ ಯಾವ ಭೋಗವೂ ಸಾಟಿಯಾಗುವ ಹಾಗಿರಲಿಲ್ಲ.

ಆದರೆ ಸನ್ನಿವೇಶ ಆ ಸುಖದ ಬೆಳವಣಿಗೆಗೆ ಪ್ರತಿಕೂಲವಾಗಿತ್ತು. ಅವಳನ್ನು ಇನ್ನೊಮ್ಮೆ ಕೂಡಲಾಗದೆ ಅವನು ವಿಹ್ವಲನಾಗಿದ್ದ.

ಮಧುಸೂದನನ ಮನಸ್ಸು ವೇದನೆಯಲ್ಲಿ ತಳಮಳಗೊಂಡಿತು.

ಅದಕ್ಕೆ ಕೊಂಡಿ ಬಿದ್ದ ಹಾಗೆ ಮತ್ತೊಂದು ನೆನಪು; ಕುಮುದಳ ನೆನಪು.

ಆ ಚದುರೆ, ಕುಮುದಾ—

ಅವಳು ಲೋಕ ಕಂಡ ಹೆಣ್ಣು. ಕಾಲೇಜಿನ ವಿದ್ಯಾಭ್ಯಾಸದಿಂದ ನಾಗರಿಕತೆಯ ನವನೀತವಾಗಿದ್ದ ಅವಳಲ್ಲಿ ರೂಪಕ್ಕಿಂತ ಮಿಗಿಲಾದ ಬೆಡಗಿತ್ತು, ಬಿನ್ನಾಣವಿತ್ತು. ಬುಗರಿಯಂತೆ ಗಂಡನನ್ನು ಆಡಿಸುತ್ತಿದ್ದ ಅವಳ ಕೈಯಲ್ಲಿ 'ವಿಜಯ ವಿಲಾಸ'ದ ಎಲ್ಲ ಸೂತ್ರವೂ ಇತ್ತು. ಜನದ ಕಣ್ಣಿಗೆ ಅಷ್ಟಾಗಿ ಬೀಳದೆ ಅಭುಕ್ತ ಮೂಲೆಯಲ್ಲಿದೆಯೆನ್ನುವ ಕಾರಣದಿಂದಲೇ ಅವನು 'ವಿಜಯ ವಿಲಾಸ'ವನ್ನು ಆರಿಸಿಕೊಂಡು ಅಲ್ಲಿಗೆ ಬಂದಿಳಿದಿದ್ದ. ಅಲ್ಲಿ ಅವಳ ಸಂಗವಾದೀತೆನ್ನುವ ನಿರೀಕ್ಷೆ ಲವಲೇಶವೂ ಇರಲಿಲ್ಲ.

ಅದರೆ ಬಂದ ರಾತ್ರಿಯೇ ಅದು ಸಮನಿಸಿತ್ತು.

ಅವಳು ನೀಡಿದ ಆದರಾತಿಥ್ಯದಲ್ಲಿ ಅವಳ ಬಯಕೆ ಎದ್ದು ಕಾಣುತ್ತಿತ್ತು. ಅವಳು ಕೈಯಲ್ಲಿ ವೀಳ್ಯದ ತಟ್ಟೆ ಹಿಡಿದು ಬಂದಾಗ ಅವನಿಗೆ ಸಂದೇಹ ಉಳಿಯಲಿಲ್ಲ. ಆಪ್ತವಾದ ಸನ್ನಿವೇಶದಲ್ಲಿ ಅವಳು ನಡೆದುಕೊಂಡ ರೀತಿ ಅವನ ಭೋಗಾತುರವನ್ನು ಕೆರಳಿಸಿತು. ಉನ್ಮತ್ತನಂತೆ ಅವಳನ್ನೆತ್ತಿಕೊಂಡು ಹೋಗಿ ತನ್ನ ಬಯಕೆ ತೀರಿಸಿಕೊಂಡುಬಿಟ್ಟಿದ್ದ. ಅವಳ ಆಸೆಗೆ ಪಾರವೇ ಇರಲಿಲ್ಲ. ಭೋಗದಲ್ಲಿ ಮುಳುಗಿದಷ್ಟೂ ಅವಳ ದಾಹ ಹೆಚ್ಚುತ್ತಿತ್ತು. ಮದ್ಯದ ಉರುಬಿನಲ್ಲಿ ಅವಳು ರಕ್ಕಸಿಯಾಗುತ್ತಿದ್ದಳು. ಅದರ ಸೋಂಕು ಅವನಿಗೂ ತಾಕುತ್ತಿತ್ತು. ಅವರ ಭೋಗಸ್ಪರ್ಧೆಗೆ ಕೊನೆ ಮೊದಲಿರಲಿಲ್ಲ.

ಕುಮುದಾ ತನಗೆ ಬೇಕಾದ ಸುಖವನ್ನು ನಿರ್ಲಜ್ಜೆಯಿಂದ ಪಡೆಯುತ್ತಿದ್ದಳು. ಅವನ ಎದೆಯಲ್ಲಿ ಹೊತ್ತಿದ್ದ ಬೆಂಕಿಗೆ ಆಜ್ಯ ಹೊಯ್ಯುತ್ತಿದ್ದಳು.

ಅವನ ಮನಸ್ಸಿಗೆ ಬೇಕಾದ ನೆಮ್ಮದಿ ಯಾವುದರಿಂದಲೂ ಲಭಿಸಿರಲಿಲ್ಲ. ಅದು ಅವನ ಭಾಗಕ್ಕೆ ಮೊಲದ ಕೊಂಬಾಗಿತ್ತು. ಅದನ್ನು ಸಾಧಿಸುವುದರಲ್ಲಿ ಅವನು ವಿಫಲನಾಗಿದ್ದ.

ಸುಬ್ಬಕೃಷ್ಣನ ಕಾಗದ ಮಧುಸೂದನನ ಮನಸ್ಸಿನಲ್ಲಿ ಆತ್ಮಾನುಕಂಪದ ಕಿಡಿ ಹೊತ್ತಿಸಿತು.

ಜೀವನದಲ್ಲಿ ಯಾವ ಸಾರ್ಥಕತೆಯಿತ್ತು? ಏನು ಪ್ರಯೋಜನವಿತ್ತು? ಯಾವ ಗುರಿಗಾಗಿ ಅವನು ತನ್ನ ಜೀವಿತವನ್ನು ಮೀಸಲು ಮಾಡಬೇಕಾಗಿತ್ತು? ಧ್ಯೇಯವಿಲ್ಲದ ಬಂಜೆ ಬಾಳನ್ನು ಬಾಳುವುದಕ್ಕೆ ಇಷ್ಟೆಲ್ಲ ಶ್ರಮಪಡಬೇಕಾಗಿತ್ತೆ? ಅದರಿಂದ ಯಾರಿಗೆ ಪ್ರೀತಿ?

ಸಂಗೀತಕ್ಕೆ ತನ್ನಿಂದ ಏನೋ ಬಹು ದೊಡ್ಡ ಸೇವೆ ಸಲ್ಲುವುದೆನ್ನುವ ನಂಬಿಕೆ ಅವನಿಗಿತ್ತು. ಆದರೆ ಬಾಳಿನಲ್ಲಿ ಕವಿದು ಬಂದ ದುಃಖಗಳಿಂದ ಆ ನಂಬಿಕೆಯು ಕಣ್ಣೀ ಕುರುಡಾಯಿತು. ಕತ್ತಲು ಬಾಯ್ತೆರೆದು ಅವನನ್ನು ನುಂಗಿತು. ಹತಾಶೆಯ ಕಾಳಜಲದಲ್ಲಿ ಅವನ ಬಯಕೆಗಳೆಲ್ಲ ಕೊಚ್ಚಿಹೋದವು.

ಇನ್ನು ಮೈಸೂರಿಗೆ ಹಿಂತಿರುಗಿ ಸಾಧಿಸುವುದಾದರೂ ಏನು? ಸೂತ್ರ ಹರಿದ ತನ್ನ ಜೀವನವನ್ನು ಯಾವುದಕ್ಕೆ ಕಟ್ಟಬೇಕು? ತಾನಾಗಿ ಕಡೆಗಣಿಸಿ ಬಂದ ಆಪ್ತರನ್ನು ಮತ್ತೆ ಕೂಡಿ ಆಗತಕ್ಕದ್ದೇನು?

ದುಃಖವಿಹ್ವಲವಾದ ಮಧುಸೂದನನ ಮನಸ್ಸನ್ನು ಯಾವುದೋ ಅಜ್ಞಾತ ಶಕ್ತಿ ಕಠಿನ ನಿರ್ಧಾರವೊಂದರ ಕಡೆಗೆ ತುಯ್ಯುತ್ತಿತ್ತು. ಅದನ್ನು ತಡೆಯುವ ಚೈತನ್ಯ ಅವನಿಗಿರಲಿಲ್ಲ.

ಯೋಚನೆಯಲ್ಲಿ ಮುಳುಗಿ ಮೈಮರೆತಿದ್ದವನಿಗೆ ರೂಮಿನ ಬಾಗಿಲನ್ನು ಮೆಲ್ಲನೆ ತೆರೆದುಕೊಂಡು ಕುಮುದಾ ಒಳಗೆ ಬಂದದ್ದು ಗೋಚರವಾಗಲಿಲ್ಲ.

"ಏನೋ ಯೋಚಿಸುತ್ತಿರುವ ಹಾಗಿದೆಯಲ್ಲಾ"

ಎಂದು ಮಂಚದ ಹತ್ತಿರ ಬಂದು ನಿಂತು ನಗುಮೊಗದಿಂದ ಕೇಳಿದಳು. ಮಧುಸೂದನ ಉತ್ತರ ಕೊಡಲಿಲ್ಲ. ಶೂನ್ಯ ದೃಷ್ಟಿಯಿಂದ ಅವಳ ಮುಖವನ್ನೇ ನೋಡಿದ.

"ಏತಕ್ಕೆ ಹೀಗೆ ಮಲಗಿದ್ದೀರಿ? ಮೈ ಸ್ವಸ್ಥವಾಗಿಲ್ಲವೆ?"

ಎಂದು ಮಂಚದ ಮೇಲೆ ಕುಳಿತುಕೊಂಡು ಅವನ ಮುಖವನ್ನು ನೇವರಿಸುತ್ತ ನುಡಿದಳು. ಅವಳ ಧ್ವನಿಯಲ್ಲಿ ಅನುನಯ ತುಂಬಿತ್ತು, ಸ್ಪರ್ಶದಲ್ಲಿ ಕೋಮಲತೆಯಿತ್ತು. ಆಪ್ತವಾದ ಆ ಸ್ಪರ್ಶದಲ್ಲಿ ಮಧುಸೂದನ ವಿವಶನಾದ.

"ಕುಮುದಾ, ಕುಮುದಾ"

ಎನ್ನುತ್ತ ಉದ್ವೇಗದಿಂದ ಅವಳನ್ನು ಬಿಗಿದಪ್ಪಿದ.

"ಏತಕ್ಕೆ ಹೀಗಾಡುತ್ತೀರಿ? ನನ್ನ ದೊರೆಗೆ ಏನಾಗಿದೆ?"

ಎಂದು ಕೇಳುತ್ತ ಕುಮುದಾ ಅವನ ಕೆನ್ನೆಗೆ ಕೆನ್ನೆ ಜೋಡಿಸಿದಳು.

"ಇವತ್ತು ನನಗೆ ತುಂಬ ಬೇಸರವಾಗಿದೆ, ಕುಮುದಾ."

"ಬೇಸರವೇಕೆ? ಅಂತಹುದೇನಾಯಿತು?"

"ಏನೆಂದು ಕೇಳಬೇಡ. ನನ್ನ ಮನಸ್ಸಿಗೆ ನೆಮ್ಮದಿ ಇಲ್ಲವಾಗಿದೆ."

" ನಿಮ್ಮದಿ ನೀಡಲು ನಾನಿರುವಾಗಲೂ ಬೇಸರವೇ ?"

" ಇವತ್ತು ನನ್ನನ್ನು ಬಿಟ್ಟು ಹೋಗಬೇಡ."

" ಹೋಗುವುದಿಲ್ಲ. ನಿಮ್ಮ ಹತ್ತಿರವೇ ಇರುತ್ತೇನೆ"

ಎಂದಳು. ಇಬ್ಬರೂ ಕ್ಷಣಹೊತ್ತು ಮೌನವಾಗಿದ್ದರು. ಕುಮುದಾ ಅವನ ಮುಖಕ್ಕೆ ಮುಖವಿಟ್ಟು,

" ಪಾನೀಯ ತರಿಸಲೆ ? ನಿರುತ್ಸಾಹಕ್ಕೆ ಅದು ಒಳ್ಳೆಯ ಔಷಧಿ."

" ತರಿಸು ; ಏನು ಬೇಕಾದರೂ ತರಿಸು. ಆದರೆ ನೀನು ಮಾತ್ರ ಹೋಗಬೇಡ"

ಎಂದು ಆರ್ತನಾಗಿ ನುಡಿದು ಆವೇಶದಲ್ಲಿ ಅವಳನ್ನು ಹತ್ತಿರ ಸೆಳೆದುಕೊಂಡ. ಅವನ ಉದ್ವೇಗವನ್ನು ಕಂಡು ಕುಮುದಾ ನಗುತ್ತ,

" ಇವತ್ತು ನನ್ನನ್ನು ನೀವು ಜೀವಸಹಿತ ಉಳಿಸುವ ಹಾಗೆ ಕಾಣಲಿಲ್ಲ"

ಎಂದು ಅವನ ತೆಕ್ಕೆಯಲ್ಲಡಗಿದಳು.

ಕಾಲು ಘಂಟೆಯ ಹೊತ್ತು ನಿಶ್ಶಬ್ದವಾಗಿ ಕಳೆಯಿತು.

ಕುಮುದಾ ಮಂಚದಿಂದ ಎದ್ದು ಕುಳಿತಳು. ಮಧುಸೂದನ ಮಲಗಿದ್ದವನು ಮಲಗಿದ್ದ ಹಾಗೆಯೇ ಇದ್ದ. ಅವನ ತೋಳು ಅವಳ ತೊಡೆಯನ್ನಾಶ್ರಯಿಸಿತ್ತು.

" ಎಲ್ಲಿಗಾದರೂ ಹೋಗೋಣವೇ, ಕುಮುದಾ ?"

" ಎಲ್ಲಿಗೆ ಹೋಗೋಣ, ಹೇಳಿ ?"

" ಎಲ್ಲಾದರೂ ಹೋಗೋಣ. ನಾಲ್ಕು ದಿನ ಈ ಊರು ಬಿಟ್ಟು ಹೋಗೋಣ, ನನ್ನ ಜೊತೆಗೆ ಬರಲೊಪ್ಪುವೆಯಾ ?"

" ನಿಮ್ಮ ಜೊತೆಗೆ ಬರುವುದಕ್ಕೆ ಪುಣ್ಯ ಮಾಡಿರಬೇಕು. ನಾನು ಇಲ್ಲವೆನ್ನುವೆನೆ ?"

" ಎಲ್ಲಿಗೆ ಹೋಗೋಣ, ಹೇಳು ?"

" ನೀವೇ ಹೇಳಿ. ನೀವೆಲ್ಲಿಗೆ ಬಾ ಎಂದರೂ ನಾನು ಬರಲು ಸಿದ್ಧ."

" ನಿಮ್ಮ ಯಜಮಾನರು ಒಪ್ಪುವರೆ ?"

" ಅವರನ್ನೊಪ್ಪಿಸುವ ಭಾರ ನನ್ನದು."

" ಆಗ್ರಾಕ್ಕೆ ಹೋಗೋಣವೆ ?"

"ಹೋಗೋಣ. ನನಗೂ ತಾಜಮಹಲನ್ನು ನೋಡಬೇಕೆಂದು ಆಸೆಯಿದೆ."

"ಆಗ್ರಾ, ದೆಹಲಿ, ಕಲ್ಕತ್ತ ?"

"ನೀವು ಕರೆದ ಕಡೆ ಬರುವೆನೆಂದೆನಲ್ಲಾ."

"ಹಾಗಾದರೆ ನಾಳೆಯೇ ಹೊರಡೋಣವೆ ?"

"ಈಗಲೇ ಗಂಟು ಮೂಟೆ ಕಟ್ಟಿಂದರೂ ಸಿದ್ಧ"

ಎಂದು ನಕ್ಕು ನುಡಿದಳು. ಮಧುಸೂದನನ ಮನಸ್ಸು ಕೃತಜ್ಞತೆಯಿಂದ ತುಂಬಿತು. ಅವಳ ಹಸ್ತವನ್ನು ಹಿಡಿದು ಮೃದುವಾಗಿ ಅಮುಕಿದ. ಲಜ್ಜೆಗೆಟ್ಟ ಭೋಗಾಸಕ್ತ ಹೆಣ್ಣು ಸೌಜನ್ಯದ ಖನಿಯಾಗಿದ್ದಳು. ಅವಳ ವರ್ತನೆ ಮಧುಸೂದನನನ್ನು ಅರೆಮೂಕನನ್ನಾಗಿಸಿತು.

೨೦

ರೋಷನ್ ಇಷ್ಟು ಬೇಗ ಹಿಂತಿರುಗುವಳೆನ್ನುವ ನಿರೀಕ್ಷೆ ಅನ್ವರ್‌ಬಾಯಿಗಿರಲಿಲ್ಲ. ಇದ್ದಕ್ಕಿದ್ದ ಹಾಗೆ ಅವಳೊಬ್ಬಳೇ ಬಂದಿಳಿದುದನ್ನು ನೋಡಿ ಆಶ್ಚರ್ಯವಾಯಿತು. ಅವಳ ಕಂಗೆಟ್ಟ ಮುಖ ನೋಡಿ ಏನೋ ಪ್ರಮಾದ ನಡೆದಿರಬಹುದೆಂದು ಊಹಿಸಿದಳು. ದುಮುಗುಟ್ಟುತ್ತ ತನ್ನ ರೂಮಿಗೆ ಹೋದ ರೋಷನ್ನಳನ್ನು ಅನ್ವರ್‌ಬಾಯಿ ಕೂಗಿ ಕರೆದು ಹತ್ತಿರ ಕುಳ್ಳಿರಿಸಿಕೊಂಡಳು.

"ಏನು ಸಮಾಚಾರ ರೋಷನ್, ಏನಾಯಿತು ?"

ರೋಷನ್ ಮಾತಾಡಲಿಲ್ಲ. ತಾಯಿಯ ಮುಖವನ್ನು ದುರದುರನೆ ನೋಡಿದಳು.

"ಏನಾಯಿತು ಹೇಳು, ಏಕೆ ಹೀಗೆ ಒಬ್ಬಳೇ ಬಂದೆ ?"

ರೋಷನ್ ನಡೆದ ಸಂಗತಿಯನ್ನು ವಿಸ್ತಾರವಾಗಿ ನಿರೂಪಿಸಿದಳು. ಅದನ್ನು ಕೇಳಿ ಅನ್ವರ್‌ಬಾಯಿಯ ಎದೆಗೆ ಗುಂಡು ಹಾಕಿದ ಹಾಗಾಯಿತು; ಅವಳ ಮುಖ ಕಪ್ಪಿಟ್ಟಿತು.

"ಏನು ಕೆಲಸ ಮಾಡಿಬಿಟ್ಟೆ, ರೋಷನ್"

ಎಂದು ಅಸಹಾಯಕಳಾಗಿ ಕೈ ಕೈ ಹಿಸುಕಿಕೊಂಡಳು. ಸೇಟು ಸತ್ತಿದ್ದರೇನು ಗತಿ ಎನ್ನುವ ಚಿಂತೆ ಅವಳನ್ನಾವರಿಸಿತು. ಮಾತಾಡದೆ ಸುಮ್ಮನೆ ಕುಳಿತಿದ್ದ ಮಗಳನ್ನು ನೋಡಿ,

"ನೀನು ದುಡುಕಬಾರದಾಗಿತ್ತು, ರೋಷನ್."

"ಅವನು ಮಾಡಿದ್ದು ಮಾಡಲೆಂದು ಸುಮ್ಮನಿರಬೇಕಾಗಿತ್ತೆ ?"

"ಅಷ್ಟಕ್ಕೆ ಆಸ್ಪದ ಕೊಡಬಾರದಾಗಿತ್ತು."

"ನಾನಾಗಿ ಕೊಟ್ಟೆನೆ ?"

"ನೀನಾಗಿ ಕೊಟ್ಟೆಯೋ, ಅವನಾಗಿ ತೆಗೆದುಕೊಂಡನೋ ಅದು ಗೊತ್ತಾಗುವುದು ಹೇಗೆ? ಈಗ ಅವನು ಸತ್ತಿದ್ದರೇನು ಮಾಡುವುದು?"

"ಕೆಟ್ಟ ಜಂತು ಹೋಯಿತೆಂದು ನೆಮ್ಮದಿಯಿಂದಿರುವುದು."

"ನಮ್ಮನ್ನು ಸುಮ್ಮನೆ ಬಿಡುತ್ತಾರೆಯೆ? ನೀನು ಅಲ್ಲಿಂದ ಓಡಿ ಬಂದಿರುವುದು ಯಾರಿಗೂ ಗೊತ್ತಾಗುವುದಿಲ್ಲವೆ? ಡ್ರೈವರ್ ಹೇಳದೆ ಇರುವನೆ?"

"ಅವನಿಗೆ ಇನಾಂ ಕೊಡುತ್ತೇನೆಂದು ಹೇಳಿದ್ದೇನೆ."

"ನಿನ್ನ ಇನಾಂ ಆಸೆಗೆ ಅವನು ಸುಮ್ಮನಿರಲು ಸಾಧ್ಯವೆ? ಪೋಲೀಸಿನವರು ಬಾಯಿ ಬಿಡಿಸಿಬಿಡುತ್ತಾರೆ."

"ಆದದ್ದಾಗಲಿ ನೋಡೋಣ"

ಎಂದು ರೋಷನ್ ನಿರ್ಲಕ್ಷ್ಯದಿಂದ ನುಡಿದು ತನ್ನ ರೂಮಿಗೆ ಎದ್ದು ಹೋದಳು.

ಅನ್ವರ್‌ಬಾಯಿಯ ಮನಸ್ಸು ಚಿಂತೆಗೊಳಗಾಯಿತು. ಅವಳ ಜೀವಮಾನದಲ್ಲಿ ಇಂಥ ಸಂಕಟಸ್ಥಿತಿ ಯಾವಾಗಲೂ ಬಂದಿರಲಿಲ್ಲ. ಸೇಟು ಸತ್ತಿದ್ದರೆ ಅದರ ಪರಿಣಾಮ ನೆಟ್ಟಗಾಗುತ್ತಿರಲಿಲ್ಲ. ಅದರ ಹೊಣೆ ರೋಷನ್ ತಲೆಗೆ ತಪ್ಪದೆ ಕಟ್ಟುತ್ತಿತ್ತು. ಅವನು ಬದುಕಿದ್ದರೆ ಸೇಡು ತೀರಿಸಿಕೊಳ್ಳದೆ ಬಿಡುತ್ತಿರಲಿಲ್ಲ. ಅವನು ಹಾವಿನಂಥ ಮನುಷ್ಯ. ಅವನೊಡನೆ ವೈರ ಕಟ್ಟಿಕೊಳ್ಳಲು ಅನ್ವರ್‌ಬಾಯಿ ಮೊದಲಿನಿಂದಲೂ ಹೆದರುತ್ತಿದ್ದಳು. ಅಲ್ಲದೆ ಸಾವಿರವಾಗಿ ಹಣ ಸುರಿದು ಸಮಯದಲ್ಲಿ ಆಗುತ್ತಿದ್ದ ಸೇಟನೊಡನೆ ಹಗೆತನ ಕಟ್ಟಿಕೊಳ್ಳುವುದರಿಂದ ಯಾವ ಪ್ರಯೋಜನವೂ ಇರಲಿಲ್ಲ.

ರೋಷನ್ ಮಧುಸೂದನನೊಡನೆ ಬೆಳಸಿದ್ದ ಸ್ನೇಹ ಗೋವಿಂದದಾಸನಿಗೆ ಕೋಪವನ್ನುಂಟುಮಾಡಿತ್ತು. ಅದನ್ನು ಅವನು ಬಾಯಿ ಬಿಟ್ಟೇ ಹೇಳಿದ್ದ. ಮೊದಲಿನಿಂದಲೂ ನಡೆದುಕೊಂಡು ಬಂದಿದ್ದ ಸ್ನೇಹ ಸಂಬಂಧಗಳನ್ನು ಬಿಟ್ಟು ಎರಡು ದಿನದ ಆಸೆಗೆ ಬೇರೆ ಕಡೆ ಮನಸ್ಸು ತಿರುಗಿಸುವುದು ಜಾಣತನವಲ್ಲವೆನ್ನುವುದನ್ನು ಅನ್ವರ್‌ಬಾಯಿಯೂ ಅರಿತಿದ್ದಳು. ಅದನ್ನು ಅವಳು ಸೂಕ್ಷ್ಮವಾಗಿ ಮಗಳ ಕಿವಿಯ ಮೇಲೂ ಹಾಕಿದ್ದಳು. ಆದರೆ ಅವಳ ಬುದ್ಧಿಗೆ ಆ ಹಿತೋಕ್ತಿ ನಾಟಿರಲಿಲ್ಲ. ಅವಳು ಆ ಮೈಸೂರು ಸಂಗೀತಗಾರನ ಹುಚ್ಚು ಹತ್ತಿ ಕುಣಿಯುತ್ತಿದ್ದಳು.

ಮಗಳು ನಾಲ್ಕು ದಿನ ಸುಖಪಟ್ಟರೆ ಪಡಲಿ ಎನ್ನುವ ಭಾವನೆ ಮೊದಲ ಕೆಲವು ದಿನ ಅನ್ವರ್‌ಬಾಯಿಗೂ ಇತ್ತು. ಆದರೆ ಪರಿಸ್ಥಿತಿ ಹದ ಮೀರಿತ್ತು. ರೋಷನ್ ಮಧುಸೂದನನ್ನು ಬಿಡದೆ ಪಟ್ಟಾಗಿ ಅಂಟಿಕೊಂಡುಬಿಟ್ಟಳು. ಅವನೂ ಅಲ್ಲಿಂದ ಕಾಲ್ತೆಗೆಯುವ ಸೂಚನೆ ಕಂಡುಬರಲಿಲ್ಲ. ಸುದ್ದಿ ಗೋವಿಂದದಾಸನಿಗೆ ಹೇಗೋ ಗೊತ್ತಾಗಿ ಅವನು ಕೋಪದಲ್ಲಿ ಬೆಂಕಿಯಾಗಿದ್ದ.

ಈ ಸಂದರ್ಭದಲ್ಲಿ ಇದ್ದಕ್ಕಿದ್ದ ಹಾಗೆ ರೋಷನ್ ತಾನಾಗಿ ಪುಣೆಗೆ ಹೋಗುವೆನೆಂದಾಗ ಅನ್ವರ್‌ಬಾಯಿಗೆ ಸಂತೋಷ ಆಶ್ಚರ್ಯಗಳೆರಡೂ ಉಂಟಾದವು. ಮಗಳ ಈ ನಿರ್ಧಾರಕ್ಕೆ ಕಾರಣವೇನೆನ್ನುವುದು ಮಾತ್ರ ಅವಳಿಗೆ ಗೊತ್ತಾಗುವುದು ಸಾಧ್ಯವಿರಲಿಲ್ಲ. ಈ ನಿಮಿತ್ತದಿಂದಲಾದರೂ ಸೇಟಿನ ಮನಸ್ಸಿಗೆ ಹರ್ಷವಾಗಿ ಮಧುಸೂದನನ ಸಂಬಂಧ ತಪ್ಪುವುದಲ್ಲಾ ಎಂದು ಅನ್ವರ್‌ಬಾಯಿ ಸಮಾಧಾನ ಹೊಂದಿದಳು. ಇಷ್ಟು ದಿನದ ಮೇಲಾದರೂ ಮಗಳಿಗೆ ಬುದ್ಧಿ ಬಂದಿತಲ್ಲಾ ಎಂದು ಹರ್ಷಿಸಿದಳು. ಆದರೆ ಅವಳ ನಿರೀಕ್ಷೆಯೆಲ್ಲಾ ತಲೆಕೆಳಗಾಗಿತ್ತು. ರೋಷನ್ ಏನೋ ಅನರ್ಥ ಮಾಡಿಕೊಂಡು ಬಂದು ಸೇರಿದ್ದಳು. ಇನ್ನು ಅದರ ಪರಿಣಾಮವೇನಾಗುವುದೋ?

ಪುಣೆಯಿಂದ ಯಾವ ಕೆಟ್ಟ ಸುದ್ದಿ ಬರುವುದೋ, ಪೋಲೀಸಿನವರು ಯಾವಾಗ ಬಂದು ಬಾಗಿಲು ತಟ್ಟುವರೋ ಎಂದು ಅನ್ವರ್‌ಬಾಯಿ ಜೀವದಲ್ಲಿ ಜೀವವಿಲ್ಲದೆ ಬಾಯಿಗೆ ಅಕ್ಕಿಕಾಳು ಹಾಕಿಕೊಂಡು ಕಾಯುತ್ತಲೇ ಇದ್ದಳು. ಆದರೆ ಅವಳು ನಿರೀಕ್ಷಿಸಿದ್ದಂತೆ ಅಲ್ಲಿಂದ ಯಾವ ಕೆಟ್ಟ ಸುದ್ದಿಯೂ ಬರಲಿಲ್ಲ. ಅದಕ್ಕೆ ಬದಲಾಗಿ ರೋಷನ್ ಬಂದ ಮಾರನೆಯ ದಿನ ಸೇಟ್ ಗೋವಿಂದದಾಸನೇ ಬಂದಿಳಿದ.

ಅವಳು ಭಾವಿಸಿದ್ದಂತೆ ಸೇಟು ಸತ್ತಿರಲಿಲ್ಲ. ಅದೊಂದು ಸಮಾಧಾನವಾಗಿತ್ತು. ಆದರೆ ಪಿಡುಗಿನಂತೆ ಬಂದಿಳಿದ ಅವನನ್ನು ನೋಡಿ ಅನ್ವರ್‌ಬಾಯಿ ಭಯಭ್ರಾಂತಳಾದಳು. ಸೇಟು ಏನು ಅವಾಂತರ ಮಾಡುವನೋ ಎಂದು ಅಧೀರಳಾದಳು.

ಅವಳ ನಿರೀಕ್ಷೆಯನ್ನು ಅವನು ಸುಳ್ಳಾಗಿಸಲಿಲ್ಲ. ಒಳಗೆ ಬಂದವನು ಒಂದು ಗಳಿಗೆ ಕುಳಿತುಕೊಳ್ಳುವ ಸಮಾಧಾನವನ್ನೂ ತೋರಿಸದೆ ಕಣ್ಣು ಕೆಕ್ಕರಿಸಿಕೊಂಡು ನೋಡುತ್ತ,

" ಅವಳೆಲ್ಲಿ ?"

ಎಂದು ಗುಡುಗಿದ. ಆ ನಾಲ್ಕು ಅಕ್ಷರಗಳಲ್ಲಿ ಅವನ ಎದೆಯಲ್ಲಿ ಹೊಗೆಯಾಡುತ್ತಿದ್ದ ಕ್ರೋಧವೆಲ್ಲ ಭುಗ್ಗನೆ ಮೇಲಕ್ಕೆದ್ದಿತು. ಏತಕ್ಕೆಂದು ಕೇಳುವ ಧೈರ್ಯವೂ ಅನ್ವರ್‌ಬಾಯಿಗೆ ಉಳಿಯದೆ ಹೋಯಿತು. ಅವಳು ಸುಮ್ಮನೆ ರೂಮಿನ ಕಡೆ ಕೈ ತೋರಿಸಿದಳು. ಸೇಟು ಬಿರುಗಾಳಿಯಂತೆ ರೂಮಿನ ಕಡೆ ನುಗ್ಗಿದ.

ಏನೋ ಅನರ್ಥವಾಗುವುದೆಂದು ಅನ್ವರ್‌ಬಾಯಿ ನಡುಗಿದಳು. ಸೇಟು ರೋಷನ್ನಳನ್ನು ಜೀವಸಹಿತ ಬಿಡಲಾರನೆನ್ನುವ ಭಯ ಅವಳನ್ನು ಹೊಕ್ಕಿತು. ತಕ್ಷಣ ಆಳನ್ನು ಕೂಗಿದಳು. ಹವಿಾದ್ ಸದ್ದಿಲ್ಲದೆ ಮುಂದೆ ಬಂದು ನಿಂತ. ಅನ್ವರ್‌ಬಾಯಿ ರೂಮಿನ ಕಡೆ ಕೈ ತೋರಿಸುತ್ತ,

" ಆ ಕಡೆ ಸ್ವಲ್ಪ ನಿಗಾ ಇರಲಿ, ಹವಿಾದ್."

" ಏಕಮ್ಮಾ, ಯಾರು ಬಂದಿದಾರೆ ?"

" ಸೇಟ್ ಬಂದಿದಾನೆ. ಏನಾದರೂ ಗಲಾಟೆ ಆದೀತು. ಒಂದು ಕಣ್ಣಿಟ್ಟಿರು."

" ಅಚ್ಛಾ "

ಎನ್ನುತ್ತ ಹವಿಾದ್ ಸದ್ದಿಲ್ಲದೆ ಹೊರಟುಹೋದ. 'ಷಿರಾಜ್ ಮಂಜಿಲ್' ವ್ಯವಹಾರ ಯಾವುದೂ ಅವನಿಗೆ ಹೊಸದಾಗಿರಲಿಲ್ಲ.

ರೋಷನ್ನಳ ರೂಮಿನಿಂದ ಸೇಟನ ಆರ್ಭಟ ಕೇಳಬರುತ್ತಿತ್ತು. ಹವಿಾದ್ ಬಾಗಿಲ ಹತ್ತಿರ ಹೋಗಿ ಬಗ್ಗಿ ನೋಡಿದ. ಪುಣ್ಯಕ್ಕೆ ರೂಮಿನ ಬಾಗಿಲು ಹಾಕಿರಲಿಲ್ಲ. ಮುಂದೆ ಮಾಡಿದ್ದ ಬಾಗಿಲ ಸಮಿಾಪದಲ್ಲೇ ಸೇಟ್ ನಿಂತಿದ್ದ. ಅವನ ಕೈಯಲ್ಲಿ ಚರ್ಮದ ಬಾರುಕೋಲಿತ್ತು. ಅವನ ಬಾಯಿಂದ ಅವಾಚ್ಯ ಶಬ್ದಗಳು ಹೊರಡುತ್ತಿದ್ದವು. ಮಂಚದ ಮೇಲೆ ಕುಳಿತಿದ್ದ ರೋಷನ್ ಮಾತಿಗೆ ಜಗ್ಗದೆ ಅವನನ್ನು ಅಟಕಾಯಿಸುತ್ತಿದ್ದಳು.

" ಭಡವಾ ರಂಡೆ, ನನ್ನ ಜೀವ ತೆಗೆಯಬೇಕೆಂದಿದ್ದೆಯಾ ?"

ಎಂದು ಸೇಟು ಉಕ್ಕಿದ ಕೋಪದಲ್ಲಿ ಗರ್ಜಿಸಿದ. ರೋಷನ್ ಅವನ ಮುಖವನ್ನು ತಿರಸ್ಕಾರದಿಂದ ನೋಡಿದಳು.

“ಹಲ್ಲು ಹಿಡಿದು ಮಾತಾಡು. ಇಲ್ಲದಿದ್ದರೆ ಕತ್ತು ಹಿಡಿದು ಹೊರಗೆ ದಬ್ಬಿಸುತ್ತೇನೆ.”

“ಹೊರಗೆ ದಬ್ಬಿಸುವೆಯಾ? ಇದು ನಿಮ್ಮಪ್ಪನ ಮನೆಯೆಂದು ತಿಳಿದೆಯೇನು?”

“ಇಲ್ಲ, ನಿಮ್ಮಪ್ಪನದೇ?”

“ಬಾಯಿ ಉಚಾಯಿಸಿದರೆ ಚಮಡ ಸುಲಿದುಬಿಟ್ಟೇನು.”

“ಸುಲಿಯುವಷ್ಟು ಸಾಮರ್ಥ್ಯವಿದೆಯೇನು?”

“ಇದರ ಅನುಭವ ನಿನಗೆ ಮಾಡಿಸಿಕೊಡಬೇಕಾಗಿದೆ”

ಎಂದು ಕೈಯಲ್ಲಿದ್ದ ಬಾರುಕೋಲನ್ನು ಝುಳಪಿಸುತ್ತ ಎರಡು ಹೆಜ್ಜೆ ಮುಂದಿಟ್ಟ. ರೋಷನ್ನಳ ಮೈ ಕೋಪದಿಂದ ಸೆಟೆದು ನಿಂತಿತು. ಸೇಟು ಅವಳ ಹತ್ತಿರ ಬಂದು ಎಡಗೈಯಲ್ಲಿ ಅವಳ ರೆಟ್ಟೆಯನ್ನು ಬಲವಾಗಿ ಹಿಡಿದುಕೊಂಡ. ಆ ಹಿಡಿತಕ್ಕೆ ಬಿಳುಪಾದ ಅವಳ ತೋಳಿಗೆ ರಕ್ತವೇರಿ ಕೆಂಪಾಯಿತು.

“ಕೈಬಿಟ್ಟು ದೂರ ನಿಲ್ಲು.”

“ದೂರ ನಿಲ್ಲುವುದಕ್ಕೆ ಇಷ್ಟು ದೂರ ಬಂದೆನೆ? ನಿನ್ನ ಸೊಕ್ಕಿಗೆ ಪಾಠ ಕಲಿಸುವುದಕ್ಕೇ ನಾನು ಬಂದದ್ದು. ನೀನಿದನ್ನು ಸಾಯುವವರೆಗೂ ಮರೆಯ ಬಾರದು”

ಎಂದು ಉಗ್ರ ಕೋಪದಿಂದ ಅವಳನ್ನು ಘಾತಿಸಲು ಕೈಯೆತ್ತಿದ. ಆದರೆ ಏನಾಯಿತೋ ಎತ್ತಿದ ಕೈ ಹಾಗೇ ನಿಂತಿತು. ಸೇಟ್ ಹಾವಿನ ಹೆಡೆ ಕಂಡವನ ಹಾಗೆ ಭಯಗ್ರಸ್ತನಾಗಿ ತತ್ತರಿಸಿ ನಿಂತ. ರೋಷನ್ನಳ ಕೈಯಲ್ಲಿದ್ದ ಬಾಕುವಿನ ಅಲಗು ಯಮಸ್ವರೂಪಿಯಂತೆ ಅವನ ಕಣ್ಣ ಮುಂದೆ ಹೊಳೆಯಿತು.

“ಹೋಗು, ಹೊರಟು ಹೋಗು. ಇನ್ನು ಮೇಲೆ ಇಲ್ಲಿಗೆ ಕಾಲಿಟ್ಟರೆ ನಿನ್ನನ್ನು ಇಲ್ಲವೆನ್ನಿಸಿಬಿಡುತ್ತೇನೆ”

ಎಂದು ರೋಷನ್ ಗರ್ಜಿಸಿದಳು. ಆ ಸಮಯಕ್ಕೆ ಸರಿಯಾಗಿ ಹವಿಾದ್ ರೂಮಿನೊಳಗೆ ಹಾರಿ ಬಂದಿದ್ದ.

ಕುರ್ಚಿ ಬಿಟ್ಟು ಏಳಲಾರದೆ ಬಿದ್ದುಕೊಂಡಿದ್ದ ಅನ್ವರ್‌ಬಾಯಿಯ ಕಿವಿಗೆ ಒಂದೊಂದೇ ಮಾತು ಕೇಳಿಸುತ್ತಿತ್ತು. ಜಗಳದಲ್ಲಿ ಯಾರ ತಲೆ ಉರುಳಿತೋ, ಹವಿಾದ್ ಸಹಾಯಕ್ಕೆ ಹೋದನೋ ಇಲ್ಲವೋ ಎಂದು ತುಡಿಯುತ್ತಿದ್ದ ಅವಳಿಗೆ

ರೋಷನ್ನಳ ಎತ್ತರಿಸಿದ ಧ್ವನಿ ಕೇಳಿ ಸಮಾಧಾನವಾಯಿತು. ಅದರ ಹಿಂದೆಯೇ ಸೇಟ್ ಹೊರಬಿದ್ದುದನ್ನರಿತು ಅತ್ತ ಕಣ್ಣು ಹೊರಳಿಸಿ ನೋಡಿದಳು. ದರ್ಪವೆಲ್ಲಾ ಸತ್ತು ಮುಖದ ನೀರಿಳಿದ ಸೇಟ್ ತಲೆ ತಗ್ಗಿಸಿಕೊಂಡು ಈಚೆಗೆ ಬರುತ್ತಿದ್ದ. ಅವನ ಹಿಂದೆಯೇ ಹವಿಾದ್.

ಸೇಟನ್ನು ಸಮಾಧಾನಪಡಿಸದೆ ಕಳಿಸುವುದು ವಿಹಿತವಲ್ಲವೆಂದು ಅನ್ವರ್‌ಬಾಯಿಗೆ ತೋರಿತು. ಅವಳು ಕುರ್ಚಿಯಿಂದ ಅರ್ಧ ಎದ್ದು,

"ಕುಳಿತುಕೋ ಬಾ, ಸೇಟ್"

ಎಂದು ಸೋಫದ ಕಡೆ ಕೈ ತೋರಿಸಿ ಮರೆಯಾಗುವಂತೆ ಹವಿಾದನಿಗೆ ಕಣ್ಣುಸನ್ನೆ ಮಾಡಿದಳು. ಹವಿಾದ್ ಬಾಗಿಲ ಪರದೆಯ ಹಿಂದೆ ಅಡಗಿದ. ಸೇಟು ನಿಂತ ಹಾಗೆಯೇ ಅನ್ವರ್‌ಬಾಯಿಯನ್ನು ದುರುಗುಟ್ಟಿ ನೋಡಿದ. ಆ ದೃಷ್ಟಿಯಲ್ಲಿ ಅವಳನ್ನು ನುಂಗಿಹಾಕಿ ಬಿಡುವಂಥ ಸುಪ್ತ ಕ್ರೋಧವಿತ್ತು.

"ಸ್ವಲ್ಪ ಕುಳಿತುಕೋ ಸೇಟ್, ಮಾತಾಡುವುದಿದೆ"

ಎಂದು ಮತ್ತೆ ಅನ್ವರ್‌ಬಾಯಿ ಅನುನಯದ ಧ್ವನಿಯಲ್ಲಿ ನುಡಿದಳು. ವ್ಯಂಗ್ಯವಾದ ನಗೆ ಸೇಟನ ತುಟಿಯಂಚಿನಲ್ಲಿ ಕಾಣಿಸಿಕೊಂಡಿತು.

"ಕುಳಿತುಕೊಳ್ಳಬೇಕೆ? ಈಗಲೇ ಕುಳಿತುಕೊಳ್ಳಬೇಕೆನ್ನುವೆಯಾ?"

ಅವನು ನಿಧಾನವಾಗಿ ಆಡಿದ ಆ ಮಾತನ್ನ ಕೇಳಿ ಅವಳ ರಕ್ತ ಛಿಲ್ಲೆಂದಿತು.

"ಕೋಪಿಸಿಕೊಳ್ಳಬೇಡ, ಸೇಟ್. ಸ್ವಲ್ಪ ಕುಳಿತು ನಾನು ಹೇಳುವ ಮಾತು ಕೇಳು."

"ನನಗೆ ಕೋಪವೆ? ಇಂಥ ಪ್ರತ್ಯುಪಕಾರಕ್ಕೆ ಕೋಪವೆ? ನನಗೆ ಕೋಪವಿಲ್ಲ ಅನ್ವರ್, ಕೋಪವಿಲ್ಲ. ಏನು ಮಾಡಬೇಕೋ ಅದನ್ನು ಶಾಂತಿಯಿಂದಲೇ ಮಾಡುತ್ತೇನೆ"

ಎಂದು ಗಹಗಹಿಸಿ ನಗುತ್ತ ಅಲ್ಲಿ ನಿಲ್ಲದೆ ಸರಸರನೆ ಹೊರಟುಹೋದ.

"ಸೇಟ್, ಸೇಟ್"

ಎಂದು ಒಂದೇ ಸಮನಾಗಿ ಅನ್ವರ್‌ಬಾಯಿ ಕೂಗುತ್ತಿದ್ದುದನ್ನು ಅವನು ಲಕ್ಷಿಸಲೇ ಇಲ್ಲ. ಅವನು ಕಾರು ಹತ್ತಿ ಹೊರಟುಹೋದುದನ್ನು ಕಂಡು

ಹವಿಾದ್ ಹೊರಬಾಗಿಲನ್ನು ಮುಚ್ಚಿ ರೋಷನ್ನಳ ರೂಮಿಗೆ ಬಂದ. ಮಂಚದ ಮೇಲೆ ಮಲಗಿದ್ದ ರೋಷನ್ ಅವನನ್ನು ಕಂಡು ಎದ್ದು ಕುಳಿತಳು.

"ಆ ನಾಯಿ ತೊಲಗಿತೇ, ಹವಿಾದ್?"

"ತೊಲಗಿತಮ್ಮಾ."

ರೋಷನ್ ಸಮಾಧಾನದ ನಿಟ್ಟುಸಿರನ್ನು ಬಿಟ್ಟಳು. ಅವಳ ಎದೆಯಿಂದ ಒಂದು ದೊಡ್ಡ ಭಾರವನ್ನು ಇಳಿಸಿದ ಹಾಗಿತ್ತು. ಇಬ್ಬರೂ ಕ್ಷಣಹೊತ್ತು ಮೌನವಾಗಿದ್ದರು. ಬಳಿಕ ರೋಷನ್ ಹವಿಾದನ ಮುಖವನ್ನು ಸೂಕ್ಷ್ಮವಾಗಿ ದೃಷ್ಟಿಸುತ್ತ,

"ನಿನ್ನಿಂದ ಒಂದು ಕೆಲಸವಾಗಬೇಕಾಗಿದೆ, ಹವಿಾದ್."

"ಏನಮ್ಮಾ, ಹೇಳಿ."

"ಅಮ್ಮನಿಗೆ ಗೊತ್ತಾಗದ ಹಾಗೆ ಮಾಡಬೇಕು."

"ನಿಮ್ಮ ಕೆಲಸ ಯಾವುದಿದ್ದರೂ ಗುಟ್ಟಾಗಿ ಮಾಡಿಕೊಡುತ್ತೇನೆ."

"ಮಧುಸೂದನರು ಈಗ ಎಲ್ಲಿದ್ದಾರೆ, ಗೊತ್ತೆ?"

"ಇಲ್ಲಮ್ಮ. ಅವರು ಹೋಗುವಾಗ ಇರುವ ಸ್ಥಳ ಹೇಳಿ ಹೋಗಲಿಲ್ಲ."

"ಅವರಿಲ್ಲಿಂದ ಹೋಗುವಾಗ ಕೋಪಿಸಿಕೊಂಡು ಹೋದರೇ?"

"ಕೋಪ ಬಂದ ಹಾಗೇನೋ ಇತ್ತು. ಆದರೆ ಯಾವುದನ್ನೂ ಬಾಯಿ ಬಿಟ್ಟು ಹೇಳಲಿಲ್ಲ."

"ಹೋಗುವಾಗ ಏನೂ ಹೇಳಿ ಹೋಗಲಿಲ್ಲವೆ?"

"'ಯಾರಾದರೂ ಕೇಳಿದರೆ ಹೊರಟುಹೋದೆನೆಂದು ಹೇಳು' ಎಂದು ಮಾತ್ರ ಹೇಳಿ ಹೊರಟುಹೋದರು."

ರೋಷನ್ ನೀಳವಾಗಿ ಉಸಿರ್ಗರೆದಳು. ಅವಳ ದುಡುಕಿನಿಂದ ಎರಡು ಕಡೆಯೂ ಕೆಲಸ ಕೆಟ್ಟಿತ್ತು. ಸ್ವಲ್ಪ ಹೊತ್ತು ಮೌನವಾಗಿದ್ದು ಬಳಿಕ ಕಾತರ ತುಂಬಿದ ಧ್ವನಿಯಲ್ಲಿ,

"ಈಗ ಅವರು ಎಲ್ಲಿದ್ದಾರೋ ಪತ್ತೆ ಮಾಡಬೇಕಲ್ಲಾ, ಹವಿಾದ್."

"ಪ್ರಯತ್ನಮಾಡಿ ನೋಡುತ್ತೇನಮ್ಮಾ."

" ಪ್ರಯತ್ನ ಮಾಡುತ್ತೇನೆಂದರೆ ಸಾಲದು. ಅವರು ಇರುವ ಸ್ಥಳ ತಿಳಿದು ಕೊಳ್ಳಬೇಕು. ನನಗೆ ಅದು ತುಂಬ ಮುಖ್ಯ."

" ನನಗೆ ಗೊತ್ತಿಲ್ಲವೇ ?"

ಎಂದು ಹವಿಾದ್ ಅರ್ಥಗರ್ಭಿತ ಮುಗುಳ್ನಗೆ ಬೀರಿದ. ರೋಷನ್ ತನ್ನ ಕೈಚೀಲದಿಂದ ಹತ್ತು ರೂಪಾಯಿನ ನೋಟೊಂದನ್ನು ತೆಗೆದು ಹವಿಾದನ ಕೈಯಲ್ಲಿಡುತ್ತ,

" ಹೋಗು, ಇವತ್ತಿನಿಂದಲೇ ಈ ಕೆಲಸ ಆರಂಭಿಸಬೇಕು. ನನ್ನ ಕೆಲಸ ನೀನು ಮಾಡಿಕೊಟ್ಟರೆ ನಿನಗೆ ನಾನು ಯಾವುದಕ್ಕೂ ಕಡಮೆ ಮಾಡುವುದಿಲ್ಲ"

ಎಂದಳು. ನೋಟನ್ನು ಕಂಡು ಹವಿಾದನ ಮುಖ ಹಿಗ್ಗಿತು. ಮುಂದಿನ ಸಂಭಾವನೆಯ ಸವಿನೆನಪು ಅವನ ಬಾಯಲ್ಲಿ ನಿರೂರಿಸಿತು. ಅವನು ವಿನಯ ದಿಂದ ಬಗ್ಗಿ ಸಲಾಂ ಮಾಡಿ ಹೊರಟುಹೋದ. ಅವನ ಮನಸ್ಸಾಗಲೇ ಬೇಟೆಯ ಕಡೆ ತಿರುಗಿತ್ತು.

೨೧

ಕಲ್ಲೋ, ಕವಿತೆಯೋ?

ಬೆಳುದಿಂಗಳಲ್ಲಿ ತಾಜಮಹಲನ್ನು ನೋಡಿದ ಮಧುಸೂದನನ ಮನಸ್ಸನ್ನು ಸಂದೇಹ ಬಾಧಿಸುತ್ತಿತ್ತು.

"ನಿನಗೆ ಹೇಗೆ ತೋರುತ್ತದೆ, ಕುಮುದಾ?"

ಎಂದು ಪಕ್ಕದಲ್ಲಿ ನಿಂತಿದ್ದ ಕುಮುದನ ಭುಜದ ಮೇಲೆ ಕೈಹಾಕುತ್ತ ಕೇಳಿದ.

"ನನಗೇನೋ ಸುಂದರವಾದ ಕನಸು ನನಸಾದಂತೆ ತೋರುತ್ತದೆ."

"ಅದು ಎಲ್ಲಗೂ ಹೇಳುವ ಮಾತು."

"ಅದು ಬಿಟ್ಟು ಹೇಳುವುದಿನ್ನೇನಿದೆ?"

"ಅವಿನಾಶಿಯಾದ ಪ್ರೇಮವೊಂದನ್ನು ಶಿಲೆಯಲ್ಲಿ ಹಾಡುತ್ತಿರುವ ಹಾಗೆ ಭಾಸವಾಗುವುದಿಲ್ಲವೆ?"

"ಅದೀಗ ಕಲಾವಿದರು ಬಣ್ಣಿಸುವ ರೀತಿ. ನೀವು ಹೇಗಿದ್ದರೂ ಸಂಗೀತ ಗಾರರಲ್ಲವೆ?"

ಎಂದು ನಕ್ಕು ಅವನ ಭುಜಕ್ಕೆ ತನ್ನ ತಲೆಯೊರಗಿಸಿದಳು. ಇಡೀ ದೃಶ್ಯ ತುಂಬಿದ ಹುಣ್ಣಿಮೆಯ ಬೆಳುದಿಂಗಳಲ್ಲಿ ಮಿಾಯುತ್ತಿತ್ತು.

ಚಕ್ರವರ್ತಿಯೊಬ್ಬನ ಲೋಕೋತ್ತರ ಪ್ರಣಯದ ಪ್ರತೀಕ.

ಮಧುಸೂದನನ ಬಗೆಗಣ್ಣಿನ ಮುಂದೆ ಚರಿತ್ರೆಯ ಪುಟಗಳು ಸರಸರನೆ ತೆರೆದುಕೊಂಡವು.

ಪ್ರಪಂಚದ ಪ್ರಣಯವೆಲ್ಲವೂ ಇಷ್ಟೇ ಪವಿತ್ರವಾಗಿದ್ದರೆ?

ಅವನ ಮನಸ್ಸು ಎಲ್ಲಿಂದ ಎಲ್ಲಿಗೋ ತೂಗಿತು; ಯಾವ ಯಾವ

ಯೋಚನೆಗಳ ಕೊಂಡಿಗಳೋ ಬಿಚ್ಚಿಕೊಂಡವು; ನಿಟ್ಟುಸಿರೊಂದು ಅವನಿಗರಿಯದೆಯೇ ಹೊರಬಿತ್ತು.

ಅವನ ಕಣ್ಣು ಮೋಹಕವಾದ ಆ ದೃಶ್ಯವನ್ನು ನೋಡುತ್ತಲೇ ಇತ್ತು; ಮನಸ್ಸು ಬೇರೆ ಏನನ್ನೋ ಚಿಂತಿಸುತ್ತಿತ್ತು; ಮೌನ ಸರ್ವತ್ರ ವ್ಯಾಪಿಸಿತ್ತು; ಗಿಡ ಮರಗಳಲ್ಲಿ ತಣ್ಣನೆಯ ಗಾಳಿ ಸುಳಿದಾಡುತ್ತಿತ್ತು.

ಅವನ ಭಾವಪರವಶತೆಯನ್ನು ಕುಮುದಾ ಗಮನಿಸದಿರಲಿಲ್ಲ.

" ಏನನ್ನೋ ಯೋಚಿಸುತ್ತಿರುವಿರಿ?"

ಮಧುಸೂದನ ಮಾತಾಡಲಿಲ್ಲ. ಆ ಮಾತು ಅವನ ಕಿವಿಗೆ ಬಿತ್ತೋ ಇಲ್ಲವೋ.

" ನಾನು ಹತ್ತಿರ ಇರುವುದನ್ನೂ ನೀವು ಮರೆತುಬಿಟ್ಟ ಹಾಗಿದೆ."

ಅದಕ್ಕೂ ಅವನು ಉತ್ತರ ಕೊಡಲಿಲ್ಲ.

" ಕಲಾವಿದರಿಗೆ ಎಂಥ ಗಾಢವಾದ ಧ್ಯಾನಮಗ್ನತೆ"

ಎನ್ನುತ್ತ ಅವನ ಕುತ್ತಿಗೆಯನ್ನು ತೋಳಿನಿಂದ ಬಳಸಿ ಮುಖವನ್ನು ಹಿಡಿದಲುಗಿಸಿದಳು. ಅವನ ಏಕಾಗ್ರತೆಗೆ ಆಗ ಭಂಗ ಬಂದಿರಬೇಕು. ನೀಳವಾಗಿ ಸುಯ್ದು ಅವಳ ಕಡೆ ನೋಡಿದ.

" ಏನನ್ನು ಚಿಂತಿಸುತ್ತಿದ್ದಿರಿ?"

" ಏನೂ ಇಲ್ಲ."

" ಏನೂ ಇಲ್ಲದೆ ನಿಮ್ಮ ಮನಸ್ಸು ನಿಮ್ಮನ್ನು ಬಿಟ್ಟು ಹೋಗಿತ್ತೆ?"

" ನನ್ನ ಮನಸ್ಸೆಲ್ಲಿ ಹೋಗಿತ್ತು, ಕುಮುದಾ? ಎಲ್ಲೂ ಇಲ್ಲ. ನಡಿ, ಹೋಗೋಣ"

ಎಂದು ನುಡಿದ. ಅವನು ಯಾವುದೋ ಭಾವನೆಯನ್ನು ಮರೆಮಾಚುತ್ತಿರುವನೆಂದು ಚಾಣಾಕ್ಷೆಯಾದ ಅವಳಿಗೆ ಭಾಸವಾಗದಿರಲಿಲ್ಲ. ಹೋಟಲು ತಲುಪುವವರೆಗೂ ಇಬ್ಬರೂ ಹೆಚ್ಚು ಮಾತಾಡಲಿಲ್ಲ.

ಆಗ್ರಾಕ್ಕೆ ಬಂದು ಮೂರು ದಿವಸವಾಗಿತ್ತು. ಇತಿಹಾಸ ಪ್ರಸಿದ್ಧವಾದ ಕೋಟೆಗಳನ್ನೂ ಸ್ಮಾರಕಗಳನ್ನೂ ನೋಡುವುದರಲ್ಲಿ ಮಧುಸೂದನನಿಗೂ ಕುಮುದನಿಗೂ ಹೊತ್ತೇ ಸಾಲುತ್ತಿರಲಿಲ್ಲ. ಬೆಳಗ್ಗೆ ಸ್ನಾನಮಾಡಿ ಉಪಾಹಾರ ಮುಗಿಸಿಕೊಂಡು ಹೊರಹೊರಟರೆ ಹನ್ನೆರಡಕ್ಕೋ ಒಂದಕ್ಕೋ ಹೋಟಲಿಗೆ

ಹಿಂದಿರುಗುತ್ತಿದ್ದರು. ಊಟ ಮುಗಿಸಿದರೆ ಸಂಜೆಯವರೆಗೂ ವಿಶ್ರಾಂತಿ. ಮತ್ತೆ ನೋಟ ನೋಡಲು ಹೊರಟರೆ ರಾತ್ರಿ ಊಟದ ಹೊತ್ತಿಗೆ ಬರುತ್ತಿದ್ದರು. ಹೋಟೆಲಿನವರು ಅವರ ಉಪಯೋಗಕ್ಕೆಂದೇ ಒಂದು ಕಾರು ಕೊಟ್ಟಿದ್ದರು. ಅದಿಲ್ಲದಿದ್ದರೆ ಆಗ್ರದ ಸುತ್ತಮುತ್ತ ಸಂಚರಿಸಿ ಬರಲು ಸಾಧ್ಯವಾಗುತ್ತಿರಲಿಲ್ಲ.

ಬಿಸಿಲು ಪ್ರಚಂಡವಾಗಿತ್ತು. ಮೈಸೂರಿನ ಸುಖೋಷ್ಣ ಹವದ ಅಭ್ಯಾಸ ವಾಗಿದ್ದ ಅವರಿಗೆ ಆ ಸೆಕೆ ಸಹಿಸುವುದು ಅಸಾಧ್ಯವಾಗಿತ್ತು. ದಿನಕ್ಕೆ ಮೂರು ಸಲ ತಣ್ಣೀರು ಸ್ನಾನ ಮಾಡಿದರೂ ತೃಪ್ತಿಯಾಗುತ್ತಿರಲಿಲ್ಲ. ಸಂಜೆಯ ಹೊತ್ತು ನದಿಯ ತೀರಕ್ಕೆ ಹೋಗಿ ಕುಳಿತರೆ ಎದ್ದು ಬರಲು ಮನಸ್ಸೇ ಆಗುತ್ತಿರಲಿಲ್ಲ.

ಬಂದ ರಾತ್ರಿಯೇ ಅವರು ಮೊದಲ ಬಾರಿಗೆ ತಾಜಮಹಲನ್ನು ನೋಡಿ ಬಂದಿದ್ದರು.

ಮಾರನೆಯ ದಿನ ಒಂದು ಸಂಗತಿ ನಡೆಯಿತು.

ಆ ಸಂಜೆ ತಾಜಮಹಲನ್ನು ನೋಡಲೆಂದು ಹೋಗಿದ್ದವರು ಮಂದಿರ ವನ್ನೆಲ್ಲಾ ಒಮ್ಮೆ ಸುತ್ತಿ ಬಂದು ಮುಂದಿದ್ದ ಕಾರಂಜಿಯ ಹುಲ್ಲುಹಾಸಿನ ಮೇಲೆ ಕುಳಿತುಕೊಂಡು ಮಾತಾಡುತ್ತಿದ್ದರು. ಜನ ತಂಡ ತಂಡವಾಗಿ ಬಂದು ಹೋಗು ತ್ತಲೇ ಇದ್ದರು. ಕೆಲವರು ಮಂದಿರದ ಆವರಣದಲ್ಲಿ ಬೆಳೆದಿದ್ದ ಮರಗಳ ಕೆಳಗೆ ಕುಳಿತು ವಿಶ್ರಮಿಸಿಕೊಳ್ಳುತ್ತಿದ್ದರು. ಸುತ್ತಮುತ್ತ ಜಲಧಾರೆ ಸೂಸುತ್ತಿದ್ದ ಹತ್ತಾರು ನೀರ್ಕೊಳವೆಗಳಿಂದ ಇಡೀ ಆವರಣಕ್ಕೆ ತಂಪು ಆವರಿಸಿತ್ತು.

ಕುಮುದನ ಜೊತೆಯಲ್ಲಿ ಆಸಕ್ತಿಯಿಂದ ಮಾತಾಡುತ್ತ ಕುಳಿತಿದ್ದ ಮಧು ಸೂದನನಿಗೆ ನಾಲ್ಕೈದು ಜನರ ಒಂದು ಸಣ್ಣ ಗುಂಪು ತಮ್ಮ ಕಡೆಯೇ ಬರು ತ್ತಿದ್ದುದು ಗಮನಕ್ಕೆ ಬರಲಿಲ್ಲ. ಅವರು ಹತ್ತಿರ ಬಂದು ನಿಂತಾಗಲೇ ಅವನ ಲಕ್ಷ್ಯ ಅತ್ತ ಹರಿದದ್ದು. ಗುಂಪಿನ ಪೈಕಿ ಸೂಟು ಧರಿಸಿದ್ದವರೊಬ್ಬರು ಹಸ ನ್ಮುಖದಿಂದ ಮುಂದೆ ಬಂದರು.

"ನಮಸ್ಕಾರ, ಸಾರ್."

"ನಮಸ್ಕಾರ"

ಎಂದು ಮಧುಸೂದನ ಪ್ರತಿವಂದಿಸಿ ಅವರನ್ನು ದಿಟ್ಟಿಸಿ ನೋಡಿದ. ಅವರ ಪರಿಚಯ ಅವನಿಗಿದ್ದಂತಿರಲಿಲ್ಲ. ಸೂಟುಧಾರಿ ನಸುನಕ್ಕರು.

"ನೀವು ಮೈಸೂರಿನವರಲ್ಲವೆ?"

"ಹೌದು."

"ನಿಮ್ಮ ಹೆಸರು?"

"ಮಧುಸೂದನ ಅಂತ."

"ಯಾರು, ಗಾಯಕ ಮಧುಸೂದನರೇ?"

"ಹೌದು."

"ತುಂಬ ಸಂತೋಷ"

ಎಂದು ಮುಂದೆ ಬಂದು ಕೈ ಕುಲುಕಿಸುತ್ತ,

"ಮಂದಿರದಲ್ಲಿ ನಿಮ್ಮನ್ನು ನೋಡಿದಾಗಲೇ ಅನುಮಾನ ಬಂದಿತು. ಹೌದೋ ಅಲ್ಲವೋ ಎಂದಿದ್ದೆವು. ನೀವು ಕನ್ನಡದಲ್ಲಿ ಮಾತಾಡಿಕೊಂಡು ಹೊರಗೆ ಬಂದದ್ದನ್ನು ನೋಡಿ ಮಾತಾಡಿಸಿಯೇ ತಿಳಿದುಕೊಂಡು ಬಿಡೋಣ ವೆಂದು ನಿಮ್ಮನ್ನು ಹಿಂಬಾಲಿಸಿ ಬಂದು ತೊಂದರೆ ಕೊಟ್ಟೆವು"

ಎಂದು ನಕ್ಕರು.

"ತೊಂದರೆಯೇನು ಬಂತು? ಕುಳಿತುಕೊಳ್ಳಿ. ನಿಮ್ಮ ಪರಿಚಯ ಮಾಡಿಸಿಕೊಡಲೇ ಇಲ್ಲವಲ್ಲಾ."

"ನನ್ನ ಹೆಸರು ಸುದರ್ಶನ. ದೆಹಲಿ ಕನ್ನಡ ಸಂಘದ ಕಾರ್ಯದರ್ಶಿ ಯಾಗಿದ್ದೇನೆ. ನಾನೂ ಕೆಲವು ಮಿತ್ರರೂ ತಾಜಮಹಲನ್ನು ನೋಡುವ ಉದ್ದೇಶ ದಿಂದ ನಿನ್ನೆ ಇಲ್ಲಿಗೆ ಬಂದೆವು"

ಎಂದು ಹೇಳಿ ತಮ್ಮೊಡನಿದ್ದ ನಾಲ್ವರು ಕನ್ನಡಿಗ ಮಿತ್ರರ ಪರಿಚಯ ವನ್ನೂ ಮಾಡಿಸಿಕೊಟ್ಟರು. ಸುದರ್ಶನರು ಕೇಳುವ ಮೊದಲೇ ಮಧುಸೂದನ ಕುಮುದನ ಕಡೆ ತಿರುಗಿ,

"ಇವರ ಪರಿಚಯವೂ ನಿಮಗಾಗಬೇಕು. ಶ್ರೀಮತಿ ಕುಮುದಾದೇವಿ ಮೈಸೂರು ವಿಶ್ವವಿದ್ಯಾನಿಲಯದ ಪದವೀಧರರು. ಒಳ್ಳೇ ಕಲಾಭಿಮಾನಿಗಳು. ಈಗ ಮುಂಬಯಿಯಲ್ಲಿದ್ದಾರೆ"

ಎಂದು ಗೌರವವಾಗಿ ಹೇಳಿ ಹೆಚ್ಚು ಪ್ರಶ್ನೆಗೆ ಅವಕಾಶವಿಲ್ಲದಂತೆ ಮುಗಿ ಸಿದ. ಕುಮುದಾ ಎಲ್ಲರ ಕಡೆಗೂ ತಿರುಗಿ ವಿನಯದಿಂದ ಕೈ ಜೋಡಿಸಿದಳು.

"ನಿಮ್ಮ ವಿಷಯ ನಾವು ಬೇಕಾದಷ್ಟು ಕೇಳಿದ್ದೇವೆ, ಸಾರ್. ಆದರೆ ಮುಖಪರಿಚಯಕ್ಕೆ ಅವಕಾಶವಿರಲಿಲ್ಲ, ಅಷ್ಟೆ. ನೀವು ಇಷ್ಟು ಹತ್ತಿರ ಬಂದಿ

ರುವ ಸಂಗತಿ ತಿಳಿದಿದ್ದರೆ ನಾವು ಬಿಡುತ್ತಲೇ ಇರಲಿಲ್ಲ. ಈಗಲೂ ನಿಮಗೆ ಅವ ಕಾಶವಿದ್ದರೆ ದೆಹಲಿಗೆ ದಯಮಾಡಿಸಿ ನಮ್ಮ ಆತಿಥ್ಯ ಸ್ವೀಕರಿಸಬೇಕು. ನಮ್ಮ ವರನೇಕರು ನಿಮ್ಮ ಹಾಡಿಕೆ ಕೇಳಲು ತುಂಬ ಉತ್ಸುಕರಾಗಿದ್ದಾರೆ"

ಎಂದು ಸುದರ್ಶನರು ಪೀಠಿಕೆ ಹಾಕಿದರು.

"ನನ್ನ ಪ್ರವಾಸದಲ್ಲಿ ದೆಹಲಿಯೂ ಸೇರಿದೆ. ಆದರೆ ಕಚೇರಿಯ ಯಾವ ಏರ್ಪಾಡನ್ನೂ ನೀವು ಇಟ್ಟುಕೊಳ್ಳಬಾರದೆಂದೇ ನನ್ನ ವಿನಂತಿ."

"ಇಷ್ಟಮಿತ್ರಗೋಷ್ಠಿಯಲ್ಲಾದರೂ ಹಾಡಬಹುದಲ್ಲಾ."

"ಅದರ ವಿಚಾರ ಯೋಚಿಸಲಡ್ಡಿಯಿಲ್ಲ"

ಎಂದು ಮಧುಸೂದನ ಅರೆಮನಸ್ಸಿನಿಂದ ಉತ್ತರವಿತ್ತ.

"ನಿಮಗೆ ಹೇಗೆ ಸೌಕರ್ಯವೋ ಹಾಗೆ ಮಾಡೋಣ"

ಎಂದು ಸುದರ್ಶನರು ಮುಗಿಸಿದರು. ಹೊತ್ತಾಯಿತೆಂದು ಕುಮುದಾ ಎಚ್ಚರಿಸಿದಳು. ಸುದರ್ಶನರು ಮಧುಸೂದನನ ಹೋಟೆಲಿನ ವಿಳಾಸ ತಿಳಿದು ಕೊಂಡು ಮಾರನೆಯ ದಿನ ಸಾವಕಾಶವಾಗಿ ಭೇಟಿ ಮಾಡುವುದಾಗಿ ಹೇಳಿ ಬೀಳ್ಕೊಂಡು ತಮ್ಮ ಮಿತ್ರರೊಡನೆ ಹೊರಟುಹೋದರು. ಮಧುಸೂದನ ಕುಮುದಾ ಕಾರು ಹತ್ತಿ ಹೊರಟರು.

"ಇವರು ಬೇರೆ ಗಂಟು ಬಿದ್ದರಲ್ಲಾ"

ಎಂದು ಕುಮುದಾ ಬೇಸರದ ಧ್ವನಿಯಲ್ಲಿ ನುಡಿದಳು. ಮಧುಸೂದನ ಸುಮ್ಮನೆ ನಕ್ಕ.

"ದೆಹಲಿಗೆ ಬರುತ್ತೇನೆಂದು ಏಕೆ ಹೇಳಿದಿರಿ?"

"ಇಲ್ಲ ಎನ್ನಬೇಕಾಗಿತ್ತೆ? ಹೇಗೂ ಹೋಗಿಯೇ ಹೋಗುತ್ತೇವಲ್ಲಾ."

"ನಾವು ಎಲ್ಲಾದರೂ ಇಳಿದುಕೊಳ್ಳಬಹುದಾಗಿತ್ತು. ಇನ್ನು ಅವರ ಆತಿಥ್ಯಕ್ಕೆ ಸಿಕ್ಕಿದರೆ ಬರೀ ಗೊಂದಲ"

ಎಂದಳು. ಮಧುಸೂದನನಿಗೆ ಅವಳ ಮನೋಗತ ಅರ್ಥವಾಯಿತು. ಅವಳ ಸೊಂಟವನ್ನು ಕೈಯಿಂದ ಬಳಸಿ ಅವಳನ್ನು ಹತ್ತಿರಕ್ಕೆಳೆದುಕೊಳ್ಳುತ್ತ,

"ನಮ್ಮ ಸುಖಕ್ಕೆ ಯಾವುದೂ ಅಡ್ಡಿ ಬರುವುದಿಲ್ಲ, ಕುಮುದಾ. ಅದಕ್ಕೆ ಬೇಕಾದ ಏರ್ಪಾಡು ಮಾಡಿಕೊಳ್ಳೋಣ"

ಎಂದು ಭರವಸೆಯಿತ್ತ. ಕುಮುದನ ಮನಸ್ಸಿಗೆ ಸ್ವಲ್ಪ ಸಮಾಧಾನವಾಯಿತು.

ಮಾರನೆಯ ಬೆಳಗ್ಗೆ ಎಂಟು ಘಂಟೆಗೆ ಸರಿಯಾಗಿ ಸುದರ್ಶನರು ಬಂದಿಳಿದರು. ಅವರನ್ನು ಸ್ವಾಗತಿಸಿ ಮಾತುಕಥೆ ನಡೆಸಲು ಮಧುಸೂದನ ಬೇರೊಂದು ರೂಮನ್ನು ಗೊತ್ತುಮಾಡಿಕೊಂಡಿದ್ದ. ಅವರು ಬಂದು ಹೋಗುವವರೆಗೂ ಕುಮುದಾ ಅವರ ಕಣ್ಣಿಗೆ ಬೀಳಲಿಲ್ಲ.

ದೆಹಲಿಯಲ್ಲಿರುವವರೆಗೂ ಮಧುಸೂದನ ಕನ್ನಡ ಸಂಘದ ಅತಿಥಿಯಾಗಿಯೇ ಇರಬೇಕೆಂದು ನಿಶ್ಚಯವಾಯಿತು. ಸುದರ್ಶನರು ಕಾರ್ಯಕ್ರಮವನ್ನು ಸ್ಥೂಲವಾಗಿ ಸೂಚಿಸಿ ಅದಕ್ಕೆ ಮಧುಸೂದನನ ಒಪ್ಪಿಗೆ ಪಡೆದರು. ಅವನು ದೆಹಲಿಗೆ ಆಗಮಿಸುವ ತಾರೀಕನ್ನು ತಿಳಿದುಕೊಂಡು ಅದನ್ನು ಸಂಘದ ಅಧ್ಯಕ್ಷರಿಗೂ ಇತರರಿಗೂ ಮುಂದಾಗಿ ಬರೆದು ತಿಳಿಸುವುದಾಗಿ ಹೇಳಿ ಹೊರಟು ಹೋದರು.

ಈ ಏರ್ಪಾಡನ್ನೆಲ್ಲಾ ಕೇಳಿ ಕುಮುದನ ಮನಸ್ಸನ್ನು ಅತೃಪ್ತಿ ಆವರಿಸಿತು.

"ದೆಹಲಿಗೆ ನೀವೊಬ್ಬರೇ ಹೋಗಿ ಬನ್ನಿ. ನಾನು ಬರುವುದಿಲ್ಲ."

"ಬರದೆ ಒಬ್ಬಳೇ ಎಲ್ಲಿಗೆ ಹೋಗುತ್ತೀ, ಕುಮುದಾ?"

"ಮುಂಬಯಿಗೆ ಹಿಂತಿರುಗುತ್ತೇನೆ."

"ಹೀಗೆ ಮಾಡುವುದಕ್ಕೆ ನನ್ನ ಜೊತೆಗೆ ಬಂದೆಯಾ?"

ಕುಮುದಾ ಉತ್ತರ ಕೊಡದೆ ಸುಮ್ಮನಿದ್ದಳು. ಮಧುಸೂದನ ಅವಳ ಕೆನ್ನೆಯನ್ನು ನೇವರಿಸುತ್ತ,

"ನಿನಗೆ ಬೇಡವಾದರೆ ನಾನೂ ಹೋಗುವುದಿಲ್ಲ."

"ಇಲ್ಲ, ನೀವು ಹೋಗಿ ಬನ್ನಿ."

"ನಾನೊಬ್ಬನೇ ಹೋಗುವುದಕ್ಕೆ ಈ ಪ್ರವಾಸ ಕೈಗೊಳ್ಳಬೇಕಾಗಿತ್ತೆ?"

ಕುಮುದಾ ಒಂದು ಗಳಿಗೆ ಯೋಚಿಸಿದಳು. ಅವಳ ಮನಸ್ಸಿಗೆ ಏನೋ ಹೊಳೆಯಿತು.

"ದೆಹಲಿಗೆ ಹೋದರೆ ನಾವಿಬ್ಬರೂ ಒಟ್ಟಿಗೆ ಇರುವುದಕ್ಕಾಗುವುದಿಲ್ಲ."

"ಏತಕ್ಕೆ?"

"ಅದು ಚೆನ್ನಾಗಿರುವುದಿಲ್ಲ. ನೋಡಿದವರು ಏನಾದರೂ ತಿಳಿದುಕೊಳ್ಳುತ್ತಾರೆ."

"ಬೇರೆ ಬೇರೆ ಕಡೆ ಇಳಿದುಕೊಂಡರಾಯಿತು."

"ಅದು ಕಷ್ಟ. ಅದಕ್ಕೇ ನಾನು ಬೇಡವೆಂದೆ."

"ಕಷ್ಟವೂ ಇಲ್ಲ ಏನೂ ಇಲ್ಲ, ಸುಮ್ಮನಿರು. ದೆಹಲಿಯಲ್ಲಿ ಊಟ ವಸತಿಗಳಿಗೆ ತೊಂದರೆಯೆ? ಇಲ್ಲಿಂದಲೇ ವೈರ್ ಮಾಡಿದರಾಯಿತು. ಅದಕ್ಕೇತಕ್ಕೆ ಇಷ್ಟು ಯೋಚಿಸಬೇಕು?"

ಎಂದ. ಆ ಮಾತು ಕೇಳಿ ಕುಮುದನಿಗೆ ಸಮಾಧಾನವಾಯಿತು. ಕ್ಷಣ ಹಿಂದೆ ಅವಳ ಮನಸ್ಸನ್ನಾವರಿಸಿದ್ದ ದುಗುಡದ ಮೋಡ ಜಾರಿತು. ದೆಹಲಿಯ ಪ್ರಯಾಣ ನಿಶ್ಚಯವಾಯಿತು.

೨೨

ಮೀನಾಕ್ಷಮ್ಮನವರ ಮನಸ್ಸಿಗೆ ಚಿಂತೆ ತಪ್ಪಿರಲಿಲ್ಲ.

ಮೊದಲು ಮೊದಲು ಅವರು ಯಾವುದನ್ನೂ ಅಷ್ಟಾಗಿ ಹಚ್ಚಿಕೊಂಡಿರಲಿಲ್ಲ. ಲಲಿತನ ವಿರೋಧಕ್ಕೂ ಅವರು ತಮ್ಮ ಮನಸ್ಸಿನಲ್ಲಿ ಒಂದು ಕಾಲಮಿತಿಯನ್ನು ಕಲ್ಪಿಸಿದ್ದರು. ಹುಡುಗಿ ನಾಲ್ಕು ದಿವಸ ಹಟ ಮಾಡುವುದೂ ಸಹಜವೆಂದೇ ಅವರಿಗೆ ತೋರಿತ್ತು. ಆ ಕಾರಣದಿಂದಲೇ ಅವರು ಮಗಳ ಬಗೆಗೆ ಅಸಮಾಧಾನ ತೋರಿಸದೆ ಅನುಕಂಪದಿಂದಲೇ ವರ್ತಿಸಿದ್ದರು. ಗಂಡ ಕೋಪಿಸಿಕೊಂಡಾಗ ಅವರ ಕೋಪಕ್ಕೆ ತಾವೇ ಎದುರಾಗಿ ನಿಂತು ಮಗಳ ಪಕ್ಷ ವಹಿಸಿ ಮಾತಾಡಿದ್ದರು. ತಮ್ಮ ಸದ್ಭಾವನೆ ಕಾಲಕ್ರಮದಲ್ಲಿ ಮಗಳ ಮನೋಪರಿವರ್ತನೆಗೆ ಕಾರಣವಾದೀತೆನ್ನುವ ನಿರೀಕ್ಷೆ ಅವರಿಗಿತ್ತು.

ಆದರೆ ಆ ನಿರೀಕ್ಷೆ ಸಫಲವಾಗಿರಲಿಲ್ಲ. ಲಲಿತನ ಮನೋಭಾವದಲ್ಲಿ ಯಾವ ವ್ಯತ್ಯಾಸವೂ ಕಂಡುಬಂದಿರಲಿಲ್ಲ. ಅದನ್ನರಿತು ಮೀನಾಕ್ಷಮ್ಮನವರ ಮನಸ್ಸಿಗೆ ವ್ಯಾಕುಲವಾಗಿತ್ತು.

ನೆರೆಹೊರೆಯವರು ಹೋದಾಗ ಬಂದಾಗ ಲಲಿತನ ಮದುವೆಯ ಪ್ರಸ್ತಾಪ ಮಾಡುತ್ತಿದ್ದರು. ಸ್ವಾಮಿನಾಥನ್, ಕೇಶವಪ್ಪ, ಮುತ್ತುಸ್ವಾಮಿಯವರ ಮನೆಯವರು ಬಂದರಂತೂ ಸುಮ್ಮನಿರುತ್ತಲೇ ಇರಲಿಲ್ಲ.

"ಏನ್ರಿ ಮೀನಾಕ್ಷಮ್ಮನವರೇ, ಯಾವಾಗ ನಮಗೆ ಮದುವೆಯ ಊಟ?"

ಎಂದು ಮಾತಿಗೆ ಮೊದಲೇ ಪ್ರಾರಂಭಿಸುತ್ತಿದ್ದರು.

"ಯಾವಾಗಲೋಮ್ಮ, ಅವಳನ್ನೇ ಕೇಳಿ"

ಎಂದು ಮೀನಾಕ್ಷಮ್ಮನವರು ಲಲಿತನ ಕಡೆ ಕೈ ತೋರಿಸುತ್ತಿದ್ದರು.

ಅವಳು ಒಂದು ತುಟಿ ಎರಡು ಮಾಡುತ್ತಿರಲಿಲ್ಲ. ಬಂದವರಿಗೆಲ್ಲ ಉತ್ತರ ಕೊಟ್ಟು ಕೊಟ್ಟು ಮೀನಾಕ್ಷಮ್ಮನವರಿಗೂ ಬೇಸರವಾಗುತ್ತಿತ್ತು. ಕಾಲ ಬಂದಾಗ ತಾನೇ ಆಗುತ್ತದೆ, ನಾನೇಕೆ ಸುಮ್ಮನೆ ಧಾವಂತಪಡಲಿ ಎಂದು ತಮಗೆ ತಾವೇ ಹೇಳಿಕೊಂಡು ಸಮಾಧಾನ ಪಡೆಯಲೆತ್ನಿಸುತ್ತಿದ್ದರು. ಆದರೂ ಹಾಳು ಮನಸ್ಸು ಕೇಳದೆ ಸುಮ್ಮನೆ ತುಡುಚುತ್ತಿತ್ತು.

ನಟರಾಜ ಅಯ್ಯರರಂತೂ ಯಾವ ಮಾತಿಗೂ ಬರುತ್ತಿರಲಿಲ್ಲ. ತಮ್ಮ ಪಾಡಿಗೆ ತಾವು ಇದ್ದುಬಿಟ್ಟಿದ್ದರು. ಲಲಿತನ ವಿಷಯದಲ್ಲಿ ಅವರೇನೋ ಒಂದು ಬಗೆಯ ತಾತ್ಸಾರದಿಂದಲೇ ಇದ್ದರು. ಅವಳೊಡನೆ ಹೆಚ್ಚು ಮಾತಿಗೇ ಹೋಗುತ್ತಿರಲಿಲ್ಲ. ಅವರ ಮನಸ್ಸು ಮಗಳ ಬಗೆಗೆ ಮೊದಲು ತೋರುತ್ತಿದ್ದ ಮಾರ್ದವವನ್ನು ಕಳೆದುಕೊಂಡಿತ್ತು.

ಗಂಡನ ಅನಾದರಣೆ ನೋಡಿ ಮೀನಾಕ್ಷಮ್ಮನವರಿಗೆ ಮತ್ತಷ್ಟು ವ್ಯಾಕುಲವಾಗುತ್ತಿತ್ತು. ಮನಸ್ಸಿಗೆ ಬೇಸರವಾದಾಗ ಒಮ್ಮೊಮ್ಮೆ ಅವರ ಮೇಲೆಯೇ ತಿರುಗಿಬೀಳುತ್ತಿದ್ದರು.

" ನೀವೂ ಹೀಗೆ ಸುಮ್ಮನಿದ್ದುಬಿಟ್ಟರೆ ಹೇಗೆ ಅಂದ್ರೆ ?"

" ಇನ್ನೇನು ಮಾಡಬೇಕು, ಹೇಳು ?"

" ಅವಳಿಗೊಂದು ಮಾತು ಹೇಳಬಾರದೆ ?"

" ನೀನು ಹೇಳುತ್ತಿರುವುದು ಸಾಲದೇನು ?"

" ನಾನು ಹೇಳುವುದಕ್ಕೂ ನೀವು ಹೇಳುವುದಕ್ಕೂ ವ್ಯತ್ಯಾಸ."

" ನಾನು ಹೇಳಿದಾಗ ಅವಳು ಕೊಟ್ಟ ಗೌರವವೇನು ? ಒಂದು ಸಲ ಆದ ಅಪಮಾನ ಸಾಲದೆನ್ನುತ್ತೀಯಾ ?"

" ನೀವು ಅದನ್ನೇ ಹಿಡಿದುಕೊಂಡು ಕುಳಿತುಬಿಟ್ಟರೆ ಹೇಗೆ, ಹೇಳಿ ? ಹುಡುಗಿ, ಅವಳ ಮೇಲೆ ನಿಮಗೇನು ಜೋಡಿ ?"

" ಜೋಡಿಯೂ ಇಲ್ಲ, ಏನೂ ಇಲ್ಲ. ಅವಳಿಗಾಗಿ ಯಾವಾಗ ಬುದ್ಧಿ ಬರತ್ತೋ ಬರಲಿ ಬಿಡು. ನೀನೂ ಸುಮ್ಮನೆ ಏಕೆ ಒದ್ದುಕೊಳ್ಳುತ್ತೀ ?"

ಎಂದು ತಟಸ್ಥರಾಗಿ ಬಿಡುತ್ತಿದ್ದರು. ಅವರ ನಿರಾಸಕ್ತಿ ನೋಡಿ ಮೀನಾಕ್ಷಮ್ಮನವರಿಗೆ ವ್ಯಥೆಯಾಗುತ್ತಿತ್ತು.

ಆದರೆ ಅಯ್ಯರರು ಉದಾಸೀನವಾಗಿಯೇ ಇರಲು ಸಾಧ್ಯವಿರಲಿಲ್ಲ. ಅವರ ತಾತ್ಸಾರವನ್ನು ಹಿಡಿದು ಅಲುಗಿಸುವಂಥ ಘಟನೆ ಒಂದು ದಿನ ನಡೆಯಿತು.

ಅವೊತ್ತು ಬೆಳಗ್ಗೆ ಲಲಿತ ಕನಕಾಂಗಿ ಮನೆಯ ಮುಂದಿನ ತೋಟದಲ್ಲಿ ಹಲಸಿನ ಗಿಡಕ್ಕೆ ಕಟ್ಟಿದ್ದ ಉಯ್ಯಲೆಯ ಮೇಲೆ ಕುಳಿತು ಏನೋ ಮಾತಾಡುತ್ತಿದ್ದರು. ಮಾಲಿ ಕಾಂಪೌಂಡಿನ ಹತ್ತಿರ ಹಬ್ಬಿದ್ದ ಹೂವಿನ ಬಳ್ಳಿಗಳನ್ನು ಕತ್ತರಿಸಿ ಸರಿಮಾಡುತ್ತಿದ್ದ. ಮನೆಗೆಲಸದ ಆಳು ಹೂವಿನ ಗಿಡದ ಪಾತೆಗಳಿಗೆ ನೀರು ಹಾಕುತ್ತಿದ್ದ.

ಉಯ್ಯಲೆ ಮೆಲ್ಲನೆ ತೂಗುತ್ತಿತ್ತು. ಲಲಿತ ಒಂದು ಕೈಯಲ್ಲಿ ಅದರ ಸರಪಳಿ ಹಿಡಿದುಕೊಂಡಿದ್ದಳು. ಮಾತಾಡುತ್ತಿದ್ದ ಹಾಗೇ ಅವಳ ಮುಖದ ಮೇಲೆ ಏನೋ ವೇಧನೆ ಕಾಣಿಸಿಕೊಂಡಿತು.

"ಕನಕಾ, ಏನೋ ಸಂಕಟವಾಗತ್ತಲ್ಲೇ"

ಎನ್ನುತ್ತ ತೋಳಿನ ಮೇಲೆ ತಲೆ ಒರಗಿಸಿದಳು.

"ಏಕಮ್ಮಾ, ಏನಾಗತ್ತೆಯೇ?"

ಎಂದು ಕನಕಾಂಗಿ ಕೇಳುತ್ತ ಲಲಿತನ ಭುಜದ ಮೇಲೆ ಕೈ ಹಾಕಿದಳು. ಆದರೆ ಅಷ್ಟರಲ್ಲೇ ಅವಳ ದೇಹ ಹಿಂದೆ ತೂಗಿತು. ಕನಕಾಂಗಿಯ ಆಸರೆ ಸಾಲದೆ ಲಲಿತ ಕೆಳಗುರುಳಿದಳು.

"ಅಯ್ಯೋ"

ಎಂದು ಕನಕಾಂಗಿ ಗಾಬರಿಯಾಗಿ ಕೂಗುತ್ತ ಉಯ್ಯಾಲೆ ಬಿಟ್ಟೆದ್ದು ಬಂದು ಲಲಿತನ ಭುಜಕ್ಕೆ ಕೈಕೊಟ್ಟು ಎಬ್ಬಿಸಲೆತ್ನಿಸಿದಳು. ಆದರೆ ಅವಳ ಕೈಯಲ್ಲಿ ಅವಳನ್ನೆತ್ತಲು ಸಾಧ್ಯವಾಗಲಿಲ್ಲ.

"ಮಾಲಿ, ಮಾಲಿ. ಬೇಗ ಬಾ. ಅಮ್ಮಾವರನ್ನು ಕರಿ."

ಕೂಗು ಕೇಳಿ ಮಾಲಿ, ಆಳು ಇಬ್ಬರೂ ಓಡಿ ಬಂದರು. ವರಾಂಡದಲ್ಲಿ ಪತ್ರಿಕೆ ಓದುತ್ತ ಕುಳಿತಿದ್ದ ಅಯ್ಯರರು,

"ಯಾರು, ಏನಾಯಿತು?"

ಎನ್ನುತ್ತ ಧಾವಿಸಿ ಬಂದರು. ಲಲಿತ ಪ್ರಜ್ಞೆ ತಪ್ಪಿ ಬಿದ್ದಿದ್ದುದನ್ನು ಕಂಡು ಅವರಿಗೆ ಗಾಬರಿಯಾಯಿತು.

"ಏಕೆ, ಏನಾಯಿತು? ಲಲಿತಾ, ಲಲಿತಾ"

ಎಂದು ಕೂಗುತ್ತ ಅವಳ ಮೈಮುಟ್ಟಿ ಅಲ್ಲಾಡಿಸಿದರು. ಲಲಿತ ಅರೆಗಣ್ಣು ತೆರೆದುಕೊಂಡಿದ್ದಳು; ಉಸಿರು ಮೆಲ್ಲನೆ ಆಡುತ್ತಿತ್ತು; ಮೈಯೆಲ್ಲ ಬೆವತು ಒದ್ದೆಯಾಗಿತ್ತು. ಅಯ್ಯರರು ಸೊಸೆಯ ಕಡೆ ನೋಡಿ,

"ತಲೆ ತಿರುಗಿ ಬಿದ್ದಳೇ ಅಮ್ಮಾ?"

"ಏನಾಯಿತೋ ಗೊತ್ತಿಲ್ಲ. ಏನೋ ಸಂಕಟ ಅಂದಳು. ನಾನು ಹಿಡಿದುಕೊಳ್ಳುವುದರಲ್ಲಿ ಬಿದ್ದುಬಿಟ್ಟಳು"

ಎಂದು ಕಂಬನಿದುಂಬಿದಳು.

"ಅಮ್ಮಾವರನ್ನ ಕರೆಯೋ"

ಎಂದು ಅಯ್ಯರರು ಆಳಿಗೆ ಹೇಳಿ, ಮಾಲಿ ಹತ್ತಿರ ತಂದಿಟ್ಟಿದ್ದ ಮಡಕೆಯಿಂದಲೇ ನೀರನ್ನು ತೆಗೆದುಕೊಂಡು ಲಲಿತನ ಕಣ್ಣು ಹಣೆಯ ಮೇಲೆ ಚಿಮುಕಿಸಲಾರಂಭಿಸಿದರು.

ಹಿತ್ತಿಲ ಕಡೆ ಇದ್ದ ಮೀನಾಕ್ಷಮ್ಮನವರಿಗೆ ಆಳು ಕೊಟ್ಟ ಸುದ್ದಿ ಕೇಳಿ ಎದೆಗೆ ಹಾರೆ ಹಾಕಿದಂತಾಯಿತು.

"ಏನಾಯಿತು, ಏನಾಯಿತು? ಲಲಿತಾ ಏನು ಮಾಡುತ್ತಾಳೆ?"

ಎಂದು ನುಡಿಯುತ್ತ ಏಳುವುದನ್ನೂ ಬೀಳುವುದನ್ನೂ ಕಾಣದೆ ಓಡಿ ಬಂದರು.

"ಗಾಬರಿಯಾಗಬೇಡ. ನಿಧಾನವಾಗಿ ಬಾ. ಎಲ್ಲೋ ಸ್ವಲ್ಪ ಬವಳಿ ಬಂದ ಹಾಗಾಗಿರಬೇಕು"

ಎಂದು ಅಯ್ಯರರು ಸಮಾಧಾನ ಹೇಳಿದರು. ಮೀನಾಕ್ಷಮ್ಮನವರು ಮಗಳ ಹತ್ತಿರ ಕುಳಿತು ಅವಳ ತಲೆಯನ್ನು ಕನಕಾಂಗಿಯ ತೊಡೆಯಿಂದ ತಮ್ಮ ತೊಡೆಗೆ ಮೆಲ್ಲನೆ ಜರುಗಿಸಿಕೊಂಡು,

"ಅಮ್ಮಾ ಲಲಿತಾ, ಕಣ್ಣು ಬಿಡೇ"

ಎನ್ನುತ್ತ ಗದ್ಗದಕಂಠರಾದರು.

"ನೀನೇಕೆ ಸುಮ್ಮನೆ ಗಾಬರಿಯಾಗುತ್ತೀಯೆ? ಅವಳು ಸುಧಾರಿಸಿಕೊಳ್ಳುವುದಕ್ಕೆ-ಸ್ವಲ್ಪ ಅವಕಾಶ ಕೊಡು. ಒಳಗೆ ಕರೆದುಕೊಂಡು ಹೋಗಿ ಮಲಗಿಸೋಣ. ನೀವಿಬ್ಬರೂ ಸ್ವಲ್ಪ ಹಿಡಿದುಕೊಳ್ಳಿ"

ಎಂದು ನುಡಿದರು. ಮೀನಾಕ್ಷಮ್ಮ ಕನಕಾಂಗಿ ಲಲಿತನ ಎರಡು ಭುಜಕ್ಕೂ

ಕೈಕೊಟ್ಟು ಮೆಲ್ಲನೆ ಎತ್ತಿಕೊಂಡರು. ಅಯ್ಯರರು ಕಾಲಿನ ಕಡೆ ಹಿಡಿದು ಕೊಂಡರು. ಮೂವರೂ ಸೇರಿ ಅಲ್ಲಾಡಿಸದ ಹಾಗೆ ಎತ್ತಿಕೊಂಡು ಬಂದು ಮುಂದುಗಡೆಯ ರೂಮಿನಲ್ಲಿ ಮಲಗಿಸಿದರು. ತಾವೇನೂ ಸಹಾಯ ಮಾಡ ಲಾರೆವಲ್ಲಾ ಎಂದು ಆಳುಗಳು ಪೆಚ್ಚುಮುಖ ಹಾಕಿಕೊಂಡು ನಿಂತಿದ್ದರು. ಅಯ್ಯರರು ರೂಮಿನ ಕಿಟಕಿಯ ಬಾಗಿಲುಗಳನ್ನೆಲ್ಲಾ ದೊಡ್ಡದಾಗಿ ತೆಗೆದು ಬಿಟ್ಟರು.

ಲಲಿತನಿಗೆ ಇನ್ನೂ ಜ್ಞಾನ ಬಂದಿರಲಿಲ್ಲ.

"ಡಾಕ್ಟರಿಗೆ ಹೇಳಿ ಕಳಿಸಿ ಅಂದ್ರೆ. ಎಷ್ಟು ಹೊತ್ತಾದರೂ ಜ್ಞಾನ ಬಂದಿಲ್ಲ"

ಎಂದು ಮೀನಾಕ್ಷಮ್ಮನವರು ಭಯವಿಹ್ವಲರಾಗಿ ನುಡಿದರು. ಅವರ ಮನಸ್ಸು ಹಲವು ದೇವರಿಗೆ ಹರಕೆ ಕಟ್ಟುತ್ತಿತ್ತು. ಅಯ್ಯರರು ಆಳಿಗೆ ಸೈಕಲ್ ಕೊಟ್ಟು ಡಾ. ಪಿಳ್ಳೆಯವರ ಮನೆಗೆ ಓಡಿಸಿದರು. ಕಾಲು ಘಂಟೆಯಲ್ಲಿ ಡಾ. ಪಿಳ್ಳೆ ಬಂದರು.

"ಏನು ಸಮಾಚಾರ, ಏನಾಗಿದೆ?"

"ನೀವೇ ನೋಡಿ"

ಎಂದು ಅಯ್ಯರ್ ಲಲಿತನ ಕಡೆ ಕೈ ತೋರಿಸಿ ಕುರ್ಚಿ ಬಿಟ್ಟಿದ್ದರು. ಪಿಳ್ಳೆಯವರು ಕಿವಿಗೆ ಸ್ಟೆತಾಸ್ಕೋಪ್ ಸಿಕ್ಕಿಸಿಕೊಂಡು ಲಲಿತನ ಹೃದಯ ಶ್ವಾಸ ಕೋಶಗಳ ಚಲನೆಯನ್ನು ಆಲಿಸಿದರು. ರೆಪ್ಪೆ ಬಿಡಿಸಿ ಕಣ್ಣಾಲಿಯನ್ನು ಸೂಕ್ಷ್ಮ ವಾಗಿ ಪರೀಕ್ಷಿಸಿದರು.

"ದೇಹಸ್ಥಿತಿ ದುರ್ಬಲವಾಗಿದೆ. ಸಾಧ್ಯವಾದಷ್ಟೂ ಆಯಾಸಪಡಿಸದ ಹಾಗೆ ನೋಡಿಕೊಳ್ಳಿ."

"ಇದ್ದಕ್ಕಿದ್ದ ಹಾಗೆ ಹೀಗಾಗಲು ಕಾರಣವೇನು, ಡಾಕ್ಟರೇ?"

"ನರಗಳ ದೌರ್ಬಲ್ಯದಿಂದ ಹೀಗಾಗುವುದುಂಟು. ಮನಸ್ಸಿನ ಮೇಲಾಗುವ ಮಿತಿಮೀರಿದ ಆಘಾತವೂ ಪ್ರಜ್ಞಾಶೂನ್ಯತೆಗೆ ಕಾರಣವಾಗು ತ್ತದೆ. ಒಂದೊಂದು ವೇಳೆ ಹಾಗೆ ಹೋದ ಜ್ಞಾನ ಮರಳಿ ಬಾರದಿರುವುದೂ ಉಂಟು."

"ಅಯ್ಯೋ, ಇನ್ನೇನು ಗತಿ"

ಎಂದು ಮೀನಾಕ್ಷಮ್ಮನವರು ಹೌಹಾರಿ ಕುಳಿತರು. ಅವರ ಕೈ ಅನೈಚ್ಛಿಕ ವಾಗಿ ಲಲಿತನ ತಲೆಯನ್ನು ನೇವರಿಸುತ್ತಿತ್ತು.

"ಅಂಥ ಗಾಬರಿಗೆ ಕಾರಣವಿಲ್ಲಮ್ಮ. ನಿಮ್ಮ ಮಗಳಿಗೆ ಇನ್ನು ಹತ್ತು ನಿಮಿಷದಲ್ಲಿ ಜ್ಞಾನ ಬರುತ್ತದೆ, ನೋಡಿ"

ಎಂದು ಪಿಳ್ಳೆಯವರು ಒಂದು ಇಂಜೆಕ್ಷನ್ ಕೊಟ್ಟು ತಮ್ಮ ರಿಸ್ಟ್‌ವಾಚ್ ನೋಡುತ್ತ ಅಲ್ಲೇ ಕುಳಿತರು.

ಹತ್ತು ನಿಮಿಷ ಕಳೆಯಿತು. ಲಲಿತ ಪಟಪಟನೆ ಎರಡು ಸಲ ರೆಪ್ಪೆ ಹೊಯ್ದು ನಿಧಾನವಾಗಿ ಕಣ್ಣು ತೆರೆದಳು. ಆಯಾಸವನ್ನು ಸೂಚಿಸುವಂತೆ ದೀರ್ಘವಾಗಿ ಉಸಿರ್ಗರೆದಳು. ಡಾಕ್ಟರು ಅವಳನ್ನು ಮತ್ತೊಮ್ಮೆ ಪರೀಕ್ಷಿಸಿ ಔಷಧಿ ಅನುಪಾನಗಳ ಬಗೆಗೆ ಸೂಚನೆಯಿತ್ತು ಹೊರಟುಹೋದರು.

"ಅಮ್ಮಾ"

ಎಂದು ಲಲಿತ ಹಾಸುಗೆಯಲ್ಲಿ ಹೊರಳಾಡಿದಳು.

"ಏನಾಗಿತ್ತು ಕಂದಾ? ಮೈ ಕೈಗೆ ಪೆಟ್ಟು ಬಿತ್ತೇನೆ?"

ಎಂದು ಮೀನಾಕ್ಷಮ್ಮನವರು ಆತಂಕದ ಧ್ವನಿಯಲ್ಲಿ ಕೇಳಿದರು.

"ಇಲ್ಲಮ್ಮ. ಏನೋ ತಲೆ ಸುತ್ತಿ ಬಂದ ಹಾಗಾಯಿತು, ಅಷ್ಟೆ"

ಎಂದು ಲಲಿತ ನುಡಿದು ಕೈಯನ್ನು ತಲೆಯ ಮೇಲಿಟ್ಟುಕೊಂಡಳು.

ಎರಡು ದಿನ ಎರಡು ರಾತ್ರಿ ಅವಳನ್ನು ಮಗುವಿನಂತೆ ನೋಡಿಕೊಳ್ಳ ಬೇಕಾಯಿತು. ಡಾಕ್ಟರ್ ಬಂದು ಪರೀಕ್ಷಿಸಿ ಒಂದು ಟಾನಿಕ್ ಬರೆದು ಕೊಟ್ಟು ಹೋದರು. ಅಯ್ಯರರಂತೂ ದಿನಕ್ಕೆ ಹತ್ತು ಸಲ ರೂಮಿನೊಳಗೆ ಬಂದು ದೇಹ ಸ್ಥಿತಿ ವಿಚಾರಿಸಿ ಹೋಗುತ್ತಿದ್ದರು. ಅವಳ ಆರೋಗ್ಯ ಅಷ್ಟು ಸೂಕ್ಷ್ಮವಾಗಿದೆ ಯೆಂದು ತಿಳಿದು ಅವರಿಗೆ ಆಶ್ಚರ್ಯವಾಗಿತ್ತು. ಲಲಿತನಿಗೆ ನರಗಳ ದೌರ್ಬಲ್ಯವೆ? ಅವಳ ಮನಸ್ಸಿಗೆ ಚಿಂತೆಯೆ? ಅಂಥ ಕಾರಣ ಯಾವುದು? ಡಾಕ್ಟರು ಆಡಿದ ಮಾತು ಅಯ್ಯರರಿಗೆ ಅರ್ಥವಾಗುವ ಹಾಗಿರಲಿಲ್ಲ.

ಕನಕಾಂಗಿಯಂತೂ ರೂಮು ಬಿಟ್ಟು ಹೋಗುತ್ತಲೇ ಇರಲಿಲ್ಲ. ಸ್ನಾನ ಪಾನಗಳಿಗೆ ಒಂದು ಗಳಿಗೆ ಹೇಗೆ ಹೋಗಿ ಬರುತ್ತಿದ್ದಳೋ ಉಳಿದ ಸಮಯ ಗಳಲ್ಲಿ ಲಲಿತನ ಮಗ್ಗುಲನ್ನು ಬಿಟ್ಟು ಅಲ್ಲಾಡುತ್ತಲೇ ಇರಲಿಲ್ಲ. ಲಲಿತನ ಔಷಧಿ ಅನುಪಾನಗಳ ಹೊಣೆ ಅವಳ ಮೇಲೇ ಬಿದ್ದಿತ್ತು. ಔಷಧಿ ಕುಡಿಯು

ವುದಿಲ್ಲವೆಂದು ತಂಟೆ ಮಾಡುತ್ತಿದ್ದ ಲಲಿತನನ್ನು ಮಗುವನ್ನು ರಮಿಸುವಂತೆ ರಮಿಸಿ ಕನಕಾಂಗಿ ಔಷಧಿ ಕುಡಿಸುತ್ತಿದ್ದಳು.

"ಕನಕಾ, ನನಗೇನಾಗಿದೆಯೆ ಈ ಹಾಳು ಔಷಧಿ ಕುಡಿಯುವುದಕ್ಕೆ?"

"ಏನೂ ಇಲ್ಲ, ನೀನು ಸುಮ್ಮನೆ ಕುಡಿ."

"ತುಂಬ ಕಹಿ ಕಣೇ."

"ಸಕ್ಕರೆ ಕೊಡುತ್ತೇನೆ, ಕುಡಿ"

ಎಂದು ಅವಳ ಬಾಯೊಳಗೆ ಪೆಪ್ಪರ್‌ಮೆಂಟ್ ಹಾಕುತ್ತಿದ್ದಳು. ಲಲಿತ ಕೃತಜ್ಞತೆಯಿಂದ ಕನಕಾಂಗಿಯ ಕೈ ಹಿಡಿದುಕೊಳ್ಳುತ್ತಿದ್ದಳು; ಅವಳ ಕಣ್ಣು ಸ್ನೇಹದಿಂದ ಒದ್ದೆಯಾಗುತ್ತಿತ್ತು.

"ಕನಕಾ, ನೀನು ಊರಿಗೆ ಹೊರಟುಹೋದರೆ ನಾನೊಬ್ಬಳೇ ಹೇಗೆ ಇರಲಿ?"

"ಮೊದಲಿನಿಂದಲೂ ನಾನೇ ಇದ್ದೇನೇನೆ, ಲಲಿತಾ?"

"ನಾನು ನಿನ್ನನ್ನು ಬಿಟ್ಟಿರಲಾರೆನಮ್ಮ"

ಎಂದು ಕಂಬನಿದುಂಬುತ್ತಿದ್ದಳು. ಕನಕಾಂಗಿ ಕುಚೇಷ್ಟೆ ಮಾಡುತ್ತ,

"ಹಾಗಾದರೆ ನನ್ನನ್ನೇ ಮದುವೆ ಮಾಡಿಕೊಂಡು ಬಿಡು"

ಎನ್ನುತ್ತಿದ್ದಳು. ಲಲಿತನ ಕಂಬನಿಯ ತೆರೆಯ ಹಿಂದೆ ಕಿರುನಗೆ ಮಿಂಚುತ್ತಿತ್ತು.

ಕನಕಾಂಗಿಯೂ ಅನಿರ್ದಿಷ್ಟವಾಗಿ ಮದರಾಸಿನಲ್ಲಿ ನಿಲ್ಲುವ ಹಾಗಿರಲಿಲ್ಲ. ಸಾಧ್ಯವಾದರೆ ಗೌರೀಹಬ್ಬದ ಹೊತ್ತಿಗೆ ಮಗಳನ್ನು ಕಳಿಸಿಕೊಡಬೇಕೆಂದು ಸುಂದರಂ ಅಯ್ಯರರು ಬೀಗರಿಗೆ ಬರೆದಿದ್ದರು. ಶಿವಸ್ವಾಮಿ ಊರಿನಲ್ಲಿಲ್ಲದೆ ಇರುವಾಗ ತಿಂಗಳುಗಟ್ಟಲೆ ಸೊಸೆಯನ್ನು ನಿಲ್ಲಿಸಿಕೊಳ್ಳುವುದರಲ್ಲಿ ಅರ್ಥವಿಲ್ಲವೆನ್ನುವುದನ್ನು ನಟರಾಜ ಅಯ್ಯರರೂ ಮನಗಂಡಿದ್ದರು.

ಲಲಿತನ ರಹಸ್ಯವನ್ನು ಪಾಲುಗೊಂಡಿದ್ದ ಕನಕಾಂಗಿಯ ಮನಸ್ಸಿಗೂ ನೆಮ್ಮದಿಯಿರಲಿಲ್ಲ. ಅವಳು ಮುಂಬಯಿಗೆ ಗಿರಿಜೆಗೆ ಬರೆದಿದ್ದ ಕಾಗದಕ್ಕೆ ಉತ್ತರವೇ ಬಂದಿರಲಿಲ್ಲ. ಅವಳ ಗಂಡನಿಗೆ ಮಧುಸೂದನನ ನೆಲೆ ಸಿಕ್ಕಿತ್ತೋ ಇಲ್ಲವೋ ಎನ್ನುವುದು ಕೂಡ ತಿಳಿಯುವ ಹಾಗಿರಲಿಲ್ಲ.

ಚಿಂತೆ ಮಾಡಬೇಡವೆಂದು ಕನಕಾಂಗಿ ಎಷ್ಟು ಹೇಳಿದರೂ ಲಲಿತ ಕೇಳು

ತ್ತಲೇ ಇರಲಿಲ್ಲ. ಕನಕಾಂಗಿ ಕೋಪಿಸಿಕೊಂಡರೆ ಹೇಗೋ ನಾಲ್ಕು ಮಾತು ಆಡುತ್ತ ಒಂದು ಗಳಿಗೆ ಯೋಚನೆ ಮರೆತಿರುತ್ತಿದ್ದಳು. ಮತ್ತೆ ದುಗುಡದ ಮೋಡ ಆವರಿಸಿ ಅವಳ ಮನಸ್ಸು ಚಿಂತೆಯ ಚಿಪ್ಪಿನಲ್ಲಿ ಸೇರಿಕೊಳ್ಳುತ್ತಿತ್ತು. ಅದರಿಂದ ಅವಳನ್ನು ಈಚೆಗೆ ಎಳೆತರುವುದು ಕನಕಾಂಗಿಗೂ ಕಷ್ಟವಾಗಿತ್ತು.

ಆ ಹೆಣ್ಣು ಜೀವ ಒಂದೇ ಸಮನಾಗಿ ದುಃಖದಲ್ಲಿ ಬೇಯುತ್ತಿತ್ತು. ಕನಕಾಂಗಿ ನಿಸ್ಸಹಾಯಕಳಾಗಿ ಅದನ್ನು ನೋಡುತ್ತಲೇ ಇದ್ದಳು.

೨೩

ಆಗ್ರಾ ರೈಲು ನವದೆಹಲಿಯ ನಿಲ್ದಾಣ ತಲಪಿದಾಗ ಮಧುಸೂದನನನ್ನು ಎದುರುಗೊಳ್ಳಲು ಕನ್ನಡ ಸಂಘದ ಅಧ್ಯಕ್ಷ ಶ್ರೀಧರಮೂರ್ತಿ, ಅವರ ಮಡದಿ ವಿಮಲಾ, ದಕ್ಷಿಣ ಭಾರತೀಯರ ಸಂಘದ ಸಂಚಾಲಕ ನರಸಿಂಹನ್ ಮತ್ತು ಹಲವು ಮಂದಿ ಕನ್ನಡ ಗೆಳೆಯರು ಕಾದಿದ್ದರು. ರೈಲು ನಿಂತೊಡನೆಯೆ ಸುದರ್ಶನರೊಡಗೂಡಿ ಕೆಳಗಿಳಿದ ಮಧುಸೂದನನನ್ನು ಶ್ರೀಧರಮೂರ್ತಿ ಮೊದಲು ಸ್ವಾಗತಿಸಿ ಹಾರ ಹಾಕಿದರು. ದೆಹಲಿಯಲ್ಲಿರುವ ದಕ್ಷಿಣ ಭಾರತೀಯರ ಪರವಾಗಿ ನರಸಿಂಹನ್ ಹಾರ ಅರ್ಪಿಸಿ ಸ್ವಾಗತಿಸಿದರು. ಸುದರ್ಶನರು ಮಧುಸೂದನನಿಗೆ ಎಲ್ಲರ ಪರಿಚಯವನ್ನೂ ಮಾಡಿಸಿಕೊಟ್ಟರು.

ಶ್ರೀಧರಮೂರ್ತಿ ಮಧುಸೂದನನನ್ನು ತಮ್ಮ ಕಾರಿನಲ್ಲಿ ಕುಳ್ಳಿರಿಸಿಕೊಂಡು ಜುಮ್ಮಾಮಸೀದಿ ರಸ್ತೆಯಲ್ಲಿದ್ದ ತಮ್ಮ ಮನೆಗೆ ಕರೆದೊಯ್ದರು. ಸುದರ್ಶನರೂ ಅವರ ಜೊತೆಗೂಡಿ ಹೊರಟರು. ನರಸಿಂಹನ್ ಮತ್ತು ಇತರ ಗೆಳೆಯರು ಸಂಜೆ ಮಧುಸೂದನನ್ನು ಭೇಟಿಯಾಗಲು ಚದರಿದರು.

ಅದೇ ರೈಲಿನಲ್ಲಿ ಬಂದಿಳಿದ ಕುಮುದಾ ಮೊದಲೇ ಗೊತ್ತುಮಾಡಿಕೊಂಡಿದ್ದಂತೆ ಟ್ಯಾಕ್ಸಿ ಮಾಡಿಕೊಂಡು ಹಳೆಯ ದೆಹಲಿಯ 'ಸುಖ ನಿವಾಸ'ಕ್ಕೆ ತೆರಳಿದಳು.

ಶ್ರೀಧರಮೂರ್ತಿಗಳು ಮಧುಸೂದನನಿಗೆ ಗೊತ್ತಿಲ್ಲದಂತೆ ಸತ್ಕಾರದ ಏರ್ಪಾಡನ್ನು ಕೈಗೊಂಡಿದ್ದರು. ಸಂಜೆ ಅವರ ಮನೆಗೆ ಬರಲು ದೆಹಲಿಯಲ್ಲಿರುವ ಕೆಲವು ಕನ್ನಡ ಪ್ರಮುಖರಿಗೂ ಸಂಗೀತಗಾರರಿಗೂ ಕಲಾಭಿಮಾನಿಗಳಿಗೂ ಆಹ್ವಾನ ಹೋಗಿತ್ತು. ಆರು ಘಂಟೆಯ ಹೊತ್ತಿಗೆ ಐವತ್ತು ಅರವತ್ತು ಜನಕ್ಕೆ

ಕಡವೆ ಇಲ್ಲದಂತೆ ಗೋಷ್ಠಿ ಸೇರಿಬಿಟ್ಟಿತು. ಅದನ್ನು ನೋಡಿ ಮಧುಸೂದನನಿಗೆ ಅಚ್ಚರಿಯಾಯಿತು.

"ಇಷ್ಟೆಲ್ಲಾ ಏಕೆ ಹಚ್ಚಿಕೊಂಡಿರಿ, ಮೂರ್ತಿಗಳೇ?"

"ಹಚ್ಚಿಕೊಳ್ಳುವಂಥಾದ್ದೇನೂ ಇಲ್ಲ. ಅಂಥ ದೊಡ್ಡ ಏರ್ಪಾಡನ್ನು ನಾವು ಇಟ್ಟುಕೊಂಡೇ ಇಲ್ಲ. ನಾಲ್ಕು ಮಂದಿ ಗೆಳೆಯರು ಒಂದು ಕಡೆ ಸೇರುವುದಕ್ಕೆ ಇದೊಂದು ಅವಕಾಶ, ಅಷ್ಟೆ. ಇಲ್ಲಿನ ಹಲವು ಮಿತ್ರರು ನಿಮ್ಮ ಭೇಟಿಗೆ ಉತ್ಸುಕರಾಗಿದ್ದಾರೆ"

ಎಂದು ಅವನನ್ನು ಒಬ್ಬೊಬ್ಬರಿಗಾಗಿ ಪರಿಚಯ ಮಾಡಿಸುತ್ತ ಬಂದರು.

"ಇವರು ಕಮಲನಾಭಜೋಶಿ. ದೆಹಲಿಯ ಪ್ರಸಿದ್ಧ ಪತ್ರಿಕೋದ್ಯೋಗಿಗಳು ಹಾಗೂ ಕಲಾ ವಿಮರ್ಶಕರು."

"ವಿಮರ್ಶಕರ ಪ್ರಸನ್ನ ದೃಷ್ಟಿ ಸಂಗೀತಗಾರರಿಗೆ ಮುಖ್ಯ"

ಎಂದು ಮಧುಸೂದನ ಮುಗುಳ್ನಗೆಯೊಡನೆ ನುಡಿದ.

"ಆ ಮಾತು ಸಾಮಾನ್ಯರಿಗೆ ಅನ್ವಯಿಸಬಹುದು. ನಿಮ್ಮಂಥ ಕಲಾವಿದರಿಗಲ್ಲ"

ಎಂದು ಜೋಶಿ ಜೋಡಿಸಿದರು. ಮಧುಸೂದನ ವಿನಯದಿಂದ ತಲೆ ಬಾಗಿದ. ಶ್ರೀಧರಮೂರ್ತಿಗಳು ಅವನನ್ನು ಸ್ವಲ್ಪ ಮುಂದೆ ಕರೆದುಕೊಂಡು ಬಂದು ಫೆಜ್ ಟೋಪಿ ಧರಿಸಿ, ರೇಷ್ಮೆಯ ನಿಲುವಂಗಿ ತೊಟ್ಟಿದ್ದ ಅತಿಥಿಯೊಬ್ಬರ ಮುಂದೆ ನಿಂತರು.

"ಇವರ ಪರಿಚಯ ನಿಮಗಿದೆಯೋ ಇಲ್ಲವೋ ಕಾಣೆ. ಇವರು ಆಲಿ ರಸೂಲ್‌ಖಾನ್. ಉಸ್ತಾದ್ ಕರೀಂಖಾನರ ಶಿಷ್ಯರು"

ಎಂದರು. ಆಲಿ ರಸೂಲ್ ಎದ್ದು ನಿಂತು ಗೌರವಭಾವದಿಂದ ಕೈ ಜೋಡಿಸಿದರು. ಮಧುಸೂದನ ಅವರ ಕೈಯನ್ನು ಹಾಗೇ ಹಿಡಿದುಕೊಂಡ. ಅವನಿಗೆ ಅವರ ಪರಿಚಯ ಹೊಸದಾಗಿದ್ದರೂ ಹೆಸರು ಹೊಸದಾಗಿರಲಿಲ್ಲ. ದೆಹಲಿ ಪ್ರಾಂತದಲ್ಲಿ ರಸೂಲ್‌ಖಾನ್ ಕೀರ್ತಿವಂತರಾಗಿದ್ದರು. ಒಂದೆರಡು ಕ್ಷಣ ಇಬ್ಬರೂ ಕುಶಲ ಪ್ರಶ್ನೆ ನಡೆಸಿದರು. ಮಧುಸೂದನ ಅವರೊಡನೆ ಮಾತು ಮುಗಿಸಿ ಮುಂದಕ್ಕೆ ಹೆಜ್ಜೆ ಇಟ್ಟಾಗ ಇನ್ನೊಂದು ಪರಿಚಯ ಕಾದಿತ್ತು.

"ಇವರನ್ನು ನೀವು ಬಲ್ಲಿರಾ? ಇವರು ಗಾನವಿದುಷಿ ರುಕ್ಮಾಯಿ. ಎರಡು ಸಂಪ್ರದಾಯಗಳಲ್ಲೂ ನುರಿತವರು"

ಎಂದು ಶ್ರೀಧರಮೂರ್ತಿ ಹೇಳಿ ಆಕೆಯ ಪರಿಚಯ ಮಾಡಿಸಿದರು. ಟಿಷ್ಯೂ ಸೀರೆಯುಟ್ಟು ತಲೆಯ ಮೇಲೆ ಅರೆಸೆರಗು ಹೊದೆದಿದ್ದ ರುಕ್ಮಾಯಿ ಹಸನ್ಮುಖಳಾಗಿ ಎದ್ದು ನಿಂತು ಕೈಮುಗಿದಳು.

"ನೀವು ಮುಂಬಯಿಯಲ್ಲಿದ್ದಿರಾ?"

"ಸ್ವಲ್ಪ ಕಾಲ ಇದ್ದೆ."

"ನಿಮ್ಮ ಹೆಸರನ್ನು ಕೇಳಿಬಲ್ಲೆ"

ಎಂದ. ಅವನ ದೃಷ್ಟಿ ಅವಳ ಮೇಲೆ ಕ್ಷಣಕಾಲ ನೆಲಸಿತು.

ಪರಿಚಯವೆಲ್ಲವನ್ನೂ ಮುಗಿಸಿ ಕುಳಿತುಕೊಳ್ಳುವುದಕ್ಕೆ ಅರ್ಧ ಘಂಟೆಯ ಹೊತ್ತು ಹಿಡಿಯಿತು. ಮೂರ್ತಿಗಳ ಮನೆಯ ಹಜಾರದಲ್ಲಿ ದೊಡ್ಡ ರತ್ನಗಂಬಳಿ ಹಾಸಿತ್ತು. ಅಲ್ಲಲ್ಲೇ ಹೊತ್ತಿಸಿಟ್ಟಿದ್ದ ಜವಾಜಿ ಬತ್ತಿಗಳಿಂದ ಆಹ್ಲಾದಕರವಾದ ಪರಿಮಳದ ಹೊಗೆ ಏಳುತ್ತಿತ್ತು. ವಿಮಲಾಬಾಯಿ ಅಡ್ಡ ಸೆರಗು ಸಿಕ್ಕಿಸಿ ಕೊಂಡು ಸಡಗರದಿಂದ ಓಡಾಡುತ್ತ ತಿಂಡಿ ತೀರ್ಥಗಳ ವ್ಯವಸ್ಥೆಗೆ ನಿಂತಿದ್ದಳು.

ಎಲ್ಲರಿಗೂ ಕೇಸರೀಭಾತ್, ಬೋಂಡ, ಉಪಮಾ ಬಂದವು. ಚಹ ವಿನಿಯೋಗವಾಯಿತು. ಮಾಣಿ ನಾಲ್ಕಾರು ತಾಂಬೂಲದ ತಟ್ಟೆಗಳನ್ನು ತಂದು ಅಲ್ಲಲ್ಲೇ ಇಟ್ಟ.

ಸ್ವಲ್ಪ ಹೊತ್ತು ಎಲ್ಲರೂ ವಿನೋದವಾಗಿ ಮಾತಾಡುತ್ತ ಕುಳಿತಿದ್ದರು.

ಶ್ರೀಧರಮೂರ್ತಿಗಳು ನರಸಿಂಹನ್ ಕಡೆ ತಿರುಗಿ ಕಣ್ಣುಸನ್ನೆ ಮಾಡಿದರು. ಅವರು ಗುಂಪಿನಿಂದ ಎದ್ದು ಪಕ್ಕದ ರೂಮಿಗೆ ಹೋದರು. ಸ್ವಲ್ಪ ಹೊತ್ತಿನಲ್ಲಿಯೇ ತಂಬೂರಿ, ಮೃದಂಗ, ಪಿಟೀಲಿನ ಪೆಟ್ಟಿಗೆಗಳು ಹೊರಗೆ ಬಂದವು. ಗುಂಪಿನಿಂದ ಇಬ್ಬರು ವಿದ್ವಾಂಸರು ಎದ್ದು ಬಂದು ಹತ್ತಿರ ಕುಳಿತರು. ಅವರ ಮುಖ ನೋಡಿದರೆ ಮದರಾಸಿನ ಅಯ್ಯರುಗಳೆಂದು ಊಹಿಸಲು ಯಾರಿಗೂ ಕಷ್ಟವಾಗುತ್ತಿರಲಿಲ್ಲ. ಮಧುಸೂದನ ಶ್ರೀಧರಮೂರ್ತಿಗಳನ್ನುದ್ದೇಶಿಸಿ,

"ಎಲ್ಲವನ್ನೂ ಅಣಿಮಾಡಿಕೊಂಡು ಬಿಟ್ಟಿದ್ದೀರಿ"

ಎಂದು ನಕ್ಕ. ಅವರ ಏರ್ಪಾಡನ್ನು ಗಮನಿಸಿ ಅವನ ಮನಸ್ಸಿಗೆ ತೃಪ್ತಿಯಾಗಿತ್ತು.

"ನೀವಂತೂ ಸಾರ್ವಜನಿಕ ಕಚೇರಿಗೆ ಒಪ್ಪಲಿಲ್ಲ. ಹಾಡಿಕೆ ಕೇಳುವ ಅವಕಾಶ ತಪ್ಪಿಸಿಕೊಳ್ಳಲು ನಮಗೂ ಇಷ್ಟವಿರಲಿಲ್ಲ. ಸುದರ್ಶನರು ತಿಳಿಸಿದ ಪ್ರಕಾರ ನಮ್ಮ ಮನೆಯಲ್ಲಿ ಹಾಡಲು ನಿಮ್ಮ ಅಭ್ಯಂತರವಿರಲಾರದೆಂದು ಭಾವಿಸಿ ಸಣ್ಣ ಪ್ರಮಾಣದಲ್ಲಿ ಈ ಏರ್ಪಾಡು ಮಾಡಬೇಕಾಯಿತು"

ಎಂದು ಶ್ರೀಧರಮೂರ್ತಿಗಳು ನುಡಿದರು. ಮಧುಸೂದನ ಅವರಿಗೆ ಮಾತ್ರ ಕೇಳುವ ಹಾಗೆ ಹತ್ತಿರ ಬಗ್ಗಿ ಪಕ್ಕ ವಾದ್ಯಗಾರರನ್ನು ನಿರ್ದೇಶಿಸುತ್ತ,

"ಇವರನ್ನೆಲ್ಲಿ ಹೊಂದಿಸಿದಿರಿ?"

"ಅದು ನರಸಿಂಹನ್ ಮಾಡಿದ ಏರ್ಪಾಡು. ಅದರಲ್ಲೆಲ್ಲಾ ಅವರಿಗೆ ತುಂಬ ಮುಂದಾಲೋಚನೆ ಇದೆ. ದೆಹಲಿಯಲ್ಲಿ ಸಿಕ್ಕದಿರುವ ಯಾವ ಪದಾರ್ಥ ವನ್ನಾದರೂ ಅವರು ಒಂದು ಗಳಿಗೆಯಲ್ಲಿ ಹಿಡಿದು ತರಬಲ್ಲರು"

ಎಂದು ನಕ್ಕರು. ನಿಜಕ್ಕೂ ದಕ್ಷಿಣ ಭಾರತೀಯರ ಸಂಘದ ಸಾಧನೋಪ ಪತ್ತಿ ಅಷ್ಟು ಚೆನ್ನಾಗಿತ್ತು.

ಮಧುಸೂದನ ತಂಬೂರಿಯನ್ನು ಶ್ರುತಿ ಮಾಡಿ ಕೊಟ್ಟ ಮೇಲೆ ವಾದ್ಯ ಗಾರರು ತಮ್ಮ ವಾದ್ಯಗಳನ್ನು ಶ್ರುತಿ ಮಾಡಿಕೊಂಡರು.

ಎರಡು ಘಂಟೆಯ ಹೊತ್ತು ದಿವ್ಯವಾದ ಹಾಡಿಕೆ ನಡೆಯಿತು.

ಕರ್ಣಾಟಕ ಕಾಪಿಯಲ್ಲಿ ಒಂದು ವರ್ಣ, ಬೇಹಾಗ್ ಮೋಹನಗಳಲ್ಲಿ ಎರಡು ಕೃತಿಗಳು, ಹಂಸಾನಂದಿಯಲ್ಲಿ ವಿಸ್ತಾರವಾದ ರಾಗಾಲಾಪನೆ; ಬಳಿಕ ಅದರಲ್ಲಿಯೇ ಕೃತಿ. ಮಾಂಡ್, ಭೀಮಪಲಾಸ್, ತಿಲಂಗ್ ರಾಗಗಳಲ್ಲಿ ಒಂದೊಂದು ಚುಟಕಗಳು. ಎರಡು ಚೀಸು, ಎರಡು ದೇವರ ನಾಮಗಳನ್ನು ಹಾಡುವ ಹೊತ್ತಿಗೆ ಒಂದೂವರೆ ಘಂಟೆ ಮುಗಿದು ಹೋಗಿತ್ತು.

"ನಿಮ್ಮ ಹೊಸ ರಾಗ ಹಾಡಬೇಕು."

ಹಾಡಿಕೆ ನಿಲ್ಲಿಸಿ ವಸ್ತ್ರದಿಂದ ಮುಖದ ಬೆವರೊರಸಿಕೊಳ್ಳುತ್ತ ಕುಳಿತಿದ್ದ ಮಧುಸೂದನ ಧ್ವನಿ ಕೇಳಿ ಅದು ಬಂದ ಕಡೆ ತಿರುಗಿ ನೋಡಿದ. ಟೋಪಿ ಯನ್ನು ತೆಗೆದು ತಮ್ಮ ತೊಡೆಯ ಮೇಲಿಟ್ಟುಕೊಂಡು ನಿಶ್ಶಬ್ದವಾಗಿ ಹಾಡಿಕೆ ಕೇಳುತ್ತ ಕುಳಿತಿದ್ದ ರಸೂಲ್‌ಖಾನ್ ಮಧುಸೂದನನ ಮುಖ ನೋಡಿ,

"ನಿಮ್ಮ ಹೊಸ ರಾಗ ಕೇಳಬೇಕೆಂದು ಕುತೂಹಲವಿದೆ"

ಎಂದು ಮತ್ತೊಮ್ಮೆ ಕೇಳಿದರು.

"ಯಾವ ರಾಗ?"

"ಯಾವುದಾದರೂ ಸರಿಯೆ. ನಿಮಗೆ ಆಯಾಸವಾಗದಿದ್ದರೆ ಹಾಡಿ ತೋರಿಸಿರಿ"

ಎಂದರು. ಆ ಕೋರಿಕೆಯನ್ನು ಮನ್ನಿಸದೆ ಬಿಡುವ ಹಾಗೇ ಇರಲಿಲ್ಲ.

ಮಧುಸೂದನ ನೂತನ ರಾಗವೊಂದನ್ನು ಆಲಾಪನೆಗೆ ಎತ್ತಿಕೊಂಡದ್ದನ್ನರಿತು ರಸಿಕ ಶ್ರೋತೃವರ್ಗ ಕುತೂಹಲದಿಂದ ಆಲಿಸುತ್ತ ಕುಳಿತಿತು.

ರಾಗ ಗಂಭೀರಗಮನದಿಂದ ಹೊಮ್ಮತೊಡಗಿತು.

ಹಗಲಿನ ಎಳೆಬಿಸಿಲಿಗೆ ನಿಧಾನವಾಗಿ ಮೈಬಿಚ್ಚುವ ಹತ್ತೆಂಟು ಎಸಳಿನ ತುಂಬು ತಾವರೆಯಂತೆ ಗಾಯಕನ ಕಲ್ಪನೆ ದಳದಳವಾಗಿ ಬಿಡಿಸತೊಡಗಿದ ರಾಗದ ಮೈಯಲ್ಲಿ ಭಾವುಕರು ವಿನೂತನವಾದ ಕಾಂತಿಯೊಂದನ್ನು ಕಂಡು ಅಚ್ಚರಿಗೊಂಡರು. ವಿಲಕ್ಷಣವಾದ ಸ್ವರಸಂಚಾರಗಳಿಂದ ಕೂಡಿ ವೃದ್ಧಿಗೊಂಡ ರಾಗಕ್ಕೆ ಚೇತನವೆರೆಯುವಂತೆ ತುಂಬಿ ಬರುತ್ತಿದ್ದ ಸಂಪದ್ಯುಕ್ತ ಕಂಠ ಶ್ರಾವಕರ ಚಿತ್ತವನ್ನು ಸೂರೆಗೊಂಡಿತು. ರಾಗ ಹೃದಯದ ರಹಸ್ಯವನ್ನು ಓಸರಿಸಿ ತೋರಿಸುವಂತೆ ಹೊಳೆಯುತ್ತಿದ್ದ ಛಾಯೆಗಳಲ್ಲಿ ಗಾಯಕನ ಉನ್ನತ ಮನೋಧರ್ಮ ಒಡಮೂಡಿ ಕಾಣುತ್ತಿತ್ತು. ಯಾವುದೋ ಅಭೂವು ಶಕ್ತಿಯ ಮಾನಸಪೂಜೆಯ ಸಂಕೇತದಂತಿದ್ದ 'ಪದ್ಮರಾಗ' ಭಾವವ್ಯಂಜಕವಾಗಿ ನುಡಿಯುತ್ತಿತ್ತು.

ಮಧುಸೂದನ ಆಲಾಪನೆ ಮುಗಿಸಿ ಕೃತಿ ಆರಂಭಿಸಿದಾಗ ಸಭೆ ಬೆಕ್ಕಸಬೆರಗಾಗಿ ನೋಡುತ್ತಿತ್ತು.

ಮಾನಸ ಪದ್ಮದಲಾರ್ಚಿತ ಚರಣಂ
ಧ್ಯಾನ ಗಮ್ಯ, ಸಂಸೃತಿ ಭಯ ಹರಣಂ

ಚೌಕವಾದ ಸಂಕೀರ್ಣ ತಾಳದ ಮೈಕಟ್ಟಿನೊಡನೆ ರಮ್ಯವಾದ ಕೃತಿ ಮೂಡಿತು. ಓಜಸ್ವಿಯಾದ, ಅರ್ಥವತ್ತಾದ ಸಾಹಿತ್ಯದಲ್ಲಿ ಅದರ ಮೈಸಿರಿ ಎದ್ದು ರಂಜಿಸಿತು. ಚಿತ್ರವತ್ತಾದ ಆ ಹಾಡಿಕೆ ಶ್ರೋತೃಗಳ ಮನಸ್ಸಿನ ಮೇಲೆ ಗಾಢವಾದ ಪರಿಣಾಮವನ್ನುಂಟುಮಾಡಿತು.

ರಸೂಲ್ ಖಾನ್ ವಶ್ಯಚಿತ್ತರಾಗಿ ಅಲ್ಲಾಡದೆ ಕುಳಿತು ಕೇಳುತ್ತಿದ್ದರು. ತೊಡೆಯ ಮೇಲೆ ಮೃದುವಾಗಿ ತಾಳ ಹಾಕುತ್ತಿದ್ದ ರುಕ್ಮಾಯಿಯ ದೃಷ್ಟಿ ಮಧುಸೂದನನಲ್ಲಿ ಕೀಲಿಸಿಹೋಗಿತ್ತು. ಹಣೆಯ ಮೇಲೆ ಮೂಡಿದ್ದ ಬೆವರು

ಹನಿಯ ಸಾಲು ಅವಳ ಭಾವೋದ್ವೇಗಕ್ಕೆ ಸಾಕ್ಷಿಯಾಗಿತ್ತು. ಕಮಲನಾಭ ಜೋಶಿಯವರ ಮುಖವಂತೂ ಮೆಚ್ಚಿಕೆಯಿಂದ ಹಿಗ್ಗಿಹೋಗಿತ್ತು.

ಮಧುಸೂದನ ಮಂಗಳ ಹಾಡಿ ಕಚೇರಿ ಮುಗಿಸಿದಾಗ ಚಪ್ಪಾಳೆಯ ಸದ್ದು ಸಭಾಂಗಣವನ್ನು ತುಂಬಿಬಿಟ್ಟಿತು. ಶ್ರೀಧರಮೂರ್ತಿಗಳು ಚೇತರಿಸಿ ಕೊಂಡವರಂತೆ ಎದ್ದು ನಿಂತು ಒಂದು ಗಳಿಗೆ ಸಭೆಯ ಸುತ್ತ ದೃಷ್ಟಿ ಹರಿಸಿದರು.

"ನಮ್ಮ ಸಂಘದ ಜೀವನದಲ್ಲಿ ಇವೊತ್ತಿನ ದಿವಸ ಚಿರಸ್ಮರಣೀಯವಾದ ದಿವಸ. ವಿದ್ವಾನ್ ಮಧುಸೂದನರ ಭೇಟಿ ಮಾಡುವ ಹಾಗೂ ಅವರ ಹಾಡಿಕೆ ಕೇಳುವ ಸುಸಂಧಿ ದೊರೆತದ್ದು ನಮ್ಮ ಪುಣ್ಯವೆಂದೇ ಭಾವಿಸುತ್ತೇನೆ. ಪ್ರವಾಸ ನಿಮಿತ್ತ ದೆಹಲಿಗೆ ಬಂದಿರುವ ಅವರು ನಮ್ಮ ಮನವಿ ಲಾಲಿಸಿ ಇಂದಿನ ಗೋಷ್ಠಿ ಯಲ್ಲಿ ಹಾಡಲು ಸಮ್ಮತಿಸಿದ್ದಕ್ಕಾಗಿ ಎಲ್ಲರ ಪರವಾಗಿ ಅವರನ್ನು ವಂದಿಸುತ್ತೇನೆ. ಇಂಥ ವಿದ್ವಾಂಸರನ್ನು ಬರಮಾಡಿಕೊಂಡು ಸತ್ಕರಿಸುವುದು ನಮಗೆಲ್ಲರಿಗೂ ತುಂಬ ಹೆಮ್ಮೆ.

"ಶ್ರೀಯುತರ ಗಾಯನವನ್ನು ಕುರಿತು ನಾನು ಮಾತಾಡಲಾರೆ. ಇಷ್ಟು ಹೊತ್ತೂ ಅವರ ಹಾಡಿಕೆಯನ್ನು ಕೇಳಿ ಸುಖಿಸಿರುವ ನಿಮಗೆ ಅದನ್ನು ವರ್ಣಿಸಲು ಹೊರಡುವುದು ಧಾರ್ಷ್ಟ್ಯವಾದೀತು. ಆ ಶಕ್ತಿಯೂ ನನಗಿಲ್ಲ. ಆ ಕೆಲಸ ಮಾಡಬಲ್ಲ ವಿದ್ವಾಂಸರು ಈ ಸಭೆಯಲ್ಲಿದ್ದಾರೆ. ಉಸ್ತಾದ್ ರಸೂಲ್‌ಖಾನರು ನಾಲ್ಕು ಮಾತು ಹೇಳಬೇಕೆಂದು ಕೋರುತ್ತೇನೆ"

ಎಂದು ನುಡಿದು ಕುಳಿತುಕೊಂಡರು. ರಸೂಲ್‌ಖಾನರು ಗಂಭೀರವಾಗಿ ಎದ್ದು ನಿಂತುಕೊಂಡರು.

"ಮಧುಸೂದನರು ದೊಡ್ಡ ವಿದ್ವಾಂಸರು, ಅದಕ್ಕಿಂತ ದೊಡ್ಡ ಕಲಾವಿದರು. ಅವರ ಪ್ರತಿಭೆ ವಿಸ್ಮಯಜನಕವಾದದ್ದು. ಅವರ ಕಲೆ ನಿಶ್ಚಲ ತಪೋನಿಷ್ಠೆಗಳ ಫಲವೆಂದು ನಾನು ಭಾವಿಸುತ್ತೇನೆ. ಅವರ ಪಾಂಡಿತ್ಯಕ್ಕೆ ಕ್ಷೇತ್ರ ಮಿತಿಯಿಲ್ಲ; ದಕ್ಷಿಣಾದಿ ಉತ್ತರಾದಿ ಎನ್ನುವ ಭೇದವಿಲ್ಲ. ವಿಸ್ತಾರವಾದ ಅವರ ಮನೋಭೂಮಿಕೆಯಲ್ಲಿ ಎರಡು ಸಂಪ್ರದಾಯಗಳಿಗೂ ಸಮಾನವಾದ ಸ್ಥಳವಿರುವಂತೆ ನನಗೆ ಭಾಸವಾಗುತ್ತದೆ. ಅವರು ಹಾಡಿದ ಚೀಸುಗಳಲ್ಲಿ, ದೇವರ ನಾಮಗಳಲ್ಲಿ ನಾನು ಈ ಸಾಮ್ಯವನ್ನು ಕಂಡೆ. ಉತ್ತರಾದಿ ರಾಗಗಳ ಮೇಲೆ ಅವರು ತೋರಿಸಿದ ಸ್ವಾಮ್ಯವನ್ನು ನೋಡಿ ನನಗೆ ಅತ್ಯಾಶ್ಚರ್ಯವಾಯಿತು. ದಕ್ಷಿಣಾದಿ

ಸಂಗೀತಗಾರರ ಬಗೆಗಿದ್ದ ನನ್ನದೊಂದು ದೋಷಯುಕ್ತ ಭಾವನೆ ಇದರಿಂದ ತೊಡೆದುಹೋಯಿತೆಂದು ಭಾವಿಸುತ್ತೇನೆ.

"ಶ್ರೀಯುತರು ಹಾಡಿದ ಹೊಸ ರಾಗವೂ ಅಷ್ಟೆ. ಅದು ತುಂಬ ಕಾಂತಿ ಯುಕ್ತವಾದ ರಾಗ. ಅದರ ಸಂಯೋಜನೆ ಎಷ್ಟು ಕುತೂಹಲಕಾರಿಯೋ ಅಷ್ಟೇ ವಿದ್ವತ್ಪೂರ್ಣವೂ ಹೌದು. ಅದರ ಅನೇಕ ಸಂಚಾರಗಳು ನನ್ನ ಮನಸ್ಸಿನಲ್ಲಿ ಚಿರಕಾಲ ನಿಲ್ಲುವಂಥವಾಗಿವೆ. ಇಂಥ ಕೆಲವು ರಾಗಗಳು ಅವರ ಬತ್ತಳಿಕೆಯಲ್ಲಿವೆಯೆಂದು ಕೇಳಿದ್ದೇನೆ. ಅವೆಲ್ಲವನ್ನೂ ಕೇಳುವ ಅವಕಾಶವನ್ನು ಶ್ರೀಯುತರು ಇಂದಲ್ಲದಿದ್ದರೆ ಇನ್ನೊಮ್ಮೆಯಾದರೂ ನಮಗೆ ಮಾಡಿಕೊಡಬೇಕು. ವಿದ್ವಾನ್ ಮಧುಸೂದನರಿಗೆ ನನ್ನ ಹಾರ್ದಿಕ ವಂದನೆಗಳು"

ಎಂದು ನುಡಿದು ತಮ್ಮ ಸ್ಥಳದಲ್ಲಿ ಕುಳಿತರು. ಶ್ರೀಧರಮೂರ್ತಿಗಳು ದೊಡ್ಡ ಹಾರವನ್ನು ಮಧುಸೂದನನ ಕೊರಳಿಗೆ ಹಾಕಿ ಬೆಳ್ಳಿಯ ತಟ್ಟೆಯಲ್ಲಿ ಫಲ ತಾಂಬೂಲಗಳನ್ನಿತ್ತು ಅರ್ಪಿಸಿದರು. ದಕ್ಷಿಣ ಭಾರತೀಯರ ಸಂಘದ ಪರವಾಗಿ ನರಸಿಂಹನ್ ಪುಷ್ಪಮಾಲೆ ಅರ್ಪಿಸಿದರು. ಅತಿಥಿಗಳು ಶ್ರೀಧರ ಮೂರ್ತಿಗಳ ಮತ್ತು ಮಧುಸೂದನನ ಅನುಮತಿ ಪಡೆದು ಹೊರಡಲು ಎದ್ದರು. ಶ್ರೀಧರಮೂರ್ತಿಗಳೊಡನೆ ಒಬ್ಬೊಬ್ಬರನ್ನಾಗಿ ಬೀಳ್ಕೊಡುತ್ತ ನಿಂತಿದ್ದ ಮಧುಸೂದನ ತನ್ನ ಪಕ್ಕದಲ್ಲಿ ರುಕ್ಮಾಯಿ ಬಂದು ನಿಂತುದನ್ನು ಗಮನಿಸಿ ಅವಳ ಕಡೆ ತಿರುಗಿದ.

"ನನ್ನದೊಂದು ಪ್ರಾರ್ಥನೆಯಿದೆ"

ಎಂದು ರುಕ್ಮಾಯಿ ಮೆಲ್ಲನೆ ನುಡಿದಳು.

"ಏನು ಹೇಳಿ."

"ನಾಳೆ ಸಂಜೆ ನಮ್ಮ ಮನೆಗೆ ದಯಮಾಡಿಸಬೇಕು."

ಮಧುಸೂದನ ಶ್ರೀಧರಮೂರ್ತಿಗಳ ಮುಖ ನೋಡಿದ. ಅವರು ನಗುತ್ತ,

"ಶ್ರೀಮತಿಯವರು ಏನೋ ಏರ್ಪಾಡು ಇಟ್ಟುಕೊಂಡಿರುವ ಹಾಗಿದೆ."

"ಏನೂ ಇಲ್ಲ. ದೆಹಲಿಯವರೆಗೆ ಬಂದಿರುವ ವಿದ್ವಾಂಸರು ನಮ್ಮ ಮನೆಗೂ ದಯಮಾಡಿಸಲೆಂದು ಅಪೇಕ್ಷೆ. ಅವರಿಗೆ ಅವಕಾಶವಿದ್ದು ಬರುವುದಾದರೆ ತುಂಬ ಸಂತೋಷ"

ಎಂದು ಶ್ರೀಧರಮೂರ್ತಿಗಳ ಕಡೆ ನೋಡುತ್ತ ರುಕ್ಮಾಯಿ ನುಡಿದಳು.

"ಅವಕಾಶವಾದರೆ ಬರುತ್ತೇನೆ. ಆದರೆ ದಯವಿಟ್ಟು ನನ್ನ ಸಂಗೀತ ಕಚೇರಿ ಏರ್ಪಡಿಸಬೇಡಿ. ನೀವು ಹಾಡುವುದಾದರೆ ಸಂತೋಷದಿಂದ ಕೇಳು ತ್ತೇನೆ"

ಎಂದು ಮಧುಸೂದನ ಹೇಳಿದ.

"ಆ ಭರವಸೆ ಕೊಡಬಲ್ಲೆ"

ಎಂದು ರುಕ್ಮಾಯಿ ನಕ್ಕು ನುಡಿದು ಮಧುಸೂದನನನ್ನು ಕರೆತರುವ ಕಾರ್ಯಭಾರವನ್ನು ಶ್ರೀಧರಮೂರ್ತಿಗಳಿಗೇ ಹಚ್ಚಿ ಹೊರಟು ಹೋದಳು. ರಸೂಲ್‌ಖಾನ್ ಹೊರಡುವ ಮುನ್ನ ಮಧುಸೂದನನ ಹತ್ತಿರ ಒಂದು ಗಳಿಗೆ ಮಾತಾಡುತ್ತ ನಿಂತರು.

"ದೆಹಲಿ ಬಿಡುವ ಮುನ್ನ ಒಮ್ಮೆ ನಮ್ಮ ಮನೆಗೂ ಭೇಟಿ ಕೊಡಿ."

"ಸಾಧ್ಯವಾದರೆ ಬರುತ್ತೇನೆ. ಕಾರಣಾಂತರದಿಂದ ಅವಕಾಶವಾಗದೆ ಇದ್ದರೆ ಮನಸ್ಸಿಗೆ ಏನೂ ತಿಳಿದುಕೊಳ್ಳಬಾರದು."

"ಈ ಸಲ ಬರಲಾಗದಿದ್ದರೆ ಮುಂದಿನ ಸಲ ಬಂದಾಗ ನನ್ನ ಅತಿಥಿ ಯಾಗಿ ಇಳಿದುಕೊಳ್ಳಲು ಮರೆಯಬಾರದು"

ಎಂದರು. ಮಧುಸೂದನ ಅವರು ಸ್ನೇಹದಿಂದ ನೀಡಿದ ಹಸ್ತವನ್ನು ಭದ್ರವಾಗಿ ಹಿಡಿದುಕೊಂಡು,

"ಈ ವಿಶ್ವಾಸ ಹೀಗೆಯೇ ಚಿರಕಾಲ ಇರಲಿ"

ಎಂದ. ಯಾವುದೋ ನೆನಪಿನಿಂದ ಅವನ ಕುತ್ತಿಗೆ ಬಿಗಿದು ಬಂದಿತ್ತು. ಇಷ್ಟು ಹೊತ್ತೂ ಹಿಂದೆ ನಿಂತಿದ್ದ ಕಮಲನಾಭಜೋಶಿ ಮುಂದೆ ಬಂದು,

"ಸಂಗೀತದ ವಿಷಯದಲ್ಲಿ ನನಗಿದ್ದ ಹಲವು ಕಲ್ಪನೆಗಳನ್ನು ಇಂದು ಬದ ಲಾಯಿಸಿಬಿಟ್ಟಿರಿ. ನಿಮ್ಮ ಹಾಡಿಕೆ ನನ್ನ ಮನಸ್ಸಿನಲ್ಲಿ ಗಾಢ ಚಿಂತನೆಯನ್ನು ಕೆರಳಿಸಿದೆ"

ಎಂದರು. ಮಧುಸೂದನ ವಿನಯದಿಂದ ಕೈ ಜೋಡಿಸಿ,

"ನಿಮ್ಮ ವಿಶ್ವಾಸ"

ಎಂದಷ್ಟೇ ನುಡಿದ. ಅತಿಥಿಗಳೆಲ್ಲರೂ ಒಬ್ಬೊಬ್ಬರಾಗಿ ಬೀಳ್ಕೊಂಡು ಹೊರಟುಹೋದರು. ಎಲ್ಲರೂ ತೆರಳಿದ ಬಳಿಕ ಶ್ರೀಧರಮೂರ್ತಿಗಳು ಮಧು ಸೂದನನನ್ನು ಒಳಗೆ ಕರೆದೊಯ್ಯುತ್ತ,

"ಬನ್ನಿ, ನಿಮಗೆ ಆಯಾಸವಾಗಿದೆ. ಊಟಕ್ಕೆ ಏಳೋಣ"

ಎಂದರು. ಅವರ ಮನಸ್ಸು ನಾಳಿನ ಕಾರ್ಯಕ್ರಮವನ್ನು ಕುರಿತು ಯೋಚಿಸುತ್ತಿತ್ತು.

ಬೆಳಗ್ಗೆ ಎದ್ದ ಕೂಡಲೆ ಸ್ನಾನ ಮುಗಿಸಿ ಎಲ್ಲರೂ ಉಪಾಹಾರಕ್ಕೆ ಕುಳಿತರು. ವಿಮಲಾಬಾಯಿ ಮೂರು ಬೆಳ್ಳಿಯ ತಟ್ಟೆಗಳಲ್ಲಿ ಎರಡೆರಡು ಚಪಾತಿ, ಬಿಸಿಬಿಸಿ ಸಾಗು ತಂದು ಮಧುಸೂದನನ ಮುಂದೊಂದು ಶ್ರೀಧರ ಮೂರ್ತಿಗಳ ಮುಂದೊಂದು ತಟ್ಟೆಯಿಟ್ಟು ತಾನೊಂದನ್ನು ಮುಂದಿಟ್ಟುಕೊಂಡು ಕುಳಿತಳು. ತಟ್ಟೆಯ ತುಂಬ ಭರ್ತಿಯಾಗಿ ಕುಳಿತಿದ್ದ ಚಪಾತಿಗಳನ್ನು ನೋಡಿ ಮಧುಸೂದನನಿಗೆ ಗಾಬರಿಯಾಯಿತು. ಅವನು ಅದನ್ನೇ ನೋಡುತ್ತ ಸುಮ್ಮನೆ ಕುಳಿತ.

"ಏಕೆ, ತೆಗೆದುಕೊಳ್ಳಿ"

ಎಂದು ಗಂಡನ ಜೊತೆಯಲ್ಲಿ ಆಗಲೇ ಅರ್ಧ ಚಪಾತಿ ಸಾಗಿಸಿದ್ದ ವಿಮಲಾಬಾಯಿ ನುಡಿದಳು.

"ನನಗೆ ಚಪಾತಿ ಅಭ್ಯಾಸವಿಲ್ಲ. ಬರೀ ಕಾಫಿ ತೆಗೆದುಕೊಳ್ಳುತ್ತೇನೆ."

"ಚಪಾತಿ ಮೈಗೊಳ್ಳಿಯದು. ನೀವು ಮೈಸೂರಿನವರು ಬರೀ ಕಾಫಿ ಕುಡಿದು ಕುಡಿದು ಮೈ ಒಣಗಿಸಿಕೊಳ್ಳುತ್ತೀರಿ"

ಎಂದು ನಗೆಯಾಡಿದಳು. ಶ್ರೀಧರಮೂರ್ತಿಗಳು ಮಧ್ಯೆ ಬಾಯಿ ಹಾಕಿ,

"ಊಟ ತಿಂಡಿಗಳ ವಿಷಯದಲ್ಲಿ ಬಲಾತ್ಕಾರ ಮಾಡಬಾರದು, ವಿಮಲಾ. ಅವರವರ ಅಭ್ಯಾಸ ಅವರವರಿಗೆ. ಉತ್ತರದವರಿಗೆ ಚಹ ಹಿಡಿಸುವಂತೆ ಕಾಫಿ ಹಿಡಿಸುವುದಿಲ್ಲ. ದಕ್ಷಿಣದವರಿಗೆ ಕಾಫಿ ಎಂದರೆ ಪಂಚಪ್ರಾಣ. ನಿನ್ನ ಕಾಫಿ ಕುಡಿ ಎಂದರೆ ಕುಡಿಯುತ್ತೀಯಾ?"

"ಅಬ್ಬ, ನನ್ನ ಕೈಲಾಗೊಲ್ಲ."

"ಹಾಗೆಯೇ ಇತರರೂ. ನಮಗೆ ಪ್ರಿಯವಾಗಿರುವುದು ಇನ್ನೊಬ್ಬರಿಗೆ ಪ್ರಿಯವೆಂದು ಭಾವಿಸಬಾರದು. ನಮ್ಮ ಅಭಿರುಚಿಯನ್ನು ಇನ್ನೊಬ್ಬರ ಮೇಲೆ ಹೊರಿಸಲು ಹೋಗಬಾರದು"

ಎಂದರು. ವಿಮಲಾಬಾಯಿಯ ಮುಖ ನಸು ಕೆಂಪಾಯಿತು. ಅವಳು ಏನಾದರೊಂದು ಉತ್ತರ ಹೇಳಲು ಬಯಸಿ,

"ಹಾಗೇನೂ ಇಲ್ಲ"

ಎಂದು ಸುಮ್ಮನಾದಳು. ಮಾತು ಗಂಭೀರವಾದುದನ್ನು ಮಧುಸೂದನ ಗಮನಿಸಿ,

"ಅವರೂ ವಿನೋದಕ್ಕಾಗಿಯೇ ಹಾಗೆಂದರು; ಬಲಾತ್ಕಾರ ಮಾಡಲೆಂದಲ್ಲ"

ಎಂದು ತೇಲಿಸಿ ನಕ್ಕ. ಶ್ರೀಧರಮೂರ್ತಿಗಳ ಮುಖದ ಮೇಲೂ ನಗೆ ಸುಳಿಯಿತು.

"ವಿಮಲಾ ಒಮ್ಮೊಮ್ಮೆ ಹಾಗೇ ನೋಡಿ. ತನ್ನ ಅಭಿಮಾನದಲ್ಲಿ ಅವಳು ಇತರರಿಗೆ ಹಿಂಸೆಯಾಗುವುದನ್ನೂ ನೋಡುವುದಿಲ್ಲ. ನನ್ನನ್ನೂ ಹೀಗೆಯೇ ಗೋಳು ಹೊಯಿದುಕೊಳ್ಳುತ್ತಾಳೆ"

ಎಂದು ಮಡದಿಯ ಕಡೆ ಅಕ್ಕರೆ ತುಂಬಿದ ನೋಟವನ್ನು ಬೀರಿದರು. ಪತಿಯ ದೃಷ್ಟಿ ತಮ್ಮ ಮೇಲೆ ಬಿದ್ದುದನ್ನು ಓರೆನೋಟದಿಂದ ಗಮನಿಸಿದ ವಿಮಲಾಬಾಯಿಯ ಮುಖ ಲಜ್ಜೆಯಿಂದ ಕೆಂಪಾಯಿತು.

ಉಪಾಹಾರ ಮುಗಿದ ಬಳಿಕ ಶ್ರೀಧರಮೂರ್ತಿಗಳು ಮಧುಸೂದನನನ್ನು ಕಾರಿನಲ್ಲಿ ಊರು ಸುತ್ತಿಸಿಕೊಂಡು ಬರುವುದಕ್ಕೆ ಕರೆದೊಯ್ದರು. ಕೆಂಪು ಕೋಟೆ, ಕುತಬ್‌ಮಿನಾರ್, ಜಂತರಮಂತರ್, ಹಳೆಯ ದೆಹಲಿ, ಇಂದ್ರಪ್ರಸ್ಥದ ನಿವೇಶನ ಮುಂತಾದುವನ್ನು ನೋಡಿಕೊಂಡು ಹಿಂತಿರುಗುವ ಹೊತ್ತಿಗೆ ಮಧ್ಯಾಹ್ನ ಒಂದು ಘಂಟೆಯಾಯಿತು. ದೆಹಲಿಯ ಬಿಸಿಲು ರಣಗುಟ್ಟುತ್ತಿತ್ತು.

'ಸುಖ ನಿವಾಸ'ಕ್ಕೆ ಹೋಗಿ ಕುಮುದನನ್ನು ನೋಡಲು ಆಸ್ಪದವಿಲ್ಲದಿರುವುದನ್ನರಿತು ಮಧುಸೂದನನಿಗೆ ಪೇಚಾಟವಾಯಿತು. ಶ್ರೀಧರಮೂರ್ತಿಗಳು ಜೊತೆಯಲ್ಲಿರುವಾಗ ಅದು ಸಾಧ್ಯವಾಗುವಂತಿರಲಿಲ್ಲ. ಇನ್ನು ಸಾಯಂಕಾಲವೂ ಅದಕ್ಕೆ ಅವಕಾಶವಿರಲಿಲ್ಲ. ರುಕ್ಮಾಯಿಯ ಮನೆಗೆ ಭೇಟಿ ಕೊಡುವ ಕಾರ್ಯಕ್ರಮ ಮೊದಲೇ ಗೊತ್ತಾಗಿತ್ತು. ತನ್ನ ಈ ಸಂದಿಗ್ಧವನ್ನರಿಯದೆ ಕುಮುದಾ ಎಲ್ಲಿ ಕೋಪಿಸಿಕೊಳ್ಳುವಳೋ ಎನ್ನುವ ಆಶಂಕೆ ಅವನ ಮನಸ್ಸನ್ನಾವರಿಸಿತು.

ಮಧ್ಯಾಹ್ನ ಊಟವಾದ ಮೇಲೆ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಾಗ ಶ್ರೀಧರಮೂರ್ತಿಗಳು ಕೈಯಲ್ಲಿ ಒಂದು ಕಾಗದ ಹಿಡಿದು ಮಧುಸೂದನನ ರೂಮಿಗೆ ಬಂದರು.

" ಸಂಜೆಯ ಕಾರ್ಯಕ್ರಮದಲ್ಲಿ ಸ್ವಲ್ಪ ಬದಲಾವಣೆಯಾಗುವ ಹಾಗೆ ಕಾಣುತ್ತಿದೆಯಲ್ಲಾ."

" ಏಕೆ, ಏನು ಸಮಾಚಾರ?"

" ಅಂತಹುದೇನೂ ಇಲ್ಲ. ಸರ್ಕಾರದಿಂದ ಒಂದು ಪತ್ರ ಬಂದಿದೆ. ಕನ್ನಡ ಸಂಘಕ್ಕಾಗಿ ನಾವು ಕೆಲವು ಸೌಲಭ್ಯಗಳನ್ನು ಕೇಳುತ್ತಿದೇವೆ. ಅವನ್ನು ಕೊಡುವ ವಿಷಯದಲ್ಲಿ ಸರ್ಕಾರ ಸುಮ್ಮನೆ ಮಿಾನ ಮೇಷ ಎಣಿಸುತ್ತಿದೆ. ನಾವೂ ಒತ್ತಾಯ ಮಾಡುತ್ತಲೇ ಇದ್ದೇವೆ. ಬಹುಶಃ ಆ ಸಂಬಂಧವಾಗಿ ಮಂತ್ರಿಗಳು ನನ್ನನ್ನು ಭೇಟಿಗೆ ಕರೆದಿದ್ದಾರೆ."

" ಸಂತೋಷ, ಹೋಗಿ ಬನ್ನಿ."

" ನೀವು ರುಕ್ಮಾಯಿಯ ಮನೆಗೆ ಒಬ್ಬರೇ ಹೋಗಬೇಕಾಗುವುದೇನೋ."

" ಇಂದಲ್ಲದಿದ್ದರೆ ನಾಳೆಯಾಯಿತು. ನಾಳೆ ಇಬ್ಬರೂ ಕೂಡಿ ಬರುವೆವೆಂದು ಹೇಳಿ ಕಳಿಸಿಬಿಟ್ಟರಾಯಿತು."

" ಹಾಗಲ್ಲ. ಪಾಪ, ಆಕೆ ಏನು ಏರ್ಪಾಡು ಮಾಡಿಕೊಂಡಿರುತ್ತಾಳೋ ಏನೋ. ಸುಮ್ಮನೆ ನಿರಾಶೆಗೊಳಿಸುವುದೇಕೆ? ನೀವು ಹೋಗಿ ಬನ್ನಿ. ಡ್ರೈವರ್ ಕರೆದೊಯ್ಯುತ್ತಾನೆ."

" ನೀವೂ ಬಂದಿದ್ದರೆ ಚೆನ್ನಾಗಿತ್ತು, ಚಿಂತೆಯಿಲ್ಲ. ನಿಮ್ಮ ಕೆಲಸಕ್ಕೆ ಅಡ್ಡಿ ಪಡಿಸುವ ಇಚ್ಛೆ ನನಗಿಲ್ಲ"

ಎಂದು ಮಧುಸೂದನ ನುಡಿದು ಸುಮ್ಮನಾದ. ಅನಿರೀಕ್ಷಿತವಾದ ಪ್ರಸಂಗ ಶ್ರೀಧರಮೂರ್ತಿಗಳ ಮನಸ್ಸಿಗೂ ಕೊಂಚ ಕಿರಿಕಿರಿಯನ್ನುಂಟುಮಾಡಿತ್ತು. ಆದರೆ ಮಂತ್ರಿಗಳೊಡನೆ ಭೇಟಿಯನ್ನು ಮುಂದಕ್ಕೆ ಹಾಕುವ ಸ್ಥಿತಿಯಲ್ಲಿ ಅವರಿರಲಿಲ್ಲ.

ಶ್ರೀಧರಮೂರ್ತಿಗಳು ಮಧ್ಯಾಹ್ನ ನಾಲ್ಕಕ್ಕೆ ಚಹ ಮುಗಿಸಿಕೊಂಡು ಸೆಕ್ರೆಟೇರಿಯೆಟ್ ಕಡೆ ಹೊರಟುಬಿಟ್ಟರು. ಮಧುಸೂದನ ಐದು ಘಂಟೆಯ ಹೊತ್ತಿಗೆ ರುಕ್ಮಾಯಿಯ ಮನೆಗೆ ಹೊರಡಲು ಸಿದ್ಧನಾದ.

ರುಕ್ಮಾಯಿಯ ಮನೆ ಹಳೆಯ ದೆಹಲಿಯಲ್ಲಿ ಮುಸಾಫಿರ್ ರಸ್ತೆಯಲ್ಲಿತ್ತು. ಮಧುಸೂದನ ಅಲ್ಲಿಗೆ ತಲಪಿದಾಗ ಸಂಜೆ ಆರು ಘಂಟೆಯಾಗಿತ್ತು. ಬಾಗಿಲಲ್ಲಿ ನಿಂತಿದ್ದ ಸೇವಕ ಮನೆಯ ಮುಂದೆ ಕಾರು ಬಂದು ನಿಂತೊಡನೆಯೇ ಹತ್ತಿರ

ಬಂದು ಸಲಾಂ ಮಾಡಿ ಬಾಗಿಲು ತೆಗೆದ. ಮಧುಸೂದನ ಕಾರಿನಿಂದಿಳಿದು ಆಳನ್ನು ಹಿಂಬಾಲಿಸಿದ.

ರುಕ್ಮಾಯಿ ವರಾಂಡದಲ್ಲಿ ಬಂದು ನಿಂತಿದ್ದಳು. ಮಧುಸೂದನನನ್ನು ಕಂಡೊಡನೆಯೇ ನಗುಮೊಗದಿಂದ ಕೈಜೋಡಿಸಿ,

"ದಯಮಾಡಿಸಬೇಕು"

ಎಂದು ನುಡಿದು ಒಳಗೆ ಕರೆದೊಯ್ದಳು. ಹಜಾರ ಚಿಕ್ಕದಾಗಿದ್ದರೂ ಸುಸಜ್ಜಿತವಾಗಿತ್ತು. ನೆಲಕ್ಕೆ ರತ್ನಗಂಬಳಿ ಹಾಸಿತ್ತು. ಮಧ್ಯೆ ಒಂದು ಟೀಪಾಯ್ ಇಟ್ಟು ಅದರ ಮೇಲೊಂದು ಹೂವಿನ ಕುಂಡವನ್ನಿಡಲಾಗಿತ್ತು. ನಾಲ್ಕು ಮೂಲೆಗೂ ನಾಲ್ಕು ಸೋಫಾಗಳನ್ನು ಹಾಕಿತ್ತು. ಸಂಗೀತಾಚಾರ್ಯ ತಾನ ಸೇನನ ಹಾಗೂ ಪ್ರಸಿದ್ಧ ಗವಾಯಿಗಳ ಚಿತ್ರಗಳು ಗೋಡೆಗಳನ್ನಲಂಕರಿಸಿದ್ದವು. ಯಾವುದೋ ಅದೃಶ್ಯ ಸ್ಥಳದಿಂದ ಜವಾಜಿಯ ಪರಿಮಳ ಹಾಯ್ದು ಬರುತ್ತಿತ್ತು. ಮಧುಸೂದನ ಸೋಫಾದಲ್ಲಿ ಕುಳಿತುಕೊಳ್ಳುತ್ತಲೇ ರುಕ್ಮಾಯಿ,

"ಮೂರ್ತಿಗಳು ಬರಲಿಲ್ಲವೇ ?"

ಎಂದು ಕೇಳಿದಳು.

"ಅವರೂ ಬರಬೇಕೆಂತಲೇ ಇದ್ದರು. ಆದರೆ ಜರೂರಾಗಿ ಮಂತ್ರಿಗಳ ಭೇಟಿಗೆ ಕರೆ ಬಂದದ್ದರಿಂದ ಹೊರಟುಹೋಗಬೇಕಾಯಿತು. ಕಾರ್ಯಕ್ರಮ ತಪ್ಪಿಸಬಾರದೆಂದು ನಾನೊಬ್ಬನೇ ಬಂದೆ."

"ಸಂತೋಷ. ನನಗೆ ನೀವು ಬರುವಿರೋ ಇಲ್ಲವೋ ಎನ್ನುವ ಸಂದೇಹ ವಿತ್ತು. ದೊಡ್ಡ ಮನಸ್ಸುಮಾಡಿ ಬಂದಿರಲ್ಲಾ."

"ವಿಶ್ವಾಸದಿಂದ ಕರೆದರೆ ಬರುವುದಕ್ಕೇನಡ್ಡಿ ?"

"ಅದು ನಿಮ್ಮ ಸೌಜನ್ಯ"

ಎಂದು ನಕ್ಕಳು. ಅಷ್ಟು ಹೊತ್ತಿಗೆ ತೆರೆ ಇಳಿಬಿಟ್ಟಿದ್ದ ಒಳ ಬಾಗಿಲಿನಿಂದ ಸೇವಕ ಎರಡು ತಟ್ಟೆಗಳ ತುಂಬ ಖಾದ್ಯ ಪಾನೀಯಗಳನ್ನು ತಂದು ಮುಂದಿಟ್ಟು ಹೊರಟುಹೋದ. ರುಕ್ಮಾಯಿ ಅದರಲ್ಲೊಂದು ತಟ್ಟೆಯನ್ನು ತೆಗೆದುಕೊಂಡು ಸೋಫಾದ ಕೆಳಗಿದ್ದ ಚಿತ್ರದ ಪೀಠವನ್ನೆಳೆದು ಅದರ ಮೇಲಿಟ್ಟು ಮಧುಸೂದನನ ಮುಂದೆ ಜರುಗಿಸಿದಳು.

"ತೆಗೆದುಕೊಳ್ಳಿ."

" ತುಂಬ ತಿಂಡಿ ಮಾಡಿಸಿರುವ ಹಾಗಿದೆಯಲ್ಲಾ "

ಎನ್ನುತ್ತ ಮಧುಸೂದನ ತಟ್ಟೆಯ ಮೇಲೆ ಹೊದೆಸಿದ್ದ ರೇಷ್ಮೆಯ ವಸ್ತ್ರವನ್ನು ತೆಗೆದು ನೋಡಿದ. ಮಕಮಲ್ ಪೂರಿ, ಕೇಸರಿಫೇಡ, ರಸಗುಲ್ಲ, ಕಾರದ ಗೋಡಂಬಿ, ಪಕೋಡಗಳು ಅವನನ್ನು ಎದುರ್ಗೊಂಡವು.

" ಹೆಚ್ಚೇನೂ ಇಲ್ಲ, ತೆಗೆದುಕೊಳ್ಳಿ "

ಎಂದು ರುಕ್ಮಾಯಿ ಸೋಫಾ ಬಿಟ್ಟೆದ್ದು ಬೀರುವಿನಿಂದ ಕೆತ್ತನೆ ಕೆಲಸ ಮಾಡಿದ ನೀರಿನ ಹೂಜಿಯನ್ನೂ ಗ್ಲಾಸನ್ನೂ ತೆಗೆದು ಮುಂದಿಟ್ಟಳು. ಇಬ್ಬರೂ ಉಪಾಹಾರ ಮುಗಿಸುವ ಹೊತ್ತಿಗೆ ಚಹ ಬಂದಿತು. ಸೇವಕ ತಾಂಬೂಲದ ತಟ್ಟೆಯನ್ನು ತಂದು ಮುಂದಿಟ್ಟು ಹೊರಟುಹೋದ.

" ಇಷ್ಟರಿಂದಲೇ ನನ್ನ ಹೊಟ್ಟೆ ತುಂಬಿಸಿಬಿಡಬೇಕೆಂದು ಮಾಡಿದ್ದೀರಾ? ನಿಮ್ಮ ಹಾಡಿಕೆ ಕೇಳಿಸುವುದಿಲ್ಲವೆ ?"

ಎಂದು ಮಧುಸೂದನ ಚಹ ಮುಗಿಸಿ ಸೋಫಕ್ಕೆ ಮೈ ಒರಗಿಸುತ್ತ ಕೇಳಿದ.

" ನಿಮ್ಮ ಗಾಯನದ ಮುಂದೆ ನನ್ನ ಹಾಡಿಕೆಯೆ ?"

" ಇರಲಿ. ನಿಮ್ಮ ವೈದುಷ್ಯದ ಪರಿಚಯವನ್ನೂ ಮಾಡಿಸಿಕೊಡಿ "

ಎಂದ. ರುಕ್ಮಾಯಿ ವಿನಯದಿಂದ ತಲೆಬಾಗಿ ಎದ್ದು ಒಳಗೆ ಹೋಗಿ ಎರಡು ನಿಮಿಷಗಳಲ್ಲಿಯೇ ಹಿಂತಿರುಗಿ ಬಂದಳು. ಅವಳ ಹಿಂದೆಯೇ ಪಕ್ಕವಾದ್ಯಗಾರರಿಬ್ಬರು ಸದ್ದಿಲ್ಲದೆ ಹಜಾರ ಪ್ರವೇಶಿಸಿ ಮಧುಸೂದನನಿಗೆ ವಂದಿಸಿ ಕುಳಿತರು. ಆಳು ತಂಬೂರಿ, ಸಿತಾರ, ತಬಲಗಳನ್ನು ತಂದು ಮುಂದಿಟ್ಟ. ರುಕ್ಮಾಯಿ ತಂಬೂರಿಯನ್ನು ತನ್ನ ಎದೆಗೊರಗಿಸಿಕೊಂಡು ಮಿಾಟುತ್ತ ಅದರ ನಾದಸುಖಕ್ಕೆ ಕಣ್ಣು ಮುಚ್ಚಿದಳು. ಛಾಯಾನಟ ರಾಗದ ಆಲಾಪನೆ ಮೃದು ಮಧುರವಾಗಿ ಮೂರ್ತೀಭವಿಸತೊಡಗಿತು.

ಮಧುಸೂದನ ಚಿತ್ತವಿಟ್ಟು ಕೇಳುತ್ತ ಕುಳಿತಿದ್ದ. ರುಕ್ಮಾಯಿ ರಾಗವನ್ನು ಐದು ನಿಮಿಷ ಹಿತವಾಗಿ ಆಲಾಪಿಸಿ ಬಳಿಕ ಅದರಲ್ಲಿಯೇ ಒಂದು ಖ್ಯಾಲ್ ಹಾಡಿದಳು. ಅನಂತರ ಶಂಕರ ರಾಗವನ್ನು ಮೂರು ನಾಲ್ಕು ನಿಮಿಷ ಆಲಾಪನೆ ಮಾಡಿ ಅದರಲ್ಲಿ ಒಂದು ತುಮ್ರಿ ಹಾಡಿದಳು. ಮಾರವದಲ್ಲಿ ಒಂದು ಚೀಸು,

ಬೇಹಾಗ್ ಶಹನಗಳಲ್ಲಿ ಎರಡು ದೇವರ ನಾಮಗಳನ್ನು ಹಾಡಿದಳು. ತಾನ ವರೇಕುಗಳಲ್ಲಿ ಅವಳದೇ ಆದ ಒಂದು ವೈಶಿಷ್ಟ್ಯ ಕಂಡುಬರುತ್ತಿತ್ತು. ಸ್ವರ ನಿಯೋಜನೆ ಉತ್ತಮ ಸಂಪ್ರದಾಯವನ್ನು ಸೂಚಿಸುತ್ತಿತ್ತು. ಶಾರೀರದಲ್ಲಿ ಬನಿಗೂಡಿದ ಮಾರ್ದವವಿತ್ತು.

ರುಕ್ಮಾಯಿ ಹಾಡಿಕೆ ಮುಗಿಸಿ ತಂಬೂರಿ ಕೆಳಗಿಳಿಸಿದಾಗ ಮಧುಸೂದನ ಮೆಲ್ಲನೆ ಚಪ್ಪಾಳೆ ತಟ್ಟಿದ.

"ಹಾಡಿಕೆ ಹಿತವೆನಿಸಿತೆ?"

ಎಂದು ಅವನ ಮುಖದ ಮೇಲೆ ಮೂಡಿದ್ದ ಮೆಚ್ಚಿಕೆಯನ್ನು ಗ್ರಹಿಸುತ್ತ ಕೇಳಿದಳು.

"ಅಮೃತಪಾನ ಮಾಡಿಸಿಯೂ ರುಚಿಯಾಗಿದೆಯೆ ಎಂದು ಕೇಳುವುದುಂಟೆ?"

"ಹಾಗಲ್ಲ. ನಿಮ್ಮಂಥ ವಿದ್ವಾಂಸರ ಅಭಿಪ್ರಾಯ ಮುಖ್ಯ."

"ಅದರಲ್ಲಿ ಸಂದೇಹವೇನಿದೆ? ತುಂಬ ಸೊಗಸಾಗಿ ಹಾಡುತ್ತೀರಿ. ನಿಮ್ಮದು ಬಹಳ ಉತ್ತಮವಾದ ಮನೋಧರ್ಮ"

ಎಂದು ತನ್ನ ಮೆಚ್ಚಿಕೆ ವ್ಯಕ್ತಪಡಿಸಿದ. ಆ ಪ್ರಶಂಸೆ ಅವಳ ಮನಸ್ಸಿನಲ್ಲಿ ಆನಂದದ ಒಂದು ಅಲೆಯುನ್ನೆಬ್ಬಿಸಿತು. ಯಾವ ಮಾತನ್ನೂ ಆಡದೆ ಕೃತಜ್ಞತೆ ತುಂಬಿದ ದೃಷ್ಟಿಯಿಂದ ಅವನ ಮುಖವನ್ನು ನೋಡಿದಳು.

ಪಕ್ಕ ವಾದ್ಯಗಾರರಿಬ್ಬರೂ ಎದ್ದು ಕೈಮುಗಿದು ಒಳಗೆ ಹೊರಟು ಹೋದರು. ಅವರು ಹೊರಟುಹೋದ ಮೇಲೆ ರುಕ್ಮಾಯಿ ಮಧುಸೂದನನತ್ತ ನೋಡಿ ತಗ್ಗಿದ ಧ್ವನಿಯಲ್ಲಿ,

"ಏನಾದರೂ ಪಾನೀಯ ತೆಗೆದುಕೊಳ್ಳುವ ಅಭ್ಯಾಸವಿದೆಯೆ?"

"ಯಾವಾಗಲಾದರೂ ಒಂದೊಂದು ಸಲ ಅಪರೂಪವಾಗಿ ತೆಗೆದುಕೊಳ್ಳುವುದುಂಟು."

"ಈಗ ಸ್ವಲ್ಪ ಸೇವಿಸಬಹುದಲ್ಲಾ"

ಎಂದು ಎದ್ದು ಬೀರುವಿನಿಂದ ವೈನ್ ಸೀಸೆಯನ್ನೂ ಎರಡು ಗ್ಲಾಸುಗಳನ್ನೂ ತೆಗೆದು ಹೊರಗಿಟ್ಟು ಒಂದು ಗ್ಲಾಸಿಗೆ ಪಾನೀಯ ಬಗ್ಗಿಸಿ ಅವನ

ಮುಂದೆ ಹಿಡಿದಳು ಅದನ್ನು ತೆಗೆದುಕೊಳ್ಳುವಾಗ ಅವಳ ಕೈಗೆ ಅವನ ಕೈ ತಾಕಿತು. ಕೋಮಲವಾದ ಆ ಬೆರಳುಗಳ ಸ್ಪರ್ಶಕ್ಕೆ ಅವನ ಮೈಯಲ್ಲಿ ಮಿಂಚು ಹರಿದ ಹಾಗಾಯಿತು. ಮಧುಸೂದನ ಕತ್ತೆತ್ತಿ ಅವಳ ಮುಖವನ್ನು ದಿಟ್ಟಿಸಿ ನೋಡಿದ.

ಹಾಡಿಕೆಯ ಆಯಾಸಕ್ಕೆ ಅವಳ ಮುಖದ ಮೇಲೆ ಮೂಡಿದ್ದ ಬೆವರು ಹನಿಗಳು ಇನ್ನೂ ಆರಿರಲಿಲ್ಲ. ಹೆರಳಿನಿಂದ ತಪ್ಪಿಸಿಕೊಂಡಿದ್ದ ಮುಂಗುರುಳು ಹಣೆಯ ಮೇಲೆ ಉಂಗುರದಂತೆ ಸುತ್ತಿಕೊಂಡಿತ್ತು. ಕಿವಿಯಲ್ಲಿ ತೂಗುತ್ತಿದ್ದ ಮುತ್ತಿನ ಜುಂಕಿಗಳು ಮುಖದ ಮಾಟವನ್ನು ಹೆಚ್ಚಿಸಿದ್ದವು. ತೆಳುವಾದ ಸೀರೆಯ ತೆರೆಯ ಮರೆಯಲ್ಲಿ ಕಂಡೂ ಕಾಣದಂತೆ ತೋರಿಬರುತ್ತಿದ್ದ ತುಂಬಿದ ಎದೆ ದೃಷ್ಟಿಯನ್ನು ಸೆರೆ ಹಿಡಿಯುತ್ತಿತ್ತು. ಮೂವತ್ತನ್ನು ಮೀರದ ಎಣ್ಣೆಗೆಂಪಿನ ಆ ಹೆಣ್ಣು ರೂಪವತಿಯಲ್ಲದಿದ್ದರೂ ಸೊಬಗಿಯಾಗಿ ಕಂಡಳು. ಮಧುಸೂದನನ ಮನಸ್ಸು ಒಂದು ಕ್ಷಣ ಆಸೆಯಿಂದ ತುಡಿಯಿತು.

ಅವನ ದೃಷ್ಟಿ ತನ್ನ ಮೇಲಿದ್ದುದನ್ನು ಗಮನಿಸಿಯೋ ಏನೋ ಅವಳು ನಸುನಾಚಿ ತಲೆ ತಗ್ಗಿಸಿದಳು. ಅವಳ ಮುಖ ಲಜ್ಜೆಯಿಂದ ಕೆಂಪಾಯಿತು. ಆ ಸನ್ನಿವೇಶದಿಂದ ಪಾರಾಗಲೋ ಎನ್ನುವಂತೆ,

"ದೆಹಲಿಯಲ್ಲಿ ಇನ್ನೆಷ್ಟು ದಿನ ಇರುತ್ತೀರಿ?"

ಎಂದು ಅವನ ಮುಖವನ್ನು ನೋಡದೆಯೆ ಕೇಳಿದಳು. ಆ ನುಡಿಯಿಂದ ಮಧುಸೂದನ ಜಾಗೃತನಾದ.

"ಹೀಗೇ ಎಂದು ಹೇಳುವುದು ಕಷ್ಟ. ಅದು ಮುಂದಿನ ಕಾರ್ಯಕ್ರಮವನ್ನವಲಂಬಿಸಿದೆ."

"ಒಂದೆರಡು ದಿನವೂ ನಿಲ್ಲಲಾಗುವುದಿಲ್ಲವೆ?"

ರುಕ್ಮಾಯಿ ಅನುನಯದಿಂದ ನುಡಿದ ಆ ಮಾತಿನಲ್ಲಿ ಮಧುಸೂದನನಿಗೆ ಏನೋ ಅರ್ಥ ಹೊಳೆಯಿತು. ಅವನು ಅವಳ ಮುಖವನ್ನೇ ನೋಡುತ್ತ,

"ನನಗೆ ಕೆಲವು ತೊಂದರೆಗಳಿವೆ. ಜೊತೆಯಲ್ಲಿ ಸ್ನೇಹಿತರು ಬಂದಿದ್ದಾರೆ. ನನ್ನ ಕಾಲ ನನ್ನದಲ್ಲ"

ಎಂದು ಉತ್ತರವಿತ್ತ. ರುಕ್ಮಾಯಿಯ ಮುಖದ ಮೇಲೆ ಯಾವುದೋ

ಭಾವ ಸುಳಿದು ಮರೆಯಾಯಿತು. ಅವಳ ಮನಸ್ಸಿನಲ್ಲಿ ಏನು ನಡೆಯುತ್ತಿದೆ ಯೆನ್ನುವುದು ಸುಲಭವಾಗಿ ಅರ್ಥವಾಗುವ ಹಾಗಿರಲಿಲ್ಲ. ತನ್ನ ಉತ್ತರದಿಂದ ಅವಳಿಗೆ ನಿರಾಶೆಯಾಗಿರಬಹುದೇ ಎಂದು ಅವನು ಮನಸ್ಸಿನಲ್ಲೇ ಪ್ರಶ್ನಿಸಿಕೊಂಡ.

"ನಾನೂ ಮುಂಬಯಿಗೆ ಹೋಗುವ ಕಾರ್ಯಕ್ರಮವಿದೆ"

ಎಂದು ರುಕ್ಮಾಯಿ ಒಂದು ಗಳಿಗೆ ಬಿಟ್ಟು ಹೇಳಿದಳು.

"ಯಾವಾಗ ಬರುತ್ತೀರಿ?"

ಎಂದು ಮಧುಸೂದನ ಆತುರದಿಂದ ಕೇಳಿದ.

"ನೀವು ಅಲ್ಲೇ ಇರುತ್ತೀರಾ?"

"ಸದ್ಯಕ್ಕೆ ಅಲ್ಲೇ ಇದ್ದೇನೆ."

"ನಮ್ಮ ಬಂಧುಗಳೊಬ್ಬರ ಮನೆಯ ಮದುವೆಯ ಸಂದರ್ಭಕ್ಕೆ ನಾನು ಹೋಗಬೇಕಾಗಿದೆ. ಬಹುಶಃ ಮುಂದಿನ ತಿಂಗಳು ಅದು ಬೀಳಬಹುದು."

"ನಿಮ್ಮವರು ಅಲ್ಲಿ ಯಾರಿದ್ದಾರೆ?"

"ನಮ್ಮ ಅಕ್ಕ ಭಾವ ಇದ್ದಾರೆ; ನಮ್ಮ ಸೋದರ ಮಾವ ಇದ್ದಾರೆ."

"ಇಲ್ಲಿ ನೀವೊಬ್ಬರೇ ಇದ್ದೀರಾ?"

"ಇಲ್ಲ. ನಮ್ಮ ತಾಯಿ ಇದ್ದಾರೆ. ಅವರ ಆರೋಗ್ಯವೂ ಸರಿಯಾಗಿಲ್ಲ."

"ಮುಂಬಯಿ ನಿಮ್ಮ ಸ್ಥಳವಲ್ಲವೆ?"

"ಹೌದು."

"ಅದನ್ನು ಬಿಟ್ಟು ದೆಹಲಿಯಲ್ಲಿ ನೆಲಸಲು ಕಾರಣವೇನು?"

"ಮುಂಬಯಿಯ ಗೊಂದಲ, ಸ್ಪರ್ಧೆಗಳು ನನಗೆ ಬೇಸರ ಹಿಡಿಸಿದ್ದವು. ಒಮ್ಮೆ ಬೈಠಕಿಗೆ ಇಲ್ಲಿಗೆ ಬಂದಿದ್ದೆ. ಇಲ್ಲಿನ ವಾತಾವರಣ ನನ್ನ ಮನಸ್ಸಿಗೆ ಹಿಡಿಸಿತು. ಇಲ್ಲೇ ನಿಂತುಬಿಟ್ಟೆ"

ಎಂದು ನಕ್ಕಳು. ಮಧುಸೂದನ ಹೊತ್ತಾಯಿತೆಂದು ಎದ್ದ.

"ನಾನಿನ್ನು ಹೋಗಿಬರಲೆ?"

ರುಕ್ಮಾಯಿ ಗಂಭೀರಭಾವದಿಂದ ಅವನೆದುರಿಗೆ ಕೈಜೋಡಿಸಿ ನಿಂತಳು.

“ಏನೋ ಕರೆದಳೆಂದು ಉದಾಸಿನ ಮಾಡದೆ ದೊಡ್ಡ ಮನಸ್ಸು ಮಾಡಿ ಬಂದಿರಿ. ಈ ವಿಶ್ವಾಸ ಹೀಗೆಯೇ ಇರಬೇಕು.”

“ನನ್ನ ಅಪೇಕ್ಷೆಯೂ ಅದೇ”

ಎಂದು ಮಧುಸೂದನ ಉತ್ತರವಿತ್ತು ರುಕ್ಮಾಯಿ ಜೋಡಿಸಿದ ಎರಡು ಹಸ್ತಗಳನ್ನೂ ಅನಿರೀಕ್ಷಿತವಾಗಿ ಹಿಡಿದುಕೊಂಡ.

“ಮುಂಬಯಿಗೆ ಬಂದಾಗ ನನ್ನನ್ನು ಭೇಟಿಯಾಗಲು ಮರೆಯಬೇಡಿ. ನಿಮ್ಮ ಆಗಮನವನ್ನು ನಾನು ಎದುರು ನೋಡುತ್ತಿರುತ್ತೇನೆ”

ಎಂದ. ಅವನ ಧ್ವನಿಯಲ್ಲಿ ಉದ್ವೇಗವಿತ್ತು. ಅದರ ಸೋಂಕು ಅವಳಿಗೂ ಹರಿದು ಅವಳ ಮೈ ಝುಲ್ಲೆಂದಿತು; ಮುಖಕ್ಕೆ ಕೆಂಪಡರಿತು; ಅವನ ಹಿಡಿತ ದಲ್ಲಿದ್ದ ಅವಳ ಹಸ್ತ ಬೆವತಿತು. ತನ್ನ ದೃಷ್ಟಿಯನ್ನು ಅವನ ಮುಖದಿಂದ ಕೀಳ ಲಾರದೆ ಯಾವುದೋ ಮೋಡಿಗೆ ಸಿಕ್ಕಿದವಳಂತೆ,

“ನಿಮ್ಮನ್ನು ನೋಡುವುದೆಲ್ಲಿ?”

ಮಧುಸೂದನ ಕ್ಷಣಕಾಲ ಯೋಚಿಸಿದ. ಬಳಿಕ ತನ್ನ ವಿಳಾಸವನ್ನು ಸೂಚಿಸಿ,

“ಅಲ್ಲಿಗೆ ಸಮಾಚಾರ ತಲಪಿಸಿದರೆ ನನಗೆ ಗೊತ್ತಾಗುತ್ತದೆ”

ಎಂದ. ರುಕ್ಮಾಯಿ ಆಗಲೆಂದು ತಲೆ ಆಡಿಸಿದಳು. ಮಧುಸೂದನ ಅವಳ ಕೈಯನ್ನು ತಟಕ್ಕನೆ ಬಿಟ್ಟು ಹೊರಟುಹೋದ. ಆವೇಗಕ್ಕೆ ಸಿಕ್ಕಿದ ಅವನ ಮನಸ್ಸು ಗಿರಗಿರನೆ ಸುತ್ತುತ್ತಿತ್ತು. ರುಕ್ಮಾಯಿ ಭ್ರಮಿತಳಾದವಳಂತೆ ನಿಂತು ಅವನು ಹೋದ ದಾರಿಯನ್ನೇ ನೋಡುತ್ತಿದ್ದಳು.

ಶ್ರೀಧರಮೂರ್ತಿಗಳ ಕಾರು ಮನೆಯ ಮುಂದೆ ನಿಂತೇ ಇತ್ತು. ಮಧು ಸೂದನ ಯಾಂತ್ರಿಕವಾಗಿ ಕಾರು ಹತ್ತಿ ಕುಳಿತುಕೊಂಡ.

“ಡ್ರೈವರ್, ಈಗ ನಾವು ಹೋಗುವುದೆಲ್ಲಿ?”

ಎಂದು ತಾನೇನು ಕೇಳುತ್ತಿರುವೆನೆನ್ನುವುದನ್ನು ತಿಳಿಯದೆಯೆ ಪ್ರಶ್ನಿಸಿದ. ಅದನ್ನು ಕೇಳಿ ಡ್ರೈವರಿಗೆ ಅಚ್ಚರಿಯಾಯಿತು.

“ಎಲ್ಲಿಗೆ ಹೋಗುವುದು ಸಾರ್, ಮನೆಗಲ್ಲವೆ?”

“ಬೇಡ. ನಿನಗೆ ‘ಸುಖ ನಿವಾಸ’ ಹೋಟೆಲ್ ಗೊತ್ತೆ?”

“ಗೊತ್ತಿಲ್ಲ ಸಾರ್. ವಿಚಾರಿಸಬೇಕು.”

"ವಿಚಾರಿಸೋಣ, ನಡಿ. ಬಜಾರ್ ರಸ್ತೆಯಲ್ಲಿ ಎಲ್ಲೋ ಇರಬಹುದು."

"ಈಗ ಅಲ್ಲಿಗೇ ಹೋಗೋಣವೇ, ಸಾರ್?"

"ಹೌದು. ಅಲ್ಲಿಗೇ ಬಿಡು. ಅಲ್ಲಿ ಸ್ವಲ್ಪ ಕೆಲಸವಿದೆ"

ಎಂದು ನೀಳವಾಗಿ ಸುಯ್ದು ಕಾರಿನ ದಿಂಬಿಗೆ ಮೈಯಾತು ಕುಳಿತು ಕೊಂಡ. ಅವನು ಕುಮುದನನ್ನು ನೋಡುವುದು ಅನಿವಾರ್ಯವಾಗಿತ್ತು. ಪ್ರಕ್ಷುಬ್ಧವಾಗಿದ್ದ ಅವನ ಮನಸ್ಸು ಹೆಣ್ಣಿನ ಸಂಗಕ್ಕೆ ಹಾತೊರೆಯುತ್ತಿತ್ತು.

ಕಾರು 'ಸುಖ ನಿವಾಸ'ದ ಹಾದಿ ಹಿಡಿದು ವೇಗವಾಗಿ ಸಾಗಿತು.

೨೪

ಹವಿಾದ್ ಕೆಲಸವನ್ನೇನೋ ಉತ್ಸಾಹದಿಂದಲೇ ಒಪ್ಪಿಕೊಂಡಿದ್ದ. ಆದರೆ ಅದು ತಾನು ಭಾವಿಸಿದ್ದಷ್ಟು ಸುಲಭವಲ್ಲವೆಂದು ಅವನ ತಿಳಿವಳಿಕೆಗೆ ಬರಲು ಹೆಚ್ಚು ಕಾಲ ಬೇಕಾಗಲಿಲ್ಲ. ಮನೆಗೆಲಸ ಮುಗಿದ ಮೇಲೆ ಮೂರು ನಾಲ್ಕು ಘಂಟೆಗಳ ಹೊತ್ತು ಊರನ್ನು ಸುತ್ತುವುದು ಅವನ ನಿತ್ಯವಿಧಿಯಾಗಿತ್ತು. ಒಂದೊಂದು ದಿನ ಒಂದೊಂದು ಕಡೆ ಹೋಗುತ್ತಿದ್ದ. ಎಲ್ಲಿ ಹೋದರೂ ಒಂದೇ ಉತ್ತರ: ಗೊತ್ತಿಲ್ಲ, ಕಾಣೆವು, ತಿಳಿಯದು. ಹೋದ ಕಡೆಗಳಲ್ಲೆಲ್ಲಾ ಇಲ್ಲವೆನ್ನಿಸಿ ಕೊಂಡು ಬರುವುದು ಅವನಿಗೆ ಸರ್ವಸಾಮಾನ್ಯವಾಯಿತು. ಮುಂಬಯಿಯ ಪೇಟೆಯಲ್ಲಿ ಸುತ್ತಿ ಸುತ್ತಿ ಕಾಲು ಬಿದ್ದುಹೋಯಿತೇ ವಿನಾ ಮಧುಸೂದನನ ನೆಲೆ ಮಾತ್ರ ಅವನಿಗೆ ಸಿಕ್ಕಲಿಲ್ಲ. ಅವನನ್ನು ಹುಡುಕುವುದು ಹುಲ್ಲಿನ ಮೆದೆ ಯಲ್ಲಿ ಸೂಜಿಯನ್ನು ಹುಡುಕುವಷ್ಟೇ ಸುಲಭವಾಗಿತ್ತು.

ಬೇರೆಯವರಾಗಿದ್ದರೆ ಬೇಸತ್ತು ಆ ಕೆಲಸವನ್ನು ಅಷ್ಟಕ್ಕೇ ಬಿಟ್ಟುಬಿಡು ತ್ತಿದ್ದರೇನೋ. ಆದರೆ ಹವಿಾದನ ವಿಷಯವೇ ಬೇರೆ. ತನ್ನ ಕೆಲಸದಲ್ಲಿ ಸೋತೆ ನೆಂದು ಒಪ್ಪಿಕೊಳ್ಳಲು ಅವನು ಸಿದ್ಧನಾಗಿರಲಿಲ್ಲ. ರೋಷನ್ನಳ ವಿಚಾರದಲ್ಲಿ ಅವನಿಗೆ ಅವ್ಯಾಜವಾದ ಒಂದು ನಿಷ್ಠೆಯಿತ್ತು. ತನಗೊಪ್ಪಿಸಿದ ಕೆಲಸ ಮಾಡಿ ದರೆ ಅವಳಿಗೆ ಸಂತೋಷವಾಗುವುದೆಂದು ಅವನಿಗೆ ಗೊತ್ತಿತ್ತು. ಜೊತೆಗೆ ಅವಳು ತೋರಿಸಿದ್ದ ಬಹುಮಾನದ ಆಸೆ ನಿಷ್ಫಲವಾದ ಸುತ್ತಾಟದಿಂದ ಬರಿ ದಾಗುತ್ತಿದ್ದ ಅವನ ಉತ್ಸಾಹವನ್ನು ಮತ್ತೆ ಮತ್ತೆ ತುಂಬುತ್ತಿತ್ತು. ಅಂತೆಯೇ ಹವಿಾದ್ ಮಧುಸೂದನನ ನೆಲೆ ಹುಡುಕುವುದರಲ್ಲಿ ಪಟ್ಟು ಹಿಡಿದು ಕುಳಿತಿದ್ದ.

ಅವನ ನಿರೀಕ್ಷೆಗೆ ಮಿಾರಿದ ಒಂದು ಘಟನೆ ನಡೆಯದಿದ್ದರೆ ಅವನಿಗೆ ಬೇಟೆಯ ಜಾಡು ಸಿಕ್ಕುತ್ತಿತ್ತೋ ಇಲ್ಲವೋ.

ಒಂದು ಸಂಜೆ ಎಲ್ಲೆಲ್ಲೋ ಸುತ್ತಾಡಿಕೊಂಡು ಮಾತುಂಗಕ್ಕೆ ಬಂದವನು ದಣಿವಾರಿಸಿಕೊಳ್ಳಲು ಇರಾನೀ ಹೋಟೆಲೊಂದನ್ನು ಹೊಕ್ಕು ಮಾಣಿಗೆ ಚಹ ತರಲು ಹೇಳಿ ಕುಳಿತ. ಆ ವೇಳೆಗೆ ಸರಿಯಾಗಿ ಅವನ ಹಳೆಯ ದೋಸ್ತಿ ಮಲ್ಯ ಹೋಟೆಲು ಪ್ರವೇಶಿಸಿದ. ಹವಿಾದನನ್ನು ಕಂಡು ಮಲ್ಯನ ಬಾಯಿ ಕಿವಿಯವರೆಗೂ ಹೋಯಿತು.

"ಅರೆ ಹವಿಾದ್! ಏನೋ ಇಲ್ಲಿ?"

"ಸುಮ್ಮನೆ ಬಂದಿದ್ದೆ ಕಣಣ್ಣ"

ಎಂದು ಹವಿಾದ್ ಪೆಚ್ಚುಮೋರೆ ಹಾಕಿಕೊಂಡು ಹೇಳಿದ.

"ನಾಷ್ಟಾ ಆಯಿತಾ?"

"ಇಲ್ಲ. ಈಗಲೇ ಚಾಗೆ ಹೇಳಿದೆ"

"ಬರೀ ಚಾ? ಥತ್, ಎಂಥ ಗಂಡಸೋ? ಬಾಯಿಗೊಂದು ಚಾಪೀಸಾದರೂ ಬೇಡವಾ?"

"ಕಾಸಿಲ್ಲಣ್ಣ"

"ಬಿಡುಬಿಡೋ. ನಿನಗೆ ಕಾಸಿಗೆ ಬರವಾ ನಿಮ್ಮ ಅಮ್ಮಾವರು ಇರೋವಾಗ?"

ಎಂದು ಮಲ್ಯ ಅರ್ಥಗರ್ಭಿತವಾಗಿ ನಕ್ಕ.

"ಆ ಕಾಲ ಮುಗಿದುಹೋಯಿತು, ಮಲ್ಯ"

ಎಂದು ಹವಿಾದ್ ನೊಂದುಕೊಂಡವನಂತೆ ನುಡಿದ. ನಿಜಕ್ಕೂ ಅವನ ಜೇಬಿನಲ್ಲಿ ನಾಲ್ವರಿಗೆ ಕಂಠಪೂರ್ತಿ ತಿಂಡಿಯಾಗುವಷ್ಟು ದುಡ್ಡಿತ್ತು. ಆದರೆ ಮಲ್ಯನನ್ನು ಕಂಡು ಬೇಕೆಂತಲೇ ಅಟ ಕಟ್ಟಿದ್ದ.

"ಹೋಗಲಿ, ಚಾಪೀಸಿಗೆ ಹೇಳು"

ಎಂದು ಮಲ್ಯ ಕುರ್ಚಿಯೊರಗಿ ಕುಳಿತ.

"ನಿನಗೆ ಬೇಡವಾ?"

"ನನಗೂ ನಿನಗೂ ಇಬ್ಬರಿಗೂ."

ಬಿಲ್ಲನ್ನು ಮಲ್ಯನ ತಲೆಗೆ ಕಟ್ಟಬಹುದೆಂದು ಗೊತ್ತಾದ ಮೇಲೆ ಹವಿಾದ್ ಧೈರ್ಯವಾಗಿ ಕುಳಿತ. ಇಬ್ಬರೂ ಚಾಪೀಸ್ ತಿಂದು ಚಹ ಕುಡಿದು ಒಂದೊಂದು ಬೀಡಿ ಹೊತ್ತಿಸಿದರು.

"ಏನು ಸಮಾಚಾರ?"

ಎಂದು ಮಲ್ಯ ಬಲವಾಗಿ ಒಂದು ದಂ ಬೀಡಿ ಎಳೆದು ಹೊಗೆಯನ್ನು ನಿಧಾನವಾಗಿ ಮೇಲಕ್ಕೆ ಹಾಯಿಸುತ್ತ ಕೇಳಿದ.

"ಏನೋ ಒಂದು ಕೆಲಸಕ್ಕೆ ಹೊರಟದ್ದೆ"

"ಏನು ಹೇಳು"

ಹವಿಾದ್ ಒಂದೆರಡು ನಿಮಿಷ ಸುಮ್ಮನಿದ್ದ. ಅವನು ಅನುಮಾನಿಸು ತ್ತಿರಬಹುದೆಂದು ಮಲ್ಯನಿಗೆ ತೋರಿತು.

"ಅದೇನು ಗುಟ್ಟು? ಹೇಳೋ ಮಾತಲ್ಲವಾ?"

"ನಿನ್ನ ಹತ್ತಿರ ಗುಟ್ಟೇನಣ್ಣ? ನಡಿ, ಹೊರಗೆ ಹೋಗೋಣ"

ಎಂದ. ಇಬ್ಬರೂ ಎದ್ದು ಹೋಟೆಲಿನಿಂದ ಹೊರಗೆ ಬಂದರು. ಸ್ವಲ್ಪ ದೂರದವರೆಗೂ ಹವಿಾದ್ ಮಾತಾಡಲಿಲ್ಲ. ಮಲ್ಯ ಅವನ ಹೆಗಲ ಮೇಲೆ ಕೈಹಾಕಿ,

"ಈಗ ಹೇಳು, ಇಲ್ಲಿ ಯಾರೂ ಇಲ್ಲ"

ಎಂದ. ಹವಿಾದ್ ತನ್ನ ಸುತ್ತಾಟದ ಉದ್ದೇಶವನ್ನು ನಾಲ್ಕು ಮಾತಿನಲ್ಲಿ ವಿವರಿಸಿದ. ಅವನ ಬಾಯಲ್ಲಿ ಮಧುಸೂದನನ ಹೆಸರು ಕೇಳಿ ಮಲ್ಯನ ಕಣ್ಣಲ್ಲಿ ಯಾವುದೋ ಹೊಸ ಬೆಳಕು ಮೂಡಿತು.

"ಅವರಾ?"

ಎಂದು ದೊಡ್ಡದಾಗಿ ಉದ್ಗಾರ ತೆಗೆದ. ಅದರಲ್ಲಿ ತನಗೆಲ್ಲವೂ ತಿಳಿದಿದೆ ಯೆನ್ನುವಧ್ವನಿಯಿತ್ತು.

"ನಿನಗೆ ಗೊತ್ತಾ ಮಲ್ಯ?"

"ಅಲ್ಲೊಂದು ಹೋಟೆಲಿದೆ. ಅಲ್ಲಿ ವಿಚಾರಿಸು. ನಿನಗೆ ಆಸಾಮಿಯ ಪತ್ತೆ ಸಿಕ್ಕದಿದ್ದರೆ ನಾನು ಮೂಗು ಮೂರು ತುಂಡು ಮಾಡಿಸಿಕೊಳ್ಳುತ್ತೇನೆ"

ಎಂದು ಹೆಮ್ಮೆಯಿಂದ ನಕ್ಕ. ಮಲ್ಯನ ಕಸುಬು ಯಾವುದೆನ್ನುವುದು ಹವಿಾದನಿಗೆ ಗೊತ್ತಿದ್ದರೂ 'ವಿಜಯ ವಿಲಾಸ'ದ ಆಡಳಿತವನ್ನು ಆವನು ಬಲ್ಲನೆನ್ನುವುದಾಗಲಿ ಅಥವಾ ಅಲ್ಲಿಗೆ ಹುಡುಗಿಯರನ್ನು ಒದಗಿಸುವುದರಲ್ಲಿ ಅವನ ಕೈವಾಡವಿತ್ತೆನ್ನುವುದಾಗಲಿ ಗೊತ್ತಿರಲಿಲ್ಲ. ಮಲ್ಯ 'ವಿಜಯವಿಲಾಸ'ದ ಬಾಗಿಲವರೆಗೂ ಹವಿಾದನನ್ನು ಕರೆತಂದು ಬಿಟ್ಟು ತಾನು ಹೊರಗೇ ನಿಂತ.

"ನಾನು ಬರುವುದಿಲ್ಲ. ನೀನೊಬ್ಬನೇ ಒಳಗೆ ಹೋಗಿ ವಿಚಾರಿಸು. ಹಾಳು ಪೋಲೀಸಿನವರ ಕಾಟ"

ಎಂದವನೇ ಹವಿಾದ್ ತಿರುಗಿ ನೋಡುವ ಮೊದಲೇ ಪಕ್ಕದ ಸಂದಿ ಬಿದ್ದು ಕಣ್ಮರೆಯಾದ. ಹವಿಾದ್ ಮಲ್ಯನ ಅನಿರೀಕ್ಷಿತ ವರ್ತನೆಗೆ ಅಚ್ಚರಿ ಪಡುತ್ತ ಹೋಟೆಲಿನ ಮೆಟ್ಟಲು ಹತ್ತಿ ಒಳಗೆ ಹೋದ.

ಹೆಬ್ಬಾಗಿಲು ದಾಟಿದ ಕೂಡಲೇ ವರಾಂಡ. ಶಿವರಾಮಯ್ಯ ಅಲ್ಲೇ ಗಲ್ಲದ ಮೇಲೆ ಕುಳಿತು ಲೆಕ್ಕ ನೋಡುತ್ತಿದ್ದ. ಹವಿಾದ್ ಒಳಗೆ ಬಂದದ್ದನ್ನು ಗಮನಿಸಿದ ಅವನು ಯಾರೋ ಊಟಕ್ಕೆ ಬಂದಿರಬಹುದೆಂದು ಭಾವಿಸಿದ.

"ಇಷ್ಟು ಬೇಗ ಊಟ ಸಿದ್ಧವಾಗಿಲ್ಲ. ಇನ್ನೂ ಸ್ವಲ್ಪ ತಡ"

ಎಂದು ಲೆಕ್ಕದ ಕಡತದ ಮೇಲೆ ದೃಷ್ಟಿಯಿದ್ದಂತೆಯೇ ಹೇಳಿದ. ಹವಿಾದ್ ಮಾತಾಡದೆ ಸುಮ್ಮನೆ ನಿಂತಿದ್ದ. ಒಂದೆರಡು ಕ್ಷಣ ಬಿಟ್ಟು ಶಿವರಾಮಯ್ಯ ತಲೆಯೆತ್ತಿ ನೋಡಿದ.

"ನಾನು ಹೇಳಿದ್ದು ಕೇಳಿಸಲಿಲ್ಲವೆ?"

"ನಾನು ಊಟಕ್ಕೆ ಬಂದಿಲ್ಲ, ಸಾಮಿ."

"ಸರಿ, ಮತ್ತೇನು ಕೆಲಸ?"

"ಮೈಸೂರಿನವರು ಯಾರೋ ಇಲ್ಲಿ ಇಳಿದಿರುವರಂತೆ, ಹೌದೆ?"

"ಮೈಸೂರಿನವರು? ನಾನೇ ಮೈಸೂರಿನವನು"

ಎಂದು ಶಿವರಾಮಯ್ಯ ಏನೋ ಹಾಸ್ಯ ಕಂಡವನಂತೆ ಫಕ್ಕನೆ ನಕ್ಕ.

"ಯಾರೋ ಗಾನ ಮಾಡೋವರಂತೆ."

"ಗಾನ ಮಾಡೋವರು? ಯಾರು, ಮಧುಸೂದನರಾಯರೆ?"

"ಹೌದು, ಸಾಮಿ"

"ನೀನು ಯಾರು?"

ಹವಿಾದನಿಗೆ ತಾಪತ್ರಯಕ್ಕಿಟ್ಟುಕೊಂಡಿತು. ರೋಷನ್ ಕಳಿಸಿದಳೆಂದು ಅವನು ಹೇಳುವ ಹಾಗಿರಲಿಲ್ಲ. ಅವನ ಬುದ್ಧಿ ಚುರುಕಾಗಿ ಓಡತೊಡಗಿತು. ಇಕ್ಕಟ್ಟಿನಿಂದ ಪಾರಾಗಲು ಅವನು ಏನಾದರೊಂದು ಸ್ಪಷ್ಟಣೆ ಮಾಡಬೇಕಾಗಿತ್ತು.

"ಮೈಸೂರು ಸಾಹೇಬರು ನೋಡಿಕೊಂಡು ಬಾ ಅಂದರು"

ಎಂದು ಏನೋ ಸ್ಫೂರ್ತಿ ಬಂದವನ ಹಾಗೆ ಒಂದು ಸುಳ್ಳು ಬಿಟ್ಟ.

" ಯಾವ ಸಾಹೇಬರು ?"

" ಅದೇ ಕಮಿಾಷನರ್ ಸಾಹೇಬರು, ಸಾಮಿ. ನೆನ್ನೆ ಬಂದರು. ಇಲ್ಲಿರ ಬಹುದೇನೋ ನೋಡಿ ಬಾ ಅಂದರು "

" ಯಾವ ಕಮಿಾಷನರ್ ಸಾಹೇಬರೋ ನನಗೇನು ಗೊತ್ತು? ಮೈಸೂರಿನಲ್ಲಿ ಎಷ್ಟೋ ಜನ ಸಾಹೇಬರುಗಳಿದ್ದಾರೆ "

ಎಂದು ಶಿವರಾಮಯ್ಯ ತಾತ್ಸಾರದ ನಗೆ ನಕ್ಕು ಮುಖ ತಿರುಗಿಸಿದ. ಹವಿಾದ್ ತನಗೆ ಅದಕ್ಕಿಂತ ಹೆಚ್ಚಾಗಿ ತಿಳಿಯದೆನ್ನುವಂತೆ ಬೆಪ್ಪನ ಹಾಗೆ ಕಣ್ಣು ಕಣ್ಣು ಬಿಡುತ್ತ ನಿಂತಿದ್ದ. ಮೈಸೂರಿನಿಂದ ಬಂದಿರುವ ಯಾವ ಅಧಿಕಾರಿಯೋ ಮಧುಸೂದನನಿಗಾಗಿ ಹೇಳಿ ಕಳಿಸಿರಬಹುದೆಂದು ಶಿವರಾಮಯ್ಯ ಊಹಿಸಿದ.

" ಮಧುಸೂದನರಾಯರು ಇಲ್ಲಿಲ್ಲ"

ಎಂದು ಕ್ಷಣ ಬಿಟ್ಟು ಹೇಳಿದ.

" ಎಲ್ಲಿ ಹೋದರು ಸಾಮಿ ?"

" ಅವರು ಊರಲಿಲ್ಲ. ದೆಹಲಿಯ ಕಡೆ ಹೋಗಿದ್ದಾರೆ."

" ಬರುವುದು ಯಾವಾಗಲೋ ?"

" ಇನ್ನೂ ಹತ್ತು ಹದಿನೈದು ದಿನ ಆಗಬಹುದು."

" ಸರಿ, ಸಾಮಿ "

ಎಂದು ಹವಿಾದ್ ಒಂದು ಸಲಾಂ ಹಾಕಿ ಹೊರಟುಬಿಟ್ಟ. ಅವನು ಬಂದ ಕೆಲಸವೇನೋ ಒಂದು ರೀತಿಯಲ್ಲಿ ಆದಹಾಗಿತ್ತು. ಮಧುಸೂದನ ಸಿಕ್ಕದಿದ್ದರೂ ಅವನ ನೆಲೆ ಸಿಕ್ಕಿತ್ತು. ಇಂದಲ್ಲದಿದ್ದರೆ ಇನ್ನು ಹದಿನೈದು ದಿನಕ್ಕಾದರೂ ಅವನನ್ನು ಹಿಡಿಯಬಹುದೆನ್ನುವ ನಂಬಿಕೆ ಹವಿಾದನಿಗಿತ್ತು. ಆ ನಂಬಿಕೆಯಲ್ಲಿ ಅವನಾಗಲೇ ಕಾರ್ಯಸಾಧನೆಯ ತೃಪ್ತಿಯನ್ನು ಕಂಡ.

ಅದೇ ಸಮಾಧಾನ ರೋಷನ್ನಳಿಗಿರಲಿಲ್ಲ. ಹವಿಾದ್ ಏನೋ ಸಾಧಿಸಿ ಕೊಂಡು ಬಂದುಬಿಡುತ್ತಾನೆಂದು ಅವಳು ತುಂಬ ಉತ್ಸುಕಳಾಗಿದ್ದಳು. ಆದರೆ ಅವನು ಬಂದು ಮಧುಸೂದನ ಊರಲ್ಲಿಲ್ಲವೆಂದು ಕೈ ಅಲ್ಲಾಡಿಸಿಬಿಟ್ಟಾಗ ಅವಳಿಗೆ ನಿರಾಶೆಯೇ ಆಯಿತು. ಆ ನಿರಾಶೆಯಲ್ಲಿ ಅವಳು ಒಂದು ಗಳಿಗೆ

ಕರ್ತವ್ಯಮೂಢಳಾಗಿ ಕುಳಿತಳು. ಅವಳ ಮುಖದ ಮೇಲೆ ದುಗುಡ ಮೂಡಿತು. ಹವಿಾದ್ ಅದನ್ನು ಗಮನಿಸಿ,

"ಹದಿನೈದು ದಿವಸಕ್ಕೆ ಏಕಮ್ಮ ಯೋಚನೆ? ರಾಯರು ಊರಿಗೆ ಬರಲಿ, ನಾನೇ ಹೋಗಿ ಕರೆದುಕೊಂಡು ಬರುತ್ತೇನೆ"

ಎಂದು ಭರವಸೆ ನೀಡುವ ಧ್ವನಿಯಲ್ಲಿ ನುಡಿದ. ಅವನ ಹುಂಬತನ ನೋಡಿ ರೋಷನ್ನಳಿಗೆ ನಗೆ ಬಂದಿತು.

"ಆ ಕೆಲಸ ಅಷ್ಟು ಸುಲಭವೆಂದು ತಿಳಿದೆಯಾ, ಹವಿಾದ್?"

"ಅದನ್ನು ನನಗೆ ಬಿಟ್ಟು ನೋಡಿ, ಅಮ್ಮ"

ಎಂದು ಆತ್ಮ ವಿಶ್ವಾಸದ ತಲೆಯ ಮೇಲೆ ಹೊಡೆಯುವ ಹಾಗೆ ಹೇಳಿದ. ಅವನ ಆಶ್ವಾಸನದಲ್ಲಿ ಭರವಸೆಯಿಲ್ಲದಿದ್ದರೂ ಅವಳ ಮನಸ್ಸು ಅನೈಚ್ಛಿಕವಾಗಿ ಅದಕ್ಕೇ ಜೋತುಬಿದ್ದಿತು.

ಮಧುಸೂದನನನ್ನು ನೋಡುವ, ಕೂಡುವ ನಿರೀಕ್ಷೆಯ ಚಿಪ್ಪಿನಲ್ಲಿ ಸೇರಿಕೊಂಡ ಅವಳ ಮನಸ್ಸು ಅದರಲ್ಲಿಯೇ ಒಂದು ಸಮಾಧಾನವನ್ನು ಕಂಡು ದಿನ ನೂಕಿ ಬಿಡುತ್ತಿತ್ತೇನೋ. ಆದರೆ ಮಿಂಚಿನಂತೆ ನಡೆದ ಒಂದೆರಡು ಘಟನೆಗಳು ಪರಿಸ್ಥಿತಿಯನ್ನು ಇದ್ದಕ್ಕಿದ್ದ ಹಾಗೆ ಬದಲಾಯಿಸಿಬಿಟ್ಟವು.

ಒಂದು ದಿನ ಬೆಳಗ್ಗೆ ಹವಿಾದ್ ಮನೆಯ ಮುಂದಿನ ತೋಟದಲ್ಲಿ ಹೂವಿನ ಗಿಡಗಳಿಗೆ ನೀರು ಹಾಯಿಸುತ್ತಿದ್ದ. ರೋಷನ್ ಸ್ವಲ್ಪ ದೂರದಲ್ಲಿ ನಿಂತು ನೋಡುತ್ತಿದ್ದಳು. ಇದ್ದಕ್ಕಿದ್ದ ಹಾಗೆ ಅವಳ ಕಿವಿಯ ಹತ್ತಿರ ರೊಯ್ಯೆಂದು ಸದ್ದಾಗಿ ದಪ್ಪ ಕಲ್ಲೊಂದು ಹಿಂದುಗಡೆಯಿಂದ ಹಾದು ಬಂದು ಬಿತ್ತು. ಆ ಸದ್ದಿಗೆ ರೋಷನ್ ಬೆಚ್ಚಿಬಿದ್ದಳು.

"ಹವಿಾದ್, ಹವಿಾದ್!"

ಕೈಯಲ್ಲಿದ್ದ ರಬ್ಬರ್ ನಳಿಗೆಯನ್ನು ಹಾಗೇ ಬಿಟ್ಟು ಹವಿಾದ್ ಓಡಿಬಂದ.

"ಏನಮ್ಮ, ಏನಾಯಿತು?"

"ನೋಡು, ಯಾರೋ ಕಲ್ಲೆಸೆದಿದ್ದಾರೆ"

ಎಂದು ರೋಷನ್ ತನ್ನ ಮುಂದೆ ಬಿದ್ದಿದ್ದ ಕಲ್ಲನ್ನು ತೋರಿಸಿ, ಹಿಂತಿರುಗಿ ಅದು ಬಂದ ದಿಕ್ಕನ್ನೇ ನಿಟ್ಟಿಸುತ್ತ ನಿಂತಳು- ಹವಿಾದ್ ಮರುಮಾತಿಲ್ಲದೆ ಕಾಂಪೌಂಡಿನ ಹತ್ತಿರ ಓಡಿಹೋಗಿ ಬಗ್ಗಿನೋಡಿದ. ಅಲ್ಲಿ ಯಾರೂ ಇರಲಿಲ್ಲ.

ಪಕ್ಕದ ಬಂಗಲೆ ಕೆಲವು ದಿವಸಗಳಿಂದ ಖಾಲಿಯಿತ್ತು. ಅದನ್ನು ತಿಳಿದು ಯಾರಾದರೂ ಅಲ್ಲಿಗೆ ಬಂದು ಗೋಡೆಯ ಹಿಂದೆ ನಿಂತು ಅಲ್ಲಿಂದ ಕಲ್ಲೆಸೆದಿರಬಹುದೆ? ಹಾಗೆ ಎಸೆದಿರಬಹುದಾದರೆ ಅಷ್ಟು ಬೇಗ ಕಣ್ಮರೆಯಾಗಲು ಸಾಧ್ಯವಿರಲಿಲ್ಲ. ಯಾರಾದರೂ ಮನೆಯ ಹಿಂದೆ ಓಡಿಹೋಗಿ ಅಡಗಿಕೊಂಡಿರಬಹುದೆ? ಅಥವಾ ರಸ್ತೆಯ ಪಕ್ಕದ ಗೋಡೆ ಬಿದ್ದು ಹಾರಿಹೋಗಿರಬಹುದೋ?

ಹವಿಾದ್ ಕಾಂಪೌಂಡಿನ ಆಚೆ ಇಳಿದು ಪಕ್ಕದ ಬಂಗಲೆಯನ್ನೆಲ್ಲ ಒಂದು ಸುತ್ತು ಹಾಕಿಕೊಂಡು ಬಂದ. ಯಾರೂ ಕಾಣಲಿಲ್ಲ. ಗೋಡೆಯಂಚಿಗೆ ಬಂದು ನಿಂತು ರಸ್ತೆಯಲ್ಲಿ ದೂರದವರೆಗೂ ದೃಷ್ಟಿ ಓಡಿಸಿದ. ಒಂದು ಫರ್ಲಾಂಗ್ ದೂರದಲ್ಲಿ ಯಾರೋ ಸರಸರನೆ ನಡೆದುಹೋಗುತ್ತಿದ್ದುದು ಕಾಣಿಸಿತು. ಕಲ್ಲೆಸೆದವನು ಅವನೇ ಇರಬಹುದೆ?

ಹೇಗಾದರೂ ಊಹೆ ಮಾಡಬಹುದಾಗಿತ್ತು. ಹವಿಾದ್ ಗೋಡೆಯಿಳಿದು ತಮ್ಮ ತೋಟದೊಳಗೆ ಬಂದ.

"ಯಾರೂ ಇಲ್ಲಮ್ಮ."

"ಯಾರೂ ಇಲ್ಲದೆ ಹೀಗೆ ಕಲ್ಲು ಬಂದು ಬೀಳುವುದೇನೋ, ಹವಿಾದ್?"

ಎನ್ನುತ್ತ ರೋಷನ್ ತನ್ನ ಮುಂದೆ ಬಿದ್ದಿದ್ದ ಕಲ್ಲನ್ನು ಕೈಗೆತ್ತಿಕೊಂಡು ನೋಡಿದಳು. ಅದು ತೂಕವಾಗಿ ಒಳ್ಳೇ ಮೊನಚಾಗಿತ್ತು. ಅದರ ಏಟು ಬಿದ್ದಿದ್ದರೆ ಅವಳ ತಲೆ ಉಳಿಯುತ್ತಿರಲಿಲ್ಲ. ಸ್ವಲ್ಪದರಲ್ಲಿ ಅವಳು ಪಾರಾಗಿದ್ದಳು. ಅವಳು ಎದ್ದ ಗಳಿಗೆ ಚೆನ್ನಾಗಿತ್ತು. ರೋಷನ್ನಳ ಎದೆ ಅನಿರೀಕ್ಷಿತ ಭಯದಲ್ಲಿ ಕಂಪಿಸಿತು.

ಇದೊಂದೇ ಆಗಿದ್ದರೆ ಏನೋ ಸಣ್ಣ ವಿಷಯವೆಂದು ಮರೆತುಬಿಡಬಹುದಾಗಿತ್ತು. ಆದರೆ ಇದಕ್ಕಿಂತ ಪ್ರಮಾದಕರವಾದ ಒಂದು ಘಟನೆ ಆ ವಾರ ಕಳೆಯುವುದರಲ್ಲೇ ನಡೆದು ಅವಳನ್ನು ಚಿಂತೆಗೀಡುಮಾಡಿತು.

ಮನೆಯಲ್ಲಿ ಕುಳಿತು ಬೇಸರವಾಗಿದ್ದುದರಿಂದಲೋ ಏನೋ ರೋಷನ್ ಒಂದು ಸಂಜೆ ಕಾರಿನಲ್ಲಿ ಹೊರಟು ಎಲ್ಲೆಲ್ಲೋ ಸುತ್ತಾಡಿಕೊಂಡು ಜುಹೂ ಸಮುದ್ರ ತೀರಕ್ಕೆ ಬಂದಿಳಿದಳು. ನೀರಿನ ಮೇಲಿನಿಂದ ತಂಪಾದ ಗಾಳಿ ಬೀಸುತ್ತ ಆಹ್ಲಾದಕರವಾಗಿತ್ತು. ಜನರು ಅಲ್ಲಲ್ಲೇ ಕುಳಿತು ವಿಶ್ರಮಿಸಿಕೊಳ್ಳು

ತ್ತಿದ್ದರು. ತೀರದ ಆ ಭಾಗದಲ್ಲಿ ಏನಿಲ್ಲವೆಂದರೂ ಐದಾರು ಕಾರುಗಳು ನಿಂತಿದ್ದವು.

ಅವಳೂ ತನ್ನ ಕಾರನ್ನು ಒಂದು ಕಡೆ ನಿಲ್ಲಿಸಿ ನೀರಿಗೆ ತೀರ ಹತ್ತಿರ ಹೋಗಿ ಕುಳಿತುಕೊಂಡಳು. ಮೇಲಿಂದ ಮೇಲೆ ಬಂದು ಅಪ್ಪಳಿಸುತ್ತಿದ್ದ ಅಲೆಗಳಲ್ಲಿ ಅವಳ ದೃಷ್ಟಿ ಕೀಲಿಸಿತು. ಹಿಂದೊಮ್ಮೆ ಮಧುಸೂದನನೊಡನೆ ಬಂದು ಇದೇ ಸ್ಥಳದಲ್ಲಿ ಕುಳಿತಿದ್ದುದು ಅವಳ ನೆನಪಿಗೆ ಬಂದಿತು. ಆ ಸುಂದರ ಸಂಜೆ ಮರಳಿ ಬರಬಾರದೇ ಎಂದು ಅವಳ ಮನಸ್ಸು ಕಾತರಿಸಿತು.

ಮಧುಸೂದನ ಇನ್ನು ಒಂದು ವಾರದಲ್ಲಾದರೂ ಹಿಂತಿರುಗಿ ಬರುವನೆ? ಹಾಗೆ ಬಂದರೆ ಅವನನ್ನು ನೋಡುವ ಬಗೆ ಹೇಗೆ? ಅವನು ತನ್ನನ್ನು ನೋಡಲು ನಿರಾಕರಿಸಿದರೋ? ಹಮೀದನ ಹುಚ್ಚುನಂಬಿಕೆಯಲ್ಲಿ ಭರವಸೆಯಿಡಬಹುದೇ?

ತನ್ನ ಚಿಂತನೆಯಲ್ಲಿಯೇ ಮುಳುಗಿ ಕುಳಿತಿದ್ದ ಅವಳಿಗೆ ಹೊತ್ತು ಹೋದುದರ ಪರಿವೆಯೇ ಆಗಲಿಲ್ಲ. ಎಷ್ಟು ಹೊತ್ತು ಹೀಗೆ ಯೋಚಿಸುತ್ತ ಕುಳಿತಿದ್ದಳೋ ಅವಳಿಗೇ ಗೊತ್ತಾಗಲಿಲ್ಲ. ಯೋಚನೆಯಿಂದ ಮರಳಿ ಕತ್ತೆತ್ತಿ ಸುತ್ತ ನೋಡಿದಾಗ ಕತ್ತಲಾಗಿತ್ತು. ದೂರದಲ್ಲಿ ಅಲ್ಲೊಬ್ಬರು ಇಲ್ಲೊಬ್ಬರು ಕುಳಿತಿದ್ದರು; ಆದರೆ ಹತ್ತಿರದಲ್ಲಿ ಯಾರೂ ಕಾಣಲಿಲ್ಲ. ತಾನು ಒಂಟಿಯಾಗಿ ರುವೆನೆಂದರಿತು ಅವಳಿಗೆ ಇದ್ದಕ್ಕಿದ್ದ ಹಾಗೆ ಗಾಬರಿಯಾಯಿತು. ತಟಕ್ಕನೆ ಎದ್ದು ಕಾರಿನ ಕಡೆಗೆ ಧಾವಿಸಿದಳು.

ಕಾರಿನ ಹತ್ತಿರ ಕಂಡ ದೃಶ್ಯ ನೋಡಿ ಅವಳ ಜೀವವೇ ಹಾರಿಹೋದ ಹಾಗಾಯಿತು. ಶಿಲಾಮೂರ್ತಿಯಂತೆ ಅಲ್ಲೇ ಮರವಟ್ಟು ನಿಂತುಬಿಟ್ಟಳು.

ನಾಲ್ವರು ಲಫಂಗರು ಕಾರನ್ನು ಸುತ್ತಿಕೊಂಡಿದ್ದರು. ಒಬ್ಬ ಒಳಗೆಲ್ಲಾ ಕೈಹಾಕಿ ಏನನ್ನೋ ಹುಡುಕುತ್ತಿದ್ದ. ಅವರು ತಗ್ಗಿಸಿದ ಧ್ವನಿಯಲ್ಲಿ ಗುಜರಾತಿ ಯಲ್ಲಿ ಮಾತಾಡಿಕೊಳ್ಳುತ್ತಿದ್ದರು. ಅವರಲ್ಲಿ ಯಾರೋ ರೋಷನ್ ಬರುತ್ತಿರು ವುದನ್ನು ಗಮನಿಸಿರಬೇಕು. ಅವಳು ಅವರನ್ನು ಕಂಡು ನಿಂತ ಕ್ಷಣದಲ್ಲೇ ಅವರೂ ತಿರುಗಿ ನೋಡಿದರು. ಒಳಗೆ ಕೈಹಾಕಿ ಶೋಧಿಸುತ್ತಿದ್ದ ಲಫಂಗ ಮುಂದೆ ಬಂದ. ಅವನ ಮುಖ ಅವಳಿಗೆ ಸ್ಪಷ್ಟವಾಗಿ ಕಾಣದಿದ್ದರೂ ಅದರ ಮೇಲೆ ವಿಕೃತ ನಗೆ ಮೂಡಿದೆಯೆನ್ನುವುದನ್ನು ಅವಳ ಬುದ್ಧಿ ಹೇಗೋ ಗ್ರಹಿಸಿತು.

"ಬಾಯಿಸಾಹಿಬಾ, ಅಲ್ಲೇಕೆ ನಿಂತಿರಿ?"

ಎನ್ನುತ್ತ ಆ ಲತ್ಥ ಅವಳೆಡೆಗೆ ಹೆಜ್ಜೆ ಹಾಕತೊಡಗಿದ. ಧ್ವನಿಯಲ್ಲಿ ವಿಷ ತುಂಬಿದ ವ್ಯಂಗ್ಯವಿತ್ತು. ರೋಷನ್ ಮಾತಾಡಲಿಲ್ಲ. ಅಪಾಯ ಸನ್ನಿಹಿತ ವಾದುದನ್ನರಿತ ಅವಳ ಬುದ್ಧಿ ಅದರಿಂದ ಪಾರಾಗಲು ದಾರಿ ಹುಡುಕುತ್ತಿತ್ತು; ಕಣ್ಣು ಅತ್ತಿತ್ತ ಚಲಿಸುತ್ತಿತ್ತು.

ಮುಂದೆ ಬಂದ ಲತ್ಥ ನಿಸ್ಸಂಕೋಚವಾಗಿ ಅವಳನ್ನು ಸಮೀಪಿಸಿ ತೋಳಿಗೆ ಕೈಹಾಕಿ ಹಿಡಿದುಕೊಂಡ. ಆ ಒರಟು ಹಿಡಿತಕ್ಕೆ ಅವಳ ರೆಟ್ಟೆಯ ಕೀಲು ಕಿತ್ತು ಬರುವ ಹಾಗಾಯಿತು. ಭಯದಿಂದ ಅವಳ ನಾಲಗೆಯ ದ್ರವವೇ ಆರಿಹೋಯಿತು. ಆದರೂ ಇಲ್ಲದ ಧೈರ್ಯ ತಂದುಕೊಳ್ಳುತ್ತ ಆದಷ್ಟು ದರ್ಪವಾದ ಧ್ವನಿಯಲ್ಲಿ,

"ಯಾರು ನೀನು? ಕೈಬಿಟ್ಟು ದೂರ ನಿಲ್ಲು"

ಎಂದಳು. ಆ ಮಾತು ಕೇಳಿ ಲತ್ಥ ಗಹಗಹಿಸಿ ನಕ್ಕ.

"ಬಿಡುವುದಕ್ಕೆ ಹಿಡಿದುಕೊಂಡೆನೆಂದು ತಿಳಿದೆಯಾ?"

"ಇನ್ನೇತಕ್ಕೆ ಹಿಡಿದುಕೊಂಡೆ?"

"ನೀನೇ ನೋಡುವೆಯಂತೆ. ಸ್ವಲ್ಪ ಸುಮ್ಮನಿರು"

ಎಂದು ಅವಳನ್ನು ಕಾರಿನ ಕಡೆಗೆ ಎಳೆದೊಯ್ಯತೊಡಗಿದ. ಅವನ ಮಾತಿಗೆ ಮೂವರು ಗೆಳೆಯರೂ ನಕ್ಕರು. ರೋಷನ್ ಅವನ ಹಿಡಿತದಿಂದ ಬಿಡಿಸಿಕೊಳ್ಳಲು ಒದ್ದಾಡತೊಡಗಿದಳು. ಆದರೆ ಆ ಪೈಶಾಚಿಕ ಮುಷ್ಟಿಯಲ್ಲಿ ಅವಳ ಆಟವೇನೂ ಸಾಗಲಿಲ್ಲ. ಅವನು ಅವಳನ್ನು ಅರ್ಧ ನಡಸಿಕೊಂಡು, ಅರ್ಧ ಎಳೆದುಕೊಂಡು ಕಾರಿನ ಹತ್ತಿರ ಕರೆದೊಯ್ದು. ಆ ಎಳೆತದಲ್ಲಿ ಅವಳ ಸೀರೆಯ ನಿರಿಯೆಲ್ಲಾ ಹರಿದುಹೋಯಿತು.

"ನೀವು ಯಾರು? ನನ್ನನ್ನೇಕೆ ಹೀಗೆ ಹಿಂಸಿಸುತ್ತೀರಿ?"

ಎಂದು ರೋಷನ್ ಕೋಪತಪ್ತಳಾಗಿ ಕೇಳಿದಳು. ಭಯ ಸಿಟ್ಟುಗಳಿಂದ ಅವಳ ಮೈ ಥರಥರನೆ ನಡುಗುತ್ತಿತ್ತು. ಕಾರಿನ ಹತ್ತಿರ ನಿಂತಿದ್ದ ಮೂವರಲ್ಲಿ ಒಬ್ಬ ಮುಂದೆ ಬಂದ.

"ರಾಣೋಜಿ, ಅವಳ ಕೈಬಿಡು."

ಲತ್ಥ ಕೈಬಿಟ್ಟು ದೂರ ನಿಂತ. ಹೊಸಬ ರೋಷನ್ನಳ ಸೊಂಟಕ್ಕೆ

ಕೈಹಾಕಿ ಹಿಡಿದುಕೊಂಡ. ಆ ಸ್ಪರ್ಶಕ್ಕೆ ಅವಳ ಎದೆ ಝಲ್ಲೆಂದಿತು; ಅವಳ ಮೈ ಅನೈಚ್ಛಿಕವಾಗಿ ಸೆಟೆದುಕೊಂಡಿತು.

"ನನ್ನ ಮೈಲೆ ಕೈಮಾಡಿದರೆ ಕೂಗಿಕೊಳ್ಳುತ್ತೇನೆ"

ಎಂದು ತನ್ನ ಸೊಂಟವನ್ನು ಬಳಸಿದ ಅವನ ತೋಳನ್ನು ಕಿತ್ತುಹಾಕಲೆತ್ನಿಸುತ್ತ ನುಡಿದಳು.

"ಜೀವದ ಮೇಲೆ ಆಸೆಯಿದ್ದರೆ ಸುಮ್ಮನಿರು."

ಎಂದು ಅವನು ಅವಳನ್ನು ಅನಾಮತ್ತಾಗಿ ಎತ್ತಿಕೊಂಡು ಕಾರು ನಿಂತಿದ್ದ ಸ್ಥಳಕ್ಕೆ ಸ್ವಲ್ಪ ದೂರದಲ್ಲಿದ್ದ ಹಳ್ಳದ ಕಡೆಗೆ ಧಾವಿಸಿದ.

ರೋಷನ್ನಳಿಗೆ ತಲೆ ಸುತ್ತಿಬಂದ ಹಾಗಾಯಿತು. ಅವಳ ಬುದ್ಧಿ ಗಿರಗಿರನೆ ತಿರುಗಿತು. ಒಂದೇ ನಿಮಿಷದಲ್ಲಿ ಅವಳ ಮನಸ್ಸಿನ ತೆರೆಯ ಮೇಲೆ ಹತ್ತಾರು ಯೋಚನೆಗಳು ಮಿಂಚಿಹೋದವು. ಆ ಧೂರ್ತನ ಉದ್ದೇಶದಲ್ಲಿ ಅವಳಿಗೆ ಸ್ವಲ್ಪವೂ ಅನುಮಾನ ಉಳಿಯಲಿಲ್ಲ. ಆ ನಾಲ್ವರ ಕಾಮಪಿಪಾಸೆಯನ್ನು ತೀರಿಸಿ ತಾನು ಜೀವಸಹಿತ ಪಾರಾಗಿ ಹೋಗಲಾರೆನೆಂದು ಅವಳಿಗನ್ನಿಸಿತು. ಆ ಬಳಿಕವೂ ಅವರು ತನ್ನನ್ನು ಬಿಡುವರೆಂಬ ನಂಬಿಕೆ ಇರಲಿಲ್ಲ. ಅವಿವೇಕದಿಂದ ಒಂಟಿಯಾಗಿ ಈ ನಿರ್ಜನ ಸ್ಥಳಕ್ಕೆ ಬಂದು ಕೆಟ್ಟೆನೇ ಎಂದು ಮಮ್ಮಲ ಮರುಗಿದಳು. ತಾನು ಕಾಡುಹೆಣವಾಗುವ ಸಂಭವವನ್ನು ಯೋಚಿಸಿ ತಲ್ಲಣಿಸಿದಳು.

ಇನ್ನೇನು, ಅವನು ಅವಳೊಡನೆ ಹಳ್ಳಕ್ಕೆ ಧುಮುಕಬೇಕೆನ್ನುವಾಗ ಅವಳು ತನ್ನ ಶಕ್ತಿಯೆಲ್ಲವನ್ನೂ ಉಪಯೋಗಿಸಿ ಅವನು ಸೇರಿಸಿ ಹಿಡಿದುಕೊಂಡಿದ್ದ ತನ್ನ ತೋಳನ್ನು ಬಿಡಿಸಿಕೊಂಡಳು. ಅವನು ಮತ್ತೆ ಅದನ್ನು ಹಿಡಿದುಕೊಳ್ಳುವಷ್ಟರಲ್ಲಿ ಅವನ ಮುಖಕ್ಕೆ ಫಟೀರನೆ ಒಂದೇಟು ಅಪ್ಪಳಿಸಿ, ತನ್ನ ಉಸಿರೆಲ್ಲವನ್ನೂ ಬಿಟ್ಟು ಕಿಟ್ಟನೆ ಕಿರಿಚಿಕೊಂಡಳು.

ಹೆಣ್ಣಿನ ಆ ಆರ್ತಧ್ವನಿ ದೂರದಲ್ಲಿ ಹೋಗುತ್ತಿದ್ದ ಯಾರಿಗೋ ಕೇಳಿಸಿರಬೇಕು.

ಒಂದೆರಡು ಕ್ಷಣದಲ್ಲೇ ಎರಡು ಟಾರ್ಚಿನ ಬೆಳಕು ಕತ್ತಲನ್ನು ಸೀಳಿಕೊಂಡು ಬಂದಿತು. ಅದರ ಹಿಂದೆಯೇ,

"ಏ, ಯಾರಲ್ಲಿ?"

ಎನ್ನುವ ಕೂಗು ಕೇಳಿಸಿತು. ದೂರದಿಂದ ಯಾರೋ ಓಡಿಬರುವ ಸದ್ದು ಕೇಳಬಂದಿತು.

ಅನಿರೀಕ್ಷಿತವಾಗಿ ಒದಗಿದ ಈ ಸನ್ನಿವೇಶ ಆ ನಾಲ್ವರ ಗೂಂಡಾಗಳನ್ನೂ ಎದೆಗೆಡಿಸಿತು. ಅವರು ಕಾಲಿಗೆ ಬುದ್ಧಿ ಹೇಳದೆ ಬೇರೆ ಮಾರ್ಗವೇ ಉಳಿಯಲಿಲ್ಲ. ಆ ಕತ್ತಲಲ್ಲಿ ಅವರು ಸದ್ದಿಲ್ಲದೆ ಕರಗಿಹೋದರು.

ಕಾರಿನ ಮೇಲೆ ಟಾರ್ಚಿನ ಬೆಳಕು ಹರಿಸುತ್ತ ಬಂದ ಯುವಕರಿಬ್ಬರು ಸ್ವಲ್ಪ ದೂರದಲ್ಲೇ ರೋಷನ್ ಬಿದ್ದಿದ್ದುದನ್ನು ಕಂಡು ಅವಳೆಡೆಗೆ ಧಾವಿಸಿದರು. ಅವರು ಬರುವುದನ್ನು ನೋಡಿ ಅವಳು ಎದ್ದು ಕುಳಿತಳು. ಯುವಕರಲ್ಲೊಬ್ಬ ಹತ್ತಿರ ಬಂದು ನಿಂತು ಅವಳ ಮುಖದ ಮೇಲೆ ಟಾರ್ಚಿನ ಬೆಳಕು ಹರಿಸಿದ.

" ಏನಾದರೂ ಪೆಟ್ಟು ಬಿದ್ದಿದೆಯೇ ?"

" ಏನೂ ಇಲ್ಲ "

ಎಂದು ರೋಷನ್ ಕ್ಷೀಣಸ್ವರದಲ್ಲಿ ನುಡಿದು ತಲೆ ಮುಟ್ಟಿ ನೋಡಿಕೊಂಡಳು. ಅವಳನ್ನೆತ್ತಿ ಹಿಡಿದಿದ್ದ ಗೂಂಡಾ ಓಡಿಹೋಗುವಾಗ ಕೆಳಗೆ ಎತ್ತಿ ಹಾಕಿದ ರಭಸಕ್ಕೆ ಅವಳ ತಲೆಯ ಹಿಂಭಾಗಕ್ಕೂ ಬೆನ್ನು ತೊಡೆಗಳಿಗೂ ಏಟು ಬಿದ್ದಿತ್ತು. ಅದನ್ನವರು ಗಮನಿಸದಿರಲಿಲ್ಲ.

" ಇಲ್ಲವೆಂದರೇನು, ಪೆಟ್ಟುಬಿದ್ದಿರುವ ಹಾಗಿದೆ. ಏಳಿ "

ಎಂದು ಅವರಿಬ್ಬರೂ ಅವಳನ್ನು ಮೆಲ್ಲನೆ ಹಿಡಿದೆಬ್ಬಿಸಿದರು. ರೋಷನ್ನಳ ಮೈಕೈಯೆಲ್ಲಾ ಜಜ್ಜಿಹಾಕಿದ ಹಾಗೆ ನೋಯುತ್ತಿತ್ತು.

" ಆ ಕಾರು ನಿಮ್ಮದೇ ?"

ಎಂದು ಯುವಕರಲ್ಲೊಬ್ಬ ಪ್ರಶ್ನಿಸಿದ.

" ಹೌದು."

" ನೀವು ಒಬ್ಬರೇ ಬಂದಿದ್ದಿರಾ ?"

" ಹ್ಞು."

" ಇಷ್ಟು ಹೊತ್ತು ಇಲ್ಲಿ ಒಬ್ಬರೇ ಏಕೆ ನಿಂತಿರಿ ?"

" ಏನೋ ಹೊತ್ತಾಗಿ ಹೋಯಿತು."

" ಅವರಾರೆನ್ನುವುದನ್ನು ಬಲ್ಲಿರಾ ?"

" ನನಗೆ ಗೊತ್ತಿಲ್ಲ."

"ಮತ್ತೆ ನೋಡಿದರೆ ಅವರನ್ನು ಗುರುತಿಸಬಲ್ಲಿರಾ?"

"ಹೇಗೆ ಹೇಳಲಿ? ನಾನವರನ್ನು ಚೆನ್ನಾಗಿ ನೋಡಲಿಲ್ಲ. ಕತ್ತಲಲ್ಲಿ ಇದ್ದಕ್ಕಿದ್ದ ಹಾಗೆ ಬಂದು ಅಡ್ಡ ಹಾಕಿದರು."

"ನೀವೆಲ್ಲಿ ವಾಸಿಸುತ್ತೀರಿ?"

"ಪರೇಲ್."

"ಪೋಲೀಸಿಗೆ ದೂರು ಕೊಡೋಣವೇ?"

"ಬೇಡ."

ಇಬ್ಬರು ಯುವಕರೂ ಒಬ್ಬರ ಮುಖವನ್ನೊಬ್ಬರು ನೋಡಿಕೊಂಡರು. ತೊಂದರೆಗೊಳಗಾದರೂ ಅನೇಕ ಹೆಂಗಸರು ದೂರು ಕೊಡಲು ಮುಂದೆ ಬರುವುದಿಲ್ಲವೆನ್ನುವುದು ಅವರಿಗೆ ಚೆನ್ನಾಗಿ ಗೊತ್ತು.

"ಆಸ್ಪತ್ರೆಗೆ ಹೋಗಬೇಕೆ?"

"ಬೇಡ. ನನಗಷ್ಟು ಪೆಟ್ಟುಬಿದ್ದಿಲ್ಲ."

"ಹೋಗಲಿ, ನಡೆಯಿರಿ ಹೋಗೋಣ. ನಿಮ್ಮ ಅಭ್ಯಂತರವಿಲ್ಲವಿಲ್ಲದಿದ್ದರೆ ನಾವೂ ನಿಮ್ಮ ಕಾರಿನಲ್ಲೇ ಬರುತ್ತೇವೆ. ದಯವಿಟ್ಟು ಪರೇಲ್ ಹತ್ತಿರ ಇಳಿಸಿಬಿಡಿ."

"ಬನ್ನಿ"

ಎಂದು ರೋಷನ್ ಮುಂದುಗಡೆಯ ಬಾಗಿಲು ತೆಗೆದು ತಾನು ಒಳಗೆ ಕುಳಿತಳು. ಅವರಿಬ್ಬರೂ ಹಿಂದುಗಡೆ ಕುಳಿತುಕೊಂಡರು. ಯಾರೂ ಮಾತಾಡಲಿಲ್ಲ. ಕಾರು ಮುಂದೆ ಸಾಗಿತು.

ಆ ಯುವಕರಿಬ್ಬರೂ ಪರೇಲ್ ಹತ್ತಿರ ಇಳಿದುಹೋದರು. ಅವರನ್ನು ಬೀಳ್ಕೊಡುವ ಮುನ್ನ ರೋಷನ್ ಅವರ ಉಪಕಾರಕ್ಕಾಗಿ ವಂದಿಸಿದಳು.

"ನೀವು ನನ್ನ ಸಹಾಯಕ್ಕೆ ಬರದಿದ್ದರೆ ನನ್ನ ಗತಿ ಏನಾಗುತ್ತಿತ್ತೋ"

"ಇನ್ನು ಸ್ವಲ್ಪ ದೂರ ಹೋಗಿದ್ದರೆ ನೀವು ಕೂಗಿದ್ದು ನಮಗೂ ಕೇಳಿಸುತ್ತಿರಲಿಲ್ಲ. ಆ ವಿಚಾರ ಹೋಗಲಿ. ಇನ್ನು ಮುಂದೆ ಅಂಥ ಕಡೆಗಳಿಗೆ ಒಬ್ಬರೇ ಹೋಗಬೇಡಿ"

ಎಂದು ನುಡಿದು ಹೊರಟುಹೋದರು. ಆ ಎಚ್ಚರಿಕೆಯನ್ನು ಅವರು ಅವಳಿಗೆ ಕೊಡಬೇಕಾಗಿಯೇ ಇರಲಿಲ್ಲ.

ರೋಷನ್ನಳಿಗೊದಗಿದ್ದ ವಿಪತ್ತಿನ ಸುದ್ದಿ ಕೇಳಿ ಅನ್ವರ್‌ಬಾಯಿ ಹೆದರಿದಳು. ಅದರಲ್ಲಿ ಅವಳಿಗೆ ಏನೋ ಸೂಚನೆ ಕಂಡುಬಂದಿತು. ಆ ಘಟನೆಯಲ್ಲಿ ಗೋವಿಂದದಾಸನ ಕೈವಾಡವಿರಬಹುದೇ ಎಂದು ಅವಳ ಬುದ್ಧಿ ತರ್ಕಿಸ ತೊಡಗಿತು. ಗೋವಿಂದದಾಸ್ ಹೋಗುವಾಗ ಸುಪ್ತವಾದ ಬೆದರಿಕೆ ಹಾಕಿ ಹೋಗಿದ್ದ. ಅವನ ಕ್ರೋಧ ಯಾವ ರೀತಿಯಲ್ಲಿ ಹೊರಪಡುವುದೆನ್ನುವುದನ್ನು ಹೇಳುವ ಹಾಗಿರಲಿಲ್ಲ. ಇಂದಿನ ಘಟನೆಗೆ ಅವನೇ ಕಾರಣನಾಗಿದ್ದು ಅದರಲ್ಲಿ ವಿಫಲನಾಗಿದ್ದರೆ ಮುಂದೆ ಅವನು ಬೇರೆ ಯತ್ನಗಳನ್ನು ಮಾಡುವನೆನ್ನುವುದರಲ್ಲಿ ಅನ್ವರ್‌ಬಾಯಿಗೆ ಅನುಮಾನವಿರಲಿಲ್ಲ. ಅಂಥ ಸಂಭವವನ್ನು ಪರಿಭಾವಿಸಿ ಕೊಂಡು ಅವಳು ತಲ್ಲಣಿಸಿದಳು. ರೋಷನ್ ಅವನನ್ನು ಅಪಮಾನ ಮಾಡಿ ಕಳಿಸಿದ್ದು ಹಾವಿನ ಹೆಡೆ ತುಳಿದಷ್ಟೇ ಅಪಾಯಕರವಾಗಿತ್ತು.

ರೋಷನ್ನಳ ಮನಸ್ಸೂ ಅದೇ ಮಾರ್ಗದಲ್ಲಿ ಯೋಚಿಸುತ್ತಿತ್ತು. ಈ ಎರಡು ಘಟನೆಗಳೂ ಪರಸ್ಪರ ಸಂಬಂಧವಿಲ್ಲದ ಆಕಸ್ಮಿಕ ಪ್ರಸಂಗಗಳೆಂದು ಅವಳು ಒಪ್ಪಿಕೊಳ್ಳಲು ಸಿದ್ಧಳಾಗಿರಲಿಲ್ಲ. ಅದರಲ್ಲಿ ಯಾವುದೋ ಛದ್ಮನೆ ಅಡಗಿರಬಹುದೆಂದು ಅವಳ ಬುದ್ಧಿ ಸಹಜವಾಗಿಯೇ ಊಹಿಸಿತು. ತನ್ನ ಚಲನವಲನದ ಮೇಲೆ ಯಾರೋ ಸೂಕ್ಷ್ಮವಾಗಿ ಕಣ್ಣಿಟ್ಟಿರಬೇಕೆಂದು ಅವಳು ಭಾವಿಸಿದಳು. ಇದಕ್ಕೆಲ್ಲ ಗೋವಿಂದದಾಸನೇ ಸೂತ್ರಧಾರಿಯಾಗಿದ್ದರೆ ಅವಳು ಒಂದು ಕ್ಷಣವೂ ಎಚ್ಚರ ತಪ್ಪಿ ನಡೆಯುವ ಹಾಗಿರಲಿಲ್ಲ.

೨೫

ಕನಕಾಂಗಿ ಊರಿಗೆ ಹೊರಟುಹೋದುದು ಲಲಿತನಿಗೆ ಅರ್ಧ ಜೀವವೇ ಹೋದಹಾಗಿತ್ತು.

ಅವಳನ್ನು ಊರಿಗೆ ಕಳಿಸಲು ಲಲಿತನಿಗೆ ಸ್ವಲ್ಪವೂ ಇಷ್ಟವಿರಲಿಲ್ಲ. ಎರಡು ಮೂರು ಸಲ ಪ್ರಯಾಣವನ್ನು ತಾನೇ ತಪ್ಪಿಸಿದ್ದಳು. ಆದರೆ ಒಂದೇ ಸಮನಾಗಿ ಹಾಗೆ ಮಾಡುತ್ತ ಹೋಗುವುದು ಸಾಧ್ಯವಿರಲಿಲ್ಲ. ಅವಳೂ ಬಂದು ತುಂಬ ದಿವಸವಾಗಿತ್ತು. ಹಬ್ಬಕ್ಕಾದರೂ ಊರಿಗೆ ಹೋಗದಿದ್ದರೆ ಅವರು ತಂದೆತಾಯಿಗಳು ಕಿರಿಕಿರಿಪಟ್ಟುಕೊಳ್ಳುತ್ತಿದ್ದರು. ಲಲಿತ ವಿಧಿಯಿಲ್ಲದೆ ಕನಕಾಂಗಿಯನ್ನು ಕಳಿಸಿಕೊಡಬೇಕಾಯಿತು.

ಅವಳು ಊರಿಗೆ ಹೊರಟುಹೋದ ದಿನ ಲಲಿತ ಅತ್ತುಅತ್ತು ಮುಗಿದಿದ್ದಳು.

" ಹೋಗಿಬಿಟ್ಟು ಬರುತ್ತೀಯಾ ಕನಕಾ ? ನಿನ್ನನ್ನು ಬಿಟ್ಟು ನಾನೊಬ್ಬಳೇ ಇರಲಾರೆನಲ್ಲೇ "

ಎಂದು ಹೊರಡುವ ಮುನ್ನ ಅವಳನ್ನು ಉದ್ವೇಗದಿಂದ ಬಿಗಿದಪ್ಪಿ ಅತ್ತು ಬಿಟ್ಟಿದ್ದಳು. ಆ ಮಾತಿಗೆ ಕನಕಾಂಗಿಯ ಹತ್ತಿರ ಉತ್ತರವಿರಲಿಲ್ಲ. ಅವಳ ದುಃಖವೂ ಕೆದರಿತ್ತು. ಅವಳೂ ಲಲಿತನನ್ನು ಅಪ್ಪಿಕೊಂಡು ಅತ್ತುಬಿಟ್ಟಿದ್ದಳು. ಇಬ್ಬರೂ ಪರಸ್ಪರ ಕಂಬನಿಯ ಅಭಿಷೇಕ ಮಾಡಿದ್ದರು.

ಅವಳು ಊರಲ್ಲಿದ್ದಾಗ ಲಲಿತ ಹೇಗೋ ಓಡಾಡಿಕೊಂಡಿದ್ದಳು. ತನ್ನ ದುಃಖವನ್ನು ಹೇಗೋ ಮರೆಯಲೆತ್ನಿಸುತ್ತಿದ್ದಳು. ಬೇಸರ ಕಳೆಯಲು ಅವಕಾಶವೂ ಇರುತ್ತಿತ್ತು. ಇಬ್ಬರೂ ಕೂಡಿ ಎಲ್ಲಾದರೂ ಹೋಗುತ್ತಿದ್ದರು. ಮನೆಯ ಮುಂದಿನ ತೋಟದಲ್ಲಿ ಕುಳಿತು ಘಂಟೆಗಳ ಹೊತ್ತು ಹರಟೆ ಹೊಡೆಯು

ತ್ತಿದ್ದರು. ಲಲಿತನ ಮನಸ್ಸು ಚಿಂತೆಗೀಡಾಗದಂತೆ ಕನಕಾಂಗಿ ಒಂದಲ್ಲ ಒಂದು ವಿಷಯವನ್ನೆತ್ತಿ ಮಾತಾಡುತ್ತಲೇ ಇದ್ದಳು. ಆ ಮಾತಿನ ಮಲ್ಲಿಯ ಭಂಡಾರದಲ್ಲಿ ಅದೆಷ್ಟು ವಿಷಯ ತುಂಬಿತ್ತೋ!

ಆದರೆ ಅದೇ ಅವಳು ಊರಿಗೆ ಹೊರಟುಹೋದ ಮೇಲೆ ಲಲಿತನ ಜೀವನ ಇದ್ದಕ್ಕಿದ್ದ ಹಾಗೇ ಬರಿದಾದಂತೆ ಕಂಡಿತು. ಈಗ ಅವಳನ್ನು ಸಂತೈಸುವವ ರಿರಲಿಲ್ಲ; ಅವಳ ಆಪ್ತಾಲೋಚನೆಗಳೊಡನೆ ಭಾಗಿಯಾಗುವವರಿರಲಿಲ್ಲ. ಸಾಂತ್ವನಕ್ಕಾಗಿ ಅವಳು ಯಾರನ್ನೂ ಆಶ್ರಯಿಸುವ ಹಾಗಿರಲಿಲ್ಲ.

ಅವಳನ್ನಪ್ಪಿಕೊಳ್ಳಲು ಕಾದಿದ್ದುದೊಂದೇ, ಚಿಂತೆ. ಅದು ನಾನಿದ್ದೇನೆ ಎಂದು ಮುಂದೆ ಬಂದಿತು. ಲಲಿತ ಹತಾಶೆಯಿಂದ ಅದನ್ನಪ್ಪಿದಳು.

ಅವಳ ಸ್ಥಿತಿ ಬದಲಾಯಿಸಿತು. ರೂಮು ಬಿಟ್ಟು ಬರುವುದೇ ಅಪರೂಪ ವಾಯಿತು. ಹಾಸಿಗೆಯೊಂದೇ ಅವಳಿಗೆ ಗತಿಯಾಯಿತು. ಅವಳ ಎದೆಯ ಭಾರವನ್ನಿಳುಹಲು ಅಳು ಸಿದ್ಧವಾಗಿಯೇ ಇತ್ತು.

ಮಗಳ ಸ್ಥಿತಿಯನ್ನು ಕಂಡು ನಟರಾಜ ಅಯ್ಯರರು ದಿಗಿಲುಗೊಂಡರು.

ಅವಳಿಗೇನಾಗಿದೆ? ಯಾವ ಕಾಹಿಲೆ ಅವಳ ದೇಹದಲ್ಲಿ ಮನೆ ಮಾಡಿ ಕೊಂಡಿದೆ? ಯಾವ ಯೋಚನೆ ಅವಳ ತಲೆಹೊಕ್ಕು ಕೊರೆಯುತ್ತಿದೆ? – ಎಂದು ಅವರು ಸದಾ ಯೋಚಿಸತೊಡಗಿದರು. ಅವರ ಬುದ್ಧಿ ಪ್ರಶ್ನೆಯ ಸುತ್ತ ಸುಮ್ಮನೆ ಸುತ್ತುತ್ತಿತ್ತೇ ಹೊರತು ಅದಕ್ಕೆ ಯಾವ ದಾರಿಯೂ ಕಾಣಲಿಲ್ಲ. ಒಂದು ದಿನ ಮನಸ್ಸು ನಿಲ್ಲದೆ ಸ್ವಾಮಿನಾಥನ್ನರ ಹತ್ತಿರ ವಿಷಯ ಪ್ರಸ್ತಾಪಿಸಿದರು.

"ನೀವೇನು ಹೇಳುತ್ತೀರಿ, ಸ್ವಾಮಿನಾಥನ್?"

"ಡಾಕ್ಟರಿಗೆ ತೋರಿಸಿದಿರಾ?"

"ಯಾವ ಡಾಕ್ಟರು? ಪಿಳ್ಳೆಯವರೇ?"

"ಅವರು ಬರೀ ಎಂ. ಬಿ. ಬಿ. ಎಸ್. ಯಾರಾದರೂ ಎಂ. ಡಿ. ಇದ್ದರೆ ತೋರಿಸಿ. ಸೈಕಿಯಾಟ್ರಿಸ್ಟ್ ಆದರೆ ವಾಸಿ."

"ಅಂಥವರು ಯಾರಿದ್ದಾರೆ?"

ಸ್ವಾಮಿನಾಥನ್ ಒಂದು ಕ್ಷಣ ಯೋಚಿಸಿದರು.

"ಕೋಡಂಬಾಕಂನಲ್ಲಿ ಒಬ್ಬ ಸೈಕಿಯಾಟ್ರಿಸ್ಟ್ ಇರುವ ಹಾಗೆ ಕಾಣುತ್ತದೆ. ಆದರೆ ಅವರ ಪರಿಚಯ ನನಗಿಲ್ಲ."

" ಯಾರಾದರೂ ಪರಿಚಯವಿರುವವರ ಮೂಲಕ ಹೇಳಿಸಿದರೋ ?"

" ನೋಡೋಣ, ನಾನು ವಿಚಾರಿಸಿ ತಿಳಿಸುತ್ತೇನೆ. ಆದರೆ ಮನೆಗೆ ಬರಲು ಅವರು ಹೆಚ್ಚು ಫೀ ಕೇಳಬಹುದು."

" ಅದರ ಯೋಚನೆ ನೀವಿಟ್ಟುಕೊಳ್ಳಬೇಡಿ"

ಎಂದು ಅಯ್ಯರರು ನುಡಿದರು. ಸ್ವಾಮಿನಾಥನ್ ಮತ್ತೆ ಬರುವೆನೆಂದು ಹೇಳಿ ಎದ್ದರು.

ಮನೋರೋಗಗಳ ಚಿಕಿತ್ಸೆಯಲ್ಲಿ ಸಿದ್ಧಹಸ್ತರಾದ ಡಾ. ನೀಲಕಂಠಂರವರ ನಿವಾಸ ಧನಾಢ್ಯ ರೋಗಿಗಳ ಯಾತ್ರಾಸ್ಥಳವಾಗಿತ್ತು. ಕೋಡಂಬಾಕಂನಲ್ಲಿದ್ದ ಅವರ ಮನೆಯ ಮುಂದೆ ಸದಾ ಸ್ವಾಲ್ಕಾರು ಕಾರುಗಳು ನಿಂತೇ ಇರುತ್ತಿದ್ದವು. ಮೊದಲೇ ಬರೆದು ಭೇಟಿ ಗೊತ್ತುಮಾಡಿಕೊಳ್ಳದಿದ್ದರೆ ಅವರನ್ನು ನೋಡುವುದು ಸಾಧ್ಯವಾಗುತ್ತಿರಲಿಲ್ಲ. ಚಿಕಿತ್ಸೆಗಾಗಿ ಅವರ ಬಳಿ ಯಾವಾಗಲೂ ಜನ ಇದ್ದೇ ಇರುತ್ತಿದ್ದರು.

ಡಾ. ನೀಲಕಂಠಂ ದುಬಾರಿಯಾಗಿ ಫೀ ತೆಗೆದುಕೊಳ್ಳುತ್ತಿದ್ದರೆನ್ನುವುದೇನೋ ನಿಜ. ಆದರೆ ಅವರು ದುಡ್ಡಿನ ಆಸೆಗಾಗಿ ಸಿಕ್ಕಿದ ಕೇಸುಗಳಿಗೆಲ್ಲಾ ಕೈಹಾಕುತ್ತಿರಲಿಲ್ಲ. ಕೈಗೆ ತೆಗೆದುಕೊಂಡುದನ್ನು ಶ್ರದ್ಧೆಯಿಂದ ನೋಡುತ್ತಿದ್ದರು. ಅವರು ಹಿಡಿದ ಕೇಸುಗಳಲ್ಲಿ ವಾಸಿಯಾಗದೆ ಇದ್ದುದೇ ಅಪರೂಪ. ಅವರ ಈ ಸ್ವಭಾವವನ್ನರಿತಿದ್ದ ಮದರಾಸಿನ ನಾಟುಕೋಟೆ ಚೆಟ್ಟಿಯಾರರು ಬೆಲ್ಲಕ್ಕೆ ನೊಣ ಮುತ್ತುವ ಹಾಗೆ ಅವರನ್ನು ಮುತ್ತಿಕೊಳ್ಳುತ್ತಿದ್ದರು.

ಕೋಡಂಬಾಕಂನಲ್ಲಿ ಡಾ. ನೀಲಕಂಠಂರವರ ಬಂಗಲೆ ಪತ್ತೆ ಮಾಡಲು ಸ್ವಾಮಿನಾಥನ್ನರಿಗೆ ಕಷ್ಟವಾಗಲಿಲ್ಲ. ಅವರೇನೂ ಡಾಕ್ಟರಿಗೆ ಮುಂದಾಗಿ ಬರೆದು ತಿಳಿಸಿರಲಿಲ್ಲ. ಆದರೆ ಡಾಕ್ಟರ ಪರಮ ಮಿತ್ರರೊಬ್ಬರನ್ನು ಜೊತೆಗೆ ಕರೆದೊಯ್ದಿದ್ದರು. ಕರ್ನಲ್ ಆಡ್ಲೆಯವರಿಗೂ ನೀಲಕಂಠಂರಿಗೂ ಗಳಸ್ಯ ಕಂಠಸ್ಯ.

ಇಬ್ಬರೂ ಹೋಗಿ ವಿಸಿಟರ್ಸ್ ರೂಮಿನಲ್ಲಿ ಕುಳಿತರು. ಆಡ್ಲೆ ಒಳಗೆ ತಮ್ಮ ಕಾರ್ಡು ಕೊಟ್ಟು ಕಳಿಸಿದರು. ನೀಲಕಂಠಂ ಸ್ವಲ್ಪ ಹೊತ್ತಿನಲ್ಲಿಯೇ ಹೊರಗೆ ಬಂದರು. ಆಡ್ಲೆಯವರನ್ನು ಕಂಡು,

" ಹಲೋ ಕರ್ನಲ್, ಏನಯ್ಯ ಇಷ್ಟು ದೂರ ?"

ಎಂದು ಹತ್ತಿರ ಬಂದು ಕೈಕುಲುಕಿಸಿ ಬೆನ್ನ ಮೇಲೆ ಕೈಹಾಕಿದರು.

" ನಿನ್ನನ್ನೇ ನೋಡುವುದಕ್ಕೆ ಬಂದೆ"

ಎಂದು ಆಡ್ಲೆ ನಕ್ಕರು.

" ಏಕೆ, ಏನು ಸಮಾಚಾರ ಹೇಳು ?"

ಆಡ್ಲೆ ನೀಲಕಂಠಂರವರಿಗೆ ಸ್ವಾಮಿನಾಥನ್ನರ ಪರಿಚಯ ಮಾಡಿಸಿದರು.

" ತುಂಬ ಸಂತೋಷ. ನನ್ನಿಂದೇನಾಗಬೇಕು ?"

ಎಂದು ಸ್ವಾಮಿನಾಥನ್ನರ ಕೈ ಕುಲುಕಿಸುತ್ತ ನೀಲಕಂಠಂ ಕೇಳಿದರು.

" ನಿನಗೆ ಐದು ನಿಮಿಷ ಅವಕಾಶವಿದ್ದರೆ ಮಾತಾಡಬಹುದು"

ಎಂದು ಆಡ್ಲೆ ಪೀಠಿಕೆ ಹಾಕಿ ಒಳಗೆ ಹೋಗೋಣವೆಂದು ಸೂಚಿಸಿದರು. ಮೂವರೂ ಪಕ್ಕದ ರೂಮಿಗೆ ಹೋಗಿ ಕುಳಿತುಕೊಂಡರು. ಆಡ್ಲೆ, ನೀಲಕಂಠಂ ಇಬ್ಬರೂ ಪೈಪ್ ಹೊತ್ತಿಸಿದರು.

" ಹ್ಞ, ಹೇಳಿ"

ಎಂದು ನೀಲಕಂಠಂ ಕಾಲಿನ ಮೇಲೆ ಕಾಲುಹಾಕಿ ಕುಳಿತು ಸ್ವಾಮಿನಾಥನ್ನರನ್ನುದ್ದೇಶಿಸಿ ಕೇಳಿದರು. ಸ್ವಾಮಿನಾಥನ್ ಹತ್ತು ನಿಮಿಷದಲ್ಲಿ ಎಲ್ಲವನ್ನೂ ಸಂಗ್ರಹವಾಗಿ ತಿಳಿಸಿದರು. ನೀಲಕಂಠಂ ಒಂದು ಗಳಿಗೆ ಯೋಚಿಸಿ,

" ಅವರನ್ನೇ ಇಲ್ಲಿಗೆ ಕರೆದುಕೊಂಡು ಬರುವುದಕ್ಕಾಗುವುದಿಲ್ಲವೆ ?"

" ಹುಡುಗಿ ಬರುವುದಕ್ಕೆ ಇಷ್ಟಪಡಲಾರಳು. ತಾವೇ ಒಂದು ಹೆಜ್ಜೆ ದಯಮಾಡಿದರೆ ವಾಸಿ"

ಎಂದು ಇನ್ನೂ ಏನೋ ಹೇಳುವುದಿದೆಯೆನ್ನುವ ಭಾವದಲ್ಲಿ ಮಾತನ್ನು ನಿಲ್ಲಿಸಿದರು.

" ಚಿಕಿತ್ಸಾಲಯದ ಸೌಕರ್ಯ ನಮಗೆ ಮನೆಗಳಲ್ಲಿ ಸಿಕ್ಕುವುದಿಲ್ಲ. ರೋಗಿಗಳ ಪರೀಕ್ಷೆಗೆ ಇಲ್ಲಿ ಬೇಕಾದ ಯಂತ್ರೋಪಕರಣಗಳಿರುತ್ತವೆ. ಅವನ್ನು ಬಿಟ್ಟು ಪರೀಕ್ಷೆ ಮಾಡುವುದೆಂದರೆ ನಮಗೆ ಕೈಮುರಿದ ಹಾಗೆ. ಜನಕ್ಕೆ ನಮ್ಮ ಈ ತೊಂದರೆ ಅರ್ಥವಾಗುವುದಿಲ್ಲ. ಮನೆಗೆ ಬಂದು ನೋಡಬೇಕೆಂದು ಒತ್ತಾಯ ಮಾಡುತ್ತಾರೆ. ನಾನೂ ಸಾಮಾನ್ಯವಾಗಿ ಎಲ್ಲೂ ಹೋಗುವುದಿಲ್ಲ...."

ಎಂದು ಕ್ಷಣ ಯೋಚಿಸಿ ನಕ್ಕು,

"ನಮ್ಮ ಆಡ್ಲೆ ಹೇಳಿದ ಮೇಲೆ ಇಲ್ಲವೆನ್ನಲೂ ಆರೆ. ನಾಳೆ ಬೆಳಗ್ಗೆ ಬರುತ್ತೇನೆಂದು ತಿಳಿಸಿ"

ಎಂದು ಎದ್ದರು. ಅವರು ಅಷ್ಟು ಸುಲಭದಲ್ಲಿ ಒಪ್ಪಿಕೊಳ್ಳುತ್ತಾರೆಂದು ಸ್ವಾಮಿನಾಥನ್ನರೂ ಭಾವಿಸಿರಲಿಲ್ಲ. ಭೇಟಿ ಸುಮುಖವಾಗಿ ಮುಗಿದಿತ್ತು.

ಮಾರನೆಯ ದಿನ ಬೆಳಗ್ಗೆ ಏಳು ಘಂಟೆಗೆ ಡಾ. ನೀಲಕಂಠಂರವರು ತಮ್ಮ ಕಾರಿನಲ್ಲಿ ಬಂದಿಳಿದರು. ಗೇಟಿನ ಬಳಿ ನಟರಾಜ ಅಯ್ಯರ್, ಸ್ವಾಮಿನಾಥನ್ ಕಾದಿದ್ದು ಸ್ವಾಗತಿಸಿದರು. ಡಾಕ್ಟರು ಮನೆಯ ಮುಂದಿನ ಪೋರ್ಟಿಕೋದಲ್ಲಿ ಕಾರು ನಿಲ್ಲಿಸಿ ಒಳಗೆ ಹೋದರು.

ಅವರು ಬರುವ ವಿಷಯ ಲಲಿತನಿಗೆ ಮೊದಲೇ ತಿಳಿದಿತ್ತು. ಆದರೆ ಅವಳು ಆ ವಿಷಯದಲ್ಲಿ ಯಾವ ಆಸಕ್ತಿಯನ್ನೂ ತೋರಿಸದೆ ಎಂದಿನಂತೆಯೇ ಇದ್ದುಬಿಟ್ಟಿದ್ದಳು. ಡಾಕ್ಟರು ತನ್ನ ರೂಮನ್ನು ಪ್ರವೇಶಿಸಿದಾಗ ಮಾತ್ರ ಮಾತಿಲ್ಲದೆ ಎದ್ದು ನಿಂತು ನಮಸ್ಕರಿಸಿ ಕುಳಿತುಕೊಂಡಳು.

ನೀಲಕಂಠಂರವರು ಸ್ಟೆತಾಸ್ಕೋಪ್ ತೆಗೆದು ಲಲಿತನ ಹೃದಯ, ಶ್ವಾಸಕೋಶಗಳ ಚಲನಕ್ರಿಯೆಯನ್ನು ಪರೀಕ್ಷಿಸಿದರು; ಕಣ್ಣು ನಾಲಗೆಗಳನ್ನು ನೋಡಿದರು. ರಕ್ತದ ಒತ್ತಡ ಪರೀಕ್ಷಿಸುವ ಯಂತ್ರವನ್ನು ಪೆಟ್ಟಿಗೆಯಿಂದ ಹೊರಗೆ ತೆಗೆದು ಲಲಿತನ ತೋಳಿಗೆ ರಬ್ಬರ್ ಬಿಗಿದು ರಕ್ತದ ಒತ್ತಡವನ್ನು ಗಮನಿಸಿದರು.

ನಟರಾಜ ಅಯ್ಯರ್, ಸ್ವಾಮಿನಾಥನ್ ಮತ್ತು ಅವರ ಹಿಂದೆ ಸ್ವಲ್ಪ ದೂರದಲ್ಲಿ ಮೀನಾಕ್ಷಮ್ಮನವರು ಪರೀಕ್ಷೆಯನ್ನು ಗಮನಿಸುತ್ತ ಮೌನವಾಗಿ ನಿಂತಿದ್ದರು. ಎಲ್ಲಾ ಆದ ಮೇಲೆ ಡಾಕ್ಟರು ಅಯ್ಯರರ ಕಡೆ ತಿರುಗಿ,

"ಸ್ವಲ್ಪ ಹೊತ್ತು ರೋಗಿಯೊಡನೆ ಮಾತಾಡಬಯಸುತ್ತೇನೆ."

ಎಂದರು. ಸ್ವಾಮಿನಾಥನ್ ಸೂಕ್ಷ್ಮ ತಿಳಿದುಕೊಂಡು ಅಯ್ಯರರೊಡನೆ ಹೊರಗೆ ಬಂದು ರೂಮಿನ ಬಾಗಿಲನ್ನೆಳೆದುಕೊಂಡರು. ರೂಮಿನಲ್ಲಿ ಲಲಿತ, ಡಾ. ನೀಲಕಂಠಂ ಇಬ್ಬರೇ ಉಳಿದರು.

ಕಾಲು ಘಂಟೆ ಕಳೆಯಿತು.

ಡಾ. ನೀಲಕಂಠಂ ಪರೀಕ್ಷೆ ಮುಗಿಸಿ ರೂಮಿನ ಬಾಗಿಲು ತೆಗೆದುಕೊಂಡು ಹೊರಗೆ ಬಂದರು. ನಟರಾಜ ಅಯ್ಯರರು ಅವರನ್ನು ತಮ್ಮ ರೂಮಿಗೆ

ಕರೆದೊಯ್ದರು. ಬಿಸ್ಕತ್ ಕಾಫಿ ಬಂದವು. ಮೂವರೂ ಅದನ್ನು ಮುಗಿಸಿ ಕುಳಿತರು. ಡಾಕ್ಟರು ತಮ್ಮ ಪೈಪ್ ಹೊತ್ತಿಸಿ ಮೌನವಾಗಿ ಹೊಗೆ ಚೆಲ್ಲುತ್ತ ಕುಳಿತರು.

"ನಿಮಗೇನು ತೋರುತ್ತದೆ, ಡಾಕ್ಟರ್?"

ಎಂದು ತಮ್ಮ ತವಕವನ್ನು ತಡೆದಿಡಲಾರದೆ ನಟರಾಜ ಅಯ್ಯರರು ಕೇಳಿದರು.

"ಹೇಳುತ್ತೇನೆ. ಆಕೆಯ ಶರೀರದಲ್ಲಿ ಯಾವ ಕಾಹಿಲೆಯೂ ಇಲ್ಲ. ಚಿಂತೆಯಿಂದ ಮನಸ್ಸು ಸ್ವಲ್ಪ ದುರ್ಬಲವಾಗಿದೆ. ಯೋಚನೆಯ ಪರಿಣಾಮ ವಾಗಿ ರಕ್ತದ ಗತಿಯಲ್ಲಿ ಸಾಮಾನ್ಯಕ್ಕಿಂತ ಹೆಚ್ಚಾದ ವೇಗ ಕಂಡುಬರುತ್ತದೆ. ಈಗಿನ ಸ್ಥಿತಿಯಲ್ಲಿ ಯೋಚಿಸುವಂತಹುದೇನೂ ಇಲ್ಲ. ಆದರೆ ಇದೇ ಸ್ಥಿತಿ ದೀರ್ಘಕಾಲ ಮುಂದುವರಿದರೆ ಅಪಾಯವುಂಟಾಗಬಹುದು."

"ಕಾಹಿಲೆಗೆ ಕಾರಣ ಹೇಳಬಲ್ಲಿರಾ?"

"ಮನೋರೋಗಿಗಳನ್ನು ನಾವು ಪ್ರಶ್ನಿಸುವಾಗ ಸಾಧ್ಯವಾದಷ್ಟೂ ಅವರನ್ನು ನಮ್ಮ ಅಂತರಂಗಕ್ಕೆ ತೆಗೆದುಕೊಳ್ಳುತ್ತೇವೆ. ರೋಗಕ್ಕೆ ಕಾರಣ ತಿಳಿದ ಹೊರತು ಚಿಕಿತ್ಸೆ ಸಾಧ್ಯವಿಲ್ಲ. ಬಾಲ್ಯದಲ್ಲಿ ನಡೆದ ಯಾವುದೋ ಒಂದು ಘಟನೆ ರೋಗಕ್ಕೆ ಕಾರಣವಾಗಿರಬಹುದು. ಅದನ್ನು ರೋಗಿ ಮರೆತು ಹೋಗಿರಬಹುದು. ಅದು ರೋಗಿಯ ಸುಪ್ತ ಪ್ರಜ್ಞೆಯ ಪದರದಲ್ಲಿ ಸೇರಿ ಹೋಗಿರುತ್ತದೆ. ಅದನ್ನು ಹೊರಪಡಿಸುವುದು ನಮ್ಮ ಕೆಲಸ. ಕಾರಣ ತಿಳಿದರೆ ಚಿಕಿತ್ಸೆ ತುಂಬ ಸುಲಭ.

"ಇದು ಒಂದು ಬಗೆಯ ರೋಗಿಗಳ ವಿಷಯವಾಯಿತು. ಇನ್ನೊಂದು ಬಗೆಯ ರೋಗಿಗಳಿರುತ್ತಾರೆ. ಅವರಿಗೆ ತಮ್ಮ ರೋಗಕ್ಕೆ ಕಾರಣ ಗೊತ್ತಿರುತ್ತದೆ. ಆದರೆ ಅದನ್ನು ಹೇಳಲಿಚ್ಛಿಸುವುದಿಲ್ಲ. ಅವರು ಹೇಳಿದ ಹೊರತು ನಾವು ಯಾವ ಚಿಕಿತ್ಸೆಯನ್ನೂ ಕೈಗೊಳ್ಳಲು ಸಾಧ್ಯವಿಲ್ಲ. ಎರಡು ಸಂದರ್ಭಗಳಲ್ಲಿಯೂ ನಮಗೆ ರೋಗಿಯ ಸಂಪೂರ್ಣ ಸಹಕಾರ ಬೇಕು. ಅಸಹಕಾರದಿಂದ ರೋಗ ವನ್ನು ಗೆಲ್ಲುವುದಕ್ಕಾಗುವುದಿಲ್ಲ."

"ನನ್ನ ಮಗಳನ್ನು ತಾವು ಇದರಲ್ಲಿ ಯಾವ ಗುಂಪಿಗೆ ಸೇರಿಸುತ್ತೀರಿ?"

"ಎರಡನೆಯ ಗುಂಪಿಗೆ ಸೇರಿಸುತ್ತೇನೆ"

ಎಂದು ಡಾ. ನೀಲಕಂಠಂ ಶಾಂತವಾಗಿ ನುಡಿದರು. ಆ ಮಾತು ಕೇಳಿ ನಟರಾಜ ಅಯ್ಯರರು ಚಕಿತರಾದರು.

"ತಮ್ಮ ಪ್ರಶ್ನೆಗಳಿಗೆ ನನ್ನ ಮಗಳು ಉತ್ತರ ಕೊಡಲಿಲ್ಲವೆ?"

"ಕೊಟ್ಟರು. ಆದರೆ ಕೆಲವು ಪ್ರಶ್ನೆಗಳಿಗೆ ನಾನು ನಿರೀಕ್ಷಿಸಿದ ರೀತಿಯಲ್ಲಿ ಉತ್ತರ ಬರಲಿಲ್ಲ."

ನಟರಾಜ ಅಯ್ಯರರು ಸುಮ್ಮನೆ ಡಾಕ್ಟರ ಮುಖ ನೋಡಿದರು. ಡಾಕ್ಟರು ಹೇಳಿದ್ದು ಅವರಿಗೆ ಅರ್ಥವಾಗಲಿಲ್ಲವೇನೋ. ಅದನ್ನು ಡಾಕ್ಟರೂ ಗ್ರಹಿಸಿ ನಸುನಕ್ಕರು.

"ಇದರಲ್ಲಿ ಸ್ವಲ್ಪ ವಿವರಣೆ ಅಗತ್ಯವೆಂದು ತೋರುತ್ತದೆ. ಮನುಷ್ಯನ ಮನಸ್ಸು ಒಂದು ವಿಚಿತ್ರ ಸಾಧನ. ಅದು ಯಾವುದಾದರೊಂದು ರಹಸ್ಯವನ್ನು ರಕ್ಷಿಸಿಕೊಳ್ಳಬೇಕೆಂದು ಸಂಕಲ್ಪಿಸಿದರೆ ಅದನ್ನು ತಿಳಿದುಕೊಳ್ಳುವುದು ಇತರರಿಗೆ ಕಷ್ಟವಾಗುತ್ತದೆ. ಮನಸ್ಸೇ ಅದರ ಸುತ್ತ ಒಂದು ಆವರಣ ನಿರ್ಮಿಸಿ ಅದನ್ನು ಹೊರಗೆ ಬಿಡದಂತೆ ಕಾಯುತ್ತಿರುತ್ತದೆ. ನಮಗೆ ಅದು ಗೊತ್ತಾದರೆ ಆ ಆವರಣವನ್ನು ಭೇದಿಸುವ ಯುಕ್ತಿ ಹೂಡುತ್ತೇವೆ. ಅದು ಎಲ್ಲೆಲ್ಲಿ ದುರ್ಬಲವಾಗಿರುವುದೆನ್ನುವುದು ನಮಗೆ ಸಾಮಾನ್ಯವಾಗಿ ಗೊತ್ತು.

"ನಾವು ಆ ಆವರಣದ ಮೇಲೆ ಮುತ್ತಿಗೆ ಹಾಕುವುದು ಆ ಮನಸ್ಸಿಗೆ ಗೊತ್ತಾದರೆ ಅದು ನಮ್ಮ ಪಟ್ಟಿಗೆ ಸಿಕ್ಕದೆ ತಪ್ಪಿಸಿಕೊಳ್ಳಲು ಯತ್ನಿಸುತ್ತದೆ. ನಮ್ಮ ಪ್ರಶ್ನೆಗಳಿಗೆ ನೇರವಾದ ಉತ್ತರ ಬರುವುದಿಲ್ಲ. ನಾವು ಅದೇ ಜಾಡಿನಲ್ಲಿ ಮೇಲಿಂದ ಮೇಲೆ ಪ್ರಶ್ನೆಗಳನ್ನು ಹಾಕುತ್ತಾ ಹೋದರೆ ಆ ಮನಸ್ಸಿನ ಧೃತಿ ಕದಲುತ್ತದೆ. ಅಲ್ಲಿ ಉಂಟಾಗುವ ಪ್ರತಿಕ್ರಿಯೆ ದೇಹದ ಹಲವು ವ್ಯಾಪಾರಗಳ ಮೂಲಕ ಹೊರಪಡುತ್ತದೆ. ತೊದಲು, ಬೆವರು, ಮೇಲುಸಿರು, ಅಸಂಬದ್ಧ ಉತ್ತರಗಳು ಸುಳ್ಳು ಹೇಳುವ ಮನಸ್ಸಿಗೆ ಸಾಕ್ಷಿ. ಕಳವು ಕೊಲೆಗಳನ್ನು ಮಾಡಿದವನಿಗೂ ಸಾಮಾನ್ಯವಾದ ಗುಟ್ಟನ್ನು ಬಚ್ಚಿಟ್ಟುಕೊಳ್ಳಲು ಯತ್ನಿಸುವವನಿಗೂ ಈ ವಿಷಯದಲ್ಲಿ ಭೇದವೇ ಇಲ್ಲ"

ಎಂದು ಡಾ. ನೀಲಕಂಠಂ ಮುಗಿಸಿದರು. ನಟರಾಜ ಅಯ್ಯರರು ಅವಾಕ್ಕಾಗಿ ಅವರ ಮುಖವನ್ನೇ ನೋಡಿದರು.

"ಹಾಗಾದರೆ ತಮ್ಮ ತೀರ್ಪೇನು?"

“ನನ್ನೊಡನೆ ಆಕೆ ಸಹಕರಿಸಿದ್ದರೆ ಆಕೆಯ ಮನಸ್ಸಿನ ಪೂರ್ಣ ಚಿತ್ರ ನನಗೆ ದೊರೆಯುತ್ತಿತ್ತು.”

“ಈಗ ತಮ್ಮ ಮನಸ್ಸಿಗೆ ಬಂದಿರುವ ಕಲ್ಪನೆಯೇನು ?”

“ಆಕೆ ಒಂದು ಗುಟ್ಟನ್ನು ಬಚ್ಚಿಟ್ಟುಕೊಳ್ಳಲು ಯತ್ನಿಸುತ್ತಿರುವಂತಿದೆ.”

“ಅದೇನೆಂದು ಕೇಳಬಹುದೇ ?”

“ಅದನ್ನು ನಾನು ಊಹಿಸಬಲ್ಲೆ. ಆದರೆ ನಿಮಗೆ ಹೇಳಲಾರೆ. ನಮ್ಮ ಊಹೆಗಳೆಲ್ಲವನ್ನೂ ಹಾಗೆ ಹೇಳುವುದು ಯುಕ್ತವಲ್ಲ. ಅವು ಒಮ್ಮೊಮ್ಮೆ ತಪ್ಪಾಗಿದ್ದರೂ ಇರಬಹುದು.”

“ನಮಗೊಂದು ಸೂಚನೆ ಸಿಕ್ಕಿದರೆ ಅನುಕೂಲವಲ್ಲವೆ ?”

ಡಾಕ್ಟರು ಒಂದು ಗಳಿಗೆ ಸುಮ್ಮನಿದ್ದರು. ಬಳಿಕ ತಟಕ್ಕನೆ ತಲೆಯೆತ್ತಿ,

“ಯಾವುದೋ ಭಗ್ನಪ್ರಣಯ ಆಕೆಯ ಈ ಸ್ಥಿತಿಗೆ ಕಾರಣವಾಗಿರಬಹುದು”

ಎಂದರು. ಆ ಮಾತು ಕೇಳಿ ನಟರಾಜ ಅಯ್ಯರರ ಮೈಗೆ ವಿದ್ಯುತ್ತು ಸೋಕಿದ ಹಾಗಾಯಿತು. ಅವರು ಮಾತಿಲ್ಲದೆ ಸ್ವಾಮಿನಾಥನ್ನರ ಮುಖ ನೋಡುತ್ತ ಕುಳಿತರು.

ಹೊತ್ತಾಯಿತೆಂದು ನೀಲಕಂಠಂ ಎದ್ದರು.

“ನೀವು ಆಕೆಯ ವಿಷಯದಲ್ಲಿ ತುಂಬ ಸಹಾನುಭೂತಿಯಿಂದ ನಡೆದುಕೊಳ್ಳಬೇಕು. ಯಾವ ವಿಷಯದಲ್ಲಿಯೂ ಆಕೆಯನ್ನು ಪ್ರಶ್ನಿಸಲು ಹೋಗಬೇಡಿ. ಹಾಗೆ ಮಾಡುವುದು ಮಾನಸಿಕ ಹಿಂಸೆಯಾಗುತ್ತದೆ. ನಿಮ್ಮ ಸೌಜನ್ಯ ವರ್ತನೆಯಿಂದಲೇ ಸಮಸ್ಯೆ ಬಗೆಹರಿಯಲು ಸಾಧ್ಯವಿದೆ”

ಎಂದರು. ಅಯ್ಯರರು ಅವರ ಉಪಕಾರಕ್ಕೆ ವಂದಿಸುತ್ತ ಅವರ ಕೈಯಲ್ಲೊಂದು ಕವರು ಇಡಲು ಹೋದರು. ನೀಲಕಂಠಂ ನಗೆಮೊಗದಿಂದ,

“ಏನು, ಫೀನೆ? ಬೇಡ, ನಿಮ್ಮಲ್ಲೇ ಇರಲಿ”

ಎನ್ನುತ್ತ ಬಲವಂತಕ್ಕೆ ಅವಕಾಶವನ್ನೇ ಕೊಡದೆ ಸರಸರನೆ ವರಾಂಡ ದಾಟಿ ಪೋರ್ಟಿಕೋದಲ್ಲಿ ನಿಂತಿದ್ದ ಕಾರನ್ನು ಹತ್ತಿಕುಳಿತರು.

“ನಮಸ್ಕಾರ, ಬರುತ್ತೇನೆ. ಏನಾದರೂ ಹೆಚ್ಚಿಗೆ ವಿಚಾರವಿದ್ದರೆ ಸಂಕೋಚ ಪಟ್ಟುಕೊಳ್ಳದೆ ಹೇಳಿಕಳಿಸಿ”

ಎಂದು ಹೊರಟೇಹೋದರು. ನಟರಾಜ ಅಯ್ಯರ್ ಸ್ವಾಮಿನಾಥನ್ ಒಬ್ಬರ ಮುಖವನ್ನೊಬ್ಬರು ನೋಡುತ್ತ ಸುಮ್ಮನೆ ನಿಂತುಕೊಂಡರು.

ಡಾ. ನೀಲಕಂಠಂ ಹೊರಟುಹೋದುದನ್ನು ಲಲಿತನೂ ತನ್ನ ರೂಮಿನ ಕಿಟಕಿಯಿಂದ ನೋಡಿದಳು. ಬಳಿಕ ಆರಾಮು ಕುರ್ಚಿಯ ಮೇಲೆ ಹೋಗಿ ಬಿದ್ದುಕೊಂಡು ಯಾವುದೋ ವಿಪತ್ತಿನಿಂದ ಪಾರಾದವಳಂತೆ ನೀಳವಾಗಿ ಉಸಿರ್ಗರೆದಳು. ನಿಜವಾಗಿಯೂ ಅವರ ಪ್ರಶ್ನೆಗಳ ಆಘಾತದಿಂದ ತಾನು ಇಷ್ಟು ಸುಲಭವಾಗಿ ಪಾರಾಗುವೆನೆಂದು ಅವಳು ಭಾವಿಸಿರಲಿಲ್ಲ. ಲೋಕಾಭಿರಾಮವಾಗಿ ಮಾತಾಡಲು ಆರಂಭಿಸಿದ್ದ ಅವರು ಅವಳ ವಿದ್ಯೆ, ಅಭಿರುಚಿ ಮುಂತಾದ ಹಲವು ವಿಷಯಗಳನ್ನು ಕುರಿತು ಪ್ರಶ್ನೆ ಹಾಕಿದ್ದರು. ಅವರು ಹಾಕುತ್ತಿದ್ದ ಒಂದೊಂದು ಪ್ರಶ್ನೆ ಅವಳು ತನ್ನ ಎದೆಯಲ್ಲಿ ಬಚ್ಚಿಟ್ಟುಕೊಂಡಿದ್ದ ಗುಟ್ಟಿನ ಎಲ್ಲೆಕಟ್ಟೆಗೆ ಬಂದು ಬಂದು ತಾಕುತ್ತಿತ್ತು. ಅದಕ್ಕೆ ಉತ್ತರ ಹೇಳುವಾಗ ಅವಳ ಮನಸ್ಸು ತಲ್ಲಣಗೊಳ್ಳುತ್ತಿತ್ತು.

ಅವರು ಯಾವ ಯಾವುದೋ ಪ್ರಶ್ನೆಗಳನ್ನು ಹಾಕಿಕೊಂಡು ಬರುತ್ತ ಇದ್ದಕ್ಕಿದ್ದ ಹಾಗೆ,

“ನಿಮಗೆ ಮದುವೆಯಾಗಿದೆಯೆ?”

ಎಂದು ಕೇಳಿಬಿಟ್ಟಿದ್ದರು. ಅದನ್ನು ಕೇಳಿ ಅವಳ ಮನಸ್ಸಿಗೆ ಸಂಕೋಚವಾಗಿತ್ತು. ಆದರೆ ಯಾವ ಭೀತಿಯೂ ಇಲ್ಲದೆ,

“ಇಲ್ಲ”

ಎಂದು ಉತ್ತರವಿತ್ತಿದ್ದಳು. ಡಾಕ್ಟರು ಅಷ್ಟಕ್ಕೇ ಸುಮ್ಮನಾಗಿರಲಿಲ್ಲ.

“ಏಕೆ ಆಗಿಲ್ಲ?”

ಎಂದು ಕೇಳಿ ಅವಳ ಮುಖವನ್ನೇ ನೋಡುತ್ತ ಕುಳಿತುಬಿಟ್ಟಿದ್ದರು. ಲಲಿತ ತಲೆ ತಗ್ಗಿಸಿ ಒಂದು ಕ್ಷಣ ಮೌನವಾಗಿದ್ದಳು.

“ನನಗೆ ಗೊತ್ತಿಲ್ಲ”

ಎಂದು ಅವಳ ಬಾಯಿಂದ ಅನೈಚ್ಛಿಕವಾಗಿ ಬಂದುಬಿಟ್ಟಿತ್ತು. ಆ ಪ್ರಶ್ನೆಯನ್ನು ಅವರೇಕೆ ಕೇಳಿದರೋ ಎಂದು ಅವಳ ಮನಸ್ಸಿಗನ್ನಿಸಿತ್ತು. ಅವರು ಮುಂದೆ ಕೇಳಿದ ಪ್ರಶ್ನೆಯಿಂದ ಅವಳ ಮನಸ್ಸಿನ ಬಿಗಿ ಸಡಲಿ ಅದು ಅಲ್ಲಕಲ್ಲೋಲವಾಗಿತ್ತು.

"ನೀವು ಯಾರನ್ನಾದರೂ ಪ್ರೀತಿಸುತ್ತಿರುವಿರಾ?"

ಡಾಕ್ಟರು ನಯವಾದ ಧ್ವನಿಯಲ್ಲಿಯೇ ಕೇಳಿದ್ದರು. ಆದರೆ ಆ ಮಾತು ಕಿವಿಗೆ ಬಿದ್ದೊಡನೆಯೆ ಅವಳ ಮೈ ಜುಮ್ಮೆಂದಿತು; ಕೂದಲು ನಿಮಿರಿ ನಿಂತವು; ಮುಖಕ್ಕೆ ಬಿಸಿಯೇರಿತು; ಮೈಯಲ್ಲಿ ಯಾವುದೋ ಕಂಪನವುಂಟಾದಂತೆ ತೋರಿತು. ಒಂದು ಕ್ಷಣ ಬಿಟ್ಟು,

"ಇಲ್ಲ"

ಎಂದು ಧೈರ್ಯವಾಗಿಯೇ ಉಸುರಿದ್ದಳು. ಅವಳ ಧ್ವನಿಯಲ್ಲಿ ಕಂಡೂ ಕಾಣದ ಹಾಗಿದ್ದ ಕಂಪನವನ್ನು ಡಾಕ್ಟರು ಗಮನಿಸಿರಲಾರರು. ಆ ಉತ್ತರ ಅವರಿಗೆ ತೃಪ್ತಿಕರವಾಗಿಯೇ ಕಂಡಿರಬೇಕು. ಅವರು ಮತ್ತೆ ಎರಡು ನಿಮಿಷ ಮಾತನಾಡಿ ಎದ್ದು ಹೊರಟುಹೋಗಿದ್ದರು.

ಡಾ. ನೀಲಕಂಠಂ ಮೊದಲಿನಿಂದ ಕೊನೆಯವರೆಗೂ ಅವಳೊಡನೆ ಸೌಜನ್ಯದಿಂದಲೇ ನಡೆದುಕೊಂಡಿದ್ದರು. ಅವಳೂ ಅವರು ಕೇಳಿದ ಪ್ರಶ್ನೆಗಳಿಗೆಲ್ಲ ಉತ್ತರವಿತ್ತಿದ್ದಳು. ಅವಳು ಮರೆಮಾಜಿದ ಗುಟ್ಟಿನ ಸುಳಿವು ಅವರಿಗೆ ಗೊತ್ತಾಗಲು ಕಾರಣವಿರಲಿಲ್ಲ.

ಸಿಡಿಲಿನಂತೆ ಬಂದದ್ದು ಮಿಂಚಿನಂತೆ ಕರಗಿಹೋಗಿತ್ತು.

ನಟರಾಜ ಅಯ್ಯರರೂ ಅವರ ರೂಮಿನಲ್ಲಿ ಕುಳಿತು ಚಿಂತಿಸುತ್ತಿದ್ದರು. ಡಾಕ್ಟರಾಡಿದ ಮಾತು ಅವರ ಕಿವಿಯಲ್ಲಿ ಮೊರೆಯುತ್ತಿತ್ತು.

—ಯಾವುದೋ ಭಗ್ನಪ್ರಣಯ ಆಕೆಯ ಈ ಸ್ಥಿತಿಗೆ ಕಾರಣವಾಗಿರಬಹುದು—

"ನಿಜವೆ? ಲಲಿತ ಯಾರನ್ನಾದರೂ ಪ್ರೀತಿಸುತ್ತಿರಬಹುದೆ?"

ಎಂದು ಅವರು ತಾವೊಬ್ಬರೇ ಕುಳಿತಿರುವುದನ್ನು ಮರೆತು ಹತ್ತಾರು ಸಲ ವಾಚ್ಯವಾಗಿಯೇ ನುಡಿದರು.

ಅವರಂತೂ ಅದನ್ನು ನಂಬುವ ಸ್ಥಿತಿಯಲ್ಲಿರಲಿಲ್ಲ. ಲಲಿತನ ಜೀವನದಲ್ಲಿ ಅಂಥ ಒಂದು ರಹಸ್ಯ ಅಡಗಿರಬಹುದೆನ್ನುವ ಕಲ್ಪನೆಯೇ ಅವರಿಗಿರಲಿಲ್ಲ. ತಮ್ಮ ಕಣ್ಣ ಮುಂದಿನ ಹುಡುಗಿ ತಮಗೆ ತಿಳಿಯದ ವ್ಯವಹಾರದಲ್ಲಿ ತೊಡಗಿರಬಹು

ದೆನ್ನುವುದನ್ನು ಅವರ ಮನಸ್ಸು ಒಪ್ಪಲು ನಿರಾಕರಿಸುತ್ತಿತ್ತು. ಡಾಕ್ಟರ ಮಾತು ಅವರಿಗೆ ದಿಗ್ಭ್ರಮೆ ಹಿಡಿಸಿತ್ತು.

ಆದರೂ ಅವರ ಬುದ್ಧಿ ಸುತ್ತಿಕೊಂಡು ಸುತ್ತಿಕೊಂಡು ಬಂದು ಆ ಪ್ರಶ್ನೆಗೇ ಅಡರುತ್ತಿತ್ತು.

"ಇದು ನಿಜವೆ? ವಿಜ್ಞಾನ ಸುಳ್ಳಾಡುವುದೇ?"

೨೬

ಕುಮುದನಿಗೆ ಕೋಪ ಬರಲು ಕಾರಣವಿತ್ತು.

ಅವಳು ದೆಹಲಿಗೆ ಬರಲೊಪ್ಪಿದ್ದು ಅಡುಗೂಳಜ್ಜಿಯ ಹಾಗೆ ಕುಳಿತು ಕೊಳ್ಳುವುದಕ್ಕಲ್ಲ. ಮಧುಸೂದನನೊಡನೆ ಸುತ್ತಾಡಿ, ನೋಟ ನೋಡಿ, ನಕ್ಕು ನಲಿಯುವುದಕ್ಕೆ. ಆದರೆ ಆ ಹಾಳು ಕನ್ನಡ ಸಂಘದವರು ಅವನಿಗೆ ಗಂಟುಬಿದ್ದು ಅವನನ್ನು ಅವಳ ಕೈಗೆ ಸಿಕ್ಕದ ಹಾಗೆ ಮಾಡಿಬಿಟ್ಟಿದ್ದರು. ಅವನೂ ಅವರ ಸೂತ್ರದ ಗೊಂಬೆಯಂತೆ ಕುಣಿಯುತ್ತ ನಿಂತುಬಿಟ್ಟಿದ್ದ. ಅವಳು ದೆಹಲಿಯಲ್ಲಿರು ವುದು ಅವನಿಗೂ ಮರೆತೇ ಹೋಗಿತ್ತೋ ಏನೋ.

ಹೀಗಾಗುವುದೆಂದು ಅವಳಿಗೆ ಮೊದಲೇ ಗೊತ್ತಿತ್ತು. ಈ ಸೂಚನೆ ಅವಳಿಗೆ ಆಗ್ರಾದಲ್ಲೇ ಬಂದಿತ್ತು. ಅದಕ್ಕೇ ದೆಹಲಿಗೆ ಬರುವುದಿಲ್ಲವೆಂದು ಹಟ ಮಾಡಿದ್ದಳು. ಆದರೆ ಮಧುಸೂದನ ಅವಳಿಗೆ ಇಲ್ಲದ ಮಾತು ಹೇಳಿ, ತಮ್ಮ ಸುಖಕ್ಕೆ ಯಾವುದೂ ಅಡ್ಡಿ ಬರುವುದಿಲ್ಲವೆಂದು ನಂಬಿಸಿ ಕರೆತಂದಿದ್ದ. ಆದರೆ ಅವನ ಮಾತು ಸುಳ್ಳಾಗಿತ್ತು. ಬಂದು ಎರಡು ದಿವಸವಾದರೂ ಅವನ ಮುಖ ದರ್ಶನವೇ ಆಗಿರಲಿಲ್ಲ.

ಈ ಸುಖಕ್ಕೆ ಇಷ್ಟು ದೂರ ಬರಬೇಕಾಗಿತ್ತೆ? ಮುಂಬಯಿಯ ತಮ್ಮ ಹೋಟೆಲಿನಲ್ಲಿಯೇ ಇದ್ದಿದ್ದರೆ ಬೇಡವೆನ್ನುತ್ತಿತ್ತೆ?

ಕುಮುದನಿಗೆ ನಿಜವಾಗಿ ಸಿಟ್ಟು ಬಂದಿತ್ತು.

ಸಾಯಂಕಾಲದವರೆಗೂ ಒಬ್ಬಳೇ ಕಾದು ಬೇಸರವಾಗಿ ರೂಮಿಗೆ ಬೀಗ ಹಾಕಿಕೊಂಡು ಹೊರಟುಹೋಗಿದ್ದಳು.

ಮಧುಸೂದನ 'ಸುಖನಿವಾಸ'ಕ್ಕೆ ಬಂದಿಳಿದಾಗ ಕುಮುದಾ ಹೊರಗೆ ಹೋಗಿದ್ದಾಳೆಂದು ತಿಳಿದು ಅವನಿಗೆ ನಿರುತ್ಸಾಹವಾಯಿತು. ಬೀಗ ಹಾಕಿದ್ದ

ಅವಳ ರೂಮಿನ ಮುಂದೆ ನಿಂತು ಒಂದು ಗಳಿಗೆ ಹಾಗೆಯೇ ಯೋಚಿಸಿದ. ಹಿಂದಕ್ಕೆ ಹೊರಟುಹೋಗುವುದೇ – ಇಲ್ಲ ಕಾಯುತ್ತ ಕೂಡುವುದೇ ?

ಅವನು ಬಾಗಿಲ ಮುಂದೆ ನಿಂತಿದ್ದುದನ್ನು ಕಂಡು ಹೋಟೆಲಿನ ಗುಮಾಸ್ತೆ ಹತ್ತಿರ ಬಂದ.

" ಯಾರು ಬೇಕಾಗಿತ್ತು ?"

" ಕುಮುದಾಬಾಯಿ. ಅವರ ರೂಮು ಇದೇ ಅಲ್ಲವೆ ?"

" ಹೌದು. ಇನ್ನೇನು ಬರಬಹುದು, ಕುಳಿತುಕೊಳ್ಳಿ."

" ಅವರೆಲ್ಲಿ ಹೋಗಿದ್ದಾರೆನ್ನುವುದು ಗೊತ್ತೆ ?"

" ಇಲ್ಲ. ಎಲ್ಲಿ ಹೋಗಿದ್ದರೂ ಊಟದ ಹೊತ್ತಿಗೆ ಬರಬೇಕು "

ಎಂದು ಹೇಳಿ ಗುಮಾಸ್ತೆ ತನ್ನ ಕೆಲಸದ ಮೇಲೆ ಹೊರಟುಹೋದ. ಮಧುಸೂದನ ಬಾಲ್ಕನಿಯಲ್ಲಿ ಹಾಕಿದ್ದ ಕುರ್ಚಿಯೊಂದರ ಮೇಲೆ ಕುಳಿತುಕೊಳ್ಳುತ್ತ ಕೈಗಡಿಯಾರ ನೋಡಿಕೊಂಡ. ಘಂಟೆ ಒಂಬತ್ತಾಗಿತ್ತು. ಹೋಟೆಲಿನಲ್ಲಿಳಿದಿದ್ದವರು ಆಗಲೇ ಊಟಕ್ಕೆ ಏಳುತ್ತಿದ್ದರು. ಕೆಲವರು ಮಹಡಿಯಿಳಿದು ಊಟದ ಮನೆಗೇ ಹೋಗುತ್ತಿದ್ದರು. ಮತ್ತೆ ಕೆಲವರಿಗೆ ಅವರವರ ರೂಮಿಗೇ ಊಟ ಬರುತ್ತಿತ್ತು. ಆಳು ಪರಿಚಾರಕರ ಓಡಾಟ ಹೆಚ್ಚಾಗಿತ್ತು.

ಮಧುಸೂದನ ಟೀಪಾಯ್ ಮೇಲಿದ್ದ 'ಹಿಂದೂಸ್ತಾನ್ ಟೈಮ್ಸ್' ಪತ್ರಿಕೆಯ ಪುಟಗಳನ್ನು ತಿರುವಿಹಾಕುತ್ತ ಕುಳಿತ. ಆಗಾಗ ಅವನ ದೃಷ್ಟಿ ಕೈಗಡಿಯಾರದ ಕಡೆಗೆ ಹರಿಯುತ್ತಿತ್ತು.

ಒಂಬತ್ತೂವರೆಯ ಹೊತ್ತಿಗೆ ಕುಮುದಾ ಬಂದು ನೇರವಾಗಿ ತನ್ನ ರೂಮಿಗೆ ಹೋದಳು. ಬಾಲ್ಕನಿಯಲ್ಲಿ ಕುಳಿತಿದ್ದ ಮಧುಸೂದನನನ್ನು ಅವಳು ಗಮನಿಸಿದಂತೆ ಕಾಣಲಿಲ್ಲ. ಅವಳು ಬಂದದ್ದನ್ನು ನೋಡಿ ಅವನೇ ಎದ್ದು ಅವಳ ರೂಮಿಗೆ ಬಂದ. ಕುಮುದಾ ಅವನನ್ನೊಮ್ಮೆ ಸುಮ್ಮನೆ ನೋಡಿ ದೃಷ್ಟಿಯನ್ನು ಬೇರೆ ಕಡೆ ತಿರುಗಿಸಿದಳು. ಆ ನೋಟದಲ್ಲಿ ಕೋಪ ತುಡುಕುತ್ತಿತ್ತು.

" ಈಗ ಬಂದಿರಾ ?"

" ಇಲ್ಲ, ಆಗಲೇ ಬಂದೆ."

" ದೆಹಲಿಯನ್ನೆಲ್ಲಾ ಮುಗಿಸಿಬಿಟ್ಟರೋ, ಇನ್ನೂ ಬಾಕಿ ಇದೆಯೋ ?"

ಎನ್ನುತ್ತ ಕೈಯಲ್ಲಿದ್ದ ವ್ಯಾನಿಟಿ ಬ್ಯಾಗನ್ನು ಮಂಚದ ಮೇಲೆಸೆದು

ಆರಾಮು ಕುರ್ಚಿಯ ಮೇಲೆ ಹೋಗಿ ಬಿದ್ದುಕೊಂಡಳು. ಅಸಮಾಧಾನವಾಗಿದೆ ಯೆಂದು ಬಾಯಿಬಿಟ್ಟು ಹೇಳಬೇಕಾಗಿಯೇ ಇರಲಿಲ್ಲ. ಅದು ಎಂಥ ಹೆಡ್ಡನಿಗಾದರೂ ತಿಳಿಯುತ್ತಿತ್ತು. ಮಧುಸೂದನ ಅವಳ ಮಾತಿಗೆ ಉತ್ತರ ಕೊಡದೆ ರೂಮಿನ ಬಾಗಿಲನ್ನು ಮುಂದಕ್ಕೆ ನೂಕಿ ಒಂದು ಕುರ್ಚಿಯನ್ನೆಳೆದು ಕೊಂಡು ಅವಳ ಹತ್ತಿರ ಕುಳಿತ.

"ನಾನು ಮುಗಿಸುವುದಿರಲಿ, ನಿನ್ನ ಸವಾರಿ ಎಲ್ಲಿಗೆ ಹೋಗಿತ್ತು?"

ಕುಮುದಾ ಉತ್ತರ ಕೊಡಲಿಲ್ಲ. ಮುಖವನ್ನತ್ತ ತಿರುಗಿಸಿಕೊಂಡಳು.

"ನನ್ನ ಮೇಲೆ ಕೋಪವೆ?"

ಎಂದು ಮಧುಸೂದನ ಅವಳ ಮುಂಗೈಯನ್ನು ಹಿಡಿದು ತನ್ನೆಡೆಗೆಳೆದು ಕೊಂಡ. ಅವನ ಕೈಬೆರಳುಗಳು ಅವಳ ಬಳೆಗಳನ್ನು ಅನೈಚ್ಛಿಕವಾಗಿ ತಿರುಗಿಸ ತೊಡಗಿದವು.

"ನನಗೇಕೆ ಕೋಪ?"

"ಹಾಗಾದರೆ ಕೋಪವಿಲ್ಲವೆ?"

ಕುಮುದಾ ಉತ್ತರ ಕೊಡದೆ ಸುಮ್ಮನಿದ್ದಳು. ಮಧುಸೂದನ ಎದ್ದು ಮೇಜಿನ ಮೇಲ್ಲಿದ್ದ ಕನ್ನಡಿಯನ್ನು ತಂದು ಅವಳ ಮುಖದ ಮುಂದೆ ಹಿಡಿದ.

"ಇದರಲ್ಲಿ ನೋಡಿಕೊಂಡು ಹೇಳು."

"ಹೋಗಿ, ನನ್ನನ್ನು ರೇಗಿಸಬೇಡಿ"

ಎಂದು ಅವನು ಹಿಡಿದಿದ್ದ ಕನ್ನಡಿಯನ್ನು ಕಿತ್ತು ಮಂಚದ ಮೇಲೆ ರೊಯ್ಯನೆ ಎಸೆದಳು.

"ಇದು ಕೋಪವಿಲ್ಲದಿರುವುದಕ್ಕೆ ಗುರುತೆ?"

"ಕೋಪ ಬರುವ ಹಾಗೆ ಮಾಡಿದವರು ಯಾರೋ?"

"ನಾನೇ ಅಂತ ಒಪ್ಪಿಕೊಳ್ಳುತ್ತೇನೆ."

"ಮತ್ತೇಕೆ ಕೇಳುವುದು?"

"ನಿನ್ನ ಬಾಯಲ್ಲಿ ಅದು ಬರಲೆಂದು."

"ಅದನ್ನು ಕೇಳಲು ನಿಮಗಷ್ಟು ಸಂತೋಷವೆ?"

"ಕೇಳಲು ಸಂತೋಷವಲ್ಲ, ನೋಡಲು ಸಂತೋಷ. ಕೋಪಬಂದಾಗ ನೀನೆಷ್ಟು ಸುಂದರಿಯಾಗಿ ಕಾಣುತ್ತೀ, ಕುಮುದಾ?"

ಎಂದು ನಿಂತ ಹಾಗೆಯೇ ತಟಕ್ಕನೆ ಹಿಂದಿನಿಂದ ಬಗ್ಗಿ ಅವಳನ್ನು ಚುಂಬಿಸಿದ. ಕುಮುದಾ ಎರಡು ಕೈಯಲ್ಲಿಯೂ ಅವನ ಮುಖವನ್ನು ಹಿಂದೆ ನೂಕುತ್ತ,

" ಈ ಬಿನ್ನಾಣವೆಲ್ಲಾ ಸಾಕು, ಸುಮ್ಮನಿರಿ."

" ಇಷ್ಟು ಕೋಪಿಸಿಕೊಂಡರೆ ನನ್ನ ಗತಿಯೇನು ?"

" ಆ ಯೋಚನೆ ಇದ್ದರೆ ಎರಡು ದಿನದಿಂದ ಈ ಕಡೆ ಸುಳಿಯದಿರುತ್ತಿದ್ದಿರಾ ?"

" ನಾನೇನು ಮಾಡಲಿ ಕುಮುದಾ? ಇಲ್ಲದ ನಿರ್ಬಂಧಕ್ಕೆ ಸಿಕ್ಕಬೇಕಾಯಿತು "

ಎಂದು ಮಧುಸೂದನ ಅವಳ ಪಕ್ಕದಲ್ಲಿದ್ದ ಕುರ್ಚಿಯ ಮೇಲೆ ಮಂಡಿಸಿದ.

" ಹೀಗಾಗುವುದೆಂದು ನನಗೆ ಮೊದಲೇ ಗೊತ್ತಿತ್ತು. ನಮ್ಮ ದೇವರ ಸತ್ಯ ನನಗೆ ತಿಳಿಯದೆ ?"

" ಈಗೇನು ನಷ್ಟ? ಗಲಾಟೆಯೆಲ್ಲಾ ಮುಗಿದುಹೋಯಿತಲ್ಲ, ಬಿಡು."

" ಏನು ಮುಗಿದುಹೋಯಿತೋ. ನನ್ನನ್ನಂತೂ ಎರಡು ದಿವಸ ಹೆಣ ಕಾಯುವ ಹಾಗೆ ಕಾಯಿಸಿಬಿಟ್ಟಿರಿ. ಈ ಸೌಭಾಗ್ಯಕ್ಕೆ ಇಲ್ಲಿಗೆ ಬರಬೇಕಾಗಿತ್ತೆ ?"

ಆ ಮಾತಿಗೆ ಮಧುಸೂದನನ ಹತ್ತಿರ ಉತ್ತರವಿರಲಿಲ್ಲ. ಅವಳಾಡಿದ್ದೂ ನಿಜವೇ. ಅವಳು ನಿರರ್ಥಕವಾಗಿ ಎರಡು ದಿನ ಕಾದು ಬೇಸರಗೊಂಡಿದ್ದಳೆನ್ನುವುದನ್ನು ಅಲ್ಲಗಳೆಯುವ ಹಾಗಿರಲಿಲ್ಲ. ಅದರ ಹೊಣೆಯೆಲ್ಲ ಅವನದೇ ಆಗಿತ್ತು. ಕೈಮೀರಿದ ಸ್ಥಿತಿಗೆ ಅವನೂ ಏನೂ ಮಾಡುವ ಹಾಗಿರಲಿಲ್ಲ.

ಇಬ್ಬರೂ ಒಂದು ಗಳಿಗೆ ಮೌನವಾಗಿ ಕುಳಿತಿದ್ದರು. ಕುಮುದಾ ಕುರ್ಚಿ ಬಿಟ್ಟೆದ್ದು,

" ಹೊತ್ತಾಯಿತು ಏಳಿ. ಊಟವನ್ನಾದರೂ ಮಾಡೋಣ."

" ನೀನು ಮಾಡು "

ಎಂದ. ಕುಮುದಾ ಅವನ ಮುಖವನ್ನು ಶೋಧಿಸುವ ದೃಷ್ಟಿಯಿಂದ ನೋಡಿದಳು. ಹೊರಗೆ ಶ್ರೀಧರಮೂರ್ತಿಗಳ ಕಾರು ಕಾದಿರುವ ಸಂಗತಿ ಅವಳಿಗೆ ಗೊತ್ತಿರಲಿಲ್ಲ.

" ಮೂರ್ತಿಗಳು ಕಾದಿರುತ್ತಾರೆ."

"ಒಂದು ಕೆಲಸ ಮುಂದಿಟ್ಟುಕೊಂಡೇ ಬಂದಿದ್ದೀರಿ. ತುಂಬ ಜಾಣರು ಕಣ್ರೀ ನೀವು!"

ಎಂದು ಹಂಗಿಸುವ ಧ್ವನಿಯಲ್ಲಿ ನುಡಿದು ಅವನ ಮುಂದೆ ಬಂದು ನಿಂತು,

"ಇವತ್ತು ನಿಮ್ಮನ್ನು ಕಳಿಸುವುದಿಲ್ಲ"

ಎಂದಳು. ಅವಳ ಧ್ವನಿಯಲ್ಲಡಗಿದ್ದ ನಿರ್ಧಾರವನ್ನು ಅವನು ಗ್ರಹಿಸಿದ.

"ಅವರೇನಾದರೂ ತಿಳಿದುಕೊಳ್ಳುತ್ತಾರೆ, ಕುಮುದಾ"

"ಏನಾದರೂ ತಿಳಿದುಕೊಳ್ಳಲಿ"

ಎಂದು ಮೊಂಡುಬಿದ್ದಳು. ಆ ಇಕ್ಕಟ್ಟಿನಿಂದ ಪಾರಾಗುವುದು ಹೇಗೆಂದು ಮಧುಸೂದನ ಯೋಚಿಸುತ್ತ ಕುಳಿತ. ಶ್ರೀಧರಮೂರ್ತಿಗಳೂ ಅವರ ಮಡದಿಯೂ ತನಗಾಗಿ ಊಟಕ್ಕೆ ಕಾದಿರುತ್ತಾರೆಂದು ಅವನಿಗೆ ಗೊತ್ತಿತ್ತು. ಕೈಗಡಿಯಾರ ನೋಡಿಕೊಂಡ. ಘಂಟೆ ಹತ್ತರ ಸಮೀಪಕ್ಕೆ ಬಂದಿತ್ತು. ಡ್ರೈವರೂ ಕಾದು ಕಾದು ಸಾಕಾಗಿ ಏನೆಂದುಕೊಳ್ಳುತ್ತಿರುವನೋ ಎಂದು ಅವನಿಗನ್ನಿಸಿತು.

ಅವನ ಮನಸ್ಸಿನಲ್ಲಿ ಏನು ನಡೆಯುತ್ತಿದೆಯೆಂಬುದನ್ನು ಕುಮುದಾ ಗ್ರಹಿಸಿರಬೇಕು.

"ಏನು ಯೋಚಿಸುತ್ತಿರುವಿರಿ? ಡ್ರೈವರ್ ಕೈಯಲ್ಲಿ ಒಂದು ಚೀಟಿ ಬರೆದು ಕಳಿಸಿದರಾಗುವುದಿಲ್ಲವೆ?"

ಎಂದಳು. ಅದನ್ನು ಬಿಟ್ಟು ಬೇರೆ ದಾರಿಯೇ ಇರಲಿಲ್ಲ. ಅವನು ಯೋಚಿಸಿಕೊಂಡು ಬಂದದ್ದೇ ಒಂದು, ಅದು ಆದದ್ದೇ ಒಂದು. ಸ್ವಲ್ಪ ಹೊತ್ತಾಗಿಯಾದರೂ ಅವನು ಶ್ರೀಧರಮೂರ್ತಿಗಳ ಮನೆಗೆ ಹಿಂತಿರುಗೋಣ ವೆಂದುಕೊಂಡು ಬಂದಿದ್ದ. ಆದರೆ ಕುಮುದಾ ತಾನೇ ಹೊತ್ತು ಮಾಡಿಕೊಂಡು ಬಂದು ಎಲ್ಲಾ ಏರ್ಪಾಡನ್ನೂ ತಲೆಕೆಳಗು ಮಾಡಿಬಿಟ್ಟಿದ್ದಳು. ಈಗ ಅವಳನ್ನು ಬಿಟ್ಟುಹೋಗುವ ಸ್ಥಿತಿಯಲ್ಲಿ ಅವನಿರಲಿಲ್ಲ.

'ಸುಖನಿವಾಸ'ದಲ್ಲಿ ಅಕಸ್ಮಾತ್ತಾಗಿ ಮೈಸೂರಿನ ಗೆಳೆಯರೊಬ್ಬರು ಸಿಕ್ಕಿ ಬಿಟ್ಟರೆಂದೂ ಅವರ ಬಲವಂತಕ್ಕೆ ನಿಲ್ಲಬೇಕಾಯಿತೆಂದೂ ಬೆಳಗ್ಗೆ ಖಂಡಿತ ಬರುವುದಾಗಿಯೂ ಮಧುಸೂದನ ಒಂದು ಕಾಗದ ಸೃಷ್ಟಿಸಿ ಡ್ರೈವರ್ ಕೈಯಲ್ಲಿ ಶ್ರೀಧರಮೂರ್ತಿಗಳಿಗೆ ರವಾನಿಸಿದ.

ಬಳಿಕ ಇಬ್ಬರೂ ಕೆಳಗೆ ಹೋಗಿ ಊಟ ಮಾಡಿಕೊಂಡು ಬಂದರು.

ಮೈಸೂರು ಬಿಟ್ಟರೆ ಹೊರಗಡೆ ಅಂಥ ಒಳ್ಳೆಯ ಊಟ ಸಿಕ್ಕುವುದಿಲ್ಲ ವೆನ್ನುವುದು ಮಧುಸೂದನನ ಅಭಿಪ್ರಾಯವಾಗಿತ್ತು. ಆದರೆ 'ಸುಖನಿವಾಸ'ದ ಊಟ ಆ ಅಪವಾದಕ್ಕೆ ಹೊರತಾಗಿತ್ತು. ಮೈಸೂರು ಜನ ಹೆಚ್ಚಾಗಿ ಬರುತ್ತಿದ್ದುದ ರಿಂದಲೋ ಅಥವಾ ಅವರ ಅಭಿರುಚಿ ಹೋಟೆಲಿನವರಿಗೆ ತಿಳಿದಿದ್ದುದರಿಂದಲೋ ಊಟದ ವ್ಯವಸ್ಥೆ ತೃಪ್ತಿಕರವಾಗಿತ್ತು. ಎದೆಗೆಡಿಸುವಂಥ ಚಪಾತಿಗಳ ಅವಾಂತರವಿಲ್ಲದ ಚೊಕ್ಕಊಟ ಅವನ ಮನಸ್ಸಿಗೆ ತುಂಬ ಒಪ್ಪಿಗೆಯಾಯಿತು.

ಊಟವಾದ ಮೇಲೆ ಇಬ್ಬರೂ ಸ್ವಲ್ಪಹೊತ್ತು ಬಾಲ್ಕನಿಯಲ್ಲಿ ಕುಳಿತಿದ್ದು ಬಳಿಕ ರೂಮಿಗೆ ಹಿಂತಿರುಗಿದರು. ಕುಮುದಾ ಯಾವ ಮಾಯದಲ್ಲೋ ಕೆಳಗೆ ಫ್ಲಾಸ್ಕ್ ಕಳಿಸಿ ಎರಡು ಕಪ್ ಬಿಸಿಹಾಲು ತರಿಸಿಟ್ಟಿದ್ದಳು. ಒಂದು ತಟ್ಟೆಯಲ್ಲಿ ತಾಂಬೂಲ ಸಿದ್ಧವಾಗಿತ್ತು.

ರೂಮಿಗೆ ಬಂದೊಡನೆಯೇ ಮಧುಸೂದನ ರೂಮನ್ನೆಲ್ಲಾ ಒಮ್ಮೆ ಪರಾಂಬರಿಸಿದ. ರೂಮು ತಕ್ಕಮಟ್ಟಿಗೆ ವಿಶಾಲವಾಗಿಯೇ ಇತ್ತು. ಅದಕ್ಕೆ ಸೇರಿದ ಹಾಗೆ ಪಕ್ಕದಲ್ಲಿ ಸ್ನಾನಗೃಹ, ಶೌಚಗೃಹ, ಬಿಸಿನೀರು – ತಣ್ಣೀರು ನಲ್ಲಿಗಳಿದ್ದವು. ರೂಮಿನ ಕಿಟಕಿಗಳಿಗೆ ನಸು ನೀಲಿಬಣ್ಣದ ತೆಳ್ಳನೆಯ ಪರದೆಗಳು ಇಳಿಬಿಟ್ಟಿದ್ದವು. ಸೊಳ್ಳೆಪರದೆ ಹಾಕಿದ ಒಂದು ಮಂಚ, ಒಂದು ಆರಾಮ ಕುರ್ಚಿ, ಒಂದು ಮೇಜು, ಎರಡು ಕುರ್ಚಿಗಳಿದ್ದವು. ಮೇಜಿನ ಪಕ್ಕದಲ್ಲೇ ಒಂದು ಬೀರುವಿತ್ತು.

ಅವನು ಸುತ್ತಲೂ ನೋಡಿಕೊಂಡು ಬರುತ್ತಿದ್ದ ಬಗೆಯನ್ನು ಕಂಡು ಅವಳಿಗೆ ನಗೆ ಬಂದಿತು.

"ಏನು ಪರೀಕ್ಷಿಸುತ್ತಿರುವಿರಿ?"

"ಏನೂ ಇಲ್ಲ, ಹಾಗೇ ನೋಡಿದೆ."

ಎನ್ನುತ್ತ ಮೇಜಿನ ಮುಂದೆ ಬಂದು ಕುಳಿತ.

"ತಾಂಬೂಲ ಹಾಕಿಕೊಳ್ಳುವುದಿಲ್ಲವೆ?"

"ನನಗೆ ಬೇಡ. ನೀನು ಹಾಕಿಕೋ. ನಿನಗೇ ಅದರ ಹುಚ್ಚು."

"ನೀವು ಹಾಕಿಕೊಳ್ಳದಿದ್ದರೆ ಬಿಡುವೆನೆ?"

ಎಂದು ತೆಳ್ಳಗೆ ಬಳುಕುತ್ತಿದ್ದ ಎಲೆಗಳನ್ನು ಆರಿಸಿಕೊಂಡು ಸುಣ್ಣ ಹಚ್ಚಿ ಸೀಳು ತೆಗೆಯಲಾರಂಭಿಸಿದಳು. ಅವಳು ತನ್ನ ಹಿಂದೆ ನಿಂತಿದ್ದುದು ಮಧು ಸೂದನನಿಗೆ ಕನ್ನಡಿಯಲ್ಲಿ ಕಂಡಿತು. ಆ ನಿಲುವಿನಲ್ಲಿ ಅವನಿಗೆ ಏನೋ ಮೋಹ ಕತೆ ಭಾಸವಾಗಿ ಸರ್ರನೆ ತಿರುಗಿ ನೋಡಿದ.

ಕುಮುದನ ಸೆರಗು ಒಂದು ಕಡೆ ಪೂರ್ತಿ ಜಾರಿಹೋಗಿತ್ತು. ಅಳತೆ ಮೀರಿದಂತಿದ್ದ ಅವಳ ಎದೆಯ ಬಿಗುವಿಗೆ ಚೋಲಿ ಹಿಗ್ಗಿ ಬಿರಿಯುವ ಹಾಗಿತ್ತು. ತೆಳುವಾದ ಸೀರೆಯ ಮರೆಯಲ್ಲಿ ಪುಷ್ಟವಾದ ತೊಡೆ ನಿತಂಬಗಳ ಮಾಟ ಎದ್ದು ಕಾಣುತ್ತಿತ್ತು. ಮಧುಸೂದನ ಅವಳನ್ನೊಮ್ಮೆ ಮೇಲಿನಿಂದ ಕೆಳಗಿನವರೆಗೂ ದಿಟ್ಟಿಸಿ ನೋಡಿದ. ಅವನ ಮನಸ್ಸನ್ನು ಹುಚ್ಚು ಆಸೆ ಕವರಲಾರಂಭಿಸಿತು. ಆವೇಶ ಬಂದವನಂತೆ ಎದ್ದು ನಿಂತ. ಅವನ ಕಣ್ಣಲ್ಲಿ ಮೂಡಿದ ಹುಲಿಯ ಹಸಿವಿನಂಥ ಹಸಿವನ್ನು ಕುಮುದಾ ಬಹುಬೇಗ ಗ್ರಹಿಸಿದಳು.

"ಸ್ವಲ್ಪ ನಿಧಾನಿಸಿ"

ಎಂದು ನಗುನಗುತ್ತಲೇ ಎರಡು ಹೆಜ್ಜೆ ಹಿಂದಿಟ್ಟಳು. ಆದರೆ ಮಧು ಸೂದನ ನಿಧಾನಿಸುವ ಸ್ಥಿತಿಯಲ್ಲಿರಲಿಲ್ಲ. ಉದ್ವೇಗದಿಂದ ಅವನ ಮೈ ಬೆಂಕಿ ಯಾಗಿತ್ತು. ಥಟ್ಟನೆ ಮುನ್ನುಗ್ಗಿ ಅವಳನ್ನು ಬಿಗಿದಪ್ಪಿದ. ಆ ಆಲಿಂಗನಕ್ಕೆ ಅವಳ ಆಸೆಯೂ ಗರಿಗೆದರಿತು. ಅವನ ಮುಖಕ್ಕೆ ಮುಖವಿಟ್ಟು ತನ್ನ ತೋಳನ್ನು ಅವನಿಗೆ ಸುತ್ತಿ ಲಲ್ಲೆಗೈಯತೊಡಗಿದಳು. ಕಟ್ಟು ಹರಿದ ಬಯಕೆಯಲ್ಲಿ ಅವ ರಿಬ್ಬರೂ ಒಂದಾಗಿ ಮಂಚದ ಮೇಲುರುಳಿದರು.

ಸುಖದ ಸೊಕ್ಕು ಅವರನ್ನು ಎಷ್ಟೋ ಹೊತ್ತಿನವರೆಗೆ ಮೈಮರೆಸಿತ್ತು.

ಕುಮುದಾ ಅವನ ತೋಳಸೆರೆಯಿಂದ ಬಿಡಿಸಿಕೊಂಡು ಮೆಲ್ಲನೆ ಎದ್ದಳು.

"ಹಾಲು ಬೇಡವೆ?"

ಮಧುಸೂದನ ಅವಳ ಮುಖವನ್ನು ನೋಡಿ ಸುಮ್ಮನೆ ನಕ್ಕ. ಅವನಿಗೆ ಹಾಲು ಬೇಕಾಗಿದ್ದಂತೆ ಕಾಣಲಿಲ್ಲ.

"ಕುಡಿಯಿರಿ. ಹಾಲೇಕೆ ದಂಡವಾಗಬೇಕು?"

ಎಂದು ಒಂದು ಕಪ್ಪಿಗೆ ಹಾಲು ಬಗ್ಗಿಸಿ ತಂದು ಅವನ ಕೈಗಿತ್ತಳು.

"ನಿನಗೆ."

"ಮೊದಲು ನಿಮ್ಮದಾಗಲಿ."

“ ಬೇಡ, ಇಬ್ಬರೂ ಕುಡಿಯೋಣ, ಬಾ ”

ಎಂದು ಅವಳ ಸೊಂಟಕ್ಕೆ ಕೈಹಾಕಿ ಹತ್ತಿರ ಎಳೆದುಕೊಂಡ. ಕಪ್ಪಿನಲ್ಲಿದ್ದ ಹಾಲು ತುಳುಕಿ ಅವನ ಮೈಮೇಲೆ ಚೆಲ್ಲಿತು.

“ ಬಟ್ಟೆಯೆಲ್ಲಾ ಹೋಯಿತು. ಒಂದು ಗಳಿಗೆ ಸುಮ್ಮನಿರುವುದಕ್ಕಾಗುವುದಿಲ್ಲವೆ ?”

ಎಂದು ಟವಲು ತೆಗೆದುಕೊಂಡು ಅವನ ಮೈಮೇಲೆ ಚೆಲ್ಲಿದ್ದ ಹಾಲನ್ನು ಒರಸಿದಳು. ಬಳಿಕ ಒಂದೇ ಕಪ್ಪಿನಿಂದ ಇಬ್ಬರೂ ಹಾಲು ಕುಡಿದು ಮುಗಿಸಿದರು. ಕುಮುದಾ ಏನೋ ಜ್ಞಾಪಿಸಿಕೊಂಡು ಎದ್ದು ಮೇಜಿನ ಹತ್ತಿರ ಹೋಗಿ ಡ್ರಾಯರ್ ತೆಗೆದು ಹುಡುಕತೊಡಗಿದಳು. ಮಧುಸೂದನನ ದೃಷ್ಟಿ ಅವಳನ್ನು ಹಿಂಬಾಲಿಸಿತು.

“ ಏನು ಹುಡುಕುತ್ತಿರುವೆ ?”

“ ತಾಳಿ. ನಿಮಗೇನೋ ಒಂದು ತೋರಿಸಬೇಕು.”

“ ಏನದು ಹೇಳು.”

“ ನೀವೇ ನೋಡಿ ”

ಎಂದು ಒಂದು ಕವರನ್ನು ತಂದು ಅವನ ಮುಂದೆ ಹಾಕಿದಳು. ಮಧುಸೂದನ ಕುತೂಹಲದಿಂದ ಕವರನ್ನು ಕೈಗೆತ್ತಿಕೊಂಡು ತಿರುಗಿಸಿ ನೋಡಿದ. ಮುಂಬಯಿಯ ಮುದ್ರೆ ಬಿದ್ದಿತ್ತು.

“ ಯಾರ ಕಾಗದ ?”

ಎನ್ನುತ್ತ ಕವರಿನ ಒಳಗಿದ್ದ ಕಾಗದವನ್ನು ಈಚೆಗೆ ಎಳೆದುಕೊಂಡು ಓದತೊಡಗಿದ. ಶಿವರಾಮಯ್ಯನ ಕಾಗದ. ಕುಮುದಾ ಸಾಧ್ಯವಾದಷ್ಟು ಬೇಗ ಹಿಂತಿರುಗಬೇಕೆಂದು ಎರಡೇ ಪಂಕ್ತಿ ಬರೆದಿದ್ದ. ಅದನ್ನೋದಿ ಮಧುಸೂದನನ ಹುಬ್ಬು ಗಂಟಿಕ್ಕಿತು; ಅವನ ಮನಸ್ಸಿನಲ್ಲಿ ನಿಧಾನವಾಗಿ ನಿರುತ್ಸಾಹದ ತೆರೆಯೆದ್ದಿತು.

“ ಏಕಂತೆ ಇಷ್ಟು ಅವಸರ ?”

“ ಯಾರಿಗೆ ಗೊತ್ತು ?”

“ ಕಾರಣವನ್ನೇ ಸೂಚಿಸಿಲ್ಲವಲ್ಲಾ.”

"ಕಾರಣವೇನು, ಗೊತ್ತೇ ಇದೆ. ನಾನಿಲ್ಲದಿದ್ದರೆ ಅವರಿಗೆ ಕೈಕಾಲೇ ಆಡುವುದಿಲ್ಲ. ಅವರೊಬ್ಬರೇ ಇದ್ದು ನಿಭಾಯಿಸಿದ್ದು ಯಾವಾಗ?"

ಎಂದು ಗಂಡನ ಬಗೆಗೆ ತಿರಸ್ಕಾರ ಸೂಚಿಸುವ ನಗೆ ನಕ್ಕಳು.

"ಹೋಗಲೇಬೇಕೆ?"

"ಹೋಗಬೇಕೆಂದೇ ಕಾಣುತ್ತದೆ."

"ಇನ್ನು ನಾಲ್ಕು ದಿನ ತಡೆದರಾಗುವುದಿಲ್ಲವೆ?"

"ಅಲ್ಲಿನ ಸ್ಥಿತಿ ಏನೋ ಯಾರಿಗೆ ಗೊತ್ತು. ಹೋಟೆಲಿನಲ್ಲೇನು ಗೊಂದಲವಾಗಿದೆಯೋ."

"ಹಾಗಾದರೆ ನಮ್ಮ ಕಲ್ಕತ್ತಾ ಪ್ರವಾಸಕ್ಕೆ ಕಲ್ಲುಬಿದ್ದ ಹಾಗೇ?"

"ಏಕೆ, ನೀವು ಹೋಗಿ ಬಂದರಾಗದೇ?"

"ನಿನ್ನನ್ನು ಬಿಟ್ಟು ನಾನು ಹೋಗಲೆ? ಒಬ್ಬನೇ ಹೋಗಲು ನನಗಿಷ್ಟವಿಲ್ಲ."

"ಹಾಗಾದರೆ ಏನು ಮಾಡುವುದು?"

"ನೀನು ಹೇಗೆ ಹೇಳಿದರೆ ಹಾಗೆ"

ಎಂದ. ಕುಮುದಾ ಒಂದು ಗಳಿಗೆ ಸುಮ್ಮನೆ ಕುಳಿತಳು. ಅವಳ ಮನಸ್ಸು ಕಲ್ಕತ್ತ ಮುಂಬಯಿಗಳ ನಡುವೆ ಹರಿದಾಡುತ್ತಿತ್ತು. ಅವಳ ಸಂದಿಗ್ಧ ಅವನಿಗೆ ಅರ್ಥವಾಗಿರಬೇಕು.

"ಕಲ್ಕತ್ತ ಪ್ರವಾಸ ಈಗಿಲ್ಲದಿದ್ದರೆ ಇಲ್ಲ. ಇನ್ನೊಂದು ಸಲವಾಯಿತು. ಮುಂಬಯಿಗೇ ಹಿಂತಿರುಗೋಣ"

ಎಂದು ಸಮಸ್ಯೆಯನ್ನು ಬಗೆಹರಿಸಿದ. ಕುಮುದಾ ಕೃತಜ್ಞತೆ ತುಂಬಿದ ದೃಷ್ಟಿಯಿಂದ ಅವನನ್ನು ನೋಡಿದಳು.

೨೭

ಚಿನ್ನಪ್ಪ ಭೇತಾಳದಂತೆ ಬೆನ್ನು ಹತ್ತಿದ್ದ. ಅವನಿಗೆ ಉತ್ತರ ಹೇಳುವುದರಲ್ಲಿ ಸುಬ್ಬಕೃಷ್ಣನಿಗೆ ಸಾಕಾಗಿಹೋಗಿತ್ತು.

ಮಧುಸೂದನನಿಗೆ ಕಾಗದ ಬರೆಯುವುದಾಗಿ ಅವನು ಕೊಟ್ಟಿದ್ದ ಆಶ್ವಾಸನಕ್ಕೆ ಜೋತುಬಿದ್ದಿದ್ದ ಚಿನ್ನಪ್ಪ ಪದೇ ಪದೇ ಬಂದು ಕಾಣಿಸಿಕೊಳ್ಳುತ್ತಿದ್ದ. ಆದರೆ ಅವನಿಗೆ ತಿಳಿಸುವಂಥ ಸುದ್ದಿ ಯಾವುದೂ ಸುಬ್ಬಕೃಷ್ಣನ ಹತ್ತಿರ ಇರಲಿಲ್ಲ. ಅವನು ಮುಂಬಯಿಗೆ ಬರೆದಿದ್ದ ಎರಡನೆಯ ಕಾಗದಕ್ಕೂ ಉತ್ತರ ಬಂದಿರಲಿಲ್ಲ.

ಅವನಿಗೆ ಬೇಸರವಾಗಿತ್ತು. ಜೊತೆಗೆ ಚಿನ್ನಪ್ಪನ ಉಪಟಳ ಬೇರೆ. ಈಚೆಗಂತೂ ಅವನು ಕಾಲೇಜಿನ ಹತ್ತಿರವೇ ಬಂದುಬಿಡುತ್ತಿದ್ದ. ಮೂರಕ್ಕೆ ನಾಲ್ಕಕ್ಕೆ ಅವನ ದರ್ಶನ ತಪ್ಪುವ ಹಾಗೇ ಇರಲಿಲ್ಲ. ಸಾಲಗಾರನ ಹಾಗೆ ಅವನು ಹುಡುಕಿಕೊಂಡು ಬರುತ್ತಿದ್ದ ರೀತಿ ಸುಬ್ಬಕೃಷ್ಣನಿಗೆ ಸರಿಬೀಳುತ್ತಿರಲಿಲ್ಲ. ನೋಡಲು ಬಂದವರ ಮುಖಭಂಗ ಮಾಡುವುದು ಚೆನ್ನಾಗಿರುವುದಿಲ್ಲವೆಂದು ಅವನೂ ಸುಮ್ಮನೆ ಇರುತ್ತಿದ್ದ. ಆದರೆ ಆ ಸಹನೆಗೂ ಮಿತಿಯಿತ್ತು. ಅದಕ್ಕೂ ಒಂದು ದಿನ ಊನ ಬರುವ ಪ್ರಸಂಗ ನಡೆಯಿತು.

ಅಂದು ಮಧ್ಯಾಹ್ನ ತರಗತಿ ಮುಗಿಸಿಕೊಂಡು ಸುಬ್ಬಕೃಷ್ಣ ಆಗತಾನೇ ಹೊರಗೆ ಬಂದು ನಿಂತಿದ್ದ. ಜೊತೆಯಲ್ಲಿ ಇಂಗ್ಲಿಷ್ ಲೆಕ್ಚರರ್ ವಿಜಯರಂಗಂ ಇದ್ದರು. ಚಿನ್ನಪ್ಪ ಇದ್ದಕ್ಕಿದ್ದ ಹಾಗೆ ಎಲ್ಲಿಂದಲೋ ಅವತರಿಸಿದ. ಅವನನ್ನು ಕಂಡು ಸುಬ್ಬಕೃಷ್ಣನ ಮನಸ್ಸಿಗೆ ಜುಗುಪ್ಸೆಯಾಯಿತು. ಈ ಶನಿ ಏಕೆ ವಕ್ರಿಸಿದನೋ ಎಂದು ಅವನಿಗನ್ನಿಸಿತು. ಅವನನ್ನು ಆದಷ್ಟು ಬೇಗ ಸಾಗಹಾಕಬೇಕೆಂದು ಅವನು ಯೋಚಿಸಿದ. ಚಿನ್ನಪ್ಪ ಕಿವಿಯವರೆಗೂ ಹಲ್ಲು ಕಿರಿಯುತ್ತ,

"ನಮಸ್ಕಾರ, ಮೇಷ್ಟ್ರೆ"

ಎಂದು ಹತ್ತಿರ ಬಂದು ನಿಂತ. ಸುಬ್ಬಕೃಷ್ಣ ಮನಸ್ಸಿಲ್ಲದ ಮನಸ್ಸಿನಿಂದ,

"ನಮಸ್ಕಾರ, ಏನು ಬಂದಿರಿ ಸಾಹುಕಾರರೇ?"

"ಏನೂ ಇಲ್ರಿ. ಸುಮ್ಕೆ ಅಂಗೇ ನೋಡಿಕೊಂಡು ಓಗೋಣೆ ಅಂತ ಬಂದೆ"

ಎಂದ. ಅವನು ಸುಮ್ಮನೆ ಬಂದಿರಲಿಲ್ಲವೆನ್ನುವುದು ಸುಬ್ಬಕೃಷ್ಣನಿಗೂ ಗೊತ್ತಿತ್ತು. ಮೂರು ದಿನಗಳ ಹಿಂದೆ ಅವನು ಬಂದಿದ್ದಾಗ ಏನೂ ಸಮಾಚಾರ ವಿಲ್ಲವೆಂದು ಹೇಳಿ ಕಳಿಸಿದ್ದ. ಈಗ, ಇಷ್ಟು ಬೇಗ ಅವನು ಮತ್ತೆ ಬಂದು ವಿಚಾರಿಸುವುದರಲ್ಲಿ ಅರ್ಥವಿರಲಿಲ್ಲ. ಅವನ ತಗಾದೆಯ ಬುದ್ಧಿ ನೋಡಿ ಸುಬ್ಬ ಕೃಷ್ಣನಿಗೆ ಕೋಪ ಬಂದಿತು.

"ನೀವು ಹೀಗೆ ಪದೇ ಪದೇ ಬಂದು ನನ್ನ ಪೀಡಿಸುವುದರಿಂದ ಪ್ರಯೋ ಜನವಿಲ್ಲ, ಚಿನ್ನಪ್ಪನವರೇ."

"ಇನ್ನೆಂಗೆ ಮಾಡೂ ಅಂತೀರಾ?"

ಎಂದು ನಿಷ್ಠುರದ ಧ್ವನಿಯಲ್ಲಿ ಪ್ರಶ್ನಿಸಿದ.

"ನನ್ನ ಕೇಳಿಸಿದರೆ ನಾನೇನು ಹೇಳಲಿ? ನೀವು ಬಾಡಿಗೆದಾರರನ್ನು ಕೇಳಬೇಕು. ಅವರಿಗೆ ಬೇಕಾದರೆ ನೋಟೀಸ್ ಕೊಡಿ."

"ಯಾರಿಗೆ ಅಂತ ಕೊಡೋಣೆ? ಆ ವಯ್ಯನ್ನ ಉಡಿಕ್ಕೊಂಡು ನಾನೆಲ್ಲಿ ಓಗಲಿ?"

"ಅದಕ್ಕೆ ನಾನೇನು ಮಾಡುವುದಕ್ಕಾಗತ್ತೆ, ಹೇಳಿ?"

ಸುಬ್ಬಕೃಷ್ಣನ ಉತ್ತರದಲ್ಲಿ ಹೊಸ ಧೋರಣೆ ಕಂಡು ಚಿನ್ನಪ್ಪ ಚಕಿತನಾದ. ಅವನ ಮುಖದ ಮೇಲೆ ಅಸಮಾಧಾನದ ಚಿಹ್ನೆ ಮೂಡಿತು.

"ಈ ತಿಂಗಳು ಬಾಡಿಗೇನೂ ಬಂದಿಲ್ರಿ. ಹಿಂಗೇ ಇದ್ದರೆ ಮನೆ ಬೀಗ ಒಡೆದು ಸುಪರ್ದಿಗೆ ತೊಗೋಬೇಕಾಗತ್ತೈತೆ"

ಎಂದ. ಆ ಮಾತಿನಲ್ಲಿದ್ದ ಬೆದರಿಕೆಯನ್ನು ಸುಬ್ಬಕೃಷ್ಣ ಗ್ರಹಿಸಿದ. ಅವನಿಗೂ ರೇಗಿತು.

"ಮನೆ ಬೀಗ ಒಡೆಯುವುದು ಸಾಮಾನ್ಯವಾದ ಕೆಲಸವಲ್ಲ, ಚಿನ್ನಪ್ಪ ನವರೇ. ಕ್ರಿಮಿನಲ್ ವ್ಯವಹಾರಕ್ಕೆ ಸಿಕ್ಕಿ ನೀವು ಕೋರ್ಟು ಹತ್ತಬೇಕಾದೀತು."

ಅದನ್ನು ಕೇಳಿ ಚಿನ್ನಪ್ಪ ಅವಾಕ್ಕಾಗಿ ಸುಬ್ಬಕೃಷ್ಣನ ಮುಖ ನೋಡಿದ.

ಗಡುಸಾದ ಧ್ವನಿಯಲ್ಲಿ ನುಡಿದ ಮಾತು ನೇರವಾಗಿ ಬಂದು ಅವನ ಮನಸ್ಸಿಗೆ ತಾಕಿತು. ಅದರಲ್ಲಡಗಿದ್ದ ಎಚ್ಚರಿಕೆಯನ್ನು ಅವನು ನಿರ್ಲಕ್ಷಿಸುವ ಹಾಗಿರಲಿಲ್ಲ. ಸುಬ್ಬಕೃಷ್ಣನ ಹತ್ತಿರ ತನ್ನ ಬುದ್ಧಿವಂತಿಕೆ ನಡೆಯುವುದಿಲ್ಲವೆಂದು ಚಿನ್ನಪ್ಪ ಗ್ರಹಿಸಿ ಅಲ್ಲಿಂದ ಮೆಲ್ಲನೆ ಕಾಲ್ತೆಗೆದ. ಅವನು ಹೊರಟುಹೋಗುವವರೆಗೂ ಸುಮ್ಮನಿದ್ದು ವಿಜಯರಂಗಂ,

"ಇವರು ಯಾರು, ಮಿ. ಸುಬ್ಬಕೃಷ್ಣ?"

ಎಂದು ಕೇಳಿದರು. ಸುಬ್ಬಕೃಷ್ಣನ ಮುಖದ ಮೇಲೆ ಅಸಮಾಧಾನ ಎದ್ದು ಕಾಣುತ್ತಿತ್ತು.

"ಯಾವುದೋ ತರಲೆ ವ್ಯವಹಾರ. ನಾನು ಸಿಕ್ಕಿಕೊಂಡು ಒದ್ದಾಡ ಬೇಕಾಗಿದೆ"

ಎಂದು ಗುಂಭವಾಗಿ ನುಡಿದ. ಅವನ ಉತ್ತರ ನೋಡಿ ವಿಜಯರಂಗಂ ಹೆಚ್ಚು ಬೆದಕಿ ಕೇಳಲಿಚ್ಛಿಸಲಿಲ್ಲ. ಇಬ್ಬರೂ ಕಾಲೇಜು ರೆಸ್ಟುರಾ ಕಡೆ ತಿರುಗಿದರು.

ಸುಬ್ಬಕೃಷ್ಣನಿಗೆ ಬೇಸರವಾಗುವುದಕ್ಕೆ ಇದೊಂದೇ ಘಟನೆ ಕಾರಣ ವಾಗಿರಲಿಲ್ಲ.

ಮೈಸೂರಿನಲ್ಲಿ ಮಧುಸೂದನನ 'ಕೀರ್ತಿ'ಯನ್ನು ಹಾಡಿ ಹೊಗಳುವ ಹಸ್ತಪತ್ರಿಕೆಗಳು ಹಾರಾಡುತ್ತಿದ್ದವು. ಅವುಗಳಲ್ಲೊಂದು ರಾಜಣ್ಣನ ಕೈಗೆ ಬಿದ್ದು ಅವನದನ್ನು ಸುಬ್ಬಕೃಷ್ಣನಿಗೆ ತಂದಿತ್ತ.

ಸುಬ್ಬಕೃಷ್ಣ ಹಸ್ತಪತ್ರಿಕೆಯನ್ನು ಹಿಂದೆಮುಂದೆ ತಿರುಗಿಸಿ ನೋಡಿದ. ಅದರ ಒಕ್ಕಣೆ ಅವನ ಕುತೂಹಲವನ್ನು ಕೆರಳಿಸಿತು.

ಮುಂಬಯಿಯಲ್ಲಿ ಮೈಸೂರು ವಿದ್ವಾಂಸರ 'ಕೃಷ್ಣಲೀಲೆ'

ಮೈಸೂರಿನ ತರುಣ ವಿದ್ವಾಂಸರಾದ ಮಧುಸೂದನರು ಈಗ್ಗೆ ಕೆಲವು ದಿನಗಳಿಂದ ಮುಂಬಯಿಯಲ್ಲಿ ನಡಸುತ್ತಿರುವ 'ಕೃಷ್ಣಲೀಲೆ' ಯನ್ನು ಮಹಾಜನರ ಅವಗಾಹನೆಗೆ ತರುವುದು ನಮ್ಮ ಕರ್ತವ್ಯವಾಗಿದೆ. ದೊಡ್ಡ ವಿದ್ವಾಂಸರ ಶಿಷ್ಯರಾದ ಶ್ರೀಯುತರು ಮುಂಬಯಿ ನಗರದಲ್ಲಿ ನಡಸುತ್ತಿರುವ ಕಟ್ಟು ಹರಿದ ಜೀವನ ಯಾರಿಗೂ ಕೀರ್ತಿ ತರುವಂತಹು

ದಲ್ಲ. ಶ್ರೇಷ್ಠ ಕಲಾವಿದರಾಗುವ ಅವಕಾಶ ಹೊಂದಿದ್ದ ಅವರು ಮದ್ಯ ಮಾನಿನಿಯರ ಜಾಲಕ್ಕೆ ಸಿಕ್ಕಿ ತಮ್ಮ ಹೆಸರನ್ನೂ ಕೆಡಿಸಿಕೊಂಡಿರುವು ದಲ್ಲದೆ ಸಂಗೀತ ಪ್ರಪಂಚದ ಘನತೆ ಗೌರವಗಳನ್ನೂ ಇಳಿಸುತ್ತಿದ್ದಾರೆ; ಸಂಸ್ಥಾನದ ಒಳ್ಳೆಯ ಹೆಸರಿಗೂ ಮಸಿ ಬಳಿಯುತ್ತಿದ್ದಾರೆ. ಇಂಥ ಶೀಲ ರಹಿತ ಕಲಾವಿದರನ್ನು ಮನ್ನಿಸುವುದರಿಂದ ಜನತೆ ತನಗೆ ತಾನೇ ಅಪಚಾರವೆಸಗಿಕೊಂಡಂತಾಗುತ್ತದೆ. ಸಮಾಜದ ಶೀಲವಂತ ಹೆಣ್ಣು ಮಕ್ಕಳು ಇಂಥ ಗೋಮುಖವ್ಯಾಘ್ರಗಳ ಬಗೆಗೆ ಎಚ್ಚರಿಕೆಯಿಂದಿರ ಬೇಕೆಂದು ನಾವು ಸೂಚಿಸುತ್ತೇವೆ. ಸಂಗೀತ ಸಂಘ ಸಂಸ್ಥೆಗಳು ಇಂಥವರಿಗೆ ಬಹಿಷ್ಕಾರ ಹಾಕುವ ಮೂಲಕ ತಮ್ಮ ನೀತಿ ನಿಷ್ಠೆಗಳನ್ನು ಎತ್ತಿ ಹಿಡಿಯಬೇಕು.

—ಕಲಾಭಿಮಾನಿಗಳು.

ಹಸ್ತಪತ್ರಿಕೆಯಲ್ಲಿ ಅದು ಅಚ್ಚಾದ ಮುದ್ರಣಾಲಯದ ಹೆಸರಿರಲಿಲ್ಲ; ಅದನ್ನು ಪ್ರಕಟಿಸಿದ 'ಕಲಾಭಿಮಾನಿಗಳು' ಯಾರೆಂದು ಗೊತ್ತಾಗುವ ಹಾಗಿರಲಿಲ್ಲ. ಅದನ್ನು ಓದಿ ಸುಬ್ಬಕೃಷ್ಣ ಒಂದು ಗಳಿಗೆ ಸುಮ್ಮನೆ ಕುಳಿತು ಕೊಂಡ. ಅವನ ಮನಸ್ಸಿಗೆ ವ್ಯಾಕುಲವಾಗಿತ್ತು.

"ಇದೆಲ್ಲಿ ಸಿಕ್ಕಿತು ನಿನಗೆ, ರಾಜಣ್ಣ ?"

"ಮಾರ್ಕೆಟ್ ಹತ್ತಿರ ಒಬ್ಬ ಹುಡುಗ ಕೊಟ್ಟ, ಸಾರ್."

"ನಾಳೆ ಆ ಹುಡುಗ ಸಿಕ್ಕಿದರೆ ಯಾರು ಕೊಟ್ಟರೆಂದು ವಿಚಾರಿಸಿ ಕೊಂಡು ಬಾ."

"ಆಗಲಿ, ಸಾರ್"

ಎಂದು ರಾಜಣ್ಣ ಉತ್ತರವಿತ್ತ.

ರಾಜಣ್ಣನಿಗೆ ಚೀಟಿ ಕೊಟ್ಟ ಹುಡುಗ ಮಾರನೆಯ ದಿನ ಅವನ ಕೈಗೆ ಸಿಕ್ಕಲಿಲ್ಲ. ದೇವರಾಜ ಮಾರ್ಕೆಟ್ ಹತ್ತಿರ ಪತ್ರಿಕೆ ಪುಸ್ತಕಗಳನ್ನು ಮಾರುತ್ತ ನಿಂತಿದ್ದ ಹತ್ತಾರು ಹುಡುಗರ ನಡುವೆ ಅವನನ್ನು ಹುಡುಕಿ ಕಾಣದೆ ರಾಜಣ್ಣ ಹಿಂತಿರುಗಿ ಬಂದ.

ಮೂರು ದಿನ ಕಳೆಯುವ ಹೊತ್ತಿಗೆ ಸುಬ್ಬಕೃಷ್ಣನಿಗೆ ಇನ್ನೊಂದು ಅಚ್ಚರಿ ಕಾದಿತ್ತು.

ಆ ಸಂಜೆ ಟೌನ್‌ಹಾಲಿನಲ್ಲಿ ನಡೆದ ಒಂದು ಸಭೆ ಮುಗಿಸಿಕೊಂಡು ಅವನು ಹಿಂದಿರುಗಿ ಬರುತ್ತಿದ್ದ. ಘಂಟೆ ಒಂಬತ್ತಾಗಿತ್ತು. ಶಿವರಾಮಪೇಟೆಯ ಮೇಲೆ ಬಂದರೆ ದಾರಿ ಹತ್ತಿರವಾಗುವುದೆಂದೆಣಿಸಿ ಆ ರಸ್ತೆಯನ್ನೇ ಹಿಡಿದು ಹೊರಟ. ಅವನು ಅರ್ಧದಾರಿ ನಡೆಯುವ ವೇಳೆಗೆ ಹಿಂದಿನಿಂದ ಇಬ್ಬರು ಹುಡುಗರು ಬಂದು ಅವನನ್ನು ಕೂಡಿಕೊಂಡರು. ಸುಬ್ಬಕೃಷ್ಣ ಅವರನ್ನು ಗಮನಿಸಿದಂತೆ ಕಂಡುಬರಲಿಲ್ಲ. ಅವನ ಮನಸ್ಸು ಯಾವುದೋ ಯೋಚನೆಯಲ್ಲಿ ಮುಳುಗಿತ್ತು.

ಇದ್ದಕ್ಕಿದ್ದ ಹಾಗೆ ಒಬ್ಬ ಹುಡುಗ ಜೇಬಿನಿಂದ ಒಂದು ಹಸ್ತಪತ್ರಿಕೆ ತೆಗೆದು ಸುಬ್ಬಕೃಷ್ಣನ ಕೈಯಲ್ಲಿತ್ತ.

"ತೊಗೊಳ್ಳಿ, ಸಾರ್."

ಧ್ವನಿ ಕೇಳಿ ತಿರುಗಿ ನೋಡುವುದರಲ್ಲಿ ಇಬ್ಬರು ಹುಡುಗರೂ ಪಕ್ಕದ ಗಲ್ಲಿ ಬಿದ್ದು ಕಣ್ಮರೆಯಾಗಿದ್ದರು. ಸುಬ್ಬಕೃಷ್ಣ ಅಚ್ಚರಿಗೊಂಡು ಹಾಗೆಯೇ ನಿಂತ.

ಅವನು ನಿಂತಿದ್ದ ಸ್ಥಳ ಸ್ವಲ್ಪ ಕತ್ತಲಾಗಿತ್ತು. ಅಲ್ಲಿದ್ದ ಮೂರು ನಾಲ್ಕು ಅಂಗಡಿಗಳ ಬಾಗಿಲು ಹಾಕಿತ್ತು. ಹಸ್ತಪತ್ರಿಕೆಯನ್ನು ಓದಲು ಅಲ್ಲಿ ಸಾಕಷ್ಟು ಬೆಳಕಿರಲಿಲ್ಲ. ಸುಬ್ಬಕೃಷ್ಣ ನಾಲ್ಕುಮಾರು ಮುಂದೆ ಬಂದು ಬೀದಿಯ ದೀಪದ ಕೆಳಗೆ ನಿಂತುಕೊಂಡ. ಅವನ ದೃಷ್ಟಿ ಕೈಯಲ್ಲಿದ್ದ ನೋಟೀಸಿನ ಕಡೆ ಹರಿಯಿತು.

ಮಹಾಜನರಿಗೆ ಒಂದು ಎಚ್ಚರಿಕೆ

"ಮುಂಬಯಿಯಲ್ಲಿ ಮೈಸೂರಿನ ಸಂಗೀತ ವಿದ್ವಾಂಸ ಮಧುಸೂದನರು ನಡಸುತ್ತಿರುವ ಲಂಪಟ ಜೀವನದ ವಿಷಯ ಮೈಸೂರಿನಲ್ಲಿ ಮನೆಮಾತಾಗಿದೆ. ಮೈಸೂರಿನ ಕಲೆ ಕೀರ್ತಿಗಳನ್ನು ಅಧೋಗತಿಗಿಳಿಸುತ್ತಿರುವ ಈ ಸಂಗೀತ ಶಿಖಾಮಣಿಗೆ ಇಲ್ಲಿ ಕೆಲವು ನೆಚ್ಚಿನ ಬೆಂಬಲಿಗರಿದ್ದಾರೆನ್ನುವುದು ಕೌತುಕದ ವಿಷಯ. ಸುಬ್ಬಣ್ಣ ಎನ್ನುವ ಕಾಲೇಜ್ ಅಧ್ಯಾಪಕರೊಬ್ಬರು ಈ ವ್ಯಕ್ತಿಯ ಚೇಲನಾಗಿ ಓಡಾಡುತ್ತಿರುವುದು ಮೈಸೂರಿನಲ್ಲಿ ಹಲವರಿಗೆ ಗೊತ್ತಿರುವ ಸಂಗತಿ. ಮೈಸೂರಲ್ಲಿರುವ ಮಧುಸೂದನರ ಶಿಷ್ಯವರ್ಗದ ಹಲಕೆಲವು ಸಂಗೀತಾಸಕ್ತ ವೇಶ್ಯೆಯರೊಡನೆ ಈ ಅಧ್ಯಾಪಕರಿಗೆ ಸ್ನೇಹವಿದೆಯಂತೆ. ತಮ್ಮ ಪತಿತ ಮಿತ್ರನ

ಸಂಪರ್ಕದಿಂದ ಅಡ್ಡದಾರಿ ಹಿಡಿದು ನಡೆಯುತ್ತಿರುವ ಈ ಅಧ್ಯಾಪಕರ ನಡತೆ ಅವರು ಪಾಠ ಹೇಳುವ ಕಾಲೇಜಿನ ವಿದ್ಯಾರ್ಥಿ ವಿದ್ಯಾರ್ಥಿನಿಯರ ಮೇಲೆ ಯಾವ ಪರಿಣಾಮ ಬೀರುವುದೆನ್ನುವುದನ್ನು ಯೋಚಿಸಬೇಕು. ಈ ಅಧ್ಯಾಪಕರ ಶೀಲದ ಬಗೆಗೆ ಕಾಲೇಜಿನ ಅಧಿಕಾರ ವರ್ಗ ತನಿಖೆ ನಡಸುವುದು ಲೇಸು."

ಹಸ್ತಪತ್ರಿಕೆಯನ್ನು ಓದಿ ಸುಬ್ಬಕೃಷ್ಣನ ಮೈಮೇಲೆ ಮುಳ್ಳೆದ್ದಿತು. ಅವನು ಹಾಗೆಯೇ ಒಂದು ಗಳಿಗೆ ಮರವಟ್ಟಂತೆ ಸುಮ್ಮನೆ ನಿಂತುಕೊಂಡ. ಅಪಪ್ರಚಾರ ಹೊಸಘೋರಣೆ ತಳೆದಿತ್ತು. ಕಿಡಿಗೇಡಿಗಳು ಮಧುಸೂದನನ ಹೆಸರಿನೊಡನೆ ಅವನ ಹೆಸರನ್ನೂ ಬೀದಿಗೆಳೆದಿದ್ದರು.

ಆ ರಾತ್ರಿ ಸುಬ್ಬಕೃಷ್ಣನಿಗೆ ಊಟ ಬೇಕಾಗಲಿಲ್ಲ. ಹಸಿವಿಲ್ಲವೆಂದು ಹೇಳಿ ಹಾಗೆಯೇ ಮಲಗಿಬಿಟ್ಟ. ಅವನ ಮನಸ್ಸು ಕದಡಿಹೋಗಿತ್ತು.

ಬೆಳಗ್ಗೆ ಎದ್ದವನೇ ಬೈಸಿಕಲ್ ಹಾಕಿಕೊಂಡು ನೇರವಾಗಿ ದಾಸರ ಮನೆಗೆ ಹೋದ. ದಾಸರು ನಿತ್ಯಯಾತ್ರೆಗೆ ಹೊರಡಲು ಅಣಿಮಾಡಿಕೊಳ್ಳುತ್ತಿದ್ದರು. ಅವನನ್ನು ಕಂಡು,

" ಬಾಪ್ಪ ಸುಬ್ಬು, ಕುಳಿತುಕೋ. ಏನು ಇಷ್ಟು ಹೊತ್ತಿನಲ್ಲಿ ಅಪರೂಪ ?"

ಎಂದು ಚಾಪೆ ಹಾಸಿದರು. ಸುಬ್ಬಕೃಷ್ಣ ಅವರ ಮಾತಿಗೆ ಉತ್ತರ ಕೊಡದೆ ಜೇಬಿನಿಂದ ಎರಡು ಹಸ್ತಪತ್ರಿಕೆಗಳನ್ನು ತೆಗೆದು ಅವರ ಮುಂದೆ ಹಾಕಿದ.

" ಇದನ್ನು ಸ್ವಲ್ಪ ಪರಾಂಬರಿಸಿ."

" ಏನದು ?"

ಎನ್ನುತ್ತ ದಾಸರು ದಾರ ಬಿಗಿದಿದ್ದ ಬೆಳ್ಳಿಯ ಕಟ್ಟಿನ ತಮ್ಮ ಕನ್ನಡಕವನ್ನು ಮೂಗಿನ ಮೇಲೇರಿಸಿಕೊಳ್ಳುತ್ತ ಹಸ್ತಪತ್ರಿಕೆಯನ್ನು ಕೈಗೆ ತೆಗೆದುಕೊಂಡು ನಿಧಾನವಾಗಿ ಓದತೊಡಗಿದರು. ಓದುತ್ತ ಓದುತ್ತ ಅವರ ಮುಖದ ಮೇಲೆ ಅಚ್ಚರಿ ಖೇದಗಳು ಕಾಣಿಸಿಕೊಂಡವು.

" ಇದೇನು ಸುಬ್ಬು, ಅನ್ಯಾಯ ?"

" ನೀವೇ ನೋಡಿ."

" ಇದನ್ನು ಹೊರಡಿಸಿದವರು ಯಾರು ?"

"ಯಾರೆಂದು ಹೇಗೆ ಹೇಳುವುದು? ಇಂಥ ಬರವಣಿಗೆಗೆ ಹೆಸರು ಹಾಕುತ್ತಾರೆಯೆ?"

"ಅವನೊಬ್ಬನ ಹೆಸರೇ ಸಾಲದೆಂದು ನಿನ್ನ ಹೆಸರನ್ನೂ ಬೀದಿಗೆಳೆದಿದ್ದಾರಲ್ಲಾ, ಪಾಪಿಗಳು."

"ಅವನ ಸ್ನೇಹಿತನಾದುದಕ್ಕೆ ಅಷ್ಟು ಬೇಡವೆ?"

ಎಂದು ಸುಬ್ಬಕೃಷ್ಣ ವಿಷಾದದ ನಗೆ ನಕ್ಕ. ದಾಸರು ಒಂದು ಕ್ಷಣ ಬಿಟ್ಟು,

"ಅವನ ಸಮಾಚಾರ ಏನಾದರೂ ತಿಳಿದುಬಂದಿತೆ?"

"ಇಲ್ಲ."

"ಅವನ ಕರ್ಮ ಇನ್ನೂ ಸವೆದಿಲ್ಲ, ಸುಬ್ಬೂ"

ಎಂದು ನೀಳವಾಗಿ ಉಸಿರ್ಗರೆದರು. ಇಬ್ಬರೂ ಯೋಚನೆಯಲ್ಲಿ ಮುಳುಗಿ ಸ್ವಲ್ಪ ಹೊತ್ತು ಕುಳಿತರು. ನರಸಕ್ಕ ತಂದಿಟ್ಟದ್ದ ಕಾಫಿ ಆರುತ್ತಿತ್ತು.

ಸುಬ್ಬಕೃಷ್ಣನ ಬುದ್ಧಿ ಒಂದೇ ಜಾಡಿನಲ್ಲಿ ಓಡುತ್ತಿತ್ತು. ಹಸ್ತಪತ್ರಿಕೆಗಳನ್ನು ಹೊರಡಿಸಿದವರ ಉದ್ದೇಶ ಮಧುಸೂದನನ ಹೆಸರನ್ನು ಬೀದಿಗೆಳೆಯುವುದೇ ಆಗಿತ್ತೆನ್ನುವುದರಲ್ಲಿ ಸಂಶಯವಿರಲಿಲ್ಲ. ಆ ಆಪಾದನೆಯಲ್ಲಿ ಎಷ್ಟು ನಿಜವಿತ್ತೋ ಹೇಳಲು ಬರುವಂತಿರಲಿಲ್ಲ. ಮುಂಬಯಿಗೆ ಹೋಗಿದ್ದ ಯಾರಾದರೂ ಅಲ್ಲಿನ ಸಮಾಚಾರ ತಂದಿರಬಹುದೇ? ಅಥವಾ ಇದು ಕುಹಕಿಗಳ ಕಟ್ಟುಕತೆಯೇ ಆಗಿರಬಹುದೋ?

ಹೇಗಿದ್ದರೂ ಮಧುಸೂದನನ ವಿಷಯ ಅಪಪ್ರಚಾರಕರಿಗೊಂದು ಸಾಧನವಾಗಿತ್ತು. ಅದಕ್ಕೆ ಅವನೇ ಆಸ್ಪದ ಮಾಡಿಕೊಟ್ಟದ್ದ. ಅವನಿಗಾಗಿ ವಿವೇಕ ಮೂಡಿದ ಹೊರತು ಏನೂ ಆಗುವ ಹಾಗಿರಲಿಲ್ಲ.

ಸಾಲದ್ದಕ್ಕೆ ಹಸ್ತಪತ್ರಿಕೆಯಲ್ಲಿ ತನ್ನ ಹೆಸರೂ ಬಂದಿತ್ತು. ಸುಬ್ಬಕೃಷ್ಣ ಎನ್ನುವುದಕ್ಕೆ ಬದಲಾಗಿ ಸುಬ್ಬಣ್ಣ ಎಂದು ಬಿದ್ದಿತ್ತು. ಅದನ್ನು ಉದ್ದೇಶಪೂರ್ವಕವಾಗಿಯೇ ಹಾಗೆ ಹಾಕಿದ್ದರೋ, ಅಥವಾ ಅದೇ ತನ್ನ ಹೆಸರೆಂದು ತಿಳಿದುಕೊಂಡಿದ್ದರೋ ಗೊತ್ತಾಗುವ ಹಾಗಿರಲಿಲ್ಲ. ಸುಬ್ಬಣ್ಣ ಎನ್ನುವ ಹೆಸರಿನ ಅಧ್ಯಾಪಕರು ಕಾಲೇಜಿನಲ್ಲಿ ಬೇರೆ ಯಾರೂ ಇರಲಿಲ್ಲ. ಅದು ತನ್ನನ್ನೇ ಉದ್ದೇಶಿಸಿದ್ದಾದರೆ ಅದಕ್ಕೆ ಕಾರಣ ತಿಳಿಯುವ ಹಾಗಿರಲಿಲ್ಲ. ತನ್ನ ಮೇಲೆ ಯಾರಿಗೆ ವೈರವಿತ್ತು? ಅಂಥ ಸುಳ್ಳಿನ ಕಂತೆಯನ್ನು ಬಿಚ್ಚಲು ಆಸಕ್ತಿ ಹೊಂದಿದ್ದ

ವರು ಯಾರು? ಈ ಹಸ್ತಪತ್ರಿಕೆ ಕಾಲೇಜಿನಲ್ಲಿ ಯಾರ ಕಣ್ಣಿಗಾದರೂ ಬಿದ್ದರೋ? ಅಧ್ಯಾಪಕ–ವಿದ್ಯಾರ್ಥಿ ವರ್ಗದಲ್ಲಿ ತನ್ನ ಹೆಸರು ಎಷ್ಟಕ್ಕೆ ಬಂದೀತು?

ಸುಬ್ಬಕೃಷ್ಣನಿಗೆ ಇದ್ದಕ್ಕಿದ್ದ ಹಾಗೆ ಚೆಲುವಯ್ಯಂಗಾರಿಯ ಜ್ಞಾಪಕ ಬಂದಿತು. ಅವನೊಡನೆ ನಡೆದ ಪ್ರಸಂಗವನ್ನು ಅವನು ಮರೆತಿರಲಿಲ್ಲ. ಅವನೇ ನಾದರೂ ತನ್ನ ಮೇಲೆ ಹಗೆ ತೀರಿಸಿಕೊಳ್ಳಲು ಹೀಗೆ ಮಾಡುತ್ತಿರಬಹುದೆ? ಈ ಹಸ್ತಪತ್ರಿಕೆಗಳ ಸೃಷ್ಟನೆಗೆ ಅವನ ದುಷ್ಟಬುದ್ಧಿ ಪ್ರೇರಕವಾಗಿರಬಹುದೆ?

ಇದ್ದರೂ ಇರಬಹುದು. ಚೆಲುವಯ್ಯಂಗಾರಿ ಯಾವುದಕ್ಕೂ ಹೇಸದ ಮನುಷ್ಯನೆಂದು ಸುಬ್ಬಕೃಷ್ಣ ಕೇಳಿದ್ದ. ಇದರಲ್ಲಿ ಅವನ ಕೈವಾಡವಿದ್ದರೂ ಇರಬಹುದು.

ಮಧುಸೂದನ ಹಿಂತಿರುಗಿ ಬಂದರೆ ಈ ಎಲ್ಲ ಅಪಪ್ರಚಾರವೂ ಅಡಗ ಬಹುದು; ದುಷ್ಟರ ಬಾಯಿ ಮುಚ್ಚಬಹುದು. ಆದರೆ ಅವನು ಬರುವನೆ? ಆ ಬುದ್ಧಿ ಅವನಿಗೆ ಯಾವಾಗ ಬಂದೀತು?

ಅವನು ಬರುವುದಕ್ಕೇ ಏಕೆ ಕಾಯಬೇಕು? ತಾನೇ ಹೋಗಿ ಅವನನ್ನು ಕರೆತಂದರೋ?

ತಾನು ಮುಂಬಯಿಗೆ ಹೋಗುವುದೇ? ಏಕಾಗಬಾರದು?

ಸುಬ್ಬಕೃಷ್ಣನ ಮನಸ್ಸಿನಲ್ಲಿ ಹೊಸ ಯೋಚನೆ ಮೂಡಿತು.

ಮಧುಸೂದನನ ಪ್ರಸಂಗದಲ್ಲಿ ತನ್ನ ಹೆಸರೂ ಹಾಸುಹೊಕ್ಕಾಗಿ ಸೇರಿ ಹೋಗಿತ್ತೆನ್ನುವುದನ್ನು ಅಲ್ಲಗಳೆಯುವ ಹಾಗಿರಲಿಲ್ಲ. ಅವನ ಶ್ರೇಯಸ್ಸೇ ತನ್ನದೂ ಆಗಿತ್ತು. ಅದನ್ನು ಸಾಧಿಸುವುದರಿಂದ ಇಬ್ಬರ ಹೆಸರಿಗೂ ಹತ್ತಿದ್ದ ಕಳಂಕವನ್ನು ನೀಗಿಕೊಳ್ಳುವುದು ಸಾಧ್ಯವಿತ್ತು.

ಈ ಮಧ್ಯೆ ಚೆಲುವಯ್ಯಂಗಾರಿಯ ಮೇಲೂ ಒಂದು ಕಣ್ಣಿಟ್ಟಿರುವುದು ಅಗತ್ಯವಾಗಿತ್ತು. ಆ ಕಿಡಿಗೇಡಿ ಇನ್ನೇನು ಮಾಡುವುದಕ್ಕಿರುವನೋ ಊಹಿಸಲು ಸಾಧ್ಯವಿರಲಿಲ್ಲ.

"ಕಾಫಿ ಆರಿಹೋಗತ್ತೆ, ತೊಗೋ ಸುಬ್ಬೂ"

ಎಂದು ದಾಸರು ನುಡಿದಾಗಲೇ ಎಚ್ಚರ. ಕಾಫಿಯ ಬಟ್ಟಲನ್ನು ಕೈಗೆತ್ತಿ ಕೊಳ್ಳುತ್ತಿದ್ದಂತೆ ಸುಬ್ಬಕೃಷ್ಣನ ಕಣ್ಣಲ್ಲಿ ಹೊಸ ನಿರ್ಧಾರದ ಬೆಳಕು ಮೂಡಿತು.

೨೮

ಶಿವರಾಮಯ್ಯ ಕುಮುದನಿಗೆ ಜರೂರಾಗಿ ಬರುವಂತೆ ಕಾಗದ ಬರೆಯಲು ಕಾರಣವಿಲ್ಲದಿರಲಿಲ್ಲ.

ಕುಮುದಾ ಊರಿನಲ್ಲಿದ್ದಾಗ ಹುಡುಗಿಯರ ಉಸ್ತುವಾರಿ ಅವಳಿಗೆ ಸೇರಿತ್ತು. ಹೋಟೆಲಿಗೆ ಹಲವು ಹದಿನೆಂಟು ಬಗೆಯ ಜನ ಬರುತ್ತಿದ್ದರು. ಅವರಲ್ಲಿ ಒಬ್ಬೊಬ್ಬರ ರೀತಿ ಒಂದೊಂದು ತೆರನಾಗಿರುತ್ತಿತ್ತು. ಕೆಲವರು ಬರೀ ಊಟ ತಿಂಡಿ ಬಿಡಾರಗಳಿಗೇ ಬರುತ್ತಿದ್ದರು. ಮತ್ತೆ ಕೆಲವರಿಗೆ ಹುಡುಗಿಯರ ಚಪಲವಿತ್ತು. ಅಂಥವರು ಸಹಜವಾಗಿ ಹೋಟೆಲಿನಲ್ಲಿ ಸುಳಿದಾಡುತ್ತಿದ್ದ ಹುಡುಗಿಯರ ಮೇಲೆ ಕಣ್ಣು ಹಾಕುತ್ತಿದ್ದರು. ಕುಮುದಾ ತೋರಿಕೆಗೋಸ್ಕರ ಒಬ್ಬೊಬ್ಬ ಹುಡುಗಿಗೆ ಒಂದೊಂದು ಕೆಲಸ ಹಚ್ಚಿ ಓಡಾಡಿಸುತ್ತಿದ್ದಳು; ಗಿರಾಕಿಗಳ ಗಮನ ಅವರ ಮೇಲೆ ಬೀಳುವಂತೆ ಮಾಡುತ್ತಿದ್ದಳು.

ಜನರ ಇಂಗಿತ ತಿಳಿದುಕೊಳ್ಳುವುದಕ್ಕೂ ಚಾಕಚಕ್ಯ ಬೇಕಾಗಿತ್ತು. ಮರ್ಯಾದಸ್ಥ ಜನರ ಹತ್ತಿರ ವ್ಯವಹರಿಸುವಾಗ ತುಂಬ ಎಚ್ಚರಿಕೆಯಿಂದಿರ ಬೇಕಾಗಿತ್ತು. ಹೋಟೆಲಿನ ನಡವಳಿಕೆಯ ವಿಷಯದಲ್ಲಿ ಅವರಿಗೆ ಸ್ವಲ್ಪ ಅನುಮಾನ ಬಂದರೂ ಕೆಲಸ ಕೆಡುತ್ತಿತ್ತು. ಗುಲ್ಲಾದರೆ ಕೋರ್ಟು ಕಛೇರಿ ಹತ್ತಿ ದಂಡ ತೆತ್ತು ಮಾನ ಕಳೆದುಕೊಳ್ಳುವ ಸಂಭವವಿತ್ತು.

ಕುಮುದಾ ಇದನ್ನೆಲ್ಲಾ ಹತ್ತು ಕಣ್ಣಾಗಿ ನೋಡಿಕೊಳ್ಳುತ್ತಿದ್ದಳು. ಯಾವ ಗಿರಾಕಿಗಾದರೂ ಹುಡುಗಿಯರ ಷೋಕಿ ಇದೆಯೆನ್ನುವ ಸುಳುವು ಅವಳಿಗೆ ಗೊತ್ತಾದರೆ ಆ ಸನ್ನಿವೇಶವನ್ನು ಉಪಾಯವಾಗಿ ಉಪಯೋಗಿಸಿಕೊಳ್ಳುತ್ತಿದ್ದಳು. ಕಾರಣಾಂತರದಿಂದ ಅವನ ರೂಮಿಗೆ ಯಾವಳಾದರೊಬ್ಬ ಹುಡುಗಿ

ಯನ್ನು ಕಳಿಸಿ ಕಾರ್ಯ ಸಾಧಿಸುತ್ತಿದ್ದಳು. ಇದೆಲ್ಲವೂ ಸದ್ದಿಲ್ಲದ ಹಾಗೆ ತೆರೆ ಮರೆಯಲ್ಲಿ ನಡೆಯುತ್ತಿತ್ತು.

ಇದರಲ್ಲೂ ಒಂದು ಗೊತ್ತಾದ ಕ್ರಮವಿತ್ತು. ಒಬ್ಬೊಬ್ಬ ಹುಡುಗಿಗೆ ಒಂದೊಂದು ಸರದಿ ಸಿಕ್ಕುತ್ತಿತ್ತು. ಯಾರಿಗೂ ಯಾವ ವಿಧದಲ್ಲೂ ಅಸಮಾಧಾನ ವಾಗಲು ಆಸ್ಪದವಿರಲಿಲ್ಲ. ಅವರು ಸಂಪಾದಿಸುತ್ತಿದ್ದ ಹಣದಲ್ಲಿ ಒಂದು ಭಾಗ ಹೋಟೆಲಿನ ಬೊಕ್ಕಸಕ್ಕೆ ಹೋಗುತ್ತಿತ್ತು. ಉಳಿದ ಹಣವನ್ನು ಅವರು ತಮ್ಮ ವೆಚ್ಚಕ್ಕೆ ಇಟ್ಟುಕೊಳ್ಳುತ್ತಿದ್ದರು. ಅವರ ಜೀವನ ನಿರ್ವಹಣೆಯನ್ನು ಹೋಟೆಲೇ ಹೊತ್ತಿತ್ತು. ಅದಕ್ಕಾಗಿ ಅವರು ಒಂದು ಕಾಸನ್ನೂ ವೆಚ್ಚ ಮಾಡಬೇಕಾಗಿರಲಿಲ್ಲ.

ಕುಮುದಾ ಊರಿಗೆ ಹೋಗುವಾಗ ತನ್ನ ಕೆಲಸವನ್ನು ಪಾರ್ವತಿಗೆ ವಹಿಸಿ ಹೋದಳು.

ಪಾರ್ವತಿ ಮೊದಲಿನಿಂದಲೂ ದುಡ್ಡಿನ ಪಿಶಾಚಿ. ಕುಮುದಾ ಊರು ಬಿಟ್ಟು ಹೋದುದು ಅವಳ ಕೈಗೆ ಬೊಕ್ಕಸದ ಬೀಗದ ಕೈಯನ್ನೇ ಕೊಟ್ಟ ಹಾಗಾಯಿತು. ಕೈಗೆ ಸಿಕ್ಕಿದ ಅವಕಾಶವನ್ನು ಅವಳು ಧಾರಾಳವಾಗಿ ಉಪ ಯೋಗಿಸಿಕೊಳ್ಳತೊಡಗಿದಳು. ಹೋಟೆಲಿಗೆ ಬರುವ ಗಿರಾಕಿಗಳೆಲ್ಲಾ ಅವಳ ಪಾಲೇ ಆದರು. ಉಳಿದ ಹುಡುಗಿಯರಿಗೆ ಸರದಿ ತಪ್ಪಿ ಅವರಿಗೆ ಬರುತ್ತಿದ್ದ ಕಾಸಿಗೆ ಕಲ್ಲು ಬಿತ್ತು. ಅವರ ಕಣ್ಣು ಕೆಂಪಾಯಿತು. ಕ್ರೋಧ ಒಳಗೇ ಮಸೆಯ ಲಾರಂಭಿಸಿತು.

ಒಂದು ದಿನ ಪರಿಸ್ಥಿತಿ ಪ್ರಮಾದಕ್ಕೆ ಹೋಯಿತು.

ಹುಬ್ಬಳ್ಳಿಯಿಂದ ಒಬ್ಬ ಸೆಟ್ಟಿ ಬಂದು 'ವಿಜಯ ವಿಲಾಸ'ದಲ್ಲಿಳಿದಿದ್ದ. ಅವನು ದುಡ್ಡಿನ ಡಬ್ಬಿಯೆಂದು ಪಾರ್ವತಿಗೆ ಹೇಗೋ ಗೊತ್ತಾಯಿತು. ಅವಳು ಅವನ ಸ್ನೇಹ ಬೆಳಸಿ ಅವನನ್ನು ಕೈಯಲ್ಲಿ ಹಾಕಿಕೊಂಡಳು. ಸೆಟ್ಟಿ ಮುಂಬಯಿ ಯಲ್ಲಿದ್ದ ಮೂರು ದಿನವೂ ಪಾರ್ವತಿಯ ಸ್ವತ್ತಾದ. ಅವನು ಊರು ಬಿಟ್ಟು ಹೋಗುವ ವೇಳೆಗೆ ಅವಳು ಅವನ ಹತ್ತಿರ ಇನ್ನೂರು ಗಿಟ್ಟಿಸಿದ್ದಳು. ಅವಳ ಪೆಟ್ಟಿಗೆಯಲ್ಲಿ ನೋಟಿನ ಕಟ್ಟನ್ನು ಕಂಡವರು ಯಾರೋ ಹುಡುಗಿಯರಿಗೆ ಸಮಾಚಾರ ಮುಟ್ಟಿಸಿದರು. ಒಳಗೇ ಮಸೆಯುತ್ತಿದ್ದ ಕ್ರೋಧ ಬೆಂಕಿಯಾಗಿ ಹೊರಗೆ ಉಕ್ಕಿತು. ಎಲ್ಲರೂ ಪಾರ್ವತಿಯ ಮೇಲೆ ತಿರುಗಿಬಿದ್ದರು. ಅವರ ಬಾಯಲ್ಲಿ ಅವಳ ಕುಲಕೋಟಿಯೆಲ್ಲಾ ಉದ್ಧಾರವಾಯಿತು.

ಹೋಟೆಲಿನಲ್ಲಿ ದೊಡ್ಡ ರಗಳೆಯಾಯಿತು.

ಶಿವರಾಮಯ್ಯ ಪಾರ್ವತಿಯನ್ನು ತರಾಟೆಗೆ ತೆಗೆದುಕೊಂಡ. ಅವಳು ಅವನನ್ನೇ ಠಕಾಯಿಸಿ ನಿಂತಳು. ಜಗಳ ಬೀದಿಗೆ ಮುಟ್ಟಿತು. ಪೋಲೀಸಿಗೆ ಸುದ್ದಿ ಹೋಗಿ ಅರ್ಧ ಘಂಟೆಯೊಳಗಾಗಿ ಸಬ್ ಇನ್ಸ್ಪೆಕ್ಟರ್ ಬಂದಿಳಿದರು.

"ಏನ್ರೀ ಇದು ಗಲಭೆ?"

ಎಂದು ಸಬ್‌ಇನ್ಸ್ಪೆಕ್ಟರ್ ಕಣ್ಣು ಕೆಕ್ಕರಿಸಿಕೊಂಡು ಸುತ್ತಲೂ ನೋಡಿದರು. ರಕ್ಕಸಿಯರ ಹಾಗೆ ತಲೆ ಕೆದರಿಕೊಂಡು ಜಗಳಕ್ಕೆ ನಿಂತಿದ್ದ ಹುಡುಗಿಯರು ಅವರನ್ನು ಕಂಡು ಅಲ್ಲಲ್ಲೇ ಅಡಗಿಕೊಂಡರು. ಆದರೆ ಆತನ ಆ ಹದ್ದಿನ ಕಣ್ಣಿಂದ ಯಾರೂ ತಪ್ಪಿಸಿಕೊಳ್ಳಲು ಸಾಧ್ಯವಿರಲಿಲ್ಲ.

"ಯಾರ್ರೀ ಇವರೆಲ್ಲಾ?"

ಎಂದು ಗರ್ಜಿಸಿದರು. ಶಿವರಾಮಯ್ಯನಿಗೆ ಉಸಿರೇ ಉಡುಗಿಹೋದ ಹಾಗಾಯಿತು. ಅವನು ಸುಮ್ಮನೆ ಕೈ ಹೊಸೆಯುತ್ತ,

"ಎಲ್ಲಾ ಹೋಟೆಲ್ ಕೆಲಸದವರೇ, ಸ್ವಾಮಿ"

"ಹೋಟೆಲ್ ಕೆಲಸದವರು, ಆಂ?"

ಎಂದು ಅಂಜುತ್ತ ಅಂಜುತ್ತ ಉತ್ತರವಿತ್ತ.

ಎಂದು ಇನ್ಸ್ಪೆಕ್ಟರ್ ಹಂಗಿಸುವ ಧ್ವನಿಯಲ್ಲಿ ನುಡಿದು ಜೇಬಿನಲ್ಲಿದ್ದ ನೋಟ್ ಪುಸ್ತಕವನ್ನು ಈಚೆಗೆ ತೆಗೆದರು.

"ನಿಮ್ಮ ಹೆಸರೇನು?"

"ಶಿವರಾಮಯ್ಯ."

ಅವನ ನಾಲಗೆ ತೊದಲುತ್ತಿತ್ತು.

"ಲೈಸೆನ್ಸ್ ಎಲ್ಲಿ?"

ಅವನ ಮೈಯಲ್ಲಿ ಕಂಪನ ಉಂಟಾಯಿತು. ರೂಮಿನ ಕಡೆ ಕೈ ತೋರಿಸುತ್ತ,

"ಅಲ್ಲಿದೆ, ದಯಮಾಡಿಸಿ"

ಎಂದು ಆಫೀಸ್ ರೂಮಿಗೆ ಕರೆದೊಯ್ದ. ಇನ್ಸ್ಪೆಕ್ಟರ್ ಏನೋ ವಾಸನೆ ಕಂಡು ಅವನನ್ನು ಸದ್ದಿಲ್ಲದೆ ಹಿಂಬಾಲಿಸಿದರು. ಎರಡು ಹಸುರು ನೋಟುಗಳಿಗೆ ಗ್ರಹಚಾರ ವಕ್ರಿಸಿತ್ತು. ಶಿವರಾಮಯ್ಯ ಅದನ್ನು ಅವರ ಕೈಯಲ್ಲಿತ್ತು,

“ಹೇಗಾದರೂ ಕಾಪಾಡಬೇಕು”

ಎಂದು ಕೈಮುಗಿದ. ಇನ್ಸ್ಪೆಕ್ಟರ್ ಶಿವರಾಮಯ್ಯನನ್ನು ಮೇಲಿನಿಂದ ಕೆಳಗಿನವರೆಗೂ ನೋಡಿ,

“ಈ ಸಲಕ್ಕೆ ಮಾಫ್ ಮಾಡಿದ್ದೇನೆ. ಇನ್ನು ಮೇಲೆ ಹುಷಾರಾಗಿರಿ. ಇಂಥ ಗಲಭೆಗಳಿಗೆ ಅವಕಾಶ ಕೊಡಬೇಡಿ”

ಎಂದು ಎಚ್ಚರಿಸಿ ನೋಟುಗಳನ್ನು ಜೇಬಿಗೆ ಸೇರಿಸಿ ಹೊರಟುಹೋದರು. ಶಿವರಾಮಯ್ಯನಿಗೆ ಹೋದ ಜೀವ ಬಂದ ಹಾಗಾಯಿತು. ಹಠಾತ್ತಾಗಿ ಒದಗಿದ ವಿಪತ್ತಿನಿಂದ ಅವನು ಸ್ವಲ್ಪದರಲ್ಲಿ ಪಾರಾಗಿದ್ದ. ಅಂದೇ ಅವನು ಕುಮುದನಿಗೆ ಕಾಗದ ಬರೆದು ಆದಷ್ಟು ಜಾಗ್ರತೆ ಹೊರಟು ಬರಬೇಕೆಂದು ತಿಳಿಸಿದ. ಅವಳಿಲ್ಲದೆ ಅವನಿಗೆ ಕೈಮುರಿದ ಹಾಗಿತ್ತು. ಹುಡುಗಿಯರನ್ನು ಹದ್ದುಬಸ್ತಿನಲ್ಲಿಟ್ಟುಕೊಳ್ಳುವ ಕಲೆ ಅವಳ ಹಾಗೆ ಅವನಿಗೆ ಸಾಧಿಸಿರಲಿಲ್ಲ.

ಕುಮುದಾ ಊರಿಗೆ ಬಂದ ಕೂಡಲೆ ಪಾರ್ವತಿಗೆ ಹೋಟೆಲಿನಿಂದ ಉಚ್ಚಾಟನೆಯಾಯಿತು. ಕುಮುದನ ದರ್ಪದ ಮುಂದೆ ಪಾರ್ವತಿಯ ಆಟವೇನೂ ನಡೆಯುವ ಹಾಗಿರಲಿಲ್ಲ. ಅವಳು ತನ್ನ ಲೆಕ್ಕ ಫೈಸಲ್ ಮಾಡಿಸಿಕೊಂಡು ಮುಂದಿನ ದಾರಿ ಹಿಡಿದಳು.

ಹೋಟೆಲಿನಲ್ಲಿ ನಡೆದ ರಾದ್ಧಾಂತ ಕೇಳಿ ಮಧುಸೂದನನ ಮೈ ಜುಮ್ಮೆಂದಿತು. ಅಲ್ಲಿಂದ ಬೇಗ ಕಾಲ್ದೆಗೆಯದಿದ್ದರೆ ಮಾನ ಉಳಿಯುವುದಿಲ್ಲವೆಂದುಕೊಂಡ.

ಕುಮುದಾ ಮಧುಸೂದನ ಮುಂಬಯಿಗೆ ಹಿಂತಿರುಗಿ ಒಂದು ವಾರವಾಗಿತ್ತು. ಒಂದು ಬೆಳಗ್ಗೆ ಮಧುಸೂದನ ಇನ್ನೂ ಮಲಗಿದ್ದಾಗಲೇ ಮಾಣಿ ಬಂದು ಬಾಗಿಲು ತಟ್ಟಿದ. ಮಧುಸೂದನ ಎದ್ದು ಬಾಗಿಲು ತೆಗೆದು,

“ಏನಯ್ಯ ?”

“ನಿಮ್ಮನ್ನು ಹುಡುಕಿಕೊಂಡು ಯಾರೋ ಬಂದಿದ್ದಾರೆ, ಸಾರ್.”

“ಯಾರದು ?”

“ಯಾರೋ ಗೊತ್ತಿಲ್ಲ. ನಿಮ್ಮ ಹತ್ತಿರ ಮಾತಾಡಬೇಕಂತೆ.”

“ಅಮ್ಮಾವರು ಎಲ್ಲಿ ?”

“ಸ್ನಾನದ ಮನೆಯಲ್ಲಿದ್ದಾರೆ.”

"ಒಳಗೆ ಕಳಿಸು"

ಎಂದು ಕಾಯುತ್ತ ಕುಳಿತುಕೊಂಡ. ಮಾಣಿ ಹೋಗಿ ಸ್ವಲ್ಪಹೊತ್ತಿನಲ್ಲಿಯೇ ಬಂದಿದ್ದಾತನನ್ನು ರೂಮಿಗೆ ಕರೆತಂದು ಬಿಟ್ಟು ಹೊರಟುಹೋದ. ಅವನು ಮಧುಸೂದನನನ್ನು ಕಂಡೊಡನೆಯೇ ಬಗ್ಗಿ ಸಲಾಂ ಮಾಡಿ ಜೇಬಿನಿಂದ ಒಂದು ಕವರನ್ನು ತೆಗೆದು ಅವನ ಕೈಯಲ್ಲಿತ್ತ. ಮಧುಸೂದನ ಕವರನ್ನು ಹಿಂದೆ ಮುಂದೆ ತಿರುಗಿಸಿ ನೋಡಿದ.

"ಯಾರು ಕಳಿಸಿದ್ದಾರೆ?"

"ಆಯಿ ಸಾಹಿಬಾ"

ಎಂದು ಹಿಂದೂಸ್ತಾನಿಯಲ್ಲಿ ನುಡಿದು ಕೈಕಟ್ಟಿ ನಿಂತುಕೊಂಡ. ಮಧುಸೂದನ ಸುಪ್ತ ಕುತೂಹಲದೊಡನೆ ಕವರನ್ನೊಡೆದು ಒಳಗಿದ್ದ ತೆಳು ನೀಲಿಯ ಬಣ್ಣದ ಹಾಳೆಯನ್ನು ಈಚೆಗೆ ಎಳೆದುಕೊಂಡ. ಲಘುವಾದ ಪರಿಮಳ ಅವನ ನಾಸಿಕವನ್ನಡರಿತು.

"ನಾನು ನಿನ್ನೆತಾನೇ ಮುಂಬಯಿಗೆ ಬಂದೆ. ನಾಳೆ ನಾಳಿದ್ದು ಮದುವೆಯ ಗಲಾಟೆ. ಆದರೆ ಇವೊತ್ತೆಲ್ಲಾ ಬಿಡುವಾಗಿರುತ್ತೇನೆ. ಅವಕಾಶವಿದ್ದರೆ ಸಂಜೆ ಈ ಕಡೆ ದಯಮಾಡಿಸಿ. ಯಾವುದಕ್ಕೂ ಆಳಿನ ಕೈಯಲ್ಲಿ ಒಂದು ಮಾತು ಹೇಳಿಕಳಿಸಿದರೆ ಉತ್ತಮ.

—ರುಕ್ಮಾಯಿ."

ಕಾಗದವನ್ನೋದಿ ಮಧುಸೂದನನ ಅಂತರಂಗದಲ್ಲಿ ಒಂದು ಪುಲಕವೆದ್ದಿತು. ಆ ಮೂರಕ್ಷರಗಳು ಅವನ ಕಣ್ಣಿನ ಮುಂದೆ ಕುಣಿದಾಡಿದವು.

"ಆಗಲೆಂದರೆಂದು ಹೇಳು".

ಎಂದು ಒಂದೇ ಮಾತಿನಲ್ಲಿ ಉತ್ತರವಿತ್ತ. ಆಳು ಬಗ್ಗಿ ಸಲಾಂ ಮಾಡಿ ಹೊರಟುಹೋದ. ಮಧುಸೂದನ ಕಾಗದವನ್ನು ಜೋಪಾನವಾಗಿ ಮಡಿಸಿ ಜೇಬಿಗೆ ಸೇರಿಸಿದ. ಸ್ವಲ್ಪ ಹೊತ್ತಿನೊಳಗಾಗಿಯೇ ಕುಮುದಾ ರೂಮಿನೊಳಗೆ ಬಂದಳು.

"ಯಾರೋ ಬಂದಿದ್ದ ಹಾಗಿತ್ತು?"

"ಹೌದು. ಕನ್ನಡ ಸಂಘದ ಆಳು."

" ಏನಂತೆ ?"

" ಇದ್ದೇ ಇರತ್ತಲ್ಲಾ, ಅವರ ಚಟುವಟಿಕೆಗಳು. ಯಾವುದೋ ಸಭೆ ಯಂತೆ; ಅದಕ್ಕೆ ನಾನು ಹೋಗಬೇಕಂತೆ"

ಎಂದು ಸುಳ್ಳಿಗೆ ಒಂದು ಕೊಂಡಿ ಸೇರಿಸಿದ.

" ಸರಿ "

ಎಂದು ಕುಮುದಾ ಮೂಗು ತಿರುಗಿಸಿ ಹೊರಟುಹೋದಳು. ಅವಳಿಗೆ ಅಂಥ ಚಟುವಟಿಕೆಗಳಲ್ಲೆಲ್ಲಾ ಉತ್ಸಾಹವಿರಲಿಲ್ಲ.

ಮಧುಸೂದನ ಸ್ನಾನ ಮುಗಿಸಿಕೊಂಡು ಪೇಟೆಯ ಕಡೆ ಹೋಗಿ ಸುತ್ತಾಡಿ ಕೊಂಡು ಬಂದ. ಊಟವಾದ ಮೇಲೆ ಸಾಯಂಕಾಲದವರೆಗೂ ವಿಶ್ರಾಂತಿ ಯಾಯಿತು. ಐದು ಘಂಟೆಗೆ ಎದ್ದು ಮುಖಕ್ಷೌರ ಮಾಡಿಕೊಂಡು, ನೀಟಾಗಿ ಬಟ್ಟೆ ಧರಿಸಿ ಹೊರಡಲನುವಾದ. ಕುಮುದಾ ರೂಮಿಗೆ ಬಂದು ಅವನನ್ನೊಮ್ಮೆ ದೃಷ್ಟಿಸಿ ನೋಡಿದಳು.

" ನೀನೂ ಬರುತ್ತೀಯಾ ?"

ಎಂದು ಧೈರ್ಯವಾಗಿ ಕೇಳಿದ. ಅವಳು ಬರುವುದಿಲ್ಲವೆನ್ನುವುದು ಅವನಿಗೆ ಗೊತ್ತಿತ್ತು.

" ಸದ್ಯ, ನೀವು ಹೋಗುವುದೇ ನನಗೆ ಇಷ್ಟವಿಲ್ಲ. ಇನ್ನು ನಾನು ಬೇರೆ ಬರಬೇಕೆ ?"

ಎಂದು ಕುಮುದಾ ನಕ್ಕು ಕೇಳಿದಳು. ಆ ನಗೆಯಲ್ಲಿ ಮಧುಸೂದನನೂ ಭಾಗಿಯಾದ. ಅವಳು ಅವನ ಹತ್ತಿರ ಬಂದು ಮೈಗೆ ಮೈ ಸೋಕುವ ಹಾಗೆ ನಿಂತು,

" ಎಷ್ಟು ಹೊತ್ತಿಗೆ ಬರುತ್ತೀರಿ ? ತುಂಬ ಹೊತ್ತಾಗುವುದಿಲ್ಲವಷ್ಟೆ ?"

" ಸಭೆ ಸಮ್ಮೇಳನ ಎಂದರೆ ಬೇಗ ಮುಗಿಯುವುದೆ ? ಸ್ವಲ್ಪ ಹೊತ್ತಾ ದರೂ ಆಗಬಹುದು. ನೀನು ನನಗೋಸ್ಕರ ಊಟಕ್ಕೆ ಕಾಯಬೇಡ "

ಎಂದು ಅವಳ ಕೆನ್ನೆಯನ್ನು ಮೃದುವಾಗಿ ನೇವರಿಸಿದ. ಕುಮುದಾ ತನ್ನ ತೋಳನ್ನು ಅವನ ಕುತ್ತಿಗೆಗೆ ಬಳಸಿ,

" ಆದಷ್ಟು ಬೇಗ ಬಂದುಬಿಡಿ. ನನ್ನನ್ನು ಕಾಯಿಸಬೇಡಿ, ಆಂ ?"

ಎಂದು ಅವನನ್ನು ತಟಕ್ಕನೆ ಚುಂಬಿಸಿ ಹೊರಟುಹೋದಳು. ಅವನ ಶೃಂಗಾರ ನೋಡಿ ಅವಳ ಬಯಕೆ ನೀರೂರುತ್ತಿತ್ತು.

ಮಧುಸೂದನ ಫ್ಲೋರ್ಟ್ ತಲಪಿದಾಗ ಆರು ಘಂಟೆಯಾಗಿತ್ತು. ರುಕ್ಮಾಯಿ ಸೂಚಿಸಿದ್ದ ಐದು ಅಂತಸ್ತಿನ ಭವ್ಯ ನಿವಾಸವನ್ನು ಗುರುತಿಸುವುದು ಅವನಿಗೆ ಕಷ್ಟವಾಗಲಿಲ್ಲ. ಇಪ್ಪತ್ತೆರಡನೆಯ ನಂಬರ್ ರೂಮು ಮೂರನೆಯ ಅಂತಸ್ತಿನಲ್ಲಿತ್ತು. ಮಧುಸೂದನ ಲಿಫ್ಟಿನಲ್ಲಿ ಮೇಲಕ್ಕೆ ಹೋದ. ರೂಮಿನ ಬಾಗಿಲು ಹಾಕಿತ್ತು. ಮೆಲ್ಲನೆ ತಟ್ಟಿದ. ರುಕ್ಮಾಯಿಯೇ ಬಂದು ಬಾಗಿಲು ತೆಗೆದಳು. ಅವನನ್ನು ಕಂಡು ನಗುಮೊಗದಿಂದ,

"ಬನ್ನಿ, ಬನ್ನಿ"

ಎಂದು ಸ್ವಾಗತಿಸಿ ಒಳಗೆ ಕರೆದೊಯ್ದಳು. ಮಧುಸೂದನ ದೃಷ್ಟಿಯನ್ನು ಸುತ್ತ ಹರಿಸಿದ. ವಿಶಾಲವಾದ ರೂಮು ಸುಸಜ್ಜಿತವಾಗಿತ್ತು. ಒಂದು ಕಡೆ ದೊಡ್ಡದಾದ ಸ್ಕ್ರೀನ್ ಇಟ್ಟಿತ್ತು.

"ಕುಳಿತುಕೊಳ್ಳಿ"

ಎಂದು ಸೋಫದ ಕಡೆ ಕೈ ತೋರಿಸಿದಳು.

"ನಿಮ್ಮ ನೆಂಟರು ಇಲ್ಲಿದ್ದಾರೆಯೆ?"

"ಇಲ್ಲ, ಅವರು ದಾದರಿನಲ್ಲಿದ್ದಾರೆ. ಮದುವೆಯ ಮನೆಯಲ್ಲಿ ಗಲಾಟೆ ಯೆಂದು ನಾನು ಇಲ್ಲಿ ರೂಮು ತೆಗೆದುಕೊಂಡಿದ್ದೇನೆ. ಬೇಕಾದಾಗ ಹೋಗಿ ಬರುತ್ತೇನೆ. ನನಗೆ ಸಾಮಾನ್ಯವಾಗಿ ಜನರ ಗೊಂದಲ ಆಗುವುದಿಲ್ಲ"

ಎಂದು ನಕ್ಕಳು.

"ಹಾಗಾದರೆ ನೀವೂ ನನ್ನ ಹಾಗೇ!"

ಎಂದು ಮಧುಸೂದನ ನುಡಿದು ಮುಗುಳ್ನಕ್ಕ. ಇಬ್ಬರೂ ಸ್ವಲ್ಪಹೊತ್ತು ಮೌನವಾಗಿ ಕುಳಿತಿದ್ದರು. ರುಕ್ಮಾಯಿ ಎದ್ದು ಸ್ಕ್ರೀನ್ ಹಿಂದೆ ಹೋಗಿ ಕೈಯಲ್ಲಿ ಒಂದು ತಟ್ಟೆ ಹಿಡಿದು ಬಂದಳು. ಅದರಲ್ಲಿ ಬಿಸ್ಕತ್, ಸೇಬಿನ ಹಣ್ಣಿನ ಹೋಳುಗಳಿದ್ದವು.

"ತೆಗೆದುಕೊಳ್ಳಿ"

ಎಂದು ತಟ್ಟೆಯನ್ನು ಅವನ ಕೈಗಿತ್ತಳು.

"ನಾನು ಈಗತಾನೇ ಉಪಾಹಾರ ಮುಗಿಸಿಕೊಂಡು ಬಂದೆ."

"ಚಿಂತೆಯಿಲ್ಲ, ಸ್ವಲ್ಪ ತೆಗೆದುಕೊಳ್ಳಿ"

ಎಂದು ಒತ್ತಾಯ ಮಾಡಿದಳು. ಮಧುಸೂದನ ಸೇಬಿನ ಹಣ್ಣಿನ ಹೋಳುಗಳನ್ನು ಒಂದೊಂದನ್ನಾಗಿ ಬಾಯಿಗೆ ಹಾಕಿಕೊಳ್ಳತೊಡಗಿದ. ಮೇಜಿನ ಮೇಲಿದ್ದ ಫ್ಲಾಸ್ಕಿನಲ್ಲಿ ಕಾಫಿ ಸಿದ್ಧವಾಗಿಯೇ ಇತ್ತು. ರುಕ್ಮಾಯಿ ಅದನ್ನು ಎರಡು ಕಪ್ಪುಗಳಿಗೆ ಬಗ್ಗಿಸಿ ಒಂದನ್ನು ಅವನ ಕೈಗಿತ್ತು ಇನ್ನೊಂದನ್ನು ತಾನಿಟ್ಟುಕೊಂಡು ಕುಳಿತಳು.

"ನಿಮಗೆ ಚಹ ಸೇರುವುದಿಲ್ಲ, ಅಲ್ಲವೆ?"

"ಸೇರುವುದಿಲ್ಲ ಎಂದೇನೂ ಇಲ್ಲ. ಆದರೆ ನಮಗೆ ಕಾಫಿಯ ಅಭ್ಯಾಸವೇ ಹೆಚ್ಚು."

"ನಾನೂ ಹಾಗೇ ಊಹಿಸಿದೆ"

ಎಂದಳು. ಮಧುಸೂದನ ಅವಳ ವಿವೇಚನೆಯನ್ನು ಮನಸ್ಸಿನಲ್ಲಿಯೇ ಮೆಚ್ಚಿಕೊಂಡ. ಲೋಕಾಭಿರಾಮವಾದ ಮಾತುಕತೆಗಳಲ್ಲಿ ಸ್ವಲ್ಪ ಹೊತ್ತು ಕಳೆಯಿತು. ಮಧುಸೂದನ ಜೇಬಿನಿಂದ ಒಂದು ಸಣ್ಣ ಪೆಟ್ಟಗೆ ತೆಗೆದು ಅವಳ ಕೈಯಲ್ಲಿತ್ತ. ರುಕ್ಮಾಯಿಯ ಕಣ್ಣಲ್ಲಿ ಕುತೂಹಲ ಮೂಡಿತು.

"ಇದೇನು?"

"ತೆಗೆದು ನೋಡಿ."

ರುಕ್ಮಾಯಿ ಪೆಟ್ಟಗೆಯ ಮುಚ್ಚಳವನ್ನು ತೆಗೆದಳು. ಒಳಗೆ ಮಕಮಲ್ ಮೆತ್ತೆಯ ನಡುವೆ ಕಣ್ಣು ಕೋರೈಸುವ ವಜ್ರದ ಉಂಗುರ ಕುಳಿತಿತ್ತು. ರುಕ್ಮಾಯಿ ಅಚ್ಚರಿಯಿಂದ,

"ಇದು ಯಾರಿಗೆ?"

"ನಿಮ್ಮ ಬೆರಳಿಗೆ ಸರಿಹೋಗುವುದೇ, ನೋಡಿ."

"ಇದನ್ನು ನನಗೋಸ್ಕರ ತಂದಿರಾ?"

ಎಂದು ತಲೆಯೆತ್ತಿ ಅವನ ಮುಖವನ್ನು ನೋಡಿದಳು. ಮಧುಸೂದನ ಉತ್ತರ ಕೊಡಲಿಲ್ಲ. ಕಿರುನಗೆ ಅವನ ತುಟಿಯಂಚಿನಲ್ಲಿ ಕಾಣಿಸಿಕೊಂಡಿತು. ಉಂಗುರ ಅವಳ ಬಲಗೈಯ ತರ್ಜನಿಯ ಬೆರಳಿಗೆ ಹೇಳಿ ಮಾಡಿಸಿದ ಹಾಗಿತ್ತು. ರುಕ್ಮಾಯಿ ಉಂಗುರದ ಹೊಳಪನ್ನು ತಿರುಗಿಸಿ ತಿರುಗಿಸಿ ನೋಡುತ್ತ,

"ಇಷ್ಟು ತೊಂದರೆ ಏಕೆ ತೆಗೆದುಕೊಂಡಿರಿ?"

" ನಿಮ್ಮ ವಿಷಯದಲ್ಲಿ ಇದೊಂದು ತೊಂದರೆಯೇ ?"

ಎಂದು ಅವಳ ಮುಖವನ್ನೇ ದಿಟ್ಟಿಸಿ ನೋಡುತ್ತ ನುಡಿದ. ರುಕ್ಮಾಯಿಯ ದೃಷ್ಟಿ ಕ್ಷಣಕಾಲ ಮಧುಸೂದನನ ಮುಖದ ಮೇಲೆ ನೆಲಸಿತು. ಆ ನೋಟದಲ್ಲಿ ಅಭಿಮಾನದ ಹೊಳಹನ್ನು ಕಂಡು ಅವನ ಮೈ ರೋಮಾಂಚನಗೊಂಡಿತು. ಮರುಕ್ಷಣವೇ ಅವಳು ಲಜ್ಜೆಯಿಂದ ತಲೆತಗ್ಗಿಸಿದಳು. ಅವಳ ಕೆನ್ನೆಗೆ ಕೆಂಪಡರಿತ್ತು.

ಎರಡು ನಿಮಿಷ ಇಬ್ಬರನ್ನು ಮೌನ ಆವರಿಸಿತ್ತು. ಇಬ್ಬರ ಮನಸ್ಸಿನಲ್ಲಿಯೂ ಭಾವತರಂಗಗಳೇಳುತ್ತಿದ್ದವು.

ರುಕ್ಮಾಯಿ ಸೋಫಾ ಬಿಟ್ಟೆದ್ದು ಬೀರು ಬಾಗಿಲನ್ನು ತೆರೆದು ವ್ಹಿಸ್ಕಿ ಸೀಸೆಯನ್ನು ಕೈಗೆತ್ತಿಕೊಂಡಳು. ಬಿರಟೆ ತೆಗೆದು ಎರಡು ಗ್ಲಾಸುಗಳಿಗೆ ಪಾನೀಯ ಬಗ್ಗಿಸಿದಳು. ಸೋಡಾ ಸೀಸೆ ಒಡೆದು ಎರಡಕ್ಕೂ ಸೋಡಾ ಬೆರಸಿ ಒಂದನ್ನು ಅವನ ಕೈಗಿತ್ತು ಇನ್ನೊಂದನ್ನು ತನ್ನ ಕೈಯಲ್ಲಿ ಹಿಡಿದುನಿಂತಳು.

" ಅಭ್ಯಂತರವಿಲ್ಲವಷ್ಟೆ ?"

" ಇಲ್ಲ"

ಎಂದು ಮಧುಸೂದನ ಪಾನೀಯವನ್ನು ಎರಡೇ ಗುಟುಕಿಗೆ ಮುಗಿಸಿ ಕುಳಿತ. ಸೋಫಾದಲ್ಲಿ ಅವನ ಪಕ್ಕದಲ್ಲಿಯೇ ಮಂಡಿಸಿದ ರುಕ್ಮಾಯಿ ಮದ್ಯವನ್ನು ನಿಧಾನವಾಗಿ ಹೀರತೊಡಗಿದಳು.

ಅದರ ಕಾವು ಅವನ ದೇಹಕ್ಕೆ ಆಗಲೇ ವ್ಯಾಪಿಸುತ್ತಿತ್ತು; ಅದರ ಸ್ಫೂರ್ತಿ ಅವನ ನಾಳನಾಳಗಳಲ್ಲಿ ಹರಿದು ದುಮುಗುಟ್ಟುತ್ತಿತ್ತು; ಅವಳ ಸಾಮೀಪ್ಯದಿಂದ ಅವನ ಆಸೆ ಕೆರಳುತ್ತಿತ್ತು. ಒಂದು ಕೈಯನ್ನು ಅವಳ ಸೊಂಟಕ್ಕೆ ಹಾಕಿ ಮೆಲ್ಲನೆ ಹತ್ತಿರ ಎಳೆದುಕೊಂಡ.

" ರುಕ್ಮಾ, ರುಕ್ಮಾ."

ಅವನ ವಾಂಛೆ ಪೂರ್ತಿಯಾಗಿ ಹೆಡೆ ಬಿಚ್ಚಿತ್ತು; ಮೋಹ ಒತ್ತರಿಸಿ ಬರುತ್ತಿತ್ತು. ಆವೇಗದಿಂದ ಅವಳ ಮುಖ ಹಿಡಿದು ತನ್ನೆಡೆಗೆ ತಿರುಗಿಸಿಕೊಂಡ. ಅವಳ ಹಣೆಯ ಮೇಲೆ ಬೆವರು ಹನಿಗಳು ಮುತ್ತಿನ ಹಾಗೆ ಸಾಲಿಡುತ್ತಿದ್ದವು; ಉದ್ವೇಗಕ್ಕೆ ಅವಳ ಎದೆ ಏರಿ ಏರಿ ಇಳಿಯುತ್ತಿತ್ತು; ಅರೆದೆರೆದ ಅವಳ ಕೆಂದುಟಿ ಅವನ ತವಕವನ್ನು ಮೀಟುತ್ತಿತ್ತು.

"ರುಕ್ಮಾ, ನನ್ನ ಚಿನ್ನಾ"

ಎಂದು ಮಧುಸೂದನ ಅವಳನ್ನು ಬಿಗಿದಪ್ಪಿ ಚುಂಬಿಸಿದ. ಕಟ್ಟು ಹರಿದ ಮೋಹ ಪ್ರವಾಹದಲ್ಲಿ ಅವರಿಬ್ಬರೂ ಕೊಚ್ಚಿಹೋದರು.

ಅರ್ಧಘಂಟೆಯ ಹೊತ್ತು ಅವರ ಭಾಗಕ್ಕೆ ಪ್ರಪಂಚ ಶೂನ್ಯವಾಗಿತ್ತು. ದೂರದಲ್ಲಿ ಎಲ್ಲೋ ಒಂಬತ್ತು ಹೊಡೆದ ಸದ್ದು ಕೇಳಿಸಿತು. ಮಧುಸೂದನ ಹೊತ್ತಾಯಿತೆಂದು ಎದ್ದ. ರುಕ್ಮಾಯಿ ಅವನ ಕೈ ಹಿಡಿದು,

"ಮತ್ತೆ ಬರುವಿರಾ?"

"ಯಾವಾಗ ಬರಲಿ, ಹೇಳು?"

"ನಾಳೆ ನಾಳಿದ್ದು ಮದುವೆಯ ಗಲಾಟೆಯಿದೆ–"

ಎಂದು ಅದೊಂದು ಅಡ್ಡಿ ಬಂದಿತೆನ್ನುವ ಹಾಗೆ ಬೇಸರ ಸೂಚಿಸುವ ಧ್ವನಿಯಲ್ಲಿ ನುಡಿದಳು.

"ಆಚೆ ನಾಳಿದ್ದು ಬರುತ್ತೇನೆ."

"ಹಾಗಾದರೆ ಇನ್ನು ಎರಡು ದಿನ ನಿಮ್ಮನ್ನು ನೋಡುವ ಹಾಗಿಲ್ಲ"

ಎಂದು ದುಗುಡ ತುಂಬಿದ ಧ್ವನಿಯಲ್ಲಿ ನುಡಿದಳು. ಮಧುಸೂದನ ಅವಳ ಮುಂಗುರುಳನ್ನು ನೇವರಿಸುತ್ತ,

"ಮುಂಬಯಿಯಲ್ಲಿ ಇನ್ನೆಷ್ಟು ದಿವಸ ಇರಬೇಕೆಂದು ಮಾಡಿದ್ದೀ?"

"ಒಂದು ವಾರದ ಮಟ್ಟಿಗೆ ನಿಲ್ಲಲು ಅವಕಾಶವಿದೆ. ಕಾಹಿಲೆಯ ತಾಯಿ ಒಬ್ಬರನ್ನೇ ಬಿಟ್ಟು ಬಂದಿದ್ದೇನೆ"

ಎಂದು ನೀಳವಾಗಿ ಸುಯ್ದಳು. ಅವಳ ಮನಸ್ಸು ಎರಡು ಕಡೆಯೂ ತುಯ್ಯುತ್ತಿತ್ತು. ಅವಳಿಂದ ಬೀಳ್ಕೊಂಡು ಬರುವಾಗ ಅವನ ಅಂತರಂಗದಲ್ಲಿ ವಿವಿಧ ಭಾವನೆಗಳು ಸುಳಿ ಸುತ್ತುತ್ತಿದ್ದವು.

೨೯

ಶಿವಸ್ವಾಮಿಯ ಆಗಮನವೇನೂ ಅನಿರೀಕ್ಷಿತವಾಗಿರಲಿಲ್ಲ. ಅವನು ಬರುವುದಕ್ಕೆ ಒಂದು ತಿಂಗಳು ಮುಂಚೆಯೇ ಅಯ್ಯರರಿಗೆ ಕಾಗದ ಬಂದಿತ್ತು. ಶಿವಸ್ವಾಮಿ ತನ್ನ ಕೆಲವು ಆಪ್ತಮಿತ್ರರಿಗೂ ಕಾಗದ ಬರೆದು ಬರುವ ವಿಷಯ ತಿಳಿಸಿದ್ದ.

ಮುಂಬಯಿಯಲ್ಲಿ ಹಡಗಿಳಿದಾಗಲೇ ಅಲ್ಲಿದ್ದ ಕೆಲವು ಮಿತ್ರರು ಸ್ವಾಗತಿಸಿದರು. ಅವನು ಮದರಾಸ್ ತಲಪಿದಾಗ ಇನ್ನೂ ದೊಡ್ಡ ಸ್ವಾಗತ ಕಾದಿತ್ತು. ಅವನ ಸ್ನೇಹಿತರಾದ ರಾಜಗೋಪಾಲ್, ಗೋಪೀನಾಥ್, ಮೋಹನರಾವ್, ಸದಾಶಿವಂ ಮುಂತಾದವರೂ ಪ್ರೆಸಿಡೆನ್ಸಿ ಕಾಲೇಜಿನ ಕೆಲವು ಅಧ್ಯಾಪಕರೂ ಸೆಂಟ್ರಲ್ ಸ್ಟೇಷನ್ನಿಗೆ ಬಂದು ಕಾದಿದ್ದರು. ರೈಲು ನಿಂತೊಡನೆಯೇ ಗೆಳೆಯರು ಅವನು ಕುಳಿತಿದ್ದ ಎರಡನೆಯ ತರಗತಿಯ ಗಾಡಿಯ ಕಡೆ ಧಾವಿಸಿದರು. ಶಿವಸ್ವಾಮಿ ಅವರನ್ನು ದೂರದಿಂದಲೇ ಕಂಡು ನಗುಮೊಗದಿಂದ ಕೈಜೋಡಿಸುತ್ತ ಕೆಳಗಿಳಿದ.

"ಹಲ್ಲೋ ಡಾಕ್ಟರ್"

"ವೆಲ್‌ಕಂ ಹೋಂ"

ಎನ್ನುವ ಉದ್ಗಾರಗಳು ಒಟ್ಟಿಗೆ ಹೊರಟವು. ಸ್ನೇಹಿತರು ಅವನನ್ನು ಮುತ್ತಿ ಕೈ ಕುಲುಕಿಸಲಾರಂಭಿಸಿದರು. ಕೊರಳಿಗೆ ಹಾರದ ಮೇಲೆ ಹಾರ ಬಿತ್ತು. ಶಿವಸ್ವಾಮಿಯ ಕಣ್ಣು ಸುತ್ತಲೂ ಹುಡುಕುತ್ತಿತ್ತು. ನಟರಾಜ ಅಯ್ಯರರು ಗುಂಪನ್ನು ಬಿಡಿಸಿಕೊಂಡು ಅವನೆಡೆಗೆ ಬರುತ್ತಿದ್ದರು.

"ಅಣ್ಣಾ"

ಎಂದು ನಾಲ್ಕು ಹೆಜ್ಜೆಯಲ್ಲಿ ಅವರನ್ನು ಸಮಿಾಪಿಸಿ ನಿಂತುಕೊಂಡ.

ನಟರಾಜ ಅಯ್ಯರರ ಕಣ್ಣು ಹರ್ಷದಿಂದ ಅರಳಿತ್ತು. ಅವನ ಭುಜದ ಮೇಲೆ ಕೈಯಿಟ್ಟು ವಾತ್ಸಲ್ಯ ತುಂಬಿದ ಧ್ವನಿಯಲ್ಲಿ,

"ಪ್ರಯಾಣ ಸುಖವಾಗಿತ್ತೆ, ಶಿವೂ ?"

ಎಂದು ಕೇಳಿದರು.

"ಇತ್ತಣ್ಣಾ"

ಎಂದು ಶಿವಸ್ವಾಮಿ ಉತ್ತರವಿತ್ತ. ಸ್ನೇಹಿತರೊಡನೆ ಹತ್ತು ನಿಮಿಷ ಕುಶಲ ಸಂಭಾಷಣೆ ನಡೆಯಿತು. ಎಲ್ಲರನ್ನೂ ಸಾವಕಾಶವಾಗಿ ಭೇಟಿ ಮಾಡುವುದಾಗಿ ಶಿವಸ್ವಾಮಿ ಭರವಸೆಯಿತ್ತ. ಪ್ರತಿಯೊಬ್ಬರೂ ಅವನಿಗೆ ತಮ್ಮ ಮನೆಗೆ ಬರಲು ಆಹ್ವಾನವಿತ್ತು ತೆರಳಿದರು. ಅಯ್ಯರ್ ಶಿವಸ್ವಾಮಿ ಕಾರಿನಲ್ಲಿ ಕುಳಿತು ಮನೆಯ ಕಡೆ ಹೊರಟರು.

"ಮನೆಯಲ್ಲಿ ಎಲ್ಲರೂ ಕ್ಷೇಮವೇ, ಅಣ್ಣಾ ?"

ಎಂದು ಶಿವಸ್ವಾಮಿ ಕೇಳಿದ.

"ಕ್ಷೇಮವಾಗಿದ್ದಾರೆ."

"ಲಲಿತಾ ?"

"ಇದ್ದಾಳೆ"

ಎಂದು ಏನೋ ಒಂದು ಬಗೆಯ ಧ್ವನಿಯಲ್ಲಿ ಉತ್ತರವಿತ್ತರು. ಪ್ರಯಾಣದ ವಿಚಾರ ಮಾತಾಡುತ್ತಿದ್ದ ಹಾಗೆಯೇ ಕಾರು ಬಂಗಲೆ ಪ್ರವೇಶಿಸಿ ಪೋರ್ಟಿಕೋದಲ್ಲಿ ಬಂದು ನಿಂತಿತು. ಮೀನಾಕ್ಷಮ್ಮನವರು ವರಾಂಡದಲ್ಲಿ ಬಂದು ನಿಂತಿದ್ದರು. ಬೆಳ್ಳಗೆ ಮೈ ಕೈ ತುಂಬಿಕೊಂಡು ಬಂದ ಮಗನನ್ನು ಕಂಡು ಅವರ ಮುಖ ಹಿಗ್ಗಿತು.

"ಬಾ ಮಗು, ಬಾ"

ಎಂದು ಹರ್ಷದ ತೆರೆಯೇಳುತ್ತಿದ್ದ ಹೃದಯದಿಂದ ಸ್ವಾಗತಿಸಿದರು. ಶಿವಸ್ವಾಮಿ ಅವರ ಕಾಲು ಮುಟ್ಟಿ ನಮಸ್ಕರಿಸಿದ. ಮೀನಾಕ್ಷಮ್ಮನವರು ಸ್ನೇಹದಿಂದ ಮಗನ ತಲೆಯನ್ನು ನೇವರಿಸಿ ಸೆರಗಿನಿಂದ ಕಣ್ಣೊರಸಿಕೊಂಡರು. ಮಾತಾಡಲಾಗದಂತೆ ಅವರ ಕಂಠ ಬಿಗಿದು ಬಂದಿತ್ತು.

ಶಿವಸ್ವಾಮಿ ಮನೆಯ ಸುತ್ತಲೂ ದೃಷ್ಟಿ ಹರಿಸಿದ.

"ಲಲಿತಾ ಎಲ್ಲಿ ?"

ಮೀನಾಕ್ಷಮ್ಮನವರು ಲಲಿತನ ರೂಮಿನ ಕಡೆ ನೋಡಿದರು. ಲಲಿತ ಸದ್ದಿಲ್ಲದೆ ಬಂದು ಬಾಗಿಲಲ್ಲಿ ನಿಂತಿದ್ದಳು. ಮೂಳೆ ಚಕ್ಕಳವಾಗಿದ್ದ ಅವಳನ್ನು ನೋಡಿ ಶಿವಸ್ವಾಮಿಯ ಎದೆ ಧಸಕ್ಕೆಂದಿತು.

"ಏಕೆ ಲಲಿತಾ, ಮೈ ಸ್ವಸ್ಥವಿಲ್ಲವೆ?"

ಎನ್ನುತ್ತ ಗಾಬರಿಯಿಂದ ಅವಳನ್ನು ಸಮೀಪಿಸಿದ.

"ಇದೆ"

ಎಂದು ಲಲಿತ ಕ್ಷೀಣವಾದ ಸ್ವರದಲ್ಲಿ ಉತ್ತರವಿತ್ತಳು. ಶಿವಸ್ವಾಮಿ ತಾಯಿಯ ಕಡೆ ನೋಡಿ,

"ಲಲಿತನಿಗೆ ಏನಾಗಿದೆಯಮ್ಮಾ?"

ಎಂದು ಆತಂಕ ತುಂಬಿದ ಧ್ವನಿಯಲ್ಲಿ ಕೇಳಿದ.

"ಅವಳಿಗೆ ಆರೋಗ್ಯ ಸರಿಯಾಗಿಲ್ಲ, ಮಗು. ನೀನು ಮೊದಲು ಬಟ್ಟೆ ಬಿಚ್ಚಿ ಸ್ನಾನಕ್ಕೇಳು. ಉಳಿದ ವಿಷಯವೆಲ್ಲಾ ಆಮೇಲಾಗಲಿ"

ಎಂದು ಅಲ್ಲಿ ನಿಲ್ಲದೆ ಹೊರಟುಹೋದರು. ಶಿವಸ್ವಾಮಿ ಮೌನವಾಗಿ ತನ್ನ ರೂಮು ಸೇರಿದ. ಅವನಿಗೆ ಎಲ್ಲವೂ ವಿಚಿತ್ರವಾಗಿ ಕಂಡಿತು.

ಸಂಸಾರದಲ್ಲಿ ಏನೋ ವಿರಸ ಮೂಡಿದೆಯೆಂದು ಶಿವಸ್ವಾಮಿಗೆ ಗೊತ್ತಾಗಲು ಹೆಚ್ಚುಕಾಲ ಬೇಕಾಗಲಿಲ್ಲ.

ಮನೆಯಲ್ಲಿನ ವಾತಾವರಣವೇ ವಿಲಕ್ಷಣವಾಗಿತ್ತು. ಯಾರ ಮುಖದ ಮೇಲೂ ಹರ್ಷವಿದ್ದಂತಿರಲಿಲ್ಲ. ಯಾವುದೋ ಮಂಕು ಎಲ್ಲರನ್ನೂ ಆವರಿಸಿತ್ತು. ಬಾಯಿಬಿಟ್ಟು ಮಾತಾಡಲು ಎಲ್ಲರೂ ಹಿಂಜರಿಯುತ್ತಿದ್ದರು. ತನ್ನ ಆಗಮನದಿಂದ ಉತ್ಸಾಹಗೊಂಡು ಕುಣಿದಾಡಬೇಕಾಗಿದ್ದ ಲಲಿತ ರೂಮು ಸೇರಿ ಹಾಸಿಗೆ ಹಿಡಿದಿದ್ದಳು.

ಅವಳಿಗೇನಾದರೂ ತೀವ್ರವಾದ ಕಾಹಿಲೆಯೆ? ಹಾಗಿದ್ದರೆ ತನಗೇಕೆ ಆ ವಿಚಾರವನ್ನು ಬರೆದು ತಿಳಿಸಬಾರದಾಗಿತ್ತು? ಅವಳ ಮದುವೆಯ ಮಾತು ನಡೆದು ಅದು ನಿಂತು ಹೋದ ಸಂದರ್ಭವೇನೋ ಅವನಿಗೆ ಗೊತ್ತಾಗಿತ್ತು. ತಂದೆಯೇ ಅದನ್ನು ಅವನಿಗೆ ಬರೆದು ತಿಳಿಸಿದ್ದರು. ಆ ಪ್ರಕರಣ ಅವರ ಮನಸ್ಸಿಗೆ ಅಸಮಾಧಾನವನ್ನುಂಟುಮಾಡಿತ್ತೆಂದು. ಅವರ ಕಾಗದದಿಂದಲೇ ಧ್ವನಿತವಾಗಿತ್ತು.

ಇಷ್ಟಲ್ಲದೆ ಅವನಿಗೆ ಹೆಚ್ಚಾಗಿ ಏನೂ ತಿಳಿದಿರಲಿಲ್ಲ. ಲಲಿತನ ಆರೋಗ್ಯ ಸರಿಯಾಗಿರಲಿಲ್ಲವೆನ್ನುವ ಸಂಗತಿಯನ್ನು ತಂದೆ ಯಾವ ಕಾಗದದಲ್ಲಿಯೂ ಬರೆದಿರಲಿಲ್ಲ. ಆ ಸುದ್ದಿ ತಿಳಿಸಿದರೆ ಅವನ ಮನಸ್ಸಿಗೆ ನೆಮ್ಮದಿಗೆ ಭಂಗ ಬರಬಹುದೆಂದು ಅವರು ಭಾವಿಸಿದ್ದರೆ? ಅವರ ಮನಸ್ಸಿನಲ್ಲೇನಿತ್ತೋ, ವಾಸ್ತವ ಸ್ಥಿತಿಯೇನೋ ಒಂದೂ ಗೊತ್ತಾಗುವ ಹಾಗಿರಲಿಲ್ಲ. ಅವನಿಗೆ ಎಲ್ಲವೂ ಒಂದು ಸಮಸ್ಯೆಯಾಗಿ ಕಂಡಿತು.

ಮೂರು ದಿನಗಳ ಮೇಲೆ ಮೀನಾಕ್ಷಮ್ಮನವರೇ ಬಾಯಿಬಿಟ್ಟರು.

ಅವರು ಹೇಳಿದ್ದಕ್ಕಿಂತ ಹೇಳದೆ ಬಿಟ್ಟ ಭಾಗ ಅವನಿಗೆ ಸ್ವಾರಸ್ಯವಾಗಿ ಕಂಡಿತು. ಅವನ ಬುದ್ಧಿ ಅದನ್ನು ಕುರಿತು ತೀವ್ರವಾಗಿ ಯೋಚಿಸಲಾರಂಭಿಸಿತು. ಲಲಿತ ಅವಳ ಕೈಮೀರಿದ ಸನ್ನಿವೇಶದ ಹಿಡಿತಕ್ಕೆ ಸಿಕ್ಕಿ ತೊಳಲುತ್ತಿರುವಳೆಂದು ಅವನಿಗೆ ತೋರಿತು. ಅವಳ ಬಗೆಗೆ ಅವನಿಗೆ ಅನುಕಂಪ ಮೂಡಿತು.

ಮದರಾಸಿಗೆ ಬಂದು ಒಂದು ವಾರವಾದ ಮೇಲೆ ಶಿವಸ್ವಾಮಿ ಕೊಯ ಮತ್ತೂರಿಗೆ ಹೋಗಲು ನಿರ್ಧರಿಸಿದ. ಸುಂದರಂ ಅಯ್ಯರರು ಒತ್ತಾಯ ಮಾಡಿ ಕಾಗದ ಬರೆದಿದ್ದರು.

"ಲಲಿತನನ್ನೂ ಕರೆದುಕೊಂಡು ಹೋಗುತ್ತೇನಣ್ಣಾ"

ಎಂದು ಹೊರಡುವ ಹಿಂದಿನ ದಿನ ತಂದೆಗೆ ಹೇಳಿದ.

"ಮಹರಾಯನ ಹಾಗೆ ಕರೆದುಕೊಂಡು ಹೋಗಪ್ಪಾ. ಅವಳಿಗೂ ಸ್ಥಳ ಬದಲಾಯಿಸಿದ ಹಾಗಾಗತ್ತೆ"

ಎಂದು ಅಯ್ಯರರು ಉತ್ತರವಿತ್ತರು. ಆದರೆ ಕೊಯಮತ್ತೂರಿಗೆ ಬರಲು ಲಲಿತ ಬಡಪೆಟ್ಟಿಗೆ ಒಪ್ಪಲಿಲ್ಲ.

"ನಾನೇಕೆ ಬರಲಿ, ಶಿವೂ? ನಾನೆಲ್ಲಿಗೂ ಬರುವುದಿಲ್ಲ"

ಎಂದು ತಕರಾರು ಮಾಡಿದಳು. ಶಿವಸ್ವಾಮಿ ತಾನು ಹಿಡಿದ ಪಟ್ಟನ್ನು ಬಿಡಲಿಲ್ಲ.

"ಸುಮ್ಮನೆ ನನ್ನ ಜೊತೆಯಲ್ಲಿ ಬಾ, ಇಲ್ಲದ ತಕರಾರು ಮಾಡಬೇಡ"

ಎಂದು ರೇಗಾಡಿ ಅವಳನ್ನೂ ಹೊರಡಿಸಿಕೊಂಡು ಹೊರಟ.

ಸುಂದರಂ ಅಯ್ಯರರಿಗೆ ಮೊದಲೇ ಕಾಗದ ಹೋಗಿತ್ತು. ಅವರು ಕಾರು ತೆಗೆದುಕೊಂಡು ಮಗಳೊಡನೆ ಸ್ಟೇಷನ್ನಿಗೆ ಬಂದಿದ್ದರು. ಲಲಿತ ಬರುವ

ವಿಚಾರ ಕನಕಾಂಗಿಗೆ ಗೊತ್ತೇ ಇರಲಿಲ್ಲ. ಶಿವಸ್ವಾಮಿಯ ಹಿಂದೆ ಅವಳು ಇಳಿದದ್ದನ್ನು ಕಂಡು ಕನಕಾಂಗಿಯ ಕಣ್ಣು ಸಂತೋಷದಿಂದ ಅರಳಿತು. ಅವಳು ಹತ್ತಿರ ಹೋಗಿ ಲಲಿತನನ್ನು ಪ್ರೀತಿಯಿಂದ ಅಪ್ಪಿದಳು. ಕನಕಾಂಗಿ ಮದರಾಸಿನಲ್ಲಿ ನೋಡಿದ್ದುದಕ್ಕಿಂತಲೂ ಲಲಿತ ತುಂಬ ಇಳಿದುಹೋಗಿದ್ದಳು.

ಎಲ್ಲರೂ ಕಾರಿನಲ್ಲಿ ಕುಳಿತು ಮನೆಗೆ ತೆರಳಿದರು.

ಸುಂದರಂ ಅಯ್ಯರರು ಅಳಿಯನ ಆಗಮನದ ನಿಮಿತ್ತ ಸೊಗಸಾದ ಅಡುಗೆ ಮಾಡಿಸಿದ್ದರು. ಊಟವಾದ ಮೇಲೆ ಶಿವಸ್ವಾಮಿ ಮಾವನವರ ಹತ್ತಿರ ಸ್ವಲ್ಪಹೊತ್ತು ಮಾತಾಡುತ್ತಾ ಕುಳಿತಿದ್ದು ಅನಂತರ ತನ್ನ ರೂಮಿಗೆ ಎದ್ದು ಹೋದ. ಅವನು ರೂಮಿಗೆ ಹೋದುದನ್ನು ಗಮನಿಸಿದ ಕನಕಾಂಗಿ ಕೈಯಲ್ಲಿ ವೀಳ್ಯದ ತಟ್ಟೆ ಹಿಡಿದು ಹಿಂದೆಯೇ ಬಂದಳು.

ತಟ್ಟೆಯನ್ನು ಮೇಜಿನ ಮೇಲಿಟ್ಟು ನಿಂತ ಮಡದಿಯನ್ನು ಶಿವಸ್ವಾಮಿ ಅಕ್ಕರೆಯಿಂದ ನೋಡಿದ. ಅವಳನ್ನು ಆರು ತಿಂಗಳು ಹೇಗೆ ಬಿಟ್ಟಿದ್ದೆನೋ ಎಂದು ಅವನಿಗನ್ನಿಸಿತು. ಮೆಲ್ಲನೆ ಬಳಿಸಾರಿ ಕೈಹಿಡಿದುಕೊಂಡ. ಅವನ ಸ್ಪರ್ಶಕ್ಕೆ ಅವಳ ಮೈಯಲ್ಲಿ ಪುಲಕವೆದ್ದಿತು. ನಸುನಾಚಿ ತಲೆ ತಗ್ಗಿಸಿದಳು. ಶಿವಸ್ವಾಮಿ ಅವಳ ಕೈಹಿಡಿದು ಕರೆದೊಯ್ದು ಮಂಚದ ಮೇಲೆ ಕುಳ್ಳಿರಿಸಿಕೊಂಡ. ಅವನ ತೋಳು ಅವಳನ್ನು ಬಳಸಿತು.

"ಕನಕಾ, ನಿನ್ನನ್ನು ಇಷ್ಟು ದಿನ ಹೇಗೆ ಬಿಟ್ಟಿದ್ದೆನೇ?"

ಎಂದು ಪ್ರೇಮಭರದಲ್ಲಿ ಮಡದಿಯನ್ನಪ್ಪಿ ಚುಂಬಿಸಿದ.

"ಅದನ್ನು ನೀವೇ ಹೇಳಬೇಕು."

"ಇಂಗ್ಲೆಂಡಿನಲ್ಲಿ ಕಳೆದ ಆರು ತಿಂಗಳೂ ನನಗೆ ನಿನ್ನ ಸ್ಮರಣೆಯೇ ಆಗಿತ್ತು. ಈ ಹುಡುಗಿಯನ್ನು ಏಕೆ ಮದುವೆಯಾದೆನೋ ಎನ್ನಿಸಿಬಿಡಿತು!"

"ನಾನಷ್ಟು ಕೆಟ್ಟವಳೇ?"

"ಹೌದು. ನನ್ನ ಮನಸ್ಸಿಗೆ ಒಂದು ನಿಮಿಷವೂ ಶಾಂತಿ ಕೊಡದ ಹಾಗೆ ಆಕ್ರಮಿಸಿಬಿಟ್ಟಿದ್ದೀ."

ಕನಕಾಂಗಿ ಸಂಭ್ರಮದಿಂದ ನಕ್ಕಳು. ಅವಳ ಹೃದಯ ಹೆಮ್ಮೆಯಿಂದ ಉಬ್ಬಿತ್ತು. ಒಂದು ಕ್ಷಣ ಬಿಟ್ಟು,

"ಅದಕ್ಕೇನೋ ಮದರಾಸಿಗೆ ಬಂದು ಒಂದು ವಾರವಾದರೂ ಇಲ್ಲಿಗೆ ಬರಲು ಮನಸ್ಸಾಗಲಿಲ್ಲ"

ಎಂದು ಕೊಂಕುಧ್ವನಿಯಲ್ಲಿ ನುಡಿದು ಓರೆನೋಟದಿಂದ ಗಂಡನ ಮುಖ ನೋಡಿದಳು.

"ಬರಬೇಕೆಂದೇ ಇದ್ದೆ, ಕನಕಾ. ಸ್ನೇಹಿತರ ಗಲಾಟೆಯಲ್ಲಿ ಎರಡು ದಿನ ತಡವಾಯಿತು."

"ಸದ್ಯ ಈಗಲಾದರೂ ಮನಸ್ಸು ಬಂದಿತಲ್ಲಾ"

ಎಂದು ಅವನ ಭುಜಕ್ಕೆ ತಲೆಯೊರಗಿಸಿದಳು. ಎಣೆಯಿಲ್ಲದ ತೃಪ್ತಿ ಅವಳ ಮನಸ್ಸನ್ನು ತುಂಬಿತ್ತು. ಸವಿಯಾದ ಕಲ್ಪನೆಯಲ್ಲಿ ಮುಳುಗಿ ಸತಿಪತಿಗಳಿಬ್ಬರೂ ಒಂದು ಗಳಿಗೆ ಮಾತು ಮರೆತು ಮೌನವಾಗಿದ್ದರು.

"ಲಲಿತ ಹೇಗಾಗಿ ಹೋಗಿದ್ದಾಳೆ, ನೋಡಿದಿರಾ?"

ಎಂದು ಕನಕಾಂಗಿ ಒಂದು ಕ್ಷಣ ಬಿಟ್ಟು ಕೇಳಿದಳು.

"ನೋಡಿದೆ."

"ಅವಳ ವಿಚಾರ ತಿಳಿಯಿತೆ?"

ಶಿವಸ್ವಾಮಿ ಉತ್ತರ ಕೊಡದೆ ಸುಮ್ಮನೆ ಕುಳಿತಿದ್ದ.

"ಅಮ್ಮ ಏನೂ ಹೇಳಲಿಲ್ಲವೆ?"

"ಹೇಳಿದಳು"

ಎಂದು ಗುಂಭವಾಗಿ ಉತ್ತರವಿತ್ತ. ಆ ವಿಷಯ ಮಾತಾಡಲು ಅವನ ಮನಸ್ಸು ಹಿಂದೆಗೆಯುತ್ತಿದೆಯೆಂದು ಅವಳಿಗೆ ಭಾಸವಾಯಿತು.

"ನನ್ನೊಡನೆ ಹೇಳಬಾರದ ಗುಟ್ಟೆ?"

ಎಂದಳು. ಶಿವಸ್ವಾಮಿ ಉತ್ತರ ಕೊಡದೆ ಅವಳ ಮುಖವನ್ನು ಸುಮ್ಮನೆ ನೋಡಿದ.

"ನನಗೆ ಗೊತ್ತಿಲ್ಲವೆಂದು ತಿಳಿದಿರಾ?"

"ನಿನಗೇನು ಗೊತ್ತು, ಹೇಳು?"

"ನೀವು ಹೇಳದಿದ್ದ ಮೇಲೆ ನಾನೇಕೆ ಹೇಳಲಿ?"

ಎಂದು ನಸು ಕೋಪ ತೋರಿ ತಲೆ ತಗ್ಗಿಸಿದಳು. ಅವಳಿಗೆ ಅಸಮಾಧಾನವಾಗಿದೆಯೆಂದು ಅವನಿಗನ್ನಿಸಿತು. ಅವಳನ್ನು ಸಮಾಧಾನಪಡಿಸಲೆತ್ನಿಸುತ್ತ,

" ಅದೊಂದು ದೊಡ್ಡ ಸಮಸ್ಯೆ, ಕನಕಾ "

ಎಂದು ನೀಳವಾಗಿ ಉಸಿರ್ಗರೆದ.

" ನಾನು ಬಲ್ಲೆ ; ನಿಮಗೆ ತಿಳಿದಿರುವುದಕ್ಕಿಂತ ಹೆಚ್ಚಾಗಿ ನನಗೆ ಗೊತ್ತಿದೆ "

ಎಂದಳು. ಶಿವಸ್ವಾಮಿ ಅವಳ ಮುಖವನ್ನು ಅಚ್ಚರಿಯಿಂದ ನೋಡಿದ. ಅವಳ ಕಣ್ಣಲ್ಲಿ ತುಂಟನಗೆ ಮಿನುಗುತ್ತಿತ್ತು.

" ಹಾಗಾದರೆ ಹೇಳು ಮತ್ತೆ."

" ಇಲ್ಲ, ಹೇಳುವುದಿಲ್ಲ."

" ಏತಕ್ಕೆ ?"

" ಅದು ನನ್ನ ಲಲಿತ ಇಬ್ಬರ ಮಧ್ಯದ ಗುಟ್ಟು. ಯಾರಿಗೂ ಹೇಳುವುದಿಲ್ಲ ವೆಂದು ನಾನು ಅವಳಿಗೆ ಮಾತು ಕೊಟ್ಟಿದ್ದೇನೆ."

" ನನಗೂ ಹೇಳುವುದಿಲ್ಲವೆ ?"

" ಇಲ್ಲ, ನಿಮಗೂ ಹೇಳಬಾರದು."

" ನೀನು ನನ್ನ ಅರ್ಧಾಂಗಿಯಲ್ಲವೆ, ಕನಕಾ ?"

" ಆದರೆ ? _ "

ಎಂದು ಮಾತನ್ನು ಅಷ್ಟಕ್ಕೇ ನಿಲ್ಲಿಸಿ ಅವನ ಮುಖ ನೋಡಿದಳು. ಶಿವಸ್ವಾಮಿ ಅವಳನ್ನು ರಮಿಸುತ್ತ,

" ಹೇಳು ಚಿನ್ನಾ, ನನ್ನೊಡನೆ ಹೇಳಿದರೆ ಯಾರೊಡನೆಯೂ ಹೇಳಿ ದಂತಾಗುವುದಿಲ್ಲ."

" ಅವಳಿಗೆ ಮಾತು ಕೊಟ್ಟುಬಿಟ್ಟಿದ್ದೇನಲ್ಲಾ."

" ಚಿಂತೆಯಿಲ್ಲ, ಹೇಳು. ಈ ಸಮಸ್ಯೆಯನ್ನು ಬಗೆಹರಿಸುವುದು ನಮ್ಮ ಕರ್ತವ್ಯವಲ್ಲವೆ ?"

ಎಂದ. ಅವನ ಮಾತು ಅವಳ ಮನಸ್ಸಿಗಿಳಿಯಿತು. ಅದೂ ನ್ಯಾಯ ವೆಂದು ಅವಳಿಗೂ ತೋರಿತು. ಒಂದು ಗಳಿಗೆ ನೆಲವನ್ನೇ ನೋಡುತ್ತ ಸುಮ್ಮನೆ ಕುಳಿತಿದ್ದಳು. ಬಳಿಕ,

" ನಿಮಗೆ ಸಂಗೀತಗಾರ ಮಧುಸೂದನರು ಗೊತ್ತೆ ?"

" ಗೊತ್ತು."

" ಅವರು "

ಎಂದು ಅರ್ಥಗರ್ಭಿತವಾಗಿ ನಿಲ್ಲಿಸಿದಳು. ಶಿವಸ್ವಾಮಿ ಬೆಕ್ಕಸಬೆರಗಾಗಿ ಅವಳ ಮುಖವನ್ನೇ ನೋಡಿದ. ಲಲಿತ ಮಧುಸೂದನನಲ್ಲಿ ಅನುರಕ್ತಳಾಗಿರ ಬಹುದೆನ್ನುವ ಕಲ್ಪನೆಯೇ ಅವನಿಗಿರಲಿಲ್ಲ. ಕನಕಾಂಗಿ ನಿರೂಪಿಸಿದ ಸಂಗತಿ ಕೇಳಿ ಅವನು ನಿರುತ್ತರನಾಗಿ ಕುಳಿತ.

"ಈಗೇನು ಮಾಡುವುದು?"

ಎಂದು ಕನಕಾಂಗಿ ಕ್ಷಣ ಬಿಟ್ಟು ಕೇಳಿದಳು.

"ಯೋಚನೆ ಮಾಡಬೇಕು. ಆತ ಎಲ್ಲಿದ್ದಾರೋ, ಇದನ್ನು ಕೇಳಿದರೆ ಅಣ್ಣ ಏನೆನ್ನುವರೋ"

ಎಂದು ವಿಚಾರಪರನಾದ. ಅವನ ಮುಖದ ಮೇಲೆ ಮೂಡಿದ ಚಿಂತೆಯ ಗೆರೆಯನ್ನು ಅವಳು ಗಮನಿಸಿ,

"ನೀವು ಏನಾದರೂ ಮಾಡಬೇಕು. ಲಲಿತನ ಸಂಕಟವನ್ನು ನಾನು ನೋಡಲಾರೆ"

ಎಂದು ಕಂಬನಿದುಂಬಿದಳು. ಅವನ ಮನಸ್ಸೂ ಚಿಂತೆಯ ಮಡಿಲಿಗೆ ಬಿದ್ದಿತ್ತು.

೩೦

ಶಿವಸ್ವಾಮಿ ಕೊಯಮುತ್ತೂರಿನಲ್ಲಿ ಮೂರು ದಿವಸ ಇದ್ದು ಬಳಿಕ ಹೆಂಡತಿಯನ್ನೂ ತಂಗಿಯನ್ನೂ ಕರೆದುಕೊಂಡು ಮದರಾಸಿಗೆ ಹಿಂತಿರುಗಿದ.

ಮೂರು ದಿವಸ ತಂದೆಯ ಹತ್ತಿರ ಯಾವ ಪ್ರಸ್ತಾಪವನ್ನೂ ಮಾಡಲಿಲ್ಲ. ವಿಷಯವನ್ನು ಹೇಗೆ ಎತ್ತುವುದೆಂದು ಅವನ ಬುದ್ಧಿ ಯೋಚಿಸುತ್ತಿತ್ತು. ಕೊನೆಗೆ ಒಂದು ಮಧ್ಯಾಹ್ನ ರೂಮಿನಲ್ಲಿ ಅವರೊಬ್ಬರೇ ಇದ್ದ ಸಮಯ ನೋಡಿ ಒಳಗೆ ಹೋದ. ಯಾವುದೋ ಪುಸ್ತಕ ಓದುತ್ತ ಮಲಗಿದ್ದ ಅಯ್ಯರರು ಅವನು ಒಳಗೆ ಬಂದುದನ್ನು ನೋಡಿ ಪುಸ್ತಕವನ್ನು ಮುಚ್ಚಿ ಪಕ್ಕದಲ್ಲಿಟ್ಟರು.

"ಬಾ ಶಿವೂ, ಕುಳಿತುಕೋ. ಬೆಳಗ್ಗೆ ಎಲ್ಲಿ ಕಾಣಲೇ ಇಲ್ಲವಲ್ಲಾ."

"ರಾಜಗೋಪಾಲ್ ಹೇಳಿ ಕಳಿಸಿದ್ದ, ಹೋಗಿದ್ದೆ"

ಎಂದು ಶಿವಸ್ವಾಮಿ ನುಡಿದು ರೂಮಿನ ಬಾಗಿಲನ್ನು ಮುಂದಕ್ಕೆ ಹಾಕಿ ಒಂದು ಕುರ್ಚಿಯನ್ನೆಳೆದುಕೊಂಡು ಅವರ ಹತ್ತಿರ ಕುಳಿತ. ಅವನು ಏನೋ ಮಾತಾಡುವುದಕ್ಕೆ ಬಂದಿರಬಹುದೆಂದು ಅವರು ಸುಲಭವಾಗಿಯೇ ಊಹಿಸಿದರು.

"ಏನು ಸಮಾಚಾರ?"

"ಏನೂ ಇಲ್ಲ; ಲಲಿತನ ವಿಷಯ ಮಾತಾಡೋಣವೆಂದು ಬಂದೆ"

ಎಂದು ಪೀಠಿಕೆ ಹಾಕಿದ. ನಟರಾಜ ಅಯ್ಯರರು ಸುಮ್ಮನಿದ್ದರು.

"ಅವಳ ವಿಷಯ ಏನು ಯೋಚಿಸಿದ್ದೀರಿ, ಅಣ್ಣಾ?"

"ಏನು ಯೋಚಿಸಬೇಕು, ಹೇಳು?"

"ಅವಳ ಮದುವೆಯ ಸಂಗತಿ ನಾನು ಕೇಳುತ್ತಿರುವುದು."

"ಗೊತ್ತಾಯಿತು. ಅವಳಿಗೆ ಮದುವೆ ಬೇಕಾಗಿದೆಯೆ, ಶಿವೂ?"

“ಬೇಕಿಲ್ಲವೆಂದು ಹೇಗೆ ಹೇಳುವುದು?”

“ನಾವು ಮಾಡಿದ ಪ್ರಯತ್ನ ಏನಾಯಿತೆಂದು ನಿನಗೆ ಗೊತ್ತೇ ಇದೆ.”

“ನಿಮ್ಮ ಆಲೋಚನೆಗಳನ್ನು ಅವಳು ಒಪ್ಪದೆ ಇರಬಹುದು.”

“ಹಾಗಾದರೆ ಅವಳ ಆಲೋಚನೆಯೇನು? – ಕಂಡವರನ್ನು ಕಟ್ಟಿಕೊಂಡು ಓಡಿಹೋಗುವುದೇ?”

“ನಾನು ಹಾಗೆ ಹೇಳಲಿಲ್ಲ.”

“ಮತ್ತೇನು ನಿನ್ನ ಮಾತಿನ ಅರ್ಥ?”

ಎಂದು ಮುಖ ಕೆದರಿಕೊಂಡು ಕೇಳಿದರು.

“ನೀವು ಕೋಪಿಸಿಕೊಂಡರೆ ನಾನೇನು ಹೇಳಲಿ, ಅಣ್ಣಾ?”

ಎಂದ. ಅಯ್ಯರರು ಒಂದು ಗಳಿಗೆ ಸುಮ್ಮನಿದ್ದರು. ತಮ್ಮ ಮನಸ್ಸು ಬಹು ಬೇಗ ಕೋಪವಶವಾಗಿತ್ತೆನ್ನುವುದನ್ನು ಅವರೂ ಗ್ರಹಿಸಿದರು. ತಮ್ಮ ಆಗ್ರಹವನ್ನು ಹಿಡಿತದಲ್ಲಿಟ್ಟುಕೊಳ್ಳುತ್ತ,

“ಹೇಳು, ನಿನ್ನ ಆಲೋಚನೆಯನ್ನೂ ಕೇಳೋಣ”

ಎಂದು ಸಮಾಧಾನದ ಧ್ವನಿಯಲ್ಲಿ ನುಡಿದರು. ಶಿವಸ್ವಾಮಿಯ ಬುದ್ಧಿಗೆ ಹೊಸ ಥಾಟಯೊಂದು ಹೊಳೆಯಿತು.

“ವಿದ್ಯೆ ವಿವೇಕ ಅನುಭವಗಳಲ್ಲಿ ನಿಮಗೆ ನಾನು ಸಾಟಿಯಲ್ಲ. ನಿಮಗೆ ನೀತಿಬೋಧೆ ಮಾಡುವ ಶಕ್ತಿ ನನಗಿಲ್ಲ. ಆದರೂ ನನಗೆ ತೋರುವ ಒಂದೆರಡು ಮಾತು ಹೇಳುತ್ತೇನೆ. ನಿಮ್ಮ ಮನಸ್ಸಿಗೆ ಸರಿಯೆಂದು ತೋರಿದರೆ ಒಪ್ಪಬಹುದು. ಲಲಿತನ ಹಿತಚಿಂತನೆ ನಿಮಗಿಂತ ಹೆಚ್ಚಾಗಿ ಯಾರಿಗೂ ಇಲ್ಲ. ಅವಳನ್ನು ಯೋಗ್ಯವಾದ ಕಡೆ ಕೊಟ್ಟು ಮದುವೆ ಮಾಡಬೇಕೆಂದು ಯೋಚಿಸಿದಿರಿ. ನಮ್ಮ ಅಂತಸ್ತಿಗೆ ತಕ್ಕ ಹಾಗೆ ಅವಳು ಸರಿಯಾದ ಒಂದು ಮನೆ ಸೇರಲೆಂದು ನೀವು ಅಪೇಕ್ಷೆ ಪಟ್ಟಿರಿ. ನಮ್ಮ ಹುಡುಗಿ ನೇರವಾಗಲೆಂದು ನಮಗೆ ಅಪೇಕ್ಷೆಯಿರುವುದಿಲ್ಲವೆ? ಅದು ಸಹಜವಾದ ಅಭಿಲಾಷೆ. ಆದರೆ ನಿಮ್ಮ ಏರ್ಪಾಡೊಂದೂ ಅವಳಿಗೆ ಬೇಡವಾಯಿತು. ಅವಳ ಹೃದಯ ಬೇರೆ ಯಾರನ್ನೋ ಸೇರಿತ್ತು. ಅದನ್ನು ತಿಳಿಸಲು ಅವಳು ಅಳುಕಿದಳು. ಅವಳು ಮದುವೆ ಬೇಡವೆಂದದ್ದು ನೋಡಿ ನಿಮಗೆ ಸಿಟ್ಟು ಬಂದಿತು. ಅವಳ ವಿಷಯದಲ್ಲಿ ನಿಮ್ಮ ಮನಸ್ಸನ್ನು ಕಠಿನ ಮಾಡಿಕೊಂಡಿರಿ. ಅವಳ ಕ್ಷೇಮ

ಚಿಂತನೆ ಮನಸ್ಸಿನಲ್ಲಿದ್ದರೂ ಅವಳ ವಿಷಯದಲ್ಲಿ ಅನಾಸಕ್ತಿ ತಾಳಿದಿರಿ. ಈ ಸಂದರ್ಭದಲ್ಲಿ ಹೀಗಾಗುವುದೂ ನ್ಯಾಯವೇ. ನಾನು ಇಲ್ಲವೆನ್ನುವುದಿಲ್ಲ – ”

ಶಿವಸ್ವಾಮಿ ಒಂದು ಗಳಿಗೆ ಮಾತು ನಿಲ್ಲಿಸಿ ತಂದೆಯ ಮುಖ ನೋಡಿದ. ಅವರು ಅವನ ಮಾತನ್ನು ಚಿತ್ತವಿಟ್ಟು ಕೇಳುತ್ತಿರುವಹಾಗಿತ್ತು. ಅವರ ಮುಖದ ಮೇಲೆ ಆಗ್ರಹದ ಚಿಹ್ನೆಯಿರಲಿಲ್ಲ.

“ನಾನೊಂದು ಪ್ರಶ್ನೆ ಕೇಳುತ್ತೇನೆ, ಅಣ್ಣಾ. ಕೋಪಿಸಿಕೊಳ್ಳದೆ ಸಾವಧಾನವಾಗಿ ಉತ್ತರ ಹೇಳಿ. ಲಲಿತನ ಮನಸ್ಸು ಬೇರೆ ಕಡೆ ನೆಲಸಿದ್ದು ತಪ್ಪೇ?”

ಅವನ ಧ್ವನಿಯಲ್ಲಿ ಉದ್ವೇಗವಿತ್ತು. ನಟರಾಜ ಅಯ್ಯರರು ಯಾವ ಉತ್ತರವನ್ನೂ ಕೊಡದೆ ಸುಮ್ಮನೆ ಅವನ ಮುಖ ನೋಡಿದರು.

“ಹೇಳಿ, ಅಣ್ಣಾ ?”

“ನಿನಗೆ ತಪ್ಪಲ್ಲವೆಂದು ತೋರಬಹುದು, ಶಿವೂ. ಆದರೆ ನನಗೆ ಹಾಗೆ ತೋರುವುದಿಲ್ಲ.”

“ಏತಕ್ಕೆ ತೋರುವುದಿಲ್ಲ? ದಯವಿಟ್ಟು ಹೇಳಿ.”

“ಇದು ನನ್ನ ಗೌರವದ ಪ್ರಶ್ನೆ; ಮನೆತನದ ಗೌರವದ ಪ್ರಶ್ನೆ. ಅವಳ ನಡತೆಯಿಂದ ನಮ್ಮ ವಂಶದ ಕೀರ್ತಿ ಉಳಿಯುವುದೆಂದು ಭಾವಿಸಿದ್ದೀಯಾ ?”

“ನಾನು ಬಲ್ಲೆ. ನಿಮ್ಮ ಮನಸ್ಸು ಯಾವ ದಿಕ್ಕಿನಲ್ಲಿ ಹರಿಯುತ್ತಿದೆಯೆನ್ನುವುದು ನನಗೆ ಗೊತ್ತು. ಲಲಿತ ಯಾವನೋ ಅಯೋಗ್ಯನ ಸ್ನೇಹ ಬೆಳಸಿ, ಏನೋ ಅಚಾತುರ್ಯ ಮಾಡಿಕೊಂಡಿರಬಹುದೆಂದು ನೀವು ಚಿಂತಿಸುತ್ತಿದ್ದೀರಿ. ಆದರೆ ಹಾಗಿಲ್ಲವೆಂದು ನಾನು ಭರವಸೆ ಕೊಟ್ಟರೆ?”

“ಯಾವುದು ಹಾಗಿಲ್ಲ?”

“ಅವಳ ಮನಸ್ಸು ನೀವು ಭಾವಿಸಿರುವಂತೆ ಅಪಾತ್ರದಲ್ಲಿ ಪ್ರವರ್ತಿಸಿಲ್ಲ.”

“ಮತ್ತಾರಲ್ಲಿ ಪ್ರವರ್ತಿಸಿದೆ?”

ಶಿವಸ್ವಾಮಿ ಸ್ವಲ್ಪ ಹೊತ್ತು ಸುಮ್ಮನಿದ್ದ. ಹೇಳಲೋ ಬೇಡವೋ ಎಂದು ಅವನ ಮನಸ್ಸು ಹಿಂದೆ ಮುಂದೆ ನೋಡುತ್ತಿತ್ತು. ಒಂದು ಕ್ಷಣ ಬಿಟ್ಟು,

" ಆ ವ್ಯಕ್ತಿ ನಿಮಗೂ ಗೊತ್ತು; ಆತನನ್ನು ನೀವೂ ಬಲ್ಲಿರಿ."

" ನನಗೂ ಗೊತ್ತೆ ? - ಯಾರು ಹೇಳು ?"

" ಮಧುಸೂದನ."

" ಯಾರು, ಗಾಯಕ ಮಧುಸೂದನನೇ ?"

ಎಂದು ಮಲಗಿದ್ದವರು ಥಿಗ್ಗನೆ ಎದ್ದು ಕುಳಿತರು. ಅವರ ಮುಖದ ಮೇಲೆ ಅಚ್ಚರಿ ಮೂಡಿತು.

" ಇದು ನಿಜವೇ, ಶಿವೂ ?"

" ಹೌದು, ನಿಜ."

" ನಿನಗೆ ಹೇಗೆ ಗೊತ್ತಾಯಿತು ?"

" ನನ್ನ ಹೆಂಡತಿ ಹೇಳಿದಳು."

" ಕನಕಾಂಗಿ ಹೇಳಿದಳೇ ?"

ಎಂದು ವಿಚಾರಪರರಾಗಿ ಕುಳಿತರು. ಅವರ ಆಲೋಚನೆಗೆ ಭಂಗ ತರಬಾರದೆಂದು ಅವನೂ ಕೈಕಟ್ಟಿ ಸುಮ್ಮನೆ ಕುಳಿತುಕೊಂಡ.

ನಟರಾಜ ಅಯ್ಯರರು ಅವರದೇ ಆದ ಆಲೋಚನಾ ಪ್ರಪಂಚದಲ್ಲಿ ಮುಳುಗಿಹೋದರು. ಮಧುಸೂದನನಿಗೂ ಲಲಿತನಿಗೂ ಸ್ನೇಹಸಂಪರ್ಕ ವಿರಬಹುದೆನ್ನುವ ಭಾವನೆಯೇ ಅವರಿಗೆ ಬಂದಿರಲಿಲ್ಲ. ಅವರ ಮನಸ್ಸು ಹಿಂದಕ್ಕೆ ಹಾರಿ ಮಧುಸೂದನನ ಪರಿಚಯದ ಮೊದಲ ದಿನಗಳನ್ನು ಸ್ಮರಣೆಗೆ ತಂದು ಕೊಂಡಿತು. ರಸಿಕ ರಂಜಿನೀ ಸಭೆಯಲ್ಲಿ ಅವನ ಸಂಗೀತವಾದದ್ದು, ಅವನನ್ನು ತಾವು ಮನೆಗೆ ಆಹ್ವಾನಿಸಿದ್ದು, ಶಿವಸ್ವಾಮಿಯ ಮದುವೆಗೆ ಅವನು ಬಂದಿದ್ದುದು, ಅನಂತರ ಎಲ್ಲರೂ ಒಟ್ಟಿಗೆ ಮದರಾಸಿಗೆ ಹಿಂತಿರುಗಿದ್ದು, ಮಧುಸೂದನ ತಮ್ಮ ಮನೆಯಲ್ಲಿ ನಾಲ್ಕು ದಿನ ನಿಂತದ್ದು, ಬಳಿಕ ತಮ್ಮ ಮೈಸೂರು ಪ್ರವಾಸ, ಅಲ್ಲಿ ಅವನು ನೀಡಿದ ಆದರಾತಿಥ್ಯ, ಕನ್ನಂಬಾಡಿ ಶಿವಸಮುದ್ರಗಳ ಪ್ರವಾಸ, ಲಲಿತ ಒಬ್ಬಳನ್ನೇ ಮೈಸೂರಿನಲ್ಲಿ ಬಿಟ್ಟು ತಾವು ಗಂಡ ಹೆಂಡಿರಿಬ್ಬರೇ ನಂಜನ ಗೂಡಿಗೆ ಹೋಗಿ ಬಂದದ್ದು - ಎಲ್ಲವೂ ಅವರ ಮನಸ್ಸಿನ ಪಟಲದ ಮೇಲೆ ಚಿತ್ರಮಾಲೆಯಾಗಿ ಸುಳಿದವು. ಇದರಲ್ಲೆಲ್ಲಾ ಅವರಿಗೆ ವಿಶೇಷ ಅರ್ಥ

ಹೋಳಿಯಿತು. ಲಲಿತ ಮಧುಸೂದನ ಏಕಾಂತದಲ್ಲಿ ಸಂಧಿಸಲು ಬೇಕಾದಷ್ಟು ಅವಕಾಶವಿತ್ತು.

“ ಈಗೇನು ಮಾಡುವುದು, ಅಣ್ಣಾ ?”

ಗತಾವಲೋಕನದಲ್ಲಿ ಮುಳುಗಿದ್ದ ಅಯ್ಯರರನ್ನು ಶಿವಸ್ವಾಮಿಯ ಪ್ರಶ್ನೆ ಎಚ್ಚರಿಸಿತು.

“ ನನಗೆ ಸ್ವಲ್ಪ ಯೋಚನೆಗೆ ಅವಕಾಶ ಕೊಡು, ಶಿವೂ ”

ಎಂದು ಅಯ್ಯರರು ನೀಳವಾಗಿ ಉಸಿರ್ಗರೆದರು.

“ ನಿಧಾನವಾಗಿ ಯೋಚನೆ ಮಾಡಿ ಹೇಳಿ, ಅಣ್ಣಾ. ಆದರೆ ನನ್ನದೊಂದು ಪ್ರಾರ್ಥನೆ ಇದೆ.”

“ ಏನು ಹೇಳು ?”

“ ಲಲಿತನ ದೇಹಸ್ಥಿತಿ ಅವಳ ಮನಸ್ಸಿನಂತೆಯೇ ಕೆಟ್ಟಿದೆ. ಅವಳನ್ನು ನೋಡಿದವರು ಯಾರೂ ಅವಳು ಹಿಂದಿನ ಲಲಿತನೆಂದು ಹೇಳುವ ಹಾಗಿಲ್ಲ. ಊರಿಗೆ ಬಂದ ದಿವಸ ಅವಳನ್ನು ನೋಡಿ ನನಗೇ ಕರುಳು ಕಿತ್ತುಬರುವ ಹಾಗಾಯಿತು. ಅವಳಿಗೆ ಅನೀಮಿಯಾ ಬಂದಿದೆ, ಅಣ್ಣಾ. ಎದ್ದು ಓಡಾಡುವ ತ್ರಾಣವೂ ಅವಳಿಗಿಲ್ಲ. ಹೀಗೇ ಬಿಟ್ಟರೆ ಅವಳು ನಮ್ಮ ಕೈಗೆ ಸಿಕ್ಕುವುದಿಲ್ಲ”

ಎಂದ. ಅವನ ಕಂಠ ಗದ್ಗದವಾಗಿದ್ದುದನ್ನು ನಟರಾಜ ಅಯ್ಯರರು ಗಮನಿಸಿದರು. ಅವರ ಗಂಟಲಿನಲ್ಲೂ ಒಂದು ಚೆಂಡು ತುರುಕಿದ ಹಾಗಿತ್ತು.

“ ನೀವು ದೊಡ್ಡ ಮನಸ್ಸು ಮಾಡಬೇಕು, ಅಣ್ಣಾ. ಮಧುಸೂದನ ಐಶ್ವರ್ಯವಂತನಲ್ಲದಿರಬಹುದು ; ಆದರೆ ಚಿಲ್ಲರೆ ವ್ಯಕ್ತಿಯಲ್ಲ. ಆತನೂ ದೊಡ್ಡ ಕಲಾವಿದ, ಕೀರ್ತಿಶಾಲಿ. ಮುಂದೆ ಇನ್ನೂ ಪ್ರಶಸ್ತಿಗೆ ಬರುವ ಅವಕಾಶವಿದೆ. ಸಮಾಜದಲ್ಲಿ ಆತನಿಗೊಂದು ಗಣ್ಯ ಸ್ಥಾನವಿದೆ. ಲಲಿತನ ಅಭಿಮಾನವೂ ಕಲೆಯ ಕಡೆಯೇ. ಅವರಿಬ್ಬರ ಜೋಡಿ ಸರಿಹೋಗತ್ತೆ. ಲಲಿತ ಮಧುಸೂದನನ ಕೈ ಹಿಡಿದರೆ ತಪ್ಪೇನೂ ಇಲ್ಲ. ಅದರಲ್ಲಿ ಯಾವ ಆಕ್ಷೇಪಣೆಯೂ ಬರುವ ಹಾಗಿಲ್ಲ. ನಾವು ಧೈರ್ಯವಾಗಿ ಈ ಕೆಲಸ ಮಾಡಬೇಕು, ಅಷ್ಟೆ.”

“ ನನಗೆ ಒಂದೆರಡು ದಿನ ಅವಕಾಶ ಕೊಡು, ಶಿವೂ. ನನ್ನ ಬುದ್ಧಿ ಈಗ ಏನನ್ನೂ ಯೋಚಿಸುವ ಸ್ಥಿತಿಯಲ್ಲಿಲ್ಲ”

ಎಂದರು. ಸಂಪ್ರದಾಯದ ಜಾಡಿನಲ್ಲಿ ಬೆಳೆದು ಬಂದಿದ್ದ ಅವರ ಬುದ್ಧಿ ನಿಶ್ಚಯಾನಿಶ್ಚಯಗಳ ನಡುವೆ ತೂಗುತ್ತಿತ್ತು.

" ಹಾಗೇ ಆಗಲಿ, ಅಣ್ಣಾ "

ಎಂದು ಶಿವಸ್ವಾಮಿ ರೂಮಿನಿಂದೆದ್ದು ಹೊರಗೆ ಬಂದ. ಫಲಾಫಲವೇನೇ ಇರಲಿ, ತಾನು ಮಾಡಬೇಕಾದ ಕೆಲಸವನ್ನು ಮಾಡಿದೆನೆನ್ನುವ ತೃಪ್ತಿ ಅವನಿಗಿತ್ತು.

೩೧

"ಸಲಾಂ, ಸಾಬ್."

ಬೆಳಗ್ಗೆ ಎದ್ದು ಸುತ್ತಾಡಿಕೊಂಡು ಬರಲೆಂದು ಹೊರಹೊರಟ ಮಧು ಸೂದನ ಹಠಾತ್ತಾಗಿ ಬೆನ್ನ ಹಿಂದೆ ಧ್ವನಿಯಾದುದನ್ನು ಕೇಳಿ ನಿಂತು ತಿರುಗಿ ನೋಡಿದ. ತನ್ನನ್ನು ಹಿಂಬಾಲಿಸಿದ್ದ ಹವಿಾದನನ್ನು ಕಂಡು ಅವನ ಮೈಮೇಲೆ ಮುಳ್ಳೆದ್ದಿತು; ಮನಸ್ಸು ಜುಗುಪ್ಸೆಯಿಂದ ಮುದುರಿಕೊಂಡಿತು.

"ಏನು ಹವಿಾದ್?"

ಎಂದು ಕೇಳಿದ. ಅವನ ಧ್ವನಿಯಲ್ಲಿ ಅಸಹನೆ ತುಡುಕುತ್ತಿತ್ತು.

"ಏನೂ ಇಲ್ಲ. ಸಾಮಿಯವರನ್ನೇ ಹುಡುಕಿಕೊಂಡು ಬಂದೆ."

"ನನ್ನನ್ನು ಹುಡುಕಿಕೊಂಡು ಬರುವ ಕೆಲಸವೇನಿತ್ತು?"

"ತಮ್ಮ ಕೈಯಲ್ಲಿ ಮಾತಾಡಬೇಕಿತ್ತು."

"ನನ್ನ ಹತ್ತಿರ ಮಾತಾಡುವುದೇನಿದೆ?"

"ಅಮ್ಮಾವರು ಕಳಿಸಿದರು."

ಸುಪ್ತ ಕೋಪದಲ್ಲಿ ಮಧುಸೂದನನ ಮೂಗಿನ ಹೊಳ್ಳೆಗಳು ಅದುರಿದವು; ಅವನ ಮುಖಕ್ಕೆ ರಕ್ತವಡರಿತು.

"ನಿಮ್ಮ ಅಮ್ಮಾವರ ಹತ್ತಿರ ನನಗೇನೂ ಕೆಲಸವಿಲ್ಲವೆಂದು ಹೇಳು"

ಎಂದು ಸರಸರನೆ ಹೊರಟುಬಿಟ್ಟ. ಮಧುಸೂದನನಿಗೆ ಅವನೊಡನೆ ಮಾತು ಬೇಕಾಗಿರಲಿಲ್ಲ.

ಮುಂದಿನ ಚೌಕ ತಲಪಿ ನಿಂತು ಅನೈಚ್ಛಿಕವಾಗಿ ತಿರುಗಿ ನೋಡಿದಾಗ ಹವಿಾದ್ ಸದ್ದಿಲ್ಲದೆ ಹಿಂಬಾಲಿಸಿ ಬರುತ್ತಿದ್ದುದು ಕಾಣಿಸಿತು. ಮಧುಸೂದನ ನಿಗೆ ಮತ್ತೆ ಸಿಟ್ಟೇರಿತು.

"ನಾನು ಹೇಳಿದ್ದು ನಿನಗೆ ಅರ್ಥವಾಗಲಿಲ್ಲವೆ? ಹೊರಟುಹೋಗು" ಎಂದು ಕರ್ಕಶ ಧ್ವನಿಯಲ್ಲಿ ನುಡಿದ. ಹವಿಾದ್ ಕೈ ಜೋಡಿಸುತ್ತ, "ಸಾಮಿಯವರು ಸಿಟ್ಟಾಗಬಾರದು."

"ಸುಮ್ಮನೆ ಹೊರಟುಹೋಗು. ನನ್ನ ಹತ್ತಿರ ಹೆಚ್ಚು ಮಾತಾಡಬೇಡ."

ಹವಿಾದ್ ಒಂದು ರೆಪ್ಪೆಯನ್ನೂ ಹೊಯ್ಯದೆ ಮಧುಸೂದನನ ಮುಖವನ್ನು ದಿಟ್ಟಿಸಿ ನೋಡಿದ.

"ಅಮ್ಮಾವರು ಆಸ್ಪತ್ರೆಯಲ್ಲಿದ್ದಾರೆ. ಸಾಮಿಯವರನ್ನು ನೋಡಬೇಕೆನ್ನುತ್ತಾರೆ"

"ಯಾವ ಅಮ್ಮಾವರು?"

"ಚಿಕ್ಕವರು, ರೋಷನ್‌ಬಾಯಿ."

ಆ ಮಾತು ಮಧುಸೂದನನ ಮನಸ್ಸಿನ ಮೇಲೆ ಮಿಂಚಿನಂಥ ಪರಿಣಾಮವನ್ನುಂಟುಮಾಡಿತು. ಅವನು ಹವಿಾದನನ್ನು ಮೇಲಿನಿಂದ ಕೆಳಗಿನವರೆಗೂ ನೋಡುತ್ತ ನಿಂತುಕೊಂಡ.

"ಅವರಿಗೇನಾಗಿದೆ?"

"ನಡೆಯಿರಿ, ಹೇಳುತ್ತೇನೆ."

ಅವನು ಹೇಳುವುದೇನೂ ಹೆಚ್ಚಾಗಿರಲಿಲ್ಲ. ಹಿಂದಿನ ಸಂಜೆ ಎಲ್ಲೋ ಹೋಗಿಬರುತ್ತಿದ್ದ ರೋಷನ್ ಪರೇಲಿನಲ್ಲಿ ಒಂದು ಅಂಗಡಿಯ ಮುಂದೆ ಸ್ವಲ್ಪ ಹೊತ್ತು ಕಾರು ನಿಲ್ಲಿಸಿದ್ದಳು. ಡ್ರೈವರ್ ಏನೋ ಸಾಮಾನು ತರಲು ಅಂಗಡಿಯೊಳಗೆ ಹೋಗಿದ್ದ. ಇದ್ದಕ್ಕಿದ್ದ ಹಾಗೆ ಪಕ್ಕದ ಗಲ್ಲಿಯಿಂದ ಯಾರೋ ಓಡಿಬಂದು ಬಾಕುವಿನಿಂದ ರೋಷನ್ನಳ ಎದೆಗೆ ಬಲವಾಗಿ ತಿವಿದು ಓಡಿಹೋಗಿದ್ದರು. ಡ್ರೈವರ್ ಬಂದು ನೋಡಿದಾಗ ರೋಷನ್ ಕುಳಿತಲ್ಲೇ ಕುಸಿದು ಬಿದ್ದಿದ್ದಳು. ಅವಳ ಎದೆಯ ಭಾಗವೆಲ್ಲ ರಕ್ತದಿಂದ ತೊಯ್ದು ಹೋಗಿತ್ತು. ಡ್ರೈವರಿಗೆ ಏನೂ ತೋರದೆ ಗಾಬರಿಯಲ್ಲಿ ಕಾರನ್ನು ವೇಗವಾಗಿ ಮನೆಗೆ ತೆಗೆದುಕೊಂಡು ಬಂದುಬಿಟ್ಟಿದ್ದ. ಹತ್ತು ನಿಮಿಷದಲ್ಲಿ ಫಾರ್ಮಸಿಯ ಡಾಕ್ಟರು ಬಂದು ಪರೀಕ್ಷಿಸಿ ಒಂದು ಇಂಜೆಕ್ಷನ್ ಕೊಟ್ಟು ಪ್ರಥಮ ಚಿಕಿತ್ಸೆ ನಡೆಸಿದ್ದರು.

"ಅಪಾಯವಾಗಿದೆ, ಆಸ್ಪತ್ರೆಗೆ ಸೇರಿಸಿ"

ಎಂದು ತಾವೇ ಹೋಗಿ ಜೆ. ಜೆ. ಆಸ್ಪತ್ರೆಗೆ ಆಂಬುಲೆನ್ಸಿಗೆ ಫೋನ್

ಮಾಡಿ ಬಂದಿದ್ದರು. ಕಾಲು ಘಂಟೆಯಲ್ಲಿ ಆಂಬುಲೆನ್ಸ್ ಬಂದು ರೋಷನ್ನಳನ್ನೂ ಅನ್ವರ್‌ಬಾಯಿಯನ್ನೂ ಆಸ್ಪತ್ರೆಗೆ ಕರೆದೊಯ್ದಿತ್ತು. ಮಿತಿಮೀರಿದ ರಕ್ತಸ್ರಾವದಿಂದ ರೋಷನ್ ನಿತ್ರಾಣವಾಗಿದ್ದಳು. ತಡೆಯಲಾರದ ವೇದನೆಯಲ್ಲಿ ಅವಳ ದೇಹ ತತ್ತರಿಸುತ್ತಿತ್ತು. ಆಸ್ಪತ್ರೆ ತಲಪುವ ವೇಳೆಗೆ ಅವಳಿಗೆ ನಾಲ್ಕು ಸಲ ಜ್ಞಾನ ಬಂದು ಬಂದು ಹೋಗಿತ್ತು.

ಸರ್ಜನ್ ಖಾನೋಳ್ಕರರೇ ಬಂದು ಚಿಕಿತ್ಸೆಗೆ ನಿಂತರು. ಮೊದಲು ಎರಡು ಇಂಜೆಕ್ಷನ್ ಕೊಟ್ಟು ಬಳಿಕ ಶಸ್ತ್ರ ಚಿಕಿತ್ಸೆಗೆ ತೊಡಗಿದರು. ದೇಹಕ್ಕೆ ಧಾರಾಳವಾಗಿ ಗ್ಲೂಕೋಸ್ – ರಕ್ತ ಹೋಗುತ್ತಲೇ ಇದ್ದವು. ಶಸ್ತ್ರ ಚಿಕಿತ್ಸೆ ಮುಗಿಸಿ, ರೋಗಿಯ ಪ್ರತಿಕ್ರಿಯೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಿರಬೇಕೆಂದು ಡ್ಯೂಟಿ ಡಾಕ್ಟರಿಗೆ ತಿಳಿಸಿ ಹೊರಟುಹೋದರು.

ರಾತ್ರಿ ಹನ್ನೆರಡು ಘಂಟೆಗೆ ರೋಷನ್ನಳಿಗೆ ಚೆನ್ನಾಗಿ ಜ್ಞಾನ ಬಂದಿತು. ಅವಳ ನಾಲಗೆ ಏನನ್ನೋ ತೊದಲುತ್ತಿತ್ತು. ಹತ್ತಿರದಲ್ಲೇ ಕುಳಿತಿದ್ದ ಅನ್ವರ್ ಬಾಯಿ ಅವಳ ಹಣೆಯನ್ನು ಮೃದುವಾಗಿ ನೇವರಿಸುತ್ತ,

"ಏನು ಬೇಕು, ಕಂದಾ?"

ಎಂದು ಕೇಳಿದಳು. ಎವೆ ಮುಚ್ಚುತ್ತಿದ್ದ ರೋಷನ್ನಳ ಕಣ್ಣು ತಾಯಿಯ ಮುಖದ ಮೇಲೆ ನೆಲಸಿತು.

"ಅವರನ್ನು ನೋಡಬೇಕು, ಅವರನ್ನು ನೋಡಬೇಕು."

"ಯಾರನ್ನು ನೋಡಬೇಕು, ಮಗೂ?"

ಎಂದು ಅನ್ವರ್‌ಬಾಯಿ ಅವಳ ಮುಖದ ಹತ್ತಿರ ಕಿವಿಯಿಟ್ಟು ಕೇಳಿದಳು.

"ಮಧುಸೂದನ ಅವರಿಗೆ ಹೇಳಿ ಕಳಿಸು"

ಎಂದು ಕ್ಷೀಣವಾದ ಸ್ವರದಲ್ಲಿ ನುಡಿದು ಕಣ್ಣು ಮುಚ್ಚಿದಳು. ಅನ್ವರ್ ಬಾಯಿ ತಕ್ಷಣ ಹಮಾಲನನ್ನು ಅಟ್ಟಿದ್ದಳು. ಆದರೆ ಆ ನಡುರಾತ್ರಿಯಲ್ಲಿ ಅವನು 'ವಿಜಯ ವಿಲಾಸ'ಕ್ಕೆ ಬಂದು ಹುಡುಕುವುದು ಸಾಧ್ಯವಿರಲಿಲ್ಲ. ಬೆಳಗಾಗುವುದನ್ನೇ ಕಾಯುತ್ತ ಕೂಡಬೇಕಾಯಿತು.

ಹಮಾಲನ ಬಾಯಲ್ಲಿ ಈ ಸಂಗತಿ ಕೇಳಿ ಮಧುಸೂದನನ ಎದೆ ಝಲ್ಲೆಂದಿತು.

"ನಡಿ ಹೋಗೋಣ"

ಎಂದು ಅವನು ಆತಂಕದಿಂದ ನುಡಿದ. ಇಬ್ಬರೂ ಮಾತಿಲ್ಲದೆ ಟ್ಯಾಕ್ಸಿ ಮಾಡಿಕೊಂಡು ಹೊರಟರು.

ಆಸ್ಪತ್ರೆ ತಲಪಿದಾಗ ಎಂಟು ಘಂಟೆಯಾಗಿತ್ತು. ಯಾವೆಡೆಯೂ ಸದ್ದಿರಲಿಲ್ಲ. ಡಾಕ್ಟರುಗಳು, ನರ್ಸುಗಳು, ಆಯಾಗಳು ರೂಮಿನಿಂದ ರೂಮಿಗೆ ಓಡಾಡುತ್ತಿದ್ದರು. ಹವಿಾದ್ ವರಾಂಡದ ಕೊನೆಯಲ್ಲಿದ್ದ ಸ್ಪೆಷಲ್ ವಾರ್ಡಿಗೆ ಮಧುಸೂದನನನ್ನು ಕರೆತಂದ.

ಏಳಲಾಗದೆ ಚಕ್ರದ ಕುರ್ಚಿಯಲ್ಲಿ ಕುಳಿತಿದ್ದ ಅನ್ವರ್‌ಬಾಯಿ ಮಧುಸೂದನ ರೂಮಿನೊಳಗೆ ಪ್ರವೇಶಿಸಿದುದನ್ನು ಗಮನಿಸಿದಳು. ಅವಳ ಬಟ್ಟಲಂಥ ಕಣ್ಣುಗಳಲ್ಲಿ ನೀರು ತುಂಬಿತು.

"ನೋಡಿ"

ಎಂದು ಮಂಚದ ಕಡೆ ಕೈತೋರಿಸಿ ಒತ್ತರಿಸಿ ಬಂದ ದುಃಖವನ್ನು ತಡೆಯಲಾರದೆ ಮುಖಕ್ಕೆ ಸೆರಗು ಮುಚ್ಚಿಕೊಂಡು ರೋದಿಸತೊಡಗಿದಳು.

ರೋಷನ್ ನಿದ್ದೆ ಮಾಡುವಂತೆ ಅರೆಗಣ್ಣು ಮುಚ್ಚಿ ಮಲಗಿದ್ದಳು. ಬಿಳಿಯ ದುಪ್ಪಟಿ ಅವಳ ಕುತ್ತಿಗೆಯವರೆಗೂ ಮುಚ್ಚಿತ್ತು. ಎಡಗೈಯನ್ನು ಎದೆಯ ಮೇಲಿಟ್ಟುಕೊಂಡಿದ್ದಳು. ಬಲತೋಳು ಪಕ್ಕದಲ್ಲಿ ಉದ್ದಕ್ಕೂ ಹರಿದು ಬಿದ್ದಿತ್ತು. ಮೇಲೆ ಮೇಲೆ ಹತ್ತಿ ಬರುತ್ತಿದ್ದ ಉಸಿರಿಗೆ ಅವಳ ಮೈಯೆಲ್ಲ ಕಂಪಿಸುತ್ತಿತ್ತು. ಸುಂದರವಾಗಿದ್ದ ಅವಳ ಮುಖ ಅತೀವ ವೇದನೆಯಲ್ಲಿ ಮುಳುಗಿ ಮ್ಲಾನವಾಗಿತ್ತು. ನೀಳವಾಗಿದ್ದ ಅವಳ ಕೇಶರಾಶಿ ದಿಂಬಿನ ಮೇಲೆ ಅಸ್ತವ್ಯಸ್ತವಾಗಿ ಹರಡಿಕೊಂಡಿತ್ತು.

ಅವಳನ್ನು ನೋಡಿ ಮಧುಸೂದನನಿಗೆ ಕರುಳು ಕಿತ್ತುಬರುವ ಹಾಗಾಯಿತು. ಮಂಚದ ಪಕ್ಕದಲ್ಲಿ ಒಂದು ಗಳಿಗೆ ಸುಮ್ಮನೆ ನಿಂತುಕೊಂಡ. ಬಳಿಕ ಪಕ್ಕದಲ್ಲಿದ್ದ ಡಾಕ್ಟರ ಕಡೆ ತಿರುಗಿ,

"ನಿದ್ದೆಯೇ?"

ಎಂದು ತಗ್ಗಿದ ಧ್ವನಿಯಲ್ಲಿ ಕೇಳಿದ.

"ಇಲ್ಲ, ಮತ್ತು. ಮಾರ್ಫಿಯ ಕೊಟ್ಟದ್ದೇವೆ."

"ಸ್ಥಿತಿ ಹೇಗಿದೆ, ಡಾಕ್ಟರೇ?"

ಡಾಕ್ಟರು ನಿಸ್ಸಾರವಾಗಿ ತುಟಿ ಓರೆಮಾಡಿ ತಲೆ ಅಲ್ಲಾಡಿಸಿದರು.

“ ಏನೂ ಪ್ರಯೋಜನವಿಲ್ಲ. ಶ್ವಾಸಕೋಶ ಎರಡು ಕಡೆ ಛಿದ್ರವಾಗಿದೆ, ಹೃದಯಕ್ಕೆ ಆಘಾತವಾಗಿದೆ. ವಿಪರೀತ ರಕ್ತಸ್ರಾವವಾಗಿದೆ.”

“ ಬದುಕುವ ಆಸೆಯಿಲ್ಲವೆ ?”

“ ಹೇಗೆ ಹೇಳುವುದು ? ನಾವೂ ಕೈಲಾದುದನ್ನೆಲ್ಲಾ ಮಾಡುತ್ತಿದ್ದೇವೆ ?”

ಎಂದು ನುಡಿದರು. ರೋಷನ್ ತಲೆ ಅಲುಗಿಸಿದ್ದನ್ನು ನೋಡಿ ಮಧುಸೂದನ ಅವಳ ಮಂಚದ ಹತ್ತಿರ ಕುರ್ಚಿ ಎಳೆದುಕೊಂಡು ಕುಳಿತ. ಐದು ನಿಮಿಷ ಸ್ಥಿತಿಯಲ್ಲಿ ಯಾವ ಬದಲಾವಣೆಯೂ ಆಗಲಿಲ್ಲ. ಬಳಿಕ ರೋಷನ್ ನಾಲ್ಕಾರು ಸಲ ರೆಪ್ಪೆ ಬಡಿದು ನಿಧಾನವಾಗಿ ಕಣ್ಣು ತೆರೆದಳು.

“ ಎಚ್ಚರವಾಗುತ್ತಿರುವ ಹಾಗಿದೆ ”

ಎಂದು ನುಡಿದು ಡಾಕ್ಟರ್ ಅವಳ ತಲೆಯ ಹತ್ತಿರ ಬಂದು ನಿಂತು ಕೊಂಡರು. ರೋಷನ್ನಳಿಗೆ ಪೂರ್ತಿ ಜ್ಞಾನ ಬಂದಂತಿತ್ತು. ಅವಳು ಮೆಲ್ಲನೆ ತಲೆ ಹೊರಳಿಸಿ ಪಕ್ಕದಲ್ಲಿದ್ದ ಮಧುಸೂದನನನ್ನು ನೋಡಿದಳು. ನಿಸ್ತೇಜಕವಾದ ನಗೆ ಅವಳ ತುಟಿಯ ಮೇಲೆ ಮೂಡಿತು.

“ ಬಂದಿರಾ ?”

ಎಂದು ಉಸಿರಿಲ್ಲದ ಉಸಿರಿನಲ್ಲಿ ನುಡಿದಳು. ಕಣ್ಣುಗಳಲ್ಲಿ ತಟಕ್ಕನೆ ನೀರು ತುಂಬಿತು. ಅವಳ ನಡುಗುವ ಹಸ್ತ ಅವನನ್ನು ಮುಟ್ಟಲು ಕಾತರಿಸು ತ್ತಿತ್ತು. ಮಧುಸೂದನ ತನ್ನ ಕರ್ಚೀಫಿನಿಂದ ಅವಳ ಕಣ್ಣನ್ನು ಮೃದುವಾಗಿ ಒರಸುತ್ತ,

“ ಅಳಬೇಡ ಚಿನ್ನಾ, ಆಯಾಸಪಟ್ಟುಕೊಳ್ಳಬೇಡ ”

ಎಂದು ಅವಳು ತನ್ನೆಡೆಗೆ ಚಾಚಿದ ಹಸ್ತವನ್ನು ಭದ್ರವಾಗಿ ಹಿಡಿದು ಕೊಂಡ. ಅವನ ಕಣ್ಣಿಗೂ ನೀರು ತೆರೆ ಹಾಕುತ್ತಿತ್ತು. ಡಾಕ್ಟರು ಸಂದರ್ಭವನ್ನು ಗಮನಿಸಿ ಹೊರಗೆ ಕಾಲ್ದೆಗೆಯುತ್ತಾ,

“ ಹೆಚ್ಚು ಮಾತಾಡಿಸಿ ಆಯಾಸ ಪಡಿಸಬೇಡಿ ”

ಎಂದು ಎಚ್ಚರಿಸಿ ಹೊರಟುಹೋದರು. ರೋಷನ್ ಮಧುಸೂದನನ ಮೇಲೆ ನೆಟ್ಟ ತನ್ನ ದೃಷ್ಟಿಯನ್ನು ಕೀಳಲಾರದೆ,

“ ನನ್ನನ್ನು ಮನ್ನಿಸುವಿರಾ ? ನನ್ನ ಮೇಲೆ ಕೋಪವಿಲ್ಲವೆ ?”

“ ಮನ್ನಿಸುವುದಕ್ಕೆ ನೀನೇನು ಮಾಡಿರುವೆ ? ನಿನ್ನ ಮೇಲೇಕೆ ಕೋಪ ?”

" ನಿಮಗೆ ನಾನು ವಂಚನೆ ಮಾಡಲಿಲ್ಲವೆ? ಇಲ್ಲವೆನ್ನುವಿರಾ?"

" ಅಂಥ ಮಾತು ಆಡಬೇಡ, ರೋಷನ್. ನೀನು ನನಗಾವ ವಂಚನೆಯನ್ನೂ ಮಾಡಿಲ್ಲ."

" ಇಲ್ಲ, ನಿಮ್ಮನ್ನು ನಂಬಿಸಿ ನಿಮಗೆ ದ್ರೋಹ ಮಾಡಿದೆ. ನಿಮ್ಮನ್ನೂ ಕಳೆದುಕೊಂಡೆ; ನನ್ನ ಜೀವಕ್ಕೂ ಮುಳುವು ಮಾಡಿಕೊಂಡೆ"

ಎಂದು ಗದ್ಗದಿಸುತ್ತ ನುಡಿದಳು. ಉಕ್ಕಿದ ಎದೆಯ ಉಮ್ಮಳಕ್ಕೆ ಅವಳ ಮೈ ಕಂಪಿಸಿತು. ಆ ಕಂಪನದಿಂದ ಕೆರಳಿದ ಯಾತನೆಯಲ್ಲಿ ಅವಳ ದೇಹವನ್ನು ಸಾವಿರ ಕತ್ತಿಯಿಂದ ಒಂದೇ ಸಲ ಸೀಳಿದ ಹಾಗಾಯಿತು. ಮಿತಿಮೀರಿದ ವೇದನೆಯಲ್ಲಿ ಅವಳ ಮುಖ ಮುದುರಿ ವಿಕಾರವಾಯಿತು. ರೋಷನ್ ಅವಡು ಕಚ್ಚಿದಳು.

ಮಧುಸೂದನ ಉದ್ವೇಗದಿಂದೆದ್ದು ಅವಳ ಮುಖವನ್ನು ಎರಡು ಕೈಯಲ್ಲಿಯೂ ಹಿಡಿದುಕೊಂಡು,

" ಸುಮ್ಮನಿರು ಚಿನ್ನಾ, ಸುಮ್ಮನಿರು. ಆಯಾಸಪಟ್ಟುಕೊಳ್ಳಬೇಡ. ನೀನು ಎಂದಿದ್ದರೂ ನನ್ನವಳೇ"

ಎಂದ. ಆ ಮಾತು ಅವಳ ಮನಸ್ಸಿನ ಮೇಲೆ ಗಾಢವಾದ ಒಂದು ಪರಿಣಾಮವನ್ನುಂಟುಮಾಡಿತು. ನೋವು ತಟಕ್ಕನೆ ಹಿಮ್ಮೆಟ್ಟಿ ಅವಳ ಮುಖದ ಮೇಲೆ ಹೂವಿನಂಥ ಮಂದಹಾಸ ಅರಳಿತು.

" ನಿಮ್ಮ ಬಾಯಲ್ಲಿ ಆ ಮಾತು ಕೇಳಲು ಹಂಬಲಿಸುತ್ತಿದ್ದೆ"

ಎಂದಳು. ಅನಂತತೃಪ್ತಿ ಅವಳ ಮುಖದ ಮೇಲೆ ಲಾಸ್ಯವಾಡಿತು. ಮಧುಸೂದನ ಅವಳ ಭುಜವನ್ನು ನೇವರಿಸುತ್ತ,

" ಸುಮ್ಮನೆ ಮಾತಾಡಿ ಆಯಾಸಪಟ್ಟುಕೊಳ್ಳಬೇಡ, ರೋಷನ್. ಒಂದು ಗಳಿಗೆ ವಿಶ್ರಾಂತಿ ತೆಗೆದುಕೋ"

ಎಂದ. ರೋಷನ್ ಅರಳಿದ ಕಣ್ಣುಗಳಿಂದ ಅವನ ಮುಖವನ್ನೇ ನಿಟ್ಟಿಸಿದಳು.

" ನೀವು ಬರಲೆಂದು ಕಾದಿದ್ದೆ."

ಎಂದು ನುಡಿದು ನೀಳವಾಗಿ ಸುಯ್ದು ಕಣ್ಣು ಮುಚ್ಚಿದಳು. ಅವಳು

ಮತ್ತೆ ಮತ್ತಿನ ಆಳಕ್ಕೆ ಇಳಿಯುತ್ತಿರುವಂತೆ ತೋರಿತು. ಮಧುಸೂದನ ಪಕ್ಕದಲ್ಲಿ ಕುಳಿತು ನೋಡುತ್ತಲೇ ಇದ್ದ.

ಕಾಲು ಘಂಟೆ ಕಳೆಯಿತು.

ಇದ್ದಕ್ಕಿದ್ದ ಹಾಗೆ ಅವಳ ಸ್ಥಿತಿಯಲ್ಲಿ ವ್ಯತ್ಯಾಸವಾಯಿತು; ಮುಷ್ಟಿಗಳು ತಮ್ಮಷ್ಟಕ್ಕೆ ತಾವೇ ಬಿಗಿದುಕೊಂಡವು; ಮೈ ಸೆಟೆಯಿತು; ಕಣ್ಣುಗುಡ್ಡೆ ಮೇಲಕ್ಕೆ ಸಿಕ್ಕಿಕೊಂಡಿತು. ಎದೆ ಒಡೆಯುವ ಶ್ವಾಸಕ್ಕೆ ಎರಡು ಸಲ ತಲೆ ಎತ್ತಿ ಹಾಕಿ ಮುಖವನ್ನು ಓರೆ ಮಾಡಿದಳು. ಮಧುಸೂದನ ಗಾಬರಿಗೊಂಡು,

"ಡಾಕ್ಟರ್, ಡಾಕ್ಟರ್"

ಎಂದು ಕೂಗಿಕೊಂಡ. ಡಾಕ್ಟರ್ ನರ್ಸುಗಳು ರೂಮಿಗೆ ಓಡಿ ಬರುವುದರಲ್ಲಿ ರೋಷನ್ನಳ ಮೂಗಿನಿಂದ ಘಳ್ಳನೆ ರಕ್ತದ ಕಾಲುವೆ ಹೊರಟು ಬಿಟ್ಟಿತು. ಅವಳ ತಲೆ ಒಂದು ಕಡೆ ಸೊರಗಿ ಬಿದ್ದಿತು.

"ರೋಷನ್, ರೋಷನ್"

ಎಂದು ಮಧುಸೂದನ ವಿಹ್ವಲಿಸುತ್ತ ಅವಳ ಎದೆಯನ್ನಪ್ಪಿದ.

"ಬೇಟೀ, ಬೇಟೀ"

ಎಂದು ಅನ್ವರ್‌ಬಾಯಿ ಕಿಟ್ಟನೆ ಕಿರಚಿಕೊಂಡು ಕುಳಿತ ಕುರ್ಚಿಯಲ್ಲೇ ಕುಸಿದು ಪ್ರಜ್ಞೆ ತಪ್ಪಿದಳು. ನರ್ಸು ರೋಷನ್ನಳ ಮುಖದ ಮೇಲೆ ಹೊದಿಕೆ ಯೆಳೆಯುತ್ತ ದುಗುಡತುಂಬಿದ ಧ್ವನಿಯಲ್ಲಿ,

"ಆಗಿಹೋಯಿತು, ಕೂಗಬೇಡಿ"

ಎಂದು ಸದ್ದಿಲ್ಲದೆ ರೂಮಿನಿಂದ ಹೊರಟುಹೋದಳು. ಮಧುಸೂದನ ದಿಗ್ಭ್ರಾಂತನಾದವನಂತೆ ಕುರ್ಚಿಯಲ್ಲಿ ಕುಕ್ಕರಿಸಿಕೊಂಡುಬಿಟ್ಟ. ಅವನ ಕಣ್ಣಿಗೆ ಎಲ್ಲವೂ ಗಿರಗಿರನೆ ಸುತ್ತುತ್ತಿರುವ ಹಾಗೆ ತೋರುತ್ತಿತ್ತು.

ಗೋವಿಂದದಾಸ್ ಕೊನೆಗೂ ತನ್ನ ಹಗೆ ತೀರಿಸಿಕೊಂಡುಬಿಟ್ಟಿದ್ದ.

ಮಧುಸೂದನ ಸಂಜೆ ಐದು ಘಂಟೆಯ ಹೊತ್ತಿಗೆ 'ವಿಜಯವಿಲಾಸ'ಕ್ಕೆ ಹಿಂತಿರುಗಿ ಬಂದ. ಅವನ ಕೆದರಿದ ತಲೆ, ಗುಳಿಬಿದ್ದ ಕಣ್ಣು, ಅಸ್ತವ್ಯಸ್ತವಾಗಿದ್ದ ಬಟ್ಟೆಗಳನ್ನು ನೋಡಿ ಕುಮುದಾ ಗಾಬರಿಗೊಂಡಳು.

"ಎಲ್ಲಿ ಹೋಗಿದ್ದಿರಿ? ಏಕೆ ಇಷ್ಟು ಹೊತ್ತಾಯಿತು? ಊಟವೆಲ್ಲಿ ಮಾಡಿದಿರಿ?"

ಎಂದು ಕೇಳುತ್ತ ಅವನನ್ನು ಹಿಂಬಾಲಿಸಿ ರೂಮಿಗೆ ಬಂದಳು.

" ನನ್ನನ್ನು ಏನೂ ಕೇಳಬೇಡ, ಕುಮುದಾ. ನನ್ನ ಪಾಡಿಗೆ ನನ್ನನ್ನು ಬಿಟ್ಟುಬಿಡು "

ಎಂದು ಮಧುಸೂದನ ಮಂಚದ ಮೇಲೆ ಹೋಗಿ ಬೋರಲಾಗಿ ಬಿದ್ದುಕೊಂಡ. ತಡೆದಿದ್ದ ದುಃಖವೆಲ್ಲವೂ ಕಟ್ಟೆ ಕಿತ್ತುಕೊಂಡು ಬರುವ ಹಾಗೆ ಬಂದುಬಿಟ್ಟಿತು. ಅದರ ಒತ್ತಡದಲ್ಲಿ ಅವನು ಮಗುವಿನ ಹಾಗೆ ಬಿಕ್ಕಿ ಬಿಕ್ಕಿ ಅತ್ತುಬಿಟ್ಟ.

ಅವನನ್ನು ಮಾತಾಡಿಸುವ ಧೈರ್ಯ ಅವಳಿಗೂ ಆಗಲಿಲ್ಲ. ಸುಮ್ಮನೆ ರೂಮಿನ ಬಾಗಿಲೆಳೆದುಕೊಂಡು ಹೊರಟುಹೋದಳು.

ಕುಮುದಾ ಬೆಳಗ್ಗೆ ಎದ್ದು ನೋಡಿದಾಗ ಮಧುಸೂದನ ಅವನ ರೂಮಿನಲ್ಲಿರಲಿಲ್ಲ.

೩೨

" ನಿಮ್ಮ ಹೆಸರಿಗೆ ಒಂದು ಟಿ. ಎಂ. ಒ. ಬಂದಿದೆ, ಸಾರ್ "

ಎಂದು ಕಾಲೇಜಿನ ಸ್ಟಾಫ್ ರೂಮನ್ನು ಪ್ರವೇಶಿಸಿದ ಅಂಚೆಯಾಳನ್ನು ಸುಬ್ಬಕೃಷ್ಣ ಅಚ್ಚರಿಯಿಂದ ನೋಡಿದ.

" ನನ್ನ ಹೆಸರಿಗೇ ?"

" ಹೌದು "

ಎಂದು ಅಂಚೆಯಾಳು ಫಾರಂ ಕೈಗಿತ್ತ. ಸುಬ್ಬಕೃಷ್ಣ ಅದನ್ನು ಹಿಂದೆ ಮುಂದೆ ತಿರುಗಿಸಿ ನೋಡಿದ. ಬಂದಿದ್ದುದು ಅವನ ಹೆಸರಿಗೇ. ಅದರಲ್ಲಿ ಸಂಶಯವಿರಲಿಲ್ಲ. ವಿಳಾಸ ಸರಿಯಾಗಿಯೇ ಇತ್ತು.

" ಇದು ತಲಪಿದೊಡನೆ ಮದರಾಸಿಗೆ ಹೊರಟುಬರುವುದು. ಎಲ್ಲ ವಿಷಯ ಗಳೂ ಮುಖತಃ.

—ನಟರಾಜ ಅಯ್ಯರ್ "

ಎಂದಷ್ಟೇ ಒಕ್ಕಣೆಯಿತ್ತು. ಅಂಚೆಯಾಳು ಸುಬ್ಬಕೃಷ್ಣನ ಸಹಿ ಪಡೆದು ಇಪ್ಪತ್ತೈದು ರೂಪಾಯಿ ಎಣಿಸಿ ಹೊರಟುಹೋದ.

ನಟರಾಜ ಅಯ್ಯರರು ತನಗೇಕೆ ಟಿ. ಎಂ. ಒ. ಮಾಡಿದ್ದಾರೆನ್ನುವುದು ಅವನಿಗೆ ಅರ್ಥವಾಗಲಿಲ್ಲ. ಮಧುಸೂದನ ಅಲ್ಲಿರಬಹುದೇ ? ಅಥವಾ ಮತ್ತೇ ನಾದರೂ ಹೆಚ್ಚಿನ ಸಂಗತಿ ನಡೆದಿರಬಹುದೇ ? ನಟರಾಜ ಅಯ್ಯರರು ಸಂಸಾರ ಸಮೇತ ಮೈಸೂರಿಗೆ ಬಂದು ಮಧುಸೂದನನ ಅತಿಥಿಯಾಗಿ ಇಳಿದಿದ್ದಾಗ ಸುಬ್ಬಕೃಷ್ಣನಿಗೆ ಅವರ ಪರಿಚಯವಾಗಿತ್ತು. ಆಗ ಅವನು ಅವರೊಡನೆ ನಡಸಿದ್ದ ಸಂಕ್ಷೇಪವಾದ ಮಾತುಕತೆಗಳಿಂದಲೇ ಅವರ ವಿದ್ಯೆ ಅಭಿರುಚಿಗಳ ಆಳದ ಅರಿವು ಅವನಿಗಾಗಿತ್ತು. ಅವರ ಬಗೆಗೆ ಗೌರವ ಮೂಡಿತ್ತು. ಲಲಿತನನ್ನು ಅವನು

ನೋಡಿದ್ದೂ ಆಗಲೇ. ಅವಳನ್ನು ನೋಡಿ ಸುಬ್ಬಕೃಷ್ಣ ಮಧುಸೂದನನ ಸದಭಿರುಚಿಯನ್ನು ಮೆಚ್ಚಿಕೊಂಡಿದ್ದ. ಆ ಬಳಿಕ ಅಯ್ಯರರಿಗೂ ಅವನಿಗೂ ಯಾವ ಸಂಪರ್ಕವೂ ಇರಲಿಲ್ಲ. ಮಧುಸೂದನನಿಗೂ ಅವರಿಗೂ ಕಾಗದ ಪತ್ರ ಓಡಾಡುತ್ತಿದ್ದುದು ಮಾತ್ರ ಅವನಿಗೆ ಗೊತ್ತಿತ್ತು.

ಈಗೇಕೆ ಅವರು ತನ್ನನ್ನು ಇದ್ದಕ್ಕಿದ್ದ ಹಾಗೆ ಬರಲು ಕೋರಿರುವುದು? ಸುಬ್ಬಕೃಷ್ಣನಿಗೆ ಈ ಹಠಾತ್ ಕರೆಯ ಅಂತರಾರ್ಥ ಹೊಳೆಯಲಿಲ್ಲ.

ಅವನೂ ಮುಂಬಯಿಗೆ ಹೋಗಲು ಸಿದ್ಧತೆ ಮಾಡಿಕೊಳ್ಳುತ್ತಿದ್ದ. ಅದಕ್ಕೋಸ್ಕರ ಹದಿನೈದು ದಿನ ರಜಕ್ಕೂ ಬರೆದುಕೊಂಡಿದ್ದ. ಅದೂ ಮಂಜೂರಾಗಿತ್ತು. ಈಗ ಇದ್ದಕ್ಕಿದ್ದ ಹಾಗೆ ಮದರಾಸ್ ಪ್ರಯಾಣ ಎದ್ದು ಕುಳಿತುಕೊಂಡಿತ್ತು. ಮುಂಬಯಿಯ ಕೆಲಸ ಮುಗಿಸಿಕೊಂಡೇ ಮದರಾಸಿಗೆ ಹೋಗಬಹುದಾಗಿತ್ತು. ಆದರೆ ಏನು ಸಂದರ್ಭವೋ ಅಯ್ಯರರು ಜರೂರಾಗಿ ವೈರ್ ಮಾಡಿದ್ದರು. ಮದರಾಸಿಗೇ ಹೋಗಿ ಅಲ್ಲಿಂದ ಮುಂದೆ ಮುಂಬಯಿಗೆ ಹೊರಡಬಾರದೇಕೆ?

ಅವನ ಮನಸ್ಸು ಹಾಗೆಯೇ ನಿರ್ಧರಿಸಿತು.

ಸುಬ್ಬಕೃಷ್ಣ ಮಾರನೆಯ ದಿನವೇ ಮದರಾಸಿಗೆ ಪ್ರಯಾಣ ಮಾಡಿದ.

ಸ್ಟೇಷನ್ನಿಗೆ ಯಾರಾದರೂ ಬಂದಿರುವರೋ ಇಲ್ಲವೋ ಎನ್ನುವ ಅನುಮಾನ ಅವನಿಗಿತ್ತು. ಟೆಲಿಗ್ರಾಮಿನಲ್ಲಿ ಅದನ್ನು ನಮೂದಿಸಿರಲಿಲ್ಲ. ಅಯ್ಯರರ ಮನೆಯೇನೋ ಕೀಲಪಾಕಿನಲ್ಲಿತ್ತೆಂದು ಕೇಳಿದ್ದ. ಆದರೆ ರಸ್ತೆ, ನಂಬರು ಒಂದೂ ಅವನಿಗೆ ಗೊತ್ತಿರಲಿಲ್ಲ. ಹೋಗಿ ವಿಚಾರಿಸಿದರಾಯಿತು. ಬಾಯಿ ಕುರುಡೆ?

ಆ ಶಂಕೆಗೆ ಕಾರಣವೇ ಇರಲಿಲ್ಲ. ಬೆಂಗಳೂರು ಮೆಯಿಲು ಮದರಾಸ್ ಸೆಂಟ್ರಲ್ ಸ್ಟೇಷನ್ ತಲಪಿ ನಿಲ್ಲುತ್ತಿದ್ದ ಹಾಗೆ ಸ್ವತಃ ಅಯ್ಯರರೇ ಅವನನ್ನು ಎದುರುಗೊಂಡರು.

"ನಮಸ್ಕಾರ ಮಿ. ಸುಬ್ಬಕೃಷ್ಣ"

ಎಂದು ನಗುಮೊಗದಿಂದ ಸ್ವಾಗತಿಸಿದರು. ಆದರೆ ಅವರ ಮುಖದಲ್ಲಿ ಮೊದಲಿನ ಗೆಲುವು ಇಲ್ಲದ್ದನ್ನು ಸುಬ್ಬಕೃಷ್ಣ ಗಮನಿಸಿದ. ಅಯ್ಯರರು ಅವನಿಗೆ ಶಿವಸ್ವಾಮಿಯ ಪರಿಚಯ ಮಾಡಿಸಿಕೊಡುತ್ತ,

“ ನಮ್ಮ ಹುಡುಗ, ಶಿವಸ್ವಾಮಿ. ನೀವು ನೋಡಿಲ್ಲವೆಂದು ಕಾಣುತ್ತದೆ.”

“ ನೋಡಿಲ್ಲ, ಆದರೆ ಅವರ ವಿಚಾರ ಕೇಳಿದ್ದೆ. ಪರಿಚಯಲಾಭವಾಗುತ್ತಿರುವುದು ಈಗಲೇ ”

ಎಂದು ಶಿವಸ್ವಾಮಿ ನೀಡಿದ ಹಸ್ತವನ್ನು ಆದರದಿಂದ ಹಿಡಿದುಕೊಂಡ.

“ ಮನೆಯಲ್ಲಿ ಎಲ್ಲರೂ ಕ್ಷೇಮವೆ ?”

ಎಂದು ಸುಬ್ಬಕೃಷ್ಣ ಅಯ್ಯರರ ಕಡೆ ತಿರುಗಿ ಕೇಳಿದ.

“ ಕ್ಷೇಮ. ಬನ್ನಿ ಹೋಗೋಣ ”

ಎಂದು ನುಡಿದು ಅವನನ್ನು ಹೊರಗಿದ್ದ ತಮ್ಮ ಕಾರಿನ ಬಳಿಗೆ ಕರೆದೊಯ್ದರು.

“ ಏನು ಸಮಾಚಾರ ?”

ಎಂದು ಕಾರಿನಲ್ಲಿ ಕುಳಿತುಕೊಳ್ಳುತ್ತಿದ್ದ ಹಾಗೇ ಸುಬ್ಬಕೃಷ್ಣ ಪ್ರಶ್ನಿಸಿದ. ಸಹಜವಾಗಿಯೇ ಅವನಿಗೆ ವಿಷಯವನ್ನು ತಿಳಿದುಕೊಳ್ಳಬೇಕೆಂದು ಕುತೂಹಲವಿತ್ತು. ಆದರೆ ಅಯ್ಯರರಿಗೆ ಆ ಅವಸರವಿದ್ದಂತಿರಲಿಲ್ಲ.

“ ನಿಧಾನವಾಗಿ ಮಾತಾಡೋಣ, ಬನ್ನಿ. ರಾತ್ರಿಯೆಲ್ಲಾ ನೀವು ಪ್ರಯಾಣದಲ್ಲಿ ದಣಿದಿದ್ದೀರಿ ”

ಎಂದರು. ಲೋಕಾಭಿರಾಮವಾದ ಮಾತುಕಥೆಗಳಲ್ಲಿ ಹಾದಿ ಸಾಗಿತು.

ಸುಬ್ಬಕೃಷ್ಣನ ಆಗಮನ ಲಲಿತನ ಕುತೂಹಲವನ್ನು ಕೆರಳಿಸಿತು. ಅವಳ ಮನಸ್ಸಿನಲ್ಲಿ ಸುಪ್ತವಾಗಿದ್ದ ಆಸೆ ನಿಧಾನವಾಗಿ ಹೆಡೆ ಬಿಚ್ಚತೊಡಗಿತು. ಮಧುಸೂದನ ಮೈಸೂರಿನಲ್ಲಿರಬಹುದೇ ? ಅವನ ಸಂಗತಿ ಸುಬ್ಬಕೃಷ್ಣನಿಗೆ ತಿಳಿದಿರಬಹುದೇ ? ಅವನು ಬಂದಿರುವುದೇತಕ್ಕೆ ? – ಎಂದು ಅವಳ ಬುದ್ಧಿ ಪ್ರಶ್ನೆಯ ಮೇಲೆ ಪ್ರಶ್ನೆ ಹಾಕತೊಡಗಿತು. ಆದರೆ ಅವನು ಯಾವುದೋ ಸ್ವಂತ ಕೆಲಸದ ನಿಮಿತ್ತ ಬಂದಿದ್ದಾನೆಂದು ಕನಕಾಂಗಿ ಹೇಳಿದ್ದನ್ನು ಕೇಳಿ ಅವಳ ಆಸೆ ಅಲ್ಲೇ ಮುದುಡಿಕೊಂಡಿತು. ಅವಳು ಮತ್ತೆ ಹತಾಶಳಾಗಿ ಕುಳಿತುಬಿಟ್ಟಳು.

ಸ್ನಾನ ಉಪಾಹಾರಗಳಾದ ಮೇಲೆ ಶಿವಸ್ವಾಮಿ ಸುಬ್ಬಕೃಷ್ಣನನ್ನು ಕರೆದುಕೊಂಡು ಕಾರಿನಲ್ಲಿ ಎಲ್ಲಿಗೋ ಹೊರಟುಬಿಟ್ಟ. ಅವರು ಹಿಂತಿರುಗಿದಾಗ ಹನ್ನೆರಡು ಘಂಟೆಯಾಗಿತ್ತು. ಊಟವಾದ ಬಳಿಕ ನಟರಾಜ ಅಯ್ಯರರು ಸುಬ್ಬಕೃಷ್ಣನನ್ನು ತಮ್ಮ ರೂಮಿಗೆ ಕರೆದುಕೊಂಡು ಹೋದರು.

"ಶಿವಸ್ವಾಮಿ ವಿಷಯ ತಿಳಿಸಿರಬಹುದು"

ಎಂದು ಗುಂಭವಾಗಿ ಆರಂಭಿಸಿದರು.

"ಹೌದು, ಹೇಳಿದರು."

"ನಿಮ್ಮ ಅಭಿಪ್ರಾಯವೇನು, ಮಿ. ಸುಬ್ಬಕೃಷ್ಣ ?"

"ನನ್ನ ಅಭಿಪ್ರಾಯವೇನು ಬಂತು ಸಾರ್, ಇದರಲ್ಲಿ?"

ಎಂದು ಸುಬ್ಬಕೃಷ್ಣ ಮೆಲ್ಲನೆ ನಕ್ಕ.

"ಹಾಗಲ್ಲ, ನಿಮ್ಮ ಆಲೋಚನೆಯೂ ಮುಖ್ಯ"

ಎಂದರು. ಸುಬ್ಬಕೃಷ್ಣ ಒಂದು ಗಳಿಗೆ ಸುಮ್ಮನಿದ್ದ. ಮನಸ್ಸಿನಲ್ಲಿದ್ದುದನ್ನು ಹೇಳಲೋ ಬೇಡವೋ ಎಂದು ಅವನು ಶಂಕಿಸುತ್ತಿರುವಂತಿತ್ತು. ಅಯ್ಯರರು ಅವನ ಮನೋಗತವನ್ನು ಗ್ರಹಿಸಿ,

"ನೀವು ನಿಸ್ಸಂಕೋಚವಾಗಿ ಮಾತಾಡಬಹುದು"

ಎಂದು ಭರವಸೆಯಿತ್ತರು.

"ನಾನೊಂದು ಪ್ರಶ್ನೆ ಕೇಳಲೆ ?"

"ಕೇಳಿ, ಧಾರಾಳವಾಗಿ ಕೇಳಿ."

"ತಾವು ಈಚೆಗೆ ಮಧುಸೂದನನಿಗೆ ಕಾಗದ ಬರೆದಿದ್ದಿರಾ ?"

"ಈಚೆಗೆ ಎಂದರೆ, ಅವರ ತಾಯಿ ಹೋದ ಸಂದರ್ಭದಲ್ಲಿ ಒಂದು ಕಾಗದ ಬರೆದಿದ್ದೆ."

"ಆಮೇಲೆ ಬರೆಯಲಿಲ್ಲವೆ ?"

"ಆಮೇಲೂ ಒಂದು ಕಾಗದ ಬರೆದಿದ್ದಂತೆ ಜ್ಞಾಪಕ."

"ಅದರ ವಿವರ ಕೇಳಬಹುದೇ ?"

ಅಯ್ಯರರು ಜ್ಞಾಪಿಸಿಕೊಳ್ಳುವಂತೆ ಒಂದು ಕ್ಷಣ ಯೋಚಿಸಿದರು.

"ನನ್ನ ಮಗಳ ಮದುವೆಯ ವಿಚಾರ ಪ್ರಸ್ತಾಪಿಸಿದ್ದೆನೆಂದು ಕಾಣುತ್ತದೆ."

"ಏನೆಂದು ಬರೆದಿದ್ದಿರಿ ?"

"ವರ ಗೊತ್ತಾಗಿದೆಯೆಂದು ಬರೆದಿದ್ದೆನೆಂದು ಕಾಣುತ್ತದೆ."

"ಅದಕ್ಕೆ ಉತ್ತರ ಬಂದಿತ್ತೆ ?"

"ಇಲ್ಲ"

ಎಂದರು. ಸುಬ್ಬಕೃಷ್ಣನ ಮುಖದ ಮೇಲೆ ವಿಷಾದದ ನಗೆಯೊಂದು

ಸುಳಿಯಿತು. ಮಧುಸೂದನನ ಮನಸ್ಸು ಕೆಡುವುದಕ್ಕೆ ತಮ್ಮ ಕಾಗದ ಅಪ್ರತ್ಯಕ್ಷವಾಗಿ ಕಾರಣವಾಗಿತ್ತೆನ್ನುವುದನ್ನು ಅಯ್ಯರರು ಗ್ರಹಿಸಿರಲಿಲ್ಲ.

"ಸರಿ"

ಎಂದು ಅವನು ಸುಮ್ಮನಾದ. ಅವರೂ ಒಂದು ನಿಮಿಷ ಮೌನವಾಗಿದ್ದರು. ಬಳಿಕ,

"ಶಿವಸ್ವಾಮಿ ಹೇಳಿದ್ದಕ್ಕಿಂತ ಹೆಚ್ಚಾಗಿ ನಾನು ಏನೂ ಹೇಳಲಾರೆ. ನೀವು ಅವರ ಆಪ್ತಮಿತ್ರರಾದ್ದರಿಂದ ನಿಮ್ಮ ಸಲಹೆ, ಸಹಾಯ ಪಡೆಯುವುದು ಯುಕ್ತವೆಂದು ನಾವು ಭಾವಿಸಿದೆವು"

ಎಂದು ಹೇಳಿ ನಿಲ್ಲಿಸಿದರು. ವಿಷಯವನ್ನು ಬಿಚ್ಚಿ ಮಾತಾಡಲು ಅವರನ್ನು ಸಂಕೋಚ ಬಾಧಿಸುತ್ತಿದೆಯೆಂದು ಸುಬ್ಬಕೃಷ್ಣನಿಗೆ ಸುಲಭವಾಗಿಯೇ ಅರ್ಥವಾಯಿತು. ಅವರ ಮಗಳ ಪ್ರಣಯವನ್ನು ಕುರಿತು ಅವರೊಡನೆ ವಿಸ್ತಾರವಾಗಿ ಚರ್ಚಿಸಲು ಅವನಿಗೂ ಇಷ್ಟವಿರಲಿಲ್ಲ.

"ತಾವು ಆ ವಿಷಯದಲ್ಲಿ ಯೋಚಿಸಬೇಕಾದ್ದಿಲ್ಲ. ಶಿವಸ್ವಾಮಿ ನನಗೆ ಎಲ್ಲವನ್ನೂ ತಿಳಿಸಿದ್ದಾರೆ. ಈ ವಿಷಯದಲ್ಲಿ ನನ್ನ ಕೈಲಾದ್ದನ್ನು ಮಾಡಲು ಸಿದ್ಧನಾಗಿದ್ದೇನೆ. ನನಗೆ ಎರಡು ಕಡೆಯೂ ಆಸಕ್ತಿಯಿದೆ. ನಾನೂ ಮುಂಬಯಿಗೇ ಹೊರಟಿದ್ದೆ. ತಮ್ಮ ಟೆಲಿಗ್ರಾಂ ನೋಡಿ ಇಲ್ಲಿಗೆ ಬಂದೆ"

ಎಂದ. ಅಯ್ಯರರು ಸಂತುಷ್ಟಚಿತ್ತರಾಗಿ,

"ತುಂಬ ಸಂತೋಷ. ನಿಮ್ಮ ಉಪಕಾರಕ್ಕೆ ನಾನು ಕೃತಜ್ಞ"

ಎಂದು ನುಡಿದರು. ಆ ಎರಡು ಮಾತಿನಲ್ಲಿ ಅವನಿಗೆ ಅವರ ಅಂತರಂಗದ ಅರಿವಾಯಿತು.

ಸುಬ್ಬಕೃಷ್ಣ ಮಾರನೆಯ ದಿನ ಮುಂಬಯಿಗೆ ರೈಲು ಹತ್ತಿದ. ಶಿವಸ್ವಾಮಿ ಸ್ಟೇಷನಿಗೆ ಬಂದು ಸುಬ್ಬಕೃಷ್ಣ ಬೇಡಬೇಡವೆನ್ನುತ್ತಿದ್ದರೂ ಬಲವಂತಮಾಡಿ ಸೆಕೆಂಡ್‌ಕ್ಲಾಸ್ ಟಿಕೆಟ್ ತೆಗೆದುಕೊಟ್ಟು, ಗಾಡಿ ಹತ್ತಿಸಿದ. ರೈಲು ಹೊರಡುವ ಘಂಟೆಯಾದಾಗ ಶಿವಸ್ವಾಮಿ ಅವನ ಕೈಹಿಡಿದು,

"ಲಲಿತನ ಭವಿಷ್ಯ ನಿಮ್ಮ ಪ್ರಯತ್ನದ ಫಲಾಫಲಗಳ ಮೇಲೆ ನಿಂತಿದೆ, ಮಿ. ಸುಬ್ಬಕೃಷ್ಣ"

ಎಂದು ನುಡಿದ. ಸುಬ್ಬಕೃಷ್ಣ ಅವನ ಧ್ವನಿಯಲ್ಲಿ ಅಡಗಿದ್ದ ಉದ್ವೇಗ ವನ್ನು ಗಮನಿಸಿ,

"ಆ ಯೋಚನೆ ನೀವಿಟ್ಟುಕೊಳ್ಳಬೇಡಿ ಮಿ. ಶಿವಸ್ವಾಮಿ. ಮಧುಸೂದನ ಮುಂಬಯಿಯಲ್ಲಿ ಎಲ್ಲಿದ್ದರೂ ಹಿಡಿದು ತರುವೆನೆನ್ನುವ ಭರವಸೆ ನನಗಿದೆ. ಅವನು ಅಲ್ಲಿಲ್ಲದಿದ್ದರೆ ಸ್ವಲ್ಪ ತಡವಾಗಬಹುದು."

"ಆ ನಂಬಿಕೆ ನಮಗಿರುವುದರಿಂದಲೇ ನಿಮಗೆ ತೊಂದರೆ ಕೊಟ್ಟದ್ದು"

ಎಂದ. ರೈಲು ನಿಧಾನವಾಗಿ ಪ್ಲಾಟ್‌ಫಾರಂ ಬಿಟ್ಟು ಚಲಿಸಿತು. ಶಿವಸ್ವಾಮಿ ಗಾಡಿಯ ಪಕ್ಕದಲ್ಲೇ ಹೆಜ್ಜೆ ಹಾಕುತ್ತ,

"ನಾವು ನಿಮ್ಮ ದಾರಿಯನ್ನೇ ಕಾಯುತ್ತಿರುತ್ತೇವೆ. ಯಾವುದಕ್ಕೂ ವೈರ್‌ಮಾಡಿ. ಹಣ ಬೇಕಾದರೆ ನಿಸ್ಸಂಕೋಚವಾಗಿ ತಿಳಿಸಿ"

ಎಂದ. ಸುಬ್ಬಕೃಷ್ಣ ಆಗಲೆಂದು ತಲೆ ಆಡಿಸಿ ಹಸನ್ಮುಖದಿಂದ ಕೈಜೋಡಿಸಿದ.

೩೩

"ಒಂದು ದವುಡಿ ಕೊಡಿ ಸಾಮಿ."

ಮಧುಸೂದನ ಕುಳಿತಿದ್ದ ಕಲ್ಲು ಬೆಂಚಿನ ಹತ್ತಿರ ಬಂದು ಅಂಧ ಭಿಕ್ಷುಕ ಜೇಡುತ್ತಿದ್ದ. ಅವನ ಮುಖ ಸುಕ್ಕುಕಟ್ಟಿತ್ತು; ಎದೆಯ ಮೇಲೆ ಹರಡಿ ಕೊಂಡಿದ್ದ ನರೆತ ಗಡ್ಡ ಹಳದಿಯ ಬಣ್ಣಕ್ಕೆ ತಿರುಗಿತ್ತು; ಮಣಕು ಹಿಡಿದ ಹಳೆಯ ಹರಕು ಟೋಪಿ ತಲೆಯ ಮೇಲೆ ವಕ್ರವಾಗಿ ಕುಳಿತಿತ್ತು; ಅಂಗಿ ಎನ್ನಿಸಿ ಕೊಂಡಿದ್ದ ವಸ್ತ್ರ ಅವನ ಮೈಗೆ ಹತ್ತಾರು ಕಡೆ ಕನ್ನ ಹಾಕಿತ್ತು. 'ನನ್ನನ್ನು ಬಿಟ್ಟರೆ ನಿನಗೆ ಗತಿಯಿಲ್ಲ' ಎನ್ನುವುದನ್ನು ಕೈಯಲ್ಲಿದ್ದ ಬೋಗುಣಿ ಸಾರಿ ಹೇಳು ವಂತಿತ್ತು. ಭಿಕ್ಷುಕ ಒಂದೇ ಸಮನೆ ಅರಚುತ್ತಿದ್ದ:

"ಒಂದು ದವುಡಿ ಕೊಡಿ ಸಾಮಿ, ರಾತ್ರಿಯಿಂದ ಊಟ ಇಲ್ಲ."

ಮಧುಸೂದನ ಅವನ ಮುಖವನ್ನು ದಿಟ್ಟಿಸಿ ನೋಡಿದ.

ಹೌದು, ರಾತ್ರಿಯಿಂದ ಅವನಿಗೂ ಊಟವಿರಲಿಲ್ಲ; ಅವನೂ ಆ ಭಿಕ್ಷುಕ ನಂತೆ ಪರದೇಶಿಯಾಗಿದ್ದ; ಅವನನ್ನೂ ಕೇಳುವವರಿರಲಿಲ್ಲ; ಅವನ ಆತ್ಮವೂ ಗೋಳಿಡುತ್ತಿತ್ತು—

ಮಧುಸೂದನ ಅವನ ಬೋಗುಣಿಗೆ ಮೂರು ಕಾಸು ಹಾಕಿ ಪಾರ್ಕಿನ ಸುತ್ತಲೂ ದೃಷ್ಟಿ ಹರಿಸಿದ. ರೆಂಬೆಗಳೆಲ್ಲಾ ಒಣಗಿ ಎಲೆ ನೀಗಿಕೊಂಡು ನಿಂತಿದ್ದ ಮರಗಳು ಅವುಗಳ ಜೀವನದಲ್ಲಿ ಗ್ರೀಷ್ಮ ಪ್ರಾಪ್ತವಾಗಿದ್ದುದನ್ನು ಸೂಚಿಸುತ್ತಿತ್ತು. ನೆಲಕ್ಕುದುರಿದ್ದ ತರಗೆಲೆಗಳು ಗಾಳಿ ಬೀಸಿದತ್ತ ಹೊಡೆದುಕೊಂಡು ಹೋಗು ತ್ತಿದ್ದವು.

ಎಂಥ ವ್ಯಂಗ್ಯ. ಅವನ ಬಾಳೂ ಆ ಗಿಡ ಮರಗಳಂತೆಯೇ ಬೆಂದು

ಬರಡಾಗಿ ನಿಂತಿತ್ತು; ಅವನ ಮನಸ್ಸೂ ಆ ತರಗೆಲೆಗಳಂತೆ ಎತ್ತಲೋ ಹೊಡೆದು ಕೊಂಡು ಹೋಗುತ್ತಿತ್ತು.

ಪಾರ್ಕು ಜನಶೂನ್ಯವಾಗಿತ್ತು. ಭಿಕ್ಷುಕ ದೆಸೆತಪ್ಪಿದ ಅನಾಥ ಶಿಶುವಿನಂತೆ ಅದರ ನಡುವೆ ಅಲೆಯುತ್ತಿದ್ದ.

"ಒಂದು ದಮಡಿ ಕೊಡಿ, ಸಾಮಿ."

ಖಾಲಿಯಾಗಿದ್ದ ಬೆಂಚುಗಳು ಅವನಿಗೆ ಯಾವ ಉತ್ತರವನ್ನೂ ಕೊಡಲಿಲ್ಲ. ಅವನ ಬೋಗುಣಿಯಲ್ಲಿದ್ದ ಒಂಟಿ ದಮಡಿ ಸುಮ್ಮನೆ ಲಾಗ ಹಾಕುತ್ತಿತ್ತು.

ಮಧುಸೂದನನ ಮನಸ್ಸಿನಲ್ಲಿ ದುಗುಡ ತುಂಬಿತ್ತು.

ಬೆಳಗ್ಗೆ ಎದ್ದೊಡನೆಯೇ ಅವನು 'ವಿಜಯ ವಿಲಾಸ' ಬಿಟ್ಟು ಹೊರಟು ಬಿಟ್ಟಿದ್ದ. ಅಲ್ಲಿ ಒಂದು ಗಳಿಗೆ ಇರಲೂ ಅವನಿಗೆ ಮನಸ್ಸಿರಲಿಲ್ಲ. ಅವನಿಗೆ ಎಲ್ಲಿರುವುದೂ ಬೇಕಾಗಿರಲಿಲ್ಲ. ಅವನ ಚಿತ್ತ ಸೂತ್ರ ಹರಿದ ಪಟದಂತೆ ಸಮತೆ ತಪ್ಪಿತ್ತು.

ರೋಷನ್ನಳ ಸಾವು ಅವನ ಭಾವನಾಪ್ರಪಂಚದ ಮೇಲೆ ದೀರ್ಘವಾದ ನೆರಳು ಚೆಲ್ಲಿತ್ತು; ಆ ವಿದ್ರಾವಕ ದೃಶ್ಯ ಕಣ್ಣಿಗೆ ಕಟ್ಟಿದಂತಿತ್ತು.

ಅದೆಂಥ ಘೋರವಾದ ಸಾವು.

ಒಂದೇ ಏಟಿಗೆ ಮೃತ್ಯು ಆ ಸೌಂದರ್ಯವನ್ನು, ಯೌವನವನ್ನು, ಉತ್ಸಾಹದ ಬುಗ್ಗೆಯನ್ನು ಆಪೋಶನ ತೆಗೆದುಕೊಂಡುಬಿಟ್ಟಿತ್ತು. ಒಮ್ಮೆ ಅವನು ಸುಖಪಟ್ಟಿದ್ದ ಆ ದೇಹ ಅವನ ಕಣ್ಣೆದುರಿಗೇ ಮುರುಟಿ ಮರದ ಕೊರಡಾಗಿತ್ತು. ಯಾವ ಪಾಪಿಯ ಕೈ ಅಲುಗಿಗೆ ಆ ಸುಕುಮಾರ ಜೀವ ಬಲಿಯಾಗಿತ್ತೋ.

ಮಧುಸೂದನನ ಮೈ ಆ ಸ್ಮರಣೆಯಿಂದ ಕಂಪಿಸಿತು.

ಅವನೊಮ್ಮೆ ಅವಳ ದ್ರೋಹಕ್ಕೆ ಮುನಿದು ಬಂದುಬಿಟ್ಟಿದ್ದ. ಅವಳ ಬಗೆಗೆ ಅವನ ಮನಸ್ಸು ಪೂರ್ತಿ ಕೆಟ್ಟುಹೋಗಿತ್ತು. ಅವಳನ್ನು ಮತ್ತೆ ನೋಡುವ ಇಚ್ಛೆಯೂ ಅವನಿಗಿರಲಿಲ್ಲ. ಅವಳ ನೆನಪು ಕೂಡ ಅವನಿಗೆ ಜುಗುಪ್ಸೆಯನ್ನುಂಟುಮಾಡುತ್ತಿತ್ತು. ಹವಿಾಲ್ದಾರ್ ಬಂದು ಕರೆದಾಗಲೂ ಅದೇ ಸಿಟ್ಟಿನಿಂದ ಉತ್ತರ ಕೊಟ್ಟಿದ್ದ. ಆದರೆ ಅವಳು ವಿಪತ್ತಿನ ಮುಖದಲ್ಲಿದ್ದಾಳೆಂದು

ಕೇಳಿದಾಗ ಅವನ ಆಗ್ರಹ ಥಟ್ಟನೆ ಸಡಿಲಿತು; ಮನಸ್ಸಿನಲ್ಲಿ ಆತಂಕ ಮೂಡಿತು; ಅವನಿಗರಿಯದ ಯಾವುದೋ ಶಕ್ತಿ ಅವನನ್ನು ಅವಳೆಡೆಗೆ ಸೆಳೆದೊಯ್ದಿತು. ಅವಳನ್ನು ನೋಡಿದ ಮೇಲೆ, ಅವಳ ಮಾತು ಕೇಳಿದ ಮೇಲೆ ಅವನ ಸ್ಥಿತಿಯೇ ಬದಲಾಯಿಸಿತು. ಆ ಮಾತನ್ನು ಅವಳಾಡುವಳೆನ್ನುವ ನಿರೀಕ್ಷೆಯೇ ಅವನಿಗಿರಲಿಲ್ಲ. ಅದನ್ನು ಕೇಳಿ ಅವನಿಗೆ ಅಚ್ಚರಿಯಾಯಿತು. ಕೇವಲ ದೇಹಾಕರ್ಷಣೆಯಿಂದಲೇ ಆರಂಭವಾಗಿ ನಿಂತುಹೋಗಿದ್ದ ಅವರ ಸಂಬಂಧ ಕಾಮವನ್ನು ಮೀರಿದ ಒಂದು ಹಂತವನ್ನು ಮುಟ್ಟುವುದೆಂದು ಅವನು ಸರ್ವಥಾ ತಿಳಿದುಕೊಂಡಿರಲಿಲ್ಲ.

ಆ ಅರಿವು ಅವನನ್ನು ಸ್ತಂಭಿತನನ್ನಾಗಿ ಮಾಡಿತ್ತು.

"ನೀವು ಬರಲೆಂದು ಕಾದಿದ್ದೆ"

ಹೌದು, ಅವಳು ಅವನಿಗಾಗಿ ಕಾದಿದ್ದಳು; ತುಡಿಯುತ್ತಿದ್ದ ಜೀವವನ್ನೂ ಅವನಿಗಾಗಿಯೇ ಹಿಡಿದುಕೊಂಡಿದ್ದಳು. ಅದರಲ್ಲಿ ಸಂಶಯವಿರಲಿಲ್ಲ. ಸಾವಿನ ಎದುರಿಗೆ ಯಾರೂ ಸುಳ್ಳಾಡಲು ಸಾಧ್ಯವಿರಲಿಲ್ಲ.

ರೋಷನ್ ಅವನು ನಿರೀಕ್ಷಿಸದಿದ್ದ ಹೆಣ್ಣಾಗಿ ಅವನ ಕೈಮೀರಿ ಹೊರಟು ಹೋಗಿದ್ದಳು. ಹಠಾತ್ತಾಗಿ ನುಗ್ಗಿ ಬಂದ ಮೃತ್ಯುವಿನ ಹೆಜ್ಜೆಯ ಕೆಳಗೆ ಆ ಹೂವು ಸಿಕ್ಕಿ ದಳದಳಗಳಾಗಿ ನುಚ್ಚುನೂರಾಗಿತ್ತು.

ಮಧುಸೂದನ ದೀರ್ಘವಾಗಿ ಉಸಿರ್ಗರೆದ.

ಅವನಿಗಿನ್ನು ಯಾರ ಸಖ್ಯವೂ ಬೇಕಾಗಿರಲಿಲ್ಲ. ಎಲ್ಲರ ಸ್ನೇಹವೂ ಸಾಕು ಸಾಕೆನಿಸಿತ್ತು. ಯಾರ ಸಾಹಚರ್ಯದಿಂದಲೂ ಅವನ ಬೇಗುದಿ ಆರುವಂತಿರಲಿಲ್ಲ. ಒಂಟಿ ಬಾಳು ಅವನನ್ನು ಕರೆಯುತ್ತಿತ್ತು. ಅವನ ಮನಸ್ಸು ಏಕಾಂತದ ಚಿಪ್ಪಿನೊಳಗೆ ಅಡಗಿಕೊಳ್ಳಲು ತವಕಿಸುತ್ತಿತ್ತು. ಅವನಿಗೆ ಬೇಕಾದ ಶಾಂತಿ ಅಲ್ಲಿರಬಹುದೇ?

ಮಧುಸೂದನನ ಬುದ್ಧಿ ಅನ್ವೇಷಿಯಂತೆ ಒಂದು ಕ್ಷಣ ಅವನ ಮನೋಕ್ಷಿತಿಜದವರೆಗೂ ದೃಷ್ಟಿಬೀರಿ ನೋಡಿತು. ಅಲ್ಲಿ ಅವನಿಗೆ ಕಾಣುತ್ತಿದ್ದುದೊಂದೇ: ಕತ್ತಲು, ದಟ್ಟವಾದ ಕತ್ತಲು, ಕೊನೆಗಾಣದ ಕತ್ತಲು. ಕತ್ತಲು ಎಲ್ಲ ದಿಕ್ಕುಗಳಿಂದಲೂ ಬಂದು ಅವನನ್ನು ಆವರಿಸಿತ್ತು. ಅದರ ನಡುವೆ ಅವನ ಗಳಿತ ಚೈತನ್ಯ ಮಿಣುಕು ಹುಳದಂತೆ ದೆಸೆ ತಪ್ಪಿ ಹಾರುತ್ತಿತ್ತು.

ಆ ಅಂಧಕಾರದಲ್ಲಿ ಅವನು ಎಲ್ಲಿಗೋ ಜಾರುತ್ತಿದ್ದ; ಯಾವ ಆಳಕ್ಕೋ ಇಳಿಯುತ್ತಿದ್ದ. ಆ ಕಗ್ಗತ್ತಲ ಕೂಪದಿಂದ ಮೇಲಕ್ಕೆ ಹತ್ತಿ ಬರುವ ತ್ರಾಣವೂ ಅವನಿಗಿರಲಿಲ್ಲ.

ಅದಕ್ಕೆ ಬೇರೆ ದಾರಿಯಿರಲಿಲ್ಲವೆ?

ದಾರಿ? ಬೇರೆ ದಾರಿ?

ಅದಕ್ಕಿದ್ದುದೊಂದೇ ದಾರಿ: ಮರೆವಿನ ದಾರಿ. ಆ ದಾರಿ ತುಳಿಯುವು ದೇನೂ ಅವನಿಗೆ ಕಷ್ಟವಾಗಿರಲಿಲ್ಲ. ಆ ಸಂಜೀವಿನಿಯ ಪರಿಚಯ ಅವನಿಗಿದ್ದೇ ಇತ್ತು. ಅದರಲ್ಲಿ ಮುಳುಗಿದರೆ ಎಲ್ಲವನ್ನೂ ಮರೆಯಬಹುದಲ್ಲವೆ?—

"ಹೌದು, ಹೌದು; ಅದೇ ಸರಿ"

ಎಂದು ಅವನ ಮನಸ್ಸಿನ ಮೂಲೆಯಿಂದ ಎಲ್ಲಿಂದಲೋ ಒಂದು ಧ್ವನಿ ಕೇಳಬಂದಿತು. ಮಧುಸೂದನ ಏನೋ ಬೆಳಕು ಕಂಡವನಂತೆ, ಯಾವುದೋ ನಿರ್ಧಾರ ಮೂಡಿ ಕುಳಿತಲ್ಲಿಂದ ಎದ್ದು ಹೊರಟ.

ಅವನ ಮುಂದೆ ಮುಂಬಯಿ ದೊಡ್ಡದಾಗಿ ಬಾಯಿ ತೆರೆದುಕೊಂಡಿತ್ತು. ಅವನು ಅದನ್ನು ಹೊಕ್ಕು ಅದರ ಗರ್ಭದಲ್ಲಿ ಕಣ್ಮರೆಯಾದ.

ತಾನು ಒಪ್ಪಿಕೊಂಡ ಕೆಲಸದ ಅಗಾಧತೆ ಎಷ್ಟೆನ್ನುವುದು ಸುಬ್ಬಕೃಷ್ಣನಿಗೆ ಗೊತ್ತಿಲ್ಲದೆ ಇರಲಿಲ್ಲ. ಅವನು ಅಯ್ಯರರಿಗೆ ಭರವಸೆಯನ್ನೇನೋ ಕೊಟ್ಟು ಬಂದಿದ್ದ. ಆದರೆ ಕಾರ್ಯಸಾಧನೆ ಮಾತಿನಷ್ಟು ಸುಲಭವಲ್ಲವೆನ್ನುವುದನ್ನು ಅವನಿಗೆ ಅನುಭವ ಕಲಿಸಿಕೊಟ್ಟಿತ್ತು. ಮಧುಸೂದನ ಮುಂಬಯಿಯಲ್ಲಿರುವನೋ ಇಲ್ಲವೋ ಎನ್ನುವುದೂ ಅವನಿಗೆ ಗೊತ್ತಿರಲಿಲ್ಲ. ಅವನು ಬರೆದಿದ್ದ ಕಾಗದಕ್ಕೆ ಉತ್ತರ ಬಂದಿರಲಿಲ್ಲ. ಪತ್ರಿಕೆಗಳಲ್ಲಿ ಅವನ ವಿಷಯವಾಗಿ ಯಾವ ಸುದ್ದಿಯೂ ಕಣ್ಣಿಗೆ ಬಿದ್ದಿರಲಿಲ್ಲ. ಅವನು ಮುಂಬಯಿ ಬಿಟ್ಟು ಬೇರೆ ಕಡೆ ಹೋಗಿದ್ದರೆ ಸಮಾಚಾರ ತಿಳಿಯುವುದು ಕಷ್ಟವಾಗುತ್ತಿತ್ತು. ಒಂದು ವೇಳೆ ಅಲ್ಲೇ ಇದ್ದರೂ ಅವನ ನೆಲೆ ಸುಲಭವಾಗಿ ಸಿಕ್ಕೀತೆಂದು ಹೇಳುವ ಹಾಗಿರಲಿಲ್ಲ. ಯಾರಿಗಾದರೂ ಸಮಾಚಾರ ಗೊತ್ತಿದ್ದರಾಯಿತು, ಇಲ್ಲದಿದ್ದರೆ ಇಡಿಯ ನಗರವನ್ನು ಶೋಧಿಸುವ ಹೊರೆ ಅವನ ಮೇಲೆ ಬಿದ್ದಿತ್ತು. ಆ ಕೆಲಸ ಅವಸರದಲ್ಲಿ ಆಗುವಂಥದಾಗಿರಲಿಲ್ಲ. ಅದಕ್ಕೆ ವೇಳೆ ಸಹನೆ ಎರಡೂ ಬೇಕಾಗಿತ್ತು. ಇಷ್ಟರ ಮೇಲೆ ಅವನು ಸಿಕ್ಕಿದರೂ ಅವನ ಮನಸ್ಸು ಯಾವ ಸ್ಥಿತಿಯಲ್ಲಿದೆಯೆನ್ನುವುದನ್ನು ಊಹಿಸಲು ಶಕ್ಯವಿರಲಿಲ್ಲ. ಅವನ ಮನಸ್ಸನ್ನು ತಿರುಗಿಸುವುದರಲ್ಲಿ ಸುಬ್ಬಕೃಷ್ಣ ಉಪಾಯವಾಗಿ ವರ್ತಿಸಬೇಕಾಗಿತ್ತು. ಸೂಕ್ಷ್ಮವಾದ ಈ ಕೆಲಸದ ಹೊಣೆ ಅವನ ಮನಸ್ಸಿನ ಆತಂಕವನ್ನು ಹೆಚ್ಚಿಸಿತು. ಮುಂಬಯಿ ತಲಪಿದಾಗ ಅವನ ಮನಸ್ಸು ಶಂಕಾತಂಕಗಳ ನಡುವೆ ತೂಗುತ್ತಿತ್ತು.

ಮೊದಲು ಅವನಿಗೆ ಸ್ನಾನ ವಿಶ್ರಾಂತಿ ಅಗತ್ಯವಾಗಿತ್ತು. ಅದಿಲ್ಲದೆ ಮುಂದಿನ ಯಾವ ಕೆಲಸವನ್ನೂ ಯೋಚಿಸುವ ಹಾಗಿರಲಿಲ್ಲ. ದೀರ್ಘಕಾಲ ರೈಲಿನಲ್ಲಿ ಪ್ರಯಾಣಮಾಡಿ ಅಭ್ಯಾಸವಿಲ್ಲದಿದ್ದ ಅವನಿಗೆ ಈ ಪ್ರಯಾಣ ಮುಜ

ಗರವನ್ನುಂಟುಮಾಡಿತ್ತು. ಸ್ಟೇಷನ್ನಿನಲ್ಲಿಳಿದ ಕೂಡಲೆ ನೇರವಾಗಿ ಫೋರ್ಟಿ ನಲ್ಲಿದ್ದ 'ಮಾಡರ್ನ್ ಹಿಂದೂ ಹೋಟೆಲಿ'ಗೆ ಹೋದ. ಅವನ ಪುಣ್ಯಕ್ಕೆ ಸುಸಜ್ಜಿತವಾಗಿದ್ದ ಸಿಂಗಲ್ ರೂಮೇ ಸಿಕ್ಕಿತು. ಸೂಟ್‌ಕೇಸ್ ಹೋಲ್ಡಾಲು ಗಳನ್ನು ಒಂದು ಕಡೆ ಇಡಿಸಿ ಬಟ್ಟೆ ಬಿಚ್ಚಿ ಸ್ನಾನಕ್ಕೆ ಹೋದ. ಮುಂಬಯಿಯ ಆ ಸೆಕೆಯಲ್ಲಿ ಅವನಿಗೆ ಊಟಕ್ಕಿಂತ ಸ್ನಾನ ಮುಖ್ಯವಾಗಿತ್ತು.

ಸಂಜೆಯವರೆಗೂ ರೂಮು ಬಿಟ್ಟು ಕದಲುವ ಯೋಚನೆ ಮಾಡಲಿಲ್ಲ. ಐದು ಘಂಟೆಗೆ ಎದ್ದು ಬಟ್ಟೆ ಹಾಕಿಕೊಂಡು ಹೊರಹೊರಟ. ಅವನಿಗೆ ಮೈಸೂರು ಸಂಘದಲ್ಲೋ ಕನ್ನಡ ಸಂಘದಲ್ಲೋ ವಿಚಾರಿಸಬೇಕೆಂದು ತವಕ ವಿತ್ತು. ಬಸ್ ಹತ್ತಿ ಮಾತುಂಗದ ಕಡೆ ಹೊರಟ.

ಸುಬ್ಬಕೃಷ್ಣ ಮೈಸೂರು ಸಂಘಕ್ಕೆ ಬಂದಾಗ ಆಚಾರ್ಯರು ಅಲ್ಲೇ ಇದ್ದರು. ಅವನು ಮೈಸೂರಿನಿಂದ ಬಂದಿರುವನೆಂದು ಕೇಳಿ ಅವರಿಗೆ ಸಂತೋಷ ವಾಯಿತು. ಅವನ ಹೆಸರು ಕೇಳಿ ಅವರ ಆಸಕ್ತಿ ಕೆರಳಿತು.

"ನೀವೊಮ್ಮೆ ಕನ್ನಡ ಸಂಘಕ್ಕೆ ಕಾಗದ ಬರೆದಿದ್ದಿರಲ್ಲವೆ?"

ಎಂದು ಕೇಳಿದರು.

"ಹೌದು, ಬರೆದಿದ್ದೆ."

"ನೀವು ಮಧುಸೂದನರಾಯರ ಮಿತ್ರರೆ?"

"ನಾನೂ ಅವರೂ ಬಾಲ್ಯ ಸ್ನೇಹಿತರು."

"ತುಂಬ ಸಂತೋಷ"

ಎಂದು ಅವನಿಗೆ ಕುಳಿತುಕೊಳ್ಳಲು ಹೇಳಿ ಕಾಫಿ ತರಿಸಿಕೊಟ್ಟು ಉಪ ಚರಿಸಿದರು. ಅವನು ಕಾಲೇಜಿನಲ್ಲಿ ಕನ್ನಡ ಲೆಕ್ಚರರಾಗಿರುವನೆಂದು ಕೇಳಿ ಅವರ ಉತ್ಸಾಹ ಹೆಚ್ಚಿತು.

"ಮುಂಬಯಿಯಲ್ಲಿ ಎಷ್ಟು ದಿನ ಇರುತ್ತೀರಿ?"

"ಯಾವುದೋ ಕೆಲಸದ ಮೇಲೆ ಬಂದಿದ್ದೇನೆ. ನಾಲ್ಕೈದು ದಿನ ನಿಲ್ಲ ಬೇಕಾಗಬಹುದು."

"ಹಾಗಾದರೆ ನಮ್ಮ ಸಂಘದಲ್ಲಿ ನಿಮ್ಮ ಭಾಷಣವನ್ನೇಕೆ ಇಟ್ಟುಕೊಳ್ಳ ಬಾರದು?"

ಎಂದು ಕೇಳಿದರು. ಸುಬ್ಬಕೃಷ್ಣ ಭಾಷಣ ಮಾಡುವುದಕ್ಕೆ ಮುಂಬಯಿಗೆ

ಬಂದಿರಲಿಲ್ಲ. ಆ ವ್ಯವಧಾನವೂ ಅವನಿಗಿರಲಿಲ್ಲ. ಅವರ ಆಹ್ವಾನವನ್ನು ವಿನಯದಿಂದ ನಿರಾಕರಿಸುತ್ತ,

"ಈಗ ನನಗೆ ಬಿಡುವಿಲ್ಲ, ಕೈತುಂಬ ಕೆಲಸವಿದೆ. ಭಾಷಣಕ್ಕೇನು, ಮತ್ತೊಮ್ಮೆ ಆಗಲಿ"

ಎಂದು ಉಪಾಯದಿಂದ ತಪ್ಪಿಸಿಕೊಂಡ. ಮಧುಸೂದನ ಎಲ್ಲಿರುವನೆಂದು ತಿಳಿದುಕೊಳ್ಳುವುದು ಅವನಿಗೆ ಅಗತ್ಯವಾಗಿತ್ತು. ಆಚಾರ್ಯರಿಗೆ ಅವನ ಸಂಗತಿ ತಿಳಿದಿತ್ತೆನ್ನುವುದರಲ್ಲಿ ಅನುಮಾನವಿರಲಿಲ್ಲ.

"ಮಧುಸೂದನ ಎಲ್ಲಿ ಇಳಿದುಕೊಂಡಿದ್ದಾರೆ, ತಮಗೆ ಗೊತ್ತೆ?"

ಎಂದು ಕೇಳಿದ. ಆಚಾರ್ಯರು,

"ಅವರು ಇಲ್ಲೇ 'ವಿಜಯ ವಿಲಾಸ'ದಲ್ಲಿದ್ದರು. ನಾನು ಒಂದು ತಿಂಗಳ ಹಿಂದೆ ಅವರನ್ನು ನೋಡಿದ್ದಾಗ ಮುಂಬಯಿ ಬಿಡಲಿರುವುದಾಗಿ ತಿಳಿಸಿದ್ದರು. ಆಮೇಲೆ ಅವರನ್ನು ನೋಡಲು ಅವಕಾಶವಾಗಲಿಲ್ಲ. ಊರಿನಲ್ಲಿದ್ದಾರೋ ಅಥವಾ ಹೊರಟುಹೋಗಿದ್ದಾರೋ ತಿಳಿಯದು. ಅಲ್ಲಿ ವಿಚಾರಿಸಿ ನೋಡಬಹುದು"

ಎಂದರು. ಸುಬ್ಬಕೃಷ್ಣನಿಗೆ ಬೇಕಾಗಿದ್ದುದೂ ಅಷ್ಟೇ. ಬಿಡುವಿದ್ದರೆ ಅವರನ್ನು ಮತ್ತೊಮ್ಮೆ ನೋಡುವುದಾಗಿ ತಿಳಿಸಿ ಅವರಿಂದ ಬೀಳ್ಕೊಂಡು ಹೊರಟ.

ಆಚಾರ್ಯರು ಹೇಳಿದ ಗುರುತಿನ ಮೇಲೆ 'ವಿಜಯ ವಿಲಾಸ'ವನ್ನು ಪತ್ತೆ ಹಚ್ಚುವುದು ಸುಬ್ಬಕೃಷ್ಣನಿಗೆ ಕಷ್ಟವಾಗಲಿಲ್ಲ. ಅವನು ಒಳಗೆ ಹೋಗಿ ಕೇಳಿದಾಗ ಗಲ್ಲದ ಮೇಲೆ ಕುಳಿತಿದ್ದ ಶಿವರಾಮಯ್ಯ ಅವನನ್ನು ಮೇಲಿನಿಂದ ಕೆಳಗಿನವರೆಗೂ ನೋಡಿದ.

"ನೀವು ಮೈಸೂರಿನವರೇ?"

"ಹೌದು."

"ಮಧುಸೂದನರಾಯರು ನಿಮಗೇನಾಗಬೇಕು?"

"ಏನೂ ಇಲ್ಲ, ಅವರು ನನ್ನ ಸ್ನೇಹಿತರು."

ಶಿವರಾಮಯ್ಯ ಒಂದು ಕ್ಷಣ ಸುಮ್ಮನಿದ್ದ. ಅನಂತರ,

"ಅವರು ಇಲ್ಲಿಲ್ಲ; ಹೊರಟುಹೋದರು"

ಎಂದ. ಆ ಮಾತು ಕೇಳಿ ಸುಬ್ಬಕೃಷ್ಣನಿಗೆ ನಿರಾಶೆಯಾಯಿತು.

"ಯಾವಾಗ ಹೋದರು ?"

"ಒಂದು ವಾರವಾಗಿರಬಹುದು."

"ಎಲ್ಲಿಗೆ ಹೋದರೆನ್ನುವುದು ಗೊತ್ತೆ ?"

"ಅದು ನಮಗೆ ಹೇಗೆ ಗೊತ್ತಾಗಬೇಕು ? ಹೋಗುವಾಗ ಅವರೇನೂ ಹೇಳಿ ಹೋಗಲಿಲ್ಲ"

ಎಂದು ಆ ವಿಷಯ ಬೆಳೆಸಲು ತನಗಿಷ್ಟವಿಲ್ಲವೆನ್ನುವ ಹಾಗೆ ಮುಖ ತಿರುಗಿಸಿಕೊಂಡ. ಅವನ ಅವಿನಯ ನೋಡಿ ಸುಬ್ಬಕೃಷ್ಣನಿಗೆ ಅಸಮಾಧಾನ ವಾಯಿತು. ಆದರೂ ಯಾವ ಮಾತನ್ನೂ ಆಡದೆ ಅಲ್ಲಿಂದ ಹೊರಟುಬಿಟ್ಟ.

ಅವನ ಮುಂದೆ ಮುಂಬಯಿ ಎದೆಗೆಡಿಸುವ ಭೂತದಂತೆ ಹರಡಿ ಕೊಂಡಿತ್ತು. ಅದರ ವಿಶಾಲವಾದ ಮೈಯಲ್ಲಿ ಮಧುಸೂದನ ಎಲ್ಲಿ ಅಡಗಿದ್ದನೋ ಹೇಳಲು ಸಾಧ್ಯವಿರಲಿಲ್ಲ. ಅವನು ಆ ನಗರದಲ್ಲಿ ಸುಬ್ಬಕೃಷ್ಣನ ಕಣ್ಣಿಗೆ ಬೀಳದೆ ಎಷ್ಟು ವರ್ಷವಾದರೂ ಇರಲು ಸಾಧ್ಯವಿತ್ತು. ಅವನಿಗೆ ಅನ್ನ ನೆರಳು ನೀಡುವ ಸ್ಥಳಗಳಿಗೇನೂ ಅಲ್ಲಿ ಕೊರತೆಯಿರಲಿಲ್ಲ. ಅಸಂಖ್ಯಾತವಾಗಿದ್ದ ಹೋಟೆಲು ಗಳಲ್ಲಿ ಅವನು ಯಾವ ಒಂದರಲ್ಲಿದ್ದರೂ ಗೊತ್ತಾಗುವಂತಿರಲಿಲ್ಲ.

ಸುಬ್ಬಕೃಷ್ಣನ ಮುಂದೆ ಅವನನ್ನು ಹುಡುಕುವ ಸಮಸ್ಯೆ ಬೃಹದ್ರೂಪ ತಳೆದು ನಿಂತಿತು. ಅವನು ಕುಗ್ಗಿದ ಮನಸ್ಸಿನಿಂದ ಹೋಟೆಲಿಗೆ ಹಿಂತಿರುಗಿದ.

ಅವನೊಂದು ಕಾರ್ಯಕ್ರಮ ಹಾಕಿಕೊಳ್ಳುವುದು ಅಗತ್ಯವಾಗಿತ್ತು. ಮುಂಬಯಿಯ ನಿಕಟ ಪರಿಚಯ ಅವನಿಗಿರಲಿಲ್ಲ. ವಿದ್ಯಾರ್ಥಿಯಾಗಿದ್ದಾಗ ಹಿಂದೆ ಯಾವಾಗಲೋ ಒಮ್ಮೆ ಅವನು ಮುಂಬಯಿಗೆ ಬಂದಿದ್ದ. ಆದರೆ ಆ ಕಾಲ ಬೇರೆ. ಅದು ಯುದ್ಧದ ಹಿಂದಿನ ಕಾಲ. ಆಗ್ಗೂ ಈಗ್ಗೂ ಪರಿಸ್ಥಿತಿಯಲ್ಲಿ ಬಹಳ ವ್ಯತ್ಯಾಸವಾಗಿತ್ತು. ಮುಂಬಯಿ ಅರ್ಥವಿಲ್ಲದ ಹಾಗೆ ಬೆಳೆದಿತ್ತು. ನೂರಾರು ರಸ್ತೆಗಳು ಸಾವಿರಾರು ಕಟ್ಟಡಗಳ ಹೆಣಿಗೆಯಲ್ಲಿ ಊರು ಹಬ್ಬಿ ಹೋಗಿತ್ತು. ಸರಿಯಾದ ತಿಳಿವಳಿಕೆಯಿಲ್ಲದೆ ಅಲ್ಲಿ ಯಾರನ್ನಾದರೂ ಹುಡುಕಲು ಹೊರಡುವುದು ಕುರುಡನ ಸುತ್ತಾಟದಷ್ಟೇ ನಿಷ್ಪ್ರಯೋಜಕವಾಗಿತ್ತು.

ಸುಬ್ಬಕೃಷ್ಣ ಇದನ್ನೆಲ್ಲಾ ಯೋಚಿಸಿದ. ಅವನಿಗೆ ಮುಂಬಯಿಯ ನಕ್ಷೆ, ಬಸ್ ಟ್ರಾಂಗಳ ದಿಕ್ಸೂಚಿಗಳು ಅಗತ್ಯವಾಗಿದ್ದವು. ಅವುಗಳನ್ನು ದೊರಕಿಸಿ

ಕೊಳ್ಳದಿದ್ದರೆ ಅವನ ಕೆಲಸ ಸುಲಭವಾಗುತ್ತಿರಲಿಲ್ಲ. ಗೊತ್ತು ಗುರಿಯಿಲ್ಲದ ಅಲೆದಾಟದಿಂದ ಹಣ, ಹೊತ್ತು, ಶ್ರಮ ಎಲ್ಲವೂ ವ್ಯರ್ಥವಾಗುತ್ತಿದ್ದವು.

ಮಾರನೆಯ ದಿನದಿಂದ ಅವನೊಂದು ವ್ಯವಸ್ಥೆ ಮಾಡಿಕೊಂಡ. ಬೆಳಗ್ಗೆ ಎದ್ದು ಸ್ನಾನ ಉಪಾಹಾರ ಮುಗಿಸಿಕೊಂಡು ಹೊರಟರೆ ಹನ್ನೆರಡಕ್ಕೆ ಹಿಂತಿರುಗುವುದು. ಊಟ ಮಾಡಿ ಮಧ್ಯಾಹ್ನದವರೆಗೂ ವಿಶ್ರಾಂತಿ ತೆಗೆದುಕೊಂಡು ಮತ್ತೆ ಹೊರಡುವುದು. ರಾತ್ರಿ ಒಂಬತ್ತರವರೆಗೂ ಸಾಧ್ಯವಾದಷ್ಟು ಸುತ್ತಿ ನೋಡುವುದು. ಈ ಸುತ್ತಾಟದಲ್ಲಿ ಮುಂಬಯಿಯ ಹೋಟೆಲುಗಳೆಲ್ಲವನ್ನೂ ಒಂದು ಕಡೆಯಿಂದ ಸೋಸಿಕೊಂಡು ಬಂದುಬಿಡಬೇಕೆಂದು ಅವನು ಸಂಕಲ್ಪಿಸಿದ.

ಅವನ ನಿರ್ಧಾರ ದೃಢವಾಗಿಯೇ ಇತ್ತು. ನಿರಾಶೆಗೆ ಎಡೆಗೊಡದಂತೆ ಅವನು ಮನಸ್ಸನ್ನು ಗಟ್ಟಿಮಾಡಿಕೊಂಡಿದ್ದ.

ಮೊದಲನೆಯ ದಿನದ ಸುತ್ತಾಟದಲ್ಲಿಯೇ ಅವನು ನಲವತ್ತು ಐವತ್ತು ಹೋಟೆಲುಗಳಿಗೆ ಕಡಮೆಯಿಲ್ಲದಂತೆ ಭೇಟಿ ಕೊಟ್ಟ. ಬಸ್ಸಿನಲ್ಲಿ ಎಷ್ಟೇ ತಿರುಗಿದರೂ ಹೋಟೆಲುಗಳ ಮೆಟ್ಟಲು ಹತ್ತಿ ಹತ್ತಿ ಇಳಿಯುವುದು ಸುಲಭವಾದ ಕೆಲಸವಾಗಿರಲಿಲ್ಲ. ಮುಂಬಯಿಯ ಸುಡುಬಿಸಿಲು ನಿರ್ದಯವಾಗಿ ದಹಿಸುತ್ತಿತ್ತು. ವ್ಯವಹಾರನಿರತರಾಗಿದ್ದ ಜನಕ್ಕೆ ಅವನ ಪ್ರಶ್ನೆಗಳಿಗೆ ಉತ್ತರ ಕೊಡುವಷ್ಟು ತಾಳ್ಮೆಯೂ ಇರಲಿಲ್ಲ. ಸುಬ್ಬಕೃಷ್ಣ ರಾತ್ರಿಯವರೆಗೂ ಸುತ್ತಿ ದಣಿದು ಹಿಂತಿರುಗಿದ. ಮಧುಸೂದನನ ಸುಳುವು ಅವನಿಗೆ ಸಿಕ್ಕಿರಲಿಲ್ಲ.

ಆದರೆ ಅಷ್ಟಕ್ಕೇ ಬಿಡಲು ಅವನು ಸಿದ್ಧನಾಗಿರಲಿಲ್ಲ. ತನ್ನ ಶೋಧನೆಯನ್ನು ಛಲದಿಂದ ಮುಂದುವರಿಸಿದ.

ದಾದರ್, ಮಾತುಂಗಾ, ಅಂಧೇರಿ, ಸಿಯಾನ್, ಬೈಕುಲಾ, ವರ್ಲಿ. ನಾಲ್ಕು ದಿನ ತಿರುಗುವ ಹೊತ್ತಿಗೇ ಅವನಿಗೆ ಸಾಕುಸಾಕಾಗಿತ್ತು; ಹೋಟೆಲುಗಳ ಹೊಸಿಲು ತುಳಿದು ತುಳಿದು ಕಾಲು ಬಿದ್ದುಹೋಗಿತ್ತು. ಎಲ್ಲಿ ಹೋದರೂ ಒಂದೇ ಪ್ರಶ್ನೆ, ಒಂದೇ ಉತ್ತರ:

"ಇಲ್ಲಿಲ್ಲ, ಗೊತ್ತಿಲ್ಲ."

ಆ ಮಾತು ಕೇಳಿ ಕೇಳಿ ಸುಬ್ಬಕೃಷ್ಣನಿಗೆ ಅಭ್ಯಾಸವಾಗುತ್ತ ಬಂದಿತ್ತು. ಪ್ರಶ್ನೆ ಕೇಳುವ ಮೊದಲೇ ಅವನ ಕಿವಿ ಆ ಉತ್ತರಕ್ಕೆ ಸಿದ್ಧವಾಗಿತ್ತು. ಅಲ್ಲಿ

ವಿಚಾರಿಸಿ, ಇಲ್ಲಿ ವಿಚಾರಿಸಿ ಎಂದು ಯಾರು ಯಾರೋ ಹೇಳುತ್ತಿದ್ದರು. ಆದರೆ ಎಲ್ಲಿ ವಿಚಾರಿಸಿದರೂ ಒಂದೇ ಆಗಿತ್ತು.

"ಷಿರಾಜ್ ಮಂಜಿಲ್‌ನಲ್ಲಿ ಕೇಳಿ"

ಎಂದು ಯಾರೋ ಅಂದರು. ಸುಬ್ಬಕೃಷ್ಣ ಆಸೆಯಿಂದ ಅಲ್ಲಿಗೆ ಹೋದ. ಆದರೆ ಅದು ಬಾಗಿಲು ಬಡಿದು ಹಾಳು ಸುರಿಯುತ್ತಿತ್ತು. ಅವನು ನಿರಾಶನಾಗಿ ಹಿಂತಿರುಗಿದ.

ಅವನ ಮನಸ್ಸಿಗೆ ಜುಗುಪ್ಸೆಯಾಗಿತ್ತು. ನಾಲ್ಕೈದು ದಿನಗಳ ಅಲೆದಾಟದಿಂದ ಬಸ್ ಟ್ರಾಂಗಳಿಗಾಗಿಯೇ ಏನಿಲ್ಲವೆಂದರೂ ನಲವತ್ತು ಐವತ್ತು ರೂಪಾಯಿ ವೆಚ್ಚವಾಗಿತ್ತು. ಅದನ್ನು ಅವನು ಲೆಕ್ಕಿಸದಿದ್ದರೂ ನಿರರ್ಥಕವಾದ ಓಡಾಟದಲ್ಲಿ ಅಮೂಲ್ಯವಾದ ಕಾಲ ಕಳೆದುಹೋಗುತ್ತಿತ್ತು; ಅವನ ರಜ ನಿಧಾನವಾಗಿ ಕರಗುತ್ತಿತ್ತು; ಮದರಾಸಿನಲ್ಲಿ ಅಯ್ಯರರು ಸುದ್ದಿಗಾಗಿ ಕಾಯುತ್ತಿದ್ದರು.

ಈಗೇನು ಮಾಡುವುದು? ಮದರಾಸಿಗೆ ಹಿಂತಿರುಗಿಬಿಡುವುದೇ? ಮಧುಸೂದನ ಸಿಕ್ಕಲಿಲ್ಲವೆಂದು ಹೇಳುವುದೇ? ತನ್ನ ಕೆಲಸದಲ್ಲಿ ಸೋತೆನೆಂದು ಒಪ್ಪಿಕೊಳ್ಳುವುದೇ?

ಸೋಲು? ಅವನು ಸರ್ವಥಾ ಸೋಲನ್ನೊಪ್ಪಿಕೊಳ್ಳಲು ಸಿದ್ಧನಾಗಿರಲಿಲ್ಲ.

ಅವನ ಮನಸ್ಸು ಹಟದಿಂದ ಸೆಟೆದು ನಿಂತಿತು. ಅವನು ಆಹಾರ ವಿಶ್ರಾಂತಿಗಳನ್ನು ನಿರ್ಲಕ್ಷಿಸಿ ಹುಡುಕತೊಡಗಿದ. ಆ ಧೂಳಿನಲ್ಲಿ, ಆ ಬಿಸಿಲಿನಲ್ಲಿ, ಆ ಜನಸಮ್ಮರ್ದದಲ್ಲಿ, ಸ್ನೇಹದೂರವಾದ ಆ ವಾತಾವರಣದಲ್ಲಿ ಅವನ ದೇಹ ಬಳಲುತ್ತಿತ್ತು. ಆದರೆ ಮನಸ್ಸು ವಜ್ರದಂತೆ ಕಠಿನವಾಗಿತ್ತು.

ಇದ್ದಕ್ಕಿದ್ದ ಹಾಗೆ ಹುಡುಕುತ್ತಿದ್ದ ಬಳ್ಳಿ ಕಾಲಿಗೆ ತೊಡರಿತು.

ಒಂದು ಬೆಳಗ್ಗೆ ಕುರ್ಲಾದಲ್ಲಿ ವಿಚಾರಿಸಿಕೊಂಡು ಬರುತ್ತ ಒಂದು ಸಣ್ಣ ಹೋಟೆಲಿನ ಬಳಿಗೆ ಬಂದ. ಅಲ್ಲಿ ಮಧುಸೂದನ ಇದ್ದಾನೆಂದು ಅವನು ಭಾವಿಸಲೂ ಕಾರಣವಿರಲಿಲ್ಲ. ಅದನ್ನು ದಾಟಿಕೊಂಡು ಮುಂದೆ ಹೋಗಿಬಿಟ್ಟಿದ್ದವನು ಏನೋ ತೋರಿ ಹಿಂದಕ್ಕೆ ಬಂದ. ಎದ್ದುಹೋಗುವ ಮಾತು ಬಿದ್ದುಹೋಗಲೆಂದು ಗಲ್ಲದ ಮೇಲೆ ಕುಳಿತಿದ್ದ ಸೇಟನ್ನು ಕೇಳಿದ:

"ಮಧುಸೂದನ ಎನ್ನುವವರು ಯಾರಾದರೂ ಇಲ್ಲಿ ಇದ್ದಾರೆಯೆ?"

ಸೇಟು ಕಣ್ಣು ಕೆಕ್ಕರಿಸಿಕೊಂಡು ಸುಬ್ಬಕೃಷ್ಣನನ್ನು ನೋಡಿದ.

"ಯಾರೂ ಇಲ್ಲ."

"ಗಾಯಕರು. ಮೈಸೂರಿನವರು."

"ಉಹೂ. ಅಂಥವರು ಇಲ್ಲಿ ಯಾರೂ ಇಲ್ಲ."

ಸುಬ್ಬಕೃಷ್ಣ ಹತಾಶನಾಗಿ ಹೋಟೆಲು ಮೆಟ್ಟಲಿಳಿದ. ಅವನು ಸೇಟಿನ ಹತ್ತಿರ ಮಾತಾಡಿದ್ದನ್ನು ಕೇಳಿಸಿಕೊಂಡ ಮಾಣಿ ಟೇಬಲ್ ಒರಸುತ್ತಿದ್ದುದನ್ನು ಹಾಗೆಯೇ ಬಿಟ್ಟು ಅವನ ಹಿಂದೆ ಬಂದ.

"ಪಕ್ಕದ ಮನೆಯಲ್ಲಿ ವಿಚಾರಿಸಿ."

ಧ್ವನಿ ಕೇಳಿ ಸುಬ್ಬಕೃಷ್ಣ ತಟಕ್ಕನೆ ನಿಂತುಕೊಂಡ.

"ಆ ಹೆಸರಿನವರು ಅಲ್ಲಿ ಯಾರಾದರೂ ಇದ್ದಾರೆಯೆ ?"

"ಯಾರೋ ಹೊಸಬರು ಬಂದಿರುವ ಹಾಗಿದೆ."

"ಥ್ಯಾಂಕ್ಸ್"

ಎಂದು ಹೇಳಿ ಹೊರಟ. ಅವನ ಮನಸ್ಸಿನಲ್ಲಿ ಅನಿರೀಕ್ಷಿತ ಆಸೆ ತಲೆಯೆತ್ತಿತ್ತು.

ಆದರೆ ಪಕ್ಕದ ಮನೆಗೆ ಬೀಗ ಹಾಕಿತ್ತು; ಮುರಿದಿದ್ದ ಅದರ ಗೇಟು ಅರ್ಧ ತೆರೆದುಕೊಂಡಿತ್ತು; ಒಳಗೆ ಎರಡು ಮೂರು ಹಸುಗಳು ಮೇಯುತ್ತಿದ್ದವು; ಮನೆ ಜನಶೂನ್ಯವಾಗಿದ್ದಂತೆ ಕಂಡಿತು. ಮಾಣಿ ತಪ್ಪು ಸುದ್ದಿ ಕೊಟ್ಟನೇ ಎಂದು ಅವನಿಗನ್ನಿಸಿತು. ಹೇಗಾದರೂ ಆಗಲಿ ಮನೆಯನ್ನು ಒಮ್ಮೆ ಸುತ್ತಿ ನೋಡೋಣವೆಂದುಕೊಂಡು ಒಳಗೆ ಬಂದ. ಅವನು ಮನೆಯ ಹಿಂಭಾಗಕ್ಕೆ ಬಂದಾಗ ಅಲ್ಲಿ ದೊಡ್ಡ ಕೈಸಾಲೆಯಿದ್ದುದು ಕಂಡುಬಂದಿತು. ಅಲ್ಲಿ ಸಾಲಾಗಿ ನಾಲ್ಕೈದು ರೂಮುಗಳಿದ್ದವು.

ಸುಬ್ಬಕೃಷ್ಣ ಕಿಟಕಿಗಳ ಹತ್ತಿರ ಹೋಗಿ ರೂಮುಗಳನ್ನು ಒಂದೊಂದನ್ನೇ ಆಗಿ ಪರೀಕ್ಷಿಸುತ್ತ ಬಂದ. ಎರಡು ರೂಮು ಖಾಲಿಯಾಗಿ ಬೀಗ ಹಾಕಿತ್ತು. ಇನ್ನೆರಡರಲ್ಲಿ ಬೇರೆ ಯಾರೋ ಇದ್ದರು. ಕೊನೆಯ ರೂಮಿನ ಬಾಗಿಲು ಸುಮ್ಮನೆ ಮುಚ್ಚಿತ್ತು. ಸುಬ್ಬಕೃಷ್ಣ ಕಿಟಕಿಯ ಹತ್ತಿರ ಹೋಗಿ ಬಗ್ಗಿ ನೋಡಿದ. ಕಿಟಕಿಯ ಒಂದು ರೆಕ್ಕೆ ಹಾಕಿತ್ತು. ಇನ್ನೊಂದರಿಂದ ಒಳಗಿರುವುದೆಲ್ಲವನ್ನೂ ನೋಡಲು ಸಾಧ್ಯವಿರಲಿಲ್ಲ. ಒಂದು ಚಾಪೆ, ಸುರುಳಿ ಸುತ್ತಿದ ಒಂದು ಹಾಸಿಗೆ, ನಾಲ್ಕಾರು

ಸೀಸೆಗಳು ಅವನ ಕಣ್ಣಿಗೆ ಬಿದ್ದವು. ಅವನ ದೃಷ್ಟಿಪಥದಿಂದ ಅರ್ಧ ಮರೆಯಾಗಿದ್ದ ಭಾಗದಲ್ಲಿ ಒಂದು ಮೇಜಿನ ಮೇಲೆ ತಲೆಯಿಟ್ಟು ಯಾರೋ ಮಲಗಿದ್ದಂತಿತ್ತು. ಸುಬ್ಬಕೃಷ್ಣ ಬಾಗಿಲ ಮುಂದೆ ಬಂದು ನಿಂತು ಎರಡು ಸಲ ಮೆಲ್ಲನೆ ತಟ್ಟಿದ. ಒಂದು ಕ್ಷಣ ಒಳಗಿನಿಂದ ಯಾವ ಸದ್ದೂ ಬರಲಿಲ್ಲ. ಇನ್ನೊಮ್ಮೆ ಸ್ವಲ್ಪ ಗಟ್ಟಿಯಾಗಿ ತಟ್ಟಿದ. ಕುರ್ಚಿಯನ್ನು ಧಡಕ್ಕನೆ ಸರಿಸಿ ಎದ್ದು ಬಂದು ಯಾರೋ ಬಾಗಿಲ ಚಿಲಕ ತೆಗೆದರು.

"ಯಾರು? ಏನು ಬೇಕು?"

"ಇಲ್ಲಿ ಮಧುಸೂದನ ಎನ್ನುವರು ಇದ್ದಾರೆಯೆ?"

ವ್ಯಕ್ತಿಯ ಮೈ ಒಂದು ಕ್ಷಣ ಹಿಂದೆ ಮುಂದೆ ತೂಗಿತು.

"ಇಲ್ಲಿ ಯಾರೂ ಇಲ್ಲ, ಹೋಗಿ"

ಎಂದು ನುಡಿದು ಬಾಗಿಲು ಮುಚ್ಚಲೆತ್ನಿಸಿದ. ಸುಬ್ಬಕೃಷ್ಣ ಷೂಸ್ ಹಾಕಿದ್ದ ಕಾಲನ್ನು ತಕ್ಷಣ ಹೊಸಿಲಿನೊಳಗಿಟ್ಟು ಮುಚ್ಚುತ್ತಿದ್ದ ಬಾಗಿಲನ್ನು ಅಷ್ಟಕ್ಕೇ ತಡೆದು ನಿಲ್ಲಿಸಿದ. ಒಂದು ಕೈಯಿಂದ ಬಾಗಿಲನ್ನು ಭದ್ರವಾಗಿ ಹಿಡಿದು ಕೊಂಡು ವ್ಯಕ್ತಿಯ ಮುಖವನ್ನು ದಿಟ್ಟಿಸಿ ನೋಡಿದ.

"ನಿಮ್ಮ ಹೆಸರೇನು?"

"ನನ್ನ ಹೆಸರೇ?"

"ಹೌದು, ನಿಮ್ಮ ಹೆಸರು."

"ನನಗೆ ಹೆಸರಿಲ್ಲ"

ಎಂದು ತೊದಲುತ್ತ ನುಡಿದ. ಅವನು ಯಾವುದೋ ಮಬ್ಬಿನಲ್ಲಿದ್ದಂತೆ ತೋರುತ್ತಿತ್ತು. ಮುಖದ ಮೇಲೆ ಒಂದು ವಾರದ ಗಡ್ಡ ಬೆಳೆದಿತ್ತು; ಕಣ್ಣು ಕೆಂಪಾಗಿ ಕೆಂಡದುಂಡೆಗಳಂತಿದ್ದವು: ತಲೆಕೆದರಿ ಸಿಕ್ಕುಕಟ್ಟಿತ್ತು; ಒಂದು ಕೊಳಕು ನಿಕ್ಕರ್–ಬನೀನ್ ಬಿಟ್ಟು ಮೈಮೇಲೆ ಬೇರೆ ಬಟ್ಟೆಯಿರಲಿಲ್ಲ. ಸುಬ್ಬಕೃಷ್ಣ ಅವನನ್ನು ತಳ್ಳಿಕೊಂಡು ಒಳಗೆ ಹೋದ.

"ನಿಮಗೆ ಹೆಸರಿಲ್ಲವೆ? ನಿಮ್ಮ ಹೆಸರು ಮಧುಸೂದನ ಅಲ್ಲವೆ?"

ಎಂದು ಧ್ವನಿ ಎತ್ತರಿಸಿ ಕೇಳಿದ. ವ್ಯಕ್ತಿ ತೇಲುಗಣ್ಣಿಂದ ಅವನನ್ನೊಮ್ಮೆ ನೋಡಿದ.

"ನೀವು ಯಾರು?"

“ ನನ್ನ ಗುರುತು ಸಿಕ್ಕಲಿಲ್ಲವೆ? ನಾನು ಸುಬ್ಬಕೃಷ್ಣ ಅಲ್ಲವೆ?”

ಎಂದು ಎರಡು ಕೈಗಳಿಂದಲೂ ಅವನ ಭುಜವನ್ನು ಹಿಡಿದಲುಗಿಸುತ್ತ ಮುಖದ ಹತ್ತಿರ ಮುಖವಿಟ್ಟು ಕೇಳಿದ.

“ ಸುಬ್ಬಕೃಷ್ಣ, ಸುಬ್ಬಕೃಷ್ಣ ”

ಎಂದು ಅವನು ತಡವರಿಸುತ್ತ ಉಚ್ಚರಿಸಿದ. ಆ ಮಾತು ಲುಪ್ತವಾಗಿದ್ದ ಅವನ ಪ್ರಜ್ಞೆಯ ಬುಡವನ್ನು ಹಿಡಿದು ನಿಧಾನವಾಗಿ ಅಲ್ಲಾಡಿಸತೊಡಗಿತು. ಹೆಪ್ಪುಗಟ್ಟಿದ್ದ ಮರೆವಿನ ಆಳದಿಂದ ಸ್ಮೃತಿ ಮೆಲ್ಲನೆ ಮೇಲಕ್ಕೆ ತೇಲಿತು. ದೊಡ್ಡದಾಗಿ ಕಣ್ಣು ಬಿಟ್ಟು ಅವನನ್ನೇ ನಿಟ್ಟಿಸಿದ. ಅಂಧಕಾರದಲ್ಲಿ ಫಳಚ್ಚನೆ ಬೆಳಕು ಮಿಂಚಿದಂತಾಯಿತು. ಮರುಕ್ಷಣವೇ,

“ ಸುಬ್ಬೂ, ಸುಬ್ಬೂ ”

ಎಂದು ಗದ್ಗದಿಸುತ್ತ ಅವನನ್ನು ಬಾಚಿ ತಬ್ಬಿಕೊಂಡ. ಸುಬ್ಬಕೃಷ್ಣ ಮಾತಾಡುವ ಸ್ಥಿತಿಯಲ್ಲಿರಲಿಲ್ಲ. ಅವನ ಕುತ್ತಿಗೆ ಬಿಗಿದು ಬಂದಿತ್ತು; ಕಣ್ಣು ನೀರಿನಿಂದ ಮಂಜಾಗಿತ್ತು.

ಗಾಢವಾದ ಆಲಿಂಗನದಲ್ಲಿ ಅವರಿಬ್ಬರೂ ಮಾತಿಲ್ಲದೆ ಕಂಬನಿಗರೆಯುತ್ತ ನಿಂತಿದ್ದರು.

ಸುಬ್ಬಕೃಷ್ಣ ಮಧುಸೂದನನನ್ನು ಮೆಲ್ಲನೆ ಕುರ್ಚಿಯ ಮೇಲೆ ಕುಳ್ಳಿರಿಸಿ ತಾನು ಹಾಸಿಗೆಯ ಸುರಳಿ ಒರಗಿಕೊಂಡು ಚಾಪೆಯ ಮೇಲೆ ಕುಳಿತ. ಅವನ ದೃಷ್ಟಿ ರೂಮಿನಸುತ್ತ ಹರಿಯಿತು. ಕಸಕುಪ್ಪೆ ತುಂಬಿ ರೂಮು ಅಸಹ್ಯವಾಗಿತ್ತು; ಸುಣ್ಣ ಕಾಣದ ಗೋಡೆ ಎಣ್ಣೆಯ ಬಣ್ಣಕ್ಕೆ ತಿರುಗಿತ್ತು; ಅರ್ಧ ಮುಕ್ಕಾಲು ಸೇದಿ ಬಿಸುಟ ಸಿಗರೇಟಿನ ತುಂಡುಗಳು ರೂಮಿನಲ್ಲಿ ಚೆಲ್ಲಾಡಿದ್ದವು; ಮೇಜಿನ ಮೇಲೆ, ಹಾಸಿಗೆಯ ಹತ್ತಿರ ಮೂರು ನಾಲ್ಕು ಬ್ರಾಂದಿ ವ್ಹಿಸ್ಕಿ ಸೀಸೆಗಳಿದ್ದವು; ರೂಮಿನಲ್ಲಿ ಕಮಟುವಾಸನೆ ಸುತ್ತಿಕೊಂಡಿತ್ತು.

ಸುಬ್ಬಕೃಷ್ಣನ ದೃಷ್ಟಿ ಮಧುಸೂದನನ ಮೇಲೆ ನೆಲಸಿತು. ಅವನು ಮಧುಸೂದನನೆಂದು ಹೇಳುವುದಕ್ಕೂ ಸಾಹಸ ಬೇಕಾಗಿತ್ತು. ಕಣ್ಣುಗಳು ಗುಳಿಬಿದ್ದು ಕಾಂತಿಹೀನವಾಗಿದ್ದವು; ಮುಖ ಅದರ ಸಹಜವಾದ ವರ್ಚಸ್ಸನ್ನು ಕಳೆದುಕೊಂಡಿತ್ತು; ಮೈಮೇಲೆ ಮೂಳೆ ಎದ್ದು ಕಾಣುತ್ತಿತ್ತು; ಹದ್ದುಮೀರಿದ ಜೀವನ ಪುಷ್ಟವಾಗಿದ್ದ ಅವನ ಮೈಕಟ್ಟನ್ನು ಕೊಳ್ಳೆ ಹೊಡೆದಿತ್ತು.

ಅವನ ದುಸ್ಥಿತಿ ನೋಡಿ ಸುಬ್ಬಕೃಷ್ಣನ ಕರುಳು ಹಿಂಡಿತು.

ಅವನ ದೃಷ್ಟಿ ತನ್ನನ್ನು ಶೋಧಿಸುತ್ತಿರುವುದನ್ನರಿತು ಮಧುಸೂದನ ತಲೆ ತಗ್ಗಿಸಿದ.

"ಯಾವಾಗ ಬಂದೆ, ಸುಬ್ಬು ?"

ಎಂದು ತಲೆಯೆತ್ತದೆಯೆ ಕುಗ್ಗಿದ ಧ್ವನಿಯಲ್ಲಿ ಕೇಳಿದ.

"ನಾನು ಬಂದು ಎಂಟು ದಿವಸವಾಯಿತು."

"ನಾನಿಲ್ಲಿದ್ದೇನೆಂದು ಯಾರು ಹೇಳಿದರು ?"

"ಯಾರೂ ಹೇಳಲಿಲ್ಲ. ನಾನೇ ಹುಡುಕಿಕೊಂಡು ಬಂದೆ."

"ನನಗೋಸ್ಕರ ಮುಂಬಯಿಗೆ ಬಂದೆಯಾ ?"

"ಹೌದು; ಇನ್ನೇತಕ್ಕೆ ಇಲ್ಲಿಗೆ ಬರುವ ಕೆಲಸವಿತ್ತು ?"

ಮಧುಸೂದನ ಒಂದು ಕ್ಷಣ ಮೌನವಾಗಿದ್ದ. ಬಳಿಕ ಉದ್ವೇಗ ತುಂಬಿದ ಧ್ವನಿಯಲ್ಲಿ,

"ನೀನೇಕೆ ಬಂದೆ, ಸುಬ್ಬು ? ಆ ತೊಂದರೆಯನ್ನೇಕೆ ತೆಗೆದುಕೊಂಡೆ ?"

ಎಂದ. ಆ ಮಾತು ಕೇಳಿ ಸುಬ್ಬಕೃಷ್ಣ ಅಚ್ಚರಿಯಿಂದ ಮಧುಸೂದನನ ಮುಖ ನೋಡಿದ.

"ನಾನು ಬರಬಾರದಾಗಿತ್ತೆ? ನಾನು ಬರದಿದ್ದರೆ ನೀನೇ ಬರುತ್ತಿದ್ದೆಯಾ ?"

"ನಾನೆಲ್ಲಿಗೆ ಬರಬೇಕಾಗಿತ್ತು ?"

"ನೀನೆಲ್ಲಿಗೆ ಬರಬೇಕೆ? ಊರಿಗೆ ಬರುವ ಮನಸ್ಸು ನಿನಗಿಲ್ಲವೆ ?"

"ಊರಿಗೆ ಬಂದು ನಾನೇನು ಮಾಡಬೇಕು, ಸುಬ್ಬು ? ಅಲ್ಲಿ ನನಗೇನು ಕೆಲಸವಿದೆ ?"

"ಹಾಗಾದರೆ ಊರಿಗೆ ಬರುವುದಿಲ್ಲ, ಅನ್ನು ? ನಮ್ಮನ್ನೆಲ್ಲ ತೊರೆದು ಬಿಡಬೇಕೆಂದು ಮಾಡಿದ್ದೀಯಾ ?"

"ಯಾರನ್ನೂ ತೊರೆಯುವ ಮಾತನ್ನು ನಾನು ಆಡುತ್ತಿಲ್ಲ. ಪ್ರಪಂಚವೇ ನನ್ನನ್ನು ತೊರೆದಿದೆ."

"ಅದು ನೀನು ಕಲ್ಪಿಸಿಕೊಂಡಿರುವ ಭ್ರಾಂತಿ."

“ ಭ್ರಾಂತಿಯೆಂದೇಕೆ ಹೇಳುತ್ತೀ ಸುಬ್ಬು? ಸತ್ಯವನ್ನೇಕೆ ಭ್ರಾಂತಿಯೆನ್ನಬೇಕು?”

“ ಯಾವುದು ಸತ್ಯ? ನಿನ್ನ ಮನಸ್ಸಿನ ಕಲ್ಪನೆಯೇ ಸತ್ಯವೆ?”

“ ನಿನಗೆ ಹೇಳುವುದು ಕಷ್ಟ. ನನ್ನ ಮನಸ್ಸಿನ ಸ್ಥಿತಿಯನ್ನು ನೀನು ಅರ್ಥಮಾಡಿಕೊಳ್ಳಲಾರೆ.”

“ ನನಗೆ ಅರ್ಥವಾಗದಿರುವಂತಹುದೇನು? ಅದನ್ನಾದರೂ ಹೇಳು.”

“ ನನಗೆ ಜೀವನವೇ ರೋಸಿಹೋಗಿದೆ, ಸುಬ್ಬು. ನನ್ನ ಮನಸ್ಸಿಗೆ ಸ್ವಲ್ಪವೂ ನೆಮ್ಮದಿಯಿಲ್ಲವಾಗಿದೆ.”

“ ಅದಕ್ಕೆ ಯಾರನ್ನು ಹೊಣೆ ಮಾಡುತ್ತೀ?”

“ ನನ್ನನ್ನು ಕೇಳಿದರೆ ನಾನೇನು ಹೇಳಲಿ? ನನ್ನ ಭಾಗಕ್ಕೆ ಕ್ರೂರವಾದ ವಿಧಿಯನ್ನು ಕೇಳಬೇಕು.”

“ ವಿಧಿಯ ಕೈಯಲ್ಲಿ ನೀನು ನಿನ್ನ ಜೀವನವನ್ನೊಪ್ಪಿಸಿ ಕುಳಿತಿರುವೆಯೇನು?”

ಮಧುಸೂದನ ಆ ಪ್ರಶ್ನೆಗೆ ಉತ್ತರ ಕೊಡಲಿಲ್ಲ. ಅವನ ಮನಸ್ಸು ಏನನ್ನೋ ಯೋಚಿಸುತ್ತಿತ್ತು.

“ ನನ್ನ ಮಾತಿಗೆ ಉತ್ತರಕೊಡು. ನಿನ್ನ ಸತ್ತ್ವ, ನಿನ್ನ ಬುದ್ಧಿ ಹಿಂಗಿಹೋದುವೆ? ನಿನ್ನ ವಿವೇಚನಾ ಶಕ್ತಿ ಶೂನ್ಯವಾಯಿತೆ? ಪ್ರಪಂಚದಲ್ಲಿ ಯಾರಿಗೂ ತಾಯಿ ಸಾಯುವುದಿಲ್ಲವೆ? ಅದು ನಿನಗೊಬ್ಬನಿಗೇ ಮೀಸಲೆ? ಆ ದುಃಖವೊಂದೇ ನಿನ್ನನ್ನು ಮತಿಗೆಡಿಸಬೇಕೆ?”

“ ನಾನು ಒಂದು ಸಂಕಟದಲ್ಲಿ ಬೇಯುತ್ತಿಲ್ಲ, ಸುಬ್ಬು. ನನ್ನ ಬೇಗೆಯನ್ನು ನೀನರಿಯೆ?”

“ ಅದೇನು ಬಿಡಿಸಿಹೇಳು, ಕೇಳೋಣ.”

“ ಅದರಿಂದೇನು ಪ್ರಯೋಜನ? ಅದು ಬಗೆಹರಿಯುವ ಸಮಸ್ಯೆಯಲ್ಲ.”

“ ಬಗೆಹರಿಯುವುದಿಲ್ಲವೆಂದು ನೀನು ತಿಳಿದುಕೊಂಡಿರಬಹುದು. ಆದರೆ ನಾನು ಹಾಗೆ ಭಾವಿಸುವುದಿಲ್ಲ. ಯಾವ ಸಮಸ್ಯೆಗೂ ಪರಿಹಾರವಿಲ್ಲದೆ ಇಲ್ಲ.”

ಆ ಮಾತು ಕೇಳಿ ಮಧುಸೂದನ ವಿಷಾದದ ನಗೆಯನ್ನು ನಕ್ಕ. ಅಂಥ

ಆಶಾವಾದದಲ್ಲಿ ಅವನಿಗೆ ನಂಬಿಕೆ ಎಂದೋ ಕಳೆದುಹೋಗಿತ್ತು. ಅವನು ಸುಮ್ಮನೆ ಕುಳಿತಿದ್ದುದನ್ನು ಸುಬ್ಬಕೃಷ್ಣ ಗಮನಿಸಿ,

"ಅದೇನು ಹೇಳು"

ಎಂದು ಹಾಸಿಗೆಯ ಸುರುಳಿಗೆ ತಲೆಕೊಟ್ಟು ಚಾಪೆಯ ಮೇಲೆ ಮೈ ಚಾಚಿದ.

"ಲಲಿತನ ವಿಚಾರ ನಿನಗೆ ಗೊತ್ತೆ?"

ಎಂದು ಮಧುಸೂದನ ತಟಕ್ಕನೆ ಕೇಳಿದ. ಸುಬ್ಬಕೃಷ್ಣ ಏನೂ ಗೊತ್ತಿಲ್ಲದವನ ಹಾಗೆ,

"ಲಲಿತ? ಮದರಾಸಿನ ಹುಡುಗಿ? ನಿನ್ನ–"

ಎಂದು ಅರ್ಧೋಕ್ತಿಯಲ್ಲಿ ನಿಲ್ಲಿಸಿದ. ಮಧುಸೂದನನ ಮುಖದ ಮೇಲೆ ಅವರ್ಣನೀಯವಾದ ನೋವಿನ ಚಿಹ್ನೆ ಮೂಡಿತು.

"ಹೌದು, ನನ್ನ ಬಯಕೆಯ ಹುಡುಗಿ; ಒಂದು ಕಾಲದಲ್ಲಿ ನಾನು ಪ್ರೀತಿಸಿದ್ದ ಹುಡುಗಿ. ಅವಳು ನನ್ನವಳಾಗುವಳೆಂದು ತುಂಬ ಆಸೆ ಇಟ್ಟುಕೊಂಡಿದ್ದೆ, ಸುಬ್ಬು"

ಎಂದು ಆವೇಗದಿಂದ ನುಡಿದ.

"ಏಕೆ? ಏನಾಯಿತು? ಅವಳು ನಿನ್ನನ್ನು ಒಲ್ಲೆನೆಂದಳೆ?"

"ಒಲ್ಲೆನೆಂದಿದ್ದರೆ ಅದರ ವಿಷಯವೇ ಬೇರೆಯಾಗಿರುತ್ತಿತ್ತು. ಅವಳು ನನ್ನನ್ನು ನಂಬಿಸಿ ಕೊರಳು ಕೊಯ್ದಳು."

"ಲಲಿತ ನಿನಗೆ ಮೋಸಮಾಡಿದಳೆ?"

ಎಂದು ಸುಬ್ಬಕೃಷ್ಣ ಧಿಗ್ಗನೆ ಎದ್ದು ಕುಳಿತು ಕೇಳಿದ.

"ಹೌದು. ನನ್ನೊಡನೆ ಅವಳ ತೋರಿಕೆಯ ಪ್ರಣಯ ಸಾಗುತ್ತಿದ್ದ ಹಾಗೇ ತೆರೆಯ ಮರೆಯಲ್ಲಿ ಅವಳ ಮದುವೆಯ ಸನ್ನಾಹ ನಡೆದಿತ್ತು."

"ಅದು ನಿನಗೆ ಹೇಗೆ ಗೊತ್ತಾಯಿತು?"

"ಅವಳ ತಂದೆಯೇ ಕಾಗದ ಬರೆದರು."

"ಏನೆಂದು ಬರೆದರು?"

"ಅದನ್ನೆಲ್ಲ ನಾನು ಹೇಳಲಾರೆ, ಸುಬ್ಬು. ಅದರಿಂದ ನನ್ನ ದುಃಖ ಮತ್ತಷ್ಟು ಕೆರಳುತ್ತದೆ."

"ಹೋಗಲಿ, ಅದು ನಿಜವೇ ಎಂದು ಕೇಳಿ ನೀನವಳಿಗೆ ಬರೆದೆಯಾ? ಅವಳ ಮನಸ್ಸೇನೆಂದು ತಿಳಿದುಕೊಳ್ಳುವ ಪ್ರಯತ್ನ ಮಾಡಿದೆಯಾ?"

"ಕೈತೋರಿಸಿ ಅವಲಕ್ಷಣ ಎನ್ನಿಸಿಕೊಳ್ಳಲೆ? ಅವಳ ತಂದೆ ಬರೆದದ್ದು ಸಾಲದೇ?"

"ನೀನದನ್ನೇ ನಂಬಿ ಕುಳಿತೆಯೇನು?"

"ಏನು ಪ್ರಶ್ನೆ ಕೇಳುತ್ತೀ, ಸುಬ್ಬು? ಅವಳ ಮದುವೆಯ ವಿಚಾರ ಅವಳ ತಂದೆ ಬರೆದದ್ದು ಸುಳ್ಳಾಗುವುದೇ? ಅವಳ ಒಪ್ಪಿಗೆಯಿಲ್ಲದೆ ಅವರು ಅದಕ್ಕೆ ಪ್ರವರ್ತಿಸುವರೆ?"

"ಒಂದು ವೇಳೆ ಒಪ್ಪಿಗೆಯಿಲ್ಲದೆ ಪ್ರವರ್ತಿಸಿದರೆಂದೇ ಇಟ್ಟುಕೊಳ್ಳೋಣ. ಅದಕ್ಕೆ ನೀನೇನು ಹೇಳುತ್ತೀ?"

ಮಧುಸೂದನ ಮಾತಿಲ್ಲದೆ ಸುಬ್ಬಕೃಷ್ಣನ ಮುಖವನ್ನು ನೋಡಿದ. ಅವನಿಗೆ ಏನೋ ಅನುಮಾನ ಬಂದಿತು.

"ನೀನು ಅವಳ ಪಕ್ಷ ಹಿಡಿದು ವಾದಿಸುತ್ತಿರುವುದೇಕೆ, ಸುಬ್ಬು?"

ಎಂದು ಕೇಳಿದ. ಸುಬ್ಬಕೃಷ್ಣ ದೃಢವಾದ ಧ್ವನಿಯಲ್ಲಿ,

"ನನಗೆ ನಿಜಾಂಶ ತಿಳಿದಿರುವುದರಿಂದ."

"ನಿನಗೆ ತಿಳಿದಿರುವ ನಿಜಾಂಶವೇನು?"

"ಆ ಹುಡುಗಿಯ ಮೇಲೆ ನೀನು ಹೊರಿಸುತ್ತಿರುವ ಆರೋಪ ನಿಜವಲ್ಲ ವೆನ್ನುವುದು."

"ಹಾಗೆ ಹೇಳಲು ನಿನ್ನ ಆಧಾರವೇನು?"

ಸುಬ್ಬಕೃಷ್ಣ ಅರೆನಿಮಿಷ ಮೌನವಾಗಿ ಕುಳಿತಿದ್ದ. ಬಳಿಕ ನಿಷ್ಠುರವಾದ ಕಂಠದಲ್ಲಿ,

"ನಿನ್ನ ವರ್ತನೆಗೆ ನೊಂದು ಲಲಿತ ನವೆಯುತ್ತಿರುವುದೇ ಸಾಕ್ಷಿ"

ಎಂದು ನುಡಿದ.

ಸಿಡಿಲಿನಂತೆ ಅನಿರೀಕ್ಷಿತವಾಗಿ ಬಂದೆರಗಿದ ಆ ಮಾತಿನಿಂದ ಮಧುಸೂದನನ ಮೈ ತತ್ತರಿಸಿತು. ಕುರ್ಚಿಯ ಮೇಲೆ ಕುಳಿತು ಮಾತಾಡುತ್ತಿದ್ದವನು ಆ ಆವೇಗದಲ್ಲಿ ಧಿಗ್ಗನೆ ಎದ್ದುನಿಂತ.

"ಏನೆಂದೆ?"

ಸುಬ್ಬಕೃಷ್ಣ ತಕ್ಷಣ ಉತ್ತರ ಕೊಡಲಿಲ್ಲ. ಮಧುಸೂದನನ ಮುಖವನ ಒಂದು ಕ್ಷಣ ರೆಪ್ಪೆಹೊಯ್ಯದೆ ನೋಡಿದ. ಅವನ ತುಟಿಯಂಚಿನಲ್ಲಿ ಕಿರುನ ಮಿನುಗಿತು. ಯಾವ ಉದ್ವೇಗವೂ ಇಲ್ಲದ ಧ್ವನಿಯಲ್ಲಿ,

"ಲಲಿತ ನಿನಗಾಗಿ ಕಾಯುತ್ತಿರುವಳೆಂದೆ."

"ಏನು, ಲಲಿತ ನನಗಾಗಿ ಕಾಯುತ್ತಿರುವಳೆ? ಇದು ನಿಜವೆ, ಸುಬ್ಬು?

ಎಂದು ಉದ್ವಿಗ್ನನಾಗಿ ಕೇಳಿದ.

"ನಿಜವಲ್ಲದಿದ್ದರೆ ನಾನು ಮದರಾಸಿನಿಂದ ಇಲ್ಲಿಗೆ ಬರುತ್ತಿದ್ದೆನೆಂದ ತಿಳಿದೆಯಾ?"

"ನೀನು ಮದರಾಸಿನಿಂದ ಬಂದೆಯಾ? ಮೈಸೂರಿನಿಂದಲ್ಲವೆ?"

ಎಂದು ಥಟ್ಟನೆ ಹಾರಿಬಂದು ಅವನ ಪಕ್ಕದಲ್ಲಿ ಕುಳಿತುಕೊಂಡ. ಸುಬ್ ಕೃಷ್ಣನ ಮುಖದ ಮೇಲೆ ನಗೆ ಅರಳಿತ್ತು; ಅವನು ಮಾತಿಲ್ಲದೆ ಸುಮ್ಮ ಕುಳಿತ.

"ಹೇಳು ಸುಬ್ಬು, ಅದೇನು ಸಮಾಚಾರ ಹೇಳು. ಸುಮ್ಮನೆ ನನ್ನನ್ ಸಂದಿಗ್ಧದಲ್ಲಿಟ್ಟು ಕೊಲ್ಲಬೇಡ"

ಎಂದು ಅಂಗಲಾಚಿದ. ಅವನು ಮದರಾಸಿನ ಸಮಾಚಾರ ಹೇಳು ವರೆಗೂ ಬಿಡಲಿಲ್ಲ. ಸುಬ್ಬಕೃಷ್ಣ ಎಲ್ಲವನ್ನೂ ವಿಸ್ತಾರವಾಗಿ ನಿರೂಪಿಸಿ,

"ಈಗ ಬರುತ್ತೀಯಾ?"

ಎಂದು ಕೇಳಿದ. ಮಧುಸೂದನನ ಮನಸ್ಸು ಸಮ್ಮಿಶ್ರ ಭಾವನೆಗ ಸುಳಿಗೆ ಸಿಕ್ಕಿಹೋಗಿತ್ತು. ಭಾವಾತಿರೇಕದಿಂದ ಅವನ ಮೈ ಕಂಪಿಸುತ್ತಿತ್ತು ಹಾಸಿಗೆಯ ಸುರುಳಿಗೆ ತಲೆ ಕೊಟ್ಟು ಸುಮ್ಮನೆ ಮುಖ ಮುಚ್ಚಿ ಕುಳಿತುಕೊಂಡ ಎದೆಯಲ್ಲಿ ತುಂಬಿ ತಡೆಯಲಾಗದ ಉದ್ವೇಗ ಬಿಕ್ಕುತ್ತ ಬಿಕ್ಕುತ್ತ ಹೊ ಹೊಮ್ಮಿತು. ಸುಬ್ಬಕೃಷ್ಣ ಅವನ ತಲೆಯನ್ನು ಮೃದುವಾಗಿ ನೇವರಿಸುತ್ತ,

"ಏಳು, ಈ ವನವಾಸ ಸಾಕು; ಈ ಜೀವನ ನಿನಗಲ್ಲ; ಇದನ್ನು ವರ್ಜಿ ಇಂದೇ ಸಚೇಲ ಸ್ನಾನ ಮಾಡಿಬಿಡು. ನಿನ್ನ ಧ್ಯೇಯವೇ ಬೇರೆ. ಅದನ್ ಮರೆತು ಬಾಳನ್ನು ವ್ಯರ್ಥಮಾಡಿಕೊಳ್ಳುವುದು ಬೇಡ"

ಎಂದ. ಮಧುಸೂದನ ತಲೆಯೆತ್ತಿ ಸುಬ್ಬಕೃಷ್ಣನ ಮುಖ ನೋಡಿದ ಅವನ ಕಣ್ಣುಗಳಿಂದ ಹರಿದುಬಂದ ಧಾರೆಯಲ್ಲಿ ಅವನ ದುಃಖವೆಲ್ಲವೂ ಕರ ಹೋದ ಹಾಗಿತ್ತು.

"ಸುಬ್ಬೂ, ಸುಬ್ಬೂ"

ಎಂದು ಉಕ್ಕಿ ಬಂದ ಕೃತಜ್ಞತೆಯಿಂದ ಅವನ ಕೊರಳನ್ನು ಬಿಗಿದಪ್ಪಿದ. ಮುಂದೆ ಮಾತು ಹೊರಡಲಿಲ್ಲ. ಸುಬ್ಬಕೃಷ್ಣನಿಗೂ ಅವನ ಉದ್ವೇಗದ ಸೋಂಕು ತಾಕಿತ್ತು; ಅವನ ಕಣ್ಣೂ ಹನಿಗೂಡಿತ್ತು; ಇಬ್ಬರೂ ಒಂದು ಗಳಿಗೆ ಮೌನವಾಗಿ ಕುಳಿತಿದ್ದರು. ಸ್ವಲ್ಪ ಹೊತ್ತಾದ ಮೇಲೆ ಮಧುಸೂದನ ಸುಬ್ಬಕೃಷ್ಣನ ಮುಖ ನೋಡಿ,

"ಕಾಫಿ ಕುಡಿದೆಯಾ, ಸುಬ್ಬು?"

ಎಂದು ಕೇಳಿದ. ಸುಬ್ಬಕೃಷ್ಣ ನಸುಕೋಪ ತೋರಿ,

"ನನ್ನ ಯೋಗಕ್ಷೇಮ ವಿಚಾರಿಸುವಷ್ಟೂ ವ್ಯವಧಾನವಿದೆಯೇನಯ್ಯಾ ನಿನಗೆ?"

ಎಂದು ಆಕ್ಷೇಪಿಸಿದ.

"ಕ್ಷಮಿಸು ಮಹರಾಯ; ಕೋಪಿಸಿಕೊಳ್ಳಬೇಡ"

ಎಂದು ಮಧುಸೂದನ ಎದ್ದು ರೂಮಿನ ಬಾಗಿಲು ಹಾಕಿಕೊಂಡು ಅವನನ್ನೂ ಕರೆದುಕೊಂಡು ಪಕ್ಕದ ಹೋಟೆಲಿಗೆ ಹೊರಟ.

ಅವನ ಮನಸ್ಸಿನಲ್ಲಿ ಹರ್ಷ ತುಂಬಿತ್ತು; ಪ್ರಪಂಚವೇ ಅವನ ಕಣ್ಣಿಗೆ ಹೊಸ ಬಗೆಯಾಗಿ ಕಾಣುತ್ತಿತ್ತು; ಅವನ ಅಂಗಾಂಗಗಳಲ್ಲಿ ಹೊಸ ಚೈತನ್ಯದ ಹೊಳೆ ಹರಿಯುತ್ತಿತ್ತು. ಕಾಫಿ ತಿಂಡಿ ಮುಗಿಸಿ ಬರುವಾಗ ಮಧುಸೂದನ ತನ್ನ ತವಕವನ್ನು ತಡೆಯದಾದ.

"ಮದರಾಸಿಗೆ ಯಾವಾಗ ಹೊರಡುವುದು, ಸುಬ್ಬು?"

ಎಂದು ಕೇಳಿದ. ಅವನ ಧ್ವನಿಯಲ್ಲಿ ತುಂಬಿದ್ದ ಕಾತರವನ್ನು ಸುಬ್ಬಕೃಷ್ಣ ಗಮನಿಸಿ ಮುಸಿಮುಸಿ ನಗುತ್ತ,

"ಆಗಲೇ ಇಷ್ಟು ಅವಸರವಾಗಿ ಹೋಯಿತೆ, ಅಣ್ಣಯ್ಯ? ಸ್ವಲ್ಪ ತಾಳು? ನಿಧಾನವಾಗಿ ಹೋಗೋಣ. ಮೊದಲು ನಿನ್ನ ಅವತಾರ ಬದಲಾಯಿಸಿಕೋ. ನಿನ್ನ ನೋಡಿ ಯಾವುದೋ ಕರಡಿ ಬಂತೆಂದು ಲಲಿತ ಹೆದರಿಬಿಟ್ಟಾಳು"

ಎಂದ. ಮಧುಸೂದನನಿಗೆ ಆ ಕುಹಕ ಹಿತವಾಗಿಯೇ ಇತ್ತು. ಅವನು ಸಹನೆಯಿಂದಲೇ ಸುಮ್ಮನಾದ. ಅವನ ಮನಸ್ಸಾಗಲೇ ಮದರಾಸಿಗೆ ಹಾರಿ ಹೋಗಿತ್ತು.

೩೫

ಕನಕಾಂಗಿಯ ಸಂಭ್ರಮ ಲಲಿತನ ಉತ್ಸುಕತೆಯನ್ನು ಕೆರಳಿಸಿತ್ತು. ಬೆಳಗಿನಿಂದ ಅವಳು ನಿಂತಲ್ಲಿ ನಿಲ್ಲದೆ ಏನೋ ಸಡಗರದಿಂದ ಓಡಾಡುತ್ತಿರುವ ಹಾಗಿತ್ತು. ಅವಳು ಎಲ್ಲಿಗಾದರೂ ಹೋಗಲು ಸಜ್ಜುಮಾಡಿಕೊಳ್ಳುತ್ತಿರಬಹುದೇ? ಹಾಗಿದ್ದರೆ ತನ್ನೊಡನೆ ಏಕೆ ಹೇಳುತ್ತಿರಲಿಲ್ಲ? ಇಲ್ಲ, ಮನೆಗೆ ಯಾರಾದರೂ ಬರುವವರಿದ್ದರೋ? ಅವಳಿಗೆ ತಿಳಿದ ಮಟ್ಟಿಗೆ ಅಂಥವರು ಯಾರೂ ಕಾಣಲಿಲ್ಲ. ಮನೆಯಲ್ಲಿ ಏನಾದರೂ ಹೆಚ್ಚುಗಟ್ಟಲೆಯೆ ಎಂದರೆ ಅದೂ ಇದ್ದ ಹಾಗಿರಲಿಲ್ಲ. ಹಾಗಾದರೆ ಯಾವ ಕಾರಣವೂ ಇಲ್ಲದೆ ಈ ಓಡಾಟಕ್ಕೇನು ಅರ್ಥ?

ಕನಕಾಂಗಿ ಬೆಳಗಿನಿಂದ ಅವಳ ಕೈಗೆ ಸರಿಯಾಗಿ ಸಿಕ್ಕಿಯೇ ಇರಲಿಲ್ಲ. ಒಂದೋ ಎರಡೋ ಸಲ ಅವಳ ರೂಮಿಗೆ ಬಂದಿದ್ದಳು. ಆದರೆ ಹೀಗೆ ಬಂದು ಹಾಗೆ ಹೊರಟುಹೋಗಿದ್ದಳು. ಪುಣ್ಯಾತಗಿತ್ತಿ ಎರಡು ಹೆಜ್ಜೆ ಒಂದು ಕಡೆ ಇಟ್ಟು ನಿಂತಿದ್ದರೆ ತಾನೇ ಕೇಳುವುದು? ನಿತ್ಯವೂ ಬಂದು ಘಂಟೆಗಳ ಹೊತ್ತು ಹರಟೆ ಹೊಡೆಯುತ್ತ ಕುಳಿತುಕೊಳ್ಳುತ್ತಿದ್ದವಳಿಗೆ ಇವೊತ್ತೇನಾಗಿತ್ತೋ?

ಅವಳ ಹೊತ್ತೆಲ್ಲಾ ಮುಕ್ಕಾಲುಪಾಲು ಲಲಿತನ ರೂಮಿನಲ್ಲೇ ಕಳೆದು ಹೋಗುತ್ತಿತ್ತು. ಮಾತು ಎಂದರೆ ಅವಳಿಗೆ ಪಂಚಪ್ರಾಣ. ಅದೊಂದಿದ್ದರೆ ಅವಳಿಗೆ ಊಟವೂ ಬೇಕಾಗುತ್ತಿರಲಿಲ್ಲ, ತಿಂಡಿಯೂ ಬೇಕಾಗುತ್ತಿರಲಿಲ್ಲ. ಆ ಹರಟೆಮಲ್ಲಿಗೆ ಗಂಡನಿಗಿಂತ ಮಾತು ಪ್ರಿಯವಾಗಿತ್ತು. ಮಾತಾಡುತ್ತ ಆಡುತ್ತ ಕುಳಿತುಬಿಟ್ಟರೆ ಅವಳಿಗೆ ಹೊತ್ತಿನ ಮೇಲೆ ಜ್ಞಾನವೇ ಇರುತ್ತಿರಲಿಲ್ಲ. ರಾತ್ರಿ ಹತ್ತಾದರೂ ಆಯಿತು, ಹನ್ನೊಂದಾದರೂ ಆಯಿತು. ಹೊತ್ತು ಮೀರಿದ್ದನ್ನರಿತು ಅವಳೇ ಅಟ್ಟಬೇಕಾಗಿತ್ತು.

" ಹೋಗೇ ಮಹರಾಯಿತಿ; ಅವನೇನಾದರೂ ಕೋಪಿಸಿಕೊಂಡಾನು ಸದ್ಯ"

ಎನ್ನುತ್ತಿದ್ದಳು. ಆದರೆ ಶಿವಸ್ವಾಮಿ ಒಂದು ದಿನವೂ ಕೋಪಿಸಿ ಕೊಂಡವನಲ್ಲ; ಒಂದು ದಿನವೂ ಒಂದು ಮಾತು ಅಂದವನಲ್ಲ. ಅದು ಅವಳ ಬಗೆಗಿದ್ದ ಅವನ ಮಮತೆಗೆ ಸಾಕ್ಷಿಯಾಗಿತ್ತು. ಆ ವಯಸ್ಸಿನಲ್ಲಿ ಅವನ ಸಹನೆ ನೋಡಿ ಅವಳಿಗೇ ಆಶ್ಚರ್ಯವಾಗುತ್ತಿತ್ತು, ಅನುಕಂಪ ಹುಟ್ಟುತ್ತಿತ್ತು. ಇತರರು ಹೇಗೇ ಇರಲಿ, ಆ ಎರಡು ಜೀವಗಳು ಮಾತ್ರ ಅವಳನ್ನು ಕಂಡರೆ ಸುಮ್ಮನೆ ಒದ್ದುಕೊಳ್ಳುತ್ತಿದ್ದವು. ಅವಳ ಮನಸ್ಸಿಗೆ ಹಿತವಾಗುವ ಯಾವ ಕೆಲಸವನ್ನು ಮಾಡಲೂ ಅವರು ಹಿಂಜರಿಯುತ್ತಿರಲಿಲ್ಲ.

ಲಲಿತನ ಆಲೋಚನಾ ಸರಣಿ ಹೀಗೆಯೇ ಮುಂದುವರಿಯುತ್ತಿತ್ತೇನೋ. ಆದರೆ ಕನಕಾಂಗಿ ರೂಮಿಗೆ ಪ್ರವೇಶಿಸಿದ್ದರಿಂದ ಅವಳ ಚಿಂತನೆಯ ಕೊಂಡಿ ಕತ್ತರಿಸಿತು.

" ಏನೇ ಇದು, ನಿನ್ನ ಸಡಗರ?"

ಎಂದು ಕತ್ತೆತ್ತಿ ಕೇಳಿದಳು. ಕನಕಾಂಗಿಯ ಕಣ್ಣಲ್ಲಿ ತುಂಟನಗೆ ಕುಣಿಯುತ್ತಿತ್ತು.

" ಏನೂ ಇಲ್ಲ, ಲಲಿತ"

ಎಂದು ಕಳ್ಳಿಯ ಹಾಗೆ ಉತ್ತರವಿತ್ತಳು. ಆ ಮಾತು ಕೇಳಿ ಲಲಿತನಿಗೆ ಏನೋ ಅನುಮಾನ ಬಂದಿತು.

" ಏನೂ ಇಲ್ಲದೆ ಬೆಳಗಿನಿಂದ ಹೀಗೆ ಓಡಾಡುತ್ತಾ ಇದ್ದೀಯಾ? ಎಲ್ಲಾದರೂ ಹೋಗುತೀರೇನೇ, ನೀನೂ ಶಿವೂ?"

" ಎಲ್ಲೂ ಹೋಗೊಲ್ಲ. ಯಾರೋ ಬರುತ್ತಾರಂತೆ, ಅಷ್ಟೆ."

" ಯಾರು ಬರುತ್ತಾರೆ?"

" ಯಾರೋ ಗೊತ್ತಿಲ್ಲಮ್ಮ, ನೋಡಬೇಕು"

ಎಂದು ಅವಳ ಮುಖ ನೋಡಿ ನಕ್ಕು ಮತ್ತೆ ಹೊರಟುಹೋದಳು. ಲಲಿತನಿಗೆ ಅವಳ ಮಾತೇ ಅರ್ಥವಾಗಲಿಲ್ಲ. ಎಲ್ಲವೂ ಒಂದು ಸಮಸ್ಯೆಯಾಗಿ ಕಂಡಿತು.

ಬೆಳಗಿನಿಂದ ಅವಳ ಎಡಗಣ್ಣು ಹಾರುತ್ತಿತ್ತು; ಎಡಭುಜ ಅದುರುತ್ತಿತ್ತು.

ಅದು ಶುಭ ಸೂಚನೆಯೆಂದು ಹಿರಿಯರು ಅಂದದ್ದನ್ನು ಎಂದೋ ಕೇಳಿದ್ದಳು. ಆದರೆ ಅಂಥ ವಿಷಯಗಳಲ್ಲೆಲ್ಲ ಅವಳಿಗೆ ನಂಬಿಕೆಯಿರಲಿಲ್ಲ. ಏಕೋ ಹಾರಿತು, ಹಾರಿದರೆ ಹಾರಲಿ, ಅದರಿಂದಾಗುವ ಶುಭ ಅಷ್ಟರಲ್ಲಿಯೇ ಇದೆ ಎಂದು ನಿರ್ಲಕ್ಷ್ಯ ತಾಳಿದಳು. ಯಾವ ಶುಭವನ್ನೂ ನಿರೀಕ್ಷಿಸುವ ಸ್ಥಿತಿಯಲ್ಲಿ ಅವಳಿರಲಿಲ್ಲ. ಆ ಕಾಲ ಎಂದೋ ಕಳೆದುಹೋಗಿತ್ತು. ಈಗ ಅದರ ಯೋಚನೆ ಯೇಕೆ? ಆದರೂ ಅವಳ ಮನಸ್ಸಿನಲ್ಲಿ ಅವಳಿಗೆ ಅರ್ಥವಾಗದ ಒಂದು ತವಕ ಮೂಡಿತ್ತು; ಯಾವುದೋ ಅಸ್ಪಷ್ಟ ನಿರೀಕ್ಷೆಯ ಛಾಯೆ ಮೈದೋರಿತ್ತು. ಅವಳ ಬುದ್ಧಿ ಎಷ್ಟೇ ನಿರಾಕರಿಸುತ್ತಿದ್ದರೂ ಮನಸ್ಸು ಸುತ್ತಿಕೊಂಡು ಸುತ್ತಿಕೊಂಡು ಬಂದು ಅದನ್ನೇ ನೆನೆಸಿಕೊಳ್ಳುತ್ತಿತ್ತು.

ಯಾರೋ ಬರುವರಂತೆ, ಯಾರೋ ಬರುವರಂತೆ. ಯಾರು ಬರುತ್ತಾರೆ? ಅವರು ಬರುವರೆ? –

ಒಂದು ಕ್ಷಣ ಅವಳ ಹೃದಯ ಸವಿಯಾದ ಆ ಕಲ್ಪನೆಯಲ್ಲಿ ಮುಳುಗಿ ಭ್ರಾಂತವಾಯಿತು. ಮರುಕ್ಷಣವೇ ಬುದ್ಧಿ ಅವಳ ಮೇಲೆಯೇ ತಿರುಗಿ ಬಿದ್ದು ಛೇಡಿಸಿತು.

" ಹುಚ್ಚಿ, ನೀನು ಹುಚ್ಚಿ!"

ಹೌದು, ಅವಳು ಹುಚ್ಚಿಯೇ. ಇಂಥ ನೂರಾರು ಆಸೆ ಆಮಿಷಗಳಿಗೆ ಮನತೆತ್ತು ಅವಳು ಹುಚ್ಚಿಯಾಗಿದ್ದಳು. ಅಂಥ ಮರೀಚಿಕೆಗೆ ಸಿಕ್ಕಿ ಅವಳಿನ್ನು ಮೋಸಹೋಗುವ ಹಾಗಿರಲಿಲ್ಲ. ಅದು ಅವಳಿಗೆ ಚೆನ್ನಾಗಿ ಬುದ್ಧಿ ಕಲಿಸಿತ್ತು.

ಲಲಿತ ಹತಾಶೆಯಿಂದ ಸುಯ್ದು ಒಂದು ಪಕ್ಕಕ್ಕೆ ಹೊರಳಿ ಮಲಗಿದಳು.

ವರಾಂಡದಲ್ಲಿ ಅಯ್ಯರರು ಶತಪಥ ತಿರುಗುತ್ತಿದ್ದರು. ಅವರ ಮನಸ್ಸಿನಲ್ಲೂ ತವಕವಿತ್ತು. ಅವರಿಗೆ ಹಿಂದಿನ ದಿವಸವೇ ಮುಂಬಯಿಯಿಂದ ಟೆಲಿಗ್ರಾಂ ಬಂದಿತ್ತು. ಶಿವಸ್ವಾಮಿ ಕಾರು ತೆಗೆದುಕೊಂಡು ಸ್ಟೇಷನ್ನಿಗೆ ಹೋಗಿದ್ದ. ಆದರೂ ಅವರಿಗೆ ನಂಬಿಕೆಯಿಲ್ಲ. ಕೊನೆಯ ಗಳಿಗೆಯಲ್ಲಿ ಏನಾದರೂ ವ್ಯತ್ಯಾಸ ವಾಗಿದ್ದರೆ?

ಅವರ ಮನಸ್ಸು ಆ ಆಂದೋಲನದಲ್ಲಿದ್ದಾಗಲೇ ಹೊರಗೆ ಕಾರಿನ ಹಾರನ್ ಕೇಳಿಸಿತು. ಅದು ಅವರ ಕಾರಿನ ಹಾರನ್ ಅಲ್ಲವೆ? ಹೌದು, ಅವರಲ್ಲಿ

ಸಂಶಯವಿರಲಿಲ್ಲ. ಅದು ಬಂಗಲೆ ಪ್ರವೇಶಿಸುತ್ತಿದ್ದಾಗಲೇ ಅವರಿಗೆ ಗೊತ್ತಾಯಿತು, ಶಿವಸ್ವಾಮಿ ಬರಿಗೈಯಲ್ಲಿ ಹಿಂತಿರುಗಿಲ್ಲವೆಂದು.

ಕಾರು ಸದ್ದಿಲ್ಲದೆ ಬಂದು ಪೋರ್ಟಿಕೋವಲ್ಲಿ ನಿಲ್ಲುವ ಹೊತ್ತಿಗೆ ಅಯ್ಯರರು ಧಡಧಡನೆ ಮೆಟ್ಟಲಿಳಿದು ಬಂದು ನಿಂತಿದ್ದರು.

"ಬನ್ನಿ, ಬನ್ನಿ."

ಅವರ ಮುಖ ಹರ್ಷದಿಂದ ಹಿಗ್ಗಿತ್ತು. ಮಾತಿಲ್ಲದೆ ಕೆಳಗಿಳಿದು ನಿಂತ ಮಧುಸೂದನನ ಎರಡು ಕೈಗಳನ್ನೂ ಭದ್ರವಾಗಿ ಹಿಡಿದುಕೊಂಡರು. ಸ್ನೇಹ ತುಂಬಿದ ಆ ಕಣ್ಣು, ದೃಢವಿಶ್ವಾಸ ಸೂಚಿಸುವ ಆ ಹಸ್ತದ ಹಿಡಿತ ಅವನ ಮನಸ್ಸಿನಲ್ಲಿದ್ದ ಅಲ್ಪ ಸ್ವಲ್ಪ ಸಂದೇಹವನ್ನೂ ಬಗೆಹರಿಸಿಬಿಟ್ಟವು. ಇಬ್ಬರೂ ಒಂದು ಕ್ಷಣ ಒಬ್ಬರ ಮುಖವನ್ನೊಬ್ಬರು ನೋಡಿದರು.

"ಪ್ರಯಾಣ ತುಂಬ ಆಯಾಸಕರವಾಗಿತ್ತೇ?"

ಎಂದು ಅಯ್ಯರರು ಸೌಜನ್ಯದಿಂದ ಕೇಳಿದರು.

"ಇಲ್ಲ"

ಎಂದು ಮಧುಸೂದನ ಗಂಭೀರವಾಗಿ ಉತ್ತರವಿತ್ತ.

"ಬನ್ನಿ"

ಎಂದು ಶಿವಸ್ವಾಮಿ ಅವನ ಕೈಹಿಡಿದು ಒಳಗೆ ಕರೆದೊಯ್ದ. ನಟರಾಜ ಅಯ್ಯರರು ಸುಬ್ಬಕೃಷ್ಣನನ್ನು ಕರೆದುಕೊಂಡು ತಮ್ಮ ರೂಮಿಗೆ ಹೋದರು. ಹಜಾರದಲ್ಲಿ ಯಾರೂ ಇರಲಿಲ್ಲ. ಮೀನಾಕ್ಷಮ್ಮ ಕನಕಾಂಗಿ ಸೂಕ್ಷ್ಮವರಿತು ಒಳಗೆ ಹೊರಟುಹೋಗಿದ್ದರು. ಶಿವಸ್ವಾಮಿ ಮಧುಸೂದನನನ್ನು ಲಲಿತನ ರೂಮಿನ ಬಾಗಿಲವರೆಗೂ ಕರೆತಂದು ಬಿಟ್ಟು ಅವನ ಭುಜದ ಮೇಲೆ ಕೈಹಾಕಿ ಅವನಿಗೆ ಮಾತ್ರ ಕೇಳಿಸುವ ಹಾಗೆ,

"ನಿಮ್ಮ ಲಲಿತ ಒಳಗಿದ್ದಾಳೆ, ಹೋಗಿ"

ಎಂದು ಬಾಗಿಲನ್ನು ಸದ್ದಿಲ್ಲದೆ ತೆರೆದು ಅವನನ್ನು ಒಳಗೆ ಕಳಿಸಿ ಮೆಲ್ಲನೆ ಬಾಗಿಲೆಳೆದುಕೊಂಡ.

ಮಧುಸೂದನ ರೂಮನ್ನು ಹೊಕ್ಕು ಒಂದು ಕ್ಷಣ ಬಾಗಿಲನ್ನೊರಗಿ ನಿಂತುಕೊಂಡ. ಅವನ ಎದೆ ತವಕದಿಂದ ತುಡಿಯುತ್ತಿತ್ತು. ಅವನ ದೃಷ್ಟಿ ಸಹಜವಾಗಿಯೇ ರೂಮಿನ ಸುತ್ತ ಹರಿಯಿತು. ಲಲಿತ ಕಿಟಕಿಯ ಹತ್ತಿರ

ಹಾಕಿದ್ದ ಮಂಚದ ಮೇಲೆ ಮಲಗಿದ್ದಳು. ಅವಳ ಮೈ ಒಂದು ಪಾರ್ಶ್ವಕ್ಕೆ ತಿರುಗಿತ್ತು. ಒಂದು ತೋಳು ಅವಳ ತಲೆಗೆ ಆಸರೆಯಾಗಿತ್ತು. ಇನ್ನೊಂದು ತೋಳನ್ನು ನೀಳವಾಗಿ ಚಾಚಿ ಮೈಮೇಲೆ ಇಟ್ಟುಕೊಂಡಿದ್ದಳು. ಹೊದೆದಿದ್ದ ಶಾಲು ಒಂದು ಕಡೆ ಜಾರಿತ್ತು.

ಬಾಗಿಲು ತೆರೆದ ಸದ್ದಾಗದಿದ್ದರೂ ಯಾರೋ ಒಳಗೆ ಬಂದಿರುವರೆಂದು ಅವಳ ಬುದ್ಧಿ ಹೇಳಿತು. ಕನಕಾಂಗಿ ಬಂದಿರಬಹುದೆಂದು ಅವಳು ಸಹಜವಾಗಿಯೇ ಊಹಿಸಿದಳು.

" ಕನಕಾ "

ಎಂದು ದುರ್ಬಲವಾದ ಧ್ವನಿಯಲ್ಲಿ ಕರೆದಳು.

ಉತ್ತರವಿಲ್ಲ.

ಅವಳಿಗೆ ಏನೋ ಹೊಳೆದು ಸರಕ್ಕನೆ ತಲೆ ತಿರುಗಿಸಿ ನೋಡಿದಳು. ಮೈಯಲ್ಲಿ ವಿದ್ಯುತ್ತು ಹರಿದ ಹಾಗಾಯಿತು; ಎದೆ ತರಗೆಲೆಯಂತೆ ಕಂಪಿಸಿತು; ನೋಡಿಗೆ ಸಿಕ್ಕಿದಂತೆ ಅವಳ ದೃಷ್ಟಿ ಅಲ್ಲೇ ಕೀಲಿಸಿತು—

ಗುಳಿಬಿದ್ದ ಕಣ್ಣು, ನಿಸ್ತೇಜವಾಗಿದ್ದ ಮುಖ, ಮೂಳೆ ಕಾಣುತ್ತಿದ್ದ ಕೃಶವಾದ ಅವಳ ದೇಹವನ್ನು ನೋಡಿ ಮಧುಸೂದನನಿಗೆ ಅಪಾರವಾದ ಸಂಕಟವಾಯಿತು. ಕೊಚ್ಚಿಬಂದ ಭಾವಾಧಿಕ್ಯದಲ್ಲಿ ಅವನು ವಿವಶನಾದ.

" ಲಲಿತಾ—"

ಅವನ ಧ್ವನಿ ಗದ್ಗದಿಸಿತು. ನಾಲ್ಕೇ ಹೆಜ್ಜೆಯಲ್ಲಿ ಮಂಚವನ್ನು ಸಮೀಪಿಸಿ, ತೋಳು ಊರಿಕೊಂಡು ಮೇಲೇಳಲೆತ್ನಿಸುತ್ತಿದ್ದ ಅವಳನ್ನು ಬಾಚಿ ತಬ್ಬಿಕೊಂಡ. ಅವಳ ಕಣ್ಣಿಗೆ ಪ್ರಪಂಚವೇ ಗಿರಗಿರನೆ ಸುತ್ತುತ್ತಿರುವ ಹಾಗೆ ತೋರಿತು; ಅವಳ ಮೈಯೆಲ್ಲ ಬಿಸಿಯಾಯಿತು; ಕಣ್ಣು ಕತ್ತಲಿಟ್ಟಿತು; ಅವನ ತೆಕ್ಕೆಯಲ್ಲಡಗಿ ಭುಜದ ಮೇಲೆ ತಲೆಯೊರಗಿಸುತ್ತಿದ್ದ ಹಾಗೇ ಅವಳಿಗೆ ಬವಳಿ ಬಂದಿತು. ಮಧುಸೂದನ ಅವಳ ಮುಖವನ್ನು ತನ್ನೆಡೆಗೆ ತಿರುಗಿಸಿಕೊಂಡು ಅವಳ ತುಟಿ ಕೆನ್ನೆಗಳನ್ನು ಉದ್ವೇಗದಿಂದ ಚುಂಬಿಸುತ್ತ,

" ಲಲಿತಾ, ಲಲಿತಾ, ನನ್ನ ಲಲಿತಾ "

ಎಂದು ಹಂಬಲಿಸಿದ. ಅವನ ಕಣ್ಣಿಂದ ಬಿಸಿಯಾದ ಕಂಬನಿಯ ಧಾರೆ ಕೆಳಗಿಳಿಯುತ್ತಿತ್ತು.

ಲಲಿತ ನಿಧಾನವಾಗಿ ಕಣ್ಣು ಬಿಟ್ಟು ಅವನನ್ನು ನೋಡಿದಳು. ಅವನ ಅಪ್ಪುಗೆಯಲ್ಲಿದ್ದ ಅವಳಿಗೆ ಯಾವುದೋ ಕನಸಿನ ಪ್ರಪಂಚದಲ್ಲಿದ್ದಂತೆ ಭಾಸ ವಾಗುತ್ತಿತ್ತು. ತನ್ನ ರಮಣ ಬಂದಿರುವುದು ನಿಜವೆ, ಇದು ತನ್ನ ಮನಸ್ಸಿನ ಭ್ರಾಂತಿಯಲ್ಲವೆ ಎನ್ನುವ ಸಂದೇಹದಲ್ಲಿ ಅವಳ ಮನಸ್ಸು ಒಂದು ಕ್ಷಣ ತೂಗಿತು. ಆದರೆ ಆ ಸ್ಪರ್ಶ ಸುಳ್ಳಾಗಿರಲಿಲ್ಲ; ಆ ತೋಳತೆಕ್ಕೆ ಮಿಥ್ಯೆಯಾಗಿರಲಿಲ್ಲ; ಆ ಧ್ವನಿ ಕಲ್ಪನೆಯಾಗಿರಲಿಲ್ಲ. ಅವನು ಬಂದಿದ್ದುದು ನಿಜ; ತನ್ನನ್ನು ಅಪ್ಪಿ ಮುದ್ದಿಸು ತ್ತಿದ್ದುದು ನಿಜ.

ಆ ಅರಿವಾದೊಡನೆಯೇ ಎದೆಯಲ್ಲಿ ಹುತ್ತದಂತೆ ಬೆಳೆದು ಗೂಡುಕಟ್ಟಿದ್ದ ದುಃಖ ಸೀಳಿಕೊಂಡು ಹೊರಗೆ ಬಂದಿತು. ಲಲಿತ ಅದರ ಆವೇಗವನ್ನು ತಡೆಯಲಾರದೆ ಬಿಕ್ಕಿ ಬಿಕ್ಕಿ ಅತ್ತುಬಿಟ್ಟಳು.

"ಅಳಬೇಡ ಕಂದಾ, ಅಳಬೇಡ."

ಅವನ ಲಲ್ಲೆನುಡಿ ಅಮೃತಧಾರೆಯಂತೆ ಅವಳ ಕಿವಿಗಿಳಿಯುತ್ತಿತ್ತು; ಅವನ ಕೈ ಅವಳ ಮೈಯನ್ನೆಲ್ಲ ನೇವರಿಸಿ ಸಂತವಿಸುತ್ತಿತ್ತು; ಅವನ ಇನಿದಾದ ತುಟಿ ಅವಳಿಗೆ ಜೀವರಸವೆರೆಯುತ್ತಿತ್ತು; ಅವನ ಬಾಹುಬಂಧನ ಕಂಪಿಸುತ್ತಿದ್ದ ಅವಳ ಎದೆಗೆ ರಕ್ಷೆಯಾಗಿತ್ತು.

ಅವಳ ದುಃಖ ಆರುವವರೆಗೂ ಅವನು ಅವಳನ್ನು ಕೆಳಗಿಳಿಸಲಿಲ್ಲ. ಬಳಿಕ ಮೆಲ್ಲನೆ ಮಂಚದ ಮೇಲೆ ಮಲಗಿಸಿ ಅವಳ ಪಕ್ಕದಲ್ಲಿಯೇ ಕುಳಿತು ಕೊಂಡ. ಲಲಿತ ಮಾತಿಲ್ಲದೆ ಸುಮ್ಮನೆ ಅವನನ್ನೇ ನೋಡುತ್ತಿದ್ದಳು.

"ಮಾತಾಡುವುದಿಲ್ಲವೆ? ನನ್ನ ಮೇಲೆ ಕೋಪವೆ, ಚಿನ್ನಾ?"

ಎಂದು ಅವಳ ಕಣ್ಣಲ್ಲಿ ಕಣ್ಣಿಟ್ಟು ಮೃದುವಾದ ಧ್ವನಿಯಲ್ಲಿ ಕೇಳಿದ.

"ನಿಮ್ಮ ಮೇಲೆ ನನಗೇಕೆ ಕೋಪ?"

"ನಾನಿಷ್ಟು ಮಾಡಿಯೂ ನನ್ನ ಮೇಲೆ ನಿನಗೆ ಕೋಪ ಬರಲಿಲ್ಲವೆ?"

"ನನಗೆ ಕೋಪ ಬರಲಿಲ್ಲ, ದುಃಖ ಬಂದಿತು"

ಎಂದು ಅದರ ಸ್ಮರಣೆಯಿಂದ ಮತ್ತೆ ಕಂಬನಿದುಂಬಿದಳು.

"ನಿನ್ನನ್ನು ತುಂಬ ಬಳಲಿಸಿದೆ, ಲಲಿತಾ. ನನ್ನನ್ನು ಕ್ಷಮಿಸೆಂದು ಕೇಳಲೂ ನನಗೆ ಬಾಯಿಲ್ಲ."

ಲಲಿತ ಒಂದು ಗಳಿಗೆ ಸುಮ್ಮನಿದ್ದಳು. ಬಳಿಕ ಕರುಳು ಹಿಂಡುವ ಧ್ವನಿಯಲ್ಲಿ,

"ನನ್ನನ್ನು ತೊರೆದು ಹೋಗುವಷ್ಟು ಅಪರಾಧ ಮಾಡಿದೆನೇ? ನನ್ನ ಮನಸ್ಸು ನಿಮಗೆ ತಿಳಿದಿರಲಿಲ್ಲವೆ?"

ಎಂದಳು. ಮಧುಸೂದನ ಖಿನ್ನನಾಗಿ ತಲೆ ತಗ್ಗಿಸಿದ. ಅವನ ನಿರ್ಘೃಣತೆಗೆ ಕೊನೆ ಮೊದಲಿರಲಿಲ್ಲ.

"ನಾನು ಪಾಪಿ, ಲಲಿತಾ; ನನ್ನನ್ನು ಮನ್ನಿಸು"

ಎಂದು ಅವಳ ಗಲ್ಲವನ್ನು ಹಿಡಿದು ಅನುನಯದಿಂದ ಬೇಡಿದ. ಪಶ್ಚಾತ್ತಾಪದಲ್ಲಿ ಅವನ ಕಣ್ಣು ಹನಿಗೂಡಿತ್ತು. ಲಲಿತ ಅವನ ಕೈಯನ್ನು ಗಟ್ಟಿಯಾಗಿ ಹಿಡಿದುಕೊಂಡು,

"ಅಂಥ ಮಾತು ಆಡಬೇಡಿ. ನನ್ನ ದೊರೆಯಿಂದ ಆ ಮಾತು ಕೇಳಲಾರೆ."

"ಹಾಗಾದರೆ ನನ್ನ ದೇವಿ ನನ್ನನ್ನು ಕ್ಷಮಿಸುವಳೆ? ಹೇಳು, ಲಲಿತಾ. ಆ ಮಾತು ಕೇಳಲು ನನ್ನ ಜೀವ ಹಾತೊರೆಯುತ್ತಿದೆ"

ಎಂದು ಆರ್ತನಾಗಿ ನುಡಿದ. ಲಲಿತ ಅವನ ಕುತ್ತಿಗೆಯನ್ನು ತನ್ನ ತೋಳಿನಿಂದ ಬಳಸಿ ಅವನ ಕೆನ್ನೆಗೆ ತನ್ನ ಕೆನ್ನೆ ಜೋಡಿಸಿದಳು. ಮಾತು ಹೇಳಲಾರದುದನ್ನು ಮೌನವೇ ಸೂಚಿಸಿತು.

ಹೊರಗಡೆ ಬೇರೊಂದು ಧಾಟಿಯಲ್ಲಿ ಮಾತುಕಥೆ ನಡೆಯುತ್ತಿತ್ತು. ಅಯ್ಯರರು ಸುಬ್ಬಕೃಷ್ಣನಿಗೆ ಉಪಚಾರ ಹೇಳುತ್ತಿದ್ದರು.

"ನಾಳೆಯೇ ಹೊರಟುಬಿಡಬೇಕೆ, ಮಿ. ಸುಬ್ಬಕೃಷ್ಣ? ಒಂದೆರಡು ದಿನ ನಿಲ್ಲಲಾಗುವುದಿಲ್ಲವೆ?"

"ನನ್ನ ರಜ ಮುಗಿಯುತ್ತ ಬಂದಿದೆ, ಸಾರ್. ನಾನು ಹೊರಡಲೇ ಬೇಕಾಗಿದೆ."

"ನಾಳೆ ಒಂದು ದಿನ ನಿಲ್ಲುವುದಕ್ಕಾಗುವುದಿಲ್ಲವೆ?"

ಸುಬ್ಬಕೃಷ್ಣ ಸಂಕೋಚದಿಂದ ಸುಮ್ಮನಿದ್ದ. ಹಜಾರದಲ್ಲಿದ್ದ ಮೀನಾಕ್ಷಮ್ಮನವರು ರೂಮಿನ ಬಾಗಿಲವರೆಗೂ ಬಂದು ನಿಂತು ಯಜಮಾನರನ್ನುದ್ದೇಶಿಸಿ,

"ಅವರು ನಾಳೆ ಇರಲೇಬೇಕು; ಖಂಡಿತ ಕಳುಹಿಸಬೇಡಿ. ನಮ್ಮ

ಮನೆಯಲ್ಲಿ ಒಂದು ಪಾಯಸದ ಊಟವನ್ನೂ ಮಾಡದೆ ಅವರನ್ನು ಕಳುಹಿಸುವುದು ಹೇಗೆ?"

"ಹಾಗಾದರೆ ನಾಳೆ ನಿಶ್ಚಿತಾರ್ಥವೇ, ತಾಯಿ?"

ಎಂದು ಸುಬ್ಬಕೃಷ್ಣ ನಗುತ್ತ ಕೇಳಿದ.

"ನಮ್ಮ ಮಟ್ಟಿಗೆ ಹಾಗೇ ಅಂದುಕೊಳ್ಳೋಣ. ನಮಗೆ ತಾನೆ ಅವರ ಕಡೆಯವರಾಗಿ ಯಾರಿದ್ದಾರೆ?"

ಎಂದು ಮೀನಾಕ್ಷಮ್ಮನವರು ನುಡಿದರು.

"ನನಗೂ ಸಂತೋಷವೆ. ನಾನು ಬೇಡವೆನ್ನುತ್ತೇನೆಯೆ, ತಾಯಿ? ಅಳಿಯನ ಜೊತೆಯಲ್ಲಿ ಗೆಳೆಯ"

ಎಂದು ಸುಬ್ಬಕೃಷ್ಣ ನಕ್ಕ. ಆ ನಗೆಯಲ್ಲಿ ಎಲ್ಲರೂ ಭಾಗಿಗಳಾದರು.

---o---

ಮುಂದಿನ ಪ್ರಕಟನೆಗಳು

ಮಣ್ಣಿನ ಮಗಳು
ಶ್ರೀ ಕೃಷ್ಣಮೂರ್ತಿ ಪುರಾಣಿಕರ ಕಾದಂಬರಿ

●

ಕಮಲ ಚಕ್ರ
ಶ್ರೀ ಬಸವರಾಜ ಕಟ್ಟೀಮನಿಯವರ ಕಾದಂಬರಿ

●

ಕಾಂಚನ - ಗಂಗಾ
('ಕಾಮಿನಿ ಕಾಂಚನ'ದ ಎರಡನೇ ಭಾಗ)
ಶ್ರೀ ಅ. ನ. ಕೃ. ರವರ ಕಾದಂಬರಿ

●

ಪದ್ಮಿನಿ ಪ್ರೇಮಾಪಹರಣ
ಶ್ರೀ 'ಜಿಬಿಜ್'ರವರ ಕಾದಂಬರಿ

●

ರಾಜ - ರಾಣಿ - ಗುಲಾಮ
ಶ್ರೀ ರಾ. ವೆಂ. ಶ್ರೀನಿವಾಸರ ಕಾದಂಬರಿ

●

ಹೊನ್ನಾವರದ ಹುಡುಗಿ
ಶ್ರೀ ಮಾ. ನಾ. ಚೌಡಪ್ಪನವರ ಕಾದಂಬರಿ

●

ಷಾಜಹಾನ್
ಶ್ರೀ ಬಿ. ಪುಟ್ಟಸ್ವಾಮಯ್ಯನವರ ನಾಟಕ

ಶಾರದಾ ಪ್ರಕಟನಾಲಯದ ಪ್ರಕಟನೆಗಳು

		ಬೆಲೆ		
೧.	ಕಾರವಾನ್ (ದ್ವಿತೀಯ ಮುದ್ರಣ)	೧	೪	೦
೨.	ಸ್ವಾತಂತ್ರ್ಯದೆಡೆಗೆ (ದ್ವಿತೀಯ ಮುದ್ರಣ)	೨	೪	೦
೩.	ಜೀವನ – ಕಲೆ *	೧	೦	೦
೪.	ಮುಗುಳುನಗೆ *	೧	೪	೦
೫.	ಸ್ವಪ್ನಸುಂದರಿ (ದ್ವಿತೀಯ ಮುದ್ರಣ)	೧	೪	೦
೬.	ಆಲದ ಹೂ	೧	೧೨	೦
೭.	ಹುಡುಗಾಟ	೧	೪	೦
೮.	ಶವದ ಮನೆ	೧	೪	೦
೯.	ಎದಿರೇಟು	೧	೮	೦
೧೦.	ಸರ್ವಮಂಗಳಾ (ದ್ವಿತೀಯ ಮುದ್ರಣ)	೩	೮	೦
೧೧.	ಕೇಡಿಗನ ಕಿಡಿಗಳು	೧	೦	೦
೧೨.	ದೇವತೆಗಳು ನಕ್ಕಾಗ	೧	೪	೦
೧೩.	ಜ್ವಾಲಾಮುಖಿಯ ಮೇಲೆ	೪	೦	೦
೧೪.	ನನ್ನ ರಸಿಕ ಮುತ್ತು ಬಂಗಾರದ ಗೆಜ್ಜೆ	೧	೮	೦
೧೫.	ಹಾಳು – ಮೂಳು	೧	೦	೦
೧೬.	ನಾಡಿಗೇರರ ನಗೆಬರಹಗಳು ೧	೧	೪	೦
೧೭.	ಮೋಹದ ಬಲೆಯಲ್ಲಿ	೫	೧೨	೦
೧೮.	ಸಾವಿನೊಂದಿಗೆ ಸರಸ	೧	೪	೦
೧೯.	ಅನುರಾಗ	೧	೪	೦
೨೦.	ಬಿಡುಗಡೆಯ ಬೇಡಿ *	೩	೪	೦
೨೧.	ಜೋಳದ ಬೆಳೆಯ ನಡುವೆ	೧	೪	೦
೨೨.	ಜರತಾರಿ ಜಗದ್ಗುರು	೩	೧೨	೦
೨೩.	ಕಾನ್ವೆಂಟ್ ಗರ್ಲ್	೧	೦	೦
೨೪.	ಖಾನಾವಳಿಯ ನೀಲಾ *	೧	೦	೦
೨೫.	ರಂಗನಾಯಕಿ	೨	೦	೦

* ಪ್ರತಿಗಳು ಮುಗಿದಿವೆ.

೨೬. ಮದುವೆ ಮಾಡಿ ನೋಡು ....

೨೭. ಕಲ್ಯಾಣಿ (ದ್ವಿತೀಯ ಮುದ್ರಣ) ....

೨೮. ನೀ ನನ್ನ ಮುಟ್ಟಬೇಡ ....

೨೯. ನನ್ನ ದೇವರು ('ಕುವೆಂಪು' ರವರ ಕಥಾಸಂಕಲನ) ....

೩೦. ಕಾಮಿನಿ – ಕಾಂಚನ * ....

೩೧. ಶನಿವಾರ ಮತ್ತು ಶಿವದಾರ * ....

೩೨. ಮಲ್ಲಿ ....

೩೩. ಆನಂದ ಲಹರಿ ....

೩೪. ಸೀತಾ – ರತ್ನ ....

೩೫. ನಾಡಿಗೇರರ ನಗೆಬರಹಗಳು ೨ ....

೩೬. ನಾನು ಪೋಲೀಸನಾಗಿದ್ದೆ ....

೩೭. ರಾಗಿಣಿ ....

೩೮. ಮಧುಚಂದ್ರ ....

೩೯. ಬಂಗಾರದ ಜಿಂಕೆಯ ಹಿಂದೆ ....

೪೦. ಬಣ್ಣದ ಮಾಲಿಂಗ ....

೪೧. ಗೋವಾದೇವಿ ....

೪೨. ಪಟ್ಟಣದ ಹುಡುಗಿ (ನಾಟಕ) ....

೪೩. ಪಾಪಕೂಪ ....

೪೪. ಪಾತರಗಿತ್ತಿ ....

೪೫. ರೂಪಸರ್ಪಿಣಿ ....

* ಪ್ರತಿಗಳು ಮುಗಿದಿವೆ.

ರೂಪಸರ್ಪಿಣಿ

ರೂಪಸರ್ಪಿಣಿ ಎಂದರೆ ಯಾರು? ಅದೇನು ವ್ಯಕ್ತಿಯೋ ಇಲ್ಲ, ಶಕ್ತಿಯೋ?

ಎರಡೂ ಅಲ್ಲ—

ಅದು ಮಧುಸೂದನ ಕಂಡು ಕೂಡಿದ ಹೆಣ್ಣುಗಳಲ್ಲಿ ಹೆಡೆಯೆತ್ತಿ ಅವನಲ್ಲಿ ತವಿಸಲಾಗದ ಬೇಗೆಯನ್ನು ಹೊತ್ತಿಸಿದ ಭೋಗಿನಿ ಒಮ್ಮೆ ಇವಳಲ್ಲಿ, ಒಮ್ಮೆ ಅವಳಲ್ಲಿ ಕಾಣಿಸಿಕೊಂಡು ಅವ ಜೀವಕ್ಕೇ ಸಿಂಬಿಯಾಗಿ ಸುತ್ತಿಕೊಂಡು ನೇಣು ಬಿಗಿದ ನಾಗರ

ಮುಂಬಯಿ, ಅಲ್ಲಿನ ವಿಲಾಸ ಜೀವನ, ಆ ಮದ ಮಾನಿನಿಯರು—

ತನ್ನ ದುಃಖವನ್ನು ಮರೆಯಲು ಹುಚ್ಚು ಸುಖವನ್ನು ಅರ ಕೊಂಡು ಬಂದವನಿಗೆ, ಆತ್ಮವನ್ನು ಅಂಧಕಾರದ ಕೂಪವ ಮುಳುಗಿಸಿಬಿಡಲು ಸಿದ್ಧನಾಗಿದ್ದವನಿಗೆ ಇದಕ್ಕಿಂತ ಇನ್ನೇನ ಬೇಕು?

ಆದರೆ ಅದರಿಂದ ಅವನ ದುಃಖ ಆರಿತೆ? ತೀರಿತೆ? ಆ ಆ ದಿಂದ ಅವನು ಮತ್ತೆ ಮೇಲಕ್ಕೆ ತಲೆ ಎತ್ತಿದನೆ, ಹೇಗೆ?

ಅದರ ನಿರೂಪಣ ಈ ಕಾದಂಬರಿಯಲ್ಲಿದೆ.

ಭೋಗದಲ್ಲಿ ಲಜ್ಜೆಗೆಟ್ಟ ಹಸ್ತಿನೀಜಾತಿಗೆ ಸೇರಿದ ಹೆಣ್ಣು ಕುಮುದಾ, ಬಿರುಗಾಳಿಯಂತೆ ಬೀಸಿಬಂದ ಮೋಹಕ್ಕೆ ತುತ್ತಾ ಮುಗ್ಧೆ ಸುಮಾ, ನೀತಿ ಸ್ವೈರ ಜೀವನಗಳ ವಿಚಿತ್ರ ಮಿಶ್ರಣವಾ ಕೆಸರಿನ ಕಮಲ ರೋಷನ್‌ಬಾಯಿ—

ಇವರೆಲ್ಲರ ಸುಂದರ ವಿಭಿನ್ನ ಚಿತ್ರಣವೂ ಈ ಕಾದಂಬರಿಯಲ್ಲಿದೆ

ಪ್ರೇಮ ಕಾಮಗಳ ವ್ಯಾಖ್ಯೆಯಲ್ಲಿ, ದಿಟ್ಟತನದ ರಸಭರಿತ ಸ ವೇಶಗಳ ರಚನೆಯಲ್ಲಿ, ಮನಮುಟ್ಟುವ ಬರವಣಿಗೆಯ 'ಭಾರತೀಪ್ರಿಯ'ರ ಈ ಕೃತಿ ಒಂದು ರಸಘಟ್ಟ.